# ಧುತ್ತರಗಿ ಅವರ
# ಆಯ್ದ ನಾಟಕಗಳು

ಸಂ. ಗುಡಿಹಳ್ಳಿ ನಾಗರಾಜ



ಕರ್ನಾಟಕ ಸರ್ಕಾರ
**ಕನ್ನಡ ಪುಸ್ತಕ ಪ್ರಾಧಿಕಾರ**
ಬೆಂಗಳೂರು

# ಧುತ್ತರಗಿ ಅವರ ಆಯ್ದ ನಾಟಕಗಳು

ಸಂಪಾದಕರು

**ಗುಡಿಹಳ್ಳಿ ನಾಗರಾಜ**

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

**P.B. Dhutharagi's Selected Dramas**

Edited by : **Shri Gudihalli Nagaraja**
# 4, 15th Cross, Mahalakshmi Layout, Bangalore - 560 086
Ph. : 080-23591200 Mobile : 94485 68646

Published by : **Shri Ashok N. Chalavadi**
The Administrative Officer, Kannada Pustaka Pradhikara
Kannada Bhavana, J.C. Road, Bangalore-560 002

First Print : 2008

Pages : xxiv + 456

Price : **Rs. 150/-**



ISBN : 81-7713-258-X

Copies : 1000

ಮೊದಲನೇ ಮುದ್ರಣ : ೨೦೦೮

ಪುಟಗಳು : xxiv + ೪೫೬

ಬೆಲೆ : **ರೂ. ೧೫೦/-**

ಪ್ರತಿಗಳು : ೧೦೦೦

ಕರಡು ತಿದ್ದಿದವರು : **ಗುಡಿಹಳ್ಳಿ ನಾಗರಾಜ**

ಪ್ರಕಾಶಕರು :
**ಶ್ರೀ ಅಶೋಕ್ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು- ೫೬೦ ೦೦೨

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

# ಅಧ್ಯಕ್ಷರ ಮಾತು

ಕನ್ನಡ ವೃತ್ತಿ ರಂಗಭೂಮಿಯ ಪರಂಪರೆ ಬಹು ದೊಡ್ಡದು. ತುಂಬಾ ಶ್ರೀಮಂತವಾದುದು. ವರದಾಚಾರ್, ಗುಬ್ಬಿವೀರಣ್ಣ, ಹೊನ್ನಪ್ಪ ಭಾಗವತರ್, ಹಂದಿಗನೂರು ಸಿದ್ರಾಮಪ್ಪ, ಗೋಕಾಕ ಬಸವಣ್ಣೆಪ್ಪ - ಮೊದಲಾದವರು ಅದರ ಶ್ರೀಮಂತಿಕೆಗೆ ಕಾರಣಪುರುಷರಾಗಿದ್ದಾರೆ. ರಾಷ್ಟ್ರವ್ಯಾಪ್ತಿಯಲ್ಲಿ ವೃತ್ತಿರಂಗಭೂಮಿಯ ಹಿರಿಮೆಯನ್ನು ಬೆಳಗಿಸಿದ್ದಾರೆ. ವೃತ್ತಿರಂಗಭೂಮಿಯ ಎಷ್ಟೋ ಪ್ರಸಿದ್ಧ ಕಲಾವಿದರು ಸಿನಿಮಾ ಜಗತ್ತಿಗೆ ಪ್ರವೇಶಿಸಿ, ಅಲ್ಲಿಯೂ ಅದರ ಬೆಳವಣಿಗೆಗೆ ದುಡಿದಿರುವುದು ಚಾರಿತ್ರಾರ್ಹ ಸಂಗತಿ. ಇದಾದ ನಂತರದಲ್ಲಿ ವೃತ್ತಿರಂಗಭೂಮಿ ಸಾಕಷ್ಟು ಸಂಕಷ್ಟಗಳನ್ನು ಎದುರಿಸಿ ನಿಲ್ಲಬೇಕಾದ ಸವಾಲುಗಳಿಗೆ ಗುರಿಯಾಯಿತು. ಇದರ ಪರಿಣಾಮ ಅಭಿರುಚಿಯಲ್ಲಿ ಇಳಿಮುಖ, ವಸ್ತುವಿನ ಆಯ್ಕೆಯಲ್ಲಿ ಪ್ರದರ್ಶನದಲ್ಲಿ ವ್ಯತ್ಯಯಗಳಾದುದು. ಈ ಮಧ್ಯೆ ಕನ್ನಡ ವೃತ್ತಿ ರಂಗಭೂಮಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತು ಎಂಬ ಆತಂಕಕ್ಕೆ ಒಳಗಾಯಿತು.

ಅಂಥ ದುರ್ದಿನಗಳಲ್ಲಿ ಕನ್ನಡ ವೃತ್ತಿರಂಗಭೂಮಿಯನ್ನು ಜೀವಂತವಾಗಿಟ್ಟಿದ್ದಲ್ಲದೆ,ಆಧುನಿಕ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ಮಾಧ್ಯಮವಾಗಿ ಅದನ್ನು ಬೆಳೆಸಿದವರು ಹಲವರು. ಅವರಲ್ಲಿ ಪಿ.ಬಿ. ಧುತ್ತರಗಿಯವರನ್ನು ಪ್ರಮುಖವಾಗಿ ಹೆಸರಿಸಬೇಕು. ನಾಟಕ ರಚನೆಗಳ ಮೂಲಕ ವೃತ್ತಿರಂಗಭೂಮಿಗೆ ಜನಾಕರ್ಷಣೆ ತಂದವರು ಇವರು. ಪೌರಾಣಿಕ, ಐತಿಹಾಸಿಕ, ಜಾನಪದೀಯವಲ್ಲದೆ ಸಮಕಾಲೀನ ಸಮಸ್ಯೆಗಳನ್ನು ವಸ್ತುವಾಗಿಸಿಕೊಂಡು ಇವರು ಬರೆದ ನಾಟಕಗಳು ೬೦ಕ್ಕೂ ಹೆಚ್ಚಿವೆ. ಚುರುಕಿನ ಸಂಭಾಷಣೆ ಭಾವಪೂರ್ಣ ರಂಗಗೀತೆಗಳ ರಚನೆ ಜೊತೆಗೆ ಸಮಸ್ಯಾತ್ಮಕ ಘಟನೆಗಳ ನಿರ್ಮಾಣದಿಂದ ಇವರ ನಾಟಕಗಳು ಜನಮನ್ನಣೆಗಳಿಸಿವೆ. ಈ ಜನಮನ್ನಣೆ ಕಾರಣವಾಗಿಯೇ ಸಿನೆಮಾಕ್ಕೂ ಇವರ ನಾಟಕಗಳು ಬಳಕೆಯಾಗಿವೆ. ಸಂಪತ್ತಿಗೆ ಸವಾಲು ಇದಕ್ಕೆ ಒಂದು ಉತ್ತಮ ಉದಾಹರಣೆ. ಇಂಥಹ ಹಿರಿಯ ಜೀವ ರಂಗಭೂಮಿಗೇ ತನ್ನ ಜೀವಿತಾವಧಿಯನ್ನು ಮಿಸಲಿಟ್ಟಂತೆ ಬಾಳಿದ್ದು ಈಗ ಚರಿತ್ರೆ. ಇವರ ನೆನಪಿನ ಗೌರವದ ಕಾರ್ಯವಾಗಿ ಇವರ ಐದು ನಾಟಕಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಒಂದು ಸಂಪುಟವಾಗಿ ಪ್ರಕಟಿಸುತ್ತಿದೆ.

ಇದರ ಸಂಪಾದನಾ ಕಾರ್ಯವನ್ನು ನಡೆಸಿಕೊಟ್ಟಿರುವವರು ಗೆಳೆಯ ಗುಡಿಹಳ್ಳಿ ನಾಗರಾಜ ಅವರು. ವೃತ್ತಿರಂಗಭೂಮಿಯ ಬಗೆಗೆ ಅವರ ವಿಸ್ತಾರವಾದ ಹಾಗೂ ಆಳವಾದ ಅಧ್ಯಯನ ಈ ಸಂಪಾದನಾ ಕಾರ್ಯದ ಹಿಂದಿನ ಕ್ರತುಶಕ್ತಿಯಾಗಿದೆ. ಮೌಲಿಕವಾದ ಪೀಠಿಕೆಯೊಂದಿಗೆ ಸಂಪಾದನಾ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ವಿಶೇಷವಾಗಿ ಮೂಲ ರಚನೆಗಳಲ್ಲಿ ಇರುವ ಪ್ರಾದೇಶಿಕ ಭಾಷೆಯ ಸೊಗಡು ಕಳೆದು ಹೋಗದಂತೆ ಎಚ್ಚರವಹಿಸಿದ್ದಾರೆ. ಅವರ ಶ್ರದ್ಧಾಪೂರ್ಣವೂ ಅಭ್ಯಾಸಪೂರ್ಣವೂ ಆದ ಈ ಸಂಪಾದನಾ ಕಾರ್ಯಕ್ಕೆ ಅವರಿಗೆ ಪ್ರಾಧಿಕಾರದ ಕೃತಜ್ಞತೆಗಳು.

**ಪ್ರೊ। ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು

# ರೂಪಕಾಲಂಕಾರದ ನಾಟಕಕಾರ ಧುತ್ತರಗಿ

ಪಿ.ಬಿ. ಧುತ್ತರಗಿಯಂತಹ ನಾಟಕಕಾರರನ್ನು ವೃತ್ತಿರಂಗಭೂಮಿಗೆ ಸೀಮಿತಗೊಳಿಸುವುದು ಸಲ್ಲದು. ರಾಜ್ಯದ ಬಹುತೇಕ ನಾಟಕ ಕಂಪೆನಿಗಳು ಇವರ ನಾಟಕಗಳನ್ನು ನಿರಂತರವಾಗಿ ಪ್ರದರ್ಶಿಸಿವೆ. ಜತೆಗೆ ಗ್ರಾಮೀಣ ಹವ್ಯಾಸಿ ರಂಗಭೂಮಿಯಲ್ಲಿ ಕಳೆದ ೫೦ ವರ್ಷಗಳಿಂದ ಸತತವಾಗಿ ಧುತ್ತರಗಿ ನಾಟಕಗಳು ಪ್ರಯೋಗಗೊಳ್ಳುತ್ತಿವೆ. ಗ್ರಾಮೀಣ ಜನಜೀವನವೇ ಇವರ ನಾಟಕಗಳ ಪ್ರಧಾನ ದ್ರವ್ಯವಾದರೂ ಎಲ್ಲ ಕಾಲಕ್ಕೂ, ಎಲ್ಲ ಪ್ರದೇಶಕ್ಕೂ ಸಲ್ಲುವ ಪಾತ್ರಗಳ ಸಾರ್ವತ್ರಿಕ ಗುಣದಿಂದ ಹಳ್ಳಿ - ಪಟ್ಟಣಗಳ ಭೇದವಿಲ್ಲದೆ ಎಲ್ಲ ಕಡೆಯೂ ಪ್ರಯೋಗಗೊಳ್ಳುತ್ತಲೇ ಇವೆ.

ಒಟ್ಟು ೬೫ಕ್ಕೂ ಹೆಚ್ಚು ನಾಟಕಗಳನ್ನು ಧುತ್ತರಗಿ ರಚಿಸಿದ್ದಾರೆ. ೯ ಐತಿಹಾಸಿಕ, ೫ ಪೌರಾಣಿಕ, ೮ ಭಕ್ತಿ ಪ್ರಧಾನ ನಾಟಕಗಳು ಇದರಲ್ಲಿ ಸೇರಿವೆ. ತನ್ನ ಕಾಲದ ಪ್ರಚಲಿತ ಸಮಸ್ಯೆಗಳ ಕುರಿತು ೪೦ಕ್ಕೂ ಹೆಚ್ಚು ನಾಟಕ ರಚಿಸಿರುವ ಇವರು ಪ್ರಧಾನವಾಗಿ ಸಾಮಾಜಿಕ ನಾಟಕಕಾರರು. ಕನ್ನಡ ವೃತ್ತಿ ರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳಿಂದ ಸಾಮಾಜಿಕ ನಾಟಕಗಳಿಗೆ ಸ್ಥಿತ್ಯಂತರಗೊಂಡು ಗಟ್ಟಿಯಾಗಿ ಬೇರುಬಿಡುತ್ತಿದ್ದ ಸಂದರ್ಭದಲ್ಲಿ (೧೯೫೦) ಧುತ್ತರಗಿ ನಾಟಕ ರಚನೆ ಆರಂಭಿಸಿದರು. ತಮ್ಮ ಸಮಕಾಲೀನ ರಂಗಭೂಮಿಯಲ್ಲಿ ಸಾಮಾಜಿಕ ನಾಟಕಗಳು ಪ್ರಧಾನ ಧಾರೆಯಾಗುವಂತೆ ಸಹ ನಾಟಕಕಾರರೊಂದಿಗೆ ಧುತ್ತರಗಿ ಅವರೂ ಬಹುಮುಖ್ಯ ಕಾಣಿಕೆ ನೀಡಿದರು. ಎರಡು ಏಕಾಂಕಗಳು ಸೇರಿದಂತೆ ಹನ್ನೊಂದು ನಾಟಕಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ.

ಇವರು ರಚಿಸಿದ ಎಲ್ಲ ನಾಟಕಗಳು ಪ್ರಕಟವಾಗದಿದ್ದರೂ ಎಲ್ಲವೂ ಪ್ರದರ್ಶನ ಕಂಡಿವೆ. ಒಂದು ಪ್ರದರ್ಶನ ಅಲ್ಲ, ಎಲ್ಲ ನಾಟಕಗಳೂ ಸಾವಿರಾರು ಪ್ರದರ್ಶನ. ೫ ರಿಂದ ೧೦ ಕ್ಲಾಸಿಕ್‌ಗಳಂತೂ ಲಕ್ಷಗಟ್ಟಲೇ ಪ್ರಯೋಗ ಕಂಡಿವೆ. ಮಲಮಗಳು, ಮುದುಕನ ಮದುವೆ, ತಾಯಿಕರುಳುನಂತಹ ವಸ್ತುವನ್ನು ಯಾರು ಬೇಕಾದರೂ ನಾಟಕವಾಡಬಹುದು. ಒಂದಷ್ಟು ಸಂಭಾಷಣೆ ಸೇರ್ಪಡೆಯಾಗಬಹುದು. ಘಟನೆಯಲ್ಲಿ ಸ್ವಲ್ಪ ಹಿಂದೆ ಮುಂದೆ ಅಥವಾ ತುಸು ಬದಲಾವಣೆ ಇರಬಹುದು. ಈ ಮೇಲಿನ ವಿಷಯದ ಕುರಿತು ಯಾರೇ ವೃತ್ತಿ ರಂಗಶೈಲಿಯಲ್ಲಿ ನಾಟಕವಾಡಲಿ ಅವಕ್ಕೆ ಮೂಲತಃ ಧುತ್ತರಗಿ ರಚಿಸಿದ ನಾಟಕಗಳೇ ಆಧಾರವಾಗಿರುತ್ತವೆ. ನಾಟಕ ಪ್ರಯೋಗಿಸುವ ಸಂಘಟಕರಿಗೆ ಮೂಲ ನಾಟಕಕಾರನ ಹೆಸರು ಗೊತ್ತಿರುವುದಿಲ್ಲ.

ಅಷ್ಟೊಂದು ಬಾಯಿಪಾಠವಾಗಿರುತ್ತವೆ. ಕೃತಿಯೊಂದು ಜನಪ್ರಿಯತೆಯ ತುತ್ತತುದಿ ಏರಿದಾಗ ಹೀಗಾಗುತ್ತದೆ, ಜಾನಪದದ ಹಾಗೆ. ವೃತ್ತಿ ರಂಗಭೂಮಿ ಈ ವಿಷಯದಲ್ಲಿ ಮೌಖಿಕ ಪರಂಪರೆಯ ಜಾನಪದವನ್ನು ಹೋಲುತ್ತದೆ.

ಧುತ್ತರಗಿ ನಾಟಕಗಳು ಪ್ರಯೋಗ ಪ್ರಧಾನವಾದವು. ಕಾಳಿದಾಸನ 'ಪ್ರಯೋಗ ಪ್ರಧಾನಂ ನಾಟ್ಯಂ' ಸಂಪ್ರದಾಯಕ್ಕೆ ಹೋಲುವಂತಹವು. ನಾಟಕ ಬರೆದಿಟ್ಟುಕೊಂಡರೆ ಅಥವಾ ಪ್ರಕಟಿಸಿಬಿಟ್ಟರೆ ನಾಟಕ ರಚನೆಯ ಸೃಜನಶೀಲ ಕ್ರಿಯೆ ಪೂರ್ಣಗೊಂಡಂತಲ್ಲ. ರಂಗದ ಮೇಲೆ ಬಂದಾಗಲೇ ನಾಟಕದ ಸಾರ್ಥಕತೆ. ಆಡಲೆಂದೇ ಬರೆದ ಎಲ್ಲ ನಾಟಕಗಳು ರಂಗದ ಮೇಲೆ ಬಂದವಷ್ಟೇ ಅಲ್ಲ, ಒಂದು ಪರಂಪರೆಯನ್ನೇ ಶ್ರೀಮಂತಗೊಳಿಸಿದವು. ಬದಕಿನ ಕಟು ವಾಸ್ತವ, ಆಡುಭಾಷೆಯ ನುಡಿಗಟ್ಟು, ಸಾಹಿತ್ಯ ಶ್ರೇಷ್ಠತೆ, ದೃಶ್ಯ ನಿರ್ಮಿತಿಯ ಕೌಶಲ್ಯ ಒಬ್ಬ ಅಸಾಮಾನ್ಯ ನಾಟಕಕಾರರನ್ನು ನಿರ್ಮಾಣ ಮಾಡಿದವು. ಕನ್ನಡ ರಂಗಭೂಮಿಯಲ್ಲಿ ಅತಿಹೆಚ್ಚು ನಾಟಕ ಪ್ರಯೋಗಕಂಡ ಇಪ್ಪತ್ತು ಜನರ ಪಟ್ಟಿ ಮಾಡಿದರೆ ಅದರಲ್ಲಿ ಖಂಡಿತಾ ಪುಂಡಲೀಕ ಬಸನಗೌಡ ಧುತ್ತರಗಿ ಸಹ ಒಬ್ಬರು.

ಅರ್ಧ ಶತಮಾನ ಕನ್ನಡ ರಂಗಭೂಮಿಯ ಅವಿಭಾಜ್ಯ ಅಂಗವಾಗಿದ್ದ ೬೦ಕ್ಕೂ ಮಿಕ್ಕಿದ ಧುತ್ತರಗಿ ಅವರ ನಾಟಕಗಳಲ್ಲಿ ಆಯ್ದ ಐದು ಜನಪ್ರಿಯ ವೈವಿಧ್ಯ ನಾಟಕಗಳನ್ನು ಇಲ್ಲಿ ಸಂಕಲಿಸಲಾಗಿದೆ. ಶ್ರೇಷ್ಠತೆ, ದೃಶ್ಯ ನಿರ್ಮಿತಿ, ಪ್ರಯೋಗ - ಪರಿಣಾಮ ಆಯ್ಕೆಗೆ ಮಾನದಂಡ. ಈ ಐದರ ಪೈಕಿ ಎರಡು ನಾಟಕಗಳು ಚಲನಚಿತ್ರವಾಗಿಯೂ ಜನಪ್ರಿಯವಾಗಿವೆ. 'ಚಿಕ್ಕಸೊಸೆ' ನಾಟಕ 'ಸೊಸೆ ತಂದ ಸೌಭಾಗ್ಯ' ಹೆಸರಿನಲ್ಲಿ ಚಲನಚಿತ್ರವಾಗಿದ್ದರೆ, 'ಸಂಪತ್ತಿಗೆ ಸವಾಲು' ಅದೇ ಹೆಸರಿನಲ್ಲಿ ಸಿನಿಮಾ ಆಗಿ ಕನ್ನಡದ ಅತ್ಯಂತ ಜನಪ್ರಿಯ ಚಿತ್ರಗಳ ಸಾಲಿನಲ್ಲಿ ಸೇರಿದೆ. ಏಕಕಾಲಕ್ಕೆ ಕನ್ನಡ, ತೆಲುಗು, ತಮಿಳು, ಮಲೆಯಾಳಂ ಸೇರಿ ನಾಲ್ಕು ಭಾಷೆಯಲ್ಲಿ ಚಿತ್ರೀಕರಣಗೊಂಡ ಹೆಗ್ಗಳಿಕೆ ಸಂಪತ್ತಿಗೆ ಸವಾಲು ನಾಟಕದ್ದು.

**ಸಂಪತ್ತಿಗೆ ಸವಾಲು**

ಕನ್ನಡ ರಂಗಭೂಮಿ ಚರಿತ್ರೆಯಲ್ಲೇ ಇಡಿಯಾಗಿ ವರ್ಗ ಸಂಘರ್ಷದ ವಸ್ತುವನ್ನು ಉಳ್ಳ ಮೊದಲನೇ ನಾಟಕ. ಊರ ಸಾವುಕಾರ ಮರಿಯಪ್ಪನ ಬಳಿ ತಂದೆ ಮಾಡಿದ ಸಾಲಕ್ಕಾಗಿ ಇದ್ದ ತುಂಡು ಭೂಮಿಯನ್ನು ಸಿದ್ದ ಒತ್ತೆಯಿಟ್ಟಿದ್ದಾನೆ. ತನ್ನ ಮದುವೆಗೂ ಸಾವುಕಾರರ ಬಳಿ ಸಾಲ ತಂದ ಕಾರಣಕ್ಕೆ ಈಗ ಅವನ ಬಳಿ ಜೀತ ಇರದೆ ಗತ್ಯಂತರವಿಲ್ಲ. ಸಾವುಕಾರನ ಸಂಪತ್ತಿಗೆ ಸವಾಲು ಹಾಕುವನೇ ಸಿದ್ಧನ ತಮ್ಮ ಭದ್ರಿ. ಸಾವುಕಾರ ಸುಳ್ಳು ಲೆಕ್ಕ ಹಚ್ಚಿ ಹೊಲ ಹೊಡೆದುಕೊಳ್ಳುವ ಯತ್ನಕ್ಕೆ ಮುಳ್ಳಾಗುತ್ತಾನೆ. ಮರಿಯಪ್ಪನ ಏಕೈಕ ಮಗಳು ಲಕ್ಷ್ಮಿ ತಂದೆಯ ಶ್ರೀಮಂತಿಕೆಯ ಗತ್ತಿನಲ್ಲೇ ಬೆಳೆದವಳು. ಊರ ಉಡಾಳರನ್ನು ಕಟ್ಟಿಕೊಂಡು ಅನ್ಯಾಯವನ್ನು ಪ್ರಶ್ನಿಸುವ ಭದ್ರಿ ಸಾವುಕಾರನ ಹೊಲದಲ್ಲಿ ಸೌತೇಕಾಯಿ ಹರಿದು ತಿನ್ನುತ್ತಾನೆ. ಲಕ್ಷ್ಮಿ ಬಾಯಿಗೆ ಬಂದಂತೆ ಬೈಯ್ಯುತ್ತಾಳೆ. ಸಿಟ್ಟಿಗೆದ್ದ ಭದ್ರಿ ಲಕ್ಷ್ಮಿಯ ಮುಂದಲೆ ಕೂದಲನ್ನು ಕತ್ತರಿಸಿ, ಶೀಲ ಹರಣಕ್ಕೆ ಯತ್ನಿಸಿದನೆಂಬ ಅಪಾದನೆಗೆ ಗುರಿಯಾಗುತ್ತಾನೆ. ಸುಳ್ಳು ಹೇಳಿಕೆಯಿಂದ ಬೇಸತ್ತ

ಭದ್ರಿ ಲಕ್ಷ್ಮಿಯನ್ನು ಮದುವೆಯಾಗುವ ಪ್ರತಿಜ್ಞೆ ಮಾಡುತ್ತಾನೆ. ಇಂತಹ ಅಸಂಖ್ಯಾತ ನಾಟಕೀಯ ಘಟನೆಗಳಿಂದ ನಾಟಕ ಆರಂಭದಿಂದಲೇ ರಂಗೇರುತ್ತದೆ. ಹಾಗೆಂದು ಶ್ರೀಮಂತ ಹಾಗೂ ಅವನನ್ನು ವಿರೋಧಿಸುವ ಬಂಡಾಯಗಾರ ಇಷ್ಟೇ ಸರಳ ಪಾತಳಿಯ ಮೇಲೆ ಕತೆ ನಿಂತಿಲ್ಲ. ಸಂಗವ್ವ ಭದ್ರಿಯ ತಾಯಿ. ಆಕೆ ಗಂಡನ ಮನೆಗೆ ಬಂದ ದಿನದಿಂದಲೇ ಕಷ್ಟ ಅನುಭವಿಸಿದವಳು. ಸಾವುಕಾರ ಮನೆಯಲ್ಲಿ ಜೀತಕ್ಕಿರಲು ಭದ್ರಿ ಒಪ್ಪದಿರುವಾಗ ಅಣ್ಣ-ತಮ್ಮನಿಗೆ ಘರ್ಷಣೆ ಉಂಟಾಗುತ್ತದೆ. ಆಗ ಸಂಗವ್ವ ಹೇಳುತ್ತಾಳೆ "ನಿಮ್ಮಪ್ಪ ಒಂದೊಂದು ರೀತಿ ಹೊಟ್ಟೆ ಉರಿಸಿದನಾ? ಹೊರಗ ಹೋಗಿ ಕುಡಿಯೋದು, ಮನಿಗೆ ಬಂದು ಬಡಿಯೋದು" ಬಡವರ ಮನೆಯ ಇಂತಹ ವಿರೋಧಾಭಾಸದ ಸಂಗತಿಗಳು ವಸ್ತುವಿಗೆ ಸಮಗ್ರತೆ ತರುತ್ತವೆ.

ಕಾಂಗ್ರೆಸ್ ಸರ್ಕಾರ ಕುಲಕರ್ಣಿಗಿರಿ ತೆಗೆದುಹಾಕಿ ತಲಾಟಿಯನ್ನು ತಂದು ಹಾಕಿದ ಸಂದರ್ಭದಲ್ಲಿ ಹಳಹಳಿಕೆಯಲ್ಲಿರುವ, ಆದರೂ ಕುತಂತ್ರದಲ್ಲಿ ನಿಸ್ಸೀಮನಾದ ವೆಂಕಪ್ಪ, ಸಾವುಕಾರ ಮರಿಯಪ್ಪನ ಹಿತಶತ್ರು. ಸಾವುಕಾರ ಹೇಳಿದ ಕೂಡಲೆ ಕೊಲೆ ಮಾಡಲು, ಅಕೃತ್ಯ ಎಸಗಲು ಸಜ್ಜಾಗಿರುವ ಗೂಂಡಾ ಪಡೆ ಇದೆ..

ಸಾವುಕಾರನ ಸೊಕ್ಕಡಗಿಸುವ ಭದ್ರಿ ಅವನ ಮಗಳನ್ನೇ ವರಿಸುವ ಸರಳ ಸಿದ್ಧ ಮಾದರಿ ಇಲ್ಲಿಲ್ಲ. ಸಿನಿಮಾದಲ್ಲಿ ಆ ರೀತಿಯ ಮಾರ್ಪಾಡು ಮಾಡಿಕೊಳ್ಳಲಾಗಿದೆ. ತನ್ನ ತಮ್ಮನನ್ನೇ ಹೊಡೆಯುವಂತೆ ಸಿದ್ಧನ ಕೈಗೆ ಪಿಸ್ತೂಲು ಕೊಟ್ಟು ಕಳಿಸುವ ಸಾವುಕಾರನಿಗೆ ತನ್ನ ಮಗಳು ಲಕ್ಷ್ಮಿಯೇ ಅದಕ್ಕೆ ಬಲಿಯಾಗುವಂತಹ ವಿಪರ್ಯಾಸ ಕೂಡ ನಾಟಕದಲ್ಲಿ ಇದೆ.

ಗೋಕಾಕ ಕಂಪೆನಿಯವರು ಈ ನಾಟಕವನ್ನು ಬೆಂಗಳೂರಿನಲ್ಲಿ ಪ್ರದರ್ಶಿಸಿದಾಗ ಗುಬ್ಬಿವೀರಣ್ಣ ಅದನ್ನು ಸಿನಿಮಾ ಮಾಡುವ ಬಯಕೆ ಹೊಂದಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಮುಂದೆ ರಾಜಕುಮಾರ್ ಅವರು ಕನಕಪುರ ಕ್ಯಾಂಪಿನಲ್ಲಿ ಈ ನಾಟಕ ನೋಡಿ ಅದಕ್ಕೆ ಮರುಳಾಗಿ ಭದ್ರಿಯ ಪಾತ್ರದಲ್ಲಿ ತಾವೇ ಅಭಿನಯಿಸುವುದಾಗಿ ಹೇಳಿದಾಗ ಪದ್ಮಶ್ರೀ ಲಾಂಛನದಡಿ ಚಿತ್ರವಾಗಿ ಬಂತು, ಅಷ್ಟೇ ಅಲ್ಲ. ಕನ್ನಡ ಚಿತ್ರರಂಗದ ಅತ್ಯಂತ ಜನಪ್ರಿಯ ಚಿತ್ರಗಳ ಮೊದಲ ಸಾಲಿನಲ್ಲೇ 'ಸಂಪತ್ತಿಗೆ ಸವಾಲು' ಹಾಕಿಬಿಟ್ಟಿತು.

೧೯೬೦-೭೦ರ ದಶಕದಲ್ಲಿ ಗೋಕಾಕ ಕಂಪೆನಿ ಕ್ಯಾಂಪ್ ಮಾಡಿದೆಡೆಯಲ್ಲ ಯಶಸ್ವಿ ನಾಟಕಗಳ ಪೈಕಿ ಇದೂ ಪ್ರಮುಖವಾಗಿತ್ತು. ಗೋಕಾಕದಲ್ಲಿ 'ಸಂಪತ್ತಿಗೆ ಸವಾಲು' ೧೦೧ನೇ ಪ್ರಯೋಗದಲ್ಲಿ ಗೋಕಾಕ ಕಂಪೆನಿ ಮಾಲೀಕರಾದ ಭಗವಂತಪ್ಪ ಹಾಗೂ ಬಸವರಾಜ ಹೊಸಮನಿಯವರು ಕವಿ ಧುತ್ತರಗಿ ಅವರನ್ನು 'ನಾಟ್ಯ ಕವಿ ಪುಂಗವ' ಬಿರುದು ನೀಡಿ ಗೌರವಿಸಿದರು. ನಂತರವೂ ಹಲವಾರು ನಾಟಕ ಕಂಪೆನಿಗಳು ಇದನ್ನು ಯಶಸ್ವಿಯಾಗಿ ಪ್ರಯೋಗಿಸಿದವು.

ಆಗ 'ಸಂಪತ್ತಿಗೆ ಸವಾಲು' ಎಷ್ಟು ಪ್ರಸಿದ್ಧವಾಗಿತ್ತೆಂಬುದಕ್ಕೆ ಧುತ್ತರಗಿಯವರೇ ಹೇಳುತ್ತಿದ್ದ ಒಂದು ಉದಾಹರಣೆಯನ್ನು ಉಲ್ಲೇಖಿಸಿದರ ಸಾಕೆನಿಸುತ್ತದೆ :

ವಿಜಾಪುರ ಜಿಲ್ಲೆ ಕಲ್ಕೇರಿ ಎಂಬ ಹಳ್ಳಿಯಲ್ಲಿ 'ಸಂಪತ್ತಿಗೆ ಸವಾಲು' ನಾಟಕ ಭರ್ಜರಿಯಾಗಿ ನಡೆದಿತ್ತು. ಒಂದು ದಿನ ಒಬ್ಬ ಯುವಕ ತನ್ನ ನಾಯಿಯೊಂದಿಗೆ ಬಂದು ನನ್ನ ನಾಯಿಗೂ ಟಿಕೆಟ್ ಕೊಡಿರಿ ಎಂದ. ಗಲ್ಲಾ ಪೆಟ್ಟಿಗೆಯಲ್ಲಿ ಟಿಕೆಟ್ ಕೊಡುತ್ತಾ ಕುಳಿತಿದ್ದವರು. "ನಾಯಿಗೆ ಟಿಕೆಟ್ ಕೊಡಾಕ ಬರೂದಿಲ್ಲ. ನಾಯೀನ ಒಳಾಗ ಬಿಡೂದು ಇಲ್ಲ" ಎಂದರು. "ಇಲ್ರೀ ನಾಟಕ ನನಿಗೆ ಬಾಳ ಇಷ್ಟ ಆಗೇತಿ. ದಿವಸಾ ನಾಟಕ ನೋಡಾಕ ಬರ್ತೇನಿ. ಇದು ನಮ್ಮಪ್ಪನಿಗೆ ಗೊತ್ತಾಗಿ ಇವತ್ತು ರಾತ್ರಿ ಹೊಲಕ್ಕ ಕಾಯಾಕ ಹೋಗು. ನಾಯೀನು ಜತಿಗೆ ಒಯ್ಯಿ ಎಂದು ಒತ್ತಾಯ ಮಾಡಿ ಈ ನಾಯಿ ನನ್ನ ಜತಿ ಕಳಿಸ್ಯಾನ. ಈಗ ಥೇಟರ್‌ದೊಳಗೆ ನನ್ನ ನಾಯೀನ ಬಿಡದಿದ್ದರೆ ಇದು ಮನಿಗೆ ವಾಪಸ್ ಹೊಕ್ಕೇತಿ. ಅವಾಗ ನಮ್ಮಪ್ಪ ಬಂದು ನನ್ನ ಹೊಡಿತಾನ, ಟಿಕೆಟ್ ಕೊಡಾಕಬೇಕು" ಎಂದು ಪಟ್ಟು ಹಿಡಿದ. ಆಗುವುದಿಲ್ಲ ಎಂದು ಅವರು. ವಾದ ಜೋರಾಯಿತು. ಅದೇ ಹೊತ್ತಿಗೆ ಥೇಟರ್ ಒಳಗೆ ಇದ್ದ ಕವಿ ಧುತ್ತರಗಿ ಅವರೂ ಈ ಗಲಾಟೆ ಕೇಳಿ ಹೊರಗೆ ಬಂದರು. ಅವರಿಗೆ ಬಾಳ ವಿಚಿತ್ರ ಅನ್ನಿಸಿತು. ಅವರೂ ಆ ಯುವಕನನ್ನು ಸಮಾಧಾನ ಮಾಡಲು ಹೋದರು. ಆದರೆ ಅವನು ಅವರ ಮಾತು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅಷ್ಟೊತ್ತಿಗೆ ಆ ಯುವಕನ ತಂದೆ-ತಾಯಿಯೂ ಅದೇ 'ಸಂಪತ್ತಿಗೆ ಸವಾಲು' ನಾಟಕ ನೋಡಲು ಥೇಟರ್‌ಗೆ ಬಂದರಂತೆ. ಅವರನ್ನು ನೋಡಿದೊಡನೆ ಯುವಕ ತನ್ನ ನಾಯಿಯೊಂದಿಗೆ ಓಟಕಿತ್ತನಂತೆ.

ಗ್ರಾಮೀಣ ಭಾಗದ ಹವ್ಯಾಸಿಗಳೂ ಕರ್ನಾಟಕದ ಉದ್ದಗಲಕ್ಕೂ ಈ ನಾಟಕ ಪ್ರಯೋಗ ಮಾಡಿದ್ದಾರೆ. ಆದರೆ ಚಲನಚಿತ್ರವಾಗಿ ಮೂಡಿ ಬಂದ ನಂತರ ಇದರ ನಾಟಕ ಪ್ರಯೋಗ ಕಡಿಮೆಯಾಯಿತು. ಆದರೆ ಈಗಲೂ ಅಲ್ಲಲ್ಲಿ ಈ ನಾಟಕ ಪ್ರದರ್ಶನವಾಗುತ್ತದೆ. ಗೋಕಾಕ ನಾಟಕ ಕಂಪನಿಯಲ್ಲಿ ಭದ್ರಿ ಪಾತ್ರದಲ್ಲಿ ಬಳ್ಳಾರಿ ಕೃಷ್ಣ ಚಂದರ್, ಎಂ.ಎಸ್. ಕೊಟ್ರೇಶ್, ಜಯರಾಜ ಹೊಸಮನಿ, ಸಾವುಕಾರ ಪಾತ್ರದಲ್ಲಿ ತುಮ್ಮಿನ ಕಟ್ಟಿ ಬಸಣ್ಣ, ಕುತಂತ್ರಿ ವೆಂಕಪ್ಪ - ಬಸವರಾಜ ಹೊಸಮನಿ, ಏಕ್ಕ್ಯಾಯಾಗಿ ಅಂಬುಜಮ್ಮ, ತಾಯಿ ಸಂಗವ್ವ - ಗೋರಜಾನ್ ಹುಬ್ಬಳ್ಳಿ ಹಾಗೂ ನಾಗರತ್ನಮ್ಮ ಹೊಸಮನಿ ಅವರದು ಶ್ರೇಷ್ಠ ಅಭಿನಯ.

ಈ ನಾಟಕ ರಂಗದ ಮೇಲೆ ಬಂದಾಗ ಹೆಸರಾಂತ ನಟ-ನಾಟಕಕಾರ ಚಿತ್ತರಗಿ ಗಂಗಾಧರಶಾಸ್ತ್ರಿಗಳೇ ಸ್ವತಃ 'ನಾನು ಇಂತಹ ನಾಟಕ ಇದುವರೆಗೂ ನೋಡಿಯೇ ಇಲ್ಲ' ಎಂದು ಬಣ್ಣಿಸಿದ್ದರು. ಅಲ್ಲಿವರೆಗಿನ ರಂಗಚರಿತ್ರೆ ಗಮನಿಸಿದರ ಇದರಲ್ಲಿ ಅತಿಶಯೋಕ್ತಿ ಇಲ್ಲ ಎನಿಸುತ್ತದೆ.

## ಮಲಮಗಳು ಅರ್ಥಾತ್ ಮುದುಕನ ಮದುವೆ

ಮಲಮಗಳು ಧುತ್ತರಗಿಯವರು ತಮ್ಮ ೩೨ನೇ ವಯಸ್ಸಿನಲ್ಲಿ (೧೯೬೧) ಬರೆದ ನಾಟಕ. ಮಲತಾಯಿಯ ತಾರತಮ್ಯದಿಂದ ಯಾತನೆ ಅನುಭವಿಸುವ ಮಕ್ಕಳು ಹಾಗೂ ಬಡ್ಡಿ ಹಣದಿಂದ ಬಡವರನ್ನು ವಂಚಿಸುವ ಸಾವುಕಾರ, ತನ್ನ ಇಳಿ ವಯಸ್ಸಿನಲ್ಲೂ ಮದುವೆಯ ಚಪಲ ಹಚ್ಚಿಕೊಂಡಂತಹ ಸಾರ್ವತ್ರಿಕವಾದ ಕೌಟುಂಬಿಕ, ಸಾಮಾಜಿಕ ಬಿಕ್ಕಟ್ಟನ್ನು ಏಕಕಾಲಕ್ಕೆ ಮೇಳೈಸಿದ ಕತೆ - ಎಲ್ಲ ಮನೆಯ ಎಲ್ಲ ವರ್ಗ ಸಮಾಜದ ಪ್ರಾತಿನಿಧಿಕ ಸ್ವರೂಪದಂತಿದೆ.

ರಾಜೀವಪ್ಪನ ಎರಡನೇ ಹೆಂಡತಿಯಾಗಿ ಮನೆ ತುಂಬಿದ ಕಾವೇರಿ ಮನ ತುಂಬುವುದಿಲ್ಲ. ಮೊದಲ ಮಗಳಿಗೆ ತಾಯಿಯಾಗುವ ಬದಲು ಮಲತಾಯಿಯಾಗುತ್ತಾಳೆ. ಮಲಮಗಳನ್ನು ಮುದುಕನಿಗೆ ಕೊಟ್ಟಾದರೂ ಸರಿ ಸಾಲಕ್ಕೆ ಒತ್ತೆಯಾಗಿಟ್ಟಿರುವ ಮನೆ ಉಳಿಸಿಕೊಳ್ಳುವ ಸ್ವಾರ್ಥ. ಸ್ವಂತ ಮಗಳನ್ನು ನೌಕರಿಯಲ್ಲಿರುವ ಅಣ್ಣನ ಮಗನಿಗೆ ಕೊಡುವ ಆಸೆ. ಅಣ್ಣನ ಮಗನಿಗಾದರೋ ಅತ್ತೆಯ ಮಲಮಗಳು ಇಷ್ಟವಾಗುವುದು. ಸಾವುಕಾರನಿಗೆ ಬುದ್ಧಿ ಕಲಿಸಿ ಈ ಮನೆಯನ್ನು ಸರಿದಾರಿಗೆ ತರುವ ಸೂತ್ರಧಾರಿ ಶೇಷ - ಹೀಗೆ ಅಸಂಖ್ಯಾತ ನಾಟಕೀಯ ಘಟನೆಗಳೇ ಇಡಿಕಿರಿಯುತ್ತವೆ. ಘಟನಾ ಪ್ರಧಾನವಾದ ಈ ಕತೆ ಎಲ್ಲಿಯೂ ಕೃತಕ ಎನಿಸಿಕೊಳ್ಳುವುದಿಲ್ಲ. ಉಪಮೆ, ರೂಪಕಗಳಿಂದ ಕೂಡಿದ, ಗ್ರಾಮೀಣ ಜನರ ನುಡಿಗಟ್ಟಿನ, ಸಹಜವಾದ ನಡೆಯ, ಸರಳ ಭಾಷೆಯ ನಾಟಕ ತೀರಾ ಆಪ್ತವೆನಿಸಿಬಿಡುತ್ತದೆ. ನಾಟಕ ನೋಡಿದ ಎಲ್ಲರಿಗೂ ಅದು ಪ್ರತಿ ಮನೆಯ ಕತೆ, ನನಗೆ ಗೊತ್ತಿರುವ ಸಂಗತಿಯೇ ಎಂಬಷ್ಟು ಸಹಜವಾಗಿಬಿಡುತ್ತದೆ.

ಕತೆಗೆ ಹಿನ್ನೆಲೆಯಾಗಿ ರಾಯಚೂರು, ಕೊಪ್ಪಳ ಜಿಲ್ಲೆಗಳ ಹಳ್ಳಿಯ ಹಿನ್ನಲೆ ಒದಗಿಸಿರುವುದು ಕೃತಿಗೆ ಅಧಿಕೃತತೆಯನ್ನು ಒದಗಿಸಿಕೊಟ್ಟಿದೆ. ವಿಪರೀತ ಬಿಸಿಲು, ಹೊಕ್ಕು ತುಂಬುವ ಬಾವಿಗಳು, ಪ್ರತಿ ಹಳ್ಳಿಗೂ ನಾಲ್ಕು ಕಿ.ಮೀ. ನಡೆದೇ ಹೋಗಬೇಕಾದ ಸ್ಥಿತಿ, ಶಾಲೆ ಕಲಿತು ಪಟ್ಟಣ ಸೇರಿರುವವರು ತಮ್ಮ ಹಳ್ಳಿ ಮರೆತಿರುವುದು, ಹಳ್ಳಿಯಲ್ಲೇ ಉಳಿದಿರುವವರಾದರೂ ತಮ್ಮ ಹಳ್ಳಿಗಳಿಗೆ ಏನನ್ನೂ ಮಾಡದೇ ಇರುವುದು - ಹೀಗೆ ೧೯೬೦-೭೦ರ ದಶಕದ ಆ ಭಾಗದ ಚಿತ್ರಣವನ್ನೇ ಕಟ್ಟಿಕೊಡುತ್ತದೆ. ಈಗಲಾದರೂ ಪರಿಸ್ಥಿತಿ ಬಹಳ ಬದಲಾಗಿಲ್ಲ.

ನಾಟಕದಲ್ಲಿ ಸೂತ್ರಧಾರಿಯಾಗಿ ಬರುವ ಶೇಷ ಕಲಾ ಸೇವೆಗಾಗಿ ಜೀವ ಸವೆಸಿ ಕೊನೆಗೆ ಎಲ್ಲರ ಕೈಯಲ್ಲಿ ನೀತಿ ಬಾಹಿರನೆಂಬ ಅಪಖ್ಯಾತಿಗೆ ಗುರಿಯಾದವನು. ಹಲವಾರು ನಾಟಕ ಕಂಪನಿಗಳಲ್ಲಿ ಮ್ಯಾನೇಜರ್ ಆಗಿ ದುಡಿದು ಹಲವು ಊರ ನೀರು ಕುಡಿದವನು, ತರಹೇವಾರಿ ಜನರನ್ನು ಕಂಡವನು. ಆಳವಾದ ಅನುಭವ ಉಳ್ಳವನು. ನಾಟಕದ ಕಲಾವಿದನಾಗಿರುವ ತನ್ನ ಅಳಿಯ ಲಚ್ಚಿಗೆ ಕಾವೇರಮ್ಮನ ಮಗಳು ಮಂದಾಕಿನಿಯನ್ನು ಮದುವೆ ಮಾಡಿಸುತ್ತಾನೆ. ಮಲಮಗಳಾಗಿ ಹಿಂಸೆ ಅನುಭವಿಸಿದ ಕಲ್ಯಾಣಿಗೆ ಒಳ್ಳೆಯ ಸಂಬಂಧ ಕೂಡಿಸುತ್ತಾನೆ. ಬಡವರ ಮನೆಯ ಹೆಣ್ಣುಮಕ್ಕಳನ್ನು ನೋಡಿ ಜೊಲ್ಲು ಸುರಿಸುವ ಸಾವುಕಾರನಿಗೆ ಸರಿಯಾಗಿಯೇ ಬುದ್ಧಿ ಕಲಿಸುತ್ತಾನೆ. ಇಂತಹ ಪ್ರಮುಖ ಸೂತ್ರಧಾರಿಯನ್ನು ಹಾಸ್ಯ ಪಾತ್ರವಾಗಿಸುವಲ್ಲೇ ನಾಟಕಕಾರ ಇಡೀ ನಾಟಕಕ್ಕೆ ವಿನೂತನ ತಂತ್ರವನ್ನು ರೂಪಿಸಿಕೊಂಡಿದ್ದಾರೆ. ಧುತ್ತರಗಿಯವರ ಬಹುತೇಕ ನಾಟಕಗಳಲ್ಲಿ ಹಾಸ್ಯವು ಪ್ರತ್ಯೇಕವಾಗಿ ಬರದೆ, ಕತೆಯ ಪ್ರಮುಖ ಧಾರೆಯ ಹಾಸು ಹೊಕ್ಕಾಗಿ ಬಿಡುತ್ತದೆ.

ಜಾತಿ ಕೆಟ್ಟವರೆಂದು ಹಂಗಿಸುವ ನಾಟಕದವರು ನೀತಿ ಕೆಟ್ಟಿಲ್ಲ ಎಂದು ಕವಿ ನೀಡುವ ಸಂದೇಶ ಜೀವನದಲ್ಲಿ ಕಲೆ, ಸಂಸ್ಕೃತಿಯ ಮಹತ್ವವನ್ನು ಅತ್ಯಂತ ಕಲಾತ್ಮಕವಾಗಿ ರೂಪಿಸುತ್ತದೆ. ನಾಟಕಕ್ಕೆ ದೊರಕುವುದು ಅಂತಹ ಒಂದು ಅದ್ಭುತ ಮುಕ್ತಾಯ.

ಕರ್ನಾಟಕದ ಪ್ರತಿ ಹಳ್ಳಿಗಳಲ್ಲಿ ಈ ನಾಟಕವಾಡುತ್ತಿದ್ದಾರೆ. ನಾಟಕದ ಮುದ್ರಿತ ಪ್ರತಿ ಸಿಗದಿದ್ದರೂ ಈಗಲೂ ಹಲವಾರು ನಾಟಕ ಕಂಪೆನಿಗಳಲ್ಲಿ ನಿರಂತರ ಪ್ರಯೋಗ ಆಗುತ್ತಲೇ ಇರುತ್ತದೆ. ಹಳೆ ಮೈಸೂರು ಭಾಗದಲ್ಲಿ ಹಾಲಿ ಉಳಿದಿರುವ ಕುಮಾರಸ್ವಾಮಿಯವರ ಏಕೈಕ ವೃತ್ತಿ ನಾಟಕ ಕಂಪೆನಿಯಲ್ಲಿ ಈಗಲೂ ಇದು 'ಹಿಟ್' ಪ್ರಯೋಗ. ಕುಮಾರಸ್ವಾಮಿಯವರೇ ಮುದುಕ ರಂಗಣ್ಣನ ಪಾತ್ರವನ್ನೂ ಸೊಗಸಾಗಿ ಅಭಿನಯಿಸುತ್ತಾರೆ. ಹಲವಾರು ನಾಟಕ ಕಂಪೆನಿ ನಾಟಕಗಳಲ್ಲಿ ಹಾಗೂ ತಮ್ಮದೇ ಸ್ವಂತ ತಂಡಗಳಲ್ಲಿ ಚಿತ್ರ ಕಲಾವಿದರುಗಳಾದ ದಿ. ಧೀರೇಂದ್ರ ಗೋಪಾಲ, ಶ್ರೀನಿವಾಸಮೂರ್ತಿ, ಸುದರ್ಶನ, ಶೈಲಶ್ರೀ, ಸುಂದರರಾಜ್, ಪ್ರಮೀಳಾ ಜೋಷಾಯ್ ಮುಂತಾದವರು ಈ ನಾಟಕದ ಸಾವಿರಾರು ಪ್ರಯೋಗಗಳನ್ನು ಮಾಡಿದ್ದಾರೆ. ವೃತ್ತಿರಂಗಭೂಮಿಯ ದಿಗ್ಗಜರುಗಳಾದ ತುಮ್ಮಿನಕಟ್ಟಿ ಬಸಣ್ಣ, ಹಾವೇರಿ ಬಾಬಣ್ಣ (ಸಾವುಕಾರ), ಗೋರಜಾನ ಮಟ್ಟಳ್ಳಿ (ಮಲತಾಯಿ ಕಾವೇರಮ್ಮ) ಪಾತ್ರದಲ್ಲಿ ಜನಜನಿತವಾದ ದಿನಗಳು ಈಗ ಇತಿಹಾಸ.

**ತಾಯಿ ಕರುಳು**

ಧುತ್ತರಗಿ ಅವರು ರಚಿಸಿದ ೧೧ನೇ ನಾಟಕ. ಧುತ್ತರಗಿ ಅವರಿಗೆ ನಾಟಕಕಾರನೆಂಬ ಆತ್ಮವಿಶ್ವಾಸ ಮೂಡಿಸಿದ ನಾಟಕ ಇದು. ಈ ನಾಟಕದ ಯಶಸ್ಸು ಅವರು ನಾಟಕಕಾರನಾಗಿಯೇ ಉಳಿಯುವ ಸಂಕಲ್ಪ ತಾಳಲು ಕಾರಣವಾದ್ದರಿಂದ ಅವರ ಜೀವನದ ಬಹುದೊಡ್ಡ ತಿರುವೂ ಸಹ ಹೌದು.

ತಾಯಿ ವಿಶ್ವಮಾನ್ಯಳು. ಸಹನೆಯ ಸಾಕಾರಮೂರ್ತಿಯೇ ಆದ ತಾಯಿಯ ಅದ್ಭುತವಾದ ಪಾತ್ರವೊಂದನ್ನು ಕವಿ ಇಲ್ಲಿ ಕಡೆದಿದ್ದಾರೆ. ಪೂರಕವಾಗಿ ಸರಳವಾದ ಕತೆ, ಮನಮಿಡಿಯುವ ದೃಶ್ಯಗಳು. ಈ ನಾಟಕದ ತಾಯಿ ಪಾತ್ರದ ನಿರ್ವಹಣೆ ಬಹುದೊಡ್ಡ ಸವಾಲು. ಮೊಟ್ಟ ಮೊದಲು ಕವಿ ಧುತ್ತರಗಿ ಅವರಿಗೆ ಎದುರಾಗುವುದೂ ಅದೇ ಸಮಸ್ಯೆ. ನಾಟಕ ರಚಿಸಿ ಏಣಗಿ ಬಾಳಪ್ಪನವರ ಬಳಿ ಹೋದಾಗ ಅವರು ನಾಟಕ ಓದಿ ಬಹಳವಾಗಿ ಮೆಚ್ಚಿಕೊಂಡು, "ನಾಟಕ ಬಾಳ ಚಂದ ಬರ್ದೀರಿ. ತಾಯಿ ಪಾತ್ರ ಬಾಳ ದೊಡ್ಡದು. ಇಂತಹ ಅದ್ಭುತ ಪಾತ್ರ ಮಾಡುವ ಶಕ್ತಿ ಈಗ ಸದ್ಯಕ್ಕೆ ಕುಕನೂರು ರೆಹಮಾನವ್ವಗ ಮಾತ್ರ ಐತಿ. ಆಕಿ ಕಂಪನ್ಯಾಗ ನಾಟಕ ಕುಂದರಸಿರಿ, ನಾಟಕ ಯಶಸ್ವಿ ಆಗುತ್ತ...." ಎಂದು ಹರಸಿ ಕಳಿಸಿದರು. ನಾಟಕ ಓದಿಸಿದ ರೆಹಮಾನವ್ವ ಬಹಳ ಪ್ರಭಾವಿತರಾದರು. ತಾವೇ ಸ್ವತಃ ತಾಯಿ ಗೌರಮ್ಮನ ಪಾತ್ರ ವಹಿಸಿ ನಾಟಕ ಕಳೆ ಕಟ್ಟಿಸಿದರು. ಅಲ್ಲಿಂದ ಯಾವುದೇ ಕಂಪನಿ ಇರಲಿ, ಹಳ್ಳಿಗಾಡಿನಲ್ಲಿ ಇರಲಿ ನಾಟಕ ಹಿಂತಿರುಗಿ ನೋಡಿದ್ದೇ ಇಲ್ಲ.

ಕಲ್ಯಾಣಶೆಟ್ಟಿಯ ಸಂಪತ್ತು ಕರಗಿ ಹೋಗಿರುವ ದೃಶ್ಯದಿಂದ ನಾಟಕ ಆರಂಭವಾಗುತ್ತದೆ. ಪತ್ನಿ ಗೌರಮ್ಮ. ಮಹೇಶ, ಮಹಾಂತೇಶ - ಇವರು ಪುತ್ರರು, ದಾಕ್ಷಾಯಣಿ ಮಗಳು. ದೊಡ್ಡ

---

*ಕುಂದರಸಿರಿ = ನಾಟಕ ಸಿದ್ಧಪಡಿಸಿ ಅಥವಾ ನಿರ್ದೇಶಿಸಿ ಎಂದು ಅರ್ಥ. ನಾಟಕ ರಚಿಸಿ ಕಂಪೆನಿಗಳಿಗೆ ಕೊಡುತ್ತಿದ್ದ ನಾಟಕಕಾರರು ಅಲ್ಲಿನ ಕಲಾವಿದರಿಗೆ ಮೊದಲ ಪ್ರಯೋಗವನ್ನು ತಾವೇ ನಿರ್ದೇಶಿಸುತ್ತಿದ್ದರು.*

ಮಗ ಮಹೇಶನನ್ನು ಓದಿಸುವಾಗ ಅವನು ಕಾರಿನಲ್ಲಿ ಶಾಲೆಗೆ ಹೋಗುತ್ತಿದ್ದ. ಆದರ ಸರಿಯಾಗಿ ಓದಲಿಲ್ಲ. ಚಿಕ್ಕದೊಂದು ನೌಕರಿಯಲ್ಲಿದ್ದಾನೆ. ಚಿಕ್ಕ ಮಗ ಮಹಾಂತೇಶ. ಚೆನ್ನಾಗಿ ಓದುತ್ತಿದ್ದಾನೆ. ಆದರೆ ತಂದೆ ಕಲ್ಯಾಣ ಶೆಟ್ಟಿಯ ಬಳಿ ಮಹಾಂತೇಶನ ಫೀ ತುಂಬಲೂ ಹಣ ಇಲ್ಲ. ಮಹೇಶನನ್ನು ಮದುವೆಯಾಗಿ ಬರುವ ಸರಸುಗೆ ಪತಿಯ ಸಂಬಳದಲ್ಲೇ ಇಡೀ ಕುಟುಂಬ ನಿರ್ವಹಣೆ ಆಗಬೇಕು ಎಂದು ಅರಿವಿಗೆ ಬಂದ ತಕ್ಷಣ ಸ್ವಾರ್ಥಿ ಆಗುತ್ತಾಳೆ.

ಮಾವನಿಗೆ ಕಳವಿನ ಆರೋಪ ಹೊರಿಸಿ ಅವನ ಸಾವಿಗೆ ಕಾರಣಳಾಗುತ್ತಾಳೆ. ಹೆಚ್ಚು ಓದಲು ಸಾಧ್ಯವಾಗದ ಮಹಾಂತೇಶ ಸೈನ್ಯಕ್ಕೆ ಸೇರುತ್ತಾನೆ. ಪ್ರತಿ ತಿಂಗಳು ತಾಯಿಗೆ ಹಣ ಕಳಿಸುವುದಾಗಿ ಹೇಳಿ ಹೋಗಿರುತ್ತಾನೆ. ಈ ವಿಷಯವನ್ನು ತಾಯಿಗೆ ಮುಚ್ಚಿಡುವ ಸರಸು - ಮಹೇಶ ಆ ಹಣವನ್ನೂ ಕಬಳಿಸುತ್ತಾರೆ. ಮನೆಗೆ ಬಂದ ಅತಿಥಿಗಳ ಎದುರು ತಾಯಿಯನ್ನು ಕೆಲಸದವಳು ಎಂದು ಹೇಳಿ ಬಿಡುತ್ತಾರೆ. ಮನೆ ತೊರೆಯುವ ತಾಯಿ ಬಸ್‌ಸ್ಟಾಂಡಿನಲ್ಲಿ ಹಮಾಲಿ ಮಾಡುತ್ತಾಳೆ. ಸೈನ್ಯದಿಂದ ವಾಪಾಸಾಗುವ ಮಹಾಂತೇಶನಿಗೆ ಹಮಾಲಿ ತಾಯಿ ಎಂದು ತಿಳಿಯುವುದಿಲ್ಲ. ತಾಯಿಯಿಂದಲೇ ಲಗೇಜು ಹೊರಿಸಿಕೊಂಡು ಮನೆಗೆ ಬರುತ್ತಾನೆ. ಕೊನೆಗೆ ಎಲ್ಲ ವಿಷಯ ಬಯಲಾಗಿ ಮಹೇಶ - ಸರಸು ಪಶ್ಚಾತ್ತಾಪಪಟ್ಟು ಒಳ್ಳೆಯವರಾಗುತ್ತಾರೆ.

ಇದಿಷ್ಟು ಸರಳ ಕತೆ. ಮೇಲ್ನೋಟಕ್ಕೆ ಕೆಲವು ಒಳ್ಳೆಯ, ಕೆಲವು ದುಷ್ಟ ಪಾತ್ರಗಳಿವೆ ಎನಿಸುತ್ತದೆ. ಆದರೆ ಹಾಗಿಲ್ಲ. ದುಷ್ಟತನಕ್ಕೆ ತನ್ನದೇ ಆದ ಕಾರಣವಿದೆ. ಸಂಪತ್ತು ಕರಗಿ ಹೋಗಿದ್ದರೂ ಕಲ್ಯಾಣಶೆಟ್ಟಿಯ ದರ್ಪ, ಅಹಂಕಾರ ಇಳಿದಿಲ್ಲ. ತಾಯಿಯ ತಲೆಯಿಂದ ರಕ್ತ ಹರಿಯುತ್ತದೆ. ಆಕೆ ಸೊಸೆಯನ್ನು ಮಾತ್ರ ದೂರುವುದಿಲ್ಲ. "ತಲೆಯ ಮೇಲೆ ರಕ್ತ ಇಂದು ಮಾತ್ರ ಅಲ್ಲ. ೩೦ ವರ್ಷಗಳ ಹಿಂದೆ ಕೂಡಾ ತವರಿನಿಂದ ಬಂಗಾರ ತರಲಿಲ್ಲ ಎಂದು ನಿನ್ನ ತಂದೆ ರಕ್ತ ಹರಿಸಿದರು. ಅಂದು ಯೌವನದ ರಕ್ತ, ಇಂದು ಮುದಿಗೊಡ್ಡಾದ ರಕ್ತ..." ಹೀಗೆ ನಾಟಕದುದ್ದಕ್ಕೂ ಒಂದೇ ಪಾತ್ರದಲ್ಲಿ ಒಳಿತು ಕೆಡುಕು, ಉದಾರತ - ವಳಹಳಿಕೆ ಹೆಣೆದುಕೊಂಡು ಪಾತ್ರಗಳನ್ನು ಸಂಕೀರ್ಣವಾಗಿಸುತ್ತವೆ.

ರೆಹಮಾನವ್ವಳ ನಂತರ ಮುರುಗೋಡು ರೇಣಮ್ಮ, ಪ್ರಮೀಳಾ ಗುಡೂರುರಂತಹ ಹೆಸರಾಂತ ನಟಿಯವರು ತಾಯಿ ಪಾತ್ರವನ್ನು ಕಳೆಗಟ್ಟಿಸಿದ್ದಾರೆ. ಹಳ್ಳಿಗಾಡಿನ ನಾಟಕಗಳಲ್ಲಿ ತಳವಾರ ಹನುಮಂತಮ್ಮ, ಅಂಬುಜಮ್ಮ ಕುಮಟ, ದಾವಣಗೆರೆ ಕಸ್ತೂರಮ್ಮ, ಪುಷ್ಪಮಾಲ ಅಣ್ಣಿಗೇರಿ ಮುಂತಾದ ಹೆಸರಾಂತ ನಟಿಯರು ತಾಯಿ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸಿದ್ದು ಗ್ರಾಮೀಣ ರಂಗಭೂಮಿ ಆಸಕ್ತರಿಗೆ ಚಿರಪರಿಚಿತ ಸಂಗತಿ.

## ಸುಖದ ಸುಪ್ಪತ್ತಿಗೆ

ಗೋಕಾಕ ಶಾರದಾ ಸಂಗೀತ ನಾಟಕ ಮಂಡಳಿ ವೃತ್ತಿ ರಂಗಭೂಮಿಯ ಅತ್ಯಂತ ಪ್ರತಿಷ್ಠಿತ ಕಂಪೆನಿ. ಕಲಾವಿದರನ್ನು ತಯಾರಿಸುವ ಕಾರ್ಖಾನೆ ಎಂದೇ ಈ ನಾಟಕ ಕಂಪೆನಿ ಪ್ರಸಿದ್ಧ. 'ನಂದಗೋಕುಲ' ಎಂಬ ಹೆಸರಿನಲ್ಲಿ ಈ ಕಂಪೆನಿಯ ಅತಿ ಹೆಚ್ಚು ಪ್ರಯೋಗಗೊಂಡ ನಾಟಕಗಳ ಪೈಕಿ 'ಸುಖದ ಸುಪ್ಪತ್ತಿಗೆ'ಯೂ ಒಂದು.

ಮಹದೇವಪ್ಪ - ಹಂಪವ್ವ ಹಳ್ಳಿಯ ರೈತಾಪಿ ಕುಟುಂಬ. ದುಡಿಮೆಯೇ ದೇವರೆಂದು ನಂಬಿದವರು. ತುಂಬ ಸಾತ್ವಿಕರು. ತಮ್ಮ ಮೂವರು ಮಕ್ಕಳ ಯೋಗಕ್ಷೇಮಕ್ಕಿಂತ ಕೊಟ್ಟ ಮಾತನ್ನು ನಡೆಸಿಕೊಡುವುದೇ ದೊಡ್ಡದು ಎಂದು ನಂಬಿದವರು. ಹಂಪವ್ವ ತನ್ನ ತಾಯಿ-ತಂದೆಗೆ ಮಾತು ಕೊಟ್ಟ ಕಾರಣಕ್ಕೆ ತಮ್ಮ ಈಶ್ವರನ ಏಳಿಗೆಗಾಗಿ ಸರ್ವಸ್ವವನ್ನೇ ಸಮರ್ಪಿಸುತ್ತಾಳೆ. ಪತಿಯ ಸಹಕಾರವಂತೂ ಇನ್ನೂ ದೊಡ್ಡದು. ಈ ದಂಪತಿಯ ತ್ಯಾಗದ ಸಂಕೇತವಾಗಿ ಈಶ್ವರ ವಿದ್ಯಾವಂತನಾಗುತ್ತಾನೆ. ಬಾಗಲಕೋಟೆಯ ಶ್ರೀಮಂತ ಬಸವರಾಜಪ್ಪನ ಮಗಳು ಶೈಲಜಾ ಈಶ್ವರನನ್ನು ಇಷ್ಟಪಡುತ್ತಾಳೆ. ಹಂಪವ್ವ ಮೊದಲು ತನ್ನ ಮಗಳು ನೀಲಾಳನ್ನೇ ಈಶ್ವರನಿಗೆ ಕೊಟ್ಟು ಮದುವೆ ಮಾಡುವ ಆಸೆ ಹೊಂದಿದ್ದರೂ, ಶೈಲಜಾ ಇಷ್ಟಪಟ್ಟಿದಳು ಎಂಬ ಕಾರಣಕ್ಕೆ ತಮ್ಮನಿಗೆ ಆಕೆಯನ್ನೇ ತಂದುಕೊಳ್ಳುತ್ತಾಳೆ. ಮದುವೆಯ ನಂತರ ತಮ್ಮ ಶ್ರೀಮಂತ ಮಾವನ ಮನೆಯಲ್ಲಿ ಹೋಗಿ ನೆಲಸುತ್ತಾನೆ.

ಮದುವೆಯನ್ನು ಶ್ರೀಮಂತರ ಅಂತಸ್ತಿಗೆ ತಕ್ಕ ಹಾಗೆ ಅದ್ದೂರಿಯಾಗಿ ಮಾಡುತ್ತಾರೆ. ಅದಕ್ಕಾಗಿ ಹೊಲ-ಮನೆಯನ್ನೇ ಅಡವು ಇಡುತ್ತಾರೆ. ಮಿಡತೆ ಹಾವಳಿಯಿಂದ ಆ ವರ್ಷದ ಬೆಳೆಯಲ್ಲಾ ನಾಶವಾಗಿ ಬಿಡುತ್ತದೆ. ನೆರವಿಗೆ ತಮ್ಮನ ಮನೆಗೆ ಹೋದರೆ ಅಕ್ಕನೊಂದಿಗೆ ಹೆಚ್ಚು ಮಾತನಾಡದಂತೆ ಅಳಿಯನನ್ನು ಬಸವರಾಜಪ್ಪ ಮುಂಬೈಗೆ ಕಳಿಸಿಬಿಡುತ್ತಾನೆ. ಹೊಲ ಮನೆ ಬರೆಸಿಕೊಂಡಿದ್ದ ಹೂವಪ್ಪ ಸಾಲ ವಾಪಸಾಗದ ನೆಪದಲ್ಲಿ ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ತಮ್ಮನ ಮದುವೆಗೆ ಮಾಡಿದ ಖರ್ಚಿನ ಕಾರಣಕ್ಕೆ ಹೊಲ-ಮನೆ ಕಳೆದುಕೊಳ್ಳುತ್ತಾರೆ. ಮೂವರು ಮಕ್ಕಳು ಬೀದಿಗೆ ಬೀಳುತ್ತಾರೆ. ಕೊಟ್ಟ ಮಾತ ತಪ್ಪಬಾರದು ಎಂಬ ಕಾರಣಕ್ಕೆ ಇಷ್ಟೆಲ್ಲ ತ್ಯಾಗ ಮಾಡುತ್ತಾರೆ. ಕರುಳು ಮಿಡಿಯುವಂತಹ ದೃಶ್ಯಗಳು. ಸಂಕಟದಲ್ಲಿದ್ದಾಗ ಮಹದೇವಪ್ಪ ಡೋಲು ಬಡಿಯುತ್ತ ಹಾಡುವುದು ದೃಶ್ಯ ಕಾವ್ಯಕ್ಕೆ ಒಳ್ಳೆಯ ಪ್ರತಿಮೆಯಾಗಿ ಒಡಮೂಡುತ್ತದೆ.

ಕೊನೆಗೆ ಈಶ್ವರನಿಗೆ ಪಶ್ಚಾತ್ತಾಪವಾಗಿ ಅಕ್ಕ-ಮಾವಂದಿರ ಬದುಕಿಗೆ ಆಸರೆಯಾಗುವುದು ಕಾವ್ಯನ್ಯಾಯವಾಗಿ ಪರಿಣಮಿಸುತ್ತದೆ. ಅಲ್ಲಿವರೆಗೆ ಕರುಳು ಮಿಡಿಯುವ ದೃಶ್ಯ. ಗ್ರಾಮೀಣ ವಾತಾವರಣ. ನುಡಿಗಟ್ಟು, ಸರಳಾತಿ ಸರಳ ಭಾಷೆ, ದೃಶ್ಯ ನಿರ್ಮಿತಿಯಲ್ಲಿ ಅದ್ಭುತವಾದ ಕಲಾವಂತಿಕೆ ಇದೆ. ಗೋಕಾಕ ಕಂಪೆನಿಯಲ್ಲಿ ಬಸವರಾಜ ಹೊಸಮನಿಯವರ ಮಹದೇವಪ್ಪನ ಪಾತ್ರ, ನಾಗರತ್ನಮ್ಮ, ಅಂಬುಜಮ್ಮರ ಹಂಪವ್ವನ ಪಾತ್ರವನ್ನು ನೋಡಿ ಆ ಕಾಲದ ಪ್ರೇಕ್ಷಕರು ಅಕ್ಷರಶಃ ಅತ್ತಿದ್ದಾರೆ. ಚವಡವ್ವಳಾಗಿ ಗೋರಜಾನ ಹುಬ್ಬಳ್ಳಿ, ಕುಟಿಲ ಕಾರಸ್ಥಾನಿ ಹೂವಪ್ಪನಾಗಿ ರಾಮಣ್ಣ ಕುಮಟಾ ಅವರ ಅಭಿನಯವನ್ನು ಈಗಲೂ ಮರೆಯದವರಿದ್ದಾರೆ.

ಹಲವು ನಾಟಕ ಕಂಪೆನಿಗಳಲ್ಲಿ ಈ ನಾಟಕದ ಪ್ರಯೋಗವಾಗಿದೆ. ಆದರೆ ಒಂದು ಕಾಲದಲ್ಲಿ ಗೋಕಾಕ ಕಂಪೆನಿಯಲ್ಲಿ ಪ್ರಸಿದ್ಧಿಯ ಶಿಖರವಾಗಿತ್ತು. ಹಳ್ಳಿಗಾಡಿನಲ್ಲೂ ಅಸಂಖ್ಯಾತ ಪ್ರಯೋಗ ಕಂಡ ಸುಪ್ರಸಿದ್ಧ ನಾಟಕ ಇದು.

ಪಟ್ಟಣಗಳಂತೆ ಹಳ್ಳಿಗಳಲ್ಲೂ ದುಷ್ಟರಾಜಕಾರಣ ಇದೆ. ಮಾತುಕೊಟ್ಟು ತಪ್ಪುವವರೂ ಇದ್ದಾರೆ. ಆದರೆ ಇಂದಿಗೂ ವಚನ ಕೊಟ್ಟರೆ ಅದನ್ನು ಪಾಲಿಸುವುದು ಬಹುದೊಡ್ಡ ಮೌಲ್ಯ. ಇದಕ್ಕೆ ಗ್ರಾಮೀಣ ಜನತೆ ಯಾವುದೇ ದಾಖಲೆ ನೆಚ್ಚಿಕೊಳ್ಳುವುದಿಲ್ಲ. ನಾಲಿಗೆಯನ್ನು ನಂಬುತ್ತಾರೆ. ಒಮ್ಮೆ ಮಾತುಕೊಟ್ಟರೆ ಅದು ನೋಂದಣಿ ಮಾಡಿದಷ್ಟೇ ಗಟ್ಟಿ.

ಕೊಟ್ಟ ಮಾತನ್ನು ಉಳಿಸಿಕೊಳ್ಳುವುದನ್ನು ಭಾವುಕ ನೆಲೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೇಳುವ ನಾಟಕ ಇದು. ಈ ನಾಟಕ ನೋಡಿ ಅಕ್ಷರಶಃ ಅತ್ತವರ, ಅಳುವವರ ಸಂಖ್ಯೆ ಗ್ರಾಮೀಣ ಭಾಗದಲ್ಲಿ ಅಧಿಕವಾಗಿದೆ. ಈ ನಾಡಿನ ಲಕ್ಷಾಂತರ ಗ್ರಾಮೀಣ ಪ್ರೇಕ್ಷಕರಲ್ಲಿ ಕಣ್ಣೀರು ಹಾಕಿಸಿದ ಮನೋಜ್ಞ ನಾಟಕ ಇದು.

**ಚಿಕ್ಕಸೊಸೆ**

'ಸೊಸೆ ತಂದ ಸೌಭಾಗ್ಯ' ಎಂಬ ಹೆಸರಿನಲ್ಲಿ ಇದು ಚಲನಚಿತ್ರವಾಗಿ ಮೂಡಿಬಂದಿದೆ. ನಾಟಕರಂಗದ ಹಾಗೆ ಚಿತ್ರರಂಗದಲ್ಲೂ ಹೆಚ್ಚಿನ ಖ್ಯಾತಿ ಪಡೆದಿದೆ.

ಒಂದು ಮನೆ ಒಡೆದು ಎರಡಾಗುವುದು. ಈ ಮನೆಯದೊಂದು ರೀತಿ ವ್ಯವಹಾರ, ಆ ಮನೆಯದ್ದು ಮತ್ತೊಂದು ರೀತಿ. ಇಲ್ಲಿಂದ ಅಲ್ಲಿಗೆ ಪಾತ್ರಗಳು ಒಂದಾಗುವುದು, ಎಗರಾಡುವುದು- ಇಂತಹ ಅಸಾಮಾನ್ಯ ದೃಶ್ಯ ನಿರ್ಮಿತಿಯಿಂದಾಗಿ ವೃತ್ತಿ ರಂಗಭೂಮಿಯ ವಿನ್ಯಾಸದಲ್ಲಿ ಹೊಸತನ ತಂದ ಹೆಗ್ಗಳಿಕೆ ಈ ನಾಟಕದ್ದು. ಹುಬ್ಬಳ್ಳಿಯಲ್ಲಿ ಒಮ್ಮೆ ಮಾಸ್ಟರ್ ಹಿರಣ್ಣಯ್ಯನವರ 'ಲಂಚಾವತಾರ' ನಾಟಕದ ಪ್ರಯೋಗದ ಸಂಖ್ಯೆಯನ್ನು ಹಿಂದಿಕ್ಕಿ ಮುಂದೆ ಹೋಯಿತು. ವೃತ್ತಿ ನಾಟಕ ಕಂಪೆನಿಯಲ್ಲಿ ಒಂದು ನಾಟಕ ಪ್ರದರ್ಶನದ ದಾಖಲೆಯನ್ನು ಮತ್ತೊಂದು ಕಂಪೆನಿಯೇ ಮುರಿಯುತ್ತದೆ. ಇಲ್ಲಿ ವೃತ್ತಿ ಕಂಪೆನಿಗೆ ವೃತ್ತಿ ಕಂಪೆನಿಯೇ ಸಾಟಿ. ನಾಟಕದ ೨೦೦ನೇ ಪ್ರದರ್ಶನದ ಸಂದರ್ಭದಲ್ಲಿ ಪಾಟೀಲ ಪುಟ್ಟಪ್ಪ ಅವರ ಅಧ್ಯಕ್ಷತೆಯಲ್ಲಿ ಕವಿ ಧುತ್ತರಗಿ ಅವರನ್ನು ನೋಟಿನ ಹಾಗೂ ಬಂಗಾರದ ಹಾರಗಳೊಂದಿಗೆ ಸನ್ಮಾನಿಸಲಾಗುತ್ತದೆ.

ಹಳ್ಳಿಯ ಹಿನ್ನಲೆಯಲ್ಲಿ ಪಾತ್ರಗಳು ಬಿಚ್ಚಿಕೊಳ್ಳುತ್ತವೆ. "ಹೊಲದಲ್ಲಿ ದುಡಿಯುವ ಇವನ ಯೋಗ್ಯತೆ ಏನು ? ಕಲಿತು ನೌಕರಿ ಮಾಡುವ ನನ್ನ ಯೋಗ್ಯತೆ ಏನು ?" ಎಂದು ತನ್ನ ಸ್ವಂತ ತಮ್ಮ ಶೇಖರನಿಗೆ ಹಂಗಿಸುವ ರವಿಗೆ ಸೊಸೈಟಿಯಲ್ಲಿ ಒಂದು ನೌಕರಿ ಇದೆ. ನಾಗಮ್ಮಳನ್ನು ಮದುವೆಯಾಗಿ ಕರೆದುಕೊಂಡು ಬಂದಾಗಲೇ ನಾಗರಹಾವೊಂದು ಮನೆ ಪ್ರವೇಶಿಸುತ್ತದೆ. ಮನೆಯ ಸಂಪೂರ್ಣ ಅಧಿಕಾರವನ್ನು ಮಾವ ರಾಮಣ್ಣ ನಾಗಮ್ಮಳಿಗೆ ಕೊಡುತ್ತಾನೆ. ತನ್ನ ಪತ್ನಿ ಯಶಸ್ವಿಯಾಗಿ ಕುಟುಂಬದ ನಿರ್ವಹಣೆ ಮಾಡಿದ್ದೇ ರಾಮಣ್ಣನ ಈ ನಿರ್ಧಾರಕ್ಕೆ ಕಾರಣ. ಏನೂ ಅರಿಯದ ಮುಗ್ಧ ಮೈದುನನ ಆಸ್ತಿ ಕಬಳಿಸುವ ಸಂಚನ್ನು ನಾಗಮ್ಮ ಹೂಡುತ್ತಾಳೆ. ಗರ್ಭಿಣಿಯಾಗಿದ್ದ ನಾಗಮ್ಮನ ಆರೈಕೆಗೆಂದು ಬರುವ ತಂಗಿ ಸುನಂದ ಅಕ್ಕನ ಕುಟಿಲತನವನ್ನು ಅರಿತುಕೊಂಡು ಬುದ್ಧಿ ಕಲಿಸಬೇಕೆಂದುಕೊಳ್ಳುತ್ತಾಳೆ. ನೇರ-ಒರಟು ಸ್ವಭಾವದ ಶೇಖರನಲ್ಲಿ ಅನುರಕ್ತಳಾಗುತ್ತಾಳೆ. ಓದಿದ ಸುನಂದ ಓದದ ಶೇಖರನನ್ನು ಮದುವೆಯಾಗಿ ನಂತರ ಗಂಡನನ್ನು

ಸೊಸೈಟಿ ಅಧ್ಯಕ್ಷನನ್ನಾಗಿ ಮಾಡಿ ಅಕ್ಕನ ಗಂಡ ಅವನ ಕೈಯಲ್ಲಿ ಕೆಲಸ ಮಾಡುವಂತಹ ಸ್ಥಿತಿ ತರುತ್ತಾಳೆ. ಚಿಕ್ಕಸೊಸೆಯಾಗಿ ಮನೆಗೆ ಬರುವ ಒಡಹುಟ್ಟಿದ ತಂಗಿ ಸೇರಿಗೆ ಸವಾಸೇರು ಎನ್ನುವಂತಹ ಸ್ಥಿತಿ ನಿರ್ಮಾಣ ಮಾಡುವಲ್ಲಿಯೇ ಅದ್ಭುತ ನಾಟಕೀಯ ತಂತ್ರ ಇದೆ. ಒಂದೇ ದೃಶ್ಯದಲ್ಲಿ ಎರಡು ಕುಟುಂಬಗಳ ಮತ್ಸರವನ್ನು ಧುತ್ತರಗಿ ಇಲ್ಲಿ ಅತ್ಯಂತ ತಮಾಷೆಯಾಗಿ ನಾಟಕೀಯವಾಗಿ ಚಿತ್ರಿಸಿದ್ದಾರೆ. ಮುಗ್ಧ ಸೊಸೈಟಿ ಅಧ್ಯಕ್ಷನಾಗುವ ಹೊತ್ತಿಗೆ ಎಲ್ಲವೂ ಸುಖಾಂತ್ಯ ಎಂದು ನಾಟಕ ಅಷ್ಟಕ್ಕೆ ನಿಲ್ಲುವುದಿಲ್ಲ. ಅಧ್ಯಕ್ಷ ಪದವಿ ದೊರೆತ ಮುಗ್ಧನೂ ಒರಟಾಗಿ ನಡೆದುಕೊಳ್ಳುವ ಮನುಷ್ಯ ಸ್ವಭಾವದ ಪರಿಚಯವನ್ನು ನಾಟಕಕಾರ ಮಾಡಿಕೊಡುತ್ತಾರೆ.

ಗೋಕಾಕ ಕಂಪೆನಿಯಲ್ಲಿ ಮೊದಲ ಬಾರಿಗೆ ಈ ನಾಟಕವನ್ನು ಓದಿ ತೋರಿಸಿದಾಗ ಇದಾವ ನಾಟಕ ಎಂದು ಕೆಲ ಕಲಾವಿದರು ಮೂಗು ಮುರಿದರಂತೆ. ಆದರೆ ದೂರದರ್ಶಿತ್ವ ಹೊಂದಿದ್ದ, ಸೃಜನಶೀಲ ಮನಸ್ಸಿನ ಕಲಾವಿದ - ಮಾಲೀಕ ಬಸವರಾಜ ಹೊಸಮನಿಯವರಿಗೆ ಕಥೆಯ ಸಂಕೀರ್ಣತೆ ಮತ್ತು ಹೊಸತನ ಇಷ್ಟವಾಗಿ ಬಿಟ್ಟಿತು. ನಾಟಕ ಪ್ರಯೋಗಿಸುವುದನ್ನು ಸವಾಲಾಗಿ ಸ್ವೀಕರಿಸಿದರು, ಯಶಸ್ವಿಯೂ ಆದರು. ಮುಂದೆ ಅವರ ನಾಟಕ ಕಂಪೆನಿಯ 'ಹಿಟ್' ಪ್ರಯೋಗಗಳಲ್ಲಿ ಇದೂ ಒಂದಾಯಿತು.

ಹಲವು ನಾಟಕ ಕಂಪೆನಿಯಲ್ಲಿ ಹಳ್ಳಿಗಾಡಿನಲ್ಲಿ ಈ ನಾಟಕ ಪ್ರದರ್ಶನ ಕಂಡಿದೆ. ಆದರೆ ಗೋಕಾಕ ಕಂಪೆನಿಯಲ್ಲಿಯೇ ಅತಿ ಹೆಚ್ಚು ಯಶಸ್ವಿಯಾದ ನಾಟಕ. ಕೃಷ್ಣಚಂದರ್ ಬಳ್ಳಾರಿ, ರಾಜಾರಾಂ ಕಿತ್ತೂರು, ನಂದಾ ಹೊಸೂರು, ನಾಗರತ್ನಮ್ಮ - ಅಂಬುಜಮ್ಮ - ಜಯರಾಜ - ಬಸವರಾಜ ಹೊಸಮನಿ ಈ ನಾಟಕದಲ್ಲಿ ಸೊಗಸಾಗಿ ಅಭಿನಯ ನೀಡಿದ ಗೋಕಾಕ ಕಂಪೆನಿಯ ಕಲಾವಿದರು.

## ಪುಂಡಲೀಕಪ್ಪ ಹಾಗೂ ಅವರ ಇತರ ನಾಟಕಗಳು

ಬಾಗಲಕೋಟೆ ಜಿಲ್ಲೆ (ಆಗಿನ ಅವಿಭಜಿತ ವಿಜಾಪುರ) ಹುನಗುಂದ ತಾಲ್ಲೂಕು ಸೂಳೇಬಾವಿಯಲ್ಲಿ ಬಸನಗೌಡ ಸಂಗಮ್ಮ ದಂಪತಿಗೆ ೧೯೨೯ರಲ್ಲಿ ಜನಿಸಿದ ಪುಂಡಲೀಕಗೌಡನಿಗೆ ಬಾಲ್ಯದಲ್ಲಿ ಓದಿಗೆ ಪ್ರೋತ್ಸಾಹದಾಯಕ ವಾತಾವರಣ ಇರಲಿಲ್ಲ. ಆದರೆ ಪುಂಡಲೀಕನಿಗೆ ಮಾತ್ರ ಓದಿನಲ್ಲಿ ಅಪಾರ ಆಸಕ್ತಿ. ತಂದೆ ಬಸನಗೌಡ ವೃತ್ತಿ ನಾಟಕ ಕಂಪೆನಿಯಲ್ಲಿ ನಟ. ಮನೆಯಲ್ಲಿ ನೇಕಾರಿಕೆ ವೃತ್ತಿ. ವಿಜಾಪುರ ಜಿಲ್ಲೆಗೆ ಆಗ ಮೇಲಿಂದ ಮೇಲೆ ಬರಗಾಲ ಬೀಳುತ್ತಿತ್ತು. ನಾಲ್ಕೈದು ವರ್ಷಕ್ಕೆ ಶಾಲೆಗೆ ಶರಣು ಹೊಡೆಯಬೇಕಾಗಿ ಬಂದರೂ ಪುಂಡಲೀಕನ ಓದುವ ಹಸಿವು ಕಡಿಮೆಯಾಗಲಿಲ್ಲ. ಊರಿನಲ್ಲಿ ವಾರಿಗೆಯ ಗೆಳೆಯವರೊಂದಿಗೆ ರವೀಂದ್ರ ವಾಚನಾಲಯ ಸ್ಥಾಪಿಸಿ (೧೯೫೦) ಪುಸ್ತಕಗಳನ್ನು ಕಲೆ ಹಾಕಿದರು. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ, ಸರ್ವಜ್ಞ, ಸಂಚಿ ಹೊನ್ನಮ್ಮ, ಮುದ್ದಣ, ವಚನ ಸಾಹಿತ್ಯ, ದಾಸ ಸಾಹಿತ್ಯವನ್ನು ಸ್ವಆಸಕ್ತಿಯಿಂದ ಅಧ್ಯಯನ ಮಾಡಿದರು. ಮಾಸ್ತಿ, ಗೋಕಾಕ, ಡಿವಿಜಿಯವರ ಸಾಹಿತ್ಯ, ತನ್ನ ಕಾಲದ ಪ್ರಖ್ಯಾತ ನಾಟಕಕಾರರಾದ ಚಿಕ್ಕೋಡಿ ಶಿವಲಿಂಗಶಾಸ್ತ್ರಿ, ವಾಮನರಾವ ಮಾಸ್ತರ, ಗರುಡ ಸದಾಶಿವರಾಯ, ಕೋಲಶಾಂತಪ್ಪ,

ಹುಯಿಲಗೋಳ, ಕಂದಗಲ್ಲ, ನಲವಡಿ ಶ್ರೀಕಂಠಶಾಸ್ತ್ರಿ, ಎಚ್.ಟಿ. ಮಹಾಂತೇಶ ಶಾಸ್ತ್ರಿ ಅವರ ನಾಟಕಗಳನ್ನು ಓದಿದರು. ಅದು ಪ್ರಗತಿಶೀಲ ಸಾಹಿತ್ಯ ಉತ್ತುಂಗದಲ್ಲಿದ್ದ ಕಾಲ. ಆ ಪ್ರಕಾರದ ಕಾದಂಬರಿಗಳನ್ನು, ಕುವೆಂಪು 'ರಾಮಾಯಣ ದರ್ಶನಂ', ಅನಕೃ ಅವರ 'ನಟಸಾರ್ವಭೌಮ' ಕಾದಂಬರಿಗಳನ್ನು ಮೇಲಿಂದ ಮೇಲೆ ಓದಿದರು.

ಮನೆಯಲ್ಲಿ ನೇಕಾರಿಕೆಯೂ ಅಷ್ಟಕ್ಕಷ್ಟೇ. ಮತ್ತೆ ಮತ್ತೆ ಬರಗಾಲ. ಊಟದ ಸಮಸ್ಯೆ. ಮಗನೊಬ್ಬನ ಊಟದ ಸಮಸ್ಯೆಯಾದರೂ ನೀಗುತ್ತದಲ್ಲ ಎಂದು ತಂದೆ ಬಸನಗೌಡ ಮಗನನ್ನು ನಾಟಕ ಕಂಪೆನಿಗೆ ಕರೆದೊಯ್ದರು. ಪುಂಡಲೀಕಪ್ಪನಿಗೆ ನಾಟಕ ಕಂಪೆನಿಯಲ್ಲಿ ಅಭಿನಯದ ಜತೆಗೆ ಕವಿಗಳಾದ ಜಿ.ಜಿ. ಹೆಗಡೆ, ಇನಾಂದಾರರ ಸೇವೆಗೆ ಹಚ್ಚಲಾಯಿತು. ವೃತ್ತಿ ನಾಟಕ ಕಂಪೆನಿ ಪರಿಭಾಷೆಯಲ್ಲಿ ನಾಟಕಕಾರರನ್ನು ಕವಿಗಳೆಂದೇ ಕರೆಯಲಾಗುತ್ತದೆ. ಎಲ್ಲ ಯಶಸ್ವಿ ವೃತಿ ನಾಟಕಕಾರರೂ ಕಂಪೆನಿಯ ನಟರಾಗಿ, ನಿರ್ದೇಶಕರಾಗಿ ಅಥವಾ ನೇಪಥ್ಯ ಕಲಾವಿದರಾಗಿ ಅಲ್ಲೇ ನೆಲೆ ನಿಂತವರು. ಹೀಗೆ ರಂಗಭೂಮಿಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡವನು ಮಾತ್ರ ವೃತ್ತಿ ನಾಟಕಕಾರನಾಗುತ್ತಾನೆ. ಯಾಕೆಂದರೆ ನಾಟಕ ಅವರಿಗೆ ಸಾಹಿತ್ಯದ ಒಂದು ಪ್ರಕಾರ ಮಾತ್ರ ಅಲ್ಲ.

ಈ ಮಧ್ಯೆ ತೆಲುಗಿನ ಪ್ರಸಿದ್ಧ ಚಲನಚಿತ್ರ 'ಸ್ವರ್ಗಸೀಮಾ' ನೋಡಿ ಅದರ ಸ್ಫೂರ್ತಿ ಮೇಲೆ 'ಕಲ್ಪನಾ ಪ್ರಪಂಚ' (೧೯೫೧ ರಿಂದ ೫೩-೫೪ ಅವಧಿಯಲ್ಲಿ. ಧುತ್ತರಗಿ ಅವರ ಬಳಿ ಈ ನಾಟಕದ ವಿಷಯವಾಗಿ ಹಲವಾರು ಬಾರಿ ಚರ್ಚಿಸಿದಾಗ ಇಸ್ವಿಯಲ್ಲಿ ತುಸು ಗೊಂದಲ ಇತ್ತು. ಅವರಿಗೆ ಸರಿಯಾಗಿ ನೆನಪಿರಲಿಲ್ಲ) ಎನ್ನುವ ನಾಟಕ ರಚಿಸಿ ತಮ್ಮೂರಿನಲ್ಲಿ ಗೆಳೆಯರೊಂದಿಗೆ ಆಡಿದರು. ಅನಕೃ ಅವರ 'ಕಣ್ಣೀರು' ಕಾದಂಬರಿ ಆಧರಿಸಿ 'ನಂದಾದೀಪ' ಎಂಬ ನಾಟಕ ಬರೆದರು. ಗುರುಗಳ ನೆರವಿನಿಂದ ಆ ನಾಟಕವನ್ನು ಗದಗದಲ್ಲಿ ಪ್ರದರ್ಶಿಸಲು ಸಾಧ್ಯವಾಯಿತು. ಈ ಪ್ರಯೋಗ ಆ ಕಾಲದ ಪ್ರತಿಷ್ಠಿತ ನಾಟಕ ಕಂಪೆನಿ ಮಾಲೀಕ - ಕಲಾವಿದ, ಕೀರ್ತನಕಾರ ಚಿತ್ತರಗಿ ಗಂಗಾಧರಶಾಸ್ತ್ರಿಗಳ ಗಮನಕ್ಕೆ ಬಂತು. ನಮ್ಮ ಕಂಪೆನಿಗೆ ಒಂದು ನಾಟಕ ರಚಿಸಿಕೊಡು ಎಂದು ಈ ಹೊಸಬ - ಯುವಕರನ್ನು ಕೇಳುವ 'ರಿಸ್ಕ್' ತೆಗೆದುಕೊಂಡರು ಅವರು. 'ಕಾನೂನು' ಅರ್ಥಾತ್ 'ನ್ಯಾಯಾಧೀಶ' ಎಂಬ ನಾಟಕವನ್ನು ಧುತ್ತರಗಿ ರಚಿಸಿಕೊಟ್ಟರು. ಚಿತ್ತರಗಿ ಕಂಪೆನಿಯಲ್ಲಿ ಅದು ಯಶಸ್ವಿಯಾಯಿತು. ಹೆಸರಾಂತ ನಾಟಕ ಕಂಪನಿಯಲ್ಲಿ ಒಬ್ಬ ನಾಟಕಕಾರನ ಕೃತಿ ಯಶಸ್ವಿಯಾಯಿತೆಂದರೆ ಇತರ ಎಲ್ಲ ಕಂಪೆನಿಯ ಮಾಲೀಕರ ಗಮನವನ್ನು ಅದು ಸೆಳೆಯುತ್ತದೆ.

ಮುಂದೆ ಮೃಡದೇವ ಗವಾಯಿಗಳು ತಮ್ಮ ಅಮರೇಶ್ವರ ನಾಟ್ಯ ಸಂಘ ಸಿಂಧನೂರು ಇದಕ್ಕೆ ಒಂದು ನಾಟಕ ಬರೆದು ಕೊಡುವಂತೆ ಕೇಳುತ್ತಾರೆ. ಇದುವರೆಗೆ ನಾಲ್ಕೈದು ಸಾಮಾಜಿಕ ನಾಟಕಗಳನ್ನು ರಚಿಸಿದ್ದ ಕವಿಯ ಮನಸ್ಸು ಪೌರಾಣಿಕ ವಿಷಯದತ್ತ ಎಳೆಯುತ್ತದೆ. ಮಹಾಭಾರತ, ರಾಮಾಯಣದ ಮೇಲೆ ಹಲವರು ನಾಟಕಗಳನ್ನು ರಚಿಸಿರುವುದರಿಂದ ಸಾತ್ವಿಕ - ತಾಮಸ ಶಕ್ತಿಯ ಮಧ್ಯೆ ಸಂಘರ್ಷ ಇರುವ ಹರಿಹರನ ಗಿರಿಜಾ ಕಲ್ಯಾಣ ಅವರ ಗಮನ ಸೆಳೆಯುತದೆ.

ಎಸ್.ವಿ. ಪರಮೇಶ್ವರಭಟ್ಟರು ಅನುವಾದಿಸಿರುವ ಗಿರಿಜಾ ಕಲ್ಯಾಣದ ಘಟನೆಗಳು ಕಲ್ಪನೆಯ ಕಣ್ಣಿನ ಮುಂದೆ ಬಂದು ನಿಲ್ಲುತ್ತವೆ. ಧುತ್ತರಗಿಯವರ ವೈಚಾರಿಕ ಮನಸ್ಸಿಗೆ ಲೋಕ ಕಲ್ಯಾಣಕ್ಕೆ ಕುಳಿತವನೇ ತಪಸ್ಸಿಗೆ ಕುಳಿತರೆ ಹೇಗೆ ಎನಿಸುತ್ತದೆ. ಹಲವು ದಿನಗಳ ಜಿಜ್ಞಾಸೆ ನಂತರ ಲೋಕಕಲ್ಯಾಣಕ್ಕಾಗಿ ತಪಸ್ಸು ಎಂದು ಅರ್ಥೈಸುತ್ತಾರೆ. 'ಹರ ಗಿರಿಜೆ' ಎಂಬ ಸುಂದರವಾದ ನಾಟಕ ಹೊರಹೊಮ್ಮುತ್ತದೆ. ಸ್ವತಃ ಮೃಡದೇವ ಗವಾಯಿಗಳ ರಾಕ್ಷಸನ ಪಾತ್ರದಲ್ಲಿ ಭರ್ಜರಿಯಾಗಿ ಅಭಿನಯಿಸುತ್ತಾರೆ. ಧುತ್ತರಗಿಯವರ ಸತ್ವಯುತ ಸಂಭಾಷಣೆ. ಖ್ಯಾತ ಕಲಾವಿದ ವಿ.ಟಿ. ಕಾಳೆ ಅವರು ನಿರ್ಮಿಸಿದ ಕೈಲಾಸದ ದೃಶ್ಯ, ಗವಾಯಿಗಳ ಅಭಿನಯ ನೋಡಿದ ಪ್ರೇಕ್ಷಕರು ನಾವು ಕೊಟ್ಟ ರೊಕ್ಕ ಮುಟ್ಟಿಹೋಯಿತು ಎಂದು ಕೊಳ್ಳುತ್ತಾರೆ.

'ಪ್ರಾಸಬದ್ಧವಾದ ಬಂಧುರವಾದ ಸಾಹಿತ್ಯ ಸಂಭಾಷಣೆ, ರಮ್ಯೋಜ್ವಲ ಸನ್ನಿವೇಶ ನಿರ್ಮಾಣ, ಶೃಂಗಾರ ಭಕ್ತಿ ರಸಭಾವಗಳ ಲಹರಿ, ಮನ್ಮಥಶಕ್ತಿ, ಶಿವಶಕ್ತಿ, ರಾಗರತಿ ವಿರಾಗ ಪ್ರೀತಿಯ ಮಧ್ಯದ ಸೆಣಸಾಟ, ಸಾತ್ವಿಕ ಶಕ್ತಿಯ ಗೆಲುವು ಮೊದಲಾದ ರೋಚಕ ಸನ್ನಿವೇಶಗಳು ವಿಶೇಷವಾಗಿ ಸೆಳೆಯುತ್ತವೆ' (ಪಿ.ಬಿ. ಧುತ್ತರಗಿ - ಡಾ. ವೀರಣ್ಣ ರಾಜೂರ, ಕರ್ನಾಟಕ ನಾಟಕ ಅಕಾಡೆಮಿ ಪ್ರಕಟಣೆ, ಪುಟ - ೨೬)

ನಾಟಕದ ಕೀರ್ತಿ ಕೇಳಿದ ಕಂದಗಲ್ಲ ಹಣಮಂತರಾಯರು ಮುದ್ದಾಂ ಸೂಳೇಬಾವಿಗೆ ಹೋಗಿ ಕವಿಯಿಂದ ನಾಟಕ ಓದಿಸಿ ಸಂತೋಷದಿಂದ ಮೆಚ್ಚುಗೆ ಸೂಚಿಸಿ ಬರುತ್ತಾರೆ.

ದಾಸ ಸಾಹಿತ್ಯದ ಆಳವಾದ ಅಧ್ಯಯನದಿಂದ ಮುಂದೆ ಇದೇ ಕಂಪನಿಗೆ 'ಪುರಂದರದಾಸ' ನಾಟಕ ಬರೆದು ಕೊಡುತ್ತಾರೆ. ಸರಳ ಸುಂದರ ಸಂಭಾಷಣೆ, ಹಾಸ್ಯ ಸನ್ನಿವೇಶಗಳ ಜತೆಗೆ ಲವಲವಿಕೆಯ ನಿರೂಪಣೆ, ಇಂಪಾದ ಸಂಗೀತದಿಂದ ನಾಟಕ ಮನಸೂರೆಗೊಳ್ಳುತ್ತದೆ. ಮುಂದೆ ಹಲವು ನಾಟಕ ಕಂಪನಿಗಳಲ್ಲಿ ಇವರದು ಯಶೋಗಾಥೆ. ಧುತ್ತರಗಿ ಅವರು ತಮ್ಮ ಇಳಿಗಾಲದಲ್ಲಿ ರಚಿಸಿದ 'ದಿಕ್ಕಿಲ್ಲದ ದೇಶಕ್ಕೆ ದೇವರೇ ಗತಿ', 'ದೇವಿ ಮಹಾತ್ಮೆ'ಯಂತಹ ಪೌರಾಣಿಕ ನಾಟಕಗಳ ಯಶಸ್ಸಿಗೆ ಆರಂಭ ಕಾಲದಲ್ಲಿ ಮಾಡಿಕೊಂಡ ಇಂತಹ ಸಿದ್ಧತೆಯೇ ಕಾರಣವಾಗುತ್ತದೆ.

೧೯೫೮-೬೦ರ ಅವಧಿಯಲ್ಲಿ 'ಅತ್ತಿಗೆ', 'ಮನಸ್ಸಿಲ್ಲದ ಮದುವೆ', 'ಮದುಮಗಳು' (ಹೆಸರಾಂತ ಸಂಗೀತ ನಿರ್ದೇಶಕ ಗೌಸ ಮಾಸ್ತರ್ ಇದನ್ನು 'ದುಲ್ಹನ್' ಎಂದು ಹಿಂದಿಗೆ ಅನುವಾದಿಸುತ್ತಾರೆ) 'ವಿಜಯ ಮಹಾಂತೇಶ ಮಹಾತ್ಮೆ' ಮುಂತಾದ ನಾಟಕಗಳನ್ನು ತಪಸಿಗೌಡರ ಕಂಪನಿಗೆ ರಚಿಸಿಕೊಡುತ್ತಾರೆ. ಈ ಮಧ್ಯಯಲ್ಲಿ ಬರೆದದ್ದೇ 'ತಾಯಿಕರುಳು' ನಾಟಕ. ನಾಟಕಕಾರನಾದ ಸಂಪೂರ್ಣ ವಿಶ್ವಾಸ ನೀಡಿದ ನಾಟಕ.

ಇಲ್ಲಿಂದ ಮುಂದೆ ಕರ್ನಾಟಕದ ಎಲ್ಲ ನಾಟಕ ಕಂಪನಿಯವರು ಧುತ್ತರಗಿ ಅವರನ್ನು ರತ್ನಗಂಬಳಿ ಹಾಸಿ ಸ್ವಾಗತಿಸುತ್ತಾರೆ. ೧೯೬೦ ರಿಂದ ೧೯೬೯ರ ವರೆಗೆ ಸಂಪತ್ತಿಗೆ ಸವಾಲು, ಮಲಮಗಳು ಸೇರಿದಂತೆ ಸುಮಾರು ೩೦ ಯಶಸ್ವಿ ಸಾಮಾಜಿಕ ನಾಟಕಗಳನ್ನು ರಚಿಸುತ್ತಾರೆ. ೧೯೬೧ರಲ್ಲಿ ಅವರ ಮೊದಲ ಪತ್ನಿ ಶಾಂತಾ ನಿಧನರಾಗುತ್ತಾರೆ. ೧೯೬೩ರ ಹೊತ್ತಿನಲ್ಲಿ

ವೃತ್ತಿ ರಂಗಭೂಮಿಯ ಪ್ರಖ್ಯಾತ ಕಲಾವಿದೆ ಸರೋಜಮ್ಮ ಅವರನ್ನು ವಿವಾಹವಾಗುತ್ತಾರೆ. ಚಿತ್ರದುರ್ಗದ ಸರೋಜಮ್ಮ ಅದಾಗಲೇ ಹಳೇ ಮೈಸೂರು ಭಾಗದ ಹಲವು ಪ್ರತಿಷ್ಠಿತ ನಾಟಕ ಕಂಪೆನಿಗಳಲ್ಲಿ ಅಭಿನಯಿಸಿ ಹೆಸರು ಮಾಡಿದ್ದರು. ಸರೋಜಮ್ಮ ನಟಿಯಾಗಿ ಪ್ರತಿಷ್ಠಿತ ಕಂಪೆನಿಗಳ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರೆ, ಪತಿ ಧುತ್ತರಗಿ ಭಾರಿ ಡಿಮಾಂಡ್ ಇರುವ ನಾಟಕಕಾರರಾಗಿ ಅಕ್ಷರಶಃ ೧೯೬೦-೭೦ರ ದಶಕದಲ್ಲಿ ಮೆರೆಯುತ್ತಾರೆ. ಧುತ್ತರಗಿ ಅವರ ನಾಟಕಗಳ ಪ್ರದರ್ಶನ ಇದ್ದಾಗ ಹಲವು ಊರುಗಳಲ್ಲಿ ಸಿನಿಮಾ ಬಂದ್ ಆಗಿವೆ. ಜನದಟ್ಟಣೆ ನಿಯಂತ್ರಿಸಲು ಲಾಠಿ ಪ್ರಹಾರ ಆಗಿದೆ.

ವಿಷಮ ದಾಂಪತ್ಯದ ಕುರಿತ ‘ಮನಸ್ಸಿಲ್ಲದ ಮದುವೆ’, ಅಣ್ಣನ ತ್ಯಾಗ ಹೇಳುವ ‘ಸಹೋದರಿ’, ವರದಕ್ಷಿಣೆ ಸಮಸ್ಯೆ ಬಿಚ್ಚಿಡುವ ‘ಮದುಮಗಳು’, ಜಮೀನಿಗಾಗಿ ಹಳ್ಳಿಗಳಲ್ಲಿ ನಡೆಯುವ ಕಾರಸ್ಥಾನ ಹಾಗೂ ಸಹಕಾರ ಸಂಘದ ಮಹತ್ವ ಸಾರುವ ‘ಹೊಳೆದಂಡೆಯ ಹೊಲ’, ‘ಮನೆ ಎರಡು, ಮನ ಒಂದು’ ತಮಾಷೆ ನಾಟಕ, ನಿಷ್ಠಾವಂತ ಹಾಗೂ ಕಪಟ ದೇಶಭಕ್ತರ ಕುರಿತ ‘ಬೆಳಕು ತಂದ ಬಾಲೆ’, ಭಾರತ-ಪಾಕಿಸ್ತಾನದ ಯುದ್ಧ ಸಂದರ್ಭದಲ್ಲಿ ರಾಷ್ಟ್ರಪ್ರೇಮದ ಕುರಿತು ರಚಿಸಿರುವ ಪಣಕ್ಕಿಟ್ಟ ಪ್ರಮಾಣ, ಹೆಸರೇ ಹೇಳುವಂತೆ ಕೌಟುಂಬಿಕ ಹಾಗೂ ಸಾಮಾಜಿಕ ಬದುಕಿನ ಹಲವು ಮಗ್ಗಲುಗಳನ್ನು ಚಿತ್ರಿಸುವ ‘ಬಿಟ್ಟಿ ಬಿಜಿನೆಸ್’, ‘ಸಹಕಾರವೇ ಜೀವನ’, ‘ಪಂಚಾಯತ ರಾಜ್ಯ’, ‘ಸೋದರ ಮಾವ’, ‘ಅತ್ತೆಗೆ ತಕ್ಕ ಸೊಸೆ’, ‘ನೈದಿಲೆ’, ‘ಮಧುಚಂದ್ರ’ - ಹೀಗೆ ಮೇಲಿಂದ ಮೇಲೆ ನಾಟಕಗಳನ್ನು ರಚಿಸಿದರು. ಎಲ್ಲ ಕಂಪೆನಿಗಳಲ್ಲಿ ಇವರ ನಾಟಕ ಪ್ರಯೋಗ ಆಗುತ್ತಿದ್ದವು. ಕೆಲವು ಮಾತ್ರ ಪ್ರಕಟವಾಗುತ್ತಿದ್ದವು. ಹಾಗೆ ಪ್ರಕಟವಾದ ನಾಟಕಗಳು ಮಾತ್ರ ಹಳ್ಳಿಗಳಲ್ಲಿ ಪ್ರಯೋಗದ ಸಾಲುಗಟ್ಟುತ್ತಿದ್ದವು. ನಾಟಕಕ್ಕೆ ಪ್ರಯೋಗ ಒಂದೇ ಉದ್ದೇಶ ಎಂಬಂತೆ ಈ ಮಧ್ಯೆ ಇವರ ಹಲವು ನಾಟಕಗಳು ನಾಲ್ಕಾರು ವರ್ಷ ನಾಲ್ಕಾರು ಕಂಪೆನಿಗಳಲ್ಲಿ ಪ್ರಯೋಗ ಕಂಡ ನಂತರ ಹಸ್ತ ಪ್ರತಿಯ ಹಂತದಲ್ಲೇ ಕಳೆದು ಹೋದವು. ಅರ್ಧಕ್ಕಿಂತ ಹೆಚ್ಚು ನಾಟಕ ಪ್ರತಿಗಳು ನಿಧನರಾಗುವ ಮುಂಚೆ ಅವರ ಬಳಿ ಉಳಿದಿರಲಿಲ್ಲ. ಪ್ರಕಟವಾದ ಕೃತಿಗಳು ಸುಮಾರು ೨೦. ಹಾರ್ಮೋನಿಯಂ ಮಾಸ್ತರ ಬಳಿಯೋ, ಕಲಾವಿದರ ಬಳಿಯೋ ಈಗ ಲಭ್ಯವಿರುವ ನಾಟಕಗಳು ೧೦-೧೫ ಇದ್ದರೆ ಅದೇ ಹೆಚ್ಚು.

### ನಾಟಕ ಕಂಪೆನಿ ಮಾಲೀಕರಾಗಿ ಧುತ್ತರಗಿ

ವೃತ್ತಿ ನಾಟಕ ಕಂಪೆನಿ ಕಲಾವಿದ ಅಥವಾ ನಾಟಕಕಾರನಿಗೆ ಮಾಲೀಕ ಅನಿಸಿಕೊಳ್ಳುವ ಹುಚ್ಚು ಇದ್ದೇ ಇರುತ್ತದೆ. ಧುತ್ತರಗಿ ಅವರು ತಾವೇ ತಮಾಷೆಯಾಗಿ ಹಲವು ಬಾರಿ ಹೇಳಿಕೊಳ್ಳುವಂತೆ ಮಾಲೀಕ ಎಂದು ಬಿರುದಾಂಕಿತರಾಗುವ ‘ಹ್ಯಾವಕ್ಕ ಬಿದ್ದು ಪುರಾಣದ’. ಜತೆಗೆ ಪತ್ನಿ ಹೆಸರಾಂತ ನಟಿ. ನಾಟಕ ಕಂಪನಿ ಆರಂಭಿಸಲು ಇದು ಮೂಲ ಪ್ರೇರಣೆ. ಬಸವರಾಜಪ್ಪ ಜವಳಿಮಠ ಎಂಬ ಕಲಾವಿದರ ಜತೆ ಸೇರಿ ೧೯೬೯ರಲ್ಲಿ ತ್ರಿಪುರ ಸುಂದರಿ ನಾಟ್ಯ ಸಂಘ ಆರಂಭಿಸುತ್ತಾರೆ. ಅವರೇ ರಚಿಸಿದ ನಾಟಕಗಳು ಪ್ರಯೋಗಗೊಳ್ಳುತ್ತವೆ. ಪತ್ನಿ ಸರೋಜಮ್ಮ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಾರೆ. ರಾಯಚೂರು, ಕೊಪ್ಪಳ,

ಬಾಗಲಕೋಟೆ, ವಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ನಾಟಕ ಕಂಪೆನಿ ಹೆಚ್ಚಾಗಿ ಕ್ಯಾಂಪ್ ಮಾಡುತ್ತದೆ. ಈ ಮಧ್ಯೆ ಬಸವರಾಜಪ್ಪ ಬಿಟ್ಟು ಹೋಗುತ್ತಾರೆ. ಪತ್ನಿ ಸರೋಜಮ್ಮ ಹಾಗೂ ಧುತ್ತರಗಿ ಸೇರಿ ೧೯೭೫ರಲ್ಲಿ ಸಿದ್ಧಲಿಂಗ ವಿಜಯ ನಾಟ್ಯ ಸಂಘ ಸ್ಥಾಪಿಸುತ್ತಾರೆ. ಧುತ್ತರಗಿ ಅವರಿಗೆ ಜ್ಞಾನದ ಬಲ ಇತ್ತೇ ಹೊರತು ಕಂಪೆನಿ ನಡೆಸುವಷ್ಟು ದೊಡ್ಡ ಪ್ರಮಾಣದ ಹಣದ ಬಂಡವಾಳ ಅವರ ಬಳಿ ಇರಲಿಲ್ಲ. ೧೬ ವರ್ಷಗಳ ಕಂಪೆನಿ ಒಡೆತನದ ಅವಧಿಯಲ್ಲಿ ವೈಭವದ ದಿನಗಳನ್ನು ಕಂಡದ್ದು ಕೆಲ ದಿನಗಳು ಮಾತ್ರ. ಸಾಲ ಮಾಡಿಕೊಂಡು, ಕಲಾವಿದರ ಸಂಭಾವನೆಗೆ ಹೊಂದಿಸಲು ಪರದಾಡಬೇಕಾದ ಕಷ್ಟದ ದಿನಗಳನ್ನು ಕಂಡದ್ದೇ ಹೆಚ್ಚು. ಪತಿ-ಪತ್ನಿ ಇಬ್ಬರೂ ಕಂಪೆನಿಗಾಗಿ ದುಡಿದು ಹಣ್ಣಾದರು. ನಾಟಕ ರಚನೆ ಹಿಂದಕ್ಕೆ ಬಿತ್ತು. ಆದರೂ ತಮ್ಮ ಕಂಪೆನಿಯ ಅನಿವಾರ್ಯತೆಗಾಗಿ ಹಲವು ಐತಿಹಾಸಿಕ ನಾಟಕಗಳನ್ನು ರಚಿಸಿದರು. ಕಿತ್ತೂರು ಚೆನ್ನಮ್ಮ, ಸಿಂಧೂರ ಲಕ್ಷ್ಮಣ, ಛತ್ರಪತಿ ಶಿವಾಜಿ, ರಾಮದುರ್ಗದ ದುರಂತ ಮುಂತಾದ ನಾಟಕಗಳನ್ನು ರಚಿಸಿ ಪ್ರಯೋಗಿಸಿದರು. ಇತರ ಕಂಪೆನಿಗಳವರೂ ಇವನ್ನು ಪ್ರಯೋಗಿಸಿದರು. ಆದರೆ ಅವಾವು ಅಚ್ಚಾಗಲಿಲ್ಲ. ಕಷ್ಟದ ದಿನಗಳಲ್ಲಿ ಕೆಲವೊಮ್ಮೆ ಗದಗದ ತೋಂಟದ ಸಿದ್ಧಲಿಂಗ ಜಗದ್ಗುರುಗಳು ನೆರವಾದರು. ಇಳಕಲ್, ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರುಗಳು ಹರಸಿದರು.

ನಷ್ಟವಾದ ದಿನಗಳಲ್ಲೆಲ್ಲ ಹುಬ್ಬಳ್ಳಿ ಮುನಿಯಪ್ಪ, ಸಾಹಿತಿ ಶಾಂತರಸರ ಅಳಿಯ ರಾಜಶೇಖರಪ್ಪ ಸಹಾಯದ ಹಸ್ತ ಚಾಚಿದರು. ಆದರೆ ಕಷ್ಟ ನಷ್ಟಗಳಲ್ಲೇ ಸುಮಾರು ೪೦ ಜನ ಕಲಾವಿದರ ಹೊಟ್ಟೆ-ಬಟ್ಟೆ ಎಷ್ಟು ದಿನಗಳ ಕಾಲ ನೋಡಿಕೊಳ್ಳಲಾದೀತು. ಧುತ್ತರಗಿ ಅವರು ಕಂಪೆನಿ ಸ್ಥಾಪಿಸದಿದ್ದರೆ ಮತ್ತಷ್ಟು ನಾಟಕಗಳನ್ನು ರಚಿಸಿ ಹೆಸರು-ಹಣ-ಕೀರ್ತಿ ಸಂಪಾದಿಸುತ್ತಿದ್ದರೆ ? ಕಂಪನಿ ನಿಲ್ಲಿಸಿದ ಮೇಲೂ ಮದಕರಿ ನಾಯಕ, ರೇಣುಕಾ ಮಹಾತ್ಮೆ ನಾಟಕ ರಚಿಸಿ ಕಂಪೆನಿಗಳಿಗೆ ಕೊಟ್ಟರು. ೧೯೯೬ರಲ್ಲಿ ಚಿತ್ರದುರ್ಗದ ಜಯಣ್ಣ ಹಾಗೂ ಸುಮತಿಶ್ರೀ ಅವರ ಶಕ್ತಿ ಕಲಾ ಕೇಂದ್ರಕ್ಕೆ ರಚಿಸಿಕೊಟ್ಟ ದೇವಿ ಮಹಾತ್ಮೆಯಂತೂ ಹೊಸ ದಾಖಲೆ ನಿರ್ಮಿಸಿತು. ಖ್ಯಾತ ನಟಿಯಾದ ಸುಮತಿಶ್ರೀ ಅವರೇ ದೇವಿ ಪಾತ್ರದಲ್ಲಿ ಅಭಿನಯಿಸುತ್ತಿದ್ದರು. ಬನಶಂಕರಿ ಜಾತ್ರೆಯ ಕ್ಯಾಂಪಿನಲ್ಲಿ 'ಕವಿಶ್ರೇಷ್ಠ ರವಿಕೀರ್ತಿ' ಬಿರುದು ನೀಡಿ ಸನ್ಮಾನಿಸಲಾಯಿತು.

ನಾಟಕ ಕಂಪೆನಿ ನಷ್ಟದಿಂದ ಹಣ್ಣಾದ ಜೀವ ತಮ್ಮ ಕೊನೆಯ ಒಂದೂವರೆ ದಶಕ ಕಾಲ ಪತ್ನಿ ಸರೋಜಮ್ಮ, ಪುತ್ರ ಬಸವರಾಜ, ಪುತ್ರಿ ಶ್ರೀದೇವಿ ಅವರೊಂದಿಗೆ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು ಹನುಮಸಾಗರದ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಕೊನೇ ಕಾಲದಲ್ಲಿ ಆಶ್ರಯ ಯೋಜನೆಯಲ್ಲಿ ಬಡವರಿಗೆ ಕಟ್ಟಿಸುವಂತಹ ಮನೆಯೊಂದನ್ನು ಅವರು ಕಟ್ಟಿಕೊಂಡರು. ಈ ಮಧ್ಯೆ ೧೯೯೯ರಲ್ಲಿ ಅವರು ಕನ್ನಡ ರಂಗಭೂಮಿಯ ಅತ್ಯಂತ ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾದರು. ೨೦೦೭ರ ನವೆಂಬರ್ ೧ರಂದು ಧುತ್ತರಗಿ ಅವರು ನಿಧನರಾದರು. ಸಾಯುವುದಕ್ಕೆ ಕೆಲ ಕಾಲ ಮುಂಚೆ ಹನುಮಸಾಗರಕ್ಕೆ ಸಮೀಪದಲ್ಲೇ ಇರುವ ತಮ್ಮ ಸ್ವಂತ ಊರು ಸೂಳೇಬಾವಿಯ ಮೊದಲ ಪತ್ನಿಯ ಮಗ ಗೋಪಾಲ ಅವರ ಮನೆಯಲ್ಲಿ ನೆಲೆಸಿದ್ದರು ಪತ್ನಿ ಹೆಸರಾಂತ ಕಲಾವಿದೆ ಸರೋಜಮ್ಮ ಧುತ್ತರಗಿ ಈಗ ಹನುಮಸಾಗರದಲ್ಲೇ ನೆಲೆಸಿದ್ದಾರೆ.

**ನಾಟಕಗಳ ವಸ್ತು**

ಗ್ರಾಮೀಣ ಜನಜೀವನ ಧುತ್ತರಗಿ ಅವರ ನಾಟಕದ ವಸ್ತು. ಅವರೇ ಹೇಳಿಕೊಂಡಂತೆ, 'ನನ್ನ ನಾಟಕದ ವಸ್ತು ನನ್ನ ಸುತ್ತ ಮುತ್ತಲಿನ ಹಳ್ಳಿಯ ಜೀವನ. ನನಗೆ ನಗರ ಜೀವನದ ಪರಿಚಯವಿಲ್ಲ.' (ನಾಟಕ ಅಕಾಡೆಮಿ ಪ್ರಶಸ್ತಿ ೧೯೮೬, ಪುಟ ೧೫).

ಗ್ರಾಮಗಳ ಬಗ್ಗೆ ಧುತ್ತರಗಿ ಅವರದು ಸರಳ ರೊಮ್ಯಾಂಟಿಕ್ ಗ್ರಹಿಕೆಯಲ್ಲ. ಗ್ರಾಮೀಣ ಜನಜೀವನದ ಸಂಕೀರ್ಣತೆಯೊಂದಿಗೆ ಅಲ್ಲಿನ ಪಾತ್ರಗಳ ಅಂತರಂಗವನ್ನು ಅವರು ಚಿತ್ರಿಸುತ್ತಾರೆ. ಅಂತೆಯೇ ಓದುಗ ಅಥವಾ ನೋಡುಗ ಹಳ್ಳಿಯವನಿರಲಿ ನಗರದವನಿರಲಿ ಎಲ್ಲರಿಗೂ ಧುತ್ತರಗಿ ನಾಟಕಗಳು ಆಪ್ತವಾಗುತ್ತವೆ.

ಕೌಟುಂಬಿಕ ವಸ್ತುವನ್ನು ಚಿತ್ರಿಸುವಾಗ ಕೆಲವು ಕವಿಗಳು ಕುಟುಂಬದ ಆಚೆ ನೋಡುವುದಿಲ್ಲ. ಹಾಗಾಗಿ ಅಂತಹ ನಾಟಕಗಳು ಸೀಮಿತವಾದ ಭಾವುಕ ಚೌಕಟ್ಟಿನೊಳಗೇ ಉಳಿದುಬಿಡುತ್ತವೆ. ಆದರೆ ಅಧ್ಯಯನಶೀಲರೂ, ಬದುಕಿನ ಆಳ ಅನುಭವ ಉಳ್ಳವರೂ, ಸೂಕ್ಷ್ಮಗ್ರಾಹಿಗಳೂ ಆದ ಧುತ್ತರಗಿ ಅವರಿಗೆ ಕುಟುಂಬವನ್ನು ನಿಯಂತ್ರಿಸುವ ಸಮಾಜ, ಸರ್ಕಾರದ ಸಂಬಂಧ ಗೊತ್ತು. ಅಂತೆಯೇ ಅವರು ಕೌಟುಂಬಿಕ ನಾಟಕಗಳಲ್ಲಿ ಅದರಾಚೆಗಿನ ಸಾಮಾಜಿಕ ಸಂಬಂಧಗಳನ್ನು ಶೋಧಿಸಬಲ್ಲರು. ಗ್ರಾಮೀಣ ಜನತೆಗಾಗಿ ಸರ್ಕಾರ ಜಾರಿಗೊಳಿಸುವ ಅಭಿವೃದ್ಧಿ ಕಾರ್ಯಕ್ರಮಗಳು ಅದರ ಸಫಲತೆ-ವಿಫಲತೆ ಕುರಿತು ಪಾತ್ರಗಳು ಚರ್ಚಿಸುತ್ತವೆ. ಇಂತಹ ಸಂದರ್ಭದಲ್ಲಿ ಕತೆಯ ಓಟಕ್ಕೆ ಎಲ್ಲೂ ದಕ್ಕೆ ಉಂಟುಮಾಡುವುದಿಲ್ಲ. ಒಟ್ಟು ನಾಟಕದ ವಿನ್ಯಾಸದಲ್ಲೇ ಅದರ ಅವಿಭಾಜ್ಯ ಅಂಗವೆಂಬಂತೆ ಇಂತಹ ವಿಷಯಗಳನ್ನು ಹೆಣೆಯುತ್ತಾರೆ. ಕೃತಿಯ ಕಲಾತ್ಮಕತೆಗೆ ಚ್ಯುತಿ ಬರದಂತೆ ರಾಷ್ಟ್ರೀಯತೆಯ ವಿಷಯಗಳನ್ನೂ ಹೇಳಬಲ್ಲ ಅನನ್ಯ ಕವಿ ಧುತ್ತರಗಿ. ಈ ಕಾರಣಕ್ಕೆ ಹಲವು ಸಾಮಾಜಿಕ ನಾಟಕಕಾರರಿಗಿಂತ ಧುತ್ತರಗಿ ಭಿನ್ನ.

'ವಸ್ತು ಸಾಂಪ್ರದಾಯಿಕ ಬದುಕಿನತ್ತ ಮುಖ ಮಾಡಿದಂತೆ ಕಂಡರೂ ತನ್ನ ಕಾಲದ ವೈಚಾರಿಕತೆಯಿಂದ ಹೊರತಾಗುವುದಿಲ್ಲ' (ನಾಟ್ಯಭೂಷಣ, ಏಣಗಿ ಬಾಳಪ್ಪ ಅಭಿನಂದನಾ ಗ್ರಂಥ, ಗುಡಿಹಳ್ಳಿ ನಾಗರಾಜ, ಪುಟ ೪೫೮) ನೀತಿ ಬೋಧನೆ ನಾಟಕದ ಉದ್ದೇಶವಾಗಿದ್ದರೂ ಅಂತಿಮವಾಗಿ ಈ ಬಗ್ಗೆ ತೀರ್ಪು ಕೊಡುವಂತೆ ಅಥವಾ ಅಂತಿಮವಾಗಿ ಇದು ಸರಿ, ಇದು ತಪ್ಪು ಎಂಬ ಭಾಷಣದ ಶೈಲಿಯನ್ನು ಎಲ್ಲಿಯೂ ಅನುಸರಿಸುವುದಿಲ್ಲ. ಆಡುಭಾಷೆ, ಗ್ರಾಮೀಣ ನುಡಿಗಟ್ಟು, ಅಲಂಕಾರ, ಅವಶ್ಯವಿದ್ದೆಡೆ ಪ್ರಾಸ. ಗಾದೆ ಮಾತುಗಳಿಂದ ಸಾಹಿತ್ಯ ಸಂಪನ್ನವಾದ ಇವರ ಕೃತಿಗಳು ದೃಶ್ಯ ಸಂಯೋಜನೆಯಲ್ಲಿ ಅದ್ಭುತವಾದ ನಾಟಕೀಯತೆ ನಿರ್ಮಿಸುತ್ತವೆ. ರೂಪಕದಲ್ಲಿ ಕತೆ ಹೇಳುವ ವಿಧಾನ ಇದೆ. ವಾಚ್ಯಕ್ಕಿಳಿಯುವುದಿಲ್ಲ. ವಿಪರ್ಯಾಸವೆನಿಸಿದರೂ ಸರಿ, ಭಾಷಣದ ಬದಲು ರೂಪಕಗಳ ಮೂಲಕವೇ ಕತೆ ಕಟ್ಟುವ ಅನನ್ಯ ಕಲಾವಿದ ಧುತ್ತರಗಿ.

ಹಲವು ನಾಟಕಗಳಲ್ಲಿ ಸೇನೆಗೆ ಯುವಕರು ಸೇರಬೇಕಾದ ಅಗತ್ಯ ಮನಗಾಣಿಸುತ್ತಾರೆ. ಲಾಲ ಬಹದ್ದೂರ್ ಶಾಸ್ತ್ರಿಯವರು ಧುತ್ತರಗಿ ಅವರಿಗೆ ಆದರ್ಶ ವ್ಯಕ್ತಿ. ಶಾಸ್ತ್ರಿಯವರ 'ಜೈಜವಾನ,

ಜೈಕಿಸಾನ' ಸಂದೇಶವನ್ನು ಹಲವು ಕತೆಗಳಲ್ಲಿ ಕಲಾತ್ಮಕವಾಗಿ ಒಡಮೂಡಿಸುತ್ತಾರೆ. ಉಳುವವನೇ ಭೂಮಿಗೆ ಒಡೆಯ ಕಾಯ್ದೆ ಜಾರಿ ಬಂದದ್ದು ಸರಿ. ರೈತರ ಜೀವನದಲ್ಲಿ ಸಹಕಾರ ಸಂಘಗಳ ಪಾತ್ರ ಮಹತ್ತರವಾದುದು. ಪಡಿತರ ವ್ಯವಸ್ಥೆ ಸುಧಾರಿಸಬೇಕು-ಇಂತಹ ಆಶಯಗಳು ಕತೆಗಳಲ್ಲಿ ಮಿಳಿತವಾಗಿವೆ. ಓದಿದವರು ತಮ್ಮ ಊರುಗಳನ್ನು ಮರೆತಿರುವುದಕ್ಕೆ ವಿಷಾದ ಇದೆ.

## ವಿನ್ಯಾಸ

ನಾಟಕವನ್ನು ಕಟ್ಟುವ ಅವರ ಕ್ರಮ ಅದರ ವಿನ್ಯಾಸ ಸೋಜಿಗ ಹುಟ್ಟಿಸುವಷ್ಟು ಸೊಗಸಾಗಿದೆ. ಹಾಸ್ಯ ಪಾತ್ರಗಳು ಮುಖ್ಯ ಕಥಾಧಾರೆಯಲ್ಲೇ ಬರುತ್ತವೆ. ಅದಕ್ಕಾಗಿ ಪ್ರತ್ಯೇಕ ಟ್ರ್ಯಾಕ್ ಇಲ್ಲ. ಮುಖ್ಯ ಪಾತ್ರಗಳು ಗ್ರಾಂಥಿಕ ಭಾಷೆಯಲ್ಲಿ, ಹಾಸ್ಯ ಪಾತ್ರಗಳು ಆಡು ಭಾಷೆಯಲ್ಲಿ ಮಾತನಾಡುವ ರೂಢಿಗತ ನಾಟಕಗಳ ಪಟ್ಟುಗಳನ್ನು ಮುರಿದು ಹೊಸ ಸಂಪ್ರದಾಯವನ್ನು ದುತ್ತರಗಿ ಕಟ್ಟುತ್ತಾರೆ.

ಚಿಕ್ಕಸೊಸ, ಇಲಕಲ್ಲ ಸೀರೆ, ಸಂಪತ್ತಿಗೆ ಸವಾಲು, ಮನೆ ಎರಡು ಮನ ಒಂದು, ಮಲಮಗಳು-ನಾಟಕಗಳಲ್ಲಂತೂ ನೂತನ ತಂತ್ರವನ್ನೇ ಬಳಸುತ್ತಾರೆ.

## ಭಾಷೆ

ಕಾವ್ಯಾತ್ಮಕವಾದ ಸರಳ ಭಾಷೆ, ಗ್ರಾಮೀಣರ ನುಡಿಗಟ್ಟು, ಗಾದೆಗಳು ಧಾರಾಳವಾಗಿ ಬಂದರೂ ಶಬ್ದಾಡಂಬರ ಇಲ್ಲ. ಉದ್ದುದ್ದ ವಾಕ್ಯ ಇಲ್ಲ. ಪ್ರಚಲಿತ ಗಾದೆಗಳನ್ನು ಬಳಸುತ್ತಾರೆ, ನಾಟಕದ ಅವಶ್ಯಕತೆಗೆ ತಕ್ಕಂತೆ ಕೆಲವು ಶಬ್ದಗಳನ್ನು ಬದಲಿಸಿಕೊಳ್ಳುತ್ತಾರೆ. ತಾವೇ ಕೆಲವು ಗಾದೆಗಳನ್ನೂ ಸೃಷ್ಟಿಸುತ್ತಾರೆ. ಉದಾಹರಣೆಗೆ : ಸೂಜಿ ಪಾಪ ಸನ್ಯಾಸಿಗೆ. ಮಸಿ ದೀಪ ಅಂತ ಯಾರಾದರೂ ಮುದ್ದು ಕೊಡತಾರೇನು ? ಕೆಂಡ ಕಂಡರೆ ದೂರ ಸರಿಯೋದು ಬಿಟ್ಟು ಅದರ ಮೈ ತಂಪಿದೆಯೋ, ಬಿಸಿಯಿದೆಯೋ ಅಂತ ಮುಟ್ಟಿ ನೋಡೋದು ಅವಿವೇಕ. ಬಡತನಕ್ಕೆ ವಯಸ್ಸ ಬರಬಾರದು, ಶ್ರೀಮಂತಗ ಮುದಿತನ ಬರಬಾರದು. ಹುಲಿ ಸರಸವಾಡಿದ ಕಾಡಿನಲ್ಲಿ ಹುಲ್ಲೆ ಆಟವಾಡುವುದು ಅಪಾಯಕಾರಿ. ಹಾವು ಬರದ ಮನೆಯಿಲ್ಲ, ಸಾವು ಬರದ ಮನುಷ್ಯನಿಲ್ಲ. ಜಾಲಿಯ ಗಿಡದಲ್ಲಿ ಜಾಜಿಯ ಹೂ ಬಯಸಿದಂತೆ. ಮನಸ್ಸಿನ ಸ್ವಾಧೀನ ಮೈ, ಮೈ ಸ್ವಾಧೀನ ಕೈ, ಒಂದು ಸೋತ ಮೇಲೆ ಇನ್ನೊಂದು ಸೋಲೋದು ಕಷ್ಟವಲ್ಲ. ಆಕಳು ಅಟ್ಟದ ಮೇಲೆ, ಕರು ಬೆಟ್ಟದ ಮೇಲೆ ಇದ್ದುಬಿಟ್ಟರೆ ಹೊಟ್ಟೆಗೆ ಸಿಕ್ಕುತ್ತೇನ್ರಿ ?

'ಶಿಷ್ಟ ದೇಸಿ ಬರಹಕೆಯಿಂದ ಸಂಸ್ಕರಿಸಿದ ಸಾಹಿತ್ಯಕ ಸತ್ವವುಳ್ಳ ಪ್ರಮಾಣಭೂತ ಕಾವ್ಯಾತ್ಮಕ ಭಾಷೆ, ಎಲ್ಲವೂ ಹಿತಮಿತ; ಸಂದರ್ಭೋಚಿತ; ಸೂತ್ರಬದ್ಧ. ಚುಟುಕು ಮಾತಿನಲ್ಲಿ ಚುರುಕು ಮುಟ್ಟಿಸುವ, ಚಕಮಕಿಯಂತೆ ಅರ್ಥದ ಕಿಡಿ ಹಾರಿಸುವ ಕಲೆಗಾರಿಕೆ ಅವರಿಗೆ ಕರಗತ. ತರ್ಕ ಬದ್ಧತೆ, ಒಣಚರ್ಚೆಯಿಲ್ಲ. ಪ್ರತಿ ಮಾತು ಅರ್ಥಪೂರ್ಣ; ರಸಪೂರ್ಣ (ಪಿ.ಬಿ. ಧುತ್ತರಗಿ - ವೀರಣ್ಣ ರಾಜೂರ, ಪುಟ - ೯೪)

ಕಲ್ಪನೆಯ ಸ್ವಚ್ಛತಾ ತಾಟಿನೊಳಗೆ ತನ್ನ ಅನುಭವದ ಸಾತ್ವಿಕ ಅನ್ನ ಉಣಬಡಿಸಿದ ಅವರು ರಂಗಭೂಮಿ ಪಾವಿತ್ರ್ಯವನ್ನು ಹದಗೆಡಿಸುವಂತೆ ಬರವಣಿಗೆಯನ್ನು ಎಂದೂ ಮಾಡಲಿಲ್ಲ. (ಸಿದ್ಧಲಿಂಗ ಪಟ್ಟಣಶೆಟ್ಟಿ ಪ್ರಜಾವಾಣಿ ೨೩.೦೪.೧೯೯೭).

### ದೊಗಳೆ ಅಂಗಿ, ಮಾಸಿದ ಪಂಚೆಯ ಪುಂಡಲೀಕಪ್ಪ

ದೊಗಳೆ ಅಂಗಿ, ಮಾಸಿದ ಪಂಚೆ ಉಟ್ಟ ಪಕ್ಕಾ ಹಳ್ಳಿಯವನಂತೆ ಕಾಣುತ್ತಿದ್ದ ಜವಾರಿ ವ್ಯಕ್ತಿ ಧುತ್ತರಗಿ ವಿದ್ವತ್ ವಲಯದ ಸಂಪರ್ಕ ಇಟ್ಟುಕೊಂಡಿದ್ದರು. ಚರ್ಚೆ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತಿದ್ದರು. ವೈಚಾರಿಕ ಚರ್ಚೆ ಎಂದರೆ ಬಹಳ ಇಷ್ಟ ಅವರಿಗೆ. ವೃತ್ತಿ ರಂಗಭೂಮಿ ಆಚೆಗೂ ನಾಡಿನ ಹಲವಾರು ಸಾಹಿತಿ, ಕಲಾವಿದರು ಅವರ ನಿಕಟವರ್ತಿಗಳು. ಪತ್ರಕರ್ತರೊಂದಿಗೆ ಅವರ ಒಡನಾಟ ಇತ್ತು. ಉತ್ತಮ ವಾಗ್ಮಿ. ಭಾಷಣಗಳಲ್ಲಿ ಮಾರ್ಮಿಕ ಮಾತುಗಾರಿಕೆ, ಅನುಭವದ ರಸಪಾಕ ಇರುತ್ತಿತ್ತು.

ನಾಟಕ ಕಂಪೆನಿ ಸ್ಥಾಪಿಸಿದ ೧೬ ವರ್ಷಗಳ ಕಾಲ ನಷ್ಟ-ನೋವು ಅನುಭವಿಸಿದ್ದೇ ಹೆಚ್ಚು. ಯಶಸ್ವಿ ನಾಟಕಕಾರನಾಗಿ ಅಪಾರ ಮನ್ನಣೆ ಗಳಿಸಿದವರು. ಎಲ್ಲ ನಾಟಕ ಕಂಪೆನಿಗಳು ಅವರ ನಾಟಕಗಳನ್ನು ಅಭಿನಯಿಸಿವೆ. ಅಸಂಖ್ಯಾತ ಕಲಾವಿದರ ನಾಡಿಮಿಡಿತ ಬಲ್ಲ ಅನುಭವಿ. ಯುವಕನಿದ್ದಾಗಲೇ ರಂಗಭೂಮಿ ಪ್ರವೇಶಿದ್ದ ಅವರು ನಟನಾಗಿ, ನಾಟಕಕಾರನಾಗಿ, ನಿರ್ದೇಶಕನಾಗಿ, ಮಾಲೀಕನಾಗಿ (ಇತರ ಎಷ್ಟೋ ಕ್ಷೇತ್ರಗಳಲ್ಲಿ ಮಾಲೀಕ ಎಂದರೆ ಬರೀ ಬಂಡವಾಳ ತೊಡಗಿಸುವವನು ಎಂದಿರಬಹುದು. ಆದರೆ ವೃತ್ತಿ ರಂಗಭೂಮಿ ಮಾಲೀಕ ಒಬ್ಬ ದಕ್ಷ ಸಂಘಟಕನೇ ಆಗಿರಬೇಕು. ಸೃಜನಶೀಲತೆ, ಕ್ರಿಯಾಶೀಲತೆ ಎರಡೂ ಬೇಕು. ಎಲ್ಲವೂ ಪುಂಡಲೀಕಪ್ಪ ಧುತ್ತರಗಿಯವರಲ್ಲಿ ಮೇಳೈಸಿತ್ತು) ಅನುಭವದ ಗಣಿ ಆಗಿದ್ದರು. ಅವರ ನರ-ನಾಡಿಯಲ್ಲಿ ವೃತ್ತಿರಂಗಭೂಮಿಯೇ ತುಂಬಿತ್ತು.

ನಾಟಕ ಇತರ ಸಾಹಿತ್ಯ ಪ್ರಕಾರದಂತಲ್ಲ. ಎಲ್ಲಿಯೋ ಕುಳಿತು ಬರೆಯುವುದಲ್ಲ. ನಟನಾಗಿ, ನೇಪಥ್ಯ ಕಲಾವಿದನಾಗಿ, ನಿರ್ದೇಶಕನಾಗಿ, ಸಂಘಟಕನಾಗಿ ಅನುಭವ ಇದ್ದವನು ಮಾತ್ರ ಒಳ್ಳೆಯ ನಾಟಕಕಾರನಾಗಬಲ್ಲ. ಶೇಕ್ಸ್‌ಪೀಯರ್ ಉದಾಹರಣೆ ನಮ್ಮ ಕಣ್ಣೆದುರಿಗಿದೆ.

### ಯಾಕೆ ಚರ್ಚೆ ಆಗಲಿಲ್ಲ

ಇಷ್ಟೆಲ್ಲ ಇದ್ದೂ ಧುತ್ತರಗಿ ಅವರ ನಾಟಕಗಳು ಮಾತ್ರ ಚರ್ಚೆಗೆ ಒಳಪಡಲಿಲ್ಲ. ರಂಗಭೂಮಿ ವಿಮರ್ಶೆಯಂತೂ ನಮ್ಮಲ್ಲಿ ಬೆಳೆದುಬಂದಿಲ್ಲ. ಸಾಹಿತ್ಯ ವಿಮರ್ಶಗಳೂ ಧುತ್ತರಗಿಯಂತಹ ನಾಟಕಕಾರನ ಕುರಿತು ಚರ್ಚಿಸಲಿಲ್ಲ. ಧುತ್ತರಗಿ ಅವರಿಗೆ ಇದ್ದ ಒಡನಾಟದ ಫಲವಾಗಿ ಅವರ ಕುರಿತ ಪರಿಚಯಗಳು, ಭಾಷಣದ ವರದಿಗಳು ಪತ್ರಿಕೆಗಳಲ್ಲಿ ಬರುತ್ತಿದ್ದವೇ ಹೊರತು ಅವರ ನಾಟಕಗಳ ವಿಮರ್ಶೆ ಬರಲಿಲ್ಲ. ವೃತ್ತಿ ನಾಟಕ ಎಂದರೆ ಅದೊಂದು ಜನಪ್ರಿಯ ಪ್ರಕಾರ. ಅಲ್ಲಿರುವದು ಬರೀ ಕಪ್ಪು-ಬಿಳುಪು ಪಾತ್ರಗಳು ಎಂದು ಯಾರೋ ಹೇಳಿದ್ದ ಮಾತುಗಳೇ ಹಲವರಿಗೆ ಗಿಳಿಪಾಠಗಳಾಗಿದ್ದವು. ವೃತ್ತಿ ರಂಗಭೂಮಿಯ ಬಗ್ಗೆ ಇದ್ದ ಈ ಅವಜ್ಞೆಯನ್ನು

ಮೀರುವ ಕೆಲಸವನ್ನು ಕಳೆದ ಒಂದು ದಶಕ ನಾವು ಕೆಲವರು ಮಾಡುತ್ತ ಬಂದೆವು. ನಂತರವಷ್ಟೇ ಕನ್ನಡ ಸಾರಸ್ವತ ಲೋಕ ಇತ್ತ ಗಂಭೀರ ಗಮನ ಹರಿಸಿತು.

ಧುತ್ತರಗಿ ಅವರ ನಾಟಕಗಳ ಕುರಿತು ನಾನು ಬರೆದ ಲೇಖನಕ್ಕೆ ಚಂದ್ರಶೇಖರ ಪಾಟೀಲರು ೨೦೦೦ನೇ ಇಸ್ವಿ ಮಾರ್ಚ್-ಏಪ್ರಿಲ್‌ನ ತಮ್ಮ ಸಂಕ್ರಮಣ ಸಂಚಿಕೆಯಲ್ಲಿ "ಧುತ್ತರಗಿ ನಾಟಕಗಳ ಬಗ್ಗೆ ಗುಡಿಹಳ್ಳಿ ನಾಗರಾಜ ಬರೆದ ಲೇಖನವು ವೃತ್ತಿ ನಾಟಕಗಳನ್ನು ನಮ್ಮ ವಿಮರ್ಶಕರು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕೆಂದು ಬೊಟ್ಟು ಮಾಡಿ ತೋರಿದೆ" ಎಂದು ಬರೆದಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ ರಂಗ ಸಂಪನ್ನರು ಮಾಲಿಕೆಯಲ್ಲಿ ಹೊರತಂದ ನಂತರ ಪಿ.ಬಿ. ಧುತ್ತರಗಿ (ರಚನೆ ಡಾ. ವೀರಣ್ಣ ರಾಜೂರ) ಪುಸ್ತಕದಲ್ಲಿ ಮಾತ್ರ ನಾಟಕಕಾರನ ಹಾಗೂ ಕೃತಿಗಳ ಕುರಿತು ಸಮಗ್ರ-ಸಂಕ್ಷಿಪ್ತ ವಿವರಗಳು ಇವೆ. ಈ ಪುಸ್ತಕ ಮರುಮುದ್ರಣವಾಗಬೇಕು.

ಧುತ್ತರಗಿಯವರ ೨೦ ನಾಟಕಗಳು ಮಾತ್ರ ಪ್ರಕಟವಾಗಿವೆ. ೧೬ ನಾಟಕ ಹಸ್ತಪ್ರತಿಗಳು ಕಳೆದು ಹೋಗಿವೆ. ನಾಟಕ ಕಂಪೆನಿಗಳ ಮಾಲೀಕರ ಬಳಿ ಹಾಗೂ ಸರೋಜಮ್ಮ ಧುತ್ತರಗಿ ಅವರ ಬಳಿ ಕೆಲವು ಹಸ್ತಪ್ರತಿಗಳಿವೆ. ಧುತ್ತರಗಿ ಅವರ ಬಹುತೇಕ ಎಲ್ಲ ನಾಟಕಗಳನ್ನು ಪ್ರಕಟಿಸಿದವರು ಹುಬ್ಬಳ್ಳಿಯ ಎ.ಎಂ. ಕರಡಿ ಅಂಡ್ ಸನ್ಸ್ ಮತ್ತು ಗದಗದ ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ ಎಂಬ ಪ್ರಖ್ಯಾತ ಪ್ರಕಾಶಕರು. ಗ್ರಾಮೀಣ ಹವ್ಯಾಸಿಗಳಿಗೆ ಹಾಗೂ ವೃತ್ತಿ ರಂಗಭೂಮಿಯ ಕಲಾವಿದರಿಗೆ ಸುಲಭ ಬೆಲೆಯಲ್ಲಿ ಈ ಪುಸ್ತಕದ ಪ್ರತಿಗಳು ದೊರೆಯುವಂತೆ ನಿರಂತರವಾಗಿ ಪ್ರಕಟಿಸುತ್ತ ಬಂದ ಕರಡಿಯವರಿಗೆ ಹಾಗೂ ಮಲ್ಲಪ್ಪ ಅರಳಿಯವರಿಗೆ ರಂಗಾಸಕ್ತರು ಕೃತಜ್ಞತೆಗಳನ್ನು ಸಲ್ಲಿಸಬೇಕು.

ಸಾಕಷ್ಟು ಬಾರಿ ಈ ನಾಟಕಗಳ ಮರುಮುದ್ರಣವಾಗಿದ್ದರೂ ಎಷ್ಟನೇ ಮುದ್ರಣ ಎಂಬುದನ್ನು ಪ್ರಕಾಶಕರು ಯಾವುದೇ ಪ್ರತಿಗಳಲ್ಲಿ ಪ್ರಕಟಿಸುತ್ತಿರಲಿಲ್ಲ. ಅಂತೆಯೇ ಇಲ್ಲಿ ಕೂಡ ಎಷ್ಟನೇ ಪ್ರಕಟಣೆ ಎಂಬ ವಿವರಗಳಿಲ್ಲ. ಪ್ರಸಕ್ತ ಸಂಕಲನದಲ್ಲಿ ಸಂಪತ್ತಿಗೆ ಸವಾಲು ೧೯೭೫, ಮಲಮಗಳು ೧೯೯೮, ತಾಯಿಕರುಳು ೧೯೬೮, ಸುಖದ ಸುಪ್ಪತ್ತಿಗೆ ೧೯೮೭ ಹಾಗೂ ಚಿಕ್ಕಸೊಸೆ ೧೯೮೫ರ ಮರುಮುದ್ರಣಗಳನ್ನು ಬಳಸಿಕೊಳ್ಳಲಾಗಿದೆ.

ಈ ನಾಟಕಗಳ ಪ್ರತಿಗಳನ್ನು ಒದಗಿಸಿಕೊಡುವಲ್ಲಿ ನನಗೆ ನೆರವಾದವರು ಗೋಕಾಕ ನಾಟಕ ಕಂಪನಿಯ ಪ್ರಖ್ಯಾತ ಕಲಾವಿದರುಗಳಾದ ಎಂ.ಎಸ್. ಕೊಟ್ರೇಶ್, ಜಯರಾಜ ಹೊಸಮನಿ, ನಾಟಕಕಾರ ತಳವಾರ ಪರಮೇಶ್ವರಪ್ಪ, ಗ್ರಾಮೀಣ ರಂಗಭೂಮಿಯ ರಂಗ ಕಲಾವಿದರಾದ ಮರಿಯಮ್ಮನಹಳ್ಳಿ ನಾಗರತ್ನಮ್ಮ, ಇಳಕಲ್ ಉಮಾರಾಣಿ ರಂಗ ಸಂಘಟಕ ಮಹಾಂತೇಶ ಗಜೇಂದ್ರಗಡ ಹಾಗೂ ಧುತ್ತರಗಿ ಬಂಧುಗಳಾದ ವಿನಾಯಕ ದೂಪದ ಅವರು. ಇವರಿಗೆಲ್ಲ ನಾನು ಕೃತಜ್ಞ. ಇಂತಹ ಪುಸ್ತಕದ ಅಗತ್ಯವನ್ನು ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ. ಸಿದ್ಧರಾಮಯ್ಯ ಅವರು ಬೇಗನೇ ಮನಗಂಡರು. ಪ್ರಾಧಿಕಾರದ ಅಧ್ಯಕ್ಷರು ಹಾಗೂ

ಸದಸ್ಯರುಗಳಾದ ಹೊರೆಯಾಲ ದೊರೆಸ್ವಾಮಿ ಕಾಶೀನಾಥ ಅಂಬಲಗಿ, ಶೀಲಾ ತಿವಾರಿ, ಶರಣಮ್ಮ ಗೋರೇಬಾಳ ಹಾಗೂ ಆಡಳಿತಾಧಿಕಾರಿ ಅಶೋಕ ಚಲವಾದಿ ಅವರಿಗೆ ನಾನು ಆಭಾರಿ.

ಪುಸ್ತಕದ ಪ್ರೂಫ್ ತಿದ್ದುವ ಕೆಲಸ ಅತ್ಯಂತ ಪರಿಶ್ರಮದ್ದು. ಆ ಕೆಲಸವನ್ನು ನಾನೇ ಕೈಗೊಂಡೆ. ಮೇಲಿಂದ ಮೇಲೆ ಪ್ರೂಫ್ ತಿದ್ದಬೇಕಾಗಿ ಬಂದ ಸಂದರ್ಭದಲ್ಲಿ ನಾನು ಬಹಳ ಸಂತಸಪಟ್ಟಿದ್ದೇನೆ. ಕಾರಣ ಧುತ್ತರಗಿ ನಾಟಕಗಳ ದೃಶ್ಯ ನಿರ್ಮಿತಿ ಗಾದೆ, ನುಡಿಗಟ್ಟು, ಪ್ರಾಸಗಳಲ್ಲಿ ಹಳ್ಳಿಯ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡುವ ಅವರ ಅತ್ಯಾಕರ್ಷಕ ಭಾಷೆ, ಪ್ರತಿಮೆ, ರೂಪಕಗಳು ಮತ್ತೆ ಮತ್ತೆ ಓದಿದಾಗ ಖುಷಿಕೊಟ್ಟಿವೆ. ಧುತ್ತರಗಿ ಅವರೊಂದಿಗೆ ಸಾಕಷ್ಟು ರಸಮಯಗಳಿಗೆ ಕಳೆದಿದ್ದೇನೆ. ಅವರೊಂದಿಗೆ ಇರುವುದು, ಚರ್ಚಿಸುವುದೇ ಒಂದು ರಸಿಕಾನುಭೂತಿ. ಈ ನಾಟಕಗಳನ್ನು ಮತ್ತೆ ಮತ್ತೆ ಓದಿದಾಗ ಅಂತಹ ಸಂತಸ ಅನುಭವಿಸಿದ್ದೇನೆ. ಆ ಮಹಾಕವಿಗೆ ನನ್ನ ಹೃದಯಾಂತರಾಳದ ನಮನಗಳು.

ಬಾಲ್ಯದಿಂದಲೇ ನಾನು ನೋಡುತ್ತ ಬಂದ ಗ್ರಾಮೀಣ, ವೃತ್ತಿ ರಂಗಭೂಮಿಯ ನಾಟಕಗಳ ನೆನಪು, ಕಳೆದ ೪೦ ವರ್ಷಗಳ ವೃತ್ತಿ ರಂಗಭೂಮಿಯ ಅವಲೋಕನ, ಹಲವು ವೃತ್ತಿ ಕಲಾವಿದರ ಒಡನಾಟ, ಚರ್ಚೆ ಆಧಾರದ ಮೇಲೆ ಇಲ್ಲಿ ೫ ನಾಟಕಗಳನ್ನು ಆಯ್ಕೆ ಮಾಡಿದ್ದೇನೆ.

ಈ ಪುಸ್ತಕ ಸಂಪಾದನೆಯ ಕಾರ್ಯದಲ್ಲಿ ನಾಟಕಗಳ ಆಯ್ಕೆ ಮತ್ತಿತರ ವಿಷಯಗಳಿಗೆ ಸಂಬಂಧಪಟ್ಟಂತೆ ವೃತ್ತಿ ಕಲಾವಿದರುಗಳು, ಲೇಖಕ ಮಿತ್ರರುಗಳಾದ ಎಂ.ಎಸ್. ಕೊಟ್ರೇಶ್, ಏಣಗಿ ನಟರಾಜ, ವಿಠ್ಠಪ್ಪ ಗೋರಂಟ್ಲಿ, ಈರಪ್ಪ ಕಂಬಳಿ, ಹರಿಹರಪ್ರಿಯ, ಚೆನ್ನಣ್ಣ ವಾಲೀಕಾರ, ಎಂ.ಟಿ. ಶಂಕರಪ್ಪ, ಯಳನಾಡು ಅಂಜನಪ್ಪ ಮುಂತಾದವರೊಂದಿಗೆ ಚರ್ಚಿಸಿದ್ದೇನೆ. ಅವರಿಗೆಲ್ಲ ನನ್ನ ಧನ್ಯವಾದಗಳು. ನನ್ನ ಬರಹದ, ಸಂಶೋಧನೆಯ ಬಿಡುವಿಲ್ಲದ ಕಾರ್ಯಗಳಲ್ಲಿ ಸಹಕಾರ ನೀಡುತ್ತಿರುವ ಪತ್ನಿ ಗಿರಿಜಾಗೆ ನೆನಕೆಗಳು.

ಎಚ್.ಟಿ. ಮಹಾಂತೇಶ ಶಾಸ್ತ್ರಿ, ಎಚ್.ಎನ್. ಹೂಗಾರ, ಮಾರುತೇಶ ಮಾಂಡ್ರೆ, ಕೆ.ಎನ್. ಸಾಳುಂಕೆ ಸೇರಿದಂತೆ ಸಾಮಾಜಿಕ ನಾಟಕಕಾರರುಗಳ ಪೈಕಿ ಕನಿಷ್ಠ ೧೦ ಮಂದಿಯ ತಲಾ ೧೦ ರಿಂದ ೫ ನಾಟಕಗಳ ಸಂಕಲನಗಳಾದರೂ ಹೊರಬಂದರೆ ವೃತ್ತಿರಂಗಭೂಮಿಯ ಸಾಮಾಜಿಕ ನಾಟಕಗಳ ಪರ್ವದ ಒಂದು ಸ್ಯಾಂಪಲ್ ಆದರೂ ಮುಂದಿನ ಪೀಳಿಗೆಗೆ ಉಳಿಯುತ್ತದೆ. ಈ ನಿಟ್ಟಿನಲ್ಲಿ ಧುತ್ತರಗಿ ಅವರ ಈ ಸಂಕಲನ ದಾರಿ ದೀಪವಾಗಲಿ.

ದಿನಾಂಕ : ೨೭-೦೩-೨೦೦೮

**- ಗುಡಿಹಳ್ಳಿ ನಾಗರಾಜ**
ಬೆಂಗಳೂರು

# ಪರಿವಿಡಿ

# ಸಂಪತ್ತಿಗೆ ಸವಾಲು

# ಪಾತ್ರ ಪರಿಚಯ

| | | |
|---|---|---|
| ವೆಂಕಪ್ಪ | - | ಕುಲಕರ್ಣಿ, ಊರಿನ ಮುಖ್ಯಸ್ಥ |
| ಮರಿಯಪ್ಪ | - | ಸಾವುಕಾರ, ಲಕ್ಷ್ಮೀಯ ತಂದೆ |
| ಲಕ್ಷ್ಮೀ | - | ಸಾವುಕಾರ ಮರಿಯಪ್ಪನ ಮಗಳು (ಒಬ್ಬಳೇ ಮಗಳು) |
| ಸಿದ್ಧ | - | ಮರಿಯಪ್ಪನ ಆಳು, ಸಂಗವ್ವನ ಮಗ |
| ಭದ್ರ | - | ಸಂಗವ್ವನ ೨ನೇ ಮಗ |
| ಪಾರ್ವತಿ | - | ಸಿದ್ಧನ ಹೆಂಡತಿ |
| ಸಂಗವ್ವ | - | ಸಿದ್ಧ, ಭದ್ರರ ತಾಯಿ |
| ಚಿನ್ನಿ | - | |
| ಗುಂಡ | - | ಭದ್ರನ ಗೆಳೆಯ |
| ಕೆಂಚಪ್ಪ | - | ಊರಿನ ಮುಖ್ಯಸ್ಥ |
| ಫೈರ | - | ಕೋಲಿಗಡಕ |

ಫೌಜದಾರ ಪೋಲೀಸರು ಮತ್ತಿತರ ಪಾತ್ರಗಳು

# ದೃಶ್ಯ ೧

॥ ಶ್ರೀ ಗುರುಸಿದ್ಧಲಿಂಗ ಕಾಯಲಿ ॥

॥ ಶ್ರೀ ಗುರುಮುದ್ದುಸಂಗ ಕಾಯಲಿ ॥

## ನಾಂದಿ ಗೀತೆ

ಮನೆ ಸೀನು

ಓಂಕಾರ ಮುಖಿ ಸಚ್ಚಿದಾನಂದ । ಋತುಜಿತ್ ಪ್ರಭಾ ಸ್ವರೂಪಿಣೀಂ ಶಿವೆ ಸರಸ್ವತಿ ಲಕ್ಷ್ಮೀಯರ ಮೊದಲ್ಗೆ ॥ ನಿಶಂಷ ದೇವ ಗೋಷ್ಠಿ ಸಮಷ್ಠಿ ರೂಪಿಣಿ ॥ ಭವತಾರಿಣಿ । ಹೇ ಜಗಧಾರಿಣಿ । ಹೇ ಜಗಧಾರಿಣಿ ॥ ಸಮರ್ಪಿಸುವೆವು । ನಮಾತ್ಮಾ ಸರ್ವಸ್ವಮಂ । ನಿನ್ನಪದ್ಮಸಮ ಪದತಲಕೇ ತಾಯೇ ತಾಯೇ ತಾಯೇ

ಜಗ ಬಾಲ ಪಾಲಂ ಜನ ಸ್ತುತ್ಯಂ ಶೀಲಂ
ಭವಾರಣ್ಯ ವಾಪಂ । ಶ್ರೀ ಸಿದ್ಧಲಿಂಗಂ ॥ ಪ ॥

ಅಗಹರ ತ್ರಿವಿಕ್ರಂ ನಗಧರ ಸ್ವರೂಪಂ ॥
ನಗಹೊಗೆ ನಿಪಾರಂ । ಶ್ರೀ ಸಿದ್ಧಲಿಂಗಂ । ॥ ಜಗ ॥ ॥ ೧ ॥

ಕಲಾ ಸತ್ಕಲಾಪಂ । ಕರ್ಪದಿ್ರೀ ಸ್ವರೂಪಂ ।
ಮುನಿವಾಕ್ಯ ಮಾನ್ಯಂ ॥ ಶ್ರೀ ಸಿದ್ಧಲಿಂಗಂ ॥ ೨ ॥

ಮಲಪ್ರಭಾ ತೀರಂ । ಕಮತಗಿ ನಗರಂ ॥
ನಿರುತಾ ನಿವಾಸಂ ॥ ಶ್ರೀ ಮುದ್ದುಸಂಗಂ ॥ ೩ ॥

ಓ - ನನ್ನ ತಂದೆ ಶ್ರೀ ಗುರುಮುದ್ದು ಸಂಗಾ - (ಸಂಗವ್ವನ ಮನ, ಬಡತನ ಸ್ಥಿತಿಯಲ್ಲಿದೆ. ಸಿದ್ದಪ್ಪಜ್ಜನ **ಫೋಟೋ** ತೂಗು ಹಾಕಿದೆ. ಪಾರ್ವತಿ ಹೊಸ ಮೊದಲಗಿತ್ತಿ ಮಂಚದ ಮೇಲೆ ಕುಳಿತಿದ್ದಾಳೆ ಮಹಾಲಕ್ಷ್ಮಿಯಂತೆ)

**ಹಿನ್ನೆಲೆ ಧ್ವನಿ** – ಪಾರ್ವತಿ ಇದು ಮೊದಲ ರಾತ್ರಿ. ನಿನ್ನ ಬಾಳಿನಲ್ಲಿ ಈ ರಾತ್ರಿ ಬಲು ಮಹತ್ವದ್ದು. ಹುಟ್ಟಿದ ಮನೆ ಇನ್ನು ನಿನ್ನ ಪಾಲಿಗಿಲ್ಲ. ಕೈಹಿಡಿದ ಪತಿಯ ಈ ಮನೆ ನಿನ್ನ ಮನೆ. ಇಲ್ಲಿ ನೀನು ಬೆಳಗಬೇಕಿದ್ದರ ದೀಪವಾಗಿ ಉರಿಯಬೇಕು. ಸುವಾಸನೆ ತುಂಬಬೇಕಿದ್ದರೆ ಗಂಧದ

ಕೊರಡಿನಂತೆ ನೀನು ಸವೆದು ಹೋಗಬೇಕು. ಅಂದರೆ ಮಾತ್ರ ನಿನ್ನ ಜೀವ ತಾವರೆಯ ಹೂವಾಗಿ ದೇವರ ಅಡಿಗೇರುತ್ತದೆ. ಪತಿ ಸೇವಾ ತತ್ಪರಳಾಗು. ಅತ್ತೆಯನ್ನು ತಾಯಿಯಂತೆಯೂ, ಮೈದುನನ್ನು ಮಗನಂತೆಯೂ ತಿಳಿದು ತುಂಬು ವಾತ್ಸಲ್ಯದಿಂದ ಕಾಪಾಡು. ಸಿದ್ಧ ಪುರುಷರ ಸಿರಿಹರಕೆಯಿಂದ ಅಂತಹ ಸದ್‌ಗ್ರಹಿಣಿ ನೀನಾಗಿ ಬಾಳು

ಪಾರ್ವತಿ - (ಎದ್ದು ಸಿದ್ದಪ್ಪಜ್ಜನಿಗೆ ನಮಸ್ಕರಿಸಿ) ನನ್ನಪ್ಪ ಸಿದ್ದಪ್ಪಜ್ಜಾ ನಾನೀ ದಾರಿಲಿ ನಡಿಬೇಕು. ನಡೆದು ಒಳ್ಳೇ ಹೆಸರು ಪಡಿಬೇಕೂ ಅಂತಾ ಮಾಡೀನಿ. ಮನಸ್ಸಿನಲ್ಲಿ ಮೂಡಿಸಿಕೊಂಡಂತೆ ನಡಿಯೋದು ಬಹಳ ಕಷ್ಟಾಂತ ಹೇಳ್ತಾರೆ. ಅದೇನಿದ್ರು ನೀನೇ ನನ್ನ ಬೆನ್ನ ಹಿಂದೆ ಇದ್ದು ಒಳ್ಳೇ ದಾರೀಲಿ ನಡಸಪ್ಪಾ ಅಂತಾ ನಿನ್ನೊಬ್ಬನಲ್ಲೆ ಬೇಡತೀನಿ

ಸಿದ್ದಪ್ಪಜ್ಜನ ಪದ

ನಿತ್ಯ ಮುಕ್ತನ ಕಂಡು ಧನ್ಯಳಾದೆನು ಇಂದು । ಪುಣ್ಯತಮ ಕ್ಷೇತ್ರ ಸಿದ್ಧನಾ ಕೊಳ್ಳದಲ್ಲಿ ॥ ನಿತ್ಯ । ಸಪ್ತಮಾತ್ರಿಕೆ ಗಣವಾ । ಸಂತೃಪ್ತಿಗೊಳಿಸಿ ॥ ಮುರಿದು ಬಿದ್ದ ಮಾತೆಯನ್ನು ॥ ಎದ್ದು ನಿಲ್ಲಿಸಿ । ಸಂಕಲ್ಪ ಸಿದ್ಧಿಗೆ ದುರ್ಗೆಯ ತಣಿಸಿ ॥ ಸಿದ್ಧನಾದನೂ ಇಲ್ಲಿ ॥ ಸಿದ್ಧನಾ ಕೊಳ್ಳದಲ್ಲಿ ನಿತ್ಯ ಮುಕ್ತನ ಕಂಡು ॥ ॥ ೧ ॥

ಜಾತಿಮತ ಪಂಥಗಳಾ ತಾನಂತೂ ಮೀರಿ ॥ ದೀನದಲಿತರಾ ಕಂಡು ಅನುಕಂಪ ಬೀರಿ॥ ಅಂಧಕಾರವಾ ಹರಿಸಿ । ಬೆಳಕನೂ ಬೀರಿಸಿ ॥ ಧೃಡಮನದ ಯೋಗೀಂದ್ರ ಮೃಢನೆ ಆಗಿಹನಿಲ್ಲಿ ಸಿದಜ್ಜನ ಕೊಳ್ಳದಲ್ಲಿ ॥ ॥ ೨ ॥

ಗುಪ್ತ ಗಂಗಮಾತೆ ಸಂತೃಪ್ತಿಯಿಂದ ॥ ಸಿದ್ಧಪುರುಷನಾ ಮುಂದೆ । ಹರಿಯುವಳೋ ಹರುಷದಿಂದ ॥ ಅವನ ಮಹಿಮೆಯ ಕೇಳಬೇಕು ॥ ಇವನ ಬಾಯಿಂದಾ ಮುಂದೆ ಕುಳಿತ । ಜನರೂ ಮೌನದಿಂದಾ ಸಿದ್ಧ ಕೊಳ್ಳದಲ್ಲೀ ॥ ೩ ॥

ಸುತ್ತು ಹತ್ತು ಗಾವೂದವರಿಷಿ ॥ ನಿತ್ಯ ಬಂದಿಲ್ಲೀ ॥ ದರುಶನ ಪಡೆವರೂ ॥ ಹರುಷದಲೀ ॥ ಬನಸಿರಿಯ ಸೊಬಗಿನ ॥ ಚಲುವಿನಲ್ಲಿ ಪರಮಹಂಸನ ಕಂಡು ॥ ಪರಮಕಾಂತಿಯಲ್ಲಿ ॥ ಸಿದ್ಧನ ಕೊಳ್ಳದಲ್ಲೀ ॥ ನಿತ್ಯ ಮುಕ್ತನ ಕಂಡೂ ॥ ೪॥

ಸಿದ್ಧ - (ಪದ ಮುಗಿಸುವ ಹೊತ್ತಿಗೆ ಬಂದು ) ಪಾರೂ -

ಪಾರ್ವತಿ - (ಕಾಲಿಗೆ ನಮಸ್ಕರಿಸಿ) ಸ್ವಾಮೀ

ಸಂಗವ್ವ - (ಒಳಗಿನಿಂದ) ಎಲೋ ಸಿದ್ಧಾ (ಕೂಗು ಕೇಳಿದ ಕೂಡಲೆ ಸಿದ್ಧ ಪಾರ್ವತಿ ದೂರವಾಗುವರು. ಸಂಗವ್ವ ಭದ್ರಿಯ ಕಿವಿ ಹಿಡಿದು ತಂದು) ನೋಡು ಪಾರವ್ವ ಈತ ನಿನ್ನ ಗಂಡ ಸಿದ್ದಣ್ಣ, ಇವನು ನಿನ್ನ ಮೈದುನ ವೀರಭದ್ರ. ಪ್ರೀತಿಯಿಂದ ನಾವೆಲ್ಲ ಭದ್ರಿ ಅಂತಾನೆ ಕರೀತೀವಿ

ಪಾರ್ವತಿ - ಹೊಸ್ತಾಗಿ ಹೇಳಿಕೊಡೋದೇನೈತಿ ಅತ್ತೆ ನನಗೆಲ್ಲ ಗೊತ್ತು

ಸಂಗವ್ವ - ಏ ನಮಸ್ಕಾರ ಮಾಡೋ (ಭದ್ರಿ ಪಾರ್ವತಿಗೆ ನಮಸ್ಕರಿಸುವನು)

ಪಾರ್ವತಿ - ಇರ್ಲಿ ಏಳಪ್ಪಾ ನಾನೂ ಕೂಡ ನಿನ್ನ ಭದ್ರಿ ಅಂತಾನೇ ಕರೀತೀನಿ

ಭದ್ರಿ - ಹೌದು ಅತ್ತಿಗೆಮ್ಮಾ, ನೀನು ಎಲ್ಲರ ಹಾಗೆ ನನ್ನ ಭದ್ರಿ ಅಂತಾನೆ ಕರಿಬೇಕೂ ಅಂತ ನನ್ನಿಷ್ಟ

ಪಾರ್ವತಿ - ಹೌಧಪ್ಪ ನೀನು ಬಲು ಜಾಣ

ಸಿದ್ಧ - ಯಾರು ಇವನೇ ?

ಪಾರ್ವತಿ - ಹೌದು

ಸಿದ್ಧ - ಮುಗದ ಹೋಯಿತು ಇವನು ಜಾಣನಲ್ಲೆ.... ಶುದ್ಧ ಕೋಣ. ಹೊರಗೆ ಹೋದರೆ ಹೊರಗಿನ ಜನರ ಕೂಡ ಜಗಳ, ಮನೆಯಲ್ಲಿದ್ದರ ಸುಮ್ಮನೆ ನಮಗೆ ಗದ್ಲ, ಇವನಿಗೆ ಗೊತ್ತಿರೊದಂದ್ರೇ ನಾಲ್ಕು ಹೊಡಿಯೋದು, ಹೊಡಿಸಿ ಕೊಳ್ಳೋದು ಇಲ್ಲ ಬಯ್ಯೋದು, ಬಯ್ಯಿಸಿಕೊಳ್ಳೋದು

ಬದ್ರಿ - ಹೌದು ಅತ್ತಿಗೆಮ್ಮಾ ನನಗೆ ಗೊತ್ತಿರೋದು ನಾಲ್ಕಾದರ ನಮ್ಮಣ್ಣನಿಗೆ ಗೊತ್ತಿರೋವು ಎರಡೇ ಹೊಡಿಸಿಕೊಳ್ಳೋದು, ಇಲ್ಲ ಬಯ್ಯಿಸಿ ಕೊಳ್ಳೋದು

ಸಂಗವ್ವ - ಹೌದಪ್ಪಾ ಭದ್ರಿ ಬಡವರಾಗಿ ಒಮ್ಮೆ ಭೂಮಿ ಮ್ಯಾಲೆ ಹುಟ್ಟಿವಿ ಅಂದ ಬಳಿಕ ಹೊಡಿಸಿಕೊಳ್ಳೋದು ಬಡಿಸಿಕೊಳ್ಳೋದು ಏನು ಮಹಾ ಮಾತ. ನಾವು ಬಡವರಾಗಿ ಹುಟ್ಟೀವಿ

ಭದ್ರಿ - ಗೊತ್ತವ್ವ ನನಗೆ ಬಡವರಾಗಿ ಹುಟ್ಟೀವಿ ಅನ್ನೋದು, ಆದರೆ ಬಡವರಾಗಿಯೇ ಬದಕತೀವಿ ಅಂತಾ ಹುಟ್ಟುವಾಗ ಆಣೆ ಮಾಡಿವೇನೂ ?

ಸಿದ್ಧ - ಬಡವರಾಗಿ ಹುಟ್ಟಿದ ಬಳಿಕ ಬಡವರಾಗಿಯೇ ಬದುಕಬೇಕು. ಸಾವುಕಾರಿಕೆ ಅಂದ್ರೇನು ಹರದ ಬರಾಕ ಹಳ್ಳದ ನೀರಂತ ಮಾಡಿಯೇನು ?

ಭದ್ರಿ - ಹರದ ಬರತ್ತೊ ಏನ ಸರದ ಬರತ್ತೊ ತಿಳಿತೈತಿ ತಡಿ. ಇಷ್ಟು ದಿವಸ ನಮ್ಮಹೊಲಾ ಉಂಡಾನಲ್ಲಾ ಆ ಮರಿಯಪ್ಪ ಉಣ್ಣಲಿ ಇನ್ನ ಮ್ಯಾಲೆ, ನಮ್ಮ ಹೊಲದ ಸಮೀಪ ಬಂದ್ರೆ ನಾನವನ ಮ್ಯಾಲೆ ಕೈಮಾಡೇ ತೀರುವೆನು

ಸಂಗವ್ವ - ಈ ವರಟತನ ಬ್ಯಾಡಲೋ ಭದ್ರಿ. ಶ್ರೀಮಂತರ ಕೂಡ ದ್ವೇಷಾ ಕಟ್ಟಿಕೊಂಡು ಊರಿಗೆ ದೂರಾದಿ. ಸಾಯೋಕ ಮುಂಚೆ ನಿಮ್ಮಪ್ಪ ಸಾಲಾ ಮಾಡಿ ಹೊಲಾ ಅಡವ ಹಾಕಿ ಸತ್ತಾನನ್ನೋದು ಗೊತ್ತಿಲ್ಲೇನು. ಸಾಲಾ ಮುಟ್ಟಲಾರದೆ ಮರಿಯಪ್ಪನವರು ಹೊಲಾ ಬಿಟ್ಟು ಕೊಡತಾರೇನು

ಭದ್ರಿ - ಬಿಡದಿದ್ರೆ ಅವನ ಕಣ್ಣಾ ಕೀಳತೀನಿ. ಸಾಲಾ ಸಾಲಾ ಎಲ್ಲಿಯವರೆಗವ್ವ ಬೆಳಿಯಾಕ ಅದೇನು ಹನುಮಂತನ ಬಾಲ, ಐದನೂರು ರೂಪಾಯಿ ಸಾಲ ಕೊಟ್ಟಂಗ ಮಾಡಿ ಪ್ರತಿ ವರುಷ ಐದು ಸಾವಿರ ರೂಪಾಯಿ ಉತ್ಪನ್ನ ನಮ್ಮ

ಹೊಲದಿಂದಲೇ ತಿಂತಾಯಿಲ್ಲವೆ. ಇದು ಅಲ್ಲದ ನೀನು ಅಣ್ಣ ಅದೆ ಹೊಲದಲ್ಲಿ ದುಡಿದು ಸಣ್ಣಾದ್ರಿ. ಇಷ್ಟಾದರೂ ಸಾಲಾ ಅಂದ್ರ ಯಾರ ಕೇಳತಾರವ್ವಾ

ಸಿದ್ಧ - ಸಾಲಾ ಮುಟ್ಟೋತನಕ ಬಂದ ಬೆಳಿನೆಲ್ಲ ಅವರ ಮನಿಗೆ ಹಚ್ಚತೀನಂತ ಅಪ್ಪ ಅವರಿಗೆ ಮಾತು ಕೊಟ್ಟು ಸತ್ತಾನಂತ

ಭದ್ರಿ - ಯಾರು ಅಪ್ಪಾ ಹೌದಲ್ಲ, ಮುಗಿದು ಹೋಯಿತು, ದೇವರು ಇಲ್ಲಿಯವರಗೆ ಅವನಿಗೆ ಆಯುಷ್ಯ ಹಾಕಿದ್ರೆ ?

ಸಿದ್ಧ - ಏನಾಗುತ್ತಿತ್ತು ?

ಭದ್ರಿ - ಏನಾಗುತ್ತಿತ್ತು ಸಾಯೋದಕ್ಕೆ ಮುಂಚೆ ಸರಾಯಿ ಕುಡಿಯೋ ಚಟಕ ಬಿದ್ದು ಹೊಲಾ ಮನಿ ಒತ್ತಿ ಹಾಕಿ ಸತ್ತ. ಅಪ್ಪಿತಪ್ಪಿ ಇಲ್ಲಿಯವರಗೆ ಉಳಿಮಬಿಟ್ಟಿದ್ರ ನಮ್ಮವ್ವನ್ನ ನಮ್ಮನ್ನ ಮಾರಿ ಕಲಿಯುಗದ ಹರಿಶ್ಚಂದ್ರ ಅನ್ನಿಸಿಕೊಂಡು ಸಾಯುತ್ತಿದ್ದ. ಮಾತು ಕೊಟ್ಟಾನಂತ ಮಾತು, ಇವರೂ ನಡಿಸ್ತಾರಂತೆ ಮಾತು, ಕೊಟ್ಟಿದ್ದರ ಅವನು ಕೊಟ್ಟಿದ್ದಾನು. ಇಷ್ಟು ಬಡ್ಡಿ ತೊಗೊಳ್ಳಬಾರದು ಅಂತಾ ಕಾಯಿದೆ ಮಾಡಿತಂತ ಸರಕಾರ. ನಾನು ಕೇಳಿಕೊಂಡ ಬಂದೀನಿ. ಹೇಳ್ಯಾರ ಕುಲಕರ್ಣಿ ವೆಂಕಪ್ಪನವರು. ಇನ್ನ ಮ್ಯಾಲೆ ಅವನು ನಮ್ಮ ಹೊಲಾ ಬಿಡದಿದ್ರ ನಾನವನ ಮ್ಯಾಲೆ ಕೈಮಾಡೇ ತೀರುವೆನು

ಸಂಗವ್ವ - ಬ್ಯಾಡಲೋ ಭದ್ರಿ ಈ ಹಟ. ನನ್ನ ಮಾತ ಕೇಳು ಎಷ್ಟೆಂದ್ರೂ ಶ್ರೀಮಂತರು ಶ್ರೀಮಂತರೆ, ಬಡವರು ಬಡವರೆ. ಮ್ಯಾಲೆ ಹರಿಬೇಕಾದ ನೀರೂ ಮ್ಯಾಲೆ ಹರಿಬೇಕು. ಯಾಕೋ ಬದಕಬೇಕನ್ನು ಆಸೆ ಇಲ್ಲೇನು ನಿನಗೆ

ಭದ್ರಿ - ಛೇ ಇದ್ದು ಯಾತರ ಬದಕವ್ವ. ಈ ಪರಿ ಬದಕೋಕಿಂತ ಸಾಯೋದು ಸಾವಿರ ಪಾಲು ಮೇಲು. ಅವ್ವ ಚಿಕ್ಕಿಯಾಗಿ ಸಾವಿರ ವರುಷ ಬದುಕೋದಕ್ಕಿಂತ ಮಿಂಚಾಗಿ ಒಂದು ಕ್ಷಣ ಮಾಯವಾಗುವುದು ಮೇಲಲ್ಲವೇ ?

ಸಿದ್ಧ - ಏ ಸಾಕ ಸುಮ್ಮನಿರೋ. ಶೂರ ಸರದಾರ ಸಂಗೊಳ್ಳಿ ರಾಯಣ್ಣ ಆಗ್ಯಾನ. ಯಾವಾಗ ನೋಡಿದರೂ ಮುಗಿಲ ಹರಿದು ಹಾಕ್ಕೊಳ್ಳೊ ವಿಚಾರನೇ. ಅವ್ವ ಮೊನ್ನೆ ಇವನು ಐಹೊಳ್ಳಿ ಜಾತ್ರೆಯಲ್ಲಿ ಏನ ಮಾಡಿದ ಗೊತ್ತೇನವ್ವ

ಪಾರ್ವತಿ - ಐಹೊಳ್ಳಿ ಜಾತ್ರಿಲಿ ಏನು ಮಾಡಿದ

ಸಿದ್ಧ - ಸಾವಕಾರ ಮರಿಯಪ್ಪನ ಮಗಳು ಲಕ್ಷ್ಮಿಬಾಯಿ ಜಡೆ ಹಿಡಿದು ಎಳದನಂತ

ಸಂಗವ್ವ - ಅಂ ಹೌದೇನೋ ?

ಭದ್ರಿ - ಹೌದು ಅವಳೂ ನನಗ ಅಣಕಿಸಬೇಕೇನು ಮತ್ತೆ..

ಸಿದ್ಧ - ಏನಂತ ?

ಭದ್ರಿ - ನಾವೇನೋ ಅವರ ಮನಿ ಜೀತದ ಆಳಂತ

ಸಿದ್ಧ - ಹೌದು ಅಲ್ಲವೇನು ಮತ್ತೆ ?

ಪಾರ್ವತಿ - ಅಂದ್ರೆ ಅಂತಾಳೆ. ಆ ಬಳಿಕ ತಾನೇ ಸುಮ್ಮನಾಗತಾಳೆ. ಅದೇಸಿದ್ರೂ ನೆರೆಮನೆಯ ಹೆಣ್ಣುಮಕ್ಕಳ ಮೇಲೆ ಹಾಗೆಲ್ಲ ಕೈಮಾಡಬಾರದು ಭದ್ರಿ

ಭದ್ರಿ - ಆಗಲಿ ಅತ್ತಿಗೆಮ್ಮ. ಇನ್ನು ಅವಳು ನನ್ನ ಸುದ್ದಿಗೆ ಬರದಿದ್ದರೆ ನಾನು ಅವಳ ಸುದ್ದಿಗೆ ಹೋಗೋದಿಲ್ಲ

ಸಂಗವ್ವ - ನೋಡು ಪಾರು ಈಗ ನಿನ್ನೆದುರು ಒಪ್ಪತಾನೆ. ಮತ್ತ ತನ್ನ ಕಾಯಕವೇ ಪ್ರಾರಂಭ ಮಾಡತಾನೆ. ಒಟ್ಟಾರೆ ಇದು ಮಹಾ ಕಿಡಿಗೇಡಿ

ಸಿದ್ಧ - ಮಂಗ ಆಗಿ ಹುಟ್ಟಬೇಕಾಗಿತ್ತು ಎಲ್ಲೊ ತಪ್ಪಿ ಮನುಷ್ಯ ಆಗಿ ಹುಟ್ಟಿತು

ಪಾರ್ವತಿ - ಶ್ರೀ ಕೃಷ್ಣದೇವರೂ ಸಣ್ಣವಸಿದ್ದಾಗ ತುಂಬಾ ಕಿಡಿಗೇಡಿತನ ಮಾಡಿದ್ದಾರೆ ಅವರು ಮಾಡಿದ ಕೀಟಕತನಕ್ಕೆ ಅಲ್ಲವಾ ದೊಡ್ಡವರು ಕೃಷ್ಣಲೀಲೆ ಅಂತಾ ಕರೆಯೋದು

ಭದ್ರಿ - ಕೇಳ್ರಿ ಎಂಥಿಂಥವರೂ ಏನೇನೋ ಮಾಡಿದ್ದಾರೆ. ನಾವೂ ಅವರ ಪೈಕೀನೇ

ಸಿದ್ಧ - ಅಂದ್ರ ಅವನಂತೆ ಇವನು ಅವತಾರಿ ಪುರುಷ ಆಗತಾನೆ ಅಂತಿಯಾ ?

ಪಾರ್ವತಿ - ಯಾಕಾಗಬಾರದು ? ಅವತಾರಿ ಪುರುಷನಾಗದಿದ್ದರೂ, ಪುರುಷ ಸಿಂಹನಾಗಿ ಬಾಳತಾನೇ. ಸುತ್ತಲೂ ಹತ್ತು ಜನರ ಬಾಯಲ್ಲಿ ಉತ್ತಮನೆಂದು ಹೊಗಳಿಸಿಕೊಳ್ಳತಾನೇ

ಸಂಗವ್ವ - ಆಗಲವ್ವ ನಿನ್ನ ಬಾಯಿ ಹರಕೆಯಿಂದ ಅಷ್ಟಾದರೆ ಸಾಕು. ನೋಡ ಪಾರವ್ವ ನಿನ್ನ ಮೈದುನನ ಮಂಗತನ ನಿನಗರ್ಥವಾಯಿತಲ್ಲ. ಇದು ಆಡಿದರೆ ಅರಗಿಳಿ, ಕಾಡಿದರೆ ಘಟಸರ್ಪ. ಇಂಥದ್ದನ್ನು ಹ್ಯಾಂಗ ಬಾಳಿಸಿಕೊಂಡು ಪಳಗಿಸಿಕೊಂಡು ಹೋಗತೀಯೋ ಏನೋ ? ಇವನ ಹಡೆದ ನನ್ನ ವಡಲ ತಂಪು ಕಾಣಬೇಕಿದ್ರೆ ಈಗ ನೀನೊಂದು ಕೆಲಸ ಮಾಡಬೇಕು ಮಾಡತೀಯೇನವ್ವ

ಪಾರ್ವತಿ - ಅದೇನು ಹೇಳ್ರಿ ಅತ್ತೆ ?

ಸಂಗವ್ವ - ನೋಡು ಈ ಹಾಲು ನಿನ್ನ ಗಂಡಗ ಕುಡಿಲಿಕ್ಕೆ ಅಂತಾ ಇಟ್ಟಿದ್ದು ಈಗ ಇದನ್ನು ನಿನ್ನ ಗಂಡನಿಗೆ ಬದಲು ಈ ನಿನ್ನ ಮೈದುನನಿಗೆ ನೀನೇ ನಿನ್ನ ಕೈಯಾರ ಕುಡಿಸಬೇಕು ಅಂತಾ ನನ್ನಿಷ್ಟ

ಪಾರ್ವತಿ - ಯಾಕತ್ತೆ ?

ಸಂಗವ್ವ - ಹೇಳಲೇನವ್ವ ಗಾಬರಿಯಾಗಬೇಡ. ಮನೆ ನಡಿಸಬೇಕಾದ ಹೆಣ್ಣಿನ ಮನಸ್ಸು ಶಾಂತವಾಗಿದ್ದರೆ ಮಾತ್ರ ಆ ಮನೆ ಶಾಂತಿಯಿಂದ ಬೆಳಗುತ್ತದೆ. ನೀನೀಗ ಮನೆಗೆ ವಡತಿ. ಆದ್ದರಿಂದ ಕೇಳಕೊಳ್ಳತೀನವ್ವ (ಹಾಲಿನ ಪಾತ್ರೆ ಕೈಗಿತ್ತು) ತಗೊಳ್ಳವ್ವ ಇದನ್ನ. ಕೈಲಿರೊ ಈ ಹಾಲು ಹಸಿವಿನದಲ್ಲ, ನಿನ್ನ ಎದೆ ಹಾಲು

ಅಂತಾ ತಿಳಿದು ಈ ನಿನ್ನ ಮೈದುನನಿಗೆ ನಿನ್ನ ಕೈಯಾರ ಕುಡಿಸಬೇಕು . ಅದಕ್ಕ ಮುಂಚೆ ನಿನ್ನ ಜೀವ ಇರುವವರಗೆ ಭದ್ರಿ ಮೈದುನ ಅಲ್ಲ ಮಗ ಅಂತ ತಿಳಿದು ಜೋಪಾನ ಮಾಡಿಕೊಂಡು ಹೋಗತೀನಿ ಅಂತ ಈ ಹಾಲಿನ ಮೇಲೆ ಆಣೆ ಇಟ್ಟು ನಿನ್ನ ಕೈಯಾರ ಕುಡಿಸು

ಪಾರ್ವತಿ - ಆಗಲತ್ತ ಕೈಲಿರೊ ಈ ಅಮೃತದ ಮೇಲೆ ಆಣೆ ಇಟ್ಟು ಹೇಳತೀನಿ ನನ್ನ ಜೀವ ಇರೋವರಗು ಭದ್ರಿ ನನ್ನ ಮೈದುನ ಅಲ್ಲ, ಮಗಾ ಅಂತಾ ತಿಳಿದು ಕಾಪಾಡಿಕೊಂಡು ಹೋಗತೀನಿ. ಕುಡಿಯಪ್ಪ ಇದನ್ನ

ಸಂಗವ್ವ - (ತಡೆದು) ಏ ತಡಿಯೋ ನೀನೂ ಇವಳನ್ನು ತಾಯಿಯಂತ ಭಾವಿಸಿಕೊಂಡು ಹೋಗತೀನಿ ಅಂತಾ ಅದರ ಮೇಲೆ ಆಣೆ ಇಟ್ಟು ಕುಡಿ

ಭದ್ರಿ - ಏ ಹೌದಲ್ಲ. ಈ ಅಮೃತದ ಮೇಲೆ ಆಣೆ ಇಟ್ಟು ಹೇಳ್ತೀನಿ. ಇನ್ನು ಮೇಲೆ ಅತ್ತಿಗೆಮ್ಮಾನ ನನ್ನ ತಾಯಿ ಅಂತಾ ತಿಳಿತೀನಿ (ಕುಡಿಯುವನು)

ಸಂಗವ್ವ - ನೋಡು ಭದ್ರಿ ನಿನ್ನದು ಮೊದಲೆ ದುಡುಕು ಬುದ್ಧಿ ಆಣೆ ಇಟ್ಟಿದಿ..... ಎಚ್ಚರ

ಪಾರ್ವತಿ - ನೀವ್ಯಾಕ ಚಿಂತಿಸ್ತೀರತ್ತ, ನಿಮ್ಮ ಪುಣ್ಯದಿಂದ ನಾವೆಲ್ಲ ಸುಖವಾಗ ಇರ್ತೀವಿ

ಸಂಗವ್ವ - ಅಷ್ಟಾದ್ರೆ ಸಾಕವ್ವ ಏ ನಡಿಯೋ ಇನ್ನ

ಭದ್ರಿ - ಏ ಹೌದು ನಾವಿಲ್ಲಿ ಇರಬಾರದಲ್ಲ, ಬರತೀನಿ ಅತ್ತಿಗೆಮ್ಮಾ ಬರತ್ತೀನಿ ಅಣ್ಣಯ್ಯ (ಹೋಗುವರು)

ಸಿದ್ಧ - ಲೇ ಪಾರು ನಿನ್ನ ಮಳ್ಳ ಹುಡುಗಿ ಅಂತ ಮಾಡಿದ್ದ. ರೀತಿ-ನೀತಿ ಕಲಿತುಕೊಂಡ ಬಂದಿಯಾ ? ಅಂತೂ ನನ್ನ ಹಂಡತಿ ಜಾಣೆ

ಪಾರ್ವತಿ - ಹೂಂ ಅಲ್ಲವೇ ಎರಡು ಮಾತಾಡೋದಕ್ಕು ಕಲಿಬಾರದಾ ನಾನು

ಸಿದ್ಧ - ಕಲಿ... ಕಲಿ... ನಾನ್ಯಾಕ ಬ್ಯಾಡ ಅನ್ನಲಿ. ಅಲ್ಲ ಪಾರು, ಆ ನನ್ನ ತಮ್ಮ ಭದ್ರಿ ಮಹಾ ಕಿಡಿಗೇಡಿ ಅಂಥಾದ್ದನ್ನು ಸರಿಯಾದ ದಾರಿಯಲ್ಲಿ ನಡಿಸಿಕೊಂಡು ಹೋಗತೀನಿ ಅಂತ ಅವ್ವನಿಗೆ ನೀನು ಮಾತು ಕೊಟ್ಟಿಯಲ್ಲ, ಇದು ನಿನ್ನಿಂದ ಸಾಧ್ಯವಾಗುತ್ತದೆಯೇ ?

ಪಾರ್ವತಿ - ಗಂಡನ ಪ್ರೀತಿ ವಿಶ್ವಾಸಕ್ಕೆ ಪಾತ್ರಳಾಗಿ ಬಾಳೋ ನಾರಿಗ ಸ್ವರ್ಗದ ದಾರಿನೇ ಸಿಕ್ಕುತ್ತ ಅಂತ ಹೇಳ್ತಾರ. ನಾನು ಆ ದಾರಿಯಲ್ಲಿ ನಡೆದರ ನನ್ನೊಂದಿಗೆ ಭದ್ರಿನು ನಡಿತಾನ. ಒಳ್ಳೆ ಹೆಸರೂ ಪಡಿತಾನ ಆ ಧೈರ್ಯ ನನಗುಂಟು

ಸಿದ್ಧ - ನಿನಗಿರೋ ಆ ಧೈರ್ಯ ನನಗಿಲ್ಲ. ಅವ್ವ ಹೇಳಿದ ಹಾಗ ಅದು ಆಡಿದರೆ ಅರಗಿಳಿ, ಕಾಡಿದರ ಘಟಸರ್ಪ. ಅಂಥ ಕಿಡಿಗೇಡಿನೇ ಅದು

ಪಾರ್ವತಿ - ಗಂಡು ಹುಡುಗರು ಅಂದ್ರ ಹಾಗೆ ಇರಬೇಕು. ನಿಮ್ಮ ಹಾಗ ಸಪ್ಪಸಪ್ಪಗೆ ಇದ್ದುಬಿಟ್ರ ಈ ಪ್ರಪಂಚ ತಲೆಯ ಮೇಲೆ ಕಲ್ಲು ಎತ್ತಿ ಹಾಕುತ್ತ

*ಸಂಪತ್ತಿಗೆ ಸವಾಲು*

ಎಲಾ ಹೆಣ್ಣೆ ? ಆಡಾಡತಾ ನನಗೆ ಸಪ್ಪೆ ಅಂತಿಯಾ ? ಎತ್ತಿನ ಬೆನ್ನ ಮೇಲೆ ನಿತ್ಯ ಆಡತಾ ಇರೋ ಆ ನನ್ನ ಬಾರಕೋಲು ಏನು ಹೇಳತ್ತ ಗೊತ್ತಾ ? ಗೊತ್ತು, ಅದು ಹೇಳುವದಿಷ್ಟೆ ಹೊರಗೆ ಹುಲಿರಾಯ ಹೆಂಡತಿ ಹತ್ತಿರ ...

- ಪದ -

ಸಾವಿರ ಜನರಾ ಅಳಿದರೇನು ॥
ಸತಿಗಾಗಿ ಬಳಲಿದ ತಾನ್ಯಾಕೆ ರಘುವೀರ ॥ ಪಲ್ಲ ॥
ಹೆಣ್ಣಿನ ಕುಡಿನೋಟ । ಕಣ್ಣಿಗೆ ಬಲುಮಾಟ ॥ ತಿಂದಷ್ಟು ತೀರದು ।
ಬಯಕೇಯ ಊಟ ॥ ಗತಿ ಇಲ್ಲದಿದ್ದರೂ ನಡೆದೀತು । ಸಂಸಾರ
ಸತಿ ಇಲ್ಲದವನ । ಬಾಳೆಲ್ಲ ಬೇಸರಾ । ಸಾವಿರ ॥

(ತೆರೆ ಬೀಳುವುದು)

## ದೃಶ್ಯ ೨

ಜಂಗಲ್‌ರಸ್ತಾ

ವೆಂಕಪ್ಪ - ಕಚೇರಿ ಕೆಲಸಕ್ಕ ಹೊರಟಾಗ ಹತ್ತಿರ ಒಂದ ಹತ್ತಿಪ್ಪತ್ತು ರೂಪಾಯಿ ಹೆಚ್ಚಿಗಿದ್ದರೇನೇ ಒಳ್ಳೇದು. ಯಾಕೆಂದರ ಎಲ್ಲರೂ ನಮ್ಮ ಹಾಗ ಕೈಯೊಡ್ಡೇರ. ಹಿಂದಿನ ಕಾಲದಲ್ಲೂ ಸರಕಾರಿ ಅಮಲ್ದಾರರು ಲಂಚಾ ತಿಂತಿಂದ್ರು. ತಿಂದ್ರೇನಾಯಿತು ಕೊಟ್ಟವರ ಕೆಲಸಾನು ಅಷ್ಟೇ ನಿಯತ್ತಿನಿಂದ ಮಾಡತಿದ್ರು. ಈ ಕಾಲದಲ್ಲಿ ಲಂಚಾ ತಿಂಬೋದು ಹೆಚ್ಚಾಯಿತು. ಕೊಟ್ಟವನ ಕೆಲಸ ಮಾಡಿಕೊಡೋದು ಮಾತ್ರ ಬಹಳ ಕಡಿಮೆಯಾಯಿತು. ಮೊದಲಿನ ಕಾಲದಲ್ಲಿ ಎಂಥೆಂಥ ದೊಡ್ಡ ದೊಡ್ಡ ಅಮಲ್ದಾರರೂ ಕೂಡ ಅಂಜಿ ಅಳುಕಿ ಕದ್ದು ಮುಚ್ಚಿ ಲಂಚಾ ಸ್ವೀಕಾರ ಮಾಡತಿದ್ರು. ಈಗ ಕಚೇರಿ ಪ್ಯೂನ ಕೂಡ ಕೋಟ ಹಿಡಿದು ಎಳದು ಕೇಳತಾನೆ. ಮೊದಲು ಕೊಟ್ಟು ಒಳಗೆ ಹೋಗೋ ನನ್ನ ಮಾಮೂಲು ಅಂತಾ. ಇಂತಿಂಥ ಕೆಲಸ ಆಗಬೇಕಿದ್ರ ಇಂತಿಂಥವರಿಗೆ ಇಷ್ಟಿಷ್ಟ ಲಂಚಾ ಕೊಡಬೇಕು ಅಂತಾ ರೂಲ್ಸೇ ಹೇಳಿಬಿಡುತ್ತಾರ. ಹೀಗಾದಲ್ಲೆ ಅಮಲ್ದಾರರನ್ನ ಕಂಡ್ರೆ ಜನರಿಗೆ ಅಂಜಿಕೆ ಅಂಬೋದೆ ಅಳುಕಿ ಹೋಯಿತು. ಮೊದಲು ಹೀಗಿತ್ತೇನು ? ನನ್ನಂಥ ನಾನು ಕುಲಕರ್ಣಿ ಮಾಡತಾ ಇದ್ದಾಗ ತಾಲೂಕಾ ಧಣಿ ತಹಶೀಲದಾರರು ಹಳ್ಳಿಗೆ ಬರ್ತಾರೆ ಅಂದ್ರೆ ಸಾಕು ಬಾಯಲ್ಲಿ ಗುಟುಕು ನೀರು ಹಾಕದೆ ವಾಲಿಕಾರನ್ನೆಲ್ಲ ಕಟಗೊಂಡು ಅವರ ದಾರೀನೇ ಕಾಯಿತಾ ನಿಲ್ಲುತ್ತಿದ್ದೆ. ಈಗ ಡೆಪ್ಯೂಟಿ ಕಮೀಷನರ್ರೇ ಬರತಾರ ಅಂದ್ರೂ ಜನ ಬಿಯಪಡೋದಿಲ್ಲ. ಒಳ್ಳೇ ಬೇನೆಯತ್ತಿನ ಕಾಲ ಬಂದೋಯಿತು ರಂಡೇ ಮಗಂದು

(ಬೀಡಿ ಬಾಯಿಗೆ ಹಚ್ಚುವನು. ಮರಿಯಪ್ಪ ಬರುವನು)

ಮರಿಯಪ್ಪ - ಇದೇನೋ ವೆಂಕಪ್ಪ

ವೆಂಕಪ್ಪ - ಬಾರಪಾ ಮರಿಯಪ್ಪ

ಮರಿಯಪ್ಪ - ಬರಬರತಾ ನೀ ಬೀಡಿ ಸೇದಕ ಹತ್ತಿದೆಲ್ಲೋ

ವೆಂಕಪ್ಪ - ಹೌದೋ ಈಗೀಗ ಸಿಗರೇಟು ನನಗ ಜರ ಹೀಟ ಆಗಲಿಕ್ಕತ್ತೇದ ನೋಡ ಮರಿಯಪ್ಪ

ಮರಿಯಪ್ಪ - ಹೂಂ. ಪ್ರಕೃತಿಗೆ ಒಗ್ಗುವಲ್ದೇನು ? ಯಾಕ ನಿಂದು ವಯಸ್ಸಾಯಿತು ನೋಡು

ವೆಂಕಪ್ಪ - ವಯಸ್ಸಾಯಿತು ? ಯಾರಿಗಾ ನೀ ಅಂಬೋದು ವಯಸ್ಸಾಯಿತು ಅಂತ

ಮರಿಯಪ್ಪ - ಮತ್ಯಾರಿಗೆ ನಿನಗ

ವೆಂಕಪ್ಪ - ನನಗೆ ವಯಸ್ಸಾಯಿತು, ಮತ್ತ ನಿನಗ ? ನಿನಗೂ ವಯಸ್ಸಾಯಿತು ... ಅಲ್ಲಪಾ ನನಗ ಮುದುಕ ಅಂದ್ರೆ ಬಿಡತೀನೇನು ? ನಿನಗ ಮುದಕ ಅನಲಾರದೆ. ಅಲ್ಲೋ ಮರಿಯಪ್ಪ ವಯಸ್ಸಾಯಿತು ಅನ್ನಲಿಕ್ಕೆ ನಮಗೇನ ಅಂತಾ ವಯಸ್ಸಾಗೇತೋ ಬಾಳ ಅಂದ್ರೆ ಇಪ್ಪತ್ತೊಂದು

ಮರಿಯಪ್ಪ - ಇಪ್ಪತ್ತೊಂದಾ ನಿನಗಾ

ವೆಂಕಪ್ಪ - ನಾಲ್ವತ್ತರ ಮ್ಯಾಲಿ. ನೆನಪಿರಲಿ ಮರಿಯಪ್ಪಾ ವಯಸ್ಸಾಯಿತು ಅಂತಾ ನೀನು ನಾನು ಕಣ್ಣಿಗೆ ಚಾಳೀಸ ಹಾಕಿದ ದಿನಾನೆ ನಮ್ಮೂರಾಗ ಬಾಳ ಜನ ಹಾಲು ಕುಡಿತದೋ ಮ್ಯಾಲಿ ಸಕ್ರಿ ಹಾಕ್ಕೊಂಡು. ಯಾಕ ಅಂದ್ರ ಮುದಕರಾದುವು ಇವುದರ ಕಾಲ ಮುಗಿತಾ ಅಂತಾ

ಮರಿಯಪ್ಪ - ನನಗೊತ್ತಿಲ್ಲೇನೋ ವೆಂಕಪ್ಪಾ ? ಕಣ್ಣ ಕಾಣದಂಗಾದರೂ ನಾನೇನು ಚಾಳೀಸ ಹಾಕೋದಿಲ್ಲ

ವೆಂಕಪ್ಪ - ಮತ್ತ ನಾ ಹಾಕತೀನೇನು ? ಅಲ್ಲಪಾ ಸಿಗರೇಟು ಸೇದೂದು ಯಾಕ ಬಿಟ್ಟಿಯಂತ ಕೇಳಿದೆಲ್ಲ ? ನೋಡಪಾ ಸಿಗರೇಟು ಸೇದಿ ದಕ್ಕಿಸಿಕೊಳ್ಳಬೇಕಿದ್ರೆ ಬೆಣ್ಣೆ ಬಾಳ ತಿನ್ನಬೇಕಾಗುತ್ತೊ. ಈಗ ನಮಗ ಊಟಕ್ಕ ಎಣ್ಣೆ ಸಿಗೋದೇ ಕಷ್ಟಾಗೇತೋ ಮರಿಯಪ್ಪ

ಮರಿಯಪ್ಪ - ಇದೇನೋ ಹನ್ನೆರಡು ಹಳ್ಳಿ ಕುಲಕರ್ಣಿ ಮಾಡಿದ ಮನುಷ್ಯ ನೀನೆ ಹೀಗಂದ್ರೆ ಹ್ಯಾಂಗ

ವೆಂಕಪ್ಪ - ಹೌದಪ್ಪಾ ಕುಲಕರ್ಣಿಕಿ ಇದ್ದಾಗ ಏನ ತಿನ್ನಲಿಲ್ಲ ನಾವು

ಮರಿಯಪ್ಪ - ಹೌದಪ್ಪಾ ತಿನ್ನೋದು ತಿಂದಿ, ತಿನಬಾರದು ತಿಂದಿ

ವೆಂಕಪ್ಪ - ಇನ್ನು ನಿನಗ ಗೊತ್ತಿಲ್ಲಪಾ ನಾ ತಿಂದದ್ದು. ಯಾಕಂದ್ರೆ ಅವಾಗ ನನಗ ನಿನಗ ಪಾರ್ಟಿ ಇದ್ದಿಲ್ಲೇನು ಊರಾಗ

ಮರಿಯಪ್ಪ - ಹೌದಲ್ಲ ಆ ತಳವಾರ ಚೆನ್ನಿ ಸಲುವಾಗಿ

ವೆಂಕಪ್ಪ - ಏ ..... ಹೆಸರು ಒಡಿಬಾರದು. ಅಲ್ಲದು ಗಂಟಲುದೊಳಗಿನ ವಿಷ ಗುಂಟಲದೊಳಗಿದ್ರೇನೆ ಚಂದ. ಆ ವಿಷ ಗುಂಟಲದಲ್ಲಿ ಹಿಡದಲ್ಲಿ ಶಿವ ನೀಲಕಂಠ

ಅನ್ನಿಸಿಕೊಂಡ. ಮರಿಯಪ್ಪ ಲೇ... ಮರಿಯಾ ಹಿಂದಕ್ಕ ಆ ತಳವಾರ ಚೆನ್ನಿ ಕೈಲೀ ನಿನ್ನ ಮ್ಯಾಲೆ ಜಬರಿ ಕೇಸ ಹಾಕಸಿ ಸಬ್ ಇನ್‌ಸ್ಪೆಕ್ಟರನ್ನ ನಮ್ಮೂರಿಗೆ ಕರೆಯಿಸಿ ಚಾವಡಾಗ ನಿನ್ನ ಕಂಬಕ್ಕ ಬಿಗಿಸಿ ಪದಸಾಕ ಹಚ್ಚಿದ್ನಲ್ಲ. ಒದಕಿಗೆ ಒಂದೊಂದು ಸಲ ವಾಯಿಂಕ ಮಾಡತಿದ್ದಿ ನೋಡು... ಅವಾಗ ಇತ್ತ ನೋಡು ನಮ್ಮ ಉರಣಗಿ ಅಂದ್ರ

ಮರಿಯಪ್ಪ - ಹೌದಪ್ಪಾ ತುಪ್ಪ ತಿಂದ ತಲೆ ನಿಂದು. ಹ್ಯಾಂಗ ತಣ್ಣಗ ಐತಿ ನೋಡು

ವೆಂಕಪ್ಪ - ತಿಂದ ಬಾಯಪ್ಪಾ ಮರಿಯಪ್ಪ, ನಮ್ಮದು ತಿಂದ ಬಾಯಿ. ಕುಲಕರ್ಣಿಕಿ ಇದ್ದಾಗ ವಾರ ತೀರುವದರೊಳಗ ನಾಲ್ಕು ಧಡ ಬೆಣ್ಣೆ ತೀರತಿತ್ತು ನಮ್ಮ ಮನಿಯೊಳಗ. ಅದರಾಗ ಈ ಚಾತುರಮಾಸ ಪಕ್ಷ ಮಾಸ ಬಂದರಂತೂ ಮುಗಿದು ಹೋಯಿತು, ನಮ್ಮ ಹೋಳಗಿ ತುಪ್ಪದಾಗ ತೇಲತಿತ್ತು. ಏನ ಮಾಡೋದು ಈ ಕಾಂಗ್ರೆಸ್ ಸರಕಾರ ಬಂದು ನಮ್ಮ ಕುಲಕರ್ಣಿ ಕಳೆದ ತಲಾಟೀನ ತಂದು ಬಾಯಿ ಮ್ಯಾಲೆ ಬಂಡಗಲ್ಲು ಹೇರಿಬಿಟ್ಟಿತು. ಒಟ್ಟಿಗೇನು ಈಗ ನಾನು ಒಣರೊಟ್ಟಿ ಸುಬ್ಬಣ್ಣ ಆಗೀನಿ ನೋಡು, ರೊಟ್ಟಿ ಚಟ್ನಿ ತಿಂದ ಮ್ಯಾಲೆ ಉಳ್ಳಾಗಡ್ಡಿ ಕಡಿದು, ಸಿಗರೇಟ ಸೇದಲಿಕ್ಕೆ ಹೋದರೆ ನಿಮ್ಮಂಗ ದಕ್ಕೋದಿಲ್ಲಪಾ. ಎದಿ ಉರಿತದ... ಅಂತಾ ಈಗ ಬೀಡಿ ಹಿಡಿದೀವಿ (ನೋಡಿ ಬೀಡಿ ಒಗೆದು) ಎಲೆ, ಇದ್ಯಾವದಪಾ ಹುಡುಗಿ ಹಳ್ಳದ ನೀರಿಗಿಂತ ಒಳ್ಳೇ ಭರಾಟಿಲಿ ಹೊರಟದ. ದುಂಡು ಮುಖದ ಹುಡುಗಿ ಮುಖದ ಮ್ಯಾಲೆ ಎಳೆ ಬಿಸಿಲು ಬಿದ್ದು ಬಿಟ್ಟದ. ಏ ಚಂದ ಕಾಣತದೋ ತಡಿ ಕೈಹಿಡಿದು ಮಾತಾಡಸ್ತೀನಿ

ಮರಿಯಪ್ಪ - ಹುಡಿಗಿ ಪಿಲೋ (ನೋಡಿ) ಏ ಇದು ನನ್ನ ಮಗಳು ಲಕ್ಷ್ಮೀಬಾಯಿ ಅಲ್ಲೇನೋ

ವೆಂಕಪ್ಪಾ - ಹಾಂ ಹೌದಾ ಹಿಂಗಕ್ಕಾವು ನೋಡ. ಕಣ್ಣ ಕಾಣೋದಿಲ್ಲಾಂತ ಚಾಳೀಸ ಹಾಕಿದರ ಊರ ಮಂದೆಲ್ಲ ಮುದುಕರು ಅಂತಾವು. ಇನ್ನು ಹಾಕೋದು ಬಿಟ್ಟಿಯ ಮೊದಲಿನಿಂದ ನೋಡಕೊಂತ ನಿಂದ್ರೂ ಹೊಲಸ ಚಟ ನಮಗ. ಮಗಳ್ಯಾವದೋ ಮೊಮ್ಮಗಳ್ಯಾವದೋ ಗುರ್ತು ಹತ್ತಲಾರದೆ ಹಂಗ ನೋಡೋದ ನೋಡೋದು. ಎಂಥ ಹೊತ್ತು ಬಂತಲೇ ಮರಿಯಪ್ಪ ನಮಗ

ಲಕ್ಷ್ಮಿ - (ಕೈಯಲ್ಲಿ ಕೊಡ ಹಿಡಿದು ಚೀರುತ್ತ ಬರುವಳು) ಅಪ್ಪಾ ಆ ಭದ್ರಿ ಅದಾನಲ್ಲ ಭಂಡಾ

ಮರಿಯಪ್ಪ - ಏನ ಮಾಡಿದಾ ?

ಲಕ್ಷ್ಮಿ - ನಮ್ಮ ಹೊಲದೊಳಗಿನ ಸವತೀಕಾಯಿ ಹರಕೊಂಡು ತಿಂತಿದ್ದ

ಮರಿಯಪ್ಪ - ಸವತಿಕಾಯಿ ಹರಕೊಂಡು ತಿಂತಿದ್ದಾ ? ಮಾರಿ ಕೆತ್ತುವಂಗ ಬಡಿಬೇಕಿತ್ತು

ವೆಂಕಪ್ಪ - ಏ ಏನ ಅದು, ಮಾರಿ ಕೆತ್ತುವಂಗ ಬಡಿಬೇಕಿತ್ತು, ತಲೆ ಬಡಿವಂಗ ಹೊಡಿಬೇಕಿತ್ತು, ಎತ್ತಿ ಒಗಿಬೇಕಿತ್ತು ಅಂತಾ ಕಲಸ್ತೀಯಲ್ಲ ಇದು ಗಂಡಲ್ಲ ಹೆಣ್ಣು ಸಲ್ಪು ನೋಡಿ ಕಲಿಸು

ಮರಿಯಪ್ಪ - ಹೌದೋ ಕುಲಕರ್ಣಿ ಹೊಲಮನಿ ಕೆಲಸದಾಗ ಕಟ್ಟು ನಿಟ್ಟು ಇದ್ದರೇನೇ ಬೆಳೆ ಕೈಗೆ ಹತ್ತೋದು. ಇರದಿದ್ದರೇನು ಮಂಗ್ಯಾಗಷ್ಟ ಮನುಷ್ಯರಿಗಷ್ಟ ಇಟ್ಟು ಬರಿಗೈಲಿ ಮನಿಗೆ ಬರಬೇಕಾಗತ್ತ. ಅಲ್ಲವ್ವಾ ನೀ ಬೆದರಿಸ್ಲಿದಿಲ್ಲೋ ಮತ್ತ

ಲಕ್ಷ್ಮಿ - ಹೂಂ ನಮ ಹೊಲದನ್ನ ಸವತೀಕಾಯಿ ಯಾರನ್ನ ಕೇಳಿ ಹರಕೊಂಡು ತಿಂತಿಯೋ ಅಂತ ಕೇಳಿದರ ನನಗ ಗುರ್ರಂತ ಬಂದಾ ನಾನು ಬಿಡಲಿಲ್ಲ ಘಂಡಾ ... ಘಂಡಾ ಅಂತ ಬೈದೆ

ಮರಿಯಪ್ಪ - ಒಳ್ಳೇದಾಯಿತು

ವೆಂಕಪ್ಪ - ಏನ ಒಳ್ಳೇದಾಗತದೋ, ಏನ ಹುಡುಗ ಹಸ್ತಿದ್ದೀತು ನಾಲ್ಕು ಸವತೀಕಾಯಿ ಹರಕೊಂಡು ತಿಂದಿದ್ದೀತು

ಲಕ್ಷ್ಮಿ - ಹಸ್ತರೇನಾಯಿತು ಕಾಕಾ ಹರಕೊಂಡ ತಿನ್ನಾಕ ನಮ್ಮ ಹೊಲದಾಗಿನ ಸೌವತಿಕಾಯಿನೇ ಬೇಕೇನು ?

ವೆಂಕಪ್ಪ - ಹೂಂ, ಅದ ನೋಡವ ನಮಗೂ ಆಶ್ಚರ್ಯ ಆಗಿರೋದು. ನಿಮ್ಮ ಹೊಲದಾಗಿನ್ನು ಸವತಿಕಾಯೀನ ಯಾಕ ತಿನ್ನೋದು ? ನಿಮ್ಮ ತೋಟಾನ ಯಾಕ ಹಾಳ ಮಾಡುದು ? ನಿಮ್ಮ ಹುಡುಗೀ ಜಡೀನ ಯಾಕ ಹಿಡಿದು ಜಗ್ಗೋದು ? ಯಾಕಪ್ಪ ಆ ಹುಡುಗನ ಸಿಟ್ಟು ನಿಮ್ಮ ಮ್ಯಾಲಿಷ್ಟು

ಲಕ್ಷ್ಮಿ - ಸಿಟ್ಟು ಯಾತರ ಸಿಟ್ಟು, ಕಾಕಾ ಬಡವನ ಸಿಟ್ಟು ದವಡಗ ಮೂಲಾಂತ ನನ್ನ ಜಡಿ ಹಿಡಿದು ಜಗ್ಗಿದ್ದ ದಿವಸನ ಎಡಿ ಹಿಡಿದು ಕಾಯಿ ಒಡಿತಿದ್ದ ನಮ್ಮಪ್ಪ. ಪಾಪ ಸಂಗವತ್ತಿ ಮುಖ ನೋಡಿ ಬಿಟ್ಟ

ವೆಂಕಪ್ಪ - ಮುದುಕಿ ಮುಖ ನೋಡು ಪೈಕಿ ಅಲ್ಲವಾ ನಿಮ್ಮಪ್ಪ. ಮತ್ಯಾವದರ ಸುಖ ಮೂಡಿಸಿಕೊಂಡಿರಬೇಕು, ಸಂಪನ್ನಂಗ ಕಾಣುವ ಈ ಘಟ್ಯಾಸ

ಮರಿಯಪ್ಪ - ಏ ಕುಲಕರ್ಣಿ... ವಿಷಯ ಯಾವದು ನಡದೈತಿ ? ನೀನೇನ ತಗೀತಿವಿ ? ಮಗಳೋ ಅದು

ವೆಂಕಪ್ಪ - ಮತ್ತ ನಾನೇನ ಮೊಮ್ಮಗಳು ಅಂತೀನೇನು ? ನಾನು ಮಗಳ ಅಂತೀನಿ ನೋಡ ಮರಿಯಪ್ಪ. ನಾವು ಮಾಡಿದ ಪಾಪ ನಮ್ಮ ತಲೀಗ ಮುಗೀಲಿ ಅಂತಾ ನಾನ ಬಯಸಿದರ, ಅದು ಮುಂದವರೀಲಿ ಅಂತಾ ನೀನ ಬಯಸ್ತೀವಿ, ನೀನು ಮಡುಕೋದರಿಂದ ನೀನಷ್ಟೇ ಹಾಳಾಗೋದಿಲ್ಲೋ ಮೂಳಾ.

ಹುಡುಗಿನ್ನ ಹಾಳ ಮಾಡ್ತಿ..

ಮರಿಯಪ್ಪ - ಅಲ್ಲೋ ವೆಂಕಪ್ಪ ಆ ಹುಡುಗನ ಸುದ್ದಿ ನಿನಗೇನ ಗೊತ್ತು

ವೆಂಕಪ್ಪ - ನನಗೆಲ್ಲಾ ಗೊತ್ತಾಗೆದ. ಹುಡುಗ ಹಾದಿ ಬಿಟ್ಟಾನ, ಊರಿಗೆ ಹೊರ್ತಾಗಿ ನಿಂತಾನ, ಅಂಥಾ ಹುಡುಗನ ಜತಿ ಯಾಕಪ್ಪಾ ನಿನ್ನ ಮಗಳು ಜಗಳಾ ತಗಿಯೋದು

ಲಕ್ಷ್ಮಿ - ಅಂದ್ರೇನ ಕಾಕಾ ನಮ್ಮ ಹೊಲಾದಗ ನುಗ್ಗಿ ಸವತಿಕಾಯಿ ಹರಕೊಂಡು ತಿಂದರೂ ಸುಮ್ಮನಿರಬೇಕಾ ನಾವು

ಮರಿಯಪ್ಪ - ಸುಮ್ಮನೆ ಯಾಕಿರಬೇಕು ತಂಗಿ ? ಇನ್ನೊಂದು ಸಲ ಕಂಡ್ರ ಕಲ್ಲು ತೂಗೊಂಡು ಹೇರು

ವೆಂಕಪ್ಪ - ಕಂಡ್ರೆ ಯಾಕ ಭದ್ರೀನೇ ಬಂದ ನೋಡು... ಹೊಡಿತೀರೋ ಹೊಡಸಿಕೊಳ್ಳತೀರೋ... ನೋಡತೀವಿ (ಭದ್ರಿ ಸವತೀಕಾಯಿ ತಿನ್ನುತ್ತ ಬರುವನು)

ಲಕ್ಷ್ಮಿ - ಅಲ್ಲಿ ನೋಡಪ್ಪಾ ಹ್ಯಾಂಗ ತಿನಕೋತಾ ಬರತ್ತ ಸನ್ಯಾಸಿ ಊರ ಸನ್ಯಾಸಿ

ಮರಿಯಪ್ಪ - ಲೇ ಭದ್ರಿ ಹರಕೊಂಡ ತಿನ್ನಾಕ ಸವತಿಕಾಯಿ ಯಾರ ಹೊಲದಾಗಿಂದು ಅಂತಾ ತಿಳಿದಿಯೋ

ಭದ್ರಿ - ಮತ್ಯಾರ ಹೊಲದಾಗಿಂದು ನಮ್ಮ ಹೊಲದಾಗಿಂದು

ಲಕ್ಷ್ಮಿ - (ಓಡಿಬಂದು) ನಿಮ್ಮ ಹೊಲಾ ? ನಿಮ್ಮದೆಲ್ಲೈತೆ ಹೊಲಾ

ಭದ್ರಿ - ಯಾಕ ಊರ ಮುಂದ ಹಾದಿಗಿರೋ ಹೊಲಾ ನಮ್ಮದಲ್ಲೇನು ?

ಲಕ್ಷ್ಮಿ - ಆ ಹೊಲ ನಿಮ್ಮಪ್ಪ ನಮಗ ಸಾಲದಾಗ ಹಾಕಿ ಸತ್ತಾನ

ಭದ್ರಿ - ಯಾವಾಗ ನಮ್ಮಪ್ಪ ಸತ್ತ ಅವನ ಕೂಡ ಆ ಮಾತು ಸತ್ತೈತಿ. ಕೇಳಿಲ್ಲ ಹೇಳ್ಯಾರ ಕುಲಕರ್ಣಿರು

ವೆಂಕಪ್ಪ - ನಾನು ಯಾವಾಗ ಹೇಳಿನೋ ತಮ್ಮ

ಭದ್ರಿ - ಯಾಕ್ರಿ ತಿರಿಗಿ ಬಿದ್ದು ಮಾತಾಡತೀರೆಸ್ರಿ ? ಈ ಭದ್ರಿ ಮುಂದೆ ಇದೆಲ್ಲ ನಡೆಯಾಂಗಿಲ್ಲ. ನೀವಾಗಿ ನಮ್ಮ ಮನಿತನಕ ಬಂದು ನನ್ನೊಬ್ಬನ್ನ ಚಾವಡಿತನಕ ಕರಕೊಂಡ ಹೋಗಿ ಹೇಳಿದರಲ್ರಿ

ವೆಂಕಪ್ಪ - ಏನಂತ ?

ಭದ್ರಿ - ಭದ್ರಿ ಇನ್ನ ಮೇಲೆ ಸಾವಕಾರ ಮಂದಿ ಬಡವರ ಹೊಲದ ಬಡ್ಡಿ ತಗೊಳ್ಳಲಾರದಂಗ ಸರಕಾರದವರು ಕಾಯಿದೆ ಮಾಡ್ಯಾರ. ನಿಮ್ಮ ಹೊಲಾ ನೀವು ಉಣ್ಣರಿ ಅಂತಾ ಹೇಳಿದರಲ್ರಿ

ವೆಂಕಪ್ಪ - ಅಲ್ಲ ಕಾಯಿದೆ ಹೇಳಿ ಕೊಟ್ಟಿನಪಾ. ಅದರ ಹೊಲದಾಗ ನುಗ್ಗಿ ಸವತಿಕಾಯಿ ಹರಕೊಂಡು ತಿನ್ನ ಅಂತಾ ಹೇಳಿದನೇನು ?

ಮರಿಯಪ್ಪ - ಅಂತೂ ಅಷ್ಟರ ಹೇಳಿಯಲ್ಲ. ಯಾಕ್ರಿ ಕುಲಕರ್ಣ್ಯೇರ ನಿಮ್ಮ ಕತ್ರಿ ನಮ್ಮ ಕರಳಿನ್ಯಾಗ ಆಡಕ ಹತ್ತು. ಲೇ ಭದ್ರಿ ನಮ್ಮ ದುಡ್ಡು ನಮಗ ಕೊಡ್ರಿ, ನಿಮ್ಮ ಹೊಲಾ ನೀವು ಉಣ್ರಿ

ಲಕ್ಷ್ಮಿ - ಹೂ..... ಕುದರಿಯಿಲ್ಲದ ಜಬರಿ ಬೇಡಿದಂಗ ದುಡ್ಡುಯಿಲ್ಲದ ಧಿಮಾಕ ನಡಿಯಿತ್ತೇನು ? ಕೊಟ್ಟವರದು ಕೊಡಬೇಕು ಆ ಮೇಲೆ ಎದಿ ಸೆಟಸಿ ನಡಿಬೇಕು. ಅದನ್ನು ಬಿಟ್ಟು ಯಾರದೋ ಮಾತು ಕೇಳಿ ಹೊಲದಾಗ ನುಗ್ಗಿ ಸವತಿಕಾಯಿ ಹರಕೊಂಡು ತಿನ್ನಾಕ ನೀರ ನೀ ಹಾಕಿ ಬೆಳಸಿದ್ದೇನಲೇ ಚಲವಾ.... ಸವತೀಬಳ್ಳೀನ

ಭದ್ರಿ - ನೀರ ಹಾಕಿ ಬೆಳೆಸಿದವರ ತಿನಬೇಕು ಅಂತ ಇದರ ಮ್ಯಾಲೆ ಬರದೈತೇನ ಚಲವಿ... ತಿನ್ನೋ ಬದುಕು ತಿಂತೀನಿ. ನೋಡ್ರಿ ಕುಲಕರ್ಣ್ಯೇರ ಹೊಟ್ಟಿ ಸಾಕಷ್ಟು ಹಸ್ತಿದ್ದರೂ ನಾನು ದಾರಿ ಹಿಡಿದು ಸುಮ್ಮನೆ ಹೊರಟಿದ್ದೆ

ವೆಂಕಪ್ಪ - ಹೌದಪ್ಪಾ ನೀನು ಒಳ್ಳೇ ಹುಡುಗ ಅಂಬೋದು ನಮ್ಮೂರಾಗ ಯಾರಿಗೆ ಗೊತ್ತಿಲ್ಲ. ನಮಗಂತು ಗುರ್ತಾಗೇದ

ಭದ್ರಿ - ಅವಾಗ ಇವಳು ಎಲೋ.....

ವೆಂಕಪ್ಪ - ಯಾರಿಗಪಾ .....

ಭದ್ರಿ - ನನಗರಿ

ವೆಂಕಪ್ಪ - ನಿನಗಾ ಹೂಂ....

ಭದ್ರಿ - ಗಂಡಸಾದ್ರ ನಮ್ಮ ಹೊಲದಾಗೊಂದ ಕಾಲು ಇಡು ಅಂದಳು

ವೆಂಕಪ್ಪ - ನಿನಗ ಹಿಂಗಂದಳಾ

ಭದ್ರಿ - ಕೇಳರಿ

ವೆಂಕಪ್ಪ - ಹಾ.... ಹೌದೇನವ್ವ

ಲಕ್ಷ್ಮಿ - ಹೂ ಅಂದೀನಿ

ವೆಂಕಪ್ಪ - ಅಂದ ಮ್ಯಾಲೆ ಪಾಪ ನೀನ ಕಾಲಿಟ್ಟಿರಬೇಕು

ಭದ್ರಿ - ಅಮ್ಯಾಲೆ ಸವತಿ ಬಳ್ಳಿ ಒಂದ ಮುಟ್ಟು ಅಂದಳು

ವೆಂಕಪ್ಪ - ಮುಟ್ಟು ಅಂದಮ್ಯಾಲೆ ನೀನು ಮುಟ್ಟಿರಬೇಕು

ಭದ್ರಿ - ಆಮೇಲೆ ಸವತೀಕಾಯಿ ಹರಕೋ ಅಂದಳು

ವೆಂಕಪ್ಪ - ಹಿಂಗ ಅಂದಳಾ ಹೌದೇನವ್ವಾ

ಲಕ್ಷ್ಮಿ - ಹೂ ಅಂದೀನಿ ಈಗ ಅಂತೀನಿ

ಭದ್ರಿ - ನಾನು ತಿಂದೀನಿ. ಈಗೂ ತಿಂತೀನಿ ತಪ್ಪೇನರಿ ಕುಲಕರ್ಣೇರ..

ವೆಂಕಪ್ಪ - ಛೇ ಛೇ ನೀನು ಮಾಡೋದಕ ತಪ್ಪು ಅಂದ್ರೆ ನಮ್ಮ ಬಾಳೆ ಬದುಕು ಆಗತಾವೇನಪಾ ಊರಾಗ

ಭದ್ರಿ - ಸಾವಕಾರ ಮಗಳೂ ಅಂದ್ರಾ ಸಿಂಹದಮರಿ ಅಂತಾ ತಿಳದಾಳ ಇವಳು

ವೆಂಕಪ್ಪ - ಅದು ಸಿಂಹದ ಮರಿ ಆದ್ರೆ ನೀನು ಸರ್ಕಸ್ಸಿನಲ್ಲಿರೋ ರಿಂಗಮಾಸ್ತರ. ಇನ್ನರ ಹೋಗತಿಯೇನಪಾ ಕೈಮುಗಿಲೋ ಇಲ್ಲಾ (ಭದ್ರಿ ಹೋಗುವಾಗ ಲಕ್ಷ್ಮಿ ಅಣಕಿಸಿ ಮೂಗು ಮುರಿಯುವಳು. ಭದ್ರಿ ಮೀಸೆ ತಿರಿಯುವನು)

ಲಕ್ಷ್ಮಿ - ಅಲ್ಲಿ ನೋಡಪ್ಪಾ ಮತ್ತೆ ಮೀಸಿ ತಿರುತಾನ

ಭದ್ರಿ - ಮತ್ತ ನನ್ನ ಕಂಡು ನೀನು ಮೂಗು ಮುರಿತಿಯೋ ಏ ಲಕ್ಷ್ಮಿ ಈ ಭದ್ರಿ ಯಾರಿಗೂ ಅಂಜುವವನಲ್ಲ

ಕಂದ ಪದ್ಯ

ಮೋಡ ಮುಗಿಲಿನ ಕೂಡ । ಆಡುವ ಮೋಜು ನಡೆಸಿತ್ತು ।
ಸುಳಿದ ಗಾಳಿ ಬೀಸಿತ್ತ । ಹಳ್ಳಿಯ ಹೆಣ್ಣೊಂದು ।
ಹಳ್ಳದಾ ನೀರಿಗೆ ಒಂದೇ ಹೊರಟಿತ್ತು । ಕಂಡ ಗಂಡಸೀನ ।
ಕಣಕಿತ್ತ । ಕಮಲದಂಥ ಕಣ್ಣಿನ ಕೆಳಗೆ ಗಲ್ಲ ಗುಲಾಬಿ ।
ರಂಗ ಏರಿತ್ತ । ತುಲಸಿಯ ಮುತ್ತ ಬಯಸಿತ್ತ । (ಹೋಗುವನು)

ವೆಂಕಪ್ಪ - ನೋಡಿದೇನವ್ವ ಈ ಹುಡುಗನ್ನ. ಊರಾಗ ಯಾರೂ ಮತಾಡಿಸೋದಿಲ್ಲ ಇದನ್ನ. ಇಂಥವರ ಜತಿ ಏನವ್ವ ನಿನಗ ಮಾತು

ಲಕ್ಷ್ಮಿ - ಏ ಕಾಕಾ ಇವನಿಗೆಲ್ಲ ಹೆದರಿತೀನೇನ ನಾನು (ಹೋಗ ಹತ್ತುವಳು. ವೆಂಕಪ್ಪ ಗಲ್ಲ ಹಿಡಿದು ನಿಲ್ಲಿಸಿ)

ವೆಂಕಪ್ಪ - ಅಲ್ಲವ್ವಾ ಕಚೇರಿ ಕೆಲಸಕ್ಕ ಹೊರಟಿದ್ದೆ. ತುಂಬಿದ ಕೊಡಾ ಎದುರಿಗೆ ಬಂದಿದ್ದರೆ ಶುಭಾ ಅಂತ ತಿಳಿದಿದ್ದ

ಲಕ್ಷ್ಮಿ - ಕಾಕಾ ಸದ್ಯ ತರತೀನಿ ತಡಿ .... (ಮೊದಲಿನಂತ ತಡೆದು)

ವೆಂಕಪ್ಪ - ಅಲ್ಲವ ಊರ ಜನ ಎಲ್ಲ ವರ್ತಿ ಹಿಡಿದು ಸರ್ತಿ ಮ್ಯಾಲೆ ನೀರ ತುಂಬ ತಿರತಾರ. ನೀನ್ಯಾವ ನೀರ ತರಬೇಕು ? ನಾನ್ಯಾವಾಗ ಕಚೇರಿ ಕಾಣಬೇಕು. ಏನವ್ವ ಇದು

ಲಕ್ಷ್ಮಿ - ಸರ್ತಿ ಗಿರ್ತಿ ಸಾವಕಾರ ಮಗಳಿಗೂ ಇರತೈತೇನು ? ವರ್ತಿ ಬಿಟ್ಟು ಸರೀದಿದ್ರ ಒಮ್ಮೊಬ್ಬಿಕೀನ್ನ ಒದಿತೀನಿ (ಹೋಗುವಳು)

ಮರಿಯಪ್ಪ  ಹೌದ ಮಗಳ ! ಹೌದಂದೆ... ಹ್ಯಾಂಗೊ ವೆಂಕಪ್ಪ ಹುಡುಗಿ

ವೆಂಕಪ್ಪ -  ಏ ಹುಡುಗ್ಗೆ ಒಳ್ಳೇ ಟ್ರೇನಿಂಗು ಕೊಟ್ಟಿಯಪ್ಪಾ. ಏ ಮಾನಗೇಡಿ ಒಂದೇ ಮಗಳೂ ಅಂತ ಹಂದಿಯಂಗ ಬೆಳೆಸಬ್ಯಾಡಲೇ... ಸ್ವಲ್ಪ ಮಂದಿಯಂಗ ಬೆಳಸು. ನೀ ವರಟ ಅಂದ್ರೆ ನಿನ್ನ ಮಗಳ ನಿನಕಿಂತ ವರಟಿ

ಮರಿಯಪ್ಪ -  ಯಾಕ ನಾ ವರಟನೇನು ......

ವೆಂಕಪ್ಪ -  ಅದನ್ನ ಈ ಬಾಯಾರ ಯಾಕ ಹೇಳಲಪ್ಪ. ಈ ನನ್ನ ಕುಂಟ ಕಾಲ ಹೇಳ್ತದ. ಮಳ್ಳ ವಯಸ್ಸಿನಲ್ಲಿ ಹೆಣ್ಣಿನ ಸಲುವಾಗಿ ಪಾರ್ಟಿ ಮಾಡಿ ಕೊಂಡಿವಿ. ಸಾವಕಾರ ಮಗಾ ನನ್ನ ಕಾಲ ಮುರಿಸಿ ದಕ್ಕಿಸಿಗೊಂಡಿ, ಏನ ಮಾಡೋದು

ಮರಿಯಪ್ಪ -  ಮತ್ತ ನೀನು ಎಲ್ಲಿ ಬಿಟ್ಟಿ ಇಲ್ಲಿ ನೋಡು (ಕಿವಿ ತೋರಿಸಿ) ನಾನು ಕಾಲು ಮುರಿದು ತಿಂಗಳ ತುಂಬುದರೊಳಗ ನೀನು ನನ್ನ ಕಿವಿ ಕೊಯಿಸಿದಿ. ವೆಂಕಪ್ಪ ಪಾರ್ಟಿ ಕಟ್ಟಿದಾಗಲೂ ನಾವೇ ಈ ಊರ ಆಳತಿದ್ವಿ. ಈಗ ರಾಜಿ ಆದಮ್ಯಾಗೂ ನಾವೇ ಆಳತೀವೆಲ್ಲಾ ಇದು ಹ್ಯಾಂಗ ?

ವೆಂಕಪ್ಪ -  ಇದು ಹಂಗ. ಆಳಾಕಂತ ಹುಟ್ಟಿದವರು ನಾವು. ಆಳಾಕಂತ ಈ ಊರು ಹುಟ್ಟೈತಿ ಅದನ್ನ ಅಳಿಸಿಗೊಂತ ಹೋಗದಪಾ. ಅದಾಯಿತು... ಆ ಸಂಗಪ್ಪನ ಮಗ ಸಿದ್ದನ ಮದುವೆಗೆ ಕಾಗದ ಸಹಿತ ಬರೆಸಿಕೊಳ್ಳದೆ ಐದುನೂರು ರೂಪಾಯಿ ಸಾಲ ಕೊಟ್ಟಿಯಲ್ಲ. ಯಾಕ ಅಂಬೋದೆ ತಿಳಿಯದಂಗಾಗೈತಿ ನಮಗ

ಮರಿಯಪ್ಪ -  ಅವ ಸಿದ್ದ ನಮ್ಮ ಮನ್ಯಾಗ ಜೀತ ಅದಾನ. ಸಂಬಳದ ಆಳಿಗೆ ಕೊಟ್ರ ಎಲ್ಲಿ ಹೋಗುತ್ತೋ ವೆಂಕಪ್ಪ

ವೆಂಕಪ್ಪ -  ಬರೀ ಆಳಪ್ಪ ಬೇಕಿದ್ರ ಇಷ್ಟು ರೊಕ್ಕ ಹಾಳು ಮಾಡಿಕೊಳ್ಳೊ ಮಗನ ಅಲ್ಲ ನೀನು ? ಇದರಾಗ ಏನೋ ಒಂದು ಹೊಲಸ ಆಸ ಇಟಗೊಂಡೆ ಸಾಲ ಕೊಟ್ಟಿ ಅಂತಾ ನನಗನಸ್ತದೆ

ಮರಿಯಪ್ಪ -  ಇರಲಿ ಬಿಡೋ... ಕಳ್ಳ ಮಾತೆಲ್ಲ ಬಲು ಹಳ್ಳ ಹಾಕಿ ಕೇಳವ ನೀನು

ವೆಂಕಪ್ಪ - ನೋಡ ಮತ್ತ ಆ ಹುಡುಗ ಸಿದ್ಧನ ಹೆಂಡತಿ ಚಂದವಳಂತ ಕಣ್ಣು ಹಾಕಿ ನೋಡಿದಿಲ್ಲೊ. ಭದ್ರಿ ಹ್ಯಾಂಗ ಅದಾನ ಹಿರಿದ ಕತ್ತಿ ಇದ್ದಂಗ. ಅವನ ಮತ್ತ ಅವ ಇನ್ನೊಂದು ಕಿವಿ ಕೊಯ್ದು ಬಿಟ್ಟ ಅಂದ್ರ ಕಿವಿ ಕಿತ್ತಿಸಿಗೊಂಡ ರಾಮಲಿಂಗಾದಿ ಇನ್ನರ ತಿಳಕೊಳ್ಳೊ

ಮರಿಯಪ್ಪ -  ಯಾವದನ್ನ

ವೆಂಕಪ್ಪ -  ಅದೇ ಪರ ಮನಿ ಹೆಣ್ಣುಮಕ್ಕಳನ್ನ ಪಾಪ ದೃಷ್ಟಿಯಿಂದ ನೋಡಬಾರದು. ನನಗೆ ಕಚೇರಿಗೆ ಹೊತ್ತಾಗತ್ತ. ನೀನೇನು ಹೊಲಕ್ಕ ಹೊರಟೀ ಏನೋ ಹೋಗಿ

ಸುಮ್ಮನೆ ಬಾರಲೆ, ಮೊದಲೆ ನೀನು ಬಾಳ ಸುಮಾರ ಪೈಕಿ (ವೆಂಕಪ್ಪ ಹೋಗುವನು. ನಂತರ ಮರಿಯಪ್ಪ ಹೋಗವನು)

## ಆದೇ ಜಂಗಲ್ ರಸ್ತಾ

(ಪಾವರ್ತಿ, ಚಿನ್ನವ್ವ ನೀರಿನ ಕೊಡ ತೊಗೊಂಡು ಬರುವಾಗ)

ಚಿನ್ನವ್ವ - ಅಲ್ಲ ಪಾರಕ್ಕ ನನಗ ಕೇಳಿದ್ರ ನಾನು ಹಿಟ್ಟು ತಂದು ಕೊಡತಿದ್ದನಲ್ಲವ್ವ

ಪಾರ್ವತಿ - ಮನ ವಿಷಯಾನ ಹೀಗೆ ಅಂತಾ ಬಾಯಿ ಬಿಟ್ಟು ಬೇರೆಯವರಿಗೆ ಹೇಳಬಾರದವ್ವ

ಚಿನ್ನವ್ವ - ಅಂದ್ರೆ ನಾನೇನು ಹೊರಗಿನವಳೂ ಅಂತಾ ತಿಳಿಕೊಂಡಿಯಾ ? ನಮ್ಮಿಬ್ಬರ ಮನೆ ಬೇರಾದ್ರು ಮನ ಒಂದು ಅಂತ ತಿಳಿಯವ್ವ

ಪಾರ್ವತಿ - ಹೌದವ್ವ ಯಾವಾಗಲಾರದೂ ಮಾತು ಬಂದಾಗ ನಮ್ಮತ್ತೆ ಹೇಳ್ತಾ ಇರ್ತಾರ, ಚಿನ್ನವ್ವ ಬಾಳ ಒಳ್ಳೇಯವಳೂ ಅಂತಾ

ಚಿನ್ನವ್ವ - ಅಂದಮ್ಯಾಲೆ ಯಾಕವ್ವ ಬಂದು ನೀ ಹಿಟ್ಟು ಕೇಳಲಿಲ್ಲ. ಹೇಳು ಕೇಳಿದ್ರ ಎರಡು ಕಾಲು ಪಾವು ಹಿಟ್ಟು ನಿನಗ ನಾ ಕಡಾ ಕೊಡತಿದ್ದಿಲ್ಲಾ. ಕೊಟ್ಟಿದ್ದರ ನಾ ಏನ ಕಟ್ಟ ಹೋಗತಿದ್ಯಾ. ನೀನೇನ ತಿರಗಿ ಕೊಡತಿರಲಿಲ್ಲ. ಇಷ್ಟಿದ್ದು ಯಾಕವ್ವ ನಿನ್ನೆ ನೀ ಮಲಗಿ ಹೊಟ್ಟೆ ಹೊಟ್ಟೆ ಸುಟ್ಟಕೋ ಬೇಕಿತ್ತು

ಪಾರ್ವತಿ - ನನ್ನ ಹೊಟ್ಟೆ ಸುಡೋದು ಯಾವ ದೊಡ್ಡ ಮಾತು ಬಿಡವ್ವ. ಹಿರಿಯರು ಮೊದಲೆ ಹೇಳಿದ್ದಾರೆ ಹೆಣ್ಣಾಗಿ ಹುಟ್ಟಿದ್ದು ಸುಣ್ಣದ ಹರಳಾಗಿ ಸುಡಬೇಕು ಅಂತಾ. ಆದರೆ ನಿನ್ನೆ ನಮ್ಮ ಭದ್ರಿ ಉಪವಾಸನೆ ಮಲಗಿ ಬಿಟ್ಟವ್ವ. ಅದನ್ನು ಕಂಡು ನನಗ ನೆತ್ತೀಲಿ ಜೀವಹೋದ ಹಾಗಾಯ್ತು. ಇಷ್ಟೊತ್ತಾದರೂ ನಮ್ಮ ಭದ್ರಿ ಊಟಾನೆ ಮಾಡಿಲ್ಲವ್ವ

ಚಿನ್ನವ್ವ - ಇರಲಿ ಬಿಡವ, ಗೊತ್ತೈತಿ. ನಿಮ್ಮ ಭದ್ರಿ ಸುದ್ದಿ. ಅವನ ಸಲುವಾಗಿ ನೀನ್ಯಾಕ ಅಷ್ಟ ಅಳತಿ. ಹಸಿದ ಹೊಟ್ಟೀಲಿ ಅವನೆಂಗಿರಬೇಕು ಈಗಾಗಲೇ ಯಾರದರ ತೋಟದಲ್ಲಿ ನುಗ್ಗಿ ಗೆಜ್ಜರೋ ಗೆಣಸೋ ಇಲ್ಲ ಸವತಿಕಾಯಿನೋ ಹರಿಕೊಂಡ ತಿಂದು ಹಳ್ಳದ ನೀರು ಹೊಟ್ಟಿ ತುಂಬ ಕುಡಿದು ಎಲ್ಲಿಯಾದರೂ ಮೀನ ಹಿಡೀತಾ ಕುಳಿತಿರಬೇಕು

ಪಾರ್ವತಿ - ಹಿಂಗ್ಯಾಕ ಮಾತಾಡುತಿ ಚಿನ್ನವ್ವ ನೀನು. ತೋಟದಲ್ಲಿ ನುಗ್ಗಿ ಕದ್ದು ತಿಂತಾನ ಅಂತಿಯಾ ನನ್ನ ಮೈದುನ

ಚಿನ್ನವ್ವ - ನೀನ್ಯಾಕ ಅಷ್ಟು ಸಿಟ್ಟಿನಿಂದ ಕೇಳ್ತಿಯವ್ವ ಕದ್ದು ತಿಂತಾನ ನನ್ನ ಮೈದುನಾಂತ. ಆ ನಿನ್ನ ಮುದ್ದು ಮೈದುನ ಕದ್ದು ಯಾಕವ್ವ ತಿಂದಾನು. ತೋಟ ಕಾಯಿತಿರೋ ಕೂಲಿಕಾರ ಜನರನ್ನು ಹೆದರಿಸಿ ತಿಂತಾನ, ಒಂದು ವೇಳೆ ಅವರು ಹೆದರಲಿಲ್ಲಾ

ಹೊಡೆದು ಒಡೆದು ತಿಂತಾನೆ. ಇಷ್ಟಕ್ಕೂ ಬಗ್ಗದಿದ್ದರೆ ತನ್ನ ಗೆಳೆಕಾರ್‍ನ ಕಟಕೊಂಡು ಅವರ ತೋಟಾನೆ ಹಾಳು ಮಾಡಿಸಿ ಬಿಡತಾನ. ನಿಮ್ಮ ಭದ್ರಿಗೆ ಆ ಗುಂಡನೇ ಮಂತ್ರಿ. ನಿಮ್ಮ ಭದ್ರಿ ಮಾಡುವ ಕೀಚಕತನಾ ನಮ್ಮೂರಿಗೆ ಅಷ್ಟೇ ಅಲ್ಲ ಸುತ್ತಲೂ ಹತ್ತು ಹಳ್ಳಿ ಜನರಿಗೆಲ್ಲ ಗೊತ್ತು. ಅಂತಾನೆ ಊರ ಜನರೆಲ್ಲ ಅಂತಾರವ್ವ

ಪಾರ್ವತಿ - ಏನಂತಾರವ್ವ

ಚೆನ್ನವ್ವ - ಸಂಗವ್ವ ಹಡೆದದ್ದು ಮಗನ್ನಲ್ಲ, ಹಾವಿನ ಮರಿ ಅಂತಾ. ತಡವಿದರ ಬೆನ್ನು ಹಿಡಿದು ಕಚ್ಚಿಕೊಳ್ಳುವ ಕಾಳ ಸರ್ಪ ಅಂತಾರವ್ವ ನಿನ್ನ ಮೈದುನಗ (ಲಕ್ಷ್ಮಿ ನೀರಿನ ಕೊಡ ಹೊತ್ತುಕೊಂಡು ಬರುವಳು) ನೀರು ಸಾಕೇನ ಲಕ್ಷ್ಮಿ ?

ಲಕ್ಷ್ಮಿ - ನನಗ ಸಾಕಾದರೇನು ಬೇಕಾದರೇನು ಅದನ್ನು ತೂಗೊಂಡು ನೀ ಏನ ಮಾಡತಿಯಲೇ ಚೆನ್ನೀ

ಚೆನ್ನವ್ವ - ಇದೇನೇ ನಮ್ಮವ್ವ ನೀರು ಸಾಕೇನವ್ವ ಅಂತ ಕೇಳಿದರ ಒಮ್ಮೆಲೆ ಜಗಳಕ್ಕೆ ಬರುತೀಯಲ್ಲವ್ವ

ಲಕ್ಷ್ಮಿ - ಹೂಂ..... ಅವ್ವ ಅನ್ನೋ ಶಬ್ದ ಈಗ ಬಂತೇನ ನಿನ್ನ ಬಾಯಲ್ಲಿ. ಏನೇ ಅಂತ ಕರೀಲಿಕ್ಕೆ ನನ್ನನ್ನೇನು ಬಡವರ ಮನಿ ಹುಡುಗಿ ಮಾಡಿ ಏನು ? ಅಷ್ಟಕ್ಕ ಬಾಯಿ ಮುಚ್ಚು, ಇರದಿದ್ದರ ನಮ್ಮಪ್ಪನ ಮುಂದ ಹೇಳಿ ನಿನ್ನ ಒದಿಸೇನು, ಬಿದ್ದಾಡಿ ಹಳೇಬಿದ್ದಾಡಿ (ಹೋಗುವಳು)

ಚೆನ್ನವ್ವ - ನೋಡಿದೇನವ್ವ ಹ್ಯಾಂಗ ಐತಿ ಈ ಹೆಣ್ಣು ಹುಲಿ ? ನೋಡ ಪಾರಕ್ಕ ಗಂಡಸರಲ್ಲಿ ಕಿಡಿಗೇಡಿ ಅಂದ್ರ ನಿನ್ನ ಮೈದುನ, ಹೆಂಗಸರಲ್ಲಿ ಜಗಳಗಂಟಿ ಅಂದ್ರೆ ಈ ಲಕ್ಷ್ಮಿ. ಎಷ್ಟು ಜನರನ್ನು ಹೆದರಿಸಿಕೊಂಡರೇನು ಆ ನಿಮ್ಮ ಭದ್ರಿ... ಈ ಲಕ್ಷ್ಮಿನ್ನ ಹೆದರಿಸಿಕೊಳ್ಳಲಿ ಹೌದೂ ಅಂತೀನಿ

ಪಾರ್ವತಿ - ಯಾಕವ್ವ ಇವಳನ್ಯಾಕ ಹೆದರಿಸಿಕೊಳ್ಳಬೇಕು ಅವನು

ಚೆನ್ನವ್ವ - ನಿಮಗೇನು ಗೊತ್ತವ್ವ ಇವರಿಬ್ಬರ ಸಮಾಚಾರ ? ನಿಮ್ಮ ಭದ್ರಿಗೂ ಇವಳಿಗೂ ಅಂದ್ರ ಹಾವಿಗೆ ಮುಂಗಲಿಗೆ ಇದ್ದ ಹಾಗೆ. ಒಬ್ಬಳೇ ಮಗಳು ಅಂತ ಮರಿಯಪ್ಪ ಸಾವುಕಾರ ಮುದ್ದು ಮಾಡಿ ಬೆಳೆಸಿದ ಈಗ ಹದ್ದು ಮೀರಿದ ಹೆಣ್ಣಾಗಿದ್ದಾಳೆ. ನಿಮ್ಮ ಭದ್ರಿ ದಾರಿಯಲ್ಲಿ ಸುಮ್ಮನೆ ನಿಂತಿದ್ರು ಅಣಕಿಸಿ ಹೋಗುತಾಳೆ. ಇಲ್ಲಾ ಮೂಗು ಮುರಿತಾಳೆ. ಇಲ್ಲ ಯಾರದರ ಮ್ಯಾಲರ ಹಾಯಿಸಿ ಬೈತಾಳೆ. ನೋಡಿ ನೋಡಿ ಅವನು ಒಂದು ದಿನ ಏಂಗ ಮಾಡಿದಾ..

ಪಾರ್ವತಿ - ಯಾರು ನಮ್ಮ ಭದ್ರಿನಾ... ಏನ ಮಾಡಿದಾ ...

ಚೆನ್ನವ್ವ - ಮೊನ್ನೆ ಐಹೊಳ್ಳಿ ಜಾತ್ರ್ಯಾಗ ಇವಳ ಜಡೆ ಹಿಡಿದು ಜಗ್ಗಿದ್ದಾ. ಈ ರಂಡಿ ಹಾದಿರಂಪ... ಬೀದಿರಂಪ... ಮಾಡಿದ್ಲು. ಇದ ತಿಳಿದು ಭದ್ರಿ ಮೈ ಹಣ ಆಗುವಂಗ ನಿನ್ನ ಗಂಡ ಹೊಡಿದಿದ್ದಾ. ನಾನು ಹೋಗಿ ಬಿಡಿಸಿಕೊಂಡಿದ್ದೆ. ಹೋಗಲಿ ಬಿಡವ್ವ ಇಂಥ ತಂಪು ಹೊತ್ತಿನ್ಯಾಗ ಅವಳ ಸುದ್ದಿ ಯಾಕೆ ? ಆ ಹೊಯಮಾಲಿ ತಿರಗಿ ಬರೋ ಹೊತ್ತು ಬೇರೆ ಆಯ್ತು. ಹಳ್ಳಕ್ಕ ಬಂದು ವರ್ತಿ ಹಿಡಿದು ಕುಂತ್ರ ಮತ್ತೊಬ್ಬರಿಗೆ ವರ್ತಿನೇ ಬಿಟ್ಟು ಕೊಡೋದಿಲ್ಲ, ಆ ಸಾವಕಾರ ಹೆಣ್ಲು. ನಡಿಯವ್ವ ಅವಸರ ಮಾಡಿ ನೀರು ತುಂಬಿಕೊಂಡು ಮನಿಗೆ ಹೋಗೂನು. (ಇಬ್ಬರೂ ಹೋಗುವರು)

# ದೃಶ್ಯ ೩

ಹಳ್ಳದ ದಂಡೆ

ಪಾರ್ವತಿ - (ಸುತ್ತೆಲ್ಲ ನೋಡಿ) ಗಿಡದ ಬುಡಕ್ಕೆ ಸರ್ಪ ಸುತ್ತುವರದಂತೆ, ಊರಿನ ಸುತ್ತ ಹಳ್ಳ ಹರಿದು, ದುಡಿದು ತಿನ್ನುವ ಬಡವರ ಒಡಲಿಗೆ ನಿತ್ಯ ಅನ್ನ ಒದಗಿಸುವ ಪುಣ್ಯ ಪಡೆದಿದೆ. ಹಳ್ಳದಾ ದಂಡೆ ಗುಂಟ ಹಬ್ಬಿ ಹಾಸಿದ ಹಸಿರು... ಹಸಿದ ದನಕರುಗಳಿಗೆ ಆಹಾರ ಒದಗಿಸಿ ಹಾಲು ಹೈನದ ಕಂಗಾಲ ನೀಗಿಸಿದೆ. ನೀರಿನ ಜಂಗಿನಲ್ಲಿ ಬೆಳೆದ ಗಿಡಬಳ್ಳಿಗಳು ಊರಿನವರಿಗೆಲ್ಲ ಉರುವಲು ಕಟ್ಟಿಗೆ ಕೊರತೆ ಕಳೆದಿವೆ. ಹಳ್ಳದಾ ದಂಡೆಗಿರುವ ಹೊಲಗದ್ದೆಗಳು ನಿತ್ಯ ಹಸಿರಿನಿಂದ ಕಂಗೊಳಿಸಿ ಕಣ್ಣಿಗಾನಂದ ತರುತಿವೆ. ಜಲನೆಲಗಳ ಆಸರವಿಲ್ಲದಿದ್ದರೆ ಮಾನವ ಜೀವಿಗೆ ಬಾಳು ಕಡು ಬೇಸರ

॥ ಪದ ॥

ಜಲವಿನ್ನೈಸಿರಿ ಶಿವನ ಧರಣಿ । ಮನುಜ ಕುಲದಾ ಪಾವನ ಸ್ಮರಣೆ ॥ ಚಲು॥
ಸತಿಪತಿಗಳ ಶುಭಗತಿಗಳ । ಹರುಷ ಚೇತನ ॥
ಇಂದ್ರ ಧನುರ್ಯನದಾ ॥ ಸೊಬಗಿನಾ ಸಾಗರ ॥ ೧ ॥
ಮಳೆಹೊಳೆಗಳ । ಜಲನೆಲಗಳ ಹರುಷ ಚೇತನಾ । ತುಂಬಿ ಸಂತ ॥
ಭುವನವೀ॥
ತುಳಕದಾ ॥ ವಿನೂತನಾ ॥ ಚಲು॥

ಮರಿಯಪ್ಪ - (ಪದ ಕೇಳುತ್ತ ಬಂದು) ಹಾಡು ಪಾರ್ವತಿ ಹಾಡು. ನಿನ್ನೊಂದಿಗೆ ಜಲ-ನೆಲ-ಮುಗಿಲು ಎಲ್ಲ ಹಾಡಿದ ಹಾಗಾಯಿತು. ರೋಣಿಯ ಮಳೆಯು ಭೂಮಿಗೆರಗುವ ಮುನ್ನ ಗಿರಿಯ ನವಿಲು ಗರಿಗೆದರಿ ಕುಣಿದಂತೆ ಭಾಸವಾಯಿತು ನಿನ್ನ ರೂಪ. ನಿನ್ನ ವಯಸ್ಸು ಈ ಕಾಡಿಗೇ ಒಂದು ಬಗೆಯ ಬೆಡಗು ನೀಡಿ ಹಳ್ಳದಾ ದಡದಿ ನಿಂತ ನನ್ನನ್ನು ಎಳತಂದು ನೋಡ ಹಚ್ಚಿತು

ಪಾರ್ವತಿ - ಒಬ್ಬಳೆ ಆದೀನಿ ಅಂತಾ ಏನೇನು ಹಾಡಿಕೊಂಡೆ. ಹುಡುಗತನ ಅಂತಾ ಕಂಡ್ರೆ ಕ್ಷಮಿಸಿಬಿಡ್ರಿ, ನಾನು ಹೋಗತೀನಿ

ಮರಿಯಪ್ಪ - ನಿನಗೆ ನಾ ಕಾಣದಿದ್ದರೂ, ನನಗೆ ನೀ ಕಂಡು ಹಸಿದ ನನ್ನ ಕಣ್ಣಿನ ಬರ ಹಿಂಗಿಸಿದೆ ಪಾರು. ಶಾಸ್ತ್ರಕ್ಕೆ ಸಿದ್ಧನಿನ್ನ ಕೈಹಿಡಿದ ಗಂಡನೆನಿಸಿದ್ದರೂ, ನಿಜದಲ್ಲಿ ನಾನೇ ನಿನ್ನ ಯಜಮಾನ

ಪಾರ್ವತಿ - ಅಂದರೆ

ಮರಿಯಪ್ಪ - ನಿನ್ನತ್ತೆಯೊಂದಿಗೆ ಸಿದ್ಧನಿಗೆ ಎಂದು ನಿನ್ನನ್ನ ಗೊತ್ತು ಪಡಿಸಲು ಅಂದು ನಾನು ಬಂದಿದ್ದೆ ಆಗಲೇ ಈ ರೂಪರಾಶಿ ನಮ್ಮೂರಿನದಾಗಲಿ ಎಂದು ಹಾರೈಸಿ ಮದುವೆಯ ಖರ್ಚನ್ನೆಲ್ಲ ವಹಿಸಿಕೊಂಡೆ. ಪಾರು ನಿನ್ನ ತವರಿಗೆ ಕೊಟ್ಟ ತೆರವೂ ಸ್ವಂತ ನನ್ನ ಮನೆಯ ಬಂಗಾರ.

ಪಾರ್ವತಿ - ಇರಬಹುದು. ಕೊಟ್ಟ ನಿನ್ನ ಸಾಲವನ್ನು ಮರಳಿ ಮುಟ್ಟಿಸದ ಅಸಮರ್ಥರಲ್ಲ ನನ್ನ ಕೈ ಹಿಡಿದವರು

ಮರಿಯಪ್ಪ - ತಂದೆ ಮಾಡಿದ ಸಾಲ ಮುಟ್ಟಿಸಿ ಮರಳಿ ಪಡೆಯುವದಾಗಲಿಲ್ಲ ನಿನ್ನ ಗಂಡನಿಗೆ. ನನ್ನ ಬಳಿ ಸಾಲದಲ್ಲಿ ಬಿದ್ದ ಹೊಲವನ್ನು ಪ್ರತಿ ವರ್ಷಕ್ಕೊಮ್ಮೆ ತಂದು ಒಪ್ಪಿಸುತ್ತಾನೆ ಬಡ್ಡಿಯಲ್ಲಿ ಬೆಳೆದ ಪೀಕನ್ನು. ಇದರ ಮೇಲೆ ಸಾಲ ಮಾಡಿ ತಂದ ನಿನ್ನನ್ನು ನಾನೊಪ್ಪಿಸಿಕೊಳ್ಳಲು ಕೇಳಬೇಕಾಗಿಲ್ಲ ನಿನ್ನ ಗಂಡನ ಒಪ್ಪಿಗೆಯನ್ನು. ಪಾರೂ... ಈ ಊರಿಗೇ ನಾನು ಸಾವುಕಾರ, ಇಲ್ಲಿ ನನ್ನದೇ ಅಧಿಕಾರ

ಪಾರ್ವತಿ - ಸಾವುಕಾರರೇ ಈ ರೀತಿ ಮುಂದುವರೆದು ನನ್ನ ಮಾನ ತೆಗೆಯುವದಾದರೆ ಕೂಗಿ ಕರೆದು ಕೂಡಿಸಬೇಕಾದೀತು ಜನರನ್ನು

ಮರಿಯಪ್ಪ - ಹಸಿದ ಹೆಬ್ಬುಲಿಯ ಬಿಲದಲ್ಲಿ ಬಿದ್ದ ಹಸುವನ್ನು ಬಿಡಿಸಿಕೊಳ್ಳಲು ಎಂಥ ಎದೆಗಾರರನಿಗೂ ಕಸುವು ಸಾಲದಂತೆ. ಈ ಸಾವುಕಾರ ಕಣ್ಣಿಟ್ಟ ಹೆಣ್ಣಿನ ಮಾನ ಕಾಯುವ ಶಕ್ತಿ ಮೂರು ಕಣ್ಣುಳ್ಳವನಿಗೂ ಆಗದ ಮಾತು. ಪಾರು ನೀನೀಗಲೇ ನನ್ನವಳಾಗು

ಪಾರ್ವತಿ - ಚಾಂಡಾಲ..... ಮಾನಗೆಟ್ಟವನೆ .... ಸರಿದೂರ

ಮರಿಯಪ್ಪ - ಚಾಂಡಾಲ..... ಛಂಡ ಬೈಗಳಿಂದ ಬೈದು ನನ್ನ ಎದೆ ಗುಂಡಿನ ಮೇಲೆ ಬರೆ ಎಳೆದೆ. ಒಡಲು ತೆರೆದು ಪಡೆದ ನನ್ನ ತಾಯಿ ಕೂಡ ಈ ರೀತಿ ಬೈಯುವ ಧೈರ್ಯ ಮಾಡಿರಲಿಲ್ಲ. ಎಲೆ ಪಾರು (ಮೈಮೇಲೆ ಏರಿ ಹೋಗುವನು)

ಪಾರ್ವತಿ - ಅಯ್ಯೋ..... ಯಾರಾದರೂ ಬರ್ರಿ. ಈ ದುರುಳನ ಕೈಯಿಂದ ನನ್ನ ಮಾನ ಪ್ರಾಣ ಉಳಿಸಿರಿ... ಭದ್ರಿ... ಭದ್ರಿ...

ಭದ್ರಿ - (ಬಂದು) ಅತ್ತಿಗ (ನೋಡಿ) ಯಾರು ಸಾವುಕಾರ ಮರಿಯಪ್ಪ ನನ್ನ ಅತ್ತಿಗೆಯ ಮೇಲೆ ಏರಿಹೋಗುವಷ್ಟು ಧೈರ್ಯ ಬಂತೇನೋ ನಿನಗ ? ಈ ಬಡ

ಕುಟುಂಬದಲ್ಲಿ ಭದ್ರಿಯೊಬ ಬದುಕಿದ್ದ ನೆನಪು ತಾಗಲಿಲ್ಲವೇ ಆ ನಿನ್ನ ಮನಕ್ಕೆ. ನಿನ್ನ ಸಂಪತ್ತಿನ ಸೊಕ್ಕನ್ನು ನನ್ನ ಮೆಟ್ಟಿನ ಕೆಳಗೆ ಮೆಟ್ಟಿ ಮೆರೆಯಬೇಕೆಂದು ಹಟತೊಟ್ಟ ಈ ಭದ್ರಿಯ ಬಾಯಲ್ಲಿ ತುತ್ತಿಟ್ಟು ಬೆಳೆಸಿದ ನನ್ನತ್ತಿಗೆಯ ಶೀಲಕ್ಕೆ ಕೈಹಚ್ಚಿ ಬದುಕುವೆಯಾ ಮಗನೆ ಬದುಕು (ಹೊಡೆಯುವನು)

ಪಾರ್ವತಿ - ಬಿಡಪ್ಪ ಭದ್ರಿ ಸಾಕ ಬಿಡಪ್ಪಾ (ಬಿಡಿಸಿಕೊಳ್ಳುವಳು)

ಮರಿಯಪ್ಪ - ಎಲೆ ಭದ್ಮಾಸ ನನ ಮಗನೆ ಎಂಥಾ ಏಟು ಕೊಟ್ಟೆಯೋ ? ಮುಖಕ್ಕೆ ಬಡಿದು ಮುಂದಿನ ಮೂರು ಹಲ್ಲು ಸಡಿಲಾಗಿ ಬಾಯಲ್ಲಿ ನೆತ್ತರು ಹರಿಯುತ್ತಲ್ಲೋ. ಲೇ ಭದ್ರಿ ನಾನು ದುಡ್ಡುಳ್ಳವನೋ. ದೊಡ್ಡವರ ಪರಿಚಯ ಬೆಳೆಸಿಕೊಂಡವನೋ. ಎಂ.ಎಲ್.ಎ ನನಗೆ ಗೊತ್ತು. ಇಂಥಾ ನನ್ನ ಎದುರು ಹಾಕೊಂಡು ಬದಕತ್ತ್ಯಾ ಮಗನೇ

ಭದ್ರಿ - ಸತ್ಯದಲ್ಲಿ ನಡೆಯುವ ನಾನು ದೇವರನ್ನು ಕೂಡ ಎದುರು ಹಾಕಿಕೊಂಡು ಬದುಕಬಲ್ಲೆ. ಮರಿಯಪ್ಪ ನಿನ್ನ ಸುಳ್ಳು ಸಾಲದಲ್ಲಿ ಬಡ್ಡಿ ಭಾರಕ್ಕೆ ಬೆನ್ನು ಬಾಗಿ, ಮೊದಲೆ ಬಡವರಾದ ನಾವು ಮತ್ತಷ್ಟು ಬಡತನದ ಕಡು ತಾಪದಲ್ಲಿ ಒಡಲಿಗನ್ನ ಸಿಗದೇ ಹಸುವಿನ ತಾಪ ಅವರಿಸಿ ನಿಂತಿದೆ. ಸಿರಿ ಬಡತನಗಳ ನಡುವೆ ಹೊತ್ತಿದ ವೈರದ ಉರಿ ಧಗಧಗಿಸತೊಡಗಿದೆ. ನಿನಗ ನಾ ಕೊಡುವ ಕಟ್ಟ ಕಡೆಯ ಭಾಷೆ ಇದು. ನಮ್ಮಂಥ ಬಡವರನ್ನು ಬೆದರಿಸಿ ದನದಂತೆ ದುಡಿಸಿ ಗಳಿಸಿದ ನಿನ್ನ ಸಂಪತ್ತಿಗೆ ಸವಾಲು ಹಾಕಲಿರುವ ನನ್ನಿಂದ ಸಿಡಿದ ರೋಷದ ಸಿಡಿಲು ನಿನ್ನ ಮುಖಕ್ಕೆ ಬಡಿದು ಮುಂದಿನ ಮೂರು ಹಲ್ಲು ನಡುಗಿಸಿತು. ಆದರೂ ಈ ಸಿಡಿಲು ಇನ್ನೂ ಮೊಗ್ಗಿನಲ್ಲಿದೆ. ಮುಂದ ಹೂವಾಗಿ ಅರಳಿ ಕಾಯಾಗಿ ಬೆಳೆದು, ಹಣ್ಣಾಗಿ ಕುಳಿತಾಗ ತಿಳಿಯುವದು ಅದರ ರುಚಿ. ಬಡವರನ್ನು ಮರುಗಿಸಿದ ಪಾಪ ಅಪ್ಪುವದು ನಿನ್ನ ಬಾಚಿ (ಭದ್ರಿ ಏರಿ ಹೋಗುವನು. ಮರಿಯಪ್ಪ ಅಂಜಿ ಓಡಿ ಹೋಗುವನು)

ಪಾರ್ವತಿ - ಭದ್ರಿ ಹಾಲಿಟ್ಟು ಸಲುಹಿದ ನನ್ನ ಶೀಲ ಕಾಪಾಡಿದ ನೀನು ನನಗೆ ಮೈದನ ಅಲ್ಲ ಮಗಾ... ಭದ್ರಿ ನಾನು ಆಶಿಸಿದ ಕನಸು ನನಸಾಯಿತು. ಧೈರ್ಯ ಸಾಹಸಗಳ ಹೆಬ್ಬಟ್ಟಿದಂತಿದ್ದ ನಿನ್ನ ಹೆತ್ತ ಹೊಟ್ಟೆ ನನ್ನದಾಗಲಿಲ್ಲ ನನ್ನಪ್ಪಾ

ಭದ್ರಿ - ಹೆತ್ತ ಒಡಲು ನಿನ್ನದಾಗದಿದ್ದರೂ, ಹಾಲುಣಿಸಿದ ಕೈ ನಿನ್ನದು. ಅತ್ತಿಗೆಮ್ಮಾ ನೀನೀನ್ನು ನಿರ್ಭಯವಾಗಿ ಮನೆಗು ಹೋಗು. ಇನ್ನು ಮೇಲೆ ಈ ಭದ್ರಿ ಆ ಮರಿಯನ ಪಾಲಿಗ ಸಿಂಹಸ್ವಪ್ನ

ಪಾರ್ವತಿ - ಭದ್ರಿ ನಾವು ಬಡವರು, ಅವರು ಹಣವಂತರು. ಸಂಪತ್ತಿನ ಸಹಾಯದಿಂದ ನಾಳೆ ನಿನಗೇನಾದರೂ ಕೇಡು ಮಾಡಲು ಬಂದರೆ ಆ ಸಂಕಟ ಸಮಯದಲ್ಲಿ ನಿನ್ನ ಉಳಿಸುವವರು ಯಾರಪ್ಪಾ .....

ಭದ್ರಿ - ದೇವರು... ಅತ್ತಿಗೆಮ್ಮಾ ಧರ್ಮಿಷ್ಠರಾದ ಪಾಂಡವರಿಗೆ ಬಡತನದಲ್ಲಿ ಅಕ್ಷಯ ಪಾತ್ರೆಯನ್ನಿಟ್ಟು ಕಾಪಾಡಿದ ಶಕ್ತಿ ಯಾವದು ? ಬಡವನಾದರೂ ಭಕ್ತನಾದ ಸುಧಾಮನಿಗೆ ಶ್ರೀ ಕೃಷ್ಣನ ಸ್ನೇಹ ದೊರಕಿಸಿಕೊಟ್ಟ ಆ ಶಕ್ತಿ ಯಾವುದು ? ಅದೇ ದೈವೀಶಕ್ತಿ ನನ್ನನ್ನು ಕಾಯಿತು. ಒಂದು ವೇಳೆ ದೈವಿ ಬಲವೂ ಸಂಪತ್ತಿನೆಡೆಗೆ ಒಲಿದರೆ? ಅತ್ತಿಗೆಮ್ಮಾ ನನಗೆ ನನ್ನ ತೋಳ ಬಲವಿದೆ. ಮನದಲ್ಲಿ ಸೇಡು ತೀರಿಸಿಕೊಳ್ಳುವ ಅಖಂಡ ಛಲವಿದೆ. ಸಂಪತ್ತುಳ್ಳ ಇಂಥವರ ಸೊಕ್ಕು ಮುರಿಯಬೇಕಿದ್ದರೆ ಬರೀ ಬಾಯಿ ಬೆದರಿಕೆಯಿಂದಲ್ಲ ಹೊಡತ ಬಡಿತಗಳ ಹೆದರಿಕೆಯೂ ಬೇಕು. ನೀನಿನ್ನು ನಿರ್ಭಯವಾಗಿ ಮನೆಗೆ ಹೋಗು (ಪಾರ್ವತಿ ಹೋಗುವಳು. ಭದ್ರಿ ಮೀನು ಹಿಡಿಯಲೆಂದು ಕೂಡುವನು. ಲಕ್ಷ್ಮಿ ನೀರಿಗೆ ಬರುವಳು)

ಲಕ್ಷ್ಮಿ - (ಬಂದು ನೀರನ್ನು ಪರೀಕ್ಷಿಸಿ) ನೀರೆಲ್ಲ ಹೊಲಸ ಮಾಡ್ಯಾವು ಹೊಲಸಗೂಳು, ಹಳ್ಳೆಲ್ಲ ಇವಂದ ಆಗೈತಿ, ಘಾಡಕಾವು ಹಳೆ ಘಾಡಕಾವು

ಭದ್ರಿ - (ಸಿಟ್ಟಿನಿಂದ) ಏ.... ಮೀನ ಹಿಡಿಯಲೆಂದು ಗಾಣಾ ಹಾಕಿ ನಾನಿಲ್ಲಿ ಗುಡ್ಡದಂತೆ ಕುಳಿತದ್ದು ಕಾಣಲಿಲ್ಲವೇನೇ ಆ ನಿನ್ನ ದೊಡ್ಡ ಕಣ್ಣಿಗೆ

ಲಕ್ಷ್ಮಿ - ಮೀನ ಹಿಡಿಬೇಕು ಅನ್ನು ಚಲುವ ಮುಡುವು ಇದ್ದ ನೀರಿಗೆ ಹೋಗಬೇಕು... ಗಾಣಾ ಹಾಕಿ ಮೀನು ಹಿಡೀಬೇಕು. ಅದನ್ನೆಲ್ಲ ಬಿಟ್ಟು ಮೀನ ಹಿಡಿಯುವ ನೆಪ ಮಾಡಿ ನೀರಿಗೆ ಬರೋ ಹೆಂಗಸರ ಮಾರೀನೇ ನೋಡ್ತಾ ಕುಂತಿಯಲ್ಲ ಪಿಕನಾಶಿ ಹಳೇ ಪಿಕನಾಶಿ

ಭದ್ರಿ - ಏನೇ.... ಹರಾಮಿ ... ಬಲ್ಲಂಗ ಮಾತಾಡತಿಯಾ ನಾನು ಯಾರಂತ ತಿಳಿದಿ

ಲಕ್ಷ್ಮಿ - ನೀನು ಯಾರಾದರ ನನಗೇನು ? ನೀನು ಅಂದ್ರೆ ನಿಮ್ಮಪ್ಪ ಅನ್ನುವಾಕಿ ನಾನು

ಭದ್ರಿ - ನಮ್ಮಪ್ಪನ ಹೆಸರೆತ್ತಿದರೆ ಮೀನಕ ಹಾಕಿರುವ ಗಾಣಾ ತೆಗೆದು ನಿನ್ನ ಗಂಟ್ಲಿಕ ಹಾಕೇನು ? ಈ ಹಳ್ಳ ಅಂದ್ರೆ ನಿಮ್ಮಪ್ಪನ ಜಾಗೀರು ಅಂತ ಮಾಡೀಯ ? ನೀನೇನು ಹೆಣ್ಣೊ ಕಾಮ ಕಣ್ಣಿಗೇರಿದ ಕೀವು ತುಂಬಿದ ಹುಣ್ಣೋ

ಲಕ್ಷ್ಮಿ - ಏ ಭಂಡಾ ಹಲ್ಲ ಬಿಗಿದ ಹಿಡಿದ ಮಾತಾಡು ಕಂಡ ಹೆಂಗಸರಿಗ ಭಂಡ ಮಾತಾಡಕ ಈ ಹಳ್ಳ ನಿಮ್ಮಪ್ಪ ಗಳಿಸಿಟ್ಟ ಜಾಗೀರು ಅಂತಾ ಮಾಡೀಯ ? ಈ ನಿನ್ನ ಗಂಡತನ-ಭಂಡತನ ನನ್ನೆದುರು ತೋರಿಸಬ್ಯಾಡ ನಿನ್ನ ಗುಂಡಗೀನ ಸೀಳಿಸಿ ಬಿಟ್ಟೇನು ? ಗಂಟಲಿಗೆ ಗಾಣಾ ಹಾಕತಾನಂತೆ, ಗಾಣಾ ... ನಾನ್ಯಾರು ಗೊತ್ತೇನೋ ? ಸಾವುಕಾರ ಮರಿಯಪ್ಪನ ಮಗಳೂ....

ಭದ್ರಿ - ಸಾವುಕಾರ ಮಗಳಾದರ ನನಗೇನು ಹೇಳ್ತಿಯೇ ನಿಮ್ಮಪ್ಪನ ಸಾವುಕಾರಕಿ ತಂದು ಹಾಕ ನನ್ನ ಕಾಲ ಕೆಳಗ

ಲಕ್ಷ್ಮಿ - ಏನೋ ನಮ್ಮಪ್ಪನತನಕ ಹೋಗ್ತೀಯೇನೋ ನಾಲಗಿ ಉದ್ದಾಯಿತೇನೋ ಮೊದಲು ಹಳ್ಳ ಬಿಟ್ಟು ಬದಿಗಿ ನಿಂತು ಮಾತಾಡು (ಭದ್ರಿ ಸಮೀಪ ಬರುವನು) ನಾಚಿಕೆ ಬಿಟ್ಟವನೇ

ಭದ್ರಿ - ನಾಚಿಗೆ ಬಿಟ್ಟವನು ನಾನಲ್ಲ, ನೀನು ನಿಮ್ಮಪ್ಪ. ನಾಲಿಗೆ ಸಡಿಲು ಬಿಟ್ಟು ಮಾತಾಡದಿ ಅಂದ್ರೆ ಹಳ್ಳದ ಕಳ್ಳ ಉಸಗಿನ್ಯಾಗ ಹಾಕಿ ನಿನ್ನ ತುಳಿದು ಬಿಟ್ಟೇನು ನಾನ್ಯಾರು ಗೊತ್ತಾ

ಲಕ್ಷ್ಮಿ - ಭದ್ರಾ....

ಭದ್ರಿ - ಬರೀ ಭದ್ರನಲ್ಲ ವೀರಭದ್ರ. ಧೈರ್ಯದ ಸಮುದ್ರ. ನಿಮ್ಮ ಕುಲದ ಕಾಲರುದ್ರ

ಲಕ್ಷ್ಮಿ - ಏ ಹೇಗೋ ಜೋಭದ್ರ. ನಿನ್ನಂಥ ರುದ್ರಗೋಳು ಭದ್ರಗಳೂ ನಮ್ಮ ಮನ್ಯಾಗ ಜೀತ ಅದಾರ. ನಮ್ಮ ಹೊಲದಾಗಿನ ಕಸಾ ಕೀಳತಾರ. ರಾತ್ರಿ ಬಂದು ನಮ್ಮಪ್ಪನ ಕಾಲು ಒತ್ತತ್ತಾರ

ಭದ್ರಿ - ಏನೇ ಹರಾಮಿ ಕಂಡಂಗ ಮಾತಾಡತೀಯಾ ತಡಿ ನಿನ್ನ (ನಡುವಿನಲ್ಲಿದ್ದ ಚಾಕು ತೆಗೆದು)

ಲಕ್ಷ್ಮಿ - ಏ ಅದನ್ಯಾಕ ತಗದಿಯೋ ? ಅದೆಲ್ಲಿತ್ತೊ ಅಲ್ಲೆ ಇಡೋ

ಭದ್ರಿ - ತಡಿ ನಿನ್ನ ಮುಂದಲೆ ಕೂದ್ಲಾ ಕೊಯ್ದು ಕರಿ ತಗೊಂಡ ಕಳಸ್ತೀನಿ

ಲಕ್ಷ್ಮಿ - ಅಯ್ಯಯ್ಯೋ ಬ್ಯಾಡಬಿಡಲೋ. ಇನ್ನ ಮೇಲೆ ನಿನಗೇನು ಅನ್ನೋದಿಲ್ಲ. ನಿನ್ನ ಸುದ್ದಿಗೆ ಬರೋದಿಲ್ಲ. ನನ್ನ ಕೂದಲಾ ಕತ್ತರಿಸಬ್ಯಾಡಲೊ (ಕೂದಲ ಕತ್ತರಿಸುವನು) ಸನ್ಯಾಸಿ, ಧಿಕ್ಕೇಡಿ, ಪರದೇಶಿ ನನ್ನ ತಲ್ಯಾಗಿನ ಕೂದಲಾ ಕತ್ತರಿಸಿತು. ಹೋಗ್ತೀನೋ ನಮ್ಮಪ್ಪನ ಕರಕೊಂಡು ಬರ್ತೀನಿ

ಭದ್ರಿ - ನಿಮ್ಮಪ್ಪನ್ನಾದರೂ, ನಿಮ್ಮಜ್ಜನ್ನಾದರೂ ಕರಕೊಂಡು ಬಾ. ನಿನ್ನ ಮೇಲಗಟ್ಟಿ ಅವನ್ಯಾರ ಬರ್ತಾನೋ ಬರಲಿ. ಬಂದವನ ಗೋಣ ಮುರಿದು ನೇಣು ಹಾಕಿ ಬಿಡತೀನಿ. ಲಕ್ಷ್ಮಿ ನೋಡಿಲ್ಲಿ ಕಣ್ಣಿಟ್ಟು ಹೆಣ್ಣಿನ ಕರಿ ತೆಗೊಳ್ಳದೆ ಬಿಟ್ಟರೆ ನಮ್ಮಪ್ಪನ ಮಗನೇ ನಾನಲ್ಲ

ಲಕ್ಷ್ಮಿ - (ಅಳುತ್ತ) ನಿಮ್ಮ ಮನಿ ಮಸೂತಿ ಆಗಲಿ. ನಿನ್ನ ಮೈ ಉರಿದು ಹೋಗಲಿ. ನಿನ್ನ ಕಣ್ಣಾಗ ಕೀವು ತುಂಬಲಿ. ನಿನ್ನ ವಂಶ ನಿರ್ವಂಶ ಆಗಲಿ. ಹೋಗತೀನಿ ನಮ್ಮಪ್ಪನ ಕರಕೊಂಡು ಬರತೀನಿ. ನಿನ್ನ ಹೆಣಾನ ಹದ್ದು-ಕಾಗಿ ಹರಕೊಂಡು ತಿನ್ನುವಂಗ ಮಾಡದಿದ್ರ.... ಏ ನನ್ನ ಕೊಡ ತಗೋತೀನೋ

(ಲಕ್ಷ್ಮಿ ಕೊಡ ತಗೊಂಡು ಹೋಗವಳು)

ತೆರ ಬೀಳುವುದು)

# ದೃಶ್ಯ ೪

## ಜಂಗಲ್ ರಸ್ತಾ

ವೆಂಕಪ್ಪ - ಅಂತು ಸಾವುಕಾರ ಮರಿಯಪ್ಪ ಸಂಗವ್ವನ ಸೂಸಿ ಮ್ಯಾಲೆ ಕಣ್ಣಿಟ್ಟು ಒದಿಸಿಗೊಂಡಾಂತ ಸುದ್ದಿ ಬಂತ ನಮಗ. ಅಲ್ಲ ತನ್ನ ವಯಸೇನು ಆ ಹುಡುಗೀ ವಯಸೇನು ? ಹುಡುಗಿ ರೂಪಾ ಕಣ್ಣಿಗೆ ನಟ್ಟಿಲ್ಲೆ ಮದುವೆಗೆ ಸಾಲ ಕೊಟ್ಟೀನೋ ವೆಂಕಪ್ಪಾ ಅಂತಾ ನನ್ನ ಮುಂದ ಹೇಳಿದ್ದು ತಡಾನ ಇಲ್ಲ. ಒದಿಸಿಕೊಂಡಾ ಬಂದಾ. ಇಂಥವರನ್ನ ಕಂಡೆ ಹಾಡಿರಬೇಕು ನಮ್ಮ ಪುರಂದರದಾಸರು

ನಗೆಯು ಬರುತಿದೆ । ಎನಗೆ ನಗೆಯು ಬರುತಿದೆ ॥
ಜಗದೊಳಿರುವ । ಮನಜರೆಲ್ಲ ॥ ಹಗರಣ ಮಾಡುವದನು ಕಂಡು ॥ ೧ ॥
ಪರರ ವನಿತೆ ವಲುಮೆಗೊಲಿದು ॥ ಪರುಷದಿಂದ ಅವಳ
ಬೆರಮು ॥ ಹರಿಯುವ ನೀರಿನೊಳಗ ಮುಳಗಿ । ಬೆರಳು ಎಣಿಸು
ವರ ಕಂಡು ॥ ನಗೆಯು ॥ ಕಾಮಕ್ರೋಧ ಮನದೊಳಿಟ್ಟು ॥ ತಾನ
ವಿಷಯ ಪುಂಜನಾಗಿ ॥ ಸ್ವಾಮಿ ಪುರಂದರ ವಿಠಲನ ನಾಮ
ನೆನೆಯುವವರ ಕಂಡು ॥ ನಗೆಯು ॥

ಮರಿಯಪ್ಪ - (ಓಡಿ ಬರುತ್ತ) ವೆಂಕಪ್ಪಾ.... ಘಾತಾಯಿತೋ ವೆಂಕಪ್ಪಾ ಘಾತಾಯಿತೋ

ವೆಂಕಪ್ಪ - ಯಾಕೋ ಮರಿಯಪ್ಪ ಏನಾಯಿತೋ

ಮರಿಯಪ್ಪ - ಆ ಭದ್ಮಾಸ ನನ್ನ ಮಗಾ ಭದ್ರಿ ಬಡಿದು ಬಿಟ್ಟನಪಾ. ಇಷ್ಟು ಸೊಕ್ಕು ಬಂದೈತಿ ಆ ಬಡವ ನನ ಮಗ್ಗ. ಹಿರೇರು ಕಿರೇರು ಅನ್ನುವ ಹೆದರಿಕೇನ ಇಲ್ಲ

ವೆಂಕಪ್ಪ - ನೀನು ದೊಡ್ಡ ಮನುಷ್ಯ ಆಗಿ ಏನರ ಸಣ್ಣತನ ಮಾಡಿರಬೇಕು. ಅದಕ ಹೊಡದಾನ ಹೌದಲ್ಲೊ

ಮರಿಯಪ್ಪ - ಏ ಇಲ್ಲಪಾ ಸುಮ್ಮಸುಮ್ಮನೆ ಹೊಡದ

ವೆಂಕಪ್ಪ - ಸುಮ್ಮಸುಮ್ಮನೆ ಯಾಕ ಬಡೀತಾನ ? ಸುಮ್ಮನ ಇದ್ದವರನ್ನ ಬಡೀಲಿಕ್ಕೆ ಅವನಿಗ ನೆತ್ತಿ ಮ್ಯಾಲೆ ಕೋಡು ಮೂಡ್ಯಾವೇನು ? ನೀನೇನಾದ್ರೂ ಅವನ

ಅಣ್ಣನ ಹೆಂಡತಿಯ ಮೇಲೆ ಏರಿಹೋಗಿರಬೇಕು. ಅದಕ ಈ ಕಡಬಿನ ಕಾಳಗ ನಡೆದಿರಬೇಕು. ಅಲ್ಲ ಬಾಳ ಬಡದನೇನು ?

ಮರಿಯಪ್ಪ - ಬಡತಾ ಅಂದ್ರೆ ಅಂಥಿಂಥಾ ಬಡತ ಅಲ್ಲಪಾ... ಅವನು ಮಾರಿಗೆ ಬಡದಂಗ ಮುಂದಿನ ಮೂರು ಹಲ್ಲು ಆದ್ರ ಆಗ್ಯಾವು. ಆ ಒಡತಕ ನನಗೆ ಚಕ್ರ ಬಂದಂಗಾಯಿತು. ನಿಂತ್ರ ಮತ್ತ ಬಡದಾನೂ ಅಂತ ಓಡಿಬಂದೆ ನೋಡು. ಇದಕ್ಕ ಹ್ಯಾಂಗ ಮಾಡೋದು

ವೆಂಕಪ್ಪ - ಹ್ಯಾಂಗೇನು ಮಾಡೋದು ಈ ಕೆಲಸ ಮಡೋವವರಿಗೆ... ಊರೊಳಗ ದೊಡ್ಡ ಮನುಷ್ಯರು ಅನ್ನಿಸಿಕೊಂಡು ಪರಮಸಿ ಹೆಣ್ಣ ಮಕ್ಕಳ ಪಾಪ ದೃಷ್ಟಿಯಿಂದ ನೋಡತೀರಪ್ಪಾ ... ಅಂದ ಮ್ಯಾಲೆ ಯಾಕ ಬಿಟ್ಟಾರೂ ...

ಮರಿಯಪ್ಪ - ಯಾರ ಬಿಟ್ಟಾರೋ ಎಲ್ಲರೂ ನೋಡ ನೋಡ್ತಾರಲ್ಲ. ಭೂಮಿ ಮ್ಯಾಲಿನ್ನ ಮನುಷ್ಯರ ಮಾತಿರಲಿ ದೇವರಂಥ ದೇವರೆನ್ನಿಸಿಕೊಂಡ ಮುಗಿಲ ಮೇಲಿನ ಚಂದ್ರ, ಸ್ವರ್ಗದ ಇಂದ್ರ ಇವರ ಬಿಟಲ್ಲಲ್ಲೊ ಪರಸ್ತ್ರೀನ ?

ವೆಂಕಪ್ಪ - ಅವರ ಬಿಟ್ಟಿಲ್ಲಾಂತ ಅವರ ಪಾಡೇನಾಗೇತಿ ಗೊತ್ತಾ

ಮರಿಯಪ್ಪ - ಏನಾಗೈತಿ ಬಾಳ ಅಂದ್ರ ಮೈಮ್ಯಾಲೆ ಒಂದೆರಡು ಕಲೆ ಬಿದ್ದಾವು

ವೆಂಕಪ್ಪ - ಅದೇ ಅವರ ಮೈಮೇಲೆ ಒಂದೆರಡು ಕಲಿ ಬಿದ್ದಾವು. ನಿನ ಬಾಯನ್ನ ನಾಲ್ಕ ಹಲ್ಲ ಆದ್ರ ಆಗ್ಯಾವು. ನಂದೊಂದು ಕಾಲು ಹೋಯಿತ. ನಿಂದೊಂದು ಕಿವಿ ಹೋಯಿತು ಇವು ಹಿಂಗ ...

ಮರಿಯಪ್ಪ - ಅದೇನ ಇರಲಿ ವೆಂಕಪ್ಪ, ನನ್ನ ಬಡಿದು ಅವಮಾನಗೊಳಿಸಿದ ಆ ಭದ್ರಿಯ ಮೈಚರ್ಮ ಸುಲಿಸುವಂತೆ ಹೊಡಿಸಬೇಕು. ಅವನೆಂದು ನಮ್ಮ ಹೆಸರೆತ್ತದಂತೆ ಮಾಡಬೇಕು. ವೆಂಕಪ್ಪಾ ತುಪ್ಪ ತಿಂದ ನಿನ್ನ ತಲೆ ಸ್ವಲ್ಪ ಗರಂ ಆದರೆ ಸಾಕು ಆ ಭದ್ರಿ ನರಂ ಆಗೇ ತೀರತಾನ

ಲಕ್ಷ್ಮಿ - (ಒಳಗಿನಿಂದ) ಅಪ್ಪಾ (ಬಂದು) ಅಪ್ಪಾ ಆ ಭದ್ರಿ (ಮರಿಯಪ್ಪ, ವೆಂಕಪ್ಪ ಹೆದರಿ ಓಡುವರು)

ಮರಿಯಪ್ಪ - ಎಲ್ಲಿ

ಲಕ್ಷ್ಮಿ - ಅಲ್ಲೇ

ಮರಿಯಪ್ಪ - ಯಾಕ ಹೆದರಿ ಓಡಿ ಹೋಗ್ತಿಯೋ

ವೆಂಕಪ್ಪ - ಆ ಕಿಡಿಗೇಡಿ ಹುಡುಗನ ಹೆಸರು ತಗದರೆ ಸಾಕು. ಹೆದರಿ ಚೀಳುವಂಗ ಆಗತದ ಏನ ಮಾಡದ್ನಪ್ಪ ಭದ್ರಿ

ಲಕ್ಷ್ಮಿ - ನಾನು..... ನಾನು..... ಹಳ್ಳಕ್ಕ ಹೋಗಿ ಕೊಡ ತುಂಬುತಿದ್ದೆ. ಆಗ ನನ್ನ ಹತ್ರ ಬಂದು... ನನ್ನ ಕೈಹಿಡಿದು ಜಗ್ಗೀ... ನನ್ನ ನಲಿಕ್ಕ ಕೆಡವಿ.....

ಮರಿಯಪ್ಪ - ಏನ ಮಾಡಿದನವ್ವ

ವೆಂಕಪ್ಪ - ಏ ಮಗಳಿಗೆ ಹಾಗೆಲ್ಲ ಕೇಳತಾರೇನೋ, ನಿನಗ ಕೇಳಾಕ ಬರುದಿಲ್ಲ. ನೀನು ಸುಮ್ಮನಿರು. ಅಂಥಾದ್ದು ಆ ಹುಡುಗಿ ಹೇಳತದ. ಭದ್ರಿ ನನ್ನ ಹತ್ತರ ಬಂದೂ ನನ್ನ ಕೈಹಿಡದ ಜಗ್ಗೀ ನನ್ನ ನೆಲಕ್ಕ ಕೆಡವಿ ಏನ ಮಾಡಿದ್ದು ಅಂತಾ ಕೇಳ್ತಾನಿವನು. ಏನವ್ವ ಇದು (ಲಕ್ಷ್ಮಿ ಮಣ್ಣು ಜಾಡಿಸುವಳು) ಏನವ್ವ ಇದು

ಲಕ್ಷ್ಮಿ - ಮಣ್ಣು.....

ವೆಂಕಪ್ಪ - ಜಾಡಸ್ತಿಯೇನು ಏನಾಯಿತು ?

ಲಕ್ಷ್ಮಿ - ನಾನು ಹಳ್ಳಕ್ಕ ಹೋಗಿ ಕೊಡಾ ತುಂಬತಿದ್ದೆ

ವೆಂಕಪ್ಪ - ಅಲ್ಲವ್ವ ನಿಮ್ಮಪ್ಪ ಊರಿಗೇ ಶ್ರೀಮಂತ. ಮಡಿಯಾಕ ಹತ್ತಿಪ್ಪತ್ತು ಆಳುಗಳದಾರ. ನೀರ ತರಕಾಂತ ಇಬ್ಬರದಾರ. ಅವರ ತಂದು ಹಾಕತಾರ. ಇಷ್ಟಿದ್ದು ಅದೊಂದು ಕೊಡ ಬಗಲಾಗ ಇಟಗೊಂಡು ಟಣ ಟಣ ಜಿಕ್ಕೊಂತ ಯಾಕ ಹೋಗ್ತೀಯವ್ವ

ಲಕ್ಷ್ಮಿ - ನಾನು ಚಂದಕ ಹೋಗ್ತೀನಿ

ವೆಂಕಪ್ಪ - ಚಂದಕ ಹೋಗಿ ಈ ರೀತಿ ಜಗಳ ತಗೊಂಡು ಬರ್ತೀದಿ

ಲಕ್ಷ್ಮಿ - ನಾನು ಕೊಡಾ ತುಂಬತಿದ್ದೆ

ವೆಂಕಪ್ಪ - ಕೊಡಾ ತುಂಬತಿದ್ಯೋ, ಏನ ಕೊಡದಾಗ ನೀರ ತುಂಬತಿದ್ಯೋ

ಲಕ್ಷ್ಮಿ - ನೀರು ತುಂಬತಿದ್ದೆ

ವೆಂಕಪ್ಪ - ಏನಾಯಿತ್ತೂ ?

ಲಕ್ಷ್ಮಿ - ಆ ಭದ್ರಿ ನನ್ನ ಹತ್ತಿರ ಬಂದು ನನ್ನ ಕೈಹಿಡಿದು ಜಗ್ಗಿ ನನ್ನ ನೆಲಕ್ಕ ಕೆಡವಿ ಹೂಂ (ಕೂದಲ ತೋರಿಸಿ) ನನ್ನ ಮುಂದಲೆ ಕೂದಲಾ ಕತ್ತರಿಸಿದ

ವೆಂಕಪ್ಪ - ಇಷ್ಟ ಹೌದಲ್ಲ... ಎಲೆ ಹುಡುಗ ಎಂಥ ಪಾಪದ ಕೆಲಸಕ ಕೈಇಟ್ಟಿಯೋ ? ಮದುವೆಗೆ ನಿಂತ ಹುಡುಗಿಯ ಮುಂದಲೆ ಕೂದ್ಲಾ ಕತ್ತರಿಸಿದಿ. ಮರಿಯಪ್ಪನ ಮುಖಕ್ಕೆ ಬಡಿದು ನಾಲ್ಕು ಹಲ್ಲ ಅದ್ರ ಮಾಡದಿ. ಛೇ ಅಲ್ಲಪಾ ಇದು

ಲಕ್ಷ್ಮಿ - ಅಪ್ಪಾ ನಿನಗೂ ಹೊಡದನಾ ಅವಾ

ಮರಿಯಪ್ಪ - ಏ ಇಲ್ಲವಾ ಇಲ್ಲ

ವೆಂಕಪ್ಪ - ಇದು ಹಿಂಗ ಹೇಳತ್ತ. ಅದ ಹಂಗ ಹೇಳತ್ತ. ಇವು ಎರಡೂ ಹಾಗ್ಗೇಡಿಸಿ

ಮರಿಯಪ್ಪ - ಲೇ ಭದ್ರಿ ನಿಮಗ ಸಾಲಾ ಕೊಟ್ಟವನೋ ನಾನು. ನಿಮ್ಮ ಹೊಲಾ ಮನಿ ಬರಿಸಿಗೊಂಡವನೋ ನಾನು. ನಿಮ್ಮೆಲ್ಲ ಆಗುಹೋಗುಗಳು ನನ್ನ ಕೈಯಲ್ಲಿರುವಾಗ ನನ್ನ ಮೇಲೆ ಕೈ ಮಾಡಿದಯಾ? ಲೇ ಹುಡುಗಾ ಹಾವು

ತಿಂದು ಬದುಕುವ ಹವ್ಯಾಸಕ್ಕೆ ಬಿದ್ದಿಯಾ ? ನೋಡುತ್ತಿರು ವೆಂಕಪ್ಪ ಬೇಕಾದಷ್ಟು ದುಡ್ಡು ಖರ್ಚಾಗಲಿ ಆ ಭದ್ರಿ ಕೊಲೆ ಮಾಡಸೇ ತೀರತಿನಿ

ಲಕ್ಷ್ಮಿ - ಹೌದಪ್ಪಾ ಬೇಕಾದಷ್ಟು ರೊಕ್ಕಾ ಖರ್ಚಾಗಲಿ. ಆ ಭದ್ರಿ ಕೊಲೆ ಮಾಡಸೇ ತೀರುವದು

ಮರಿಯಪ್ಪ - ಈಗೀಂದಿಗ ರೆಡಿ ಮಾಡ್ತೀನಿ ಕೊಲೆ ಮಾಡಸಾಕ ಕೈಯಾಗ ಹುಡುಗರದಾರ ಹೊತ್ತು ಹುಟ್ಟುದರೊಳಗೆ ಅವನ ಕೊಲೆ ಮಾಡಿಸೇ ತೀರತೀನಿ

ಲಕ್ಷ್ಮಿ - ನಡಿಯಪ್ಪಾ (ಹೋಗಹತ್ತುವಳು. ವೆಂಕಪ್ಪ ತಡೆದು)

ವೆಂಕಪ್ಪ - ಏ ತಡಿ ಕೊಲೆ ಮಾಡಿಸೋದು ಅಂದ್ರ ಅದೇನು ತಗಣೆಯಲ್ಲ. ಹುಡುಗರ ಮಾತಿಗೆ ಹಟಕ್ಕ ಬಿದ್ದು ದುಡುಕಿ ಊರಿಗ ಕಂಟಕ ತಂದುಕೋ ಬ್ಯಾಡ. ಭದ್ರಿ ಮನಿಯವರೆಲ್ಲ ನಿನ್ನ ಕೈಯ್ಯಾಗ ದುಡಿತಾರ. ನೀ ಹೇಳಿದಂಗ ಕೇಳ್ತಾರ. ಹೀಗಿದ್ದು ಯಾಕಪ್ಪ ದುಡುಕೋದು ? ಈಗಿದ್ದ ಸ್ಥಿತಿಯಲ್ಲಿ ಅವರ ಮನಿಗೆ ಹೋಗೋದು ಹೇಳೋದು. ಸಂಗಪ್ಪ ನಿನ್ನ ಮಗನಿಗೆ ಬುದ್ಧಿಹೇಳು ಇರದಿದ್ದರ ಪರಿಸ್ಥಿತಿ ಕೆಡತದ, ಸಿದ್ದ ನಿನ್ನ ತಮ್ಮಗ ಬುದ್ಧಿ ಹೇಳು, ಹೇಳೋದು ಸಾಮೋಪಾಯಕ್ಕ ಒಗ್ಗಿದರ ಸರಿ ಹೋಯಿತು. ಇರದಿದ್ದರ ದಂಡೋಪಾಯ. ಹಿಂಗ ಬಜಾರದಾಗ ಹಾಸಿಹೋಗೋದು ಊರ ಜನರೆಲ್ಲ ನಿಮ್ಮನ್ನ ನೋಡಬೇಕು

ಲಕ್ಷ್ಮಿ - ನೋಡಬೇಕು

ವೆಂಕಪ್ಪ - ನೋಡಿದವರೆಲ್ಲ ಉಗಳಲಿ

ಲಕ್ಷ್ಮಿ - ಉಗಳಲಿ

ಮರಿಯಪ್ಪ - ಯಾರಿಗೆ

ವೆಂಕಪ್ಪ - ಯಾರ ತಪ್ಪಾಗಿರತ್ತೋ ಅವರಿಗ (ಹೋಗುವರು)

## ದೃಶ್ಯ ೫

### ಸಂಗವ್ವನ ಮನೆ

(ಸಿದ್ದಣ್ಣ ಜ್ವರದ ತಾಪದಿಂದ ಕುಳಿತಿದ್ದಾನೆ. ಪಾರ್ವತಿ ನೀರಿನ ಕೊಡ ಹೊತ್ತುಕೊಂಡು ಬಂದು ಒಳಗೆ ಹೋಗಿ ಇಳಿಸಿ ಬರುವಳು)

ಪಾರ್ವತಿ - (ಗಂಜಿ ತಂದು) ಗಂಜಿ ಕಾಸಿದೀನಿ, ಸ್ವಲ್ಪ ಕುಡಿತೀರಾ ?

ಸಿದ್ದಣ್ಣ - ನಾನೊಲ್ಲೆ ಪಾರೂ, ಬಾಯಿ ರುಚಿ ಇಲ್ಲ

ಪಾರ್ವತಿ - ಜ್ವರದ ತಾಪಕ್ಕೆ ಹಾಗಲ್ಲ ಆಗುತ್ತೆ. ಬೆವರು ಬಂದಾಗ ಒರಿಸಿಕೊಳ್ಳುತಾ ಇರ್ರಿ ಅಂತಾ ಎಷ್ಟು ಸಲ ಹೇಳಬೇಕು ? ನಿಮಗ (ಸೆರಗಿನಿಂದ ಬೆವರು ಒರಿಸಿ) ಹೂ ಕುಡಿರಿ ಇದನ್ನ

ಸಿದ್ದ - ಬಲು ಹಟಮಾರಿ ನೋಡ ಪಾರು ನೀನು. ಒಂದು ಮಾತಿಗೆ ಬಿಡುವವಳೇ ಅಲ್ಲ ?

ಪಾರ್ವತಿ - ಹ್ಯಾಂಗ ಬಿಡಬೇಕು. ಬಾಯಿ ರುಚಿ ಇಲ್ಲ ಅಂತ ಈ ಎರಡು ದಿವ್ಸದಿಂದ ನೀವು ಊಟಾನೆ ಮಾಡಿಲ್ಲ. ಈಗ ಸ್ವಲ್ಪ ಗಂಜಿ ಕುಡಿಲಿಕ್ಕ ಬೇಸರ ಮಾಡಿಕೊಂಡರೆ ಹೇಗೆ ? ಕುಡಿರಿ ಇದನ್ನ (ಕುಡಿಸುವಳು)

ಸಿದ್ದ - (ಗಂಜಿ ಕುಡಿದು) ಭದ್ರಿ ಬಂದ್ರೆ ಅವನಿಗಷ್ಟು ಐತಾ ಗಂಜಿ. ಪಾಪ ನಿನ್ನೆ ಊಟವಿಲ್ಲದೆ ಉಪವಾಸ ಮಲಗಿಬಿಟ್ಟ. ಹಾಳಾದ್ದು ನನಗೀ ಜ್ವರ ಬಂದು ವಾರದ ಕೂಲಿನ ಕಟ್ಟು ಮಾಡಿ ನಿಮ್ಮನ್ನೆಲ್ಲ ಉಪವಾಸ ಕೆಡವಿತು

ಪಾರ್ವತಿ - ಇದಕ್ಕೆಲ್ಲ ದುಃಖ ಪಡಬಾರದು. ಪ್ರಪಂಚದಲ್ಲಿ ಬಡತನ ನಮ್ಮೊಬ್ಬರಿಗೆ ಇದೇ ಏನು ? ನಮ್ಮಂತ ಸಾವಿರಾರು ಜನ ಉಪವಾಸ ವನವಾಸ ಅನುಭವಿಸ್ತಾ ಇಲ್ಲವೇನು ? ಅನ್ನ ಇರದಿದ್ರೇನಾಯಿತು. ನೀರಿದೆಯಲ್ಲ ಕುಡಿದು ಮಲಗಲಿಕ್ಕ

ಸಂಗವ್ವ - (ಸಂಗವ್ವ ಉಡಿಯಲ್ಲಿ ಜೋಳ ತರುವಳು) ಹೂಂ ಅಣಕದ ಮಾತು ನನಗ ಗೊತ್ತಿಲ್ಲೇನೂ ? ಸಂಗವ್ವ ಸಾಲ ಮಾಡ್ತಾಳ ಅಂತಾರ ಎಲ್ಲರೂ. ಸಂಗವ್ವ ಸಾಲ ಮಾಡ್ತಾಳ ಹೌದು ನಾನೊಬ್ಬಕಿನೇ ಸಾಲ ಮಾಡಿನೇನು ? ಮತ್ಯಾರು ಸಾಲಾನ ಮಾಡಾಕಿಲ್ಲೇನು ? ಸಾಲಾ ಮಾಡಿದರ ನಾನೇನೂ ಹೊಟ್ಟೆಗ

ತಿಂದಿಲ್ಲ ಮಗನ ಮದುವೆ ಮಾಡಿನಿ. ಸಂಗವ್ವ ಮಾಡಿದ ಸಾಲಾನ ಸಂಗವ್ವನ ಮಕ್ಕಳೂ ತೀರಿಸಲಾರದಷ್ಟು ಕೈಲಾಗದವರೇನು ಹೂ ಹೇಳಕ ಬಂದಾರಿವರು?

ಸಿದ್ದ - ಏನವ್ವ ಅದು ಯಾಕ ಕೂಗತಿಯಾ ಏನಾಯಿತು ?

ಸಂಗವ್ವ - ನೋಡಿದ್ಯಾ... ಊರಾಗ ಮಂದೆಲ್ಲ ಅಣಕದ ಮಾತಾಡತಾರೆ. ಊರಾಗ ಯಾರೂ ಸಾಲಾ ಮಾಡಿ ಮದುವಿನೇ ಮಾಡಿಲ್ಲೇನು. ಸಂಗವ್ವ ಸಾಲಾ ಮಾಡಿ ಬಂಗಾರದಂಥ ಸೊಸಿನ್ನ ತಂದಾಳಲ್ಲಾ ಅಂತ ಇವರಿಗೆಲ್ಲಾ ಹೊಟ್ಟೆ ಕಿಚ್ಚು. ನನಗ ಗೊತ್ತಿಲ್ಲೇನು, ಈ ಊರಾಗಿನ ಹಕಿಕತ್, ಬಾರವ್ವ ತಗೋ ಜೋಳಾನ ಗಂಜಿ ಬೇಸು

ಸಿದ್ದ - ಏನವ್ವ ಇದು ಹೊರಗ ಹೋದರ ಸಾಕು, ನ್ಯಾಯದ ಹೂರಿನ ತಗೊಂಡು ಬರತೀಯಲ್ಲ ?

ಸಂಗವ್ವ - ಹೋಗ್ಲಿ ಬಿಡಪಾ, ಹೆಂಗಸರ ಮಾತು ನಿನ್ಯಾಕೆ ತಲಿಗೆ ಹಚ್ಚಗೊಂತಿಯಾ ? ಜ್ವರ ಬಿಟ್ಟಿತ ಹೌದಲ್ಲೊ ? ಗಂಜಿ ಕುಡಿದಿಯಾ ? ಬೆವರ ಒರಿಸಿಗೊ ... ಮೈಯ್ಯಾಗ ಹಿಂಗ ಇರಬಾರದು (ಸೆರಗಿನಿಂದ ವರಸುವಳು)

ಗುಂಡ - (ಗಾಬರಿಯಿಂದ ಓಡಿಬಂದು) ಸಂಗವ್ವತ್ತಿ ಸಂಗವ್ವತ್ತಿ ಸಾವಕಾರ ಮರಿಯಪ್ಪನವರೂ, ಅವರ ಮಗಳೂ, ಕುಲಕರ್ಣಿ ವೆಂಕಪ್ಪ, ತಳವಾರ ಕೆಂಚಪ್ಪ ನಿಮ್ಮ ಮನಿಗೇ ಬರತಾರವ್ವ

ಸಂಗವ್ವ - ಅದೇ ನೀನೂ ಗಟ್ಟಿಯಾಗಿ ಮಲಗಿಯಾ ? ಅಂತ ಮಾತಾಡಿಸಿ ಹೋಗಬೇಕು ಅಂತ ಬರತಿರಬೇಕು. ಯಾಕಪ್ಪಾ ಗುಂಡ

ಸಿದ್ದ - ಬಡವರ ಕಷ್ಟಸುಖಾ ವಿಚಾರ ಮಾಡಲಿಕ್ಕೆ ಶ್ರೀಮಂತರೇನಾದರೂ ಬರತಾರೇನವ್ವ ? ಅದೆಲ್ಲ ನಿನಗೇನು ಗೊತ್ತು. ನೀನು ಸುಮ್ಮನಿರು, ಯಾರೂ ಗುಂಡ ಇಷ್ಟ ಜನಾ ಈಗ್ಯಾಕ ನಮ್ಮನಿಗೆ ಬರ್ತಾರಂತೆ

ಗುಂಡ - ನಿಮ್ಮ ಭದ್ರಿ ಇವತ್ತು ಹಳ್ಳದಾಗ ಆ ಮರಿಯಪ್ಪನ ಮಗಳಿಗೆ ಏನೋ ಮಾಡಿದನಂತಪ್ಪ

ಸಿದ್ಧ - ಅಂ ಹೌದೇನೋ... ಕೇಳಿದೇನವ್ವ ಮತ್ತೇನೋ ಮಾಡಿದಾನಲ್ಲ ಇವನು. ಆ ಸಾವಕಾರ ಮಗಳಿಗೇನಾದ್ರು ಮಾಡೋದು ಅವರ ಮನೆಯಲ್ಲಿ ಮಡಿಯೋ ನನ್ನ ಪ್ರಾಣಕ್ಕ ತಂದಿಡೋದು. ಲೇ ಗುಂಡಾ ಭದ್ರಿ ಎಲ್ಲಿವಾನ ಗೊತ್ತೇನೋ ನಿನಗ ?

ಗುಂಡ - ಇಷ್ಟೊತ್ತನಾ ಹಳ್ಳದಾಗ ಮೀನಾ ಹಿಡಿತಿದ್ದ. ನಾನು ಮನಿಗ ಹೇಗೋನು ಬಾ ಅಂದ್ರೆ ಬರಲಿಲ್ಲ

ಸಂಗವ್ವ - ನೀನು ಕರೆದರೂ ಯಾಕ ಬರಲಿಲ್ಲವಾ ಗುಂಡಾ

ಗುಂಡ - ಈಗ ಬಂದ್ರೆ, ನಮ್ಮವ್ವ, ನಮ್ಮಣ್ಣಾ ಬಡಿತಾರ. ನಾ ಬರಾಕವಲ್ಲೆ, ಅಂತಾ ಹೇಳಿ ಮತ್ತೆ ಎತ್ತಗೋ ಹೋದ್ನಪ

ಸಿದ್ಧ - ಹೋದ್ನಾ... ಹೋಗಿದ್ದಾನು, ಅವನ್ಯಾಕ ಬಂದಾನು ? ಮಾಡೂ ಕೆಲಸಾನೆಲ್ಲ ಮಾಡೆ ಹೋಗಿದ್ದಾನೆ. ಲೇ ಗುಂಡಾ ? ಅವನು ಎಲ್ಲಿದ್ರು ಹುಡುಕಿ ನಿಮ್ಮಣ್ಣಾ ಕರಿತಾನ ಬಾ ಅನ್ನು. ಬರಿಲಿಲ್ಲಾ, ಎಳಕೊಂಡು ಬಾ

ಸಂಗವ್ವ - ಹೌದಪ್ಪಾ ಗುಂಡ, ಅಷ್ಟ ಮಾಡತಿಯಾ

ಗುಂಡ - ಹೊಡಿಯಾಕ ಬರ್ತಾನತ್ತೆ ಅವನು

ಸಿದ್ದಣ್ಣಾ - ಹೊಡಿಯೊದಕ್ಕೆ ಬಂದ್ರೆ ನಿಮ್ಮಣ್ಣನ ಮುಂದೇ ಹೇಳ್ತೀನಿ ಅಂತ ಹೇಳೊ ಅಂದ್ರ ತಾನ ಬರ್ತಾನೆ, ಹೋಗೂ ಕರಕೊಂಡು ಬಾ ಅವನ್ನ. ಹೋಗು ಗುಂಡಾ (ಗುಂಡ ಹೋಗವನು)

ಲಕ್ಷ್ಮಿ - (ಬರುತ್ತ) ಅಪ್ಪ ವೆಂಕಪ್ಪ, ಕಾಕಾ ಕೆಂಚಪ್ಪಜ್ಜ ಎಲ್ಲರೂ ಬರ್ರಿ ನಾನೇ ಮುಂದ ಹೋಗತೀನಿ (ಬರುವರು)

ಮರಿಯಪ್ಪ - ಸಂಗವ್ವ ನಿನ್ನ ಮಗನಿಗೆ ಬುದ್ಧಿ ಹೇಳಿ ಬಂದೋ ಬಸ್ತಿನ್ಯಾಗ ಇಡತೀಯೊ ಏನ ಚರ್ಮ ಸುಲಿಸಿ ಮಿಣಿ ಮಾಡನಂತಿಯಾ ?

ಕೆಂಚಪ್ಪ - ಸಂಗವ್ವ ಆ ಭದ್ರಿಗೆ ಇನ್ನಾದರೂ ಕೀಟಕತನಾ ಬಿಟ್ಟು ಮಂದಿ ಮಕ್ಕಳಂಗ ಸುಮ್ಮನಿರಲಿಕ್ಕೆ ಹೇಳತಿಯೋ ? ಏನ ಗೌಡರ ಗೂಳಿಯಂಗ ತಿರಗುಂತಿಯೋ ?

ಸಂಗವ್ವ - ಈಗೆನಂಥಾದ್ದು ಮಾಡಿದಾನಪ್ಪಾ ನಮ್ಮ ಭದ್ರಿ

ಮರಿಯಪ್ಪ - ಇನ್ನಂಥಾದ್ದು ಮಾಡಬೇಕು ಆ ನಿನ್ನ ಮಗಾ. ಮಾಡಿದ ಕೆಟ್ಟತನಾ ಹೇಳೊದಕ್ಕ ನಮಗಿಷ್ಟವಿಲ್ಲ. ಯಾವ ಬಾಯಿಂದ ಹೇಳಬೇಕು ಆ ಹೊಲಸತನಾನ

ವೆಂಕಪ್ಪ - ಅವನ ಬಾಯಿ ಅನ್ನೋದು ಬ್ಯಾನಿ ಆಗಿಬಿಟ್ಟಿತ್ತು. ಅದೀಗ ಹೇಳಾಕ ಸಹಿತ ಬರೋದಿಲ್ಲ

ಸಂಗವ್ವ - ಅಂಥಾದ್ದೇನೂ ಮಾಡಿದ್ಯಾನಪ್ಪ ನಮ್ಮ ಭದ್ರಿ

ವೆಂಕಪ್ಪ - ನೋಡ ಸಂಗವ್ವ, ನಿನ್ನ ಮಗಾ ಮಾಡಿದ ಕೆಲಸ ಪರಮ ನೀಚತನದ್ದು. ನೀನು ಪಡೆದ್ದು ಮಗನ್ನಲ್ಲ, ಸಂಗವ್ವ ಹಾವಿನ ಮರಿಯವ್ವ, ಹಾವಿನ ಮರಿ. ಈ ಹುಡುಗಿ ಶೀಲ ಕೆಡಿಸಲಿಕ್ಕೆ ಹೋಗಿದ್ದ

ಲಕ್ಷ್ಮಿ - ಊಂ... ಹೂಂ... ಹೌದು

ಸಂಗವ್ವ - ಶೀಲ ಕೆಡಿಸಲಿಕ್ಕೆ ??? ನನ್ನ ಮಗನೆ ? ... ಅಯ್ಯೋ ಪಾಪಿಷ್ಟ, ಎಂಥಾ ಕೆಲಸಕ್ಕೆ ಕೈ ಇಟ್ಟೆಪ್ಪಾ ಇವನು

ವೆಂಕಪ್ಪ - ಈ ಹುಡುಗಿ ಶೀಲ ಕೆಡಿಸಲಿಕ್ಕೆ ಹೋಗಿದ್ದ. ಹುಡುಗಿ ಒಪ್ಪಲಿಲ್ಲ ಹಿಡಿದು ಮುಂದಲೆ ಕೂದಲಾ ಕೊಯಿದು ಕಳಿಸ್ಯಾನ

ಸಂಗವ್ವ - ಅಯ್ಯೋ ಶಿವ ಶಿವ... ಎಂಥಾ ದುರ್ಬುದ್ಧಿ. ಮದುವೆಗೆ ನಿಂತ ಹುಡುಗಿಯ ಮುಂದಲೆ ಕೂದಲಾ ಕೊಯ್ದು ಮುಂದ ಯಾವ ನರಕಕ್ಕೆ ಹೋಗಬೇಕು ಅಂತಿದ್ದಾನು ಈ ಹಂದಿಯಂಥವನು

ವೆಂಕಪ್ಪ - ಮುಂದಿನ ತಿಂಗಳಲ್ಲಿ ಸಾವುಕಾರ ತನ್ನ ಮಗಳ ಮದುವೆ ಮಾಡುವ ವಿಚಾರ ಇಟ್ಟುಕೊಂಡಿದ್ದು, ಹಿಂಗ ಮಾಡಿದರೆ ಹ್ಯಾಂಗ ಈ ಹುಡಿಗ್ಗ... ಕೂದಲ ಯಾವಾಗ ಬರಬೇಕು... ಇದರ ಮದುವೆ ಎಂದಾಗಬೇಕು... ಮುಹೂರ್ತ ಸಿಗತಾವೇನು ? ಒಂದು ನಮೂನಿ ಕಟಿಂಗ ಮಾಡಿ ಕೈ ಬಿಟ್ಟಾನ... ಇನ್ನೇನು ಕ್ರಾಫ್ ಬಾಚಿಕೊಂಡು ಆಡ್ಯಾಡಬೇಕಾ ?

ಸಂಗವ್ವ - ಸಾಕಾಯಿತಪ್ಪ ನನಗ ಸಾಕಾಯಿತು. ಎಲೋ ಸಿದ್ದ ನೀನ ಹೋಗಿ ಅವನು ಎಲ್ಲಿದ್ರೆ ಎಳಕೊಂಡ ಬಾ. ಇವತ್ತ ಅವನ ಜೀವ ತಗದ ಮ್ಯಾಲೆ, ನಾನ ಜಳಕಾ ಮಾಡ್ತೀನಿ (ಸಂಗವ್ವ ಕುಡುಗೋಲು ತೆಗೆದುಕೊಳ್ಳುವಳು. ಪಾರ್ವತಿ ಕಸಿದುಕೊಳ್ಳುವಳು).

ಪಾರ್ವತಿ - ಅತ್ತೆ ಇವರ ಮಾತ ನಂಬಿ ದಯವಿಟ್ಟು ನೀವೂ ಭದ್ರಿಗೆ ಏನೂ ಅನ್ನಬೇಡಿ. ಹೆತ್ತ ಮಗನಿಗೆ ತಾಯಿ ಕರುಣೆಯಿಂದ ಕೊಟ್ಟಿದ್ದು ವರವಂತೆ, ಕೋಪದಲ್ಲಿ ಕೊಟ್ಟಿದ್ದು ಶಾಪವಂತೆ. ಮೊದಲು ಇವರೇನಾದರೂ ಅಪಮಾನ ಮಾಡಿರಬೇಕು. ಸಹನೆ ಇಲ್ಲದ ನಮ್ಮ ಭದ್ರ ಇವಳ ಕೂದಲಾ ಕತ್ತರಿಸಿರಬೇಕು. ಇವರ್ಯಾವ ಮಹಾ ಸಂಪನ್ನರೆಂದು ಇವರ ಮಾತ ನಂಬಿ ಮಗನ ಮೇಲೆ ಈ ರೀತಿ ಬೆಂಕಿ ಕಾರತೀರಿ ?

ಲಕ್ಷ್ಮಿ - ಸಾಕ ಸುಮ್ಮನಿರೆ, ನೀನೂ ಮಹಾ ಸಂಪನ್ನೆ. ನಿನ್ನ ಮೈದುನ ಸುದ್ದಿಗ ಹೋಗಲಿಕ್ಕೆ ನಮಗೇನೂ ತರುಬಿ ನಿಂತಿತ್ತು

ಪಾರ್ವತಿ - ಹಾಗಿದ್ರ ನಿನ್ನ ಮುಂದಲೆ ಕೂದಲಾ ಕತ್ತರಿಸಲಿಕೆ ಅವನಿಗೇನು ತರುಬಿ ನಿಂತಿತ್ತು. ಸಾವಕಾರ ಮಕ್ಕಳು ಏನ ಮಾಡಿದರು ನಡಿತೈತಿ ? ಯಾಕ ಸಾವಕಾರ್ರು ಕಳಕೊಂಡ ಮಾನಾನ ದುಡ್ಡಿನಿಂದ ಉಳಿಸಿಕೊಳ್ಳುವ ಶಕ್ತಿ ಕೊಟ್ಟಿದಾನಲ್ಲ ಆ ಚಂಡಾಲ ದೇವರೂ ಅಲ್ಲಾsss

ಲಕ್ಷ್ಮಿ - ಹೂಂ...

ಮರಿಯಪ್ಪ - ಲೇ ಸಿದ್ದ ನಿನ್ನ ಹೆಂಡತಿ ಹದ್ದುಮೀರಿ ಮಾತಾಡತಾಳೆ. ನಾನು ಎಂಥವನು ಅನ್ನೋದು ಗೊತ್ತಿಲ್ಲ ಅವಳಿಗ

ವೆಂಕಪ್ಪ - ನೀನು ಎಂಥವನು ? ನಿನ್ನ ಮಗಳೂ ಎಂಥಾ ಸಿಟ್ಟಿಂದು... ಅಂತಾ ಎಲ್ಲರಿಗ ತೋರಿಸಕೊಂಡು ಬಂದಿನಲ್ಲಪ್ಪಾ. ನೀನು ಸುಮ್ಮನಿರು

ಸಂಗವ್ವ - ಕೈ ಮುಗಿತೀನಪ್ಪ. ಮನಿಗೆ ಬಂದ ಮೇಲೆ ನಾನಲ್ಲ ಅವನಿಗೆ ಬುದ್ಧಿ ಕಲಿಸೀನಿ.

ತಂಗೀ ನೀನೂ ವಯಸ್ಸಿನಲ್ಲಿ ಸಣ್ಣವಳು. ನನ್ನ ಮಗಾ ಮಾಡಿದ್ದು ಅಪರಾಧ ಬಲು ದೊಡ್ಡದು, ನನ್ನ ಮುಖಾ ನೋಡಿ ಇದೊಂದು ಸಲ ನನ್ನ ಮಗನ್ನ ಕ್ಷಮಿಸಿ ಬಿಡವ್ವ (ಪಾದಕ್ಕೆ ಬೀಳುವಳು)

ವೆಂಕಪ್ಪ - ಛೇ ಛೇ ಇದೇನು ಮಾತು ಅಂತ ಆಡತೀ ಸಂಗವ್ವ, ವಯಸ್ಸಿನಲ್ಲಿ ದೊಡ್ಡವಳಾಗಿ ನೀನು ಆ ಹುಡುಗಿ ಕಾಲ ಹಿಡಿಯುವದೇ ? ಏಳು ಸಂಗವ್ವ ಆಗಿದ್ದು ಆಗಿ ಹೋಯಿತು. ಕೆಂಚಪ್ಪ ಯಾವಾಗ ಯಜಮಾನ ಮನುಷ್ಯಲೋ ಸಣ್ಣ ಹುಡುಗಿ ಕಾಲ ಹಿಡಿದು ವಿನಯದಿಂದ ಕೇಳತಾಳೆ ಅಂದ ಮ್ಯಾಲೆ ನ್ಯಾಯ ಉಳೀತೇನು - ನಿಕ್ಕಾಲಿ ನಡೀರಿ

ಮರಿಯಪ್ಪ - ಏನೋ ನ್ಯಾಯ ಮುಗೀತು ಅಂತ ಕೇಳಾಕ ಕರಕೊಂಡ ಬಂದಿಯೇನೋ

ವೆಂಕಪ್ಪ - ಊರ ಜನಾ ಎಲ್ಲಾ ನಿಮ್ಮನ್ನು ನೋಡ್ಲಿ ಅಂತ ಕರಕೊಂಡ ಬಂದೀನಿ, ತೋರಸ್ತೀನಿ ಆಯಿತು. ನಮ್ಮೂರಾಗ ನಾನು ಹೇಳ್ತೀನಿ ಅಂದರ ಹೈಕೋರ್ಟಿನ ತೀರ್ಪು ಇದ್ದಂಗ ನಡಿರಿ !

ಮರಿಯಪ್ಪ - ನೋಡ ಸಂಗವ್ವ... ನಿನ್ನ ಮುಖಾ, ನಿನ್ನ ಹಿರೇಮಗ ಸಿದ್ದನ ಮುಖ, ನೋಡಿ ಬಿಟ್ಟು ಹೋಗತಿನಿ ಯಾಕ ?

ವೆಂಕಪ್ಪ - ಹುಡುಗಿ ಸಣ್ಣದು

ಮರಿಯಪ್ಪ - ಸುಮ್ಮನಿದ್ದರೆ ನನ್ನ ಊರಿಗೆ ಮಸಿ ಹತ್ತತ್ತ

ವೆಂಕಪ್ಪ - ನಿನ್ನ ಊರಿಗೆ ಮಸಿ ಅಷ್ಟ ಯಾಕ ಡಾಂಬರ ಹತ್ತಿತ್ತು ಅನ್ನು. ನಿನ್ನ ಮಗ ಮನಿಗೆ ಬಂದ ಕೂಡಲೆ ಏನಂತ ಹೇಳ್ತಿದಿ. ಹುಡಿಗೆ ಸಣ್ಣದು ಅಂತ ಹೇಳು.... ನಡಿರಿ

ಲಕ್ಷ್ಮಿ - ಹೂಂ..... ಹೂಂ..... ನಾ ಬರಾಕವಲ್ಲ, ಹೂಂ ಹೂಂ ನಾನೊಲ್ಲ ಕೆಂಚಪ್ಪಜ್ಜ. ವೆಂಕಪ್ಪ ಕಾಕಾ, ಅಪ್ಪಾ ನಾವಿವರಿಗೆ ಸಾಲಾ ಕೊಟ್ಟಿವಲ್ಲಾ ... ಒಂದು ನಯಾಪೈಸಾ ಬಿಡೋದಿಲ್ಲ. ಹೂಂ ಮನಿ ಬಿಡಸ್ತೀನಿ ಹೊರಗ ಹಾಕತೀನಿ

ವೆಂಕಪ್ಪ - ಮನಿ ಹ್ಯಾಂಗ ಬಿಡಸಾಕಬರತ್ತ. ಸಿದ್ದ ನಿಮ್ಮಲ್ಲೇ ದುಡಿತಾನ. ನೀನೂ ಹೇಳಿದಕ್ಕೆ ಹೂಂ ಅನ್ನೊನೇನೂ ನಾವೂ

ಲಕ್ಷ್ಮಿ - ಹೂಂ ನಾನೊಲ್ಲೆ ಅಪ್ಪಾ ಹೂಂ (ವೆಂಕಪ್ಪನ ತಲೆಗೆ ಬಡಿಯುವಳು)

ವೆಂಕಪ್ಪ - ಮರಿಯಪ್ಪ ಒಂದೊಂದು ಊರ ಬಿಡಿಸಿದವರೂ ನಾವು... ಒಂದೊಂದು ಊರ ಸುಡಿಸಿದವರೂ ನಾವು... ಮಂದ್ಯಾಗ ನಿನ್ನ ಮಗಳೂ ನನ್ನ ಬಡದಳು... ಇದು ಒಳ್ಳೆ ನ್ಯಾಯಾ ತಂದೆ ನಾನೂ

ಲಕ್ಷ್ಮಿ - ಆಕಿ ಜಿಗ ಜಿಗದೇ ಮಾತಾಡತಾಳ... ಆಕಿ ಜಿಗಜಿಗದೆ ಮಾತಾಡತಾಳ (ಕಾಲಿಗೆ ಬೀಳಿಸುವಂತೆ ತೋರಿಸುವಳು)

ವೆಂಕಪ್ಪ - ನಿಮಗ್ಯಾರಿಗೂ ತಿಳಿಲಿಲ್ಲಾ ಹೌದಲ್ಲ. ಸಂಗವ್ವನ ಸೊಸಿ ಸಿದ್ದನ ಹೆಣ್ತಿ ನಿನಗ ನಿನ್ನ ಮಗಳಿಗೆ ತಿರತಿರಗಿ ಮಾತಾಡಿದಳು. ಅದ್ಕೆ ಆಕೆ ಕೈಲಿ ಕಾಲುಹಿಡಿಸೊ ಅಂತಾಳ ಲಕ್ಷ್ಮಿ... ಯಾಕವ್ವ

ಲಕ್ಷ್ಮಿ - ಹೂಂ...

ವೆಂಕಪ್ಪ - ಏನ ಸಂಗವ್ವ ನಿಮಗ ಸ್ವಲ್ಪರ ತಿಳಿತದೋ ಇಲ್ಲೊ... ಅವರ ಮನ್ಯಾಗ ದುಡಿತೀರಿ ಅಂದ್ರೇನೂ... ಅವರ ಮಗಳಿಗೆ ನಿನ್ನ ಮಗಾ ಈ ರೀತಿ ಮಾಡಿ ಕಳಿಸ್ಯಾನಂದ್ರೇನೂ. ಊರ ಜನಾ ಎಲ್ಲಾ ನೋಡ್ಲಿ ಅಂತ ನಾವೂ ಕರಕೊಂಡು ಬಂದೀವಂದ್ರೇನೂ, ಮತ್ತೆ ನಿನ್ನ ಸೊಸಿ ಜಿಗಜಿಗದ ಮಾತಾಡತಾಳಂದ್ರೇನೂ. ಇವರೆಲ್ಲಾ ನಿಮ್ಮ ಮನಿ ಸುಡತೀವಂತ ಬಂದಿದ್ರು ನಾನಿದ್ದೇ ಅಂತ ನ್ಯಾಯ ಮುಗಿತು. ತಪ್ಪಾಗತದ ಕಾಲ ಹಿಡಿಸು (ಪಾರ್ವತಿ ಕಾಲಿಗ ಬೀಳುವಳು)

ಲಕ್ಷ್ಮಿ - ಏ ಚೂರಬ್ಯಾಡೇ

ವೆಂಕಪ್ಪ - ನಡೀರನ್ನ (ಎಲ್ಲರೂ ಹೋಗುವರು. ವೆಂಕಪ್ಪ ತಿರಿಗಿಬಂದು) ಏನ ಸಂಗವ್ವ ನಿಮಗ ಸ್ವಲ್ಪರ ತಿಳಿತದೊ ಇಲ್ಲೊ ? ಊರಾಗ ನಮ್ಮಂಥ ಹಿರಿಯರೂ ಮುಖ ಎತ್ತಿ ತಿರಗಲಾರದಂಗಾಯಿತಲ್ಲ. ನಿನ್ನ ಮಗಾ ಮನಿಗೆ ಬಂದ ತಕ್ಷಣ ಬಯಿದು ಬಡಿದು ಬುದ್ಧಿ ಹೇಳು. ಸ್ವತಾ ಕುಲಕರ್ಣಿಯವರೂ ಮನಿ ತನಕ ಬಂದು ಇನ್ನೊಮ್ಮೆ ಈ ಹುಡುಗಿಗೆ ಈ ರೀತಿ ಮಾಡತಕ್ಕದಲ್ಲಾಂತ ಹೇಳ್ಯಾರ ಅಂತ ಹೇಳ್ರಿ. ಹೂಂ ಮಾಡೋದಿದ್ರೆ ಮತ್ತೇನಾದರೂ ಮಾಡು ಅಂತ ಹೇಳ್ಯಾರಂತ ಹೇಳ್ರಿ (ಹೋಗುವನು)

ಸಿದ್ದ - ನೋಡಿದೇನವ್ವ ನಿನ್ನ ಸಣ್ಣ ಮಗ ಮಾಡಿದ ಶೂರತನ. ದುಡಿಸಿಕೊಂಡು ಅನ್ನ ಹಾಕೋ ಧಣಿ ಮ್ಯಾಗ ಅವನು ಈ ರೀತಿ ಏರಿಹೋದರ ನಾವು ಹ್ಯಾಂಗವ್ವ ಈ ಊರಲ್ಲಿ ಬಾಳೋದು

ಸಂಗವ್ವ - ಮುಖ್ಯ ನಾನು ಸಾಯಬೇಕಾಗಿತ್ತ. ಅಂದ್ರೆ ಈ ಪಾಪನೆಲ್ಲಾ ನೋಡೋ ಶಾಪ ತಪ್ಪುತ್ತಿತ್ತು. ಅದರೇನೊ ಮಾಡೋದು... ಶಿವ ಬರದಾನಲ್ಲಾ ಈ ನನ್ನ ಹಣೆಯಾಗ. ಸಾಯೋವರೆಗೂ ನಿನಗ ಸುಖಾನೆ ಇಲ್ಲಂತ

ಪಾರ್ವತಿ - ಇರಲಿ ಬಿಡ್ರಿ ಅತ್ತೆ, ನೀವ್ಯಾಕ ಅಷ್ಟು ನೊಂದಕೋತೀರಿ, ಅವರು ಹೇಳಿದ್ದನೆಲ್ಲ ನಿಜ ಅಂತ ನಾವ್ಯಾಕ ನಂಬಬೇಕು. ನಮ್ಮ ಭದ್ರಿ ಇಂಥ ಕೆಲಸಕ್ಕೆ ಮನಸು ಮಾಡವನಲ್ಲ

ಸಿದ್ದ - ಇವನು ಮಾಡದಿದ್ರೆ ಲಕ್ಷ್ಮೀನೇ ಮನಸ್ಸು ಮಾಡಿ ತನ್ನ ಕೂದ್ಲಾ ತಾನ ಕತ್ತರಿಸಿಕೊಂಡು ಇವನ ಮೇಲೆ ಅಪವಾದ ಹೊರಸಿದಳು ಅಂತೀಯಾ

ಪಾರ್ವತಿ - ಇದರೂ ಇರಬಹುದು. ಇದೇನೂ ಆಗಲಾರದ ಮಾತೇನು .... ?

ಸಿದ್ದ - ಅಷ್ಟಕ ಬಾಯಿಮುಚ್ಚು... ನನಗ ಎದುರು ವಾದಿಸಲಿಕ್ಕ ಬರಬೇಡಾ

ಗುಂಡ - (ಭದ್ರಿಯೊಂದಿಗೆ ಬಂದು) ಬಂದ ನೋಡಪ್ಪಾ ನಿಮ್ಮ ಭದ್ರಿ... ಅಕಾ ಹ್ಯಾಂಗ ನೋಡತಾನಪ್ಪಾ ಹಾವಿಗೆ ಎರಗೋ ಹದ್ದಿನಂಗ

ಸಿದ್ದ - ಲೇ ಬಾರೋ ಇಲ್ಲಿ. ಗುಂಡಾ ನೀ ನಿಮ್ಮ ಮನಿಗೆ ಹೋಗು (ಗುಂಡ ಹೋಗುವನು) ಲೇ ಪಾರು ನೀನೂ ಆ ಬಾಕಲಾ ಹಾಕು. ಹೂಂ ಹಾಕತೀಯಾ ತಗೊಳ್ಳೊ ಬಾರಕೋಲು...

ಭದ್ರಿ - ಅಣ್ಣಾ ಅತ್ತಿಗೆಯ ಮೇಲೆ ಯಾಕೆ ಕೋಪಿಸಿಕೊಳ್ಳತಿಯಾ ? ಬೇಕಿದ್ದರೆ ಹೇಳು ನಾನ ಹಾಕತೀನಿ

ಸಿದ್ದ - ನೀನು ಹಾಕೋದು ಬಿಡೋದು ಎಲ್ಲಾ ಮುಗಿಸಿ ಬಿಟ್ಟಿದ್ದಿಯಲ್ಲೋ. ಇಷ್ಟೊಂದು ನೆಟೆದು ನಿಂತು ಮಾತಾಡಿಸಲಿಕ್ಕೆ ನಾಚಿಕೆಯಾದ್ರೂ ಆಗತಿಲ್ಲೋ ನಿನ್ನ ಮನಸ್ಸಿಗೆ

ಭದ್ರಿ - ನಾಚಿಕೆಯಾಗಲಿಕ್ಕೆ ನಾನೇನೂ ಅಂಥಾದ್ದು ಮಾಡೀನಿ ಮಾಡಬಾರದ್ದು

ಸಿದ್ದ - ಮತ್ತೆ ಎದುರು ನಿಂತ ಮಾತಾಡತೀ ಏನೋ (ಹೊಡೆಯುವನು)

ಸಂಗವ್ವ - ಇರ್ಲಿ ಬಿಡಲೋ ಸಿದ್ದಾ. ಸಿಟ್ಟಿನಿಂದ ಹೊಡೆದು ಕೊಲ್ಲಬೇಡಾ ಸಾವಕಾಶ ರಮ್ಮಿಸಿಕೋಳೋ

ಸಿದ್ದ - ನೀನು ಸುಮ್ನ ಇರವ್ವ. ಇಷ್ಟೋತ್ತನಕ ಯಾವ ಸುಡಗಾಡಕ್ಕ ಹೋಗಿದ್ದೀಯೋ ಸಾಯಲಿಕ್ಕೆ

ಭದ್ರಿ - ಹಳ್ಳಕ್ಕ ಹೋಗಿದ್ದ ಮೀನ ಹಿಡಿಯಲಿಕ್ಕೆ

ಸಿದ್ದ - ಹಳ್ಳ ಒಂದು ನಿನ್ನ ಕಳ್ಳತನಕ್ಕೆ ಅನುಕೂಲ ಕಲ್ಪಿಸಿಕೊಡುವ ಜಾಗ ಆಗಿಬಿಟ್ಟಿದೆ ಅಲ್ಲವೆ ? ಹಳ್ಳದಲ್ಲಿ ಕುಳಿತು ಮಾನುಳ್ಳ ಹೆಂಗಸರ ಮಾನ ಕಳಿತಿಯಾ ಪಾಪಿ ! (ಹೊಡೆಯುವನು)

ಸಂಗವ್ವ - ಸಾಕ ಬಿಡಲೋ ಸಿದ್ದ, ನಿನ್ನ ಗಂಡನ್ನ ಹಿಡಿಕೊಳ್ಳೇ ಪಾರು. ಇರದಿದ್ರ ಅವನ ಕೊಂದಗಿಂದಾನು

ಪಾರ್ವತಿ - (ಪಾರ್ವತಿ ಬಾರಕೋಲು ಕಸಿದುಕೊಂಡು ಗಂಡನನ್ನು ಅಡ್ಡೈಸಿ) ಅಯ್ಯೋ ಬಿಡ್ರಿ ಏನಿದು ? ನಿಮ್ಮ ಅವತಾರ. ಸಿಟ್ಟಿಗ ಏಳೋದಕ್ಕೆ ಒಂದು ಸೀಮೆ ಇಲ್ಲವಾ

ಸಿದ್ದ - ಲೇ ಪಾರೂ ನೀವ್ಯಾರು ನನ್ನ ತಡಿಬ್ಯಾಡ್ರಿ. ಅವನ್ನ ಮುಗಿಸಿ ಮಣ್ಣು ಕೊಟ್ಟಮೇಲೆ ಮುಂದಿನ ಕೆಲಸ

ಪಾರ್ವತಿ - ಇಲ್ಲ ನಿಮ್ಮ ಸಿಟ್ಟಿದ್ರ ನನ್ನ ಕೊಲ್ಲಿರಿ. ಅವನ ಮೇಲೆ ಕೈ ಎತ್ತಿದರೆ ನನ್ನಾಣೆಯಾಗಿದೆ

ಸಿದ್ದ - ಅದೇಸಿದ್ರೂ ಸರಿ. ಈಗ ನಾನವನನ್ನೂ ಉಳಿಸೋದೆ ಇಲ್ಲ ಸರಿ ...

ಪಾರ್ವತಿ - ಇಲ್ಲಾ..... ನಾನು ಸರಿಯೋದಿಲ್ಲ

ಸಿದ್ದ - ನನಗೆ ಎದುರು ವಾದಿಸ್ತಿಯಾ ? ತಡಿ ಮೊದಲ ನಿನ್ನ ಮುಗಸ್ತೀನಿ

ಭದ್ರಿ - ನಿನ್ನ ಸಿಟ್ಟಿದ್ರೆ ನನ್ನ ಬಡಿದು ತೀರಿಸಕೊ, ಅತ್ತಿಗೆಯ ಮ್ಯಾಲ ಕೈ ಎತ್ತಬೇಡ

ಸಿದ್ದ - ಅದಕ್ಕಂತ ಸಿದ್ಧನಾಗಿದ್ದೇನೆ. ನಿನ್ನ ಮುಗಿಸಿ ಮಣ್ಣು ಕೊಟ್ಟ ಮೇಲೆ ಮುಂದಿನ ಮಾತು (ಹೊಡೆಯುವನು)

ಸಂಗವ್ವ - ಸಾಕ ಬಿಡಲೋ ಸಿದ್ದ (ನೂಕಿ) ನಾನಿನ್ನ ಸತ್ತಿಲ್ಲ. ನನ್ ಕಣ್ಣೆದುರು ಇಷ್ಟೆಲ್ಲ ಉರಿಬ್ಯಾಡ್ರಿ

ಸಿದ್ದ - ನೀನು ಸತ್ತರೇನು ಬಿಟ್ಟರೇನು ?. ನಿನ್ನಿಂದ ಇನ್ನೇನಾಗಬೇಕಾಗೇತಿ

ಸಂಗವ್ವ - ಹೌದಪ್ಪ ನನ್ನಿಂದಾ ನಿಮಗೇನಾಗಬೇಕಾಗೇತಿ. ಆಗಬೇಕಾದುದ್ದೆಲ್ಲ ಮುಗದೈತಿ. ಎಂದು ನಿಮ್ಮಪ್ಪನ ಕೈಹಿಡಿದು ಈ ಮನೆಯಲ್ಲಿ ಕಾಲಿಟ್ಟೆನೊ ಅಂದಿನಿಂದ ಈ ಕಷ್ಟಾ ಅನುಭವಿಸ್ತಾ ಇದ್ದೀನಿ. ನಿಮ್ಮಪ್ಪ ಒಂದೊಂದು ರೀತಿ ನನ್ನ ಹೊಟ್ಟೆ ಉರಿಸಿದನಾ ? ಹೊರಗೆ ಹೋಗಿ ಕುಡಿಯೋದು ಮನಿಗೆ ಬಂದು ನನ್ನ ಬಡಿಯೋದು. ಬಡಿಸಿಕೊಂಡು ಹೊಡಿಸಿಕೊಂಡು ಈ ನನ್ನ ಮೈ ಅನ್ನೋದು ಮೂಲಿಗುಂಪಾಯಿತು. ಗಂಡನ ಮಾತು ಹೋಗಲಿ, ಈಗ ಮಕ್ಕಳಾದರೂ ಸುಖವಾಗಿ ಇಟ್ಟರ ? ದಿನಕ್ಕೊಂದು ರೀತಿ ದುಃಖಾನೆ ಕೊಡತೀರಿ. ಮುಖ್ಯ ನನ್ನ ಕರ್ಮ... ಯಾರಿಗುಂದ್ರೇನೂ ಮಾಡೋದು. ಹಾವಿನಂಥ ಗಂಡನ ಕೂಡಾ ಸಂಸಾರ ಮಾಡಿ ಹೂವಿನಂತ ಮಕ್ಕಳ ಬೇಡಿದ್ರ ಆ ಶಿವನಾದ್ರು ಎಲ್ಲಿಂದ ಕೊಟ್ಟಾನು ? ಯಾಕ ನನ್ನ ಹೊಟ್ಟೆ ಉರಸ್ತಿಯಲ್ಲೊ ಭದ್ರಿ. ಸಂಗವ್ವನ ಮಗಾ ಹೂವಿನಂಥದ್ದಲ್ಲಾ ಹಾವಿನಂಥದ್ದು ಅಂತಾರಲ್ಲೊ ಊರಾಗ ಮಂದಿ. ಅಣ್ಣಾ-ತಮ್ಮಾ ಕೂಡಿ ನನ್ನ ಕತ್ತಾದ್ರೂ ಹಿಚಿಕಿ ಬಿಡ್ರಿ, ಅಂದ್ರೆ ಮುಗಿದು ಹೋಗತ್ತ ನನ್ನ ಕಥಿ

ಸಿದ್ದ - (ಅಳುತ್ತ) ಅವ್ವ ಸಿಟ್ಟಿನ ಕೈಗ ಬುದ್ದಿ ಕೊಟ್ಟು ನಿನಗೇನೇನೊ ಅಂದುಬಿಟ್ಟೆ ನಂದು ತಪ್ಪಾಯಿತವ್ವ ತಪ್ಪಾಯಿತು

ಪಾರ್ವತಿ - ತಾಳ್ಮೆ ಕಳಕೊಂಡು ತಮ್ಮನ ಬಡಿದಾಯಿತು. ಕಣ್ಣಲ್ಲಿ ನೀರು ಸುರಿಸಿ ಅದೇನೊ ಭಾಗ್ಯ ಸುರುಕೊಂಡ್ರಿ ನೀವೀಗ ? ಎಲ್ಲರ ಮನಸ್ಸಿಗೆ ಇಷ್ಟು ನೋವು ಹಚಿಸಿದರ ಅದೇನು ಬಂದ ಹಾಗಾಯಿತು ನಿಮಗೆ

ಸಿದ್ದ - ನಾನಾದರೂ ಎಷ್ಟಂತ ಸಹಿಸಿಕೊಳ್ಳಲಿ ಪಾರೂ ? ದುಡಿಸಿಕೊಳ್ಳೊ ಸಾವಕಾರ ಮೇಲಾಗಿ ಸಾಲಾ ಕೊಟ್ಟವರು... ಅವರ ಮಗಳಿಗೆ ಹೀಗ ಮಾಡಿದರೆ ಅವರ ನನ್ನ ಯಾವ ದೃಷ್ಟೀಲಿ ಕಂಡಾರು ? ಉಣ್ಣುವ ಸ್ಥಳದಲ್ಲಿ ಉಗಳತಾ ಹೋದರ

ನಾಳೆ ನಾಲ್ಕು ತುತ್ತು ಅನ್ನವಾದರೂ ಎಲ್ಲಿಂದ ಹುಟ್ಟೀತು ?

ಭದ್ರಿ - ಉಣ್ಣೋ ಸ್ಥಳದಲ್ಲಿ ಉಗಳೋ ಕೆಲಸಾನ ಅಣ್ಣಾ ನಾನ್ಯಾವ ಕಾಲಕ್ಕು ಮಾಡಿಲ್ಲವಪ್ಪಾ ಮಾಡಿಲ್ಲ

ಸಿದ್ದ - ಮರಿಯಪ್ಪನವರ ಮಗಳ ಶೀಲ ಕೆಡಿಸಲಿಕ್ಕೆ ಹೋಗಿದ್ದಿ. ಅಂದ ಬಳಿಕ ಇದು ಉಣ್ಣೊ ಸ್ಥಳದಲ್ಲಿ ಉಗಳಿದಂತೆ ಅಲ್ಲವೇನೋ ?

ಭದ್ರಿ - ಅವರ ಮಗಳ ಶೀಲಗೆಡಿಸಲಿಕ್ಕೆ ಹೋಗಿದ್ದೆ ! ಯಾರು ಹೇಳಿದರಣ್ಣಾ ನಿನ್ನೆದುರು ಈ ಕೆಟ್ಟ ಮಾತು !

ಸಿದ್ದ - ಇನ್ಯಾರು ಲಕ್ಷ್ಮೀಬಾಯೀನೇ ಹೇಳಿದರು

ಭದ್ರಿ - ಅವಳೂ ಹೀಗೆ ಹೇಳಿದಳೆ ?

ಸಂಗವ್ವ - ಅವರಪ್ಪನೂ ಹೇಳಿದರು

ಭದ್ರಿ - ಸುಳ್ಳು, ಅವರೆಲ್ಲಾ ಸುಳ್ಳು ಹೇಳಿದ್ದಾರೆ

ಸಿದ್ದ - ಹೂಂ ಅವರೆಲ್ಲಾ ಸುಳ್ಳು ಹೇಳಿದಾರೆ ಅಂದ್ರೆ, ನೀನೊಬ್ಬನೆ ಸತ್ಯ ಹರಿಶ್ಚಂದ್ರ ಅಂತ ತಿಳಕೋಬೇಕೇನೋ

ಭದ್ರಿ - ಅಣ್ಣಾ ನಂಬಿದರೆ ನಂಬು, ಬಿಟ್ಟರೆ ಬಿಡು. ಇಂಥ ಪಾಪದ ಕೆಲಸಕ್ಕೆ ಇದುವರೆಗೆ ನಿನ್ನ ಮಗ ಮನಸು ಮಾಡಿಲ್ಲವ್ವ ಮಾಡಿಲ್ಲ (ಅಳುತ್ತ) ನೋಡಣ್ಣಾ ಅವರು ಶ್ರೀಮಂತರು. ಕಾರಣಾ ನಮಗೆ ಸಾಲಾ ಕೊಟ್ಟವರು. ಅವರಿಗೆ ಮಣಿದು ಬದುಕಬೇಕೆಂದು ಹಾಗೆ ನೀನೂ ಹೇಳತಿಯಾ ?

ಸಿದ್ದ ..... ಹೌದು ಆ ರೀತಿ ನಡೆಯದಿದ್ದರೆ ನಾವಿಲ್ಲಿ ಜೀವಿಸಲು ಸಾಧ್ಯವಿಲ್ಲ

ಭದ್ರಿ ..... ಅದೇಕೆ ಸಾಧ್ಯವಿಲ್ಲಣ್ಣಾ ? ಅವರು ಅಪ್ಪನಿಗೆ ಕೊಟ್ಟ ಸಾಲವಾದರೂ ಎಷ್ಟು ? ಕೇವಲ ಐದುನೂರು ರೂಪಾಯಿ. ಅಷ್ಟರಲ್ಲಿ ಪ್ರತಿ ವರ್ಷ ಐದು ಸಾವಿರ ರೂಪಾಯಿ ಉತ್ಪನ್ನ ನಮ್ಮ ಹೊಲದಿಂದಲೇ ತಿನ್ನುತ್ತಾ ಇಲ್ಲವೆ ? ಅಲ್ಲದೆ ಅದೇ ಹೊಲದಲ್ಲಿ ಅಪ್ಪನಿಂದ ಹಿಡಿದು ನಾವೆಲ್ಲ ದುಡಿದರೂ ದುಡಿಮೆಗೆ ಆ ಮರಿಯಪ್ಪ ಒಡಲಿಗಾಗುವಷ್ಟು ಅನ್ನ ಒಂದು ಸಲವಾದರೂ ಕೊಟ್ಟನೇನಣ್ಣಾ? ಇಷ್ಟಿದ್ದರೂ ನೀನವರಲ್ಲಿ ಭಕ್ತಿ ಇಡಬೇಕೆಂದು ಹೇಳುತ್ತಿಯಾ ? ಭಕ್ತಿಗೆ ಒಲಿಯುವ ಜಾತಿಯಲ್ಲಣ್ಣಾ. ಬಡಿತಕ್ಕೆ ಮಣಿಯುವ ಜಾತಿ ನೋಡಣ್ಣಾ ? ನಾನೀಗ ಕೊನೆಯ ಮಾತನ್ನೇ ಹೇಳಿಬಿಡುತ್ತೇನ. ಇನ್ನು ಮೇಲೆ ಆ ಮರಿಯಪ್ಪ ನಮ್ಮಪ್ಪ ಮಾಡಿದ ಸಾಲ ಮುಟ್ಟಿತೆಂದು ಹೊಲ ಮನೆಗಳನ್ನು ಬಿಟ್ಟು ಕೊಡಬೇಕು. ನನ್ನ ಮೇಲೆ ಹೊರಿಸಿದ ಬಲತ್ಕಾರದ ಅಪವಾದ ಸುಳ್ಳೆಂದು ಒಪ್ಪಿಕೊಳ್ಳಬೇಕು. ನಂತರ ನಮ್ಮ ಮೇಲೆ ಮಾಡಿದ ದೌರ್ಜನ್ಯ ತಪ್ಪೆಂದು ಆ ತಂದೆ ಮಗಳು ನಮ್ಮವ್ವನ ಕಾಲು ಹಿಡಿದು ಕ್ಷಮೆ ಕೇಳಬೇಕು. ಇದಕ್ಕೆ

ಒಪ್ಪಿರದಿದ್ದರೆ ಅಣ್ಣಾ ನನಗೆ ಜೇಲಾದರೂ ಸರಿ, ಗಲ್ಲಾದರೂ ಸರಿ ಆ ಮರಿಯನ ಕೊಲೆ ಮಾಡದೆ ಬಿಡಲಾರೆ ?

ಸಿದ್ದ - ಸಾಕು ಸಾಕು ಭದ್ರಿ ಈ ಕೆಟ್ಟಮಾತು ! ಅವರ ಕಿವಿಗೆ ಬಿದ್ದರೆ ನಮ್ಮನ್ನೆಲ್ಲ ಜೀವಂತ ಸುಡಿಸಿ ಬಿಟ್ಟಾರು ? ಕೇಳಿದೇನವ್ವ ಈ ವರೆಗೂ ನಮ್ಮ ವಂಶದಲ್ಲಿ ಇಂಥ ಕೆಲಸ ಮಾಡೋರೂ ಹುಟ್ಟಿದ್ದರೇನವ್ವ

ಸಂಗವ್ವ - ಇಂಥ ಕೊಲೆಕಡುಕ ಮಗನ್ನ ಹಡೆದು ಇವನ ತಾಯಿ ಅನ್ನಿಸಿಕೊಳ್ಳೋದಕ್ಕಿಂತ ನೇಣು ಬಿದ್ದು ಪ್ರಾಣ ಕಳೆದುಕೊಳ್ಳೋದು ಮೇಲು. ಆ ದೇವರೂ ಅನ್ನೊ ಚಂಡಾಲ ಇವನಿಗಾದರೂ ಸಾವ ತರಲ್ಲ, ನನ್ನ ಕಣ್ಣಾರ ಮುಚ್ಚುವಲ್ಲ (ಅಳುತ್ತ) ಸಿದ್ಧಪ್ಪ ನಾನೇನು ಪಾಪ ಮಾಡೀನಿ ಅಂತ ನೋಡಬಾರದ್ದನ್ನೆಲ್ಲ ನೋಡಾಕ ಹಚ್ಚಿದ್ದಿಯಪ್ಪಾ

ಭದ್ರಿ - (ಒಳಗೆ ಹೋಗುವಾಗ) ಅವ್ವಾ..... ಅವ್ವಾ.....

ಸಂಗವ್ವ - ಸಾಕ ಸರಿಯಲೋ, ನೀ ನನಗ ಮುಖಾ ತೋರಿಸಬೇಡಾ (ನೂಕಿ ಹೋಗುವಳು)

ಭದ್ರಿ - ಅವ್ವಾ..... ಅವ್ವಾ.....

ಸಿದ್ದ - ಲೇ ಸರಿಯೋ ಆಚೆ, ನೋಡು ತಪ್ಪಾಯಿತೆಂದು ಆ ತಂದೆ ಮಗಳ ಕಾಲು ಹಿಡಿದು ಕ್ಷಮೇ ಕೇಳುವದಾದರೆ ನೀನೀ ಮನೆಯಲ್ಲಿರಬೇಕು

ಭದ್ರಿ - ಇಲ್ಲದಿದ್ದರ ?

ಸಿದ್ದ - ನಮ್ಮೆಲ್ಲರ ಬಾಂಧವ್ಯ ಕಡಿದುಕೊಂಡು ಈ ಮನೆಯಿಂದ ದೂರಾಗಬೇಕು ಹೂಂ, ಹೇಳು

ಭದ್ರಿ - ಸಾಧ್ಯವಿಲ್ಲಣ್ಣಾ, ಅವರಿಗೆ ಮಣಿದು ನಾ ಬದುಕಲಾರೆ

ಸಿದ್ದ - ಹಾಗಿದ್ದರೆ ಇಂದಿನಿಂದ ಈ ಮನೆ ನಿನ್ನ ಪಾಲಿಗಿಲ್ಲ. ಪಾರೂ ನೀನೂ ಇವನಿಗ ಅನ್ನ ಹಾಕಕೂಡದು..... ಭದ್ರಿ ನನ್ನಾಜ್ಞೆಯನ್ನು ಉಲ್ಲಂಘಿಸಿ ಮನೆಯಲ್ಲಿ ಕಾಲಿಟ್ಟಿಯಾದರ, ನಿನಗ ಅಪ್ಪನ ಆಣೆಯಾಗಿದ (ಸಿದ್ದ ಒಳಗೆ ಹೋಗುವನು)

ಭದ್ರಿ - ಅತ್ತಿಗೆಮ್ಮಾ..... ನಾನಿನ್ನು ಬರ್ತೀನಿ (ನಮಸ್ಕರಿಸುವನು)

ಪಾರ್ವತಿ - ನನ್ನ ಬಿಟ್ಟು ಹೋಗ್ತೀಯಾ ಭದ್ರಿ

ಭದ್ರಿ - ನನ್ನಿಂದ ಯಾರಿಗೂ ಸುಖವಿಲ್ಲ ಅತ್ತಿಗೆಮ್ಮಾ.... ಅವರೂ ಹಾಯಾಗಿ ಇರೋದಾದರ, ನಾನ್ಯಾಕ ಹಾಳಾಗಿ ಹೋಗಬಾರದು ನನ್ನ ಸಲುವಾಗಿ. ನೀನ್ಯಾಕ ಅಳತೀಯಾ ಅತ್ತಿಗೆಮ್ಮಾ

ಪಾರ್ವತಿ - ಅಳೋದೊಂದು ಬಿಟ್ಟು ಇನ್ನೇನು ಉಳಿತಪ್ಪಾ ಈ ನಿನ ಅತ್ತಿಗೆಯ ಬಾಳಿನಲ್ಲಿ

ಭದ್ರಿ - ಅತ್ತಿಗೆಮ್ಮಾ... ನಗನಗತಾ ನೀನೊಂದು ಸಲ ಆಶೀರ್ವಾದ ಮಾಡಿ ಬಿಡು ಅತ್ತಿಗೆಮ್ಮಾ. ನಿನ್ನ ಆಶೀರ್ವಾದ ಒಂದಿದ್ದರೆ ನನಗಿನ್ಯಾತರ ಭಯನೂ ಇಲ್ಲ. ಮನಸ್ಸಿನಲ್ಲಿ ಕಟ್ಟಿದ ನನ್ನ ಗುರಿಯನ್ನು ನಾ ಮುಟ್ಟೇತೀರುವೆನು

ಪಾರ್ವತಿ - ನೋಡ ಭದ್ರಿ. ಅವರು ಹಣವಂತರು. ಹಣ ಇದ್ದವರ ಹೆಣಕ್ಕೂ ಬೆಲೆ ಇದೆ. ಬಡವರ ಯಾವ ಇಷ್ಟವನ್ನು ದೈವ ಈ ಪ್ರಪಂಚದಲ್ಲಿ ನಡೆಯಗೊಟ್ಟಿಲ್ಲ ಭದ್ರಿ

ಭದ್ರಿ - ಅತ್ತಿಗೆ ಅವರಲ್ಲಿ ಹಣದ ಬಲವಿದ್ದರೆ ನನ್ನ ತೋಳಿನಲ್ಲಿ ಬಲವಿದೆ. ಮನದಲ್ಲಿ ಸೇಡು ತೀರಿಸುವ ಅಖಂಡ ಛಲವಿದೆ. ಅತ್ತಿಗೆ ಇನ್ನು ಮೇಲೆ ಆ ಮರಿಯಪ್ಪನ ಮಗಳು ಲಕ್ಷ್ಮಿ ಕೇವಲ ನನ್ನ ಹೆಣ್ಣು

ಪಾರ್ವತಿ - ಹಾ.... ಏನೂ ?

ಭದ್ರಿ - ಹೌದು ಅತ್ತಿಗೆಮ್ಮಾ ಈ ಹಟದಲ್ಲಿ ನನ್ನ ಘಟ ಬಿದ್ದು ಹೋದರೂ ಸರಿ ನಾನವಳನ್ನು ಪಡೆಯದೇ ಬಿಡಲಾರೆ

ಪಾರ್ವತಿ - ಅಂದರ ನೀನು ಅವಳನ್ನು ...

ಭದ್ರಿ - ಹೌದು, ಸುಳ್ಳು ಅಪವಾದ ಹೊರಿಸಿ ಅಪರಾಧಿಯನ್ನಾಗಿಸಿದ ಅವಳು ನನ್ನ ಪಾದಕ್ಕೆ ಕಣ್ಣು ಹಚ್ಚಿ ತನ್ನ ಹೆಣ್ತನವನ್ನು ನನಗರ್ಪಿಸಬೇಕು. ಅವರಪ್ಪನ ಸಂಪತ್ತನ್ನೆಲ್ಲ ಸುಲಿದು ನಾನು ಬಡವರಿಗೆ ಹಂಚಬೇಕು. ಅತ್ತಿಗೆ ಈ ಭದ್ರಿಗೆ ಹಾಲು ಕುಡಿಸಿ ತಾಯಿತನ ಪಡದ ನಿನ್ನ ಮೇಲೆ ಪಾಪದೃಷ್ಟಿ ಹರಿಸಿದ ಆ ಮರಿಯನ ಸಂಪತ್ತಿಗೆ ಇದೇ ಭದ್ರಿ ಹಾಕುವ ಸವಾಲು (ಕೊಡ್ಲಿ ತೆಗೆದುಕೊಂಡು) ಅತ್ತಿಗೇ ಇಂದಿನಿಂದ ನಮ್ಮೂರಲ್ಲಿ ಮರಣದ ಮಹಾ ನವಮಿಯೇ ಪ್ರಾರಂಭ. ಸವಾಲು ! ಸವಾಲು ! ಸಂಪತ್ತಿಗೆ ಸವಾಲು (ಹೋಗುವನು)

# ದೃಶ್ಯ ೬

ಜಂಗಲ್ ರಸ್ತಾ

(ಮರಿಯಪ್ಪ, ಲಕ್ಷ್ಮಿ ಹೊಸಬಟ್ಟೆ ಖರೀದಿ ಮಾಡಕೊಂಡು ಬರುವರು.
ಎದುರಿಗೆ ಕೆಂಚಪ್ಪ ಬರುವನು.)

ಕೆಂಚಪ್ಪ - ನಮಸ್ಕಾರ್ರಿ ಸಾವಕಾರ್ರೆ. ಹಬ್ಬದ ಬಟ್ಟೆ ಖರೀದಿಗೆ ಹೋಗಿದ್ರೇನು ?

ಮರಿಯಪ್ಪ - ಹೌದೋ ಕೆಂಚ ... ಮಗಳ ಬೇಡಿಂದ ಇಲ್ಲ ಅನ್ನಾಕ ಬರತ್ತ. ಮುನ್ನೂರ ಅರವತ್ತು ರೂಪಾಯಿ ಬಟ್ಟಿ ಖರೀದಿ ಮಾಡಿಕೊಂಡು ಬಂದೆ ಕೆಂಚಪ್ಪ. ಲಕ್ಷ್ಮವ್ವನ ಬಿಟ್ರ ನನಗ ಯಾರದರಾ ? ಮಗಳು ಅಂದ್ರ ಇಕೀನ

ಲಕ್ಷ್ಮಿ - ಮಗಾ ಅಂದ್ರ ನಾನಾ

ಮರಿಯಪ್ಪ - ಅಂದಮ್ಯಾಲೆ ಇಂದ್ರನ ಐರಾವತ ಬೇಡಿದರೂ ತಂದು ನಿಲ್ಲಿಸಬೇಕಾಗುತದ..

ಕೆಂಚಪ್ಪ - ಏ..... ಲಕ್ಷ್ಮವ್ವನವರ ಪುಣ್ಯ ಬಾಳ ದೊಡ್ಡದೈತ್ರಿಯಪ್ಪಾ. ಅವ್ವಾವರಿಗೆ ವರ ನೋಡಿದ್ರಾ... ಇಲ್ರಿ

ಮರಿಯಪ್ಪ - ಹುಡುಕೀನಲ್ಲ... ಹುಬ್ಬಳ್ಳ್ಯಾಗ ಬಂಗ್ಲೇದ ಬಸವರಾಜಪ್ಪನ ಮಗನಿಗೆ ಕೊಡಬೇಕು ಅಂತ ಮಾಡೀನಿ. ಎರಡ ಅಡತಿ ಅಂಗಡಿ ಅದಾವು. ಅಲ್ಲದ ಸಿನಿಮಾ ಥೇಟರ ಕಟ್ಟಿಸ್ಯಾರ. ಈ ವರ್ಷ ಬೆಳಿ ತೊಗೊಂಡು ಮಗಳ ಮದುವೆ ಮಾಡಿಬಿಡತೀನಿ

ಕೆಂಚಪ್ಪ - ಮಾಡ್ರಿ. ನೋಡವ್ವ, ನಿನ್ನ ಮದುವ್ಯಾಗ ತುಪ್ಪ ಉಂಡ್ರ ಮೂರ ದಿವಸ ಕೈ ನಾರತಿರಬೇಕು

ಲಕ್ಷ್ಮಿ - ಮದುವ್ಯಾಗ ತುಪ್ಪಾನ ಹಾಕುದಿಲ್ಲ ಬರೇ ಉಪ್ಪಷ್ಟೇ ಹಾಕತೀವಿ

ಕೆಂಚಪ್ಪ- ನೀ ಹಾಕಲೀಕ್ರ ನಿನ್ನ ಗಂಡ ಹಾಕತಾನೇಳವ್ವ. ನಾವೂ ಉಂಡಾ ಉಣತೀವಿ. ಸಾವಕಾರ ಒಂದು ಬೀಡಿ ಇದ್ರ ಕೊಡ್ರಿ

ಮರಿಯಪ್ಪ - ಬೀಡಿ ಇಲ್ಲಲ್ಲೊ ಸಿಗರೇಟ ನೋಡು. (ಕೊಡುವನು)

ಕೆಂಚಪ್ಪ - ಯಪ್ಪಾ ಇದಕ್ಕ ಎರಡು ಕಡಿ ಬಾಯಿ ಐತಿ ! ಯಾವ ಕಡ ಹಚ್ಚಬೇಕ್ರಿ !

ಲಕ್ಷ್ಮಿ - ಯಪ್ಪಾ ಎರಡೂ ಕಡಿ ಹಚ್ಚಿ, ಅವನ ಬಾಯಾಗ ಇಡು

ಮರಿಯಪ್ಪ - ಕೆಂಚಾ ಊರಾಗ ಒಂದು ಮರ್ಡರ ಮಾಡಿಸಬೇಕಾಗಿದೆ. ಹುಡುಗರನ್ನು ತಯಾರಿಸು

ಕೆಂಚಪ್ಪ - ಹುಡುಗ್ರು ತಯಾರಿ ಅದಾವರಿ. ನಿಮ್ಮ ಕಡಿ ನಂದು ಸ್ವಲ್ಪ ಕೆಲಸ ಇತ್ರಿ

ಮರಿಯಪ್ಪ - ನನ್ನ ಕಡೆ ಏನಬೇಕ ಹೇಳು ?

ಕೆಂಚಪ್ಪ - ನನಗಾ ಎರಡು ಸಾವಿರ ರೂಪಾಯಿಗಳು ಬೇಕಾಗ್ಯಾವರಿ. ನನ್ನ ಮಗನ ಮದುವೆ ಮಾಡತೀನ್ರಿ

ಮರಿಯಪ್ಪ - ಕೆಂಚಾ ನಿನ್ನ ಎರಿ ಹೊಲಾ ಇತ್ತಲ್ಲ

ಕೆಂಚ - ಐತ್ರಲ್ರಿ

ಲಕ್ಷ್ಮಿ - ಇದ್ರ ನಮ್ಮಪ್ಪನ ಹೆಸರಿಲಿ ಹಚ್ಚು

ಮರಿಯಪ್ಪ - ಅಷ್ಟು ಮಾಡು, ಎರಡು ಸಾವಿರ ಕೊಡಿತೀನಿ

ಕೆಂಚಪ್ಪ - ಆಗಲ್ರಿ... ನಾ ಹೇಳಿದ್ದು ಮರಿಬ್ಯಾಡ್ರಿ (ಹೋಗುವನು)

ಲಕ್ಷ್ಮಿ - ಅಪ್ಪಾ ಅಲ್ಲಿ ಬಟ್ಟಿ ಅಂಗಡಿ ಹತ್ರ ಒಬ್ಬಾಕಿ ಹೆಣಮಗಳ ಬಂದಿದ್ದಿಲ್ಲ

ಮರಿಯಪ್ಪ - ಆ ಕೆಂಪನಕಿ

ಲಕ್ಷ್ಮಿ - ಉದ್ದನಕಿ

ಮರಿಯಪ್ಪ - ಜಡಿ ಹಾಕ್ಕೊಂಡಕಿ

ಲಕ್ಷ್ಮಿ - ಹೂ ಮುಡಕೊಂಡಾಕಿ

ಮರಿಯಪ್ಪ - ಹೌದೇಳ ಏನಾಯಿತು ?

ಲಕ್ಷ್ಮಿ - ಯಪ್ಪಾ ಅಕಿ ಹೆಣಮಗಳಲ್ಲ ಜೋಗಮ್ಮಾ

ಮರಿಯಪ್ಪ - ಹೂ. ಹೌದಾ ನಾವೂ ಬಲು ನೋಡಿದ್ದೀವಿ

ಲಕ್ಷ್ಮಿ - ಯಾಪಾ ಅಕಿ ಕೊಳ್ಳಾಗ ಒಂದು ಸರಾ ಇದ್ದಿಲ್ಲ ಅಂತ ನೆಕಲೀಸ್ ನನಗೊಂದು ಮಾಡಿಸು

ಮರಿಯಪ್ಪ - ಮಾಡಿಸ್ತೀನಿ, ನಡಿಯವ್ವ

ಲಕ್ಷ್ಮಿ - ಯಪ್ಪಾ ನನಗೊಂದು ಬೋರಮಳ ಸರಾ ಮಾಡಿಸೋ

ಮರಿಯಪ್ಪ - ನಿಮ್ಮವ್ವ ಹಾಕ್ಕೊಳ್ಳೊ ವಸ್ತ್ರಾ ವಡಿವೆ ರಗಡ ಅದಾವು ಅವನ್ನ ಹಾಕ್ಕೊಳ್ಳವ್ವ

ಲಕ್ಷ್ಮಿ - ಅವಲ್ಲ ಹಳೆ ಮಾವರಿವು. ನಾ ವಲ್ಲೆ ಹೋಗು ಬರೇ ಗೆಜ್ಜಟಿಕಿ ಗುಂಡಿನಸರ ಎಲ್ಲವ್ವನ ಸರ ... ನಾ ವಲ್ಲೆ ಹೋಗು (ಅಳುವಳು)

ಮರಿಯಪ್ಪ - ಸಾಕಾತವ್ವ ನನಗ ಮಾಡಿಸ್ತಿನೇಳು

ಲಕ್ಷ್ಮೀ - ಏನೇನು ಮಾಡಸ್ತಿ ? ಬೋರಮಳಸರ, ಬೇವಿನಕಾಯಿಸರ, ಚಪ್ಪಲಹಾರ ಇವೆಲ್ಲ ಮಾಡಸ್ತಿಯಿಲ್ಲೊ

ಮರಿಯಪ್ಪ - ಯಲ್ಲಾ ಮಾಡಿಸ್ತೀನಿ ನಡಿ ಮನಿಗೆ

ಲಕ್ಷ್ಮೀ - ಮನಿಗೆ ನಾನೊಲ್ಲೆ ಹೋಗು. ಯಪ್ಪಾ ಹೂಂ...

ಮರಿಯಪ್ಪ - ಮತ್ತೇನು ಮಠಕ್ಕೆ ಹೋಗೋನಾ ?

ಲಕ್ಷ್ಮೀ - ಮದಲ ಪತ್ತಾರರ ಮನಿಗೆ ಹೋಗೋನು. ಯಪ್ಪಾ ಐ ಭದ್ರಿ !

ಮರಿಯಪ್ಪ - ಭದ್ರಿ ಕೈಯಾಗ ಕೊಡ್ಲಿ ಬ್ಯಾರೆ ಹಿಡಿದಾನವ

ಲಕ್ಷ್ಮೀ - ಏ ಬಾರಪ್ಪ ಅವ ಏನ ಮಾಡ್ತಾನ (ಭದ್ರಿ ಕೊಡ್ಲಿ ಹಿಡಕೊಂಡ ರುದ್ರ ವೇಷದಲಿ ಬರುವನು)

ಭದ್ರಿ - (ಕೊಡ್ಲಿಯನ್ನು ಲಕ್ಷ್ಮೀಯ ಕತ್ತಿಗೆ ಹಚ್ಚಿ) ಲಕ್ಷ್ಮೀ ನಿಲ್ಲು ಅಂದು ನಿನ್ನನ್ನು ನಾನು ಬಲತ್ಕರಿಸಲು ಬಂದಿದ್ದನೆ ? ಅಂದು ನಿನ್ನನ್ನು ಬಲತ್ಕರಿಸಿದೆನೆ ? ಮಾತಿನ ಬರದಲ್ಲಿ ರೋಷ ಉಕ್ಕಿ ನಿನ್ನ ಕೂದಲು ಕತ್ತರಿಸಿದೆನೆ ವಿನಹ ನಿನ್ನ ಹೆಣ್ತನವನ್ನು ಕಾಮದ ಕಣ್ಣಿನಿಂದ ಕಂಡೆನೆ ? ಹೂ ಹೇಳು

ಲಕ್ಷ್ಮೀ - ಇಲ್ಲ

ಭದ್ರಿ - ಹಾಗಿದ್ದರೆ ಮತ್ತೇಕೆ ಸುಳ್ಳು ಬೊಗಳಿದೆ ? ಶೀಲಗೆಡಿಸಲಿಕ್ಕೆ ಬಂದಿದ್ದನೆಂದು. ನನ್ನ ತಾಯಿಯ ಮುಂದೆ ಹೇಳಿ ಯಾವ ಕಾರಣಕ್ಕಾಗಿ ತಾಯಿ ಮಕ್ಕಳ ಮಧ್ಯೆ ಕಲಹದ ಬೆಂಕಿ ಹಚ್ಚಿಸಿದಿ ? ಯಾವ ಉದ್ದೇಶದಿಂದ ನನ್ನನ್ನು ಮನೆಯವರಿಂದ ಬೇರ್ಪಡಿಸಿ ಪರದೇಶಿಯನ್ನಾಗಿ ಮಾಡಿದಿ ? ಲಕ್ಷ್ಮೀ ನನ್ನ ತಾಯಿಯ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಈ ಕ್ಷಣದವರೆಗೆ ನಾನು ನಿನ್ನನ್ನು ಪಾಪದ ಕಣ್ಣಿನಿಂದ ಕಂಡಿಲ್ಲ. ಶೀಲಭಂಗಕ್ಕೆ ಯತ್ನಿಸಿಲ್ಲ. ನೀನು ಶ್ರೀಮಂತರ ಮಗಳು, ಸುಂದರಿಯೂ ಹೌದು. ನಿನ್ನ ತಂದೆಯನ್ನು ಸರಿ ತೂಗಬಲ್ಲ ಶೀಮಂತ ಹುಡುಗನ ಕೈಹಿಡಿದು ಹೋಗಬೇಕಾದ ನೀನು ಇನ್ನು ಕೇವಲ ನನ್ನ ಹೆಣ್ಣು. ಮರಿಯಪ್ಪ ಇಂದಿಲ್ಲ ನಾಳೆ ನಿನ್ನ ಮಗಳಿಗೆ ತಾಳಿ ಕಟ್ಟಿ ಗಂಡನಾಗುವೆನೆಂದು ನಿನ್ನೆದುರು ಇವಳ ಕೆನ್ನೆ ಮುಟ್ಟಿ ಹೇಳುತ್ತೇನೆ. ಲಕ್ಷ್ಮೀ ಜಿದ್ದು ಹಾಕಿದವರ ಮನೆಯ ಹಣ್ಣನ್ನು ಗದ್ದೂಯ್ಯದಿದ್ದರೆ ನಮ್ಮಪ್ಪನ ಮಗನೇ ನಾನಲ್ಲ (ಹೋಗುವನು)

ಮರಿಯಪ್ಪ - ಕೈಯಾಗ ಕೊಡ್ಲಿ ಓಡಿದಿದ್ದಿ ಅಂತಾ ಬದುಕಿದಿ, ಮಗನೆ. ಇರದಿದ್ರ ಹೆಡಗಿ ತುಂಬತಿದ್ದ. ಇರಲಿ ಬಿಡವ್ವ... ನೀನೇನು ಮನಸ್ಸಿಗೆ ಹಚ್ಚಿಕೋಬೇಡ. ಇವತ್ತೇ ಮಾದರಕೇರಿ ಹುಡುಗರಿಗೆ ಹೇಳಿ ಆ ಕಿಡಿಗೇಡಿನ ಹಿಡಿತರಿಸಿ ಜೀವಂತ ಸುಡಿಸಿ ಬಿಡತೀನಿ. ಮಗಳ ಮಾನಕ್ಕ ಕೈಹಾಕಿದ ಆ ಮನೆಹಾಳನ ರುಂಡ

ತಗಸದಿದ್ದರೆ ನನ್ನ ಹೆಸರು ಮರಿಯಪ್ಪನೇ ಅಲ್ಲ. ಈ ಒಂದು ಕೆಲಸಕ್ಕೆ ನನ್ನ ಸಂಪತ್ತೆಲ್ಲ ಹಾಳಾದರೂ ಚಿಂತೆಯಿಲ್ಲ

ಲಕ್ಷ್ಮೀ - ಅಪ್ಪಾ ಅದೇನಿದ್ರೂ ಆ ಭದ್ರಿಯ ವಿಷಯದಲ್ಲಿ ವಿಷಕಾರುವ ವಿಚಾರ ಇಷ್ಟಕ್ಕೆ ಸಾಕು ! ಅವನ ಸಮಾಚಾರ ಅದೇನಿದ್ರೂ, ನನಗಿರಲಿ. ನೀನು ಮುಂದುವರಿಯೋದೇ ಬೇಡ

ಮರಿಯಪ್ಪ - ಹಾಗೆಂದ್ರೇ ಹೇಗಮ್ಮಾ ? ಅವನಿಗೆ ಹೆದರಿ ಹೀಗಂತಿಯಾ ? ಒಂದು ದಿನಾ ಸರಾಯಿ ಕುಡಿಸಿದರೆ ಸಾಕು. ಇವನನ್ನು ಸೀಳಿ ಹಾಕುವವರು ಸಾವಿರ ಜನಾ ಸಿಗತಾರೆ

ಲಕ್ಷ್ಮೀ - ಅಪ್ಪಾ ಅವನ ಮೇಲೆ ಕೈ ಮಾಡುವ ಮಾತು ಬಿಟ್ಟು ಮತ್ತೇನಾದರೂ ಆಡು. ನೀನು ಯಾರಿಗೂ ಹೇಳೋದು ಬೇಡ, ಭದ್ರಿನ್ನ ಸೀಳೋದು ಬೇಡ. ನನ್ನ ಈ ಮಾತ ಮೀರಿ ನೀನೇನಾದರೂ ಅವನಿಗೆ ಕೇಡು ಬಗೆದಿಯಾದರೆ ನಾನು ನನ್ನ ಜೀವನಾ ಇಡುವದಿಲ್ಲ (ಹೋಗುವಳು)

ಮರಿಯಪ್ಪ - ಮಗೂ ಲಕ್ಷ್ಮೀ ಲಕ್ಷ್ಮೀ ಇದೊಳ್ಳೆ ವಿಚಿತ್ರ. ಹುಲಿಯಂತಹ ನನ್ನ ಮಗಳು ಭದ್ರಿ ಕೆನ್ನೆ ಮುಟ್ಟಿದ ತಕ್ಷಣ ಇಲಿಯಂತೆ ಮಾಡಹತ್ತಿದಳಲ್ಲ. ಅವನ ಧೈರ್ಯ ಸಾಹಸಗಳಿಗೇನಾದರೂ ಇವಳ ಮನಸ್ಸು ಮಾರು ಹೋಗಿರಬಹುದೆ ? ಹಾಗಾದರೆ ಮುಂದೆ ನನ್ನ ಗತಿ ? ನನ್ನ ದಾರಿ ಯಾವದು ? ಭದ್ರಿಗೆ ಮಗಳನ್ನು ಒಪ್ಪಿಸಿ ಮದುವೆ ಮಾಡುವದೆ ? ಛೇ ಊರಿಗೇ ಶ್ರೀಮಂತನಾದ ನನ್ನ ಯೋಗ್ಯತೆ ಎಲ್ಲಿ ? ನನ್ನ ಮನೆಯ ಎಂಜಲು ತಿಂದು ಬದುಕಿದ ಭದ್ರಿ ಎಲ್ಲಿ ? ಭದ್ರಿ ಮುಳುಗದೇ ನನ್ನ ಸ್ಥಾನ ಮಾನ ಉಳಿಯದು ಊರಲ್ಲಿ ಅವನ ಕೊಲೆ ಮಾಡಿಸಲೇಬೇಕು (ಕೊಲೆಗಡುಕ ಭೈರ ಬರುವನು)

ಭೈರ - ನಮಸ್ಕಾರ ಧಣಿ

ಮರಿಯಪ್ಪ - ಯಾರು ಭೈರ

ಭೈರ - ಹೌದು ಧಣಿ

ಮರಿಯಪ್ಪ - ಇಷ್ಟು ದಿವಸ ಎಲ್ಲಿಗೋ ಹೋಗಿದ್ದೋ ಮಗನೆ

ಭೈರ - ತಂಗೀನ್ನ ನೋಡಾಕಂತ ಮುಂಬೈಗೆ ಹೋಗಿದ್ದ ಧಣಿ

ಮರಿಯಪ್ಪ - ಮೂರು ತಿಂಗಳ ದಿವ್ಸ ಮುಂದ ಕೂಡಿಸಿಕೊಂಡು ಮುಖಾ ನೋಡತಿದ್ದೇನೋ ಆ ನಿನ್ನ ತಂಗೀದು ? ನಿನ್ನ ಧಣಿಯ ತಂದೆಯ ಮೇಲೆ ಮಣಾಸು ಅರಿಯುವ ಚಾಂಡಲರು ಹುಟ್ಟಿದ್ದಾರ ಊರಲ್ಲಿ

ಭೈರ - ಈ ಕೊಲೆಗಡುಕ ಭೈರನಿಗೆ ಅನ್ನಹಾಕಿ ಸಲುಹೂ ಧಣಿಯ ಮೇಲೆ ಮಣಾಸು ಅರಿಯುವ ಚಾಂಡಾಲ ಹುಟ್ಟಿದನ ? ಅವನ್ಯಾರು ಹೇಳೋ ಧಣೀ

ಮರಿಯಪ್ಪ - ಅವನೇ ಆ ಭದ್ರಾ !

ಭೈರ - ಯಾರು ಆ ಸಂಗವ್ವನ ಮಗಾ ಭದ್ರೀನೇ ? ಹೇಳು ಧಣಿ ಯಾವಾಗ ತಗೀಬೇಕು ಅವಣ ಪರಾಣಾನ

ಮರಿಯಪ್ಪ - ಭದ್ರಿ ಹಗುರಲ್ಲ, ಒಳ್ಳೆ ಧೈರ್ಯಶಾಲಿ

ಭೈರ - ಏ ತಗೀ ಧಣೀ ಆ ಚೋಟುದ್ದ ಹುಡುಗನಿಗೆ ಎಷ್ಟು ಹೆದರತೀರಿ ? ಆ ಕುಲಕರ್ಣಿ ವೆಂಕಪ್ಪನ ಕಾಲು ಮುರಿದು ಆ ತಳವಾರ ಚಿನ್ನವ್ವನ ತಂದು ನಿಮ್ಮ ಪಾದಕ್ಕೆ ಒಪ್ಪಿಸಿದ ಈ ಹುಲಿಯಂತಹ ಬಹಾದ್ದೂರ ಭೈರನಿಗೆ ಚೋಟುದ್ದ ಹುಡುಗ ಈಡೇನ್ರಿ ? ನೀವು ಹೇಳೊದೊಂದೆ ತಡ ಏಕ ಮಾರ್‌ದೋ ತುಕಡಾ

ಮರಿಯಪ್ಪ - ನಾನ ಹೇಳಿದಾಗ ಈ ಕೆಲಸ ಮಾಡಬೇಕು

ಭೈರ - ಆಗಲಿ ಧಣಿ... ಬರ್ತೀನಿ ಧಣಿ ... ನಮಸ್ಕಾರ ಧಣಿ (ಹೋಗುವನು)

ಮರಿಯಪ್ಪ - ಹೌದು ಭದ್ರಿಯ ಕೊಲೆ ಮಾಡಿಸಲೇಬೇಕು. ಭದ್ರಿಯ ಕೊಲೆಯಾಗಲೇಬೇಕು (ವೆಂಕಪ್ಪ ಬರುವನು)

ವೆಂಕಪ್ಪ - ಏನು ಸಾವುಕಾರು ಊರಿಂದ ಯಾವಾಗ ಬಂದದ್ದು ?

ಮರಿಯಪ್ಪ - ಸಾವುಕಾರನ ಸಂಪತ್ತಿಗೆ ಬೆಂಕಿ ಬಿತ್ತು. ಆ ಭದ್ರಿ...

ವೆಂಕಪ್ಪ - ಮತ್ತೇನು ಮಾಡಿದನಪ್ಪಾ ?

ಮರಿಯಪ್ಪ - ನನ್ನ ಕಣ್ಣೆದುರೆ ನನ್ನ ಮಗಳ ಕೆನ್ನೆ ಮುಟ್ಟಿ ಹೋದಾ.

ವೆಂಕಪ್ಪ - ಹಾಂ ಹೌದಾ. ನಾನು ನಿಮಗ ಮೊದಲೆ ಹೇಳಿದೆ. ನೀನೆಲ್ಲಿ ಕೇಳಿದಿ. ರೊಕ್ಕದ ಸೊಕ್ಕಿನಿಂದ ದಕ್ಕದ ಹೆಣ್ಣಿಗ್ಗೆ ಕಣ್ಣುಹಾಕಿ ಊರಿಗೆ ಮಿಕ್ಕಿನಂತ ಹುಡುಗನ್ನ ಎದುರು ಹಾಕೊಂಡಿ ? ಹೆದರಿ ನಡಿಯದಾ ಹುಡುಗನ ಸಿಟ್ಟು ಹಾವಿನ ಜಾತಿಯದು. ಭಯದ ಹದ್ದರಿಯದೇ ತಾಯಿಯ ಮುದ್ದಿನಲ್ಲಿ ಬೆಳೆದ ಭದ್ರಾ ಪ್ರಸಂಗ ಬಿದ್ದರೆ ಕಾಲ ರುದ್ರಾ ! ಪುಣ್ಯಕ್ಕೆ ನಿನ್ನ ಮಗಳ ಕೆನ್ನೆ ಮುಟ್ಟಿ ನಿನ್ನ ಮಾನ ಉಳಿಸಿದ್ದಾನೆ. ಓಡಿದು ನಿನ್ನ ಮಗಳ ಮುಖಕ್ಕೆ ಮುದ್ದು ಕೊಟ್ಟಿದ್ದರೆ ನೀನೇನು ಮಾಡತಿದ್ದಿ

ಮರಿಯಪ್ಪ - ಏನು ಮಾಡತಿದ್ದಿ ? ನೋಡುತ್ತಿರು ವೆಂಕಪ್ಪ. ಈ ಮರಿಯಪ್ಪ ಕೈಲಾಗದ ಹೇಡಿಯಲ್ಲ. ನನ್ನ ಸಂಪತ್ತೆಲ್ಲ ಹಾಳಾಗಿ ಹೋದರೂ ಚಿಂತೆಯಿಲ್ಲ. ಆ ಭದ್ರಿಯ ಕಥ ನಮ್ಮ ಕೈಯಲ್ಲೆ ಮುಗಿಯಲೇಬೇಕು

ವೆಂಕಪ್ಪ - ಅಂದ್ರೆ ಖತಮ್ ಮಾಡಸೂನು ಅಂತಿಯಾ ?

ಮರಿಯಪ್ಪ - ಹೌದು

ವೆಂಕಪ್ಪ - ಬೇಡ

ಮರಿಯಪ್ಪ - ಯಾಕೋ

ವೆಂಕಪ್ಪ - ಕೊಲೆ ಮಾಡಿಸಿ ನಮ್ಮ ತಲೆ ನಾವು ಉಳಿಸಿಕೊಳ್ಳಬೇಕಿದ್ರೆ ದುಡ್ಡು ಎಷ್ಟು ಖರ್ಚಾಗುತ್ತೆ ವಿಚಾರಮಾಡು. ಏನು ಮಾಡಿದರೂ ಬುದ್ಧಿ ಓಡಿಸಬೇಕು, ಕೆಲಸ ಮುಗಿಸಬೇಕು

ಮರಿಯಪ್ಪ - ಓಡಿಸು ಬುದ್ದೀನ

ವೆಂಕಪ್ಪ - ನನ್ನ ಬುದ್ದೀನ ಓಡಿಸಲ್ಯಾ ? ತಾ ಒಂದು ಸಿಗರೇಟು. ಮರಿಯಪ್ಪ ಸಿನ್ನೆ ಕೆಂಜೋಳ ಕೊಯಿಸಿ ಗೂಡು ಹಾಕಿಸಿರಬೇಕಲ್ಲ

ಮರಿಯಪ್ಪ - ಕೊಯಿಸಿನಲ್ಲ.... ಕೆರಿ ಹೊಲದಾಗ ಹದಿನೈದು ಅಕ್ಕಡಿವೂ ಹನ್ನೆರಡು ಗೂಡು ಬಿದ್ದಾವು

ವೆಂಕಪ್ಪ - ಹೌದಾ ಮರಿಯಪ್ಪ ಬುದ್ಧಿ ಓಡಿತು. ನಾನು ಹೇಳಿದ ಹಾಗೆ ಯಾರಿಗೂ ತಿಳಿಯದಂತೆ ಆ ಸಿನ್ನ ಎಲ್ಲಾ ಗೂಡುಗಳಿಗೂ ನೀನೆ ಬೆಂಕಿ ಹಚ್ಚಿಸಿ ಬಿಡು

ಮರಿಯಪ್ಪ - ಏನೋ ವೆಂಕಪ್ಪ ಗೂಡಿಗ ಬೆಂಕಿ ಹಚ್ಚೋದೆ ? ಅದು ಅನ್ನ. ಅನ್ನ ಹ್ಯಾಂಗೋ ಸುಡೋದು

ವೆಂಕಪ್ಪ - ಯಜ್ಞಕ್ಕೆ ಮೊದಲು ಬಲಿಯಿಕ್ಕುವದೇ ಅನ್ನ-ತುಪ್ಪ. ಇದು ರಣಯಜ್ಞ. ಈ ಯಜ್ಞ ಒಮ್ಮೆ ಸಾಂಗವಾಗಿ ನೆರವೇರಿದರ ಭದ್ರಿ ಆದರಲ್ಲಿ ಬಿದ್ದು ದಗ್ಧನಾಗುತ್ತಾನೆ. ಗೂಡು ಸುಟ್ಟ ಅಪರಾಧವನ್ನು ಭದ್ರಿಯ ತಲೆಗೆ ಹೊರಿಸಿ ಭದ್ರವಾದ ನಾಲ್ಕು ಸಾಕ್ಷಿಗಳನ್ನು ಒದಗಿಸಿದರೆ, ಹುಡುಗ ನಾಶವಾಗಿ ಹೋಗುತ್ತಾನೆ. ಆದರೆ ಸಾಕ್ಷಿ ಹೇಳೋರು ಸಿಗೋದ ಕಷ್ಟ. ಮೊದಲೆ ಇದು ಸುಳ್ಳು ಸಾಕ್ಷಿ ಹೇಳಿದವರ ಗತಿ ಕಷ್ಟ

ಮರಿಯಪ್ಪ - ಸಾಕ್ಷಿಗೇನು ಕೊರತೆಯಿಲ್ಲ ವೆಂಕಪ್ಪ, ಸಾಕಷ್ಟು ಜನಾ ಸಿಗತಾರೆ. ನನ್ನ ಸಾಲದಲ್ಲಿ ಸಿಕ್ಕವರೆಲ್ಲ ನಾವು ಕರೆದಾಗ ಬಂದು ನಾವು ಹೇಳಿ ಕೊಟ್ಟಂತೆ ಹೇಳಿ ಹೋಗ್ತಾರೆ

ವೆಂಕಪ್ಪ - ಹಾಗಿದ್ದರ ನಾನು ಹೇಳಿದಂತೆ ಆ ಸಿನ್ನ ಎಲ್ಲಾ ಗೂಡುಗಳಿಗೆ ಬೆಂಕಿ ಹಚ್ಚಿಸಿ ಬಿಡು. ಯಾಕೆ ಅನುಮಾನವೇನು ?

ಮರಿಯಪ್ಪ - ಅನುಮಾನವೇನಿಲ್ಲ ವೆಂಕಪ್ಪ. ನೂರಾರು ಚೀಲ ಜೋಳ ಸುಮ್ಮನೆ ಸುಟ್ಟು ಹೋಗ್ತಾವಲ್ಲಾಂತ. ಈಗಿದ್ದ ಜೋಳದ ಬೆಲೆಯನ್ನು ನೀನಿನ್ನು ಕೇಳಿಲ್ಲ

ವೆಂಕಪ್ಪ - ಹುಚ್ಚಾ ಜೋಳದ ಬೆಲೆಗೆ ಹೋಗುವೆಯಲ್ಲೊ ? ನೋಡು ಗೂಡು ಸುಟ್ಟ ಅಪರಾಧವನ್ನು ಭದ್ರಿಯ ತಲೆಗೆ ಕಟ್ಟೋದು. ವಾರಂಟ ಹುಟ್ಟಿಸೋದು ಪೋಲೀಸರ ವಶಕ್ಕೆ ಒಪ್ಪಿಸೋದು ಲಾಕಪಿಗೆ ಹಾಕಿಸೋದು. ಒದಿಸೋದು. ಆ ಮೇಲೆ ಜೇಲಿಗ ಅಟ್ಟಿಬಿಡೋದು. ಹೇಗಿದೆ ನನ್ನ ಐಡಿಯಾ ಗುಡ್

ಐಡಿಯೋನಾ ನಂದು. ದುಡ್ಡು ಕೇಳಿದ್ರೆ ಕೊಡುವಂಥ ಐಡಿಯಾ ಬರಿ ಸಿಗರೇಟಗೆ ಒದರಿಬಿಟ್ಟೆ ನಾನು

ಮರಿಯಪ್ಪ - ಏ ಹೌದಪ್ಪ

ವೆಂಕಪ್ಪ - ನೆನಪಿರಲಿ ಮರಿಯಪ್ಪ. ಆ ಭದ್ರಿಯ ಸೊಕ್ಕು ಮುರಿಯದ ವಿನಹ ನಿನಗೆ ಊರಲ್ಲಿ ಉಳಿಗಾಲವಿಲ್ಲ. ಅವನ ಬದುಕು ನಿನ್ನ ಸಾವು ! ನೀನು ಬದುಕಬೇಕಿದ್ದರೆ ಆ ಹುಡುಗ ಸಾಯದಿದ್ದರ ಬಿಡಲಿ, ಅವನ ಸೊಕ್ಕಾದರೂ ನಿನ್ನ ಕೈಯಲ್ಲಿ ಮುರಿಯಲೇ ಬೇಕು. ಇಷ್ಟೆಲ್ಲ ಆಗಬೇಕಾದರೆ ಮೊದಲು ನಿನ್ನ ಗೂಡಿಗೆ ನೀನೆ ಬೆಂಕಿ ಹಚ್ಚಬೇಕು. ಅದನ್ನ ನಾನು ನಿಂತು ನೋಡಬೇಕು

ಮರಿಯಪ್ಪ - ಆಗಲಿ ನೀನು ಹೇಳಿದಂತ ನನ್ನ ಎಲ್ಲ ಗೂಡಗಳಿಗೆ ನಾನೇ ಬೆಂಕಿ ಹಚ್ಚಿ ಬಿಡತೀನಿ. ಏನಾಗೋದೊಮ್ಮೆ ಆಗಿ ಹೋಗಲಿ

ವೆಂಕಪ್ಪ - ತಗೊ ಕಡ್ಡಿ ಹಚ್ಚ ಬೆಂಕಿ (ಮರಿಯಪ್ಪ ಹೋಗವನು) ಹೋಗಲೇ ಕಿವಿ ಹರಕ ಹೋಗು ! ಈ ಕುಲಕರ್ಣಿ ವೆಂಕಪ್ಪನ ಕಾಲು ಮುರಿಸಿದ ಧೀರ ಅಂತ ಕುಣಿತಿದ್ದೆಲ್ಲ ಅದು ಆ ತಳವಾರ ಜೆನ್ನಿ ಎದುರಿಗೆ. ಈಗ ಕುಣಿದಾಡೋ ಬೆಂಕಿಯಲ್ಲಿ ಬಿದ್ದ ಹುಳದಂತಾಯಿತು ನಿನ್ನ ಪಾಡು. ಗೂಡು ಸುಟ್ಟ ಅಪರಾಧದಲ್ಲಿ ಸಿಕ್ಕು ಬೀಳಲಿರುವ ಭದ್ರ ಬರೀ ಭದ್ರನಾಗಿ ಉಳಿಯುವುದಿಲ್ಲ. ಸತಿಯ ಸಾವಿನಿಂದ ಕೆರಳಿದ ಕಾಲರುದ್ರನ ಕೋಪವೇ ದಕ್ಷಯಜ್ಞಕುಂಡದಿಂದ ಸಿಡಿದೆದ್ದು ಬಂದ ವೀರಭದ್ರ ಮುಂದೆ ಅವನೇ ಬುದ್ಧಿವಂತಿಕೆಯಿಂದ ನಿನ್ನ ಕೊಲೆ ಗೈಯ್ಯುವನು. ವಜ್ರಾಯುದ ತಲೆ ಇದ್ದವನಿಗೆ ಯಾವ ಕಾಲದಲ್ಲೂ ಬೆಲೆ ಇದೆ. ಈ ಕಾಂಗ್ರೆಸ್ ಸರಕಾರ ನಮ್ಮ ಕುಲಕರ್ಣಿ ಹುದ್ದೆ ಕಸಗೊಂಡಿರಬಹುದು. ಆದರ ದೇವರು ತಲೆಯಲ್ಲಿ ಹಾಕಿದ ಬುದ್ಧೀನು ಕಸಗೊಳ್ಳತನೇನು ? ನಮ್ಮ ಹೋಳ್ಗೀನ ತುಪ್ಪದಲ್ಲೇ ತೇಲಿಸಿ ತಿನ್ನು ಅಂತಾ ಬ್ರಹ್ಮದೇವರು ನಮ್ಮ ಹಣೆಯಲ್ಲಿ ಬರೆದು ಭೂಮಿಗೆ ಕಳಿಸಿದ್ದಾನೆ. ಅಂದ ಬಳಿಕ ಅದನ್ನೇನಾದರೂ ಆ ಕಾಂಗ್ರೆಸ್ಸಿನವರು ತಿದ್ದತಾರಂದೇನು ? ಎಲ್ಲರ ತಲೆ ಮೇಲೆ ಬಂದಿರುವ ಹಾಗೆ ನಮ್ಮ ತಲೆಯ ಮೇಲೂ ಈ ಗಾಂಧಿ ಟೊಪ್ಪಿಗೆ ಬಂದಿದೆ. ಆದರ ನಮ್ಮ ಬುದ್ಧಿ ಇದರ ಮೇಲೆ ಹರದಾಡತಾ ಇದೆ ಏನಂದ್ರೂ ನಮ್ಮಂಥವರದೇ ಈ ಕಾಲ

॥ ಪದ ॥

ಸತ್ಯವಂತರಿಗೆ ಇಲ್ಲಾ ಈ ಕಾಲ ॥ ದುಷ್ಟ ಜನರಿಗಿದು ಸುಭಿಕ್ಷ ಕಾಲ ॥
ಸತಿಸುತರಾ ನಂಬಲರಿಯದ ಕಾಲ ॥ ಸವಿಯಲ್ಲವಿದೂ ವಿಪರೀತ ಕಾಲ ॥
ನಿರ್ಮಲಾತ್ಮಕ ಶ್ರೀ ॥ ಪುರಂದರ ವಿಠಲ ಮರ್ಮದೊಳು ॥
ಭಜಿಸಲರಿಯದ ಕಾಲ ॥ ಸತ್ಯ ॥

## ದೃಶ್ಯ ೭

ಗವಿ ಸೀನು

(ಗುಂಡ ಗವಿ ಸುತ್ತ ತಿರುಗುತ್ತ ಇದ್ದಾನೆ. ಲಕ್ಷ್ಮಿ ಮುಸುಕು ಹಾಕಿಕೊಂಡು ಬರುವಳು. ಗುಂಡ ಹೆದರಿಸುವನು)

ಲಕ್ಷ್ಮಿ - ಗುಂಡಣ್ಣಾ

ಗುಂಡ - ಯಾರು ಲಕ್ಷ್ಮಿಬಾಯಿ ಇದೇನಮ್ಮ ನೀವ್ಯಾಕ ಇಲ್ಲಿ

ಲಕ್ಷ್ಮಿ - ನಿನ್ನ ಹತ್ರ ಒಂದು ಕೆಲಸ ಐತಿ ಗುಂಡಣ್ಣಾ

ಗುಂಡ ಹಾಗಂತ ಹೇಳಿ ಕಳಿಸಿದರ ನಾನೇ ನಿಮ್ಮ ಮನಿತನಕ ಬರತಿದ್ದನಲ್ಲ. ಕಲ್ಲು ಮುಳ್ಳು ತುಳೀತಾ ಈ ಕಾಡಿನಲ್ಲಿ ನೀವ್ಯಾಕ ಬರಬೇಕಾಗಿತ್ತು. ಒಬ್ಬರೇ ಬಂದಿರೋ ಮತ್ಯಾರನ್ನಾದರೂ ಕರೆಕೊಂಡು ಬಂದಿರೋ ?

ಲಕ್ಷ್ಮಿ - ಇಲ್ಲ ಗುಂಡಣ್ಣಾ ನಾನೊಬ್ಬಳೇ ಬಂದೀನಿ

ಗುಂಡ - ಅದು ಯಾಕ್ರಮ್ಮ ? ಇಷ್ಟು ಕಷ್ಟಾಪಟ್ಟು ಯಾಕ ಇಲ್ಲಿ ತನಕ ಬಂದಿರಿ ?

ಲಕ್ಷ್ಮಿ - ಕೆಲಸಾನ ಅಷ್ಟು ಮಹತ್ವದ್ದು ಐತಿ ಗುಂಡಣ್ಣಾ. ಆದ್ದರಿಂದಲೇ ಎಲ್ಲರ ಕಣ್ಣು ತಪ್ಪಿಸಿ ಇಲ್ಲಿ ತನಕ ಬಂದೀನಿ. ನಡಿಸೀ ಕೊಡತೀಯಾ ಗುಂಡಣ್ಣಾ ?

ಗುಂಡ ನನ್ನಿಂದ ನಡೆಸಿಕೊಡೋದು ಆದರೆ ಖಂಡಿತ ನಡೆಸಿ ಕೊಡತೀನಿ ಹೇಳ್ರಮ್ಮಾ ಅದೇನು .

ಲಕ್ಷ್ಮಿ - ಸದ್ಯ ನಿನ್ನ ಗೆಳೆಯನನ್ನು ಭೆಟ್ಟಿ ಮಾಡಿಸು

ಗುಂಡ - ಯಾರು ಭದ್ರಿನ್ನ

ಲಕ್ಷ್ಮಿ - ಹೌದು

ಗುಂಡ - ಯಾಕಮ್ಮ ಅವನ್ಯಾಕ ಭೆಟ್ಟಿ ಮಾಡಿಸಬೇಕು. ಇಷ್ಟು ದಿವಸ ಅವನಿಗೆ ಮಾಡಿದ್ದು ಸಾಲದು ಅಂತಾ ಮತ್ತೇನು ಮಾಡಬೇಕು ಅಂತ ಈ ಕತ್ತಲು ಮುಸುಕು ಹೊತ್ತಿನಲ್ಲಿ ಬಂದೀರಿ

ಲಕ್ಷ್ಮಿ - ಅಯ್ಯಯ್ಯೋ ಅದನ್ನೆಲ್ಲ ಈಗ ಮಾತಾಡೋದಕ್ಕ ಸಮಯ ಇಲ್ಲ ಗುಂಡಣ್ಣಾ.

ಇವತ್ತ ರಾತ್ರಿ ಭದ್ರಿನ್ನ ಮುಗಿಸಬೇಕಂತ ನಮ್ಮಪ್ಪ ಕುತಂತ್ರ ಮಾಡ್ಯಾನ. ಕುಲಕರ್ಣಿ ವೆಂಕಪ್ಪನೂ ಇವರ ಜತೆ ಸೇರಿಕೊಂಡಾನ. ಅಂದ ಮೇಲೆ ಕೇಳೂದೇನು ?

ಗುಂಡ - ಅಯ್ಯೋ ಈ ಮಾತು ನಮಗೆಂದೋ ತಿಳಿದಬಿಟ್ಟೈತಿ. ಅದಕೆಲ್ಲ ಹೆದರೋದಿಲ್ಲ. ಸಿದ್ಧರಾಗೇ ಇದ್ದೀವಿ. ಎಂದು ಮನೆಯಿಂದ ಹೊರಗ ಹಾಕಿಸಿ ತಾಯಿ ಮುಖಾ ಮಗನಿಗೆ, ಮಗನ ಮುಖಾ ತಾಯಿಗೆ ಕಾಣದ ಹಾಗೆ ಮಾಡಿದಿರೋ ಅಂದೇ..

ಲಕ್ಷ್ಮಿ - ಏನಂತ

ಭದ್ರಿ - (ಹೊರಗೆ ಬಂದು) ಇನ್ನೇನಂತ ? ಈ ಊರಲ್ಲಿ ಮರಿಯಪ್ಪ ಹಾಗೂ ವೆಂಕಪ್ಪನ ಮುಗಿಸಿ ನಿನ್ನ ಕೈ ಹಿಡಿಬೇಕು ಒಂದು, ಇಲ್ಲ ಅವರ ಕೈಯಲ್ಲಿ ನಾ ಸತ್ತು ಸ್ವರ್ಗ ಸೇರಬೇಕು ಒಂದು. ಲಕ್ಷ್ಮೀ ಈ ಭದ್ರಿ ಸಾವಿರ ಮಾತಿನವನೂ ಅಲ್ಲ, ಸಾವಿರ ವರುಷ ಬದುಕಬೇಕೂ ಅಂತ ಬಯಸಿದವನೂ ಅಲ್ಲ

ಲಕ್ಷ್ಮಿ - ನಿನ್ನ ಬದುಕು ನಿನಗೆ ಬೇಡವಾದರೆ ಅದು ನನಗ ಬೇಕು. ಅದರಲ್ಲಿಯೇ ನನ್ನ ಜೀವನದ ಬಳ್ಳಿ ಹೂ ಬಿಡಬೇಕು. ನಿನ್ನ ಸಾವಿನ ಸುದ್ದಿ ಇನ್ನೊಂದು ಸಲ ನನ್ನ ಮುಂದೆ ಎತ್ತಬೇಡ. ಅದನ್ನು ತಪ್ಪಿಸಲೆಂದೇ ನಾನಿಲ್ಲಿಯವರೆಗೆ ಬಂದಿರೋದು. ನಮ್ಮಪ್ಪ ಇವತ್ತು ನಿನ್ನ ಕೊಲ್ಲಿಸುವ ಸನ್ನಾಹಲ್ಲಿದ್ದಾನೆ

ಭದ್ರಿ - ನಿಮ್ಮಪ್ಪ ಈ ಸುದ್ದಿ ಹಬ್ಬಿಸಿ ಬಹಳ ದಿನ ಕಳೆಯಿತು. ಆದಕ್ಕೆಲ್ಲ ನಾವು ಭಯ ಪಡೋದಿಲ್ಲ

ಲಕ್ಷ್ಮಿ - ಇಷ್ಟು ದಿವಸದ ಮಾತ ಬೇರ, ಇವತ್ತಿನ ಮಾತೇ ಬೇರ. ಗುಂಡಣ್ಣ ಇಲ್ಲಿಗೆ ಕಟ್ಟಿಗೆ ತರಲಿಕ್ಕ ಬಂದ ಮಾದರ ಮರಿಯ ಗವಿಯಲ್ಲಿದ್ದ ಸುದ್ದಿ ತಂದಿದ್ದಾನ. ಇದನ್ನ ತಿಳಿದೇ ನಮ್ಮಪ್ಪ ಕುಲಕರ್ಣಿ ವೆಂಕಪ್ಪ ಕಾಕಾ ಇವತ್ತ ರಾತ್ರಿ ಇವನ್ನ ಕೊಲೆ ಮಾಡಿಸಬೇಕೆಂದು ಹಂಚಿಕೆ ಹಾಕಿದ್ದಾರ. ನಮ್ಮಪ್ಪನ ಮಾತು ಅಂದ್ರೆ ಆ ಮಂದಿಗೆಲ್ಲ ಸಿದ್ದಪ್ಪಜ್ಜನ ನುಡಿ ಇದ್ದಷ್ಟು ಪವಿತ್ರ

ಭದ್ರಿ - ಆ ಕೇರಿ ಮಂದಿ ನನ್ನ ಮುಗಿಸ್ತಾರೂ ?

ಲಕ್ಷ್ಮಿ ಹೌದು ಭದ್ರಿ ನಮ್ಮೂರ ಮಾದರ ಕೇರ್‍ಯಾಗ ಕೆಲವರು ಕೊಲಗಡುಕರು ಅದಾರ. ನಮ್ಮಪ್ಪನ ಕ್ರೂರತನಕ್ಕ ಕುಲಕರ್ಣಿ ವೆಂಕಪ್ಪನ ಕಪಟತನ ಬೇರ ಬೆರತುಕೊಂಡಿದೆ. ಅಂದ ಮೇಲೆ ಸಾಕಷ್ಟು ಹಣ ಚೆಲ್ಲಿಯಾದರೂ ಇವತ್ತ ನಿನ್ನ ಮುಗಿಸೋ ನಿರ್ಧಾರ ಮಾಡ್ಯಾರ

ಭದ್ರಿ - ನನ್ನ ಮುಗಿಸೋಕೆ ಮುಂಚೆ ಆ ನಿಮ್ಮಪ್ಪನ್ನ ನಾನೇ ಮುಗಿಸಿ ಬಿಡಿತೀನಿ. ಕುಲಕರ್ಣಿ ವೆಂಕಪ್ಪನ ಜುಟ್ಟಾ ಕೀಳತೀನಿ. ನನ್ನ ಕೊಲೆ ಮಾಡಬೇಕು ಅಂದವ್ರನ್ನೆಲ್ಲಾ ಹುಟ್ಟಿಲ್ಲಾ ಅನ್ನಿಸಿಬಿಡತೀನಿ. ನಡಿ ಗುಂಡ ಎಂದೋ ಒಂದು

ದಿನ ಮುಗಿಸಬೇಕಾದ ಹಟ ಇಂದೇ ಈ ಕ್ಷಣದಲ್ಲಿಯೇ ಮುಗಿದು ಹೋಗಲಿ

ಲಕ್ಷ್ಮಿ - ಭದ್ರಿ ...... ...... ದುಡುಕಿ ಕೆಡಕ ಆಗಬಾರದೆಂದು ಎಲ್ಲರ ಕಣ್ಣು ತಪ್ಪಿಸಿ ನಾನಿಲ್ಲಿಯವರೆಗೆ ಬಂದಿರೋದು

ಗುಂಡ - ಹೌದು ಭದ್ರಿ ಮೊದಲೇ ಕುಡುಕರ ಸಹವಾಸ

ಲಕ್ಷ್ಮಿ - ಅದನ್ನೇ ನಾನು ಹೇಳುವುದು. ಆನಿಯಾಗಿ ಕಬ್ಬು ತಿನ್ನೋದಕ್ಕಿಂತ ಇರುವೆ ಆಗಿ ಸಕ್ಕರೆ ತಿನ್ನಬೇಕು. ಶಕ್ತಿ ಉಪಯೋಗ ಆಗಲಾರದ ಈ ಘಳಿಗೆಯಲ್ಲಿ ಯುಕ್ತಿ ಹುಡುಕಬೇಕು. ಗುಂಡಣ್ಣಾ ಈಗ ನೀನೊಂದು ಕೆಲಸ ಮಾಡು. ಈ ಗವಿ ಸುತ್ತ ಒಂದು ಸಲಾ ತಿರಗ್ಯಾಡಿ ಯಾರ ಸುಳಿವೂ ಕಂಡು ಬರದಿದ್ರೆ ಊರತನಕ ಹೋಗಿ ಅವರೇನೂ ಮಾಡ್ತಾರೋ ನೋಡಿಕೊಂಡು ಬಾ. ನಾನಿಲ್ಲಿದ್ದು ಇವನ ನೋಡಕೋತೀನಿ

ಭದ್ರಿ - ಹೌದು ಗುಂಡ ನೀನೂ ಹೋಗಿ ಅವರೇನು ಮಾಡ್ತಾರೇ ನೋಡಿಕೊಂಡು ಬಾ

ಗುಂಡ - ಆಗಲಿ ನೋಡಿಕೊಂಡು ಬರತೀನಿ (ಹೋಗವನು)

ಭದ್ರಿ - ಲಕ್ಷ್ಮಿ ..... ನನ್ನ ಪ್ರಾಣಾ ಉಳಿಸಬೇಕು ಅಂತ ನಿಮ್ಮಪ್ಪನ ಕಣ್ಣು ತಪ್ಪಿಸಿ ಇಲ್ಲಿಯವರೆಗೆ ಬಂದಿಯಾ ?

ಲಕ್ಷ್ಮಿ - ಬರೀ ನಿನ್ನ ಪ್ರಾಣ ಉಳಿಸಬೇಕಿದ್ರೆ ಈ ಸುದ್ದೀನ ಇನ್ನಾರ ಕೈಲಾದ್ರೂ ಹೇಳಿ ಕಳಿಸಿ ಥಣ್ಣಗೆ ಮನಿಯಲ್ಲಿ ಉಳಿದುಬಿಡುತಿದ್ದೆ ... ಭದ್ರಿ... ನನ್ನ ಕ್ಷಮಿಸ್ತಿಯಾ ? (ಕಾಲಿಗೆ ಬೀಳುವಳು)

ಭದ್ರಿ - ನಿನ್ನ ಕ್ಷಮಿಸೋದೆ ? ಯಾಕೆ ನೀನೇನೂ ಮಾಡಿದೀಯಾ ?

ಲಕ್ಷ್ಮಿ - ಇನ್ನೆಂಥಾ ಅಪರಾಧ ಮಾಡಬೇಕು. ಆ ವೆಂಕಪ್ಪ ಕಾಕಾನ ಮಾತಕೇಳಿ ನನ್ನ ಶೀಲ ಕೆಡಿಸಲು ಬಂದಿದ್ದಾ ಅಂತ ನಿಮ್ಮಪ್ಪನ ಮುಂದೆ ಹೇಳಿ ನಿನ್ನ ಮನೆಯಿಂದ ಹೊರಗೆ ಹಾಕಿಸಿದೆನಲ್ಲ

ಭದ್ರಿ - ಏನೋ ಸಿಟ್ಟಿನ ಭರದಲ್ಲಿ ಆಗಬಾರದ್ದಲ್ಲ ಆಗಿಹೋಯಿತು. ನಾನೇನು ಸಣ್ಣ ಅಪರಾಧ ಮಾಡಿದನೆ ? ನಿನ್ನ ಮುಂದಲೆ ಕೂದ್ಲಾ ಕತ್ತರಿಸಿದೆ. ನಿಮ್ಮಪ್ಪನ ಎದುರೆ ನಿನ್ನ ಕೆನ್ನೆ ಮುಟ್ಟಿದೆ. ಗಂಡಸಾದವನು ಎಂಥಾ ಸಿಟ್ಟು ಬಂದರೂ ಹೆಣ್ಣಿಗೆ ಆ ರೀತಿ ಅವಮಾನ ಮಾಡಬಾರದು. ಇದು ಪೌರುಷ ಮೆಚ್ಚುವ ಮಾತಲ್ಲ. ಅವತ್ತು, ಅವಮಾನ ಪಡಿಸಿದ್ದು ನಿನ್ನನಲ್ಲ, ಲೋಕದ ಹೆಣ್ತನವನ್ನು ಅನ್ನೋದು ನನಗೆ ಈಗ ಅರ್ಥವಾಯಿತು. ಇದೋ ಆ ಅಪರಾಧಕ್ಕಾಗಿ ನನ್ನ ಕೆನ್ನೆಗೆ ಬಡಿದು ಸೇಡು ತೀರಿಸಿಕೊ ಲಕ್ಷ್ಮಿ. ಆದರೆ ಶೀಲ ಕೆಡಿಸಲಿಕ್ಕೆ ಬಂದದ್ದು ಸುಳ್ಳು ಅಂತ ನನ್ನ ತಾಯಿಯ ಎದರಿಗೆ ನೀನೊಂದು ಸಲ ಹೇಳ್ತೀಯ ?

ಅಂದ್ರೆ ನಮ್ಮಪ್ಪ ನನ್ನ ಕ್ಷಮಿಸ್ತಾಳೆ. ಲಕ್ಷ್ಮೀ ನೋಡು ಈ ಭದ್ರಿ ಯಾರಿಗೂ ಯಾವದಕ್ಕೂ ಕೈ ಒಡ್ಡಿದವನಲ್ಲ. ತಲೆ ತಗ್ಗಿಸಿ ಬೇಡಿದವನೂ ಅಲ್ಲ. ಆದರಿಂದ ನಿನ್ನೆದುರು ತಲೆ ತಗ್ಗಿ ಕೈ ಒಡ್ಡಿ, ಕಾಲಿಗೆ ಬಿದ್ದು ಬೇಡುತ್ತೇನೆ. ಶೀಲ ಕೆಡಿಸಲಿಕ್ಕೆ ಬಂದದ್ದು ಸುಳ್ಳು ಅಂತ ನಮ್ಮಪ್ಪನ ಮುಂದೆ ಹೇಳ್ತೀಯಾ ಲಕ್ಷ್ಮಿ ?

ಲಕ್ಷ್ಮೀ - ಛೀ ಇದೇನೂ ಮಾತು ಅಂತ ಆಡ್ತಿಯಾ ? ಬಿಡ್ತು ಅನ್ನು. ನಿನ್ನ ಮೇಲೆ ಸುಳ್ಳು ಅಪವಾದ ಹೊರಿಸಿದ ನಾನು ಅಪರಾಧಿನಿ

ಭದ್ರಿ - ಆದರೂ ನಾನು ಗಂಡಸು. ಯಾವ ಅಪರಾಧ ಮಾಡಿದರೂ ಕಟ್ಟಳೆಯ ಮಹತ್ವ ನಿನ್ನಷ್ಟಿಲ್ಲ. ಹತ್ತು ಹೆಣ್ಣಿನ ಮೇಲೆ ಹಲ್ಲೆ ನಡೆಸಿದರೂ ನನ್ನ ಮಾನಕ್ಕೆ ಚ್ಯುತಿಯಿಲ್ಲ. ಆದರೆ ಹೆಣ್ಣಿನ ಬದುಕು ಹಾಗಲ್ಲ. ಮುಟ್ಟಿದವನಿಗೆ ಮೀಸಲಾಗಿ ಉಳಿಯಬೇಕಾದ ಸೂಕ್ಷ್ಮ ಸೃಷ್ಟಿಯಾದ ನಿನ್ನ ಕೆನ್ನೆ ಮುಟ್ಟಿ ಮಾಡಿದ ಆ ದೋಷ ಕ್ಷಮಿಸಿಬಿಡು ಲಕ್ಷ್ಮೀ

ಲಕ್ಷ್ಮೀ - ಹಾಗಿದ್ದರೆ ಇನ್ನೆಂದು ನನ್ನ ಕೆನ್ನೆ ಮುಟ್ಟುವದಿಲ್ಲವೆ ?

ಭದ್ರಿ - ಹೂಂ.... ಹೂಂ.... ಇಲ್ಲ

ಲಕ್ಷ್ಮೀ - ಏಕೆ ?

ಭದ್ರಿ - ಯಾಕೆಂದರೆ ನಿಮ್ಮಪ್ಪ ನನ್ನ ಶತ್ರು. ನಿನ್ನ ಈ ದುರ್ಗತಿಗೆ ತಂದ ನಿಮ್ಮಪ್ಪನ ಮೇಲೆ ನನ್ನ ದ್ವೇಷವಿದೆ. ಮನೆಯವರಿಂದ ಅಗಲಿಸಿದ ರೋಷವಿದೆ

ಲಕ್ಷ್ಮೀ - ನಮ್ಮಪ್ಪನ ಎದುರು ನನ್ನ ಕೆನ್ನೆ ಮುಟ್ಟಿ ಲಕ್ಷ್ಮೀನೇ ಮದುವೆ ಆಗತೀನಿ ಅಂತ ಹೇಳಿದೆಲ್ಲ. ಆಗ ಇರಲಿಲ್ಲವೇನೋ ಈ ರೋಷ

ಭದ್ರಿ - ಇತ್ತು ನಿಮ್ಮಪ್ಪನ ಮೇಲೆ ಅಷ್ಟೇ ಅಲ್ಲ, ನಿನ್ನ ಮೇಲೆ ಕೂಡಾ ನನ್ನ ದ್ವೇಷ ಇತ್ತು

ಲಕ್ಷ್ಮೀ - ಈಗ ನಾನು ಸೋತವಳಾಗಿ ಬಂದು ಎರಡು ಪ್ರೀತಿ ಮಾಡು ಆಡಿದ ತಕ್ಷಣ ನಿನ್ನ ರೋಷ ಸುಟ್ಟು ಹೋಯಿತೆ ಹುಚ್ಚ ! ನಿನ್ನಂಥ ದುಡುಕು ಸ್ವಭಾವದ ಸಿಟ್ಟಿನ ಗಂಡಸಿನ ಕತ್ತಿಗೆ ಕೊಯ್ಯಲಿಕ್ಕೆ ನನ್ನಂಥ ಹೆಣ್ಣಿಗೆ ಕುಡಗೋಲು ಯಾಕ ? ಕೂದ್ಲ ಎಳೀನೇ ಸಾಕು. ಭದ್ರಿ ಸಿಟ್ಟು ಹೋಯಿತು ಅಂದ್ರ ನಮ್ಮಪ್ಪನ ಮೇಲೆ ಇಟ್ಟ ಆಣೆಯೂ ಹೋಯಿತು. ಹೋಗಲಿ ಹಿಂದೆ ಆದದ್ದನ್ನು ಮರೆತು ಬಿಡು ಒಳ್ಳೆಯ ರೀತಿಯಿಂದ ಬಾಳು ಅಂತ ನಾನು ನಮ್ಮಪ್ಪನಿಗೆ ಹೇಳ್ತೀನಿ ತಿಳಿತಾ

ಭದ್ರಿ - ಇದಕ್ಕೆಲ್ಲ ನಿಮ್ಮಪ್ಪ ಒಪ್ಪುತ್ತಾನೆಯೇ ? ಸಾಲ ಮುಟ್ಟಿತೆಂದು ನಮ್ಮ ಹೊಲ ಮನೆಗಳನ್ನು ನಮಗ ಬಿಟ್ಟು ಕೊಡುತ್ತಾನೆಯೇ ?

ಲಕ್ಷ್ಮೀ - ಭದ್ರಿ ನಮ್ಮಪ್ಪನಿಗ ಇರುವವಳು ನಾನೊಬ್ಬಳೇ ಮಗಳು ಇಂದು ನಾನೇ ನಿನವಳು. ಅಂದ ಬಳಿಕ ಈ ಮಾತಿನಲ್ಲಿ ಇನ್ನೇನು ಉಳಿಯಿತು ?

ಭದ್ರಿ - ಲಕ್ಷ್ಮಿ ನೀನೆಷ್ಟು ಒಳ್ಳೆಯವಳು !

ಲಕ್ಷ್ಮೀ - ಆದರೂ ನಾನು ನಿನಗೆ ಸೋತು ಬಂದವಳು. ಭದ್ರಿ ನೀನು ನನ್ನ ಪ್ರೀತಿಸ್ತಿಯಾ ?

ಭದ್ರಿ - ಹೂಂ, ಮತ್ತೆ ನೀನು ......

ಲಕ್ಷ್ಮೀ - ನಾನು ಪ್ರೀತಿಸುವುದು ಮದುವೆಯಾಗೋದು ನಿನ್ನನ್ನೇ (ಭದ್ರಿ ಲಕ್ಷ್ಮೀನ್ನ ಎತ್ತಿ ಕೇಕೇ ಹಾಕುವನು) ಎಂದು ನೀನು ನನ್ನ ತಂದೆಯ ಎದುರಿಗೆ ದಿಟ್ಟತನದಿಂದ ನನ್ನ ಕೆನ್ನೆ ಮುಟ್ಟಿ ಮದುವೆಯಾಗುವೆನೆಂದು ಹೇಳಿದಿಯೋ ಆ ಕ್ಷಣದಲ್ಲಿಯೇ ನಿನ್ನ ಮದುವೆಯಾಗ ಬಯಸಿ ಮನಸ್ಸು ಒಪ್ಪಿಸಿದೆ

ಭದ್ರಿ - ಹಾಗಿದ್ದರೆ ಆ ಕ್ಷಣವೇ ಯಾಕೆ ಹೇಳಲಿಲ್ಲ... ನಾನು ಭದ್ರೀನೆ ಮದುವೆಯಾಗತೀನಿ ಅಂತ

ಲಕ್ಷ್ಮೀ - ಅಷ್ಟೊಂದು ನಿರ್ಘಯವಾಗಿ ಹಡೆದ ತಂದೆಯ ಎದುರಿಗ ಈ ಮಾತು ಹೇಳಿದರೆ ಕೇಳಿದ ಜನ ನಾಚಿಕೆ ಬಿಟ್ಟವಳು ಎಂದಾರು

ಭದ್ರಿ - ಶ್ರೀಮಂತರ ಮಗಳಿಗೂ ನಾಚಿಕೆ ಇರುತ್ತೇನು ?

ಲಕ್ಷ್ಮೀ - ಶ್ರೀಮಂತರ ಮನೆಯಲ್ಲಿ ಹುಟ್ಟಿದರೂ ನಾಚಿಕೆ ಎಂಬುದು ಹೆಣ್ಣಿಗೆ ಹುಟ್ಟುಗುಣ. ಎಲ್ಲಾ ವಿಷಯದಲ್ಲಿ ದಿಟ್ಟತನಾ ಕೊಟ್ಟೀತನ ತೋರಿಸಲಿಕ್ಕೆ ನಾನೇನೂ ಗಂಡಲ್ಲ ಹೇಳಿ ಕೇಳಿ ಹೆಣ್ಣು

ಭದ್ರಿ - ಓಹೋ ಯಾವಾಗ ಅರ್ಥ ಮಾಡಿಕೊಂಡಿಯೋ ನೀನು ಹೆಣ್ಣು ಅನ್ನೋದನ್ನ

ಲಕ್ಷ್ಮೀ - ನಿನ್ನ ಕೈ ನನ್ನ ಕೆನ್ನೆಗೆ ಮುಟ್ಟಿದಾಗ, ಉಕ್ಕಿನಂತಿದ್ದ ನನ್ನ ಮೈ ಮೇಣದಂತೆ ಕರಗಿದಾಗ, ಬೇರೊಂದು ಕೆನ್ನೆ ನಿನ್ನ ಕರಸ್ಪರ್ಶಕ್ಕೆ ಕಾತರಿಸಿ ಮತ್ತೆ ಮತ್ತೆ

ಭದ್ರಿ- ಹೇಳು ಹೇಳು

ಲಕ್ಷ್ಮೀ - ಮತ್ತೆ.....ಮತ್ತೆ...

॥ ಪದ ॥

ಏನು ಹೇಳಲಿ ಹೇಗೆ ಹೇಳಲಿ ॥ ನಿನಗೊಲಿದು ಬಂದೆ ನಾನಿಲ್ಲಿ ॥
ಐದು ತಿಂಗಳ ಹಿಂದೆ । ಐಹೊಳಿಯ ಜಾತ್ರೆಯಲ್ಲಿ ॥
ಜಡೆ ಹಿಡಿದು ಎಳದಿ । ನದಿಯಾ ಬಳಿಯಲ್ಲಿ ॥
ನಿನಗಂಜಿ ನಾ ಸೇರಿದೆ ಜನರಲಿ
ಎಂಥ ಎದೆಗಾರ ನೀ ಗಂಭೀರ
ನಿನ ಕಂಡ ಮರುಳಾದೆನಾ ಪೂರಾ ॥
ಯಾವ ದೇವರ ಬೇಡಿ ಒಲಿಸೀ । ಹಡದಾಳೊ ನಲ್ಲ ನಿನ್ನ ತಾಯಿ ॥
ಹಡದಾಳೋ ನಲ್ಲ ನಿನ್ನ ತಾಯಿ....

ಲಕ್ಷ್ಮಿ - ಭದ್ರಿ ಉಂಡಿ ತಂದೀನಿ ತಿನ್ನು ಬಾ

ಭದ್ರಿ - ಆಂ ಉಂಡಿ ತಂದೀಯಾ ನಡಿ (ಇಬ್ಬರೂ ಉಂಡಿ ತಿನ್ನುವಾಗ ಭೈರ ಬರುವನು. ಇಬ್ಬರಿಗೂ ಹೊಡೆದಾಟ, ಭೈರ ಓಡಿ ಹೋಗುವನು) ಲಕ್ಷ್ಮಿ ದ್ವೇಷದಿಂದ ಉರಿತಾ ಇದ್ದ ನನ್ನ ಹೃದಯಾನ ಒಂದು ಕ್ಷಣದಲ್ಲಿ ಶಾಂತಿ ಮಾಡಿ ಬಿಟ್ಟಿ. ಬಾಳಿನ ಆಸೆ ಬಿಟ್ಟು ನಾಳಿನ ಕಲ್ಪನೆಯ ತೆರೆದು ಕೇವಲ ಸೇಡಿಗಾಗಿ ಸಾವಿನತ್ತ ಧಾವಿಸುತ್ತಿದ್ದ ನನ್ನ ದಾರಿಯನ್ನೇ ಬದಲು ಮಾಡಿಬಿಟ್ಟಿ. ಲಕ್ಷ್ಮಿ ನೀನು ಕಾಲಿಟ್ಟ ನೆಲ ನಂದನವನಾ

ಗುಂಡ - (ಓಡಿಬಂದು) ಘಾತವಾಯಿತೋ ಭದ್ರಿ ಘಾತವಾಯಿತೊ ! ಮರಿಯಪ್ಪನವರು ಗೂಡುಗಳಿಗೆಲ್ಲ ಬೆಂಕಿ ಇಟ್ಟು ಸುಟ್ಟುಬಿಟ್ಟರು. ಈಗ ನೀನೆ ಸುಟ್ಟವನು ಅಂತ ಊರ ಜನರೆಲ್ಲ ನಿನ್ನ ಹೊಡೆಯುವದಕ್ಕ ಹುಡುಕುತಿದ್ದಾರ. ಈಗೇನೋ ಮಾಡೋದು ?

ಲಕ್ಷ್ಮಿ - ಮೊದಲು ಈ ಸ್ಥಳಾ ಬಿಡೋದು. ಸಿಕ್ಕರೆ ಬೆಂಕಿಯಲ್ಲಿ ಹಾಕಿ ನಿನ್ನ ಸುಡಬೇಕಂತ ನಮ್ಮಪ್ಪ ಮಾಡಿದ ಕುತಂತ್ರ ಇದು. ಬಾ ಭದ್ರಿ ಯಾರಿಗೂ ಕಾಣದಂತೆ ನಮ್ಮ ಮನೆಯಲ್ಲಿಟ್ಟು ನಿನ್ನನ್ನ ರಕ್ಷಿಸುತ್ತೇನೆ. ನಿನ್ನ ಪ್ರಾಣರಕ್ಷಣೆಯ ಭಾರ ನನಗಿರಲಿ ಬಾ ಭದ್ರಿ (ಹೋಗುವರು)

# ದೃಶ್ಯ ೮

ರಸ್ತಾ

(ಮರಿಯಪ್ಪ, ವೆಂಕಪ್ಪ, ಕೆಂಚಪ್ಪ ಬರುವರು)

ಮರಿಯಪ್ಪ - ಅವನ ತಾಯಿ ಹೊಟ್ಟೆ ತಣ್ಣಗಿತ್ತು ಅಂತ ಬದುಕಿದಾ. ನಮ್ಮ ಗೂಡು ಸುಟ್ಟ ಆ ಭದ್ಮಾಸ್ ಭದ್ರಿ ನಿನ್ನೆ ರಾತ್ರಿ ನಮ್ಮ ಕೈಗೇನಾದ್ರೂ ಸಿಕ್ಕಿದ್ರೇ ಅದೇ ಬೆಂಕಿಯಲ್ಲಿ ಹಾಕಿ ಸುಟ್ಟ ಅವನ ಬೂದಿನ ಹಣೆಗಿಟ್ಟುಕೊಳ್ಳುತ್ತಿದ್ದೆ

ವೆಂಕಪ್ಪ - ನೀನ್ಯಾಕ ಸುಡೋದೊ ಮರಿಯಪ್ಪ, ಸಿಕ್ಕಿದ್ರೆ ಊರ ಜನಾನೆ ಅವನ್ನ ಸುಟ್ಟು ಬಿಡತಿದ್ರು. ಆದರೆ ಗೂಡಿಗೆ ಬೆಂಕಿ ಇಟ್ಟ ಚಂಡಾಲಾ ಯಾವ ಸ್ಥಳದಲ್ಲಿ ಅಡಿಗಿಬಿಟ್ಟನೊ ರಂಡೇ ಮಗ. ಬೆಳ್ಳ ಬೆಳತನಕ ಹುಡುಕಿದ್ರು ಅವನ ಸುಳಿವೆ ಹತ್ತಲಿಲ್ಲ ಕೆಂಚಪ್ಪ ಇಂಥ ಕೆಲಸ ನಮ್ಮೂರಾಗ ಈವರೆಗೆ ಯಾರಾದ್ರೂ ಮಾಡಿದ್ರಾ ?

ಕೆಂಚಪ್ಪ - ಎಲ್ಲಿ ಬರಬೇಕ್ರಿ ಧಣಿ ... ಗೂಡಿಗೆ ಬೆಂಕಿ ಇಟ್ಟು ಮನಸ್ಯಾರ ಹೊಟ್ಟಿ ಮ್ಯಾಲೆ ಬರೆ ಎಳೆಯುವಂತ ಕೆಲಸ. ಸಂಗವ್ವ ಯಾವ ದೇವರಿಗೆ ನಡುಕೊಂಡು ಎಷ್ಟು ದಿವಸ ಹರಕೆ ಹೊತ್ತು ಪಡಿದಿದ್ಲೋ ಈ ಚಂಡಾಲನ್ನ. ಇನ್ನೆಲ್ಲಿ ಅಂತ ಹುಡುಕಬೇಕ್ರಿ ಕುಲಕರ್ಣೇರ ಅವನ್ನ

ವೆಂಕಪ್ಪ - ಅಂದ್ರ... ಇನ್ನು ನಾವೆ ಹುಡುಕೋನ ಅಂತೀಯೇನ ಕೆಂಚಪ್ಪ. ನೀನೂ ಬೆಳ್ಳಬೆಳತನಕ ಹುಡಿಕಿದಿ. ನಮ್ಮ ಕೆಲಸ ಮುಗಿತು. ಹಗಲಿ ಹುಡಕವರೇನು ನಾವು, ರಾತ್ರಿ ಅಷ್ಟೇ ಹುಡುಕುವವರು. ಒಂದರ ಮನಿ ಬಿಟ್ಟಿವೇನು ? ಪ್ರತಿಯೊಂದು ಮನಿಗಿ ಕದಾ ತಗಿಸೋದು ಒಳಗ ಹೋಗೋದು ಹೊರಗ ಬರೋದು. ಇದನ್ನ ತಿಳಿದ ವಾಲೀಕಾರ ತಿಪ್ಪನ ಕೈಲಿ ಚೀಟಿ ಕೊಟ್ಟ ಕಳಸೀನಿ, ಪೋಲೀಸ ಪಾರ್ಟಿ ಬರತದ ಪಾತಾಳದಾಗ ಇದ್ರು ಹೊರಗ ಎಳಿತದ

ಮರಿಯಪ್ಪ - ವೆಂಕಪ್ಪ ಪೋಲೀಸ ಸ್ಟೇಶನ್ ತನಕ ನಾವೇ ಹೋಗಿದ್ರ ಒಳ್ಳೇದಿತ್ತೇನೂ ಅಂತ

ವೆಂಕಪ್ಪ - ಯಾಕಂತ ?

ಮರಿಯಪ್ಪ - ಬರೀ ನಿನ್ನ ಚೀಟಿ ಮೇಲಿ ಫೌಜದಾರ ಸಾಹೇಬರು ಬರತಾರೋ ಇಲ್ಲೊ.

ವೆಂಕಪ್ಪ - ಅಂದ್ರೇನು... ಈ ಕುಲಕರ್ಣಿ ಚೀಟಿ ಅಂದ್ರ ಅದೇನೂ ಖಾದಿ ಕೇಂದ್ರದೊಳಗ ನೂಲೋ ರಾಟಿಯಂತಾ ಮಾಡಿ ಏನೋ ? ಚೀಟಿ ಕೊಟ್ಟು ಪ್ರಸಂಗ ಬಂದ್ರೆ ಪಾರ್ಲಿಮೆಂಟ ಆಳುವ ಪ್ರೆಸಡೆಂಟರನ್ನ ಇಲ್ಲಿಗೆ ಕರೆಸುವರು ನಾವು. (ಚೆನ್ನಿ ಬರುವಳು) ಬಾ ಚೆನ್ನಿ

ಚೆನ್ನವ್ವ - ಯಾಕ್ರಿ ಕುಲಕರ್ಣಿರ ಕರಿಯಾಕ ಕಳಿಸಿದ್ರಿ

ವೆಂಕಪ್ಪ - ಹೌದು ನೋಡ ಚೆನ್ನಿ. ಸಿಸ್ತಾಗಿ ಮಸಾಲಿ ಸಾಮಾನು ಕೊಡಸ್ತೀನಿ ಫಸ್ಟಕ್ಲಾಸ್ ಅಡಗಿ ಮಾಡಬೇಕು. ಯಾಕಂದ್ರ ನಮ್ಮೂರಿಗೆ ಪೋಲೀಸ್ ಪಾರ್ಟಿ ಬರ್ತದ

ಚೆನ್ನಿ - ನಾ ವಲ್ರಿ ನನ್ನ ಕೈಲಿ ಆಗೋದಿಲ್ಲ

ಮರಿಯಪ್ಪ - ಯಾಕ ನಿನಗೇನು ಬಂತು ಗುನುಗು

ಚೆನ್ನಿ - ಹೂಂ ನಿನಗೇನು ಬಂತು ಗುನುಗು ಅಂತಿ ಐದು ಮಂದಿಗೆ ಆಗುವಷ್ಟು ಕೊಡಿಸಿತೀದಿ. ಹತ್ತು ಮಂದಿನ್ನ ಕರಕೊಂಡು ಬಂದು ತಿನಸ್ತೀದಿ

ವೆಂಕಪ್ಪ - ಮರಿಯಪ್ಪ ಈ ಸಾರಿ ನಾವು ಕೊಡಿಸೋದು ಬ್ಯಾಡ... ನಿಮಗೇನೇನು ಬೇಕೋ ನೀವೇ ತಗೊಳ್ರಿ. ಕೊಡೊ ಒಂದೆ ನೂರು ರೂಪಾಯಿ

ಮರಿಯಪ್ಪ - ನೂರಾ ಮುನ್ನೂರೊ

ಚೆನ್ನಿ - ಮತ್ತ ಮೂರೂ ಕೊಡಬೇಕಂತ ಮಾಡಿ ಏನು ? ಕೇಳಿದಿಲ್ಲ ಕೋಳಿ ಧಾರಣಿನ ಹದಿನೈದು ರೂಪಾಯಿಕ್ಕೆ ಒಂದು

ಕೆಂಚಪ್ಪ - ಅವೂ ಫಾರಮ್ ಕೋಳಿ

ವೆಂಕಪ್ಪ - ತತ್ತಿ ಹಾಕಿದರ ಮರಿಸಹಿತ ಆಗೋದಿಲ್ಲ. ಕೆಂಚಪ್ಪ ಅವನ್ನೇನೂ ಕೇಳ್ತಿರಿ ಶೆಟ್ಟರ ಅಂಗಡಿಗೆ ಹೋಗು ನಿಮಗೇನು ಬೇಕು ಎಲ್ಲಾ ತಗೊಳ್ರಿ ಇವನು ಹೆಸರು ಹಚ್ಚರಿ. ಸರಳ ಕೊಟ್ಟಾ ಸರಿ ಇಲ್ಲಾಂದ್ರ (ಚೆನ್ನಿ. ಕೆಂಚಪ್ಪ ಹೋಗುವರು ಫೌಜದಾರ ಸಾಹೇಬರು ಬರುವರು) ನಮಸ್ಕಾರಿ ಸಾಹೇಬರೆ

ಫೌಜದಾರ - ಮತ್ತೇನು ಕುಲಕರ್ಣಿಯವರ ಅರ್ಜಂಟ ಬರಬೇಕಂತ ಚೀಟಿ ಕೊಟ್ಟು ಕಳಿಸಿದ್ರಿ

ವೆಂಕಪ್ಪ - ಹೇಳ್ತೀನಿ

ಫೌಜದಾರ - ಆ ಇವರೂ....

ವೆಂಕಪ್ಪ - ಇವರೂ ನಮ್ಮೂರ ಸಾವುಕಾರ್ರು ..... ನಮಸ್ಕಾರ ಮಾಡೊ (ಮರಿಯಪ್ಪ ನಮಸ್ಕರಿಸುವನು)

ಫೌಜದಾರ - ನಿನ್ನೆ ರಾತ್ರಿ ಸುಟ್ಟ ಗೂಡುಗಳು ನಿನ್ನವೇನೋ

ಮರಿಯಪ - ಹೌದಿ ಸಾಹೇಬರ ! ಮೂರು ಸಾವಿರ ಬೆಲೆ ಬಾಳುವ ಗೂಡು ಸುಟ್ಟು

ಹೋದುವರಿ. ಬಡವ ಇದ್ದೀನಿ ಉಳಿಸಬೇಕ್ರಿ ಸಾಹೇಬರೆ

ಫೌಜದಾರ - ವೆಂಕಪ್ಪ ಬಾಯಿಲ್ಲಿ.... ಮೂರು ಸಾವಿರ ಮಾಲು ಸುಟ್ಟು ಹೋಗಿವೆ ಅಂತಾನ. ಮೇಲೆ ಬಡವಾ ಅಂತಾನಲ್ಲೊ ?

ವೆಂಕಪ್ಪ - ಅಂವಾ ಮೊದಲು ಬಡವನೆ ಇದ್ರಿ. ಈಗ ಸ್ವಲ್ಪ ಶ್ರೀಮಂತ ಆಗೇನ್ರಿ. ನಿಮಗೆ ಗೊತ್ತಾಯಿತೇನ್ರಿ (ಮರಿಯಪ್ಪನ ಕಡೆ ಹೋಗುವನು) ಮರಿಯಪ್ಪ

ಮರಿಯಪ್ಪ - ಏನಂತಾ ?

ವೆಂಕಪ್ಪ - ಮರಿಯಪ್ಪ ನಮ್ಮ ಸಾಹೇಬರು ನಿನ್ನ ಒಂದು ಸಲ ತಮ್ಮ ಬೆನ್ನಿಗೆ ಹಾಕೊಂಡ್ರು ಅಂದ್ರ ಮುಗಿದು ಹೋಯಿತು ನೀನೇನೂ ಭಯಪಡಬೇಡ. ಆದರೆ ಬ್ರಹ್ಮ ದೇವರು ಮೊದಲು ಬರಬೇಕು. ಭಯ ಆ ಮೇಲೆ ಇಲ್ಲಿ ತಾಯಿಲ್ಲಿ (ರೂಪಾಯಿ ತಂದು ಸಾಹೇಬರ ಜೇಬಿನಲ್ಲಿ ಇಡುವನು)

ಫೌಜದಾರ - ಏ ಏನಿದು..... ವೆಂಕಪ್ಪ

ವೆಂಕಪ್ಪಾ - ಏನಿಲ್ಲೇಳ್ರಿ ಸಾಹೇಬರೆ. ಮರಿಯಪ್ಪ ನಮ್ಮ ಸಾಹೇಬರೂ ಇಂಥ ಕೆಲಸದಲ್ಲಿ ಸರ್ದಾರ ಮನುಷ್ಯರು. ಸಾಹೇಬರ ಮೇಜವಾನಿ ವ್ಯವಸ್ಥೆ ಮಾಡಿಸಿನ್ರಿ. ಕೂಕೂ ಕೂ....

ಫೌಜದಾರ - ಮರಿಯಪ್ಪ ನಿನಗೆ ಈ ಊರಲ್ಲಿ ಯಾರ ಮೇಲೆ ಸಂಶಯವಿದೆಯೋ ಅವರೆಲ್ಲರ ಹೆಸರು ಬರೆದು ನನ್ನ ಕಡೆ ಒಂದು ಕಂಪ್ಲೇಂಟು ಕೊಡು. ಮುಂದಿನ ವಿಚಾರ ನನಗಿರಲಿ (ಫೈರ ಓಡಿಬರುವನು)

ಫೈರ - ಕುಲಕರ್ಣಿರ ಭದ್ರಿಯಿರುವ ಜಾಗ ಪತ್ತೆ ಆಯಿತು

ವೆಂಕಪ್ಪ - ಎಲ್ಲೊ ?

ಫೈರ - ನಮ್ಮ ಸಾವಕಾರ ನೆಲಮನಿಯಲ್ಲಿದ್ದ. ನಾವು ಹಿಡಿಲಿಕ್ಕೆ ಹೋಗಿದ್ವಿ. ಸಿಗದೆ ತಮ್ಮ ಮನಿ ಕಡೆ ಓಡಿಹೋದ

ಮರಿಯಪ್ಪ - ನಡಿರಿ ಸಾಹೇಬರ ಬ್ಯಾಟಿ ಸಿಕ್ಕಿತು. (ಎಲ್ಲರೂ ಹೋಗವರು)

# ದೃಶ್ಯ ೯

(ಸಂಗವ್ವನ ಮನೆ)

(ಭದ್ರಿ ಓಡಿ ಬರುವನು. ಒಳಗೆ ಸಿದ್ದ ಕೆಮ್ಮುವನು. ಅದನ್ನು ಕೇಳಿ ಭದ್ರಿ ಮರೆಯಾಗಿ ನಿಲ್ಲುವನು. ಸಿದ್ದಣ್ಣ ಹೊಲಕ್ಕೆ ಹೋಗುವ ತಯಾರಿ)

ಸಿದ್ದ - ಪಾರೂ..... ನೀನತ್ತರೂ ಸರಿ, ಅವ್ವ ಸತ್ತರೂ ಸರಿ. ಭದ್ರಿ ಮನೆಯಲ್ಲಿ ಕಾಲಿಟ್ಟರೆ ನಾ ಕೇಳೋದಿಲ್ಲ. ಗೂಡು ಸುಟ್ಟ ಬಗ್ಗೆ ಅವನ ಮೇಲೆ ವಾರಂಟ ಹುಟ್ಟಿದೆ. ನಾವು ಹೊಲಕ್ಕೆ ಹೋದಾಗ ಅಕಸ್ಮಾತ ಭದ್ರಿ ಮನಿಗೆ ಬಂದರ ಮನೆಯಲ್ಲಿ ಬರಗೋಡಬೇಡ... ಬಾರವ್ವ ಹೊತ್ತಾಯಿತು

ಸಂಗವ್ವ - (ಬಂದು) ಹೌದವ್ವ ಭದ್ರಿ ಬಂದರೆ ಮನೆಯಲ್ಲಿ ಬರಗೊಡ ಬೇಡ ನಡಿಯಪ್ಪಾ... (ಹೋಗುವರು)

ಪಾರ್ವತಿ - ಮುಶ್ಕಿ ನನ್ನ ಕಾಲ್ಗುಣವೇ ಕೆಟ್ಟದು (ಒಳಗೆ ಹೋಗುವಾಗ ಭದ್ರಿ ಬಂದು)

ಭದ್ರಿ - ಅತ್ತಿಗೀ

ಪಾರ್ವತಿ - ಭದ್ರಿ... ಒಳಗೆ ಬಾ ಭದ್ರಿ

ಭದ್ರಿ - ನಾನು ಒಳಗೆ ಬರಕೂಡದೆಂದು ಆಜ್ಞೆ ಮಾಡಲಿಲ್ಲವೆ ಅಣ್ಣಾ

ಪಾರ್ವತಿ - ಈಗ ನಾನು ಅಪ್ಪಣೆ ಮಾಡ್ತೀನಲ್ಲ, ಬಾ ಒಳಗೆ

(ಭದ್ರಿ ಒಳಗೆ ಹೋಗುವಾಗ)

ಹಿನ್ನೆಲೆ : ಸಿದ್ಧ - ಭದ್ರಿ ನನ್ನಾಜ್ಞೆಯನ್ನು ಉಲ್ಲಂಘಿಸಿ ಮನೆಯಲ್ಲಿ ಕಾಲಿಟ್ಟೆಯಾದರ ನಿನಗ ಅವ್ವನ ಆಜ್ಞೆಯಾಗಿದೆ

ಭದ್ರಿ - ನಾನೊಲ್ಲೆ..... ಬರ್ತೀನಿ ಅತ್ತಿಗಮ್ಮಾ

ಪಾರ್ವತಿ - ಹಾಗಿದ್ದರ ಇಲ್ಲಿಯವರಗ ಏಕ ಬಂದಿ ?

ಭದ್ರಿ - (ಅಳುತ್ತ) ನಿನ್ನ ನೋಡಬೇಕನ್ನಿಸಿತು, ಬಂದೆ. ಈಗ ಬರ್ತೀನಿ ಅತ್ತಿಗೆಮ್ಮಾ

ಪಾರ್ವತಿ - ಭದ್ರಿ ನೀನೀಗ ಮನೆಯಲ್ಲಿ ಬರದೆ ಹೋದರ ನಿನಗ ನನ್ನಾಣೆಯಾಗಿದೆ

ಭದ್ರಿ - ಒಳಿತನ್ನು ಅತ್ತಿಗ (ಕಾಲಿಗ ಬೀಳುವನು) ಯಾಕ ಅಳ್ತೀಯಾ ಅತ್ತಿಗಮ್ಮಾ

ಪಾರ್ವತಿ - ಅಳುವದೊಂದು ಬಿಟ್ಟರೆ ಇನ್ನೇನು ಮಾಡಲಿ ಭದ್ರಿ ? ನೀನೆಷ್ಟು ಪರಿಯಲ್ಲಿ ಒಳ್ಳೆಯವನಾಗಿ ಬದುಕಬೇಕೆಂದು ಪ್ರಯತ್ನ ಮಾಡಿದರೂ ಊರ ಜನಾ ನಿನ್ನ ಮೇಲೆ ಬೆಂಕಿ ಕಾರುವುದನ್ನು ಬಿಡಲಿಲ್ಲ. ಪ್ರತಿದಿನ ಒಂದಿಲ್ಲ ಒಂದು ದುರಂತ ನಿನ್ನ ಜೀವನ ಸುತ್ತ ಬಂದು ನಿಲ್ಲುತ್ತವೆ. ಈ ರೀತಿ ನಿನ್ನ ನೆತ್ತಿಯ ಮೇಲೆ ದುರಂತದ ಕತ್ತಿ ನೇತಾಡುವಂತೆ ಮಾಡಿದವಳೇ ನಾನು. ನನ್ನಿಂದಲೇ ಈ ರುದ್ರ ನಾಟಕ ಮೊದಲಾಯಿತು. ನಾನು ಕಾಲಿಟ್ಟಾಗಿನಿಂದ ಈ ಮನೆ ಕಷ್ಟಕ್ಕೆ ಗುರಿಯಾಯಿತು. ನನ್ನ ಕಾಲ್ಗುಣವೇ ಕೆಟ್ಟದು. ನಾನು ಕಾಲಿಟ್ಟ ಕಡೆ ನೆಲ್ಲು ಬೆಳೆಯುದಿಲ್ಲ, ಹುಲ್ಲು ಕೂಡಾ ಹುಟ್ಟಲಾರದು ಭದ್ರಿ

ಭದ್ರಿ - ನಿನ್ನ ಕಾಲ್ಗುಣ ಕೆಟ್ಟದಲ್ಲ ಅತ್ತಿಗೆಮ್ಮಾ. ನನ್ನ ಕೆಟ್ಟತನದಿಂದಲೇ ಈ ಅವಸ್ಥೆ ಉಂಟಾಯಿತು

ಪಾರ್ವತಿ - ಏನಾದರೇನು ಭದ್ರಿ ? ಊರ ಜನಾ ನಿನ್ನ ದೂರ ಮಾಡಿದರೆಂದು ಹೆತ್ತವರ ಕರಳಿಗೆ ಹತ್ತಿದವರೂ ಮನೆಯಿಂದ ನಿನ್ನ ಹೊರದೂಡಿ ಪರದೇಶಿಯನ್ನಾಗಿ ಮಾಡಿದರು. ಹೀಗಾದ ಬಳಿಕ ಮುಂದೆ ನೀನು ಬದುಕುವದು ಹೇಗಪ್ಪಾ ?

ಭದ್ರಿ - ನನ್ನ ವಿಷಯಕ್ಕೆ ನೀನು ಎಳ್ಳಿನಷ್ಟು ಚಿಂತಿಸಬೇಡ. ತುಂಬು ವಾತ್ಸಲ್ಯದಿಂದ ನೀನೊಂದು ಸಲ ಹಾಲು ಕುಡಿಸಿ ಅಮರನನ್ನಾಗಿ ಮಾಡಿರುವಿ. ಈಗ ಪ್ರಪಂಚ ನನಗೆ ಹಾಲಾಹಲ ಕುಡಿಸಿದರೂ ನನಗೆ ಸಾವಿನ ಭಯವಿಲ್ಲ. ನನ್ನ ಮಾತಿರಲಿ ಅತ್ತಿಗೆಮ್ಮಾ ನಿನ್ನೆ ನಿನ್ನ ಅವ್ವ ಅಪ್ಪ ಬಂದಿದ್ದರಂತೆ ಹೌದಾ ?

ಪಾರ್ವತಿ - ಹೌದಪ್ಪಾ ರೊಟ್ಟಿ ಬುತ್ತಿ ತಂದಿದ್ದಾರೆ. ತಾಳು ತಂದು ಕೊಡತೀನಿ ತಿಂದು ಹೋಗುವಿಯಂತೆ

ಭದ್ರಿ - ರೊಟ್ಟಿ ಬುತ್ತಿ ಮಾತಿರಲಿ ಅತ್ತಿಗೆಮ್ಮಾ ಇಷ್ಟು ದಿವಸ ಕಳೆದರೂ ಈ ಸುದ್ದಿ ನೀನು ನನಗೇಕೆ ತಿಳಿಸಲಿಲ್ಲ

ಪಾರ್ವತಿ - ಯಾವದನ್ನ ?

ಭದ್ರಿ - ನೀನು ಗರ್ಭವತಿ ಅನ್ನೋದನ್ನ

ಪಾರ್ವತಿ - ಭದ್ರಿ ನಿಜ ಹೇಳುವದಾದರೆ ಹಗಲಿರುಳೂ ನಿನ್ನ ಚಿಂತೆಯೇ ನನ್ನ ಬೆನ್ನು ಹತ್ತಿದೆ. ಹೀಗಿದ್ದು ಯಾವ ಸಂತೋಷಕ್ಕೆಂದು ಹೇಳಲಪ್ಪಾ ನಾನು ಗರ್ಭವತಿಯೆಂದು

ಭದ್ರಿ - ಕಷ್ಟ ಬರಲಿ, ಸುಖ ಬರಲಿ ಅದು ದೇವರ ಪ್ರಸಾದ ಅತ್ತಿಗೆಮ್ಮಾ

ಪಾರ್ವತಿ - ಈ ವೇದಾಂತದ ಮಾತಿರಲಿ, ಬಾಯಿಲ್ಲಿ ಕುಳಿತುಕೋ ಊಟ ಮಾಡಿ ಹೋಗುವಿಯಂತೆ

ಭದ್ರಿ - (ಪಾರ್ವತಿ ಒಳಗ ಹೋದ ಮೇಲೆ) ಸಿದ್ದಪ್ಪಜ್ಜ ಕೊಡುವದಿದ್ದರೆ ನೂರು

ಕಷ್ಟಗಳನ್ನು ನನಗೆ ಕೊಡು. ಆದರೆ ನನ್ನ ತಾಯಿ, ಅಣ್ಣಾ, ಅತ್ತಿಗೆಯರಿಗೆ ಸುಖವಾಗಿಡು (ಪಾರ್ವತಿ ರೊಟ್ಟಿ ತಿನಿಸುವಾಗ ಗುಂಡ ಗಾಬರಿಯಿಂದ ಬರವನು)

ಗುಂಡ - ಭದ್ರಿ.... ನಿನ್ನ ಹಿಡಿಕೊಂಡು ಹೋಗಾಕ ಪೋಲೀಸ ಪಾರ್ಟಿನೆ ಬರಾಕ ಹತ್ತೇತಿ. ಇಲ್ಲಿಗೇ ಬಂದ್ರು. ಎಲ್ಲಿಯಾದರೂ ಅಡಗಿಕೊ

ಭದ್ರಿ - ಬರಲಿಬಿಡೊ, ಬಂದ ಮೇಲೆ ನೋಡಿದರಾಯಿತು

ಪಾರ್ವತಿ - ಬೇಡ ಭದ್ರಿ... ಪೋಲೀಸ್ ವಾಸ ಒಳ್ಳೇದಲ್ಲ. ಹಿತ್ತಲದಲ್ಲಿದ್ದ ಹೊಟ್ಟಿನ ಬಣವಿಯಲ್ಲಿ ನಿನ್ನ ಮುಚ್ಚಿಟ್ಟು ಬಿಡತೀನಿ ಬಾ ಏಳು

ಭದ್ರಿ - ಅಂದ್ರೇನು ಅತ್ತಿಗಮ್ಮಾ, ಅವರಿಗೆ ಹೆದರಿ ನಾನು ಅಡಗಿಕೊಳ್ಳಲೇ ?

ಪಾರ್ವತಿ - ಆದೇನೆ ಇರಲಿ ಈಗ ನಾನು ಹೇಳಿದಷ್ಟು ಕೇಳು. ಬೇಗನೆ ನಡಿ ಭದ್ರಿ (ಒಳಗೆ ಹೋದ ಮೇಲೆ ಪೋಲೀಸರು, ವೆಂಕಪ್ಪ, ಮರಿಯಪ್ಪ, ಕೆಂಚಪ್ಪ, ಭೈರ ಬರುವರು)

ಫೌಜದಾರ - ಇದೆ ಏನೊ ಆ ಭದ್ರಿ ಮನೆ

ಭೈರ - ಹೂನ್ರಿ ಸಾಹೇಬರೇ, ಯಾರದಿರವ್ವ ಒಳಗ (ಪಾರ್ವತಿ ಬರುವಳು)

ಮರಿಯಪ್ಪ - ಸಾಹೇಬರೇ ಇವಳೇ ಆ ಭದ್ರಿ ಅಣ್ಣನ ಹೆಂಡತಿ. ಇವಳು ನೋಡುವದಕ್ಕ ಹೂವಿನಂತಿದ್ದರೂ ಗುಣಾ ಹಾವಿನಂತಹದ್ದು

ವೆಂಕಪ್ಪ - ಹೌದ್ರಿ ಸಾಹೇಬರೇ ಸಾವುಕಾರ್ರು ಒಮ್ಮೆ ಕಡಿಸಿಕೊಂಡಿದ್ರು

ಮರಿಯಪ್ಪ - ಕಡಿಸಿಕೊಂಡಾರಾ

ವೆಂಕಪ್ಪ - ಗೂಡು ಸುಡಿಸಿಕೊಂಡ ಮೇಲೆ ಹಾವು ಕಡಿಸಿಕೊಂಡಂತೆ ಅಲ್ಲವೇನು ?

ಫೌಜದಾರ - ಏ ಏ..... ಮರಿಯಪ್ಪನ ಗೂಡು ಸುಟ್ಟ ಆ ಬದ್ಮಾಸ್ ಭದ್ರಿ ಮನೆಯಲ್ಲಿ ಇದ್ದಾನೇನೋ

ಪಾರ್ವತಿ - ಭದ್ರಿ ಮನೆಯಲ್ಲಿ ಇಲ್ಲ ಸಾಹೇಬರ. ಅಲ್ಲದೆ ಅವನು ಗೂಡು ಸುಟ್ಟಿಲ್ಲ

ಫೌಜದಾರ - ಮನೆಯಲ್ಲಿ ಇರದಿದ್ದರೆ ಇಲ್ಲಾಂತ ಅಷ್ಟೇ ಹೇಳು. ಗೂಡು ಸುಟ್ಟಿಲ್ಲವೆಂದು ಹೇಳುವ ಉದ್ಧಟತನ ನಿನಗೇಕೆ ? ಮನೆಯಲ್ಲಿ ಇರದಿದ್ದರ ಮತ್ತೆಲ್ಲಿಗೆ ಕತ್ತಿ ಕಾಯಲಿಕ್ಕೆ ಹೋದಾ

ಪಾರ್ವತಿ - ಎಲ್ಲಿರುವನೋ ಏನೋ ? ಅವನನ್ನು ಮನೆಯಿಂದ ಹೊರಹಾಕಿ ಇಂದಿಗೆ ಆರು ದಿನಗಳಾದವು ಸಾಹೇಬರೇ

ಫೌಜದಾರ - ಏ ಅವಳನ್ನೇನು ನೋಡುತಿರೋ. ಒಳಗೆ ಹೋಗಿ ಶೋಧನೆ ಮಾಡ್ರಿ (ಪೋಲೀಸರು ಒಳಗ ಹೋಗಿ ಬಂದು)

ಪೋಲೀಸ - ಭದ್ರಿ ಮನೆಯಲ್ಲಿ ಇಲ್ರಿ ಸಾಹೇಬರ

ಫೌಜದಾರ - ಹಾಗಿದ್ದರೆ ಮತ್ತೆಲ್ಲಿಗೆ ಹೋದ ? (ಸಂಗವ್ವ - ಸಿದ್ದ ಬರುವರು)

ಸಂಗವ್ವ - ಯಪ್ಪಾ ಪೋಲೀಸರ... ನನ್ನ ಮಗಾ ತಪ್ಪಿ ನಡೆಯುವವನಲ್ಲ. ನನ್ನ ಮಾತು ಹೊಟ್ಯಾಗ ಹಾಕ್ಕೊಂಡು ನನ್ನ ಮಗನ್ನ ಬಿಟ್ಟು ಹೋಗ್ರಿಯಪ್ಪಾ..

ಫೌಜದಾರ - ಏ..... ಸರಿಯಾಚಿ ಮಗನಿಗೆ ಬುದ್ಧಿವಾದ ಹೇಳುವುದನ್ನು ಬಿಟ್ಟು ಕಾಲು ಹಿಡಿಯಲು ಬಂದಿದ್ದಾಳೆ. ಏ ನೀನೇ ಏನ ಆ ಭದ್ರಿ ಅಣ್ಣಾ, ಬೊಗಳೊ ಎಲ್ಲಿದ್ದಾನೆ ?

ಸಿದ್ದ - ಅವನನ್ನು ಮನೆಯಿಂದ ಹೊರದಬ್ಬಿ ಆರು ದಿನಗಳಾದವು ಸಾಹೇಬರ

ಮರಿಯಪ್ಪ - ಭದ್ರಿ ಮನೆಯಲ್ಲೆ ಇದ್ದನೆಂದು ಊರ ಜನಾ ಎಲ್ಲಾ ಹೇಳ್ತಾರ ಹೇಳೊ ಎಲ್ಲಿದ್ದಾನ ?

ಸಿದ್ದ - ಅಂವಾ ಮನೆಯಲ್ಲಿ ಇಲ್ಲ ಸಾವಕಾರ್ರೆ

ಫೌಜದಾರ - ಒಳ್ಳೆ ಮಾತಿನಿಂದ ನೀವಲ್ಲಿ ಹೇಳ್ತಿರಿ (ಹೊಡೆಯಹತ್ತುವನು. ವೆಂಕಪ್ಪ ಬಿಡಿಸಿಕೊಳ್ಳುತ್ತ)

ವೆಂಕಪ್ಪ - ಸಾಹೇಬರ ನಾ ಹೇಳಸ್ತಿನಿ. ತಮ್ಮ ಸಿದ್ದಣ್ಣ ನೀನು ಒಳ್ಳೆ ಹುಡುಗ ಸುಳ್ಳು ಹೇಳೋನಲ್ಲ. ನಿನ್ನ ತಮ್ಮ ಎಲ್ಲಿ ಅದಾನೋ ಅಷ್ಟು ಹೇಳು. ನಿನಗ ಹೊಡಿಲಾರಂದಂಗ ಸಾಹೇಬರಿಗೆ ನಾ ಹೇಳಿಕೊಂತಿನಿ

ಸಿದ್ದ - ನಿಜವಾಗಿಯೂ ಅವ ಮನೆಯಲ್ಲಿ ಇಲ್ರಿ ಕುಲಕರ್ಣಿರೆ ನಾನ್ಯಾಕ ಸುಳ್ಳ ಹೇಳ್ಲಿ

ವೆಂಕಪ್ಪ - ಹಾಗಿದ್ದರೆ ನೀನು ಹೊಲಕ ಹೋದಾಗ ಅವಾ ಮನಿಗೆ ಬಂದಿರಬೇಕು. ಇಲ್ಲೆ ಕೂತು ಊಟಾ ಮಾಡತಿದ್ದ ಅಂತ ಊರ ಜನರಲ್ಲರೂ ಹೇಳ್ತಾರ. ಘೈರ ನಾ ನೋಡೀನಿ ಅಂತಾನ

ಘೈರ - ನನ್ನಂಥ ನಾನು ನೋಡಿನಲ್ರಿ, ಇನ್ನೇನು ಉಳಿಯಿತು ನಿಕಾಲಿ

ಮರಿಯಪ್ಪ - ಸಾಹೇಬರೆ ನಿಜಾ ಹೇಳೋದಾದರ ಈ ತಾಯಿ ಮಗನಿಗ ಅವನ ಸುದ್ದೀನೆ ಗೊತ್ತಿಲ್ಲ. ಏನಿರದೂ ಗತ್ತುಗಾರಿಕೆ ಆ ಹುಡಿಗಿಯಲ್ಲೆ ? ಸಾಹೇಬರ ಬಣ್ಣ ನೋಡಿ ಈ ಹೆಣ್ಣಿನ ಗುಣಾ ಅಳಿಬ್ಯಾಡ್ರಿ. ಕಣ್ಣು ನೋಡಿ ಅರ್ಥ ಮಾಡಿಕೊಳ್ರಿ ಮಾತಿಗ ಉದುರುವ ಮಾವಿನಕಾಯಿ ಅಲ್ರಿ ಸಾಹೇಬರ ? ಬಡತಾ ಬೇಕ್ರಿ

ಫೌಜದಾರ - ಇಂಥ ಸಾವಿರ ಹೆಣ್ಣುಗಳ ಗುಟ್ಟು ಬಯಲಿಗೆಳೆದ ವ್ಯಕ್ತಿ ನಾನು. ಇಂಥವಳ ಪಾಡೇನು... ಹೂಂ... ಹೇಳು...

ಪಾರ್ವತಿ - ಇಲ್ಲ ನನಗೆ ಗೊತ್ತಿಲ್ಲ

ಫೌಜದಾರ - ನಿನಗೆ ಗೊತ್ತಿಲ್ಲ (ಚಾಟಿಯಿಂದ ಹೊಡೆಯುವನು) ಹೂಂ... ಹೇಳು

ಪಾರ್ವತಿ - ಇಲ್ಲ ಸತ್ತರೂ ಹೇಳುವದಿಲ್ಲ

ಫೌಜದಾರ - ಸತ್ತರೂ ಹೇಳುವದಿಲ್ಲ (ಹೊಡೆಯುವನು) ನೋಡು ನಿನ್ನ ಮೈಚರ್ಮ ಸುಲಿತೀನಿ

ಪಾರ್ವತಿ - ಯಾರು ಬೇಡೆನ್ನುವರು ? ಸುಲಿಯುವ ಚರ್ಮದೊಂದಿಗೆ ನಮ್ಮ ಕರ್ಮವಾದರೂ ಕಳೇದೀತು. ಆಗಲಾರದೂ ನಮ್ಮನ್ನು ಹುಟ್ಟಿಸಿದ ದೇವರಿಗೆ ಕರುಣೆ ಬಂದೀತು

ಮರಿಯಪ್ಪ - ಈ ಪುರಾಣ ಕೇಳಲಿಕ್ಕಲ್ಲ ಅವರು ನಿನ್ನ ಹೊಡಿತಾ ಇರೋದು

ವೆಂಕಪ್ಪ - ಭದ್ರಿ ಎಲ್ಲಿ ಅದಾನೊ ಅದು ಮುಖ್ಯ

ಪಾರ್ವತಿ - ಗೊತ್ತು ಸಾವುಕಾರರೆ ಹೊಡಯುವದಷ್ಟೆ ಏಕೆ ಸುತ್ತಿಗೆ ಇಟ್ಟು ನನ್ನ ಮಸ್ತಕ ಸೀಳಿದರೂ ಭದ್ರಿ ಇರುವ ಸ್ಥಳ ನಾನು ತಿಳಿಸುವದಿಲ್ಲ

ಮರಿಯಪ್ಪ - ಹಾಂ ನೋಡ್ರಿ ಸಾಹೇಬರೆ ಗೊತ್ತಿದ್ರು ಹೇಳೋದಿಲ್ಲಾ ಅಂತಾಳ

ವೆಂಕಪ್ಪ - ಅದೂ ನಿಮ್ಮೆದುರಿಗೆ ! ಇನ್ನ ಹ್ಯಾಂಗ ಹೇಳಿಸ್ತೀರಿ

ಫೌಜದಾರ - ಹೇಳಸ್ತೀನಿ ತಡ್ರಿ. ಮರದ ಮುಖದಿಂದ ಮಾತಾಡಿಸಿದ ವ್ಯಕ್ತಿ ನಾನು. ಏ ನೋಡುವಿರೇನೋ ಒಂದು ಭಾರವಾದ ಕಲ್ಲು ತಂದು ಇವಳ ತಲೆಯ ಮೇಲೆ ಹೊರಿಸಿರಿ. ಹೇಳುವವರೆಗೆ ಹೊತ್ತು ಕೊಂಡು ನಿಲ್ಲಲಿ

ಸಂಗವ್ವ - ಅಯ್ಯೋ ಪಾರೂ ನಿನ್ನ ತಲೆಯ ಮೇಲೆ ಕಲ್ಲು ಹೊರಸ್ತಾರಲ್ಲೊ ? (ತಲೆಯ ಮೇಲೆ ಕಲ್ಲು ಹೊರಸುವರು)

ಪಾರ್ವತಿ - ಹೊರಿಸಲಿ ಬಿಡಿ ಅತ್ತಿ ನೀವ್ಯಾಕ ಅಳತೀರಿ

ಸಿದ್ಧ - ಹೌದು ಹೇಳಿ ಬಿಡು ಪಾರು. ನಿನಗಂಥ ಕಷ್ಟವಾದರ ಹೊಟ್ಟೆಯಲ್ಲಿರೋ ಕೂಸಾದರೂ ಹ್ಯಾಂಗ ಉಳದೀತು. ಆ ಉಡಾಳನ ಸಲುವಾಗಿ ನೀನ್ಯಾಕ ಪ್ರಾಣಾ ಕಳಕೋಳತೀಯಾ

ಸಂಗವ್ವ - ಹೌದು ಹೇಳಿ ಬಿಡು ಪಾರೂ

ಪಾರ್ವತಿ - ಅತ್ತೆ ಕಲ್ಲಿನ ಭಾರಕ್ಕ ನಾ ಕತ್ತರಿಸಿ ಬೀಳಲೀ... ಕಣ್ಣಾಲಿ ನೆತ್ತರು ಪರಿದು ಹೊರಸೂಸಲಿ. ಹೊಟ್ಟೆಯೊಳಗಿನ ಕೂಸು ಹೊಟ್ಟೆಯಲ್ಲಿ ಸತ್ತು ಸ್ವರ್ಗ ಸೇರಲಿ. ಆದರ ಭದ್ರಿ ಇರುವ ಸ್ಥಳ ತಿಳಿಸಿ ಈ ದ್ರೋಹಿಗಳಿಗೆ ಒಪ್ಪಿಸಿ ನನ್ನ ಮೈದುನನಿಗೆ ದ್ರೋಹ ಬಗೆಯಲಾರೆ ಅತ್ತೆ

ಸಂಗವ್ವ - ಪಾರೂ ಈ ನಿನ್ನ ಸಂಕಟ ಹ್ಯಾಂಗ ನೋಡೋದು ? ನೋಡು ಸಿದ್ಧ ನಿನ್ನ ಹೆಂಡತಿಯ ಕಣ್ಣಾಗ ನೆತ್ತರ ಬಂತಲ್ಲೊ ಪಾರೂ ನಿನಗೆ ಕೈ ಮುಗಿತೀನಿ. ಹೇಳು ಆ ಚಾಂಡಾಲನ ಸಂಕಟ ನಾ ಸಹಿಸೇನೂ ? ಆದರ ಗರ್ಭಿಣಿಯಾದ

ನಿನ್ನ ಸಂಕಟ ನಾನು ನೋಡಲಾರೆ. ಹೇಳು ಯಾಕ ನೀನಗೀ ಹಟ

ಪಾರ್ವತಿ - ಇದು ಹಟ ಅಲ್ಲ ಅತ್ತೇ ಧರ್ಮ ಸಂಕಟ. ಹಿಂದೊಮ್ಮೆ ಮೈದುನನಾದ ಅವನಿಗೆ ನನ್ನ ಕೈಯಿಂದ ಹಾಲು ಕುಡಿಸಿ ಮಾತೆಯನ್ನಾಗಿ ಮಾಡಿದ್ದೀರಿ. ಇಂದು ಕುತ್ತಿಗೆ ಕೊಯ್ಯುವ ಈ ಕಟುಕರ ಕೈಗೊಪ್ಪಿಸಿ ಮೃತ್ಯುವಾಗೆಂದು ಬೋಧಿಸುತ್ತೀರಿ. ಹೀಗೆ ಹೇಳುವದು ನಿಮಗೆ ನ್ಯಾಯವೇನತ್ತೆ? ಧರ್ಮವೇನತ್ತೆ ? ನಿಮ್ಮಿಂದ ಈ ದುರಂತ ನೋಡುವದಾಗದಿದ್ದಲ್ಲಿ ಇಲ್ಲಿಂದ ಹೋರಟು ಹೋಗಿ

ಸಂಗವ್ವ - ಅಯ್ಯಯ್ಯೋ ಎಂಥ ಸಂಕಟ ತಂದು ನಿಲ್ಲಿಸಿದಯಪ್ಪಾ... ನೀನೆಷ್ಟು ಬಡತನ ಕೊಟ್ಟಿದ್ದರೂ ನಾನೂ ಬಾಯಿಬಿಟ್ಟಿರಲಿಲ್ಲಾ... ಉಪವಾಸವಿಟ್ಟಿದ್ದರೂ ನಿನ್ನ ಹೆಸರು ನೆನಸಿ ಉಸಿರೂ ಹಾಕಿರಲಿಲ್ಲಾ... ಹಸಿದ ನನ್ನ ಮಕ್ಕಳಿಗೆ ಅನ್ನವಿಲ್ಲದಾಗಿ ಹಸಿರು ತಪ್ಪಲು ತಿನ್ನಿಸಿದರೂ ನಿನಗೆ ಕೊಸರಿ ನುಡಿದಿರಲಿಲ್ಲಾ... ಇಷ್ಟೆಂದರೂ ಈ ಬಡವಿಯ ಬಗ್ಗೆ ನಿನಗ ದಯ ಮೂಡಲಿಲ್ಲವೇನಪ್ಪಾ... ಎಲೋ ಭದ್ರಿ ಎಲ್ಲಿರಿವಿಯೋ ಇಲ್ಲಿ ನಿನ್ನ ಅತ್ತಿಗಯ ತಲೆಯ ಮೇಲೆ ಕಲ್ಲು ಹೊರಿಸಿ ಕಣ್ಣಲ್ಲಿ ನೆತ್ತರು ಹರಿಸಿ ಕೊಲ್ಲತೊಡಗಿದ್ದಾರ. ಬಾರಲೋ ಭದ್ರಿ

ಭದ್ರಿ - (ಒಳಗೆ) ಅವ್ವಾ...... (ಚೀರಿದ ಕೂಡಲೇ ಎಲ್ಲರೂ ಓಡಿ ಹೋಗುವರು ಭದ್ರಿ ಹೊರಗೆ ಬಂದು) ಯಾರವರು ನನ್ನತ್ತಿಗೆಯ ತಲೆಯ ಮೇಲೆ ಕಲ್ಲು ಹೊರಸಿದವರು (ಕಲ್ಲು ಕೆಡವಿ ಫೌಜದಾರನಿಗೆ) ಚಂಡಾಲಾ ನನ್ನತ್ತಿಗೆಯ ಮೇಲೆ ಕಲ್ಲು ಹೊರಸಿ ಕಣ್ಣಲ್ಲಿ ನೆತ್ತರು ಹರಿಸಿದ ನಿನ್ನ ಮಸ್ತಕವನ್ನೇ ಸೀಳಿ ಬಿಡುತ್ತೇನ (ಫೌಜದಾರನಿಗ ಹೊಡೆಯಲು ಹೋಗುವಾಗ ಸಂಗವ್ವ, ಸಿದ್ದ ಹಿಡಿದುಕೊಳ್ಳವರು. ಪಾರ್ವತಿ ಚೀರಿ ನೆಲಕ್ಕ ಬೀಳುವಳು)

ಫೌಜದಾರ - ನೋಡುವಿರೇನೋ ಬಂಧಿಸಿರಿ ಇವನನ್ನು. ಓಡಿ ಹೋಗ್ತಾರ ಪುಕ್ಕಲು ನನ್ನ ಮಕ್ಕಳು ಹಗ್ಗದಿಂದ ಬಿಗಿಯಾಗಿ ಕಟ್ಟಿರಿ

ವೆಂಕಪ್ಪ - ಸಾಹೇಬರೆ ಸರ್ಪರಿ ಅದು ಸರ್ಪ !

ಮರಿಯಪ್ಪ - ಸರ್ಪವಾದರೇನಾಯಿತೊ ಮುರಿತಲ್ಲ ಇದರ ದರ್ಪ ! ಇನ್ನೇನೂ ಹೇಡಿಗೆ ಹೊಡಿಯೋದು, ಕೊಲ್ಲೋದು (ಭದ್ರಿ ಮರಿಯಪ್ಪನ ಮೇಲೆ ಏರಿ ಹೋಗುವನು. ಫೌಜುದಾರನೂ ಭದ್ರಿನ್ನ ಹೊಡೆಯ ಹತ್ತುವನು. ಪಾರ್ವತಿ ಎದುರು ಬಂದು ಬಿಡಿಸಿಕೊಳ್ಳುವಳು, ಅಳುವಳು)

ಭದ್ರಿ - (ಸಿಟ್ಟು, ದುಃಖದಿಂದ) ಅಳಬೇಡ ಅತ್ತಿಗೆ ಹೊಡೆಯಲಿ, ಬಡಿಯಲಿ, ನನಗೆ ಜೇಲಾಗಲಿ, ಕೊನೆಗ ಗಲ್ಲಿಗೇರಿಸಲಿ. ನೀನು ಮಾತ್ರ ಕೇವಲ ನನಗೋಸ್ಕರ ಅಳಬೇಡ. ಅಳುವದಿದ್ರೇ ಬಡತನದ ಕೈಯಿಂದ ಬಡತನವನ್ನೂ ಕೊಲ್ಲಿಸುವ ಈ ಸಂಪತ್ತಿನ ಒಡೆತನವನ್ನು ಕಂಡು ಅಳು. ನಮ್ಮಂತೆ ಬಡವರಾದ ಇವರೂ

ಸಂಪತ್ತಿನ ಒಡೆತನಕ್ಕೆ ತಲೆಬಾಗಿ ಸುಳ್ಳು ಸಾಕ್ಷಿ ನುಡಿಯುವದನ್ನು ಕಂಡು ಅಳು... ಸರ್ಕಾರದ ಸಂಬಳ ಸಾಕಷ್ಟು ತಿಂದರೂ ಸಾಕಾಗದೇ ಶ್ರೀಮಂತರ ಹಣಕ್ಕೆ ಕೈಚಾಚಿ ಬಡವರನ್ನು ಪೀಡಿಸುವ ಇಂಥ ಪಾಷಂಡಿ ಪೋಲೀಸರನ್ನು ಕಂಡು ಅಳು..... ..... ಮರಿಯ ಈ ಕುತ್ತಿಸಿಂದ ನಾನು ಉಳಿದು ಬಂದರೆ ಮುಂದೆ ನೀನು ಉಳಿಯುವುದು ಕಷ್ಟ. ಮುಗಿದಿಲ್ಲ ಭದ್ರಿಯ ರುದ್ರ ನಾಟಕ. ಇಲ್ಲಿಗೆ ಮಧ್ಯಂತರ. ಮುಂದಿಹುದು ದುರಂತ ದೃಶ್ಯಗಳ ಮಹಾಪೂರ (ಭದ್ರಿನ್ನ ಎಳೆದುಕೊಂಡು ಹೋಗುವರು)

ಪಾರ್ವತಿ - ಭದ್ರಿ .... ..... (ಅಳುತ್ತ ಒಳಗೆ ಹೋಗುವಳು) ಅತ್ತೇ ???

ಸಂಗವ್ವ - (ಒಳಗೆ ಹೋಗಿ ಬಂದು) ಸಿದ್ದಾ ನಿನ್ನ ಹೆಂಡತಿಯ ಗರ್ಭಪಾತವಾಯಿತಲ್ಲೋ ಸಿದ್ಧ.... (ತೇಕುತ್ತ) ನನ್ನ ಮನಿ ಹಾಳಾಯಿತು. ನನ್ನ ವಂಶ ನಿರ್ವಂಶವಾಯಿತು ಶಿವಾ ನನ್ನ ಹಡಗ ಮುಳಿಗಿ ಹೋಯಿತು.... ಸಿದ್ದ ... ಪಾರೂ... ಭದ್ರಿ... (ಸಾಯುವಳು)

ಸಿದ್ದ - ಅವ್ವಾ... ಅವ್ವಾ... (ಸಿಟ್ಟಿನಿಂದ ಎದ್ದು) ಈಗಲಾದರೂ ಮನಸ್ಸಿಗೆ ಸಮಾಧಾನ ವಾಯಿತೇನ್ರಪ್ಪ, ನಿಮ್ಮೆಲ್ಲರ ಆತ್ಮಕ್ಕೆ. ನನ್ನ ತಮ್ಮನ್ನ ಜೇಲಿಗೆ ಕಳಿಸಿ ನನ್ನ ಹೆಂಡತಿಗೆ ಗರ್ಭಪಾತ ಮಾಡಿಸಿ ನಮ್ಮವ್ವನ ನುಂಗಿ ನೀರು ಕುಡಿದಿರಲ್ಲ ಈಗಲಾದರೂ ಸಮಾಧಾನವಾಯಿತೆ ನಿಮ್ಮೆಲ್ಲರ ಮನಸ್ಸಿಗೆ ಕೆಂಚಪ್ಪಜ್ಜಾ

ಕೆಂಚಪ್ಪ - (ಅಕ್ಕರೆಯಿಂದ ಕೆಂಚಪ್ಪ, ಭೈರ, ಗುಂಡ ಎಲ್ಲರೂ ಒಂದಾಗುವರು) ಸಿದ್ದಾ ಸಿದ್ದಾ ತಿಳಿಯಲಾರದೆ ನಾವೆಲ್ಲ ಈ ಮರಿಯನ ಮಾತ ಕೇಳಿ ನಿನಗೆ ಮಾಡಬಾರದ ಅನ್ಯಾಯ ಮಾಡಿದೀವಿ. ಇನ್ನ ಮೇಲೆ ಅವನ ಮಾತು ಯಾರೂ ಕೇಳೋದಿಲ್ಲ. ಇನ್ನು ಇವನಂತೆ ಕೋರ್ಟಿನ್ಯಾಗ ಯಾರು ಸಾಕ್ಷಿ ಹೇಳೋದು ಬ್ಯಾಡ. ಒಳ್ಳೆ ಮಾತಿನಿಂದ ಭದ್ರೀನ ಬಿಡಿಸಿಕೊಂಡು ಬಂದರೆ ಸರಿ. ಇಲ್ಲದಿದ್ದರೆ ಈ ಸಾವಕಾರ ಮರಿಯನ ಮನಿಗೆ, ಈ ಕುಂಟ ಕುಲಕರ್ಣಿ ವಂಕ್ಯಾನ ಮನಿಗೆ ಬೆಂಕಿ ಇಟ್ಟು ಸುಟ್ಟು ಬಿಡೋನು (ಎಲ್ಲರೂ ಹೋಗುವರು)

# ದೃಶ್ಯ ೧೦

ರಸ್ತಾ

ವೆಂಕಪ್ಪ - (ಮಸುಕು ಹಾಕಿಕೊಂಡು ಓಡಿ ಬಂದು) ಅಂತೂ ಫೌಜದಾರ ಸಾಹೇಬರು ಇನ್ನೂ ಜ್ಯಾವಡ್ಯಾಗ ಇದ್ರು ಅಂತ ಪಾಡಾಯಿತು. ಇರದಿದ್ರ ಊರಮಂದಿ ಎಲ್ಲಾ ಒಂದಾಗಿ ನಮ್ಮ ಮನಿ ಸುಡತೀನಿ ಅಂತ ಕೊಡ್ಲಿ, ಬಡಿಗಿ ಹಿಡಕೊಂಡು ಬಂದಿದ್ದರು. ಆ ಹುಡಗನ್ನ ಬಿಡಿಸಿಕೊಂಡು ಬರದಿದ್ರೆ ನಮ್ಮ ಮನಿ ಅಷ್ಟೇ ಅಲ್ಲ, ನಮ್ಮನ್ನ ಅದರಾಗ ಹಾಕಿ ಸುಟ್ಟು ಬಿಡತಿದ್ರು. ಇನ್ನೊಮ್ಮೆ ಬುದ್ಧಿ ಓಡಸಾಕ ಹೋಗಬಾರದು (ಜೆನ್ನಿ ಬರುವಳು) ಏ ನಿಲ್ಲು ಸ್ವಲ್ಪ ನೀರಿಗೆ ಹೊರಟೀಯಂತ ಕಾಣತ್ತ ದಾರ್‍ಯಾಗ ಯಾರೂ ಇದ್ದಂಗಿಲ್ಲ. ಸ್ವಲ್ಪ ಬದಿಗ ನಿಂತು ಮಾತಾಡೋನು. ಬಾ ಇಲ್ಲಿ ನಿನ್ನ ಮನಿ ಹಾಕಿ ಬೀಳೋದು ಅಷ್ಟರಾಗ ಐತಿ

ಜೆನ್ನಿ - ನಿಂತರ ನಡೀಬೇಕಲ್ರಿ ಕುಲಕರ್ಣಿರ. ನಿಮ್ಮಂಗ ನಮಗೇನೂ ದುಡಿಲಾರದೆ ಬರುತ್ತೇನು ?

ವೆಂಕಪ್ಪಾ - ಬರತದ... ನಿನಗೂ ಯಾವದೋ ಒಂದು ರೀತಿಯಿಂದ ದುಡಿಲಾರದ ಬರತದ

ಜೆನ್ನಿ - ದುಡಿಲಾರದ ಅದು ಹ್ಯಾಂಗ ಬರತದ ?

ವೆಂಕಪ್ಪಾ - ಹ್ಯಾಂಗ ಬರತದ ಅಂದ್ರ ಮರಿಯಪ್ಪನ ಮನಿಯೊಳಗಿಂದ ಹರದ ಬರತದ

ಜೆನ್ನಿ - ಹರದೇನೂ ಬರತ್ತ. ಆದರ ಬಂದಿದ್ದಲ್ಲ ಮತ್ತ ಹಳ್ಳಕೂಡಿ ಹರದ ಹೋಗುತ್ತ. ನೀನೊಬ್ಬ ಅದಿಯಲ್ಲ, ಊರಾಗ ಹರಕೊಂಡು ತಿನ್ನೂ ಹದ್ದು. ಯಾವಾಗ ಕುಕ್ಕೇನೂ ಅಂತ ಹನ್ನೆರಡು ತಾಸು ನೆತ್ತಿ ಮ್ಯಾಲೆ ಹಾರ್‍ಯಾಡತೀಯಲ್ಲ ಏ ಕುಲಕರ್ಣಿ

ವೆಂಕಪ್ಪಾ - ಎಲಾ ರಂಡೆ, ನನಗ ಏ ಕುಲಕರ್ಣಿ ಅಂತೀಯಾ ? ಗಂರತಿಲ್ಲೇನೂ ಊರ ಜನರಲ್ಲ ನಗರೀ ಹಾಕತಾರ ನೀನೂ ಹಾಕಬೇಕಾಗತದ. ಹಾಕೂ. ಯಾಕ್ರಿ

ಕುಲಕರ್ಣೆರ ದಾರ್‍ಯಾಗ ಒಬ್ಬರೆ ನಿಂತುಕೊಂಡಿರಾ ? ನಿಮಗೇನಾದರೂ ಬೇಕಾಗಿತ್ತ ? ನಿಮ್ಮ ಮನಸ್ಸಿನೊಳಗ ಏನಾದರೂ ಆಸೆ ಅಭಿಲಾಷೆ ಆಕಾಂಕ್ಷೆಗಳು ಉಂಟಾ... ಹಿಂಗ ಕೇಳು

ಚೆನ್ನಿ - ಕತ್ತಿ ಬೆನ್ನೂ ಕತ್ತೀನೂ ನೆಕ್ಕುತ್ತ. ಆದರೆ ಯಾಕ ನೆಕ್ಕತ್ತ ?

ವೆಂಕಪ್ಪ - ಅಂದ್ರೇನೇ ಊರು ಕತ್ತಿ. ನಾನೂ ಕತ್ತಿ ಅಂತಿಯಾ ?

ಚೆನ್ನಿ - ಅದರಕ್ಕಿಂತ ಅತ್ತತ್ತ ಅನ್ನು. ಕತ್ತಿ ಹರಕಿ ತಿಂದರೂ ಕಂಡವರ ಚಾಕರಿ ಮಾಡುತ್ತ. ನಿನ್ನ ಅದಕ ಹೋಲಿಸಿದರ ಹ್ಯಾಂಗಾದೀತು ? ನೀನು ಕಟಕ ಇದ್ದಂಗ ನೀನು ಕಟುಕ ಇದ್ದಂಗ. ಊರು ಕುರಿ ಇದ್ದಂಗ

ವೆಂಕಪ್ಪ - ಕಟಕ ಇದ್ದಂಗ ನಾನು

ಚೆನ್ನಿ - ಮತ್ತೆ ಅಲ್ಲೇನು ? ಕಟಕ ಕುರಿ ಕತ್ತೀಲೆ ಕೊಯಿದರ, ನೀನು ಮನುಷ್ಯರ ಕುತ್ತಿಗೆ ಕೂದಲೆಳೆಯಿಂದ ಕೊಯ್ತೀದಿ

ವೆಂಕಪ್ಪ - ಯಲಾ ಇವಳ ಈಗ ನಾನ್ಯಾಕ ಕುತ್ತಿಗೆ ಕೊಯ್ತೀನೆ ? ಏನು ಹಾಗಂದರ

ಚೆನ್ನಿ - ಕೊಯ್ದಿಯಲ್ಲ ಸಾವಕಾರ ಮರಿಯಂದು

ವೆಂಕಪ್ಪ - ಮರಿಯಂದ... ನೋಡ ಚೆನ್ನಿ ಕೊಯ್ಯಪ್ಪಾ ಅಂತ ಕೊರಳಲ್ಲಿ ಬೇವಿನ ಸರ ನನ್ನ ಮನೆ ಬಾಗಲಿಗೆ ಬಂದ ನಿಂತ್ರ ನಾನ್ಯಾಕೆ ಬಿಡ್ಲಿ. ನೋಡ ಚೆನ್ನಿ ಕೊಂದ್ರ ಪಾಪಂತ ತಿಂದ್ರ ಪರಿಹಾರ ಆಯಿತಂತ. ನಾನೂ ಎರಡೂ ಮಾಡತೀನಿ

ಚೆನ್ನಿ - ಸಂಗವ್ವನ ಮನಿಗೆ ಸೂಸಿ ಬಂದ್ರ ನೀನು ಯಾಕ ಮಂಗ್ಯಾನಂಗ ಮಾಡಬೇಕು

ವೆಂಕಪ್ಪ - ಭದ್ರಿ ಕೈಯಿಂದ ಹೊಡಿಸಿಕೊಂಡು ಹಲ್ಲು ಮುರಿಸಿಕೊಳ್ಳಾಕ. ಮತ್ತ ನಾನು ನಿನ್ನ ಸಲುವಾಗಿಯೇ ಅಲ್ಲವೇನೆ ರಂಡ ಈ ಕಾಲು ಮುರಿಸಿಕೊಂಡಿದ್ದು

ಚೆನ್ನಿ - ಅಂತೂ ಗುರ್ತು ಉಳಿತಲ್ಲ (ಹೋಗ ಹತ್ತುವಳು)

ವೆಂಕಪ್ಪ - ನಿಲ್ಲ

॥ ಪದ ॥

ಮೆಲ್ಲ ಮೆಲ್ಲನೆ ಬಂದೀನ । ನಿನ್ನಲ್ಲಿನಲ್ಲಿ ಮೆಲ್ಲಮೆಲ್ಲನೇ ಬಂದನೇ ॥
ಮೆಲ್ಲಮೆಲ್ಲನೆ ಬಂದು ಗಲ್ಲಕ್ಕ । ಮುದ್ದುಕೊಟ್ಟು ನಿಲ್ಲಗೊಡುವನ್ನೀಗ॥
ಒಲ್ಲದ ಮನಸ್ಯಾಕ ॥ ಮೆಲ್ಲ ॥ ಎಳೆಹರೆಯದಲಿ ಮೊದಲು ॥
ಮುರಿಸೀದಿ ಬಲಗಾಲು । ಬಯಸೀ ಕರೆಯುವ ಬಾಲೆ ಆಗೂ ನೀ
ಅನುಕೂಲೆ ॥ ಮೆಲ್ಲ ॥

(ಚೆನ್ನಪ್ಪನ ಮೇಲೆ ಏರಿ ಹೋಗುವನು. ಚೆನ್ನಿ ದೂಡುವಳು) ನಮ್ಮ ಕಾಲು ಕುಂಟಕಿ ಅಂಯೋದು

ಗೊತ್ತಿದ್ದು ಈ ರೀತಿ ದೂಡತಾರೇನ್ರಿ

ಚೆನ್ನಿ - ಮತ್ತ ದಾರ್‍ಯಾಗ ಹೀಂಗ ಮಂಗ್ಯಾನಂಗ ಮಾಡ್ತರೇನ್ರಿ

ವೆಂಕಪ್ಪ - ಏನೋ ಒಂದ ನಮೂನಿ ಕಾವ ಮಾಡಿದೆ

ಚೆನ್ನಿ - ಇನ್ನರೆ ಮ್ಯಾಕ ಏಳು...

ವೆಂಕಪ್ಪ - ನೀನು ಸ್ವಲ್ಪ ಕೈಹಿಡಿದು ಎತ್ತಿ ಬಿಡು ಸಿಗಲಾರದ ಓಡಿ ಹೋಗತೀನಿ (ಚೆನ್ನವ್ವ ಕೈಹಿಡಿದು ಎತ್ತುವಾಗ ಕೈ ಹಿಚುಕುವನು ಚೆನ್ನಿ ಬಡಿಯುವಳು) ಹೊಡಿ ಬ್ಯಾಡೆ ಹೊಡಿಬ್ಯಾಡೆ ಊರಾಗ ನಾನು ಬಹಳ ದೊಡ್ಡ ಮನುಷ್ಯ

ಚೆನ್ನಿ - ಮತ್ತೆ ದೊಡ್ಡ ಮನುಷ್ಯರ ಹತ್ತರಾನ ಇಂಥವು ಇರೋದು

ವೆಂಕಪ್ಪ - ಅವೂ ಇರತಾವಂತ ನಾವು ದೊಡ್ಡ ಮನುಷ್ಯರು ಅನ್ನಿಸಿಕೊಳ್ತೀವಿ

ಚೆನ್ನಿ - ಸರಿ ಇನ್ನರ ದಾರಿ ಬಿಡು. ಯಾರರ ಕಂಡ್ರ ಛೀ ಹಾಕಿ ಚಿಪ್ಪು ಕಟ್ಯಾರು ಕೊಳ್ಳಾಗ

ವೆಂಕಪ್ಪ - ಚಿಪ್ಪು ಯಾಕ ಕಟ್ಟತಾರ ?

ಚೆನ್ನ - ನಿನಗೇನೂ ಗಂಡಸು... ಏನು ಮಾಡಿದರೂ ನಡಿತೈತಿ. ಆದರ ಹೆಣ್ಣಿಂದು ಹಾಂಗಲ್ಲ ನೋಡು. ನಿಮ್ಮಿಬ್ಬರ ಸಲುವಾಗಿ ಅಲ್ಲೇನು ನಾನು ಗಂಡನ್ನ ಕಳಕೊಂಡು ಬಾಳ್ವೆ ಮೂರಾಬಟ್ಟೆ ಮಾಡಿಕೊಂಡು ಮೂಲಿ ಹಿಡಿದು ಕುಂತಿದ್ದು

ವೆಂಕಪ್ಪ - ಮೂಲಿ ನೀ ಏನ ಹಿಡಿದಿ ? ಕಾಲು ಮುರಿಸಿ ನನ್ನ ಮೂಲಿ ಹಿಡಿಸಿದಿ. ಕಿವಿ ಕೊಯಿಸಿ ಮರಿಯನ ಮೂಲಿ ಹಿಡಿಸಿದಿ. ಈಗ ಮತ್ತ ಎಲ್ಲಾ ಮಾಡಿಸಿ ಆ ಮರಿಯನ್ನ ಮಳ್ಳ ಮಾಡಿ ದೊಡ್ಡ ಗಿಡದ ನೆರಳ ಹಿಡಿದು ಕುಂತಿದಿ. ಏನು ಮಾಡತಿ ನನ್ನಂಗ ಬಿಸಲಿಗೆ ನಿಂತಿದ್ರ ಬೆವರ ಹರದ ತಿರಗತಿತ್ತು ನಿನ್ನ ಬಣ್ಣ

ಚೆನ್ನಿ - ಆದರೇನಾಯಿತು ? ಇದೇನು ಚಂದೇನು ಗಂಡನ ಮನ್ಯಾಗ ಇದ್ರ ಗೌರವ್ವನಂಗ ಇರತಿದ್ದೆ

ವೆಂಕಪ್ಪ - ಈಗೇನು ಕಡಿಮೆ ಅದಿಯೇ. ಸಾವಕಾರ್‍ನ ಕೂಡಿಕೊಂಡಲ್ಲೆ ನಮ್ಮೂರ ದುರ್ಗವ್ವ ಆಗೀದಿ

ಚೆನ್ನಿ - ಆಂ....

ವೆಂಕಪ್ಪ - ಅಲ್ಲಾ ಗ್ರಾಮದೇವತ ಅಂತ ಕೈಮುಗಿತೀನಿ. ಬೇಕಿದ್ರ ಹೇಳು ಚೆನ್ನಿಗೆ ಬಡಿಸಿ ಬಣ್ಣ ಕೊಡಿಸಲೇನು ವೈಟಪೇಂಟ್

ಚೆನ್ನಿ - ಕೊಡಸು ಕೊಡಸು ಊರಾ ಕೆಡಸಾಕ ನಿಂತೀವಿ. ಒಲ್ಲೆ ಅಂದ್ರೆ ಬಿಡತೀಯಾ ಅಲ್ಲ ಇಷ್ಟೆಲ್ಲ ಹಾರ್‍ಯಾಡವ ರಾಜಿಯಾಗಿ ಆ ಭದ್ರಿನ್ನ ಯಾಕ ಬಿಡಿಸಿಕೊಂಡು ಬಂದ್ರಿ ಹೇಳು

ವೆಂಕಪ್ಪ - ನೋಡಿದಿಲ್ಲೊ ಊರ ಮಂದೆಲ್ಲಾ ಎದುರಾಗಿ ನಮ್ಮ ಮನಿ ಸುಡತೀವಿ ಅಂತ ಬಂದಿದ್ರು

ಚೆನ್ನಿ - ಅದಕ ಹೆದರಿ ಬಿಡಿಸಿಕೊಂಡು ಬಂದಿರೇನು ? ಯಾಕ ಫೌಜದಾರ ನಿಮ್ಮಂತೆ ಇದ್ದನಲ್ಲ ? ಭದ್ರಿನಂತು ಬಿಡಿಸಿಕೊಂಡು ಬಂದ್ರಿ. ಮುಂದ ಹ್ಯಾಂಗ ನಿಮ್ಮಿಬ್ಬರ ಗತಿ

ವೆಂಕಪ್ಪ - ಇಬ್ಬರದೂ ಕೇಳಬ್ಯಾಡ ? ಅವನೊಬ್ಬನದೆ ಹೇಳು. ಏ ನ್ಯಾಯ ಪಚ್ಚಕ ಕಲ್ತೀನಿ ಅಂದಮ್ಯಾಲೆ ಅದನ್ನು ಮುಗಸಾಕ ಕಲ್ತಿಲ್ಲೇನು ಸಾಲ ಮುಟ್ಟಿತು ಅಂತ ಮರಿಯಪ್ಪನ ಕೈಯಿಂದ ಕಾಗದದ ಸಹಿ ಹಾಕಸ್ತೀನಿ. ಅವರ ಹೊಲಾಮನಿ ಅವರಿಗೆ ಬಿಡಿಸಿಕೊಡಸ್ತೀನಿ ನಮ್ಮಮನ್ಯಾಗ ನಾ ತಣ್ಣಗ ಕೂಡತೀನಿ. ಏನೋ ನೀನಾಗಿ ಬರ್ತೀನಿ ಅಂದ್ರ ಬಾ ಅಂತೀನಿ

ಚೆನ್ನಿ - ನಾನಾಗಿ ಬರ್ತೀನಿ ಅಂದ್ರ ಬಾ ಅಂತಿಯಾ ? ಅದೊಂದು ಕಾಲು ತಿರಿವಿಟ್ಟೇನು

ವೆಂಕಪ್ಪ - ಆಗಾ ಬಂದ ನೋಡು ನಿನ್ನ ಸಾವಕಾರ (ಮರಿಯಪ್ಪ ಬರುವನು)

ಮರಿಯಪ್ಪ - ಏನಂತಾಳ ಚೆನ್ನಿ ?

ವೆಂಕಪ್ಪ - ಕೇಳು ಎದುರಿಗೆ ನಿಂತಾಳ. ಭದ್ರಿಗೆ ಹೆದರಿ ರಾಜಿಯಾಗಿ ಬಿಡಿಸಿಕೊಂಡು ಬಂದ್ರಿ ಅಂತಾ ಹೋಯಿಕೊಂತಾಳ

ಮರಿಯಪ್ಪ - ಹೌದಾ ?

ಚೆನ್ನಿ - ಹೌದು ಅಂತೀನಿ

ಮರಿಯಪ್ಪ - ಅನ್ನು ಅನ್ನು ಅನ್ನುವಂಗ ಆಗೇತಿ ಅಂತೀದಿ

ವೆಂಕಪ್ಪ - ಹೋಗ್ಲಿ ಬಿಡಪ... ಇದೆ ಈಗ ನಾನೊಬ್ಬ ಅಂದ ಅನ್ನಿಸಿಕೊಂಡು ಚಂದಗೇಡಿ ಆಗಿ ನಿಂತೀನಿ. ನೀನೊಬ್ಬ ಮುಖಕ್ಕೆ ಉಗಳಿಸಿಕೊಂಡು ಮಂಗ್ಯಾ ಆಗುವಂತಿದ್ರ ಆಗು. ಆದಷ್ಟು ಬೇಗ ಕಾಗದ ಪತ್ರದ ಕೆಲಸ ಮುಗಿಸಿ ಅವರ ಹೊಲಮನಿ ಅವರಿಗೆ ಬಿಟ್ಟುಕೊಡು. ಇಲ್ಲಾಂದ್ರ ಊರ ಜನಾ ಸುಮ್ಮನಿರೋದಿಲ್ಲ. ಆ ಹುಡುಗ ಸಿಟ್ಟಿಗೆದ್ದು ಮತ್ತೊಮ್ಮೆ ಕೈಯ್ಯಾಗ ಕೊಡ್ಲಿ ತಗೊಂಡಾ ಅಂದ್ರ

ಚೆನ್ನಿ - ನಿಮ್ಮಿಬ್ಬರ ರುಂಡಾ ತಗೀತಾನ

ವೆಂಕಪ್ಪ - ಖರಿ ದಿಂಬಪ್ಪ ಊರಾಗ ಅಡ್ಡಾಡಬೇಕಾಗತದ

ಮರಿಯಪ್ಪ - ಮುಷ್ಟು ಕೊಡದ ಅವರ ಆಸ್ತಿ ಅವರಿಗೆ ಬಿಟ್ಟುಕೊಡು ಅಂತಿಯಾ ?

ಚೆನ್ನಿ - ಕೊಡದಿದ್ರ ಭದ್ರಿ ಎಲ್ಲಿ ಬಿಡ್ತಾನ ? ನಿಮ್ಮಿಬ್ಬರ ಕುತ್ತಿಗ ಮ್ಯಾಲೆ ಇಡತಾನ ಕೊಡ್ಲಿ. ಸಂಗಪ್ಪನ ಗುಡನ ಸರ ಕುಡಿಯಾಕ ಕಲಿಸಿ ಸಾಲ ಮಾಡಿಸಿ ನಿಶೆದಾಗ ಅವನ ಕಡೆಯಿಂದ ಹೊಲಮನಿ ಬರಿಸಿಕೊಂಡಿ. ಪಾಪ ಪೆದ್ದು ಸಂಗಪ್ಪ

ಯಾರು ದಿಕ್ಕಿಲ್ಲದವಳು ಅಂತ ತಿಳಿದು ಇಷ್ಟು ದಿವಸ ಹೊಲಾ ಉಣಕೊಂತ ಬಂದಿ ಈಗ ಅದನ್ನ ಕಾರೂ ಹೊತ್ತು ಬಂದ್ಯತಿ ಕಾರು?

ಮರಿಯಪ್ಪ - ನಿನಗೆ. ಬುದ್ಧಿ ಹೇಳಾಕ ಕರೆಕಳಿಸಿಲ್ಲ ಸುಮ್ಮನೆ ನಿಲ್ಲು. ಏನ ಹಚ್ಚಿಯೋ ನಿನ್ನ ಪಂಟಿ

ಚೆನ್ನಿ - ಹೊಲಸ ಕೆಲಸಾ ನೀವು ಮಾಡಿರಿ. ನಿಮ್ಮಿಬ್ಬರ ಕುತ್ತಿಗ ಹಗ್ಗ ಬೀಳತ್ತ ಬಲು ಜೋಕಿ ಅಂದೆ (ಹೋಗುವಳು)

ಮರಿಯಪ್ಪ - ವೆಂಕಪ್ಪ ಇಟಗೊಂಡ ಹೆಂಗಸಿನ ನಾಲಿಗೇನೆ ಹರಿತ ಆಯಿತಲ್ಲೋ ?

ವೆಂಕಪ್ಪ - ಹೌದಪ್ಪಾ ಕಾಲಾನೆ ಅಷ್ಟು ಸುಮಾರ ಬಂದಾವು. ಯಾರೇನು ಮಾಡೋದು ಕಾಲಾಯ ತಸ್ಮೈನಮಃ ಅಂತ ನಾನು ಮರದ ಕಾಲಿಗೆ ನಮಸ್ಕಾರ ಮಾಡತೀನಿ

ಮರಿಯಪ್ಪ - ಕಾಲ ಇರ್ಲಿ ವೆಂಕಪ್ಪ, ಅವರಪ್ಪ ಮಾಡಿದ ಸಾಲ ಕೊಡದಿದ್ರ ಬಿಡ್ಲಿ, ಅವರ ಹೊಲಾಮನಿ ಅವರಿಗೆ ಬಿಟ್ಟಕೊಡತೀನಿ. ಆದರ ನಿವ್ವನ ಮದುವೆಗೆ ಕೊಟ್ಟ ದುಡ್ಡರ ದುಡಿದು ಮಟ್ಟಿಸಲಿಕ್ಕೆ ಹೇಳಲ್ಲ ಅವರಿಗೆ

ವೆಂಕಪ್ಪ - ಹೇಳಬಹುದು ಹೂಂ ಅಂದ್ರ ಚಂದ. ಮತ್ತ ಸಾಲಾ ಕೇಳ್ತಿರಾ ಅಂತ ಕೊಡ್ಲಿ ತಗೊಂಡರ ಹ್ಯಾಂಗ ?

ಮರಿಯಪ್ಪ - ಒಳ್ಳೇ ಎದುರು ಹಾಕ್ಕೊಂಡೀವಿ. ನೀ ಏನೇ ಅನ್ನು ವೆಂಕಪ್ಪ ಭೂಮಿಗೆ ಎದುರಾದ ಮುಳ್ಳ ಇದ್ದಂಗ ಆ ಹುಡುಗ

ವೆಂಕಪ್ಪ - ಯಾರು ಛದ್ರಿ ಹೌದಲ್ಲ. ನಾನು ನಿನಗ ಮೊದಲೆ ಹೇಳಿದ. ನನ್ನ ಮಾತು ನೀನಲ್ಲಿ ಕೇಳ್ದಿ. ಮೀಸಿ ಹುರಿ ಮಾಡಿ ಹಯ್ ಅಂತ ಹೋದಿ ಹೇಗಾಯಿತು ಮರಿಯಪ್ಪ. ದೇವರಾಣಿ ಮಾಡಿ ಹೇಳ್ತೀನಿ. ನಿಂದೊಂದೆ ಮನಿ ಸುಡತೀನಿ ಅಂದ್ರ ನಾ ಸುಮ್ಮನಿರತಿದ್ದೆ. ಆದರ ನಮ್ಮ ಮನಿಗೆ ಬೆಂಕಿ ಹಚ್ಚತೀವಿ ಅಂತಾರಲ್ಲ ಇದು ಯಾರ ಹೇಳಿದ್ದು

ಮರಿಯಪ್ಪ - ಏನರ ಮಾಡಿ ಈ ನ್ಯಾಯ ಮುಗಿಸಿಬಿಡಪ್ಪ ?

ವೆಂಕಪ್ಪ - ಮುಗಿಸಿ ಬಿಡಂತಿಯ ? ಹ್ಯಾಂಗ ಹ್ಯಾಂಗ ಮುಗಿಸಲೆಪ್ಪ ಈ ನ್ಯಾಯ

ಮರಿಯಪ್ಪ - ಹಂಗ ಯಾಕೋ ಸಾವುಕಾರರೂ ನಿಮ್ಮ ಹೊಲಾಮನಿ ಕೊಡ್ತರಂತ ಹೇಳಲ್ಲ

ವೆಂಕಪ್ಪ - ಅವರ ಹೊಲಾಮನಿ ಬಿಟ್ಟು ಕೊಟ್ರ ಅದು ಅವರಿಗಾಯಿತು. ನ್ಯಾಯ ತೀರಿಸಿದ ನನಗೇನು ಬಂತು ?

ಮರಿಯಪ್ಪ - ನಿನಗೇನೂ ?

ವೆಂಕಪ್ಪ - ಮತ್ತ ಅವತ್ತ ನ್ಯಾಯ ಹಚ್ಚುವಾಗ ನಿನ್ನಿಂದ ದುಡ್ಡು ತಿಂದ ಹಚ್ಚೀನಿ. ಇವತ್ತ ದುಡ್ಡ ತಿಂದ ಅದನ್ನ ಮುಗಸಂವಾ

ಮರಿಯಪ್ಪ - ನಿನಗ ನಾ ಕೊಟ್ಟಿನಲ್ಲೋ ?

ವೆಂಕಪ್ಪ - ಕೊಟ್ರೆ ನೀ ಏನೂ ಪುಣ್ಯಾಕ್ಕೆ ಕೊಟ್ಟಿ ಏನು ? ಅಂಥಾದ್ದು ಮಾಡತೀದಿ ಕೊಡ್ತಿ. ನೀ ಕೋಡೋದು ದಂಡಕ್ಕೆ, ನಾ ಮಾಡೋದು ಪಿಂಡಕ್ಕೆ. ನಮ್ಮಲ್ಲಿಯಾದರೂ ಏನ ಉಳಿತದ, ಬಾಳ ಬ್ಯಾಡ ಇಷ್ಟ (ಐದು ಬೆರಳು ತೋರಿಸುವನು) ಕೊಟ್ಟು ಬಿಡು ಮುಗಿಸಿಬಿಡ್ತೀನಿ

ಮರಿಯಪ್ಪ - ಇಷ್ಟಂದ್ರೆ ಅದೇನು ಐದೋ ಐವತ್ತೊ

ವೆಂಕಪ್ಪ - ಐದು ಐವತ್ತಕ್ಕೆ ಬಾಯಿ ತಗೀತಿನೇನು ನಾನು. ಈ ಕುಲಕರ್ಣಿ ವೆಂಕಪ್ಪನ ಒಂದು ಬೆರಳು ಅಂದ್ರೆ ಒಂದು ನೂರೂ........ ಸಧ್ಯ ಆದ್ದರ. ಮತ್ತ ತಡವ ಒಂದು ನ್ಯಾಯ ಮುಗಿಸು ಅಂದ್ರ ಇದು ಸಾವಿರಕ್ಕೆ ಹೋಗುತ್ತ. ಇದು ಹಿಂಗ ಹೋಗೋದ ಹೋಗೋದು ಪಂಚವಾರ್ಷಿಕ ಯೋಜನೆ ಇದ್ದಂಗ

ಮರಿಯಪ್ಪ - (ಎರಡೂ ಬೆರಳು ತೋರಿಸಿ) ಇಷ್ಟ ಕೊಡತೀನಿ ಮುಗಿಸಿ ಬಿಡು

ವೆಂಕಪ್ಪ - ಇವೆರಡು ಮುರದಬಿಡು ಹೊಯಕೊಂತಾ ಹೋಗ್ತಿನಿ. ನಿನ್ನ ಕಡೆಯಿಂದ ಹ್ಯಾಂಗ ತೆಗೋಬೇಕು ಅನ್ನೋದು ನನಗೊತ್ತಿಲ್ಲೇನೊ. ನೆಟ್ಟಗ ಹೋಗ್ತಿದಿ (ಮರಿಯಪ್ಪ ರೊಡ್ಡು ಕೊಡಲಿಕ್ಕೆ ಒಪ್ಪನು) ಸಿದ್ದ ಬಂದ ತಡಿ ವಿಚಾರ ಮಾಡ್ತೀನಿ (ಸಿದ್ದ ಬರುವನು) ನಮಸ್ಕಾರಪಾ ಸಿದ್ದಣ್ಣ ಏನಂತಾನಪ್ಪ ನಿಮ್ಮ ತಮ್ಮ ಭದ್ರಣ್ಣ

ಸಿದ್ದ - ಅವ್ವ ಸತ್ತ ದುಃಖ ತಡಿಲಾರದೆ ಒಂದೇ ಸವನೆ ಅಳತಾನೆ

ವೆಂಕಪ್ಪ - ಅವ್ವ ಸತ್ತರೆ ಯಾರಿಗೆ ದುಃಖ ಆಗೋದಿಲ್ಲಪ್ಪ. ನಮ್ಮವ್ವ ಸತ್ತಾಗ ನಾನೂ ಒಂದು ನಮೂನಿ ದುಃಖ ಆಗಿ ಅಳತಿದ್ದೆ

ಸಿದ್ದ - ನಮ್ಮವ್ವನ ಸಾಯ ಹೊಡೆದವರನ್ನ ಕಡವ ಚಲ್ಲದೆ ಬಿಡೋದಿಲ್ಲಾಂತ ಮತ್ತೆ ಕೊಡ್ಲಿ ತಗೊಂಡಿದ್ದ

ವೆಂಕಪ್ಪ - ಮತ್ತೆ ಕೊಡ್ಲಿ ತಗೊಂಡಿದ್ದ (ಮೂರು ಬೆರಳು ತೋರಿಸುವನು)

ಸಿದ್ದ - ಇನ್ನು ಈ ಕೊಡ್ಲಿ ಸಹವಾಸ ಸಾಕು ಅಂತಾ ನಾನು ನನ್ನ ಪಂಪತಿ ಹೈದು ಬಿಡಿಸಿದ್ನಿ. ನೋಡ್ರಿ ಕುಲಕರ್ಣೀರ ನೀವು ನಮ್ಮ ಮೂಲಾ ಬಿಟ್ಟು ಕೊಡದಿದ್ರ ಹೊಸ ಗಾಯ ಮಾಡದೆ ಅವನು ಬಿಡೋದಿಲ್ಲ

ವೆಂಕಪ್ಪ - ಹೊಸಾ ಗಾಯ ಅಂತಾನಾ (ಐದು ಬೆರಳೂ ತೋರಿಸುವನು)

ಮರಿಯಪ್ಪ - ಮತ್ತ ಅದನ್ನ ತಿಳಿದೆ ಅಲ್ಲೇನು

ವೆಂಕಪ್ಪ - ಮೊದಲ ಇದನ್ನು ತಿಳಿಕೊ

ಮರಿಯಪ್ಪ - ನೋಡ ಸಿದ್ದಪ್ಪ ನಿಮ್ಮಪ್ಪ ಮಾಡಿದ ಸಾಲಾ ಮುಟ್ಟಿತು ಅಂತ ಬತ್ತಿದ ಪೈರೂ ಬಿತ್ತಿದಂಗ ಹೊಲ ಬಿಟ್ಟು ಕೊಡ್ತೀನಿ. ನಿನ್ನ ಮದುವೆಗ ಕೊಟ್ಟ ಸಾಲಾ ಮಡಿದು ಮುಟ್ಟಿಸ್ತಿಯೊ ?

ವೆಂಕಪ್ಪ - ಇಲ್ಲ ಅದನ್ನು ಮುಟ್ಟಿತು ಅಂತಿರೂ

ಸಿದ್ದ - ಅದನ್ನ ದುಡಿದು ಮುಟ್ಟಿಸಲಿಕ್ಕೆ ಸಿದ್ದನಿರುವೆ ಸಾವುಕಾರ್ರೆ

ಮರಿಯಪ್ಪ - ದುಡ್ಡು ಮುಟ್ಟುವರೆಗೆ ನೀನೆ ದುಡಿತಿ ಹೌದಲ್ಲ

ಸಿದ್ದ - ಸಾವುಕಾರರೆ ತಪ್ಪು ತಿಳಿದುಕೊಳ್ಳಬಾರದು. ನಾನೇ ದುಡಿತಿದ್ದೆ ಆದರ ನಮ್ಮವ್ವ ಸತ್ತು ನನ್ನ ಕೈಮುರಿದಂತಾಗಿದೆ. ಅದಕ್ಕಂತಲೇ ನನ್ನ ತಮ್ಮನ್ನ ಜೀತಾ ಇಡತೀನಿ. ನಿಮ್ಮ ಸಾಲಾ ಮುಟ್ಟುವವರೆಗೂ ದುಡಿಸಿಕೊಳ್ರಿ

ಮರಿಯಪ್ಪ - ಯಾರು ಭದ್ರಿನ್ನ

ವೆಂಕಪ್ಪ - ಹೌದು ಯಾಕೆ ಏನಾಯ್ತು ? ನೀನೆಷ್ಟು ಹೆದರಿ ಬೀಳತೀ ಹಾವು ತುಳದವರಂಗ

ಮರಿಯಪ್ಪ - ಬ್ಯಾಡ ವೆಂಕಪ್ಪ. ಆ ಹುಡುಗ ಏನು ಮೈ ಮುರಿದು ದುಡಿತಾನೇನು ? ಹೊಲಮನಿ ಕೆಲಸ ಆದೀತೇನು ? ನಮಗ ಸಿದ್ದನೆ ಇರಲಿ ಆ ಹಾವಿನ ಸಹವಾಸವೇ ಬ್ಯಾಡ

ಸಿದ್ದ - ನೀವ ಹಿಂಗಂದ್ರ ಹ್ಯಾಂಗರಿ ಸಾವುಕಾರರೆ... ನಮ್ಮನ್ನ ಹಾದಿಗೆ ಹಚ್ಚುವರಾದರೂ ಯಾರು ? ಇನ್ನು ಮೇಲೆ ಅವನು ನಿಮಗೇನಾದ್ರು ಎದುರು ವಾದಿಸಿದರ ಹೇಳ್ರಿ ಅವನ ಎದಿ ಸೀಳತೀನಿ

ಮರಿಯಪ್ಪ - ಏನಂದ್ರು ಹೆದರಿ ನಡಿಯೋ ಹುಡುಗ ಅಲ್ಲೊ ಸಿದ್ದ ಅವನು. ಮಹಾ ಹಟಮಾರಿ. ಅಂಥವನ್ನ ಹ್ಯಾಂಗ ದುಡಿಸಿಕೊಳ್ಳೋದು ? ಯಾಕೋ ವೆಂಕಪ್ಪ

ವೆಂಕಪ್ಪ - ಮರಿಯಪ್ಪ ನಿನ್ನ ಮಾತು ನಿನಗರ ಚಂದ ಕಾಣತಾವೇನು ? ಆ ಹುಡುಗ ವಿನಯದಿಂದ ಕೇಳಿಕೊಳ್ತಾನ. ಏನ್ರಿ ಸಾವುಕಾರ್ರ ನಮ್ಮನ್ನ ಹಾದಿಗೆ ಹಚ್ಚುವರಾದರೂ ಯಾರು ಅಂತ? ಅವನ ಮಾತು ನಿಜಾನ. ನಮ್ಮೂರಾಗ ಇದುವರೆಗೆ ಯಾರನ್ನಾದರೂ ಹಾದಿಗೆ ಹಚ್ಚಬೇಕಾದರೆ ನಾವಿಬ್ಬರೂ ಕೂಡೆ ಹಚ್ಚೀವಿ. ಈಗ ಇವರನ್ನ ಹಾದಿಗೆ ಹಚ್ಚೋಣ. ಇಲ್ಲ ಇವರ ಕೈಯಾಗ ನಾವರ ಹಾದಿಗೆ ಹತ್ತಿಹೋಗೋನ. ನೀನು ಸುಮ್ಮನಿರು. ನೋಡ ತಮ್ಮಾ ಸಿದ್ದಣ್ಣ ನೀವು ಬಾಳ ಸುಮಾರ ಪೈಕಿ ! ಏನಾದರೂ ಸಿಟ್ಟು ಬಂದ್ರೆ ಕೈಯ್ಯಾಗ ಕೊಡ್ಲಿ ತಗೊಂಡು ಮಯ್ಯ ಅಂತ ಬರ್ತೀರಲ್ಲ ಅದಕ ಹೆದರತೀನಿ. ನಾಳೆ ನಿನ್ನ ತಮ್ಮ ಇವನಿಗ ಏನಾದರೂ ಅಂದ್ರ ಹಿಡಿದು ಅವನ ಎದಿ ಸೀಳತೀನಿ ಅಂತ ಇವನ ಕೈಮೇಲೆ ಕೈಹಾಕಿ ವಚನ ಕೊಡು. ನಾನು ಒಪ್ಪಸ್ತೀನಿ ಯಾಕಪ್ಪಾ

ಮರಿಯಪ್ಪ - ಹೌದು... ಹೌದು... ಅಷ್ಟಾದರ ಧೈರ್ಯದಿಂದ ಭದ್ರೀನ್ನ ಜೀತಾ ಇಟ್ಟಗೊಳ್ಳತೀನಿ

ಸಿದ್ದ - ಸಾವುಕಾರರ ನಾವು ಬಡವರು. ಮಾತು ಕಳೆದುಕೊಂಡು ಬದುಕಿದವರಲ್ಲ.

ನಮ್ಮಪ್ಪ ನಮ್ಮಪ್ಪ ನಮಗೇನು ಕೊಡದಿದ್ರು ಮಾತಾಡಿದ ಪ್ರಕಾರ ನಾಲಗಿ ಕಾಯ್ದುಕೊಳ್ಳುವ ಶಕ್ತಿ ಕೊಟ್ಟು ಸತ್ತಾರ. ನೋಡ್ರಿ ಇವತ್ತ ನಿಮ್ಮ ಕೈಮೇಲೆ ಕೈಯಿಟ್ಟು ಹೇಳ್ತೀನಿ. ಇನ್ನಮ್ಯಾಲೆ ನನ್ನ ತಮ್ಮ ನಿಮಗೇನಾದ್ರು ಎದುರು ನಿಂತರೆ ಅವನ ತಲಿ ತೆಗೆದ ನಿಮ್ಮ ಕಾಲಿಗೆ ಒಪ್ಪಿಸ್ತೀನಿ. ವಚನಕ್ಕೆ ತಪ್ಪಿದರೆ ನನ್ನ ತಲಿನೆ ಬಲಿ ಕೊಡತೀನಿ... ನಡ್ರಿ ನಮ್ಮ ಮನಿಗೆ ಹೋಗೋಣ

ಅವ ಮನಿಗೆ ಅಂತಾನ

ಅದು ತಮ್ಮ ಮನಿಗೆ ಅಂತಾನ... ಸಿದ್ದಣ್ಣ ನೀನು ನಡಿಯಪ್ಪ ನಾವೆಲ್ಲ ಬರತೀವಿ. ಸಿದ್ದಣ್ಣ ನಾವು ಬಂದಾಗ ನೀನೂ ಮನೆಯಾಗ ಇರಪ್ಪ, ನಡಿ (ಸಿದ್ದ ಹೋಗುವನು) ಮರಿಯಪ್ಪ ಆಗ ನಾವೂ ಅಷ್ಟ ಮಾಡಿವಿ ಅಂತ ಈಗ ಈ ಹುಡುಗರು ಇಷ್ಟು ಮುದ್ದಿ ಆಗ್ಯಾವು. ನನ್ನ ಪ್ಲ್ಯಾನು ಅಂದ್ರ ಸಣ್ಣ ಪ್ಲ್ಯಾನು ಅಲ್ಲ. ಶರಾವತಿ ಡ್ಯಾಮ ಕಟ್ಟಿ ಮುಗಿದಂಗ. ನೀನೇನು ಅಂಜಬ್ಯಾಡೋ ನಾನಿರತೀನಿ. ಆದ್ರ ನೀನೀಗ ಮುಂದ ನಡಿಯಪ್ಪ ಯಾಕಂದ್ರ ಅವರ ಮನಿಗ ಹೋಗಬೇಕು

ನೀನಿರತೀದಿ..... ಎಲ್ಲಾ ಮುಗಿದ ಮ್ಯಾಲಿ ನೋಡಿ ನಗಾಕ ಇರತಿದಿ

- ತೆರೆ -

# ದೃಶ್ಯ ೧೧

## ಮನೆ ದೃಶ್ಯ

(ತಾಯಿಯ ತಿಂಗಳ ತಿಥಿ ನಡೆದಿದೆ. ತಾಯಿಗೆ ಸೀರೆ ಖಣ ಏರಿಸಿ ದೀಪ ಹಚ್ಚಿದ್ದಾರೆ. ಭದ್ರಿ, ಪಾರ್ವತಿ ಅಳುತ್ತ ಕುಳಿತಿದ್ದಾರೆ)

ಹಿನ್ನಲೆ ಹಾಡು

ತಾಯಿಯ ತ್ಯಾಗಕೆ ಸೀಮೆಯೇ ಇಲ್ಲ ।। ನನಗದು ಮೊದಲೆ ತಿಳಿದಿರಲಿಲ್ಲ ।।
ಹಗಲು ಇರುಳು ಕಷ್ಟದ ಬಾಳು ।।

ಪಾರ್ವತಿ - ಭದ್ರಿ ಇನ್ನಾದರೂ ತಾಯಿಯನ್ನು ನೆನೆದು ಹಳಹಳಿಸಿ ಅಳುವದನ್ನು ಕಡಿಮೆ ಮಾಡಪ್ಪ

ಭದ್ರಿ - ಹೇಗೆ ಕಡಿಮೆ ಮಾಡಲಿ ಅತ್ತಿಗೆಮ್ಮಾ. ನಾನೆಷ್ಟು ಮರೆಯಲೆತ್ನಿಸಿದರೂ ಅವ್ವನ ಅಕ್ಕರೆಯ ನೆನಪು ನನ್ನೆದೆಯ ಹುತ್ತದಲ್ಲಿ ಹೊಕ್ಕು ಕೆಣಕುತ್ತಿದೆ

ಪಾರ್ವತಿ - ಹೀಗೆಯೇ ನೀನು ಎಷ್ಟ ದಿನ ಅತ್ತರೇನಪ್ಪಾ ? ಸತ್ತು ಹೋದ ಅತ್ತೆಯನ್ನು ಆ ನಿನ್ನ ಕಣ್ಣೀರು ಮತ್ತೆ ಕರೆದು ತರುತ್ತವೇನಪ್ಪಾ

ಭದ್ರಿ - ಅತ್ತಿಗೆ ಎಲ್ಲರಂತೆ ಆಯುಷ್ಯ ಮುಗಿದು ನಮ್ಮವ್ವ ಸತ್ತು ಹೋದರೆ ನಾನೀ ರೀತಿ ಕಣ್ಣೀರು ಹಾಕುತ್ತಿರಲಿಲ್ಲ. ಹುಟ್ಟು ಮೊದಲಗೊಂಡು ಸಾಯುವ ಪರಿಯಂತರ ಅವಳು ಬರೆ ಕಷ್ಟಗಳನ್ನೆ ಅನುಭವಿಸುತ್ತ ಕೊನೆಗೆ ದುರ್ಮರಣ ಬಂದಿತಲ್ಲ ಎಂದು ಕಣ್ಣೀರುಟ್ಟು ಅಳುತ್ತಿರುವೆ. ಅತ್ತಿಗೆಮ್ಮಾ ನನ್ನ ದುಡುಕುತನದಿಂದಲ್ಲವೇನು ಅವ್ವನಿಗೆ ದುರ್ಮರಣ. ನಿನ್ನ ಗರ್ಭ ಪತನ ಘಟಿಸಿದ್ದು. ನಾನು ಪಾಪಿ ಅತ್ತಿಗೆಮ್ಮ ಪಾಪಿ

ಪಾರ್ವತಿ - ಅಲ್ಲ ಭದ್ರಿ ನೀನು ಪಾಪಿಯಲ್ಲ. ಈ ಊರಿನ ಪುಣ್ಯದ ದೀಪ. ಬಡವರಿಗೆಲ್ಲ ಒಂದಿಲ್ಲ ಒಂದು ಬಗೆಯ ತಾಪ ಕೊಡುತ್ತಿದ್ದ ಕಟುಕರನ್ನು ಎದುರಿಸಿದ ಧರ್ಮದ ಪ್ರತಿರೂಪ. ಅಂದ ಬಳಿಕ ನೀನು ಪಾಪಿಯಾಗುತ್ತೀಯಾ ? ಭದ್ರಿ ತಾಯಿ ಸತ್ತಳೆಂದು ಅಳಬೇಡ. ಅವಳ ಸಾವಿನಲ್ಲಿ ನಮ್ಮ ನೋವು ನೀಗಿ ಇಂದಿಲ್ಲ ನಾಳೆ ಹೊಸರೂಪ ತಳೆದು ಈ ಮನೆಯಲ್ಲಿ ಅರಳೀತು. ನೋವಿನಲ್ಲಿ ನಗುವೂ ಜನಿಸಿ ಸಾವಿನ ನಂತರ ಜೀವ ಅರಳುತ್ತದಪ್ಪ

ಭದ್ರಿ - ಆದರೆ ಜೀವ ಅರಳುವ ಭಾಗ್ಯ ಕಾಣುವ ಪುಣ್ಯ ನಮ್ಮವ್ವನ ಬಾಳಿನಲ್ಲಿ ಒಂದು ಸಲವೂ ಒದಗಿ ಬರಲಿಲ್ಲ ಅತ್ತಿಗೆಮ್ಮಾ. ನಮ್ಮ ವಂಶದ ರಸ ಹೀರಿ ನಿಮ್ಮ ಅಮೃತ ಗರ್ಭದಿಂದ ಹುಟ್ಟಿ ಬರಲಿದ್ದ ತನ್ನ ಕರುಳಿನ ಕುಡಿಯನ್ನು ಕಾಣಬೇಕೆಂಬ ಒಂದೇ ಒಂದು ಹಂಬಲ ನಮ್ಮವ್ವನ ಮನದಲ್ಲಿ ಬೇರೂರಿ ನಿಂತಿತ್ತು. ನಿಷ್ಕರುಣೆಯಾದ ವಿಧಿ ಅದನ್ನು ಕಾಣಗೊಡಲಿಲ್ಲ. ಆ ವಿಧಿಯ ಬೆರಳಾಗಿ ಕೆಲಸ ಮಾಡಿ ನಮ್ಮವ್ವನ ಸಾವಿಗೆ ಕಾರಣರಾದ ಕಟುಕರನ್ನು ಜೀವಂತ ಸೀಳಿದಾಗಲೆ ನನ್ನ ಆತ್ಮಕ್ಕೆ ಶಾಂತಿ (ಕೊಡ್ಲಿ ತೆಗೆದು ಕೊಳ್ಳುವನು)

ಪಾರ್ವತಿ - ಭದ್ರಿ ಏನಿದು ನಿನ್ನ ಅಪದ್ಧ ವರ್ತನೆ ? ಅವರನ್ನು ಸೀಳಿದ ಮಾತ್ರಕ್ಕೆ ಸತ್ತು ಹೋದ ಆ ನಿನ್ನ ತಾಯಿ ಬರುವಳೆ ? ನೋಡು ಮತ್ತೆ ಹಟ ಮಾಡುತ್ತ ಹೋದಿಯಾದರ ನಾನ ನಿನನ್ನು ಸೀಳಿ ಬಿಡುತ್ತೇನ

ಭದ್ರಿ - ಇಲ್ಲ ಅತ್ತಿಗೆಮ್ಮಾ ನನ್ನದು ತಪ್ಪಾಯಿತು. ಅವ್ವನ ನೆನಪು ನನ್ನ ಮನಕ್ಕೆ ತಾಕಿದರ ಹುಚ್ಚು ಹಿಡಿದ ಹಾಗಾಗುತ್ತದೆ. ನಿಜ ಹೇಳು ಅತ್ತಿಗೆಮ್ಮಾ ನಿನ್ನ ಮಗುವನ್ನು ಕಂಡಿದ್ದರ ಅವ್ವ ಎಷ್ಟು ಆನಂದ ಪಡುತ್ತಿದ್ದಳು

ಪಾರ್ವತಿ - ಏನು ಮಾಡುವದಪ್ಪ ಎಲ್ಲಾ ದೈವ ನಡಿಸಿದಂತೆ ನಡೆದು ಹೋಗುತ್ತದೆ. ಮನುಷ್ಯರಾದ ನಮ್ಮ ಕೈಯ್ಯಲ್ಲೇನಿದೆ ಹೇಳು. ಅದೋ ನಿಮ್ಮಣ್ಣನವರೆ ಬಂದರು. ಅದೇನು ಸುದ್ದಿ ತಂದಿದ್ದಾರೋ ಕೇಳು

ಸಿದ್ದ - (ತಾಯಿಗೆ ನಮಸ್ಕರಿಸಿ) ಒಳ್ಳೆ ಸುದ್ದೀನೆ ತಂದಿದ್ದೇನ ಭದ್ರಿ. ಮರಿಯಪ್ಪನವರು ನಮ್ಮ ಹೊಲಮನೆಗಳನ್ನು ನಮಗೆ ಬಿಟ್ಟುಕೊಡತಾರಂತೆ

ಭದ್ರಿ - ಬಿಟ್ಟು ಕೊಡ್ತಾರಂತಯೇ ? ಯಾರು ಹೇಳಿದರಣ್ಣಾ ನಿನಗೀ ಮಾತನ್ನ

ಸಿದ್ದ - ಇದೀಗ ಅವರೇ ಹೇಳಿದರು ಭದ್ರಿ. ನೀನು, ನಿನ್ನತ್ತಿಗೆ ತಿಳಿದು ಕೊಂಡಷ್ಟು ಆ ಮನುಷ್ಯ ಅಷ್ಟು ದುಷ್ಟನಲ್ಲ. ಬಡವರ ಬಗ್ಗ ಕನಿಕರ ಉಳ್ಳವರು. ಪ್ರೀತಿಯಿಂದ ದುಡಿದರ ಜೀತದಾಳನ್ನು ಮನೆಯ ಮಗನಂತ ಕಾಣಬಲ್ಲ ಒಳ್ಳೆ ಗುಣ ಅವರದು

ಭದ್ರಿ - ಬೆಂಕಿ ಇಟ್ಟಿತು ಅವರ ಒಳ್ಳೆ ಗುಣಕ್ಕೆ. ಅಷ್ಟಕ್ಕೆ ಸಾಕು ಸುಮ್ಮನಿರಣ್ಣಾ

ಸಿದ್ದ - ಮತ್ತು ಅದೇ ಮಾತು. ನಮ್ಮ ಮನೆತನಕ್ಕೆ ಕೆಡಕು ತಂದಿದ್ದೆ ನಿನ್ನ ಮುಡಕುತನ ? ಅವನು ಗುಣವಂತನಲ್ಲದಿದ್ದರ ಸಾಲದ ಹಣ ಸಂದಾಯವಾಗದೆ ನಮ್ಮ ಹೊಲ ಮನೆಗಳನ್ನು ನಮಗ ಬಿಟ್ಟುಕೊಡಲು ಒಪ್ಪುತ್ತಿದ್ದನೆ ? ನೋಡು ನನ್ನ ಒಳ್ಳೆಯ ನಡತೆಯಿಂದಲೆ ಇಂದು ನಮ್ಮ ಆಸ್ತಿ ನಮ್ಮದಾಯಿತು

ಪಾರ್ವತಿ - ನಿಮ್ಮ ಆಸ್ತಿ ನಿಮಗಿಂದು ದೊರೆತರ ಅದು ನಿಮ್ಮ ಒಳ್ಳೆತನದಿಂದಲ್ಲ. ಭದ್ರಿಯ ದಿಟ್ಟತನದಿಂದ. ಪ್ರಾಣವನ್ನೇ ಪಣಕ್ಕಿಟ್ಟು ಬಡಿದಾಡಿದ ಅವನ ಸಾಹಸದಿಂದ

ಸಿದ್ದ - ಹೌದು ಇವನ ಸಾಹಸದಿಂದ ! ಇವನು ಅವರೊಂದಿಗೆ ನಡೆಸಿದ ದ್ವೇಷದಿಂದಲೇ ಅಲ್ಲವೇನು ಇಷ್ಟೆಲ್ಲ ದುರಂತ ನಡೆದುಹೋಗಿದ್ದು. ಇಷ್ಟಿದ್ದು ಸಾವುಕಾರರ ಒಳ್ಳೇತನವನ್ನು ಹಳಿದು ಆಡಲಿಕ್ಕೆ ನಿನಗೆ ನಾಚಿಕೆ ಬೇಕಾಗಿತ್ತು

ಪಾರ್ವತಿ - ನೀವೇನೆ ಹೇಳಿದರೂ ಸರಿ ಒಳ್ಳೆಯದಕ್ಕೆ ಒಪ್ಪುವ ಜಾತಿ ಅಲ್ಲ ಆ ನಿಮ್ಮ ಸಾವುಕಾರನದು

ಭದ್ರಿ - ಇರಲಿಬಿಡು ಅತ್ತಿಗೆ, ಅಣ್ಣನೊಂದಿಗೆ ನೀನೇಕೆ ವಾದಿಸೋದು ? ಯಾರಿಂದಲೇ ಆಗಲಿ ನಮ್ಮ ಆಸ್ತಿ ನಮ್ಮದಾಯಿತಲ್ಲ ಅಷ್ಟು ಸಾಕು

ಸಿದ್ದ - ಆಸ್ತಿಯೇನೋ ನಮ್ಮದಾಯಿತು. ಆದರೆ ಮದುವೆಗೆಂದು ಕೊಟ್ಟ ಸಾಲ ಉಳಿಯಿತಲ್ಲ. ಮಾತು ಕೊಟ್ಟಂತೆ ಅವರ ಮನೆಯಲ್ಲಿ ನಾನು ದುಡಿದು ಆ ಸಾಲ ಮುಟ್ಟಿಸಬೇಕು. ನಾನಲ್ಲಿ ದುಡಿಯಲು ನಿಂತರ ಇಲ್ಲಿ ಹೊಲಮನೆ ಕೆಲಸ ನಿನ್ನಿಂದ ತೂಗಲಾರದು

ಭದ್ರಿ - ಅಂದರೆ ನಿನಗೆ ಬದಲಾಗಿ ನಾನವರ ಮನೆಯಲ್ಲಿ ದುಡಿಯಬೇಕೇನು ?

ಸಿದ್ದ - ಹೌದು ಅದನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲ ನೋಡು ತಮ್ಮಾ ಈ ಒಂದು ಸಾಲ ಮುಟ್ಟಿದರೆ ಮುಂದೆ ನಮಗೆ ಯಾರ ಹಂಗು ಇಲ್ಲ. ಅಲ್ಲದೇ ನಿನ್ನನ್ನು ಅವರಲ್ಲಿ ದುಡಿಯಲು ಇಡುವದಾಗಿ ನಾನವರಿಗೆ ಮಾತು ಕೊಟ್ಟು ಬಂದಿದ್ದೇನೆ. ನನ್ನ ಆ ಮಾತನ್ನು ನೀನೀಗ ಉಳಿಸಿ ಕೊಡಬೇಕು

ಭದ್ರಿ - ಅಣ್ಣಾ ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡ. ಬೇಕಿದ್ದರೆ ನನ್ನ ಪ್ರಾಣವನ್ನೇ ಕೇಳು ಕೂಡಲೇ ನಿನ್ನ ಪಾದಕ್ಕೆ ಅರ್ಪಿಸುತ್ತೇನೆ. ಅಣ್ಣಾ ಇಷ್ಟೆಲ್ಲ ದುರಂತ ಘಟನೆಗಳು ನಡೆದ ನಂತರವೂ ಎಂತಣ್ಣಾ ನಾನವರ ಆಳಾಗಿ ಬಾಳಲಿ

ಸಿದ್ದ - ಅಂದರೇನಪ್ಪ ಇಷ್ಟು ದಿನ ಅವ್ವ ಇದ್ದಳು. ಮನೆಯ ಭಾರವನ್ನೆಲ್ಲಾ ತನ್ನ ತಲೆಯ ಮೇಲೆ ಹೊತ್ತಿದ್ದಳು. ಕಾರಣ ಈ ವಿಷಯ ನಾನು ಯೋಚಿಸಬೇಕಾಗಿರಲಿಲ್ಲ. ಇಷ್ಟು ದಿನ ಉಡಾಳತನ ಮಾಡುತ್ತ ಅಲೆದಾಡಿದಂತೆ ಮುಂದೆಯೂ ಮಾಡುತ್ತ ಹೋದಿಯಾದರೆ ಯಾರಾದರೂ ನಿನಗೆ ಹೆಣ್ಣು ಕೊಡುತ್ತಾರೇನೋ ? ಹೆಣ್ಣು ಹುಡುಕಿ ನಿನ್ನ ಮದುವೆ ಮಾಡದಿದ್ದರ ಅಣ್ಣನಾದ ನನ್ನ ತಲೆಗೆ ಅಪವಾದ ಬರುತ್ತದ

ಪಾರ್ವತಿ - ಹೌದಪ್ಪಾ ಭದ್ರಿ. ಅಪವಾದ ಅವರೊಬ್ಬರಿಗೇ ಅಲ್ಲ ನನಗೂ ಬರುತ್ತದ. ಲೋಕದಲ್ಲಿ ನಾವು ಬದುಕಬೇಕಿದ್ದರೆ ಅವರಂದಂತೆ ಜನರೊಂದಿಗೆ ಹೊಂದಿಕೊಂಡು ಬದುಕಬೇಕು. ದೇವರ ದಯದಿಂದ ಇಷ್ಟು ದಿನ ಪ್ರತಿಕೂಲವಿದ್ದ ಪರಿಸ್ಥಿತಿ ಈಗ ಅನುಕೂಲವಾಯಿತಲ್ಲ. ಮರಿಯಪ್ಪನವರಲ್ಲಿ ಒಂದು ವರ್ಷ ದಡುದುಬಿಡು. ಅವರ ಪಾಪ ಪುಣ್ಯ ಅವರಿಗಿರಲಿ

ಸಿದ್ದ - ಪಾಪ ಪುಣ್ಯದ ಮಾತೇ ಇಲ್ಲ. ಎಷ್ಟಂದರೂ ಮರಿಯಪ್ಪ ನಮ್ಮ ಕಷ್ಟದಲ್ಲಿ ಆದವರು

ಭದ್ರಿ - ಕಷ್ಟದಲ್ಲಿ ಆದವರಲ್ಲಣ್ಣಾ... ಅವರು ಕೂದಲೆಳೆಯಿಂದ ಕುತ್ತಿಗೆ ಕೊಯ್ದವರು

ಪಾರ್ವತಿ - ಅದೇನೆ ಇರಲಿ ನೀನು ಒಪ್ಪಿಕೊಂಡು ಬಿಡು ಭದ್ರಿ

ಭದ್ರಿ - ನಾನೊಲ್ಲೆ ಅತ್ತಿಗೆಮ್ಮಾ ನಾನೊಲ್ಲೆ

ಸಿದ್ದ - ಯಾವಾಗಲೂ ನಿನ್ನ ಮಾತೇ ಮುಖ್ಯ. ಮೊದಲೇ ನೀನು ಹಟಮಾರಿಯಾದ ಘಟಸರ್ಪ. ಪಾರೂ ಇವನನ್ನು ಮಗನಂತೆ ಕಾಣುವುದಾಗಿ ಅಂದೆ ನಮ್ಮವ್ವನಿಗೆ ಮಾತು ಕೊಟ್ಟಿದ್ದಿಯಾ. ಆ ಮಾತು ಉಳಿಸಿಕೊಳ್ಳುವ ಇಷ್ಟ ನಿನಗಿದ್ದರೆ ಮರಿಯಪ್ಪನವರ ಮನೆಯಲ್ಲಿ ಇವನನ್ನು ದುಡಿಯಲು ಒಪ್ಪಿಸು. ಇಲ್ಲದಿದ್ದರೆ ನಾನೇ ಈ ಮನೆ ಬಿಟ್ಟು ಹೋಗುತ್ತೇನೆ. ನೀನುಂಟು ನಿನ್ನ ಮೈದುನನುಂಟು

ಪಾರ್ವತಿ - ತಡೆಯಿರಿ ಎಷ್ಟಂದ್ರೂ ಅವನು ಸಣ್ಣವನು

ಸಿದ್ದ - ಸಣ್ಣವನಾದ ಮಾತ್ರಕ್ಕೆ ಮಣ್ಣು ಕೊಟ್ಟರೆ ತಿನ್ನುತ್ತಾನೇನು ? ಪಾರು ಎಂದಿದ್ದರೂ ಇದು ನನ್ನ ಪ್ರಾರಬ್ಧಕ್ಕೆ ಗಂಟುಬಿದ್ದ ವೈರಿ. ಅಣ್ಣನಾದ ನಾನು ಅಧಿಕಾರದಿಂದ ಆಜ್ಞೆ ಮಾಡಿದ್ದೇನೆ. ಎಷ್ಟು ವಿನಯದಿಂದ ಕೇಳಿಕೊಂಡರೂ ತನ್ನ ಹಟವನ್ನೇ ಸಾಧಿಸಿಕೊಳ್ಳಬಯಸುವ ಈ ಹಾವಿನ ಗುಣದವನಿಗೆ ಅಣ್ಣನಾಗಿ ಹೇಳುವುದಕ್ಕಿಂತ ಎಲ್ಲಿಯಾದರೂ ಕಣ್ಮರೆಯಾಗಿ ಹೋಗುವದೇ ಮೇಲು (ಹೋಗಹತ್ತುವನು)

ಪಾರ್ವತಿ - ಅಯ್ಯೋ ತಡಿರಿ. ಸಿಟ್ಟಿನ ಕೈಯಲ್ಲಿ ಬುದ್ಧಿ ಇತ್ತು ನೀವು ಮನೆಬಿಟ್ಟು ಹೋದರೆ ನನ್ನಾಣೆಯಾಗಿದೆ

ಸಿದ್ದ - ಹಾಗಿದ್ದರೆ ಮರಿಯಪ್ಪನವರಲ್ಲಿ ದುಡಿಯಲು ಅವನನ್ನು ಒಪ್ಪಿಸು

ಪಾರ್ವತಿ - ಒಪ್ಪಸ್ತೀನಿ

ಭದ್ರಿ - ಅವ್ವಾ (ತಾಯಿಯ ಪ್ರತಿಮೆಯ ಹತ್ತಿರ ಅಳುವನು)

ಪಾರ್ವತಿ - ಭದ್ರಿ (ಅಳುವಳು)

ಭದ್ರಿ - ಅತ್ತಿಗೆ ಒಂದು ವೇಳೆ ಈಗ ನಮ್ಮಪ್ಪ ಇದ್ದಿದ್ದರೆ ನನ್ನನ್ನು ಅವರ ಮನೆಯಲ್ಲಿ ದುಡಿಯಲು ಎಂದೂ ಇಡುತ್ತಿರಲಿಲ್ಲ

ಪಾರ್ವತಿ - ಹೌದಪ್ಪಾ ಇಡುತ್ತಿರಲಿಲ್ಲ. ಆದರೆ ಮದುವೆಗೆ ಮಾಡಿದ ಸಾಲ ಮುಟ್ಟಿಸದೇ ಬಿಡುತ್ತಿರಲಿಲ್ಲ. ಅತ್ತೆ ತಾನು ಸತ್ತು ಮನೆಯ ಭಾರ ನನ್ನ ಕತ್ತಿಗೆ ಕಟ್ಟಿದಳು. ನಿನ್ನನ್ನು ಮಗನಂತೆ ಕಾಪಾಡಿಕೊಂಡು ಹೋಗು ಎಂದು ಹಾಲು ಮುಟ್ಟಿಸಿ ನನ್ನಿಂದ ಆಣೆ ಮಾಡಿಸಿದಳು. ಈಗ ನೋಡಿದರೆ ಅಣ್ಣನ ಇಷ್ಟ ತಮ್ಮನಿಗಿಲ್ಲ, ತಮ್ಮನ ಕಷ್ಟ ಅಣ್ಣನಿಗೆ ಅರ್ಥವಾಗಿಲ್ಲ. ಎಂದು ಇಲ್ಲಿ ನಾನು ಕಾಲಿಟ್ಟೆನೋ

ಅಂದಿನಿಂದ ಈ ಮನೆಯ ಅನಿಷ್ಟ ತಪ್ಪಲಿಲ್ಲ. ನೂರು ಮಾತಿನಿಂದೇನಪ್ಪಾ ಭದ್ರಿ ಈಗ ನಿಮ್ಮವ್ವ ಇದ್ದರೆ ಏನು ಮಾಡುತ್ತಿದ್ದಳು ಗೊತ್ತಾ... ಒಲ್ಲೆನೆಂದು ಹಟ ಮಾಡಿದ ನಿನಗೆ ದುಡಿಯಲು ಹೇಳುತ್ತಿರಲಿಲ್ಲ. ನಿಮ್ಮಣ್ಣನಿಗೆ ಒತ್ತಾಯ ಮಾಡುತ್ತಿರಲಿಲ್ಲ. ತಾನೇ ದುಡಿದು ಅವರ ಸಾಲ ಮುಟ್ಟಿಸಿ ಬರುತ್ತಿದ್ದಳು ಕಾರಣ ಇಂಥವಳ ಸ್ಥಾನದಲ್ಲಿದ್ದ ನಾನೇ ಮರಿಯಪ್ಪನವರಲ್ಲಿ ದುಡಿದು ಅವರ ಸಾಲ ಮುಟ್ಟಿಸಿ ಬರುತ್ತೇನೆ. ನೀವಿಬ್ಬರೂ ಸುಖವಾಗಿ ಇದ್ದು ಬಿಡ್ರಿ

ಭದ್ರಿ - ಅತ್ತಿಗೆ... ನೀವು ಇದನ್ನೇನು ಹೇಳುತ್ತಿರಾ ?

ಪಾರ್ವತಿ - ಅಹುದು ನೀನು ಅಣ್ಣನಂತೆ ನಡೆಯದಿದ್ದರೆ ನಾನೇ ಅವರ ಮನೆಯಲ್ಲಿ ದುಡಿದು ಸಾಲ ಮುಟ್ಟಿಸುತ್ತೇನೆ

ಭದ್ರಿ - ಅಗಲಣ್ಣ ನಿನ್ನಿಷ್ಟದಂತೆ ನಾನವರ ಮನೆಯಲ್ಲಿ ದುಡಿಯುತ್ತೇನೆ (ಪಾರ್ವತಿ ಅಳುತ್ತ ಒಳಗೆ ಹೋಗವಳು)

ಸಿದ್ದ - ಆಗಲಿ ಭದ್ರಿ, ಇನ್ನೊಂದು ವಿಷಯ ನೆನಪಿರಲಿ. ನೀನೀಗ ಅವರ ಮನೆಗೆ ಹೋಗುವದು ಆಳಾಗಿ ದುಡಿಯಲಿಕ್ಕೆ, ಅರಸನಾಗಿ ಮೆರೆಯಲಿಕ್ಕಲ್ಲ. ಅವರು ಒಂದು ಸಮಯ ಕಾಲಿನಿಂದ ತೋರಿಸಿದರೂ ನೀನದನ್ನು ಕೈಯಿಂದ ಮಾಡಬೇಕು

ಭದ್ರಿ - ಅಣ್ಣಾ ನಾನವರ ಮನೆಯಲ್ಲಿ ಆಳಾಗಿ ದುಡಿಯುತ್ತೇನೆಂದು ನಿನಗೂ ಅತ್ತಿಗೆಗೂ ವಚನ ಕೊಟ್ಟ ಬಳಿಕ ಮುಗಿಯಿತು. ಮತ್ತೆ ಆ ಮಾತನ್ನು ಮುಂದುವರಿಸುವದೇ ಬೇಡ. ದುಡಿಯುವಾಗ ನನ್ನ ಅವರು ಕತ್ತೆಗಿಂತ ಕಡಿಯಾಗಿ ಕಂಡರೂ ಸರಿ ತೊತ್ತಾಗಿ ದುಡಿದು ಅವರ ಸಾಲ ಮುಟ್ಟಿಸಿ ಬರುತ್ತೇನ (ಒಳಗೆ ಹೋಗುವನು)

ವೆಂಕಪ್ಪ - (ಒಳಗಿನಿಂದ) ಸಿದ್ದಣ್ಣಾ ಮನ್ಯಾಗ ಅದಿ ಏನೋ ತಮ್ಮಾ

ಸಿದ್ದ - ಅದೀನಿ ಬರ್‍ರಿ ಕುಲಕರ್ಣ್ಯರೆ

ವೆಂಕಪ್ಪ - (ಒಳಗಿನಿಂದ) ಆ ಹುಡುಗ ಸಿದಣ್ಣ ಮನ್ಯಾಗ ಅದಾನಂತ ನಡಿರೋ ಕೆಂಚಪ್ಪ ಮರಿಯಪ್ಪ ನೀವು ಮುಂದ ನಡಿರೋ ನಾನು ಬರ್‍ತೀನಿ

ಮರಿಯಪ್ಪ - (ಒಳಗಿನಿಂದ) ನೀನು ಮುಂದ ನಡಿಯೋ... ಹಿರಿಯಾ ಆಗತೀದಿ

ವೆಂಕಪ್ಪ - (ಒಳಗಿನಿಂದ) ಮೂವರು ಕೂಡೇ ಹೋದರೆ ಮೂರಾಬಟ್ಟೆ ಆಗತ್ತಂತ. ನೀವು ನಡಿರಿ (ಮರಿಯಪ್ಪ, ಕೆಂಚಪ್ಪ ಮುಂದೆ ಬರುವರು. ಹಿಂದೆ ವೆಂಕಪ್ಪ ಬರುವನು)

ಸಿದ್ದ .... ಬನ್ನಿರಿ ಸಾವುಕಾರರೆ ಕುಳಿತುಕೊಳ್ಳಿ

ವೆಂಕಪ್ಪ - (ಮೆಲ್ಲಗ ಬಂದು) ನಮಸ್ಕಾರಪಾ ಸಿದ್ದಣ್ಣಾ. ಇದೇನ ತಮ್ಮಾ ಸೀರಿ, ಕುಬಸಾ

ಸಿದ್ದ - ನಮ್ಮವ್ವ ಸತ್ತು ತಿಂಗಳಾಯಿತ್ರಿ

ವೆಂಕಪ್ಪ - ಬಳಗದಾಗ ಹಾಕೊಂಡಿರೇನೋ ಅಲ್ಲ. ಕೆಂಚಪ್ಪ ಇದು ಎಂಥಾ ಒಳ್ಳೇ ಟಾಯಮ ಅಂತೀನಿ. ಈಗ ಮರಿಯಪ್ಪನ ಇವರ ಮನಿಗೆ ಯಾಕ್ ಕರಕೊಂಡು ಬಂದೀವಂದ್ರ

ಕೆಂಚಪ್ಪ - ಇವರ ಹೊಲ ಮನಿ ಇವರಿಗೆ ಬಿಡಿಸಿ ಕೊಡಾಕ

ವೆಂಕಪ್ಪ - ಅಂದ ಮ್ಯಾಲೆ ಇವತ್ತ ಎಲ್ಲಾ ಕೆಲಸಾನು ಯಜಮಾನ ಮನುಷ್ಯಳ ಎದುರಿಗೆ ಮುಗಿಸಿದಂತಾಯಿತು. ಇದ್ಕ ನಾನು ಟೈಮು ಅಂತೀನಿ ನೀನೇನ ಅಂತಿಯಾ ?

ಕೆಂಚಪ್ಪ - ಇದಕ್ಕ ನಾನು ವ್ಯಾಳೇವು ಅಂತೀನ್ರಿ

ವೆಂಕಪ್ಪ - ನಿನ್ನ ತಮ್ಮ ಭದ್ರಣ್ಣಾ ಮನ್ಯಾಗ ಇಲ್ಲೇನೋ ತಮ್ಮಾ

ಸಿದ್ದ .... ಮನ್ಯಾಗ ಅದಾನ್ರಿ

ವೆಂಕಪ್ಪ - ಅದಾನ ! ಏನ ಮಾಡ್ತಾನಪ್ಪಾ ?

ಸಿದ್ದ - ಊಟಕ್ಕ ಕುಂತಾನ್ರಿ

ವೆಂಕಪ್ಪ - ಊಟಕ್ಕ ಕುಂತ್ರ ಯಾಕ ಎಬ್ಬಸ್ತಿಯಪ್ಪ. ಐದು ಗೋವು ಕೊಂದಷ್ಟು ಪಾಪ ಬರತ್ತಂತ ಶಾಸ್ತ್ರ ಹೇಳುತ್ತ

ಸಿದ್ದ .... ಇಲ್ಲ ಕರಕೊಂಡು ಬರ್ತೀನ್ರಿ

ವೆಂಕಪ್ಪ- (ಒಳಗೆ ನೋಡುತ್ತ) ಕೆಂಚಪ್ಪ ಸಿದ್ದಣ್ಣ ಬಾಳ ಒಳ್ಳೆ ಹುಡುಗ. ಮತ್ತ ಇವನ ತಮ್ಮ ಭದ್ರಣ್ಣ ಇವನಿಗಿಂತ ಒಳ್ಳೆಯವನು. ಮತ್ತ ಈ ಹುಡುಗನ ತಂದೆ ಇವರಿಬ್ಬರಿಗಿಂತ ಒಳ್ಳೆಯವನು. ಈ ಜನ ಇಷ್ಟೆಲ್ಲ ಒಳ್ಳೆಯವರಂತ ಇವರ ಹೊಲ ಇಪ್ಪತ್ತ ವರ್ಷ ಉಂಡಾನಿವ (ಸಿದ್ಧ, ಪಾರ್ವತಿ ಭದ್ರಿನ ಕರೆದುಕೊಂಡು ಬರುವರು)

ಸಿದ್ದ - ನೋಡ್ರೀ ಯಜಮಾನ್ರೆ ನಾವು ಬಡವರು. ಎಂದಿದ್ದರೂ ನಿಮ್ಮ ಕೈಯಲ್ಲಿ ದುಡಿದು ಒಡಲು ತುಂಬಿಕೊಳ್ಳಬೇಕಾದವರು. ಇಂದಿನಿಂದ ನಿಮ್ಮ ಮನೆಯಲ್ಲಿ ನನ್ನ ತಮ್ಮನ್ನ ಜೀತಾ ಇಡತೀನಿ. ಇವನ್ನ ದುಡಿಸಿಕೊಂಡು ಸಾಲಾ ಮುಟ್ಟಿಸಿಕೊಳ್ರಿ

ಪಾರ್ವತಿ - ಹೌದು ಸಾವುಕಾರರ ಇಲ್ಲಿಯುವರಗ ಅವನಿಂದ ತಮಗ ಏನ ಅಪರಾಧವಾಗಿದ್ದರೂ ಹಿರಿಯರಾದ ತಾವು ಅದನ್ನು ಹೊಟ್ಟೆಯಲ್ಲಿ ಹಾಕ್ಕೊಂಡು ತಮ್ಮ ಮಗನಂತೆ ಕಾಪಾಡಿಕೊಂಡು ಹೋಗಬೇಕು (ಮರಿಯಪ್ಪ ಮೀಸೆಯ ಮೇಲೆ ಕೈ ಹಾಕಿ ಕೆಮ್ಮುವನು. ಬೆದರಿಸುವನು. ಸಿದ್ಧ ಎಲ್ಲರಿಗೂ ನಮಸ್ಕಾರ ಮಾಡುವಂತ ಹೇಳುವನು)

ಮರಿಯಪ್ಪ - ಇರಲಿ ಇರಲಿ ನೋಡ ತಮ್ಮ ತಪ್ಪು ನಮ್ಮಿಂದಲೂ ಆಗ್ಯಾವ. ನಿಮ್ಮಿಂದಲೂ ಆಗ್ಯಾವು. ಅವು ಆಗೋವೆ ಯಾಕ

ವೆಂಕಪ್ಪ - ಮನುಷ್ಯರಾಗಿ ಹುಟ್ಟಿದ್ದಕ ತಪ್ಪು ಮನುಷ್ಯರ ಕೈಯಿಂದ ಆಗದಿದ್ದರೆ ಮತ್ತೇನು ಮರದ ಕೈಯಿಂದ ಆಗತಾವೇನು. ತಮ್ಮಾ ಹಿಂದಾದದ್ದೆಲ್ಲ ಮರೆತು ಇನ್ನ ಮುಂದ ನೀವು ನಮ್ಮಂಗ ಒಳ್ಳೆ ಜನಾ ಆಗಿ ಬಾಳರಿ. ನೀವು ನಮ್ಮಂಗ ಬುದ್ಧಿವಂತರಾಗರಿ. ವಿದ್ಯಾವಂತರಾಗರಿ. ಈ ಗೂಡು ಸುಡೋದು ಬಣವಿಗೆ ಬೆಂಕಿ ಹಚ್ಚೋದು ಇಂಥ ಹೀನ ಕಾರ್ಯ ಇನ್ನ ಮುಂದೆ ಮಾಡಬ್ಯಾಡ್ರಿ. ನೀವೆಲ್ಲರೂ ಒಂದಾಗಿ ಬಾಳರಿ ಅಂತಾ ಇವತ್ತ ನಾನು ಬಯಸ್ತೀನಿ. ಅಂದ ಮ್ಯಾಲೆ ಕೆಂಚಪ್ಪ ಇನ್ನ ನಮ್ಮೂರಾಗ ಗೂಡು ಸುಡತಾವೇನೋ ?

ಕೆಂಚಪ್ಪ - ನೀವು ಹೇಳಿದರ ಸುಡತಾವರ್ರಿ

ಮರಿಯಪ್ಪ - ಹೌದು ಕೆಟ್ಟ ಘಳಿಗೆಯಲ್ಲಿ ಏನಾಗೋದೆಲ್ಲ ಆಗಿ ಹೋಯಿತು. ಅದನ್ನ ಎಷ್ಟು ದಿನ ಮನಸ್ಸಿನ್ಯಾಗ ಹಿಡ್ಕೋದು ಅದನ್ನ ಮರೆತ ಬಿಡ್ರಿ

ವೆಂಕಪ್ಪ - ಆ ಕಾಗದಾ ಕೊಂಡು ಅಂದ್ರ ಮರಿತಾರ

ಮರಿಯಪ್ಪ - ಕಾಗದಾ ಕೊಡತೀನೋ ಕೊಡದಿದ್ರೆ ಹ್ಯಾಂಗ (ಕಾಗದ ತೆಗೆದುಕೊಡುವನು)

ವೆಂಕಪ್ಪ - ಏ ನಿನಗ ಓದಾಕ ಬರತ್ತೇನೋ ತಾಯಿಲ್ಲಿ ಓದಿಕೊಡತೀನಿ (ಓದಿದಂತೆ ತಲೆ ಅಲ್ಲಾಡಿಸುವನು) ನೋಡ ತಮ್ಮ ನಿಮ್ಮಪ್ಪ ಮಾಡಿದ ಸಾಲ ಪೈಪಾವಣಿ ಮೊದಲ ಮಾಡಿ ಮುಟ್ಟಿತು ಅಂತ ಕಾಗದ ಬರಿಸಿ ಮರಿಯಪ್ಪನ ಸಹಿ ಹಾಕಿಸಿ ನಾನು ಕೆಂಚಪ್ಪ ಸಾಕ್ಷಿ ಹಾಕಿವಿ (ಕಾಗದ ಸಿದ್ದನ ಕೈಯಲ್ಲಿ ಕೊಡವನು)

ಮರಿಯಪ್ಪ - ನಿಮ್ಮ ಹೊಲಮನಿ ನಿಮಗ ಮುಟ್ಟಿತು. ಕಾಗದಾನು ಕೊಟ್ಟಿತು. ಇನ್ನೇನಪಾ ಅಂದ್ರ ನಿಮ್ಮೆಪ್ಪ ಮಾಡಿದ ಸಾಲ ಮುಟ್ಟಿತು. ಇನ್ನು ನಿನ್ನ ಮದುವೆಗ ಕೊಟ್ಟ ಸಾಲಾನಾದರೂ ದುಡಿದು ಮುಟ್ಟಿಸ್ತಿರೋ ?

ವೆಂಕಪ್ಪ - ಇಲ್ಲಾ ಅದೂ ಮುಟ್ಟಿತು ಅಂತಾ ಇನ್ನೊಂದು ಕಾಗದಾ ಬರಕೊಟ್ಟೇ ಹೋಗು ಅಂತೀರೋ

ಭದ್ರಿ - ಮರಿಯಪ್ಪನವರ ನಮ್ಮಣ್ಣನ ಮದುವಗೆ ಕೊಟ್ಟ ಸಾಲ ನಿಮ್ಮ ಮನೆಯಲ್ಲಿ ನಾನು ದುಡಿದು ಮುಟ್ಟಿಸ್ತೀನಿ

ಮರಿಯಪ್ಪ - ನಿಮ್ಮಣ್ಣ ದುಡಿದರಷ್ಟೇ, ನೀನು ದುಡಿದರೂ ಅಷ್ಟೇ

ವೆಂಕಪ್ಪ - ಆದರೂ ನೀನು ದುಡೀಲಿ ಅಂತಾ ಬಯಸ್ತಾನಿವನು

ಮರಿಯಪ್ಪ - ಒಟ್ಟಿಗೆ ನಮ್ಮ ಸಾಲ ಮುಟ್ಟಿದರ ಸಾಕು. ಆದರಿಷ್ಟೇ.....

ವೆಂಕಪ್ಪ - ಹಿಂದಿನಂಗ ಕೊಡ್ಲಿ ಮಾತ್ರ ತೋರಿಸಬ್ಯಾಂಡಾಂತ

ಮರಿಯಪ್ಪ - ಹೂ ಯಾಕಂದ್ರ ಸಿಟ್ಟಿಗೆದ್ರೆ ನೀನು ಮನುಷ್ಯ ಅಲ್ಲ. ವಿಚಾರ ಮಾಡಿ ಮಾತಾಡು

ವೆಂಕಪ್ಪ - ಸಿಟ್ಟಿಗೆದ್ರ ಯಾಕಪ್ಪಾ ಯಾವಾಗಲೂ ನೀನು ಮನುಷ್ಯ ಅಲ್ಲ, ಪ್ರತ್ಯಕ್ಷ ದೇವರು

ಮರಿಯಪ್ಪ - ನೋಡ ಸಿದ್ದಾ ಕಾಲ ಸುಮಾರು ಬಂದಾವು. ವೆಂಕಪ್ಪ ಮೊನ್ನೆ ಮಾಮಲೆದಾರರು ಅದೇನೋ ಕೊಡು ಅಂತಾ ಕೇಳಿದರಲ್ಲೋ

ವೆಂಕಪ್ಪ - ಅದೇ ರಾಷ್ಟ್ರೀಯ ರಕ್ಷಣಾ ನಿಧಿ

ಮರಿಯಪ್ಪ - ಹೂಂ ಅದನ್ನ ಕೊಡಬೇಕಂತ ನಾವು. ಹೇಳಿ ಕೇಳಿ ಸರಕಾರದವರು ಕೊಡದಿದ್ದರೆ ಕೇಳ್ತಾರೇನು ? ನಮ್ಮ ಸಂಕಟ ನಮಗ ಗೊತ್ತು. ಬಾಳ ಹೊಲ ಅದಾವು ದೊಡ್ಡ ಮನಿ ಐತಿ. ಸಾಕಷ್ಟು ರೊಕ್ಕ ಆಳು ಕಾಳು ಎಲ್ಲಾ ಅದಾವು. ಸಾವಕಾರರೂ ಸುಖದಿಂದ ಅದಾರಂತ ನೀವು ತಿಳಿತೀರಿ

ವೆಂಕಪ್ಪ - ಇಷ್ಟು ಐತಿ ಅಂತಾನೆ ರಾತ್ರಿ ಇವನಿಗೆ ನಿದ್ರೀನ ಬರೋದಿಲ್ಲ ಯಾಕಂತೀರಾ ?

ಮರಿಯಪ್ಪ - ಕಳ್ಳಕಾರರ ಭಯ. ದುಡಿಯೋ ಜನ ಎಲ್ಲಿ ಜಗಳಾ ತಗೀತಾರೋ ಅನ್ನೋ ಅಂಜಿಕಿ. ಯಾವ ಹೊತ್ತಿಗೆ ಬಂದು ಸರಕಾರದವರು ಏನು ಕೇಳಿದರೂ ಕೊಡಬೇಕು. ಲೆಕ್ಕಾ ತೋರಿಸಬೇಕು. ತಪ್ಪಿತು ಜೇಲ ಸೇರಬೇಕು. ಒಂದಾ ಎರಡಾ ನಮಗಿರೋ ಚಿಂತೆ

ವೆಂಕಪ್ಪ - ನೋಡ ತಮ್ಮಾ... ಒಂದು ಮಾತಿನಾಗ ಹೇಳಿ ಮುಗಿಸಿಬಿಡತೀನಿ. ಇನ್ನ ಮ್ಯಾಲೆ ಇವನ ಸಾವಕಾರಕಿ ನಿಮ್ಮದು ಅಂತಾ ತಿಳಿದು ನೀನ್ನ ನನ್ನ ತಮ್ಮ ತಿಳಕೊಂಡು ನಡೀರಿ ಆಯಿತ (ಭದ್ರೀನ ನೋಡಿ) ಸಿದ್ದಣ್ಣ ನಿಮ್ಮ ತಮ್ಮ ಭದ್ರಣ್ಣ ಈಗ್ಯಾಕ ಒಳಗೆ ಹೋದ ತಮ್ಮ

ಸಿದ್ದ - ಅಂಗಿ ಹಾಕ್ಕೊಂಡು ಬರಲಿಕ್ಕ

ಮರಿಯಪ್ಪ - ನಾನು ಹುಬ್ಬಳ್ಳಿಗೆ ಹೋಗಬೇಕು ನಡೀರೋ (ಮರಿಯಪ್ಪ, ವೆಂಕಪ್ಪ, ಕೆಂಚಪ್ಪ ಹೋಗುವರು) ನಿಮ್ಮ ತಮ್ಮನಿಗೆ ಸರಿಯಾಗಿ ಬುದ್ಧಿ ಹೇಳಿ ಕಳಿಸು

ಭದ್ರಿ - ಹೋಗಿ ಬರ್ತೀನೆ ಅತ್ತಿಗೆ

ಪಾರ್ವತಿ - ಹೋಗಿ ಬಾರಪ್ಪಾ. ದೇವರು ನಿನಗೆ ಒಳ್ಳೇದು ಮಾಡಲಪ್ಪ

ಸಿದ್ದ - ಒಳ್ಳೇ ಮಾತಿನಿಂದ ದುಡಿದು ಅವರ ಸಾಲ ಮುಟ್ಟಿಸಿ ಒಳ್ಳೆಯವನನಿಸಿಕೊಂಡು ಮನಿಗೆ ಬಾ

# ದೃಶ್ಯ ೧೨

ರಸ್ತಾ

(ಭದ್ರಿ ಮುಂದೆ ಹೋಗಹತ್ತುವನು. ಹಿಂದೆ ಗುಂಡ ಬರುವನು)

ಗುಂಡ - ನಿಂದ್ರೋ ಭದ್ರಿ ನಿನ್ನ ಹತ್ರ ಒಂದು ಕೆಲಸ ಐತಿ ನಿಲ್ಲೋ

ಭದ್ರಿ - ಅದೇನು ಕೆಲಸಾನೋ ಬೇಗ ಹೇಳು ನಾನು ಹೊಲಕ ಹೋಗಬೇಕು

ಗುಂಡ - ಹೊಲ ಏನು ಓಡಿ ಹೋಗೋದಿಲ್ಲ. ಸ್ವಲ್ಪ ನಿಲ್ಲೋ ಸಾವಕಾರ ಮನಿ ಅನ್ನ ಎಷ್ಟು ಬೇಗ ಸೊಕ್ಕು ತರಿಸಿತೊ ? ಸ್ನೇಹಿತರನ್ನೇ ಮರಸಿಬಿಟ್ಟಿತು. ಎದುರಿಗೆ ಬಂದರೆ ಮಾತಾಡಿಸೋದಿರಲಿ ಮುಖ ಸಹಿತ ನೋಡದಂಗ ಮಾಡಿತಲ್ಲ. ಇದೇನು ಅನ್ನದ ಪ್ರಭಾವವೋ ಇಲ್ಲ ಸಾವಕಾರಮನಿ ಹೆಣ್ಣಿನ ಪ್ರಭಾವವೋ

ಭದ್ರಿ - ಯಾಕೋ ಗುಂಡ ಹೆಣ್ಣು ಪಣ್ಣು ಅಂತ ಬಾಳ ಮಾತಾಡತೀದಿ

ಗುಂಡ - ಕಣ್ಣುಮುಚ್ಚಿ ಹಾಲು ಕುಡಿದರೆ ಮಂದಿಗೆ ಕಾಣೋದಿಲ್ಲಾಂತ ಮಾಡಿಯೇನು ? ಏನು ಏನಂತಾಳೆ ಆ ನಿನ್ನ ಲಕ್ಷ್ಮಿ. ಸ್ನೇಹಿತನ್ನ ಮಾತಾಡಿಸಬ್ಯಾಡಾಂತ ಬಿಡಿಸಿಬಿಟ್ಟಳೇನ ಮತ್ತ ?

ಭದ್ರಿ - ಲೇ ಗುಂಡ್ ಒಳ್ಳೆ ಮಾತಿನಿಂದ ಅವಳ ಸುದ್ದಿ ಆಡೋದನ್ನ ಬಿಟ್ಟುಬಿಡು. ಇರದಿದ್ದರೆ ನಿನ್ನ ಹಲ್ಲು ತಗೆದೇನು

ಗುಂಡ - ಹೋಗಲಿ ಬಿಡಪ್ಪಾ... ಇನ್ನ ಅವಳ ಸುದ್ದಿ ಎತ್ತದೆ ಬಿಟ್ಟು ಬಿಡತೀನಿ

ಭದ್ರಿ - ಈಗ ಇದನ್ನೇ ಆಡಲಿಕ್ಕೆ ನಿಲ್ಲಿಸಿದ್ದೇನೋ ನನ್ನ

ಗುಂಡ - ಏ ಇದಲ್ಲೊ ನಾವೆಲ್ಲ ಇವತ್ತ ಐಹೊಳ್ಳಿ ಜಾತ್ರಿಗೆ ಹೊರಟೇವಿ. ನಿನ್ನ ಕರಕೊಂಡು ಹೋಗೋನಂತ ಬಂದ

ಭದ್ರಿ - ಐಹೊಳ್ಳಿ ಜಾತ್ರಿ ಇವತ್ತೇ ಏನೋ ? ಯಾರ್‍ಯಾರು ಹೊರಟಿರೋ ?

ಗುಂಡ - ಫಳಾರದ ಶಿವ್ಯಾ, ಪಟ್ಟದಕಲ್ ಸಿದ್ದ, ಬಳ್ಯಾ, ಕಾಳ್ಯಾ, ಹೊಸಮನಿ ವಾಸ್ಯಾ, ಶಾಪೂರ ರಾಮ, ರೊಡ್ಡಗ್ಯ ಬಸ್ಯಾ, ಮಿಣಜಗಿ ತುಕ್ಯಾ, ಮಿಣಜಗಿ ಈರ್‍ಯಾ ಒಟ್ಟಿಗೆ ನಮ್ಮ ಗ್ಯಾಂಗಿನ ಹುಡುಗರೆಲ್ಲ ಹೊರಟೇವಿ. ನಿನ್ನ ಕರಕೊಂಡ ಬರತೀನಿ

ಅಂತ ಹೇಳಿ ಅವರನ್ನೆಲ್ಲ ಸಿದ್ದಪ್ಪಜ್ಜನ ಮಠದ ಹತ್ತಿರ ನಿಲ್ಲಿಸಿ ಬಂದೀನಿ. ಬಾರೋ ಹೋಗೋಣ

ಭದ್ರಿ - ಬರಬೇಕು ಅನ್ನುವ ಮನಸ್ಸು ಬಲವಾಗಿ ಐತಿ ಗುಂಡ. ಆದರೆ ಬರಾಕ ನನಗ ದಾರಿ ಇಲ್ಲ. ಸಾಲ ಮುಟ್ಟೋತನಕ ಸಾವಕಾರ ಮನೆಯಲ್ಲಿ ಆಳಾಗಿ ದುಡೀತೀನಿ ಅಂತ ಅಣ್ಣ-ಅತ್ತಿಗೆಯವರಿಗೆ ಮಾತು ಕೊಟ್ಟೀನಿ. ಈಗ ನಾನೇನಾದರೂ ಬಂದುಬಿಟ್ಟರೆ ಅಣ್ಣ ಸಿಟ್ಟಿಗೇಳತಾನೆ. ನಮ್ಮತ್ತಿಗೆ ನೊಂದು ಕೊಳ್ಳುತಾಳೆ. ಒಂದುವೇಳೆ ಸಾವಕಾರ್‍ರಿಗೆ ಹೇಳಿಬರಬೇಕು ಅಂದ್ರ ಅವರೂ ಊರಲ್ಲಿ ಇಲ್ಲ. ಹುಬ್ಬಳ್ಳಿಗೆ ಹೋಗ್ಯಾರಂತ

ಗುಂಡ - ಹೌದಲ್ಲ ಮರಿಯಾ ಹುಬ್ಬಳ್ಳಿಗ ಈಗ್ಯಾಕ ಹೋಗ್ಯಾನ ಗೊತ್ತೇನೋ ನಿನಗ

ಭದ್ರಿ - ಏನೋ ಅಪ್ಪ ಅದೆಲ್ಲ ನನಗೇನು ಗೊತ್ತು

ಗುಂಡ - ನಾಕ ಮಾಡೋ ನಿನ್ನ ಗತ್ತಾ ! ನನ್ನೆದುರು ತೋರಿಸಬ್ಯಾಡ. ಹೇಳು ಮರಿಯಪ್ಪ ಹುಬ್ಬಳ್ಳಿಗೆ ಯಾಕ ಹೋಗ್ಯಾರ ?

ಭದ್ರ - ಇಲ್ಲ ಗುಂಡ ನಿಜವಾಗಿಯೂ ನನಗೆ ಗೊತ್ತಿಲ್ಲ

ಗುಂಡ - ಅಂದ್ರೇನೋ ಊರಿಗೇ ಗೊತ್ತಾದ ಮಾತು ನಿನಗೆ ತಿಳಿದಿಲ್ಲ ಅಂದ್ರ ನಾನ್ಹ್ಯಾಂಗ ನಂಬಲಿ ? ಕೇಳಿಲ್ಲಿ ಮರಿಯಪ್ಪ ತನ್ನ ಮಗಳಿಗೆ ವರ ನೋಡಲಿಕ್ಕ ಹೊಗ್ಯಾನಂತ ಹುಬ್ಬಳ್ಳಿಗೆ. ಇದೇ ವರ್ಷ ಮಗಳ ಮದುವೆ ಮಾಡ್ತಾನಂತೆ. ವರನ ತಂದೆ ಭಾರಿ ಶ್ರೀಮಂತನಂತೆ. ಅಡತೀ ಅಂಗಡಿ ಇಟ್ಟಾರಂತೆ. ಸಿನಿಮಾ ಥೇಟರ ಕಟ್ಟಿಸ್ಯಾರಂತೆ. ಹುಚ್ಚಾ ಆ ಹುಡುಗಿನ್ನ ನಂಬಿ ನೀನು ತಲೆ ಕೆಡಿಸಿಕೋಬೇಡ. ಮೊದಲು ನಂಬಿಸಿ ಆ ಬಳಿಕ ವಂಚಿಸಿ ಕುತ್ತಿಗೆ ಕೊಯ್ಯುವ ಜಾತಿ ಆ ಹೆಣ್ಣಿನದು (ಹೋಗುವನು)

ಭದ್ರಿ - ಮೊದಲು ನಂಬಿಸಿ ಆ ಬಳಿಕ ವಂಚಿಸಿ ಕುತ್ತಿಗೆ ಕೊಯ್ಯುವ ಜಾತಿಯೇ ನನ್ನ ಲಕ್ಷ್ಮಿಯದು ?

ಲಕ್ಷ್ಮಿ - (ಹಿನ್ನೆಲೆ) ಭದ್ರಿ ನಾನು ಪ್ರೀತಿಸೋದು ಮದುವೆಯಾಗೋದು ನಿನ್ನನ್ನೇ... ಎಂದಿದ್ದರೂ ನನ್ನ ಕತ್ತಲೆಯ ಬಾಳಿಗೆ ನೀವೇ ಪೂರ್ಣ ಚಂದಿರ

ಭದ್ರಿ - ಅಂದು ರಾತ್ರಿ ಗವಿಗೆ ಬಂದು ಅಷ್ಟೆಲ್ಲ ಮಾತನಾಡಿದ ಲಕ್ಷ್ಮಿ ಇಂದು ನನ್ನ ಕೈ ಬಿಡುವಳೆ ? ಬೇರೊಬ್ಬನ ಕೈ ಹಿಡಿದು ನನ್ನ ಕುತ್ತಿಗೆ ಕೊಯ್ಯುವಳೇ ? ನನ್ನ ಲಕ್ಷ್ಮಿ ನನ್ನ ವಂಚಿಸುವಳೆ ?

ಗುಂಡ (ಹಿನ್ನೆಲೆ) ಆ ಹುಡುಗಿನ ನಂಬಿ ತಲೆ ಕೆಡಿಸಿಕೋಬ್ಯಾಡ ಮೊದಲು ನಂಬಿಸಿ ಆ ಬಳಿಕ ವಂಚಿಸಿ ಕುತ್ತಿಗೆ ಕೊಯ್ಯುವ ಜಾತಿ ಆ ಹೆಣ್ಣಿನದು

ಭದ್ರಿ - ಹೌದು ಮೊದಲು ನಂಬಿಸಿ ಕುತ್ತಿಗೆ ಕೊಯ್ಯುವ ಜಾತಿ ಆ ಹೆಣ್ಣಿಂದು.

ಇಲ್ಲದಿದ್ದರ ಶ್ರೀಮಂತಿಕೆಗೆ ಬೆದರದ ಸಾಲಕ್ಕೆ ಹೆದರದ ನನ್ನ ಪ್ರೀತಿಸುವನೆಂದು ನಟನೆ ಮಾಡಿ ಬಗ್ಗಿಸಿರಬಹುದೆ ? ಇಲ್ಲದಿದ್ದರೆ ಹಳ್ಳದ ದಡದಲ್ಲಿ ನಾನವಳ ಕೂದಲು ಕತ್ತರಿಸುವ ಮುನ್ನ ಶ್ರೀಮಂತಿಕೆಯ ಸೊಕ್ಕಿನಿಂದ ಅವಳಂದ ಮಾತು

ಲಕ್ಷ್ಮಿ - (ಹಿನ್ನಲೆ) - ಏ ಹೋಗೋ ಜೋಬದ್ರ ನಿನ್ನಂಥ ರುದ್ರಗೋಳು ಭದ್ರಗೋಳು ನಮ್ಮ ಮನ್ಯಾಗ ಜೀತ ಆದಾರ. ನಮ್ಮ ಹೊಲದಾಗಿನ ಕಸ ಕೀಳತಾರ ರಾತ್ರಿ ಬಂದು ನಮ್ಮಪ್ಪನ ಕಾಲು ಒತ್ತತಾರ

ಭದ್ರಿ - ಹೌದು ಅವಳಂದ ಹಾಗೆಯೇ ನಡೆದ ಹೋಯಿತಲ್ಲ. ಕೊನೆಗೂ ನಾನವರ ಜೀತದಾಳಾದೆನೇ ? ನನ್ನ ಸಿಟ್ಟು, ನನ್ನ ಹಟ, ನನ್ನ ಪೌರುಷ ಎಲ್ಲವೂ ಇಂದು ಸಂಪತ್ ಲಕ್ಷ್ಮಿಯ ಕಾಲುತುಳಿತಕ್ಕೆ ಸಿಕ್ಕು ಕಸವಾಗಿ ಹೋಯಿತೆ ? ಇಲ್ಲ ಇಲ್ಲ ಅವಳನ್ನೀಗಲೇ

ಪಾರ್ವತಿ - (ಹಿನ್ನಲೆ) ಭದ್ರಿ ನಿಮ್ಮಣ್ಣನವರ ಮಾತಿನಂತೆ ನಡೆಯದಿದ್ದರ ನಾನೇ ಅವರ ಮನೆಯಲ್ಲಿ ದುಡಿದು ಸಾಲ ಮುಟ್ಟಿಸಿ ಬರುತ್ತೇನ

ಭದ್ರಿ - ಅತ್ತಿಗೆಮ್ಮಾ... ಏನಿದ್ದರೂ ಅತ್ತಿಗೆಗೆ ಕೊಟ್ಟಮಾತು ನಡಯಲೇಬೇಕು. ಸಾಲ ಮುಟ್ಟುವವರಗ ನಾನವರ ಮನೆಯ ಜೀತದ ಆಳು (ಹೋಗ ಹತ್ತುವನು. ಲಕ್ಷ್ಮಿ ಬರುವಳು)

ಲಕ್ಷ್ಮಿ - ಅಯ್ಯ ದಾರ್‍ಯಾಗ ನಿಂತ್ಕೆತಲ ಈ ಆಳು. ಏ ಏನಿದು ನಿನ್ನ ಕೆಲಸ ಆಳಾಗಿ ನಮ್ಮಲ್ಲಿ ದುಡೀಲಿಕ್ಕ ಬಂದಿಯೋ ಅರಸನಂತ ಬೀದಿಯಲ್ಲಿ ಮೆರಿಬೇಕು ಅಂತಿಯೋ

ಭದ್ರಿ - ಬರೀ ಅಳಾಗಿ ದುಡಿಯಯುವದೊಂದೇ ಗುರಿ ಇಟ್ಟುಕೊಂಡು ಬಂದವನಲ್ಲ ನಿನ್ನ ಕೊರಳಿಗೆ ತಾಳಿಕಟ್ಟಿ ಆಳಬೇಕು ಅನ್ನುವನು

ಲಕ್ಷ್ಮಿ - ಓ ಹೋ ಹೀಗೇನು ಸಮಾಚಾರ ? ಸರಿ ನನ್ನ ಕೊರಳಿಗೆ ತಾಳಿ ಬಿಗಿದು ಆಳ ಬಂದ ವೀರ, ಜೀತಾ ಇದ್ದವರಿಗೂ ಹೆಣ್ಣಿನ ಪ್ರೀತಿ ದೊರೆಯುತ್ತೇನು

ಭದ್ರಿ - ಜೀತವಾಗಲಿ, ಹೆಣ್ಣಿನ ಪ್ರೀತಿಯಾಗಲಿ ನೀತಿಗಿಂತ ದೊಡ್ಡದೇನು ? ಮಾಡಿದ ಸಾಲ ದುಡಿದು ಮುಟ್ಟಿಸಲೇಬೇಕಲ್ಲ, ಜೀತ ಹೊರತು ಅನ್ಯದಾರಿ ಕಾಣದಿದ್ದಾಗ ಮಾಡಬೇಕೇನು ? ಹೇಳಿ ಕೇಳಿ ನಾವು ಬಡವರು

ಲಕ್ಷ್ಮಿ - ಕೊಟ್ಟಿದ್ದನ್ನು ಮರಳಿ ಮುಟ್ಟಿಸಬೇಕೆಂಬ ನಿಷ್ಠೆ ಜೀತವಿದ್ದು ಸಾಲ ಮುಟ್ಟಿಸಬೇಕು ಅನ್ನುವ ನೀತಿ ಯಾವಾಗ ಬಂತೋ ಈ ಬಡವನಲ್ಲಿ

ಭದ್ರಿ - ಅಂದ್ರ ಕೊಟ್ಟ ಸಾಲ ಮರಳಿ ಮುಟ್ಟಿಸದ ಪಾಷಂಡಿಯೆಂದು ತಿಳಿದಿದ್ದಿಯಾ ನಮ್ಮನ್ನು

ಲಕ್ಷ್ಮಿ - ತಿಳಿಯೋದೇನು ಬಂತು ಹೊಡೀತೀನಿ ಅಂತ ಹೆದರಿಸಿ ಹೊಲ ಮನಿ

ಕಸಕೊಂಡ್ರಿ ನಮ್ಮಪ್ಪನಿಂದ. ಈಗ ಹೇಳು ಸಂಪತ್ತಿಗೆ ಹೆದರಿದೆಯಾ ? ಸರಕಾರಕ್ಕೆ ಹೆದರಿದೆಯಾ ? ಇಲ್ಲಾ ಸಮಾಜಕ್ಕಾದರೂ ಹೆದರಿದೆಯಾ ? ಎಲ್ಲದಕ್ಕೂ ಸವಾಲು ಹಾಕಿ ಕೊನೆಗೆ ನಿನ್ನ ಹಟವನ್ನೇ ಸಾಧಿಸಿಕೊಂಡಿ. ಈಗ ಹೇಳು ಕೊಟ್ರೇನು ನಿಮ್ಮಪ್ಪ ಮಾಡಿದ ಸಾಲಾನ. ಬರೀ ಹೆದರಿಕೆ ಹಾಕಿ ಮುಟ್ಟಿಸಿದಿರಿ

ಭದ್ರಿ - ಹೆದರಿಸುವವರು ನಾವಲ್ಲ, ನೀವು ಶ್ರೀಮಂತರು. ನಮ್ಮಪ್ಪ ಮಾಡಿದ ಸಾಲ ಮುಟ್ಟಿಸಲೆಂದು ಇಲ್ಲಿಯವರೆಗೆ ಹೊಲದ ಪೀಕನ್ನು ಪ್ರತಿ ವರುಷ ತಂದೊಪ್ಪಿಸಿದರೂ ಮುಟ್ಟಲಿಲ್ಲ. ಈ ಶ್ರೀಮಂತರ ನೀತಿ ಎಂದರ ಸರಿದರೆ ಒತ್ತೋದು, ಒತ್ತಿದರೆ ಸರಿಯೋದು

ಲಕ್ಷ್ಮಿ - ಓ ಹೊ ನಮ್ಮಲ್ಲಿ ಜೀತವಿದ್ದವರಿಗೆ ಮಾತನಾಡುವ ಜಾಣ್ಮೆ ಇದೆ. ಒಳ್ಳೆ ಗಂಡ್ಸ. ಇಷ್ಟೆಲ್ಲ ಮಾತು ನಮ್ಮ ಮನಿಗೆ ಬಂದಾಗ ನಮ್ಮಪ್ಪನ ಎದುರಿಗೆ ಆಡಬೇಕಾಗಿತ್ತು

ಭದ್ರಿ - ಆಡಬೇಕಾದ್ದನ್ನು ನಿಮ್ಮಪ್ಪನೆದುರು ಎಂದೋ ಆಡಿದ್ದೇನೆ. ಕದ್ದು ಮುಚ್ಚಿ ಪ್ರೀತಿ ಮಾಡುವ ಜಾತಿ ನನ್ನದಲ್ಲ. ಆದರಿಷ್ಟೆ, ಅಣ್ಣ ಅತ್ತಿಗೆಯರ ಅಪ್ಪಣೆಯಂತೆ ಸಾಲ ಮುಟ್ಟುವವರೆಗೆ ನಾನು ನಿಮ್ಮ ಮನೆಯಲ್ಲಿ ಆಳಾಗಿ ದುಡಿಯುತ್ತೇನೆ

ಲಕ್ಷ್ಮಿ - ಅಂತೂ ಈ ಹಾಳು ನಮ್ಮ ಮನೆ ಹಾಳ ಮಾಡಲೆಂದೆ ಬಂದದ್ದು

ಭದ್ರ - ಹೌದು

ಲಕ್ಷ್ಮಿ - ಈ ಅಳಿನ ಮುಖ ನೋಡಿದರ ಮಾತನಾಡಿಸಲಿಕ್ಕೆ ಹೆದರಿಕೆ. ಇನ್ನು ದುಡಿಸಿಕೊಳ್ಳುವುದು ಹೇಗಪ್ಪ ಅಂತ

ಭದ್ರಿ - ಹೌದು ಶ್ರೀಮಂತರ ಮಗಳಿಗೆ ಈಗ ನನ್ನಂಥ ಬಡವ ಕಣ್ಣಲ್ಲಿ ಕಾಣ್ತಾನೇನು ಮಾತಾಡಿಸಲಿಕ್ಕೆ

ಲಕ್ಷ್ಮಿ - ಶ್ರೀಮಂತರ ಮಗಳಿಗೆ ಒಂದು ರೀತಿ ಸಂಪತ್ತಿನ ಅಮಲಿ ಬಂದಿರುತ್ತೆ. ಅವಳು ಮಾತಾಡಿಸದಿದ್ದರ ಬಿಡಲಿ ಬಡವನಿಗೇನು ಬಾಯಲ್ಲಿ ಬೆಲ್ಲ ಇಟ್ಟಿರತಾರೇನು ಮನಿಗೆ ಬಂದಾಗಲೆಲ್ಲ ಮಾತಾಡಿಸದೇ ಹೋಗಲಿಕ್ಕೆ

ಭದ್ರ - .... ಬಾಯಲ್ಲಿ ಬೆಲ್ಲ ಇಟ್ಟಿರತಾರೋ ಏನು ಗವಿಗೆ ಬಂದು ಒಂದೊಂದು ಉಂಡಿ ಇಟ್ಟಿರತಾರೋ ಯಾರು ಬಲ್ಲರು ? ಮದಲೇನೋ ನನ್ನನ್ನೇ ಮದುವೆಯಾಗುವದಾಗಿ ಮಾತು ಕೊಟ್ಟು ಈಗ ಅದಾರೋ ಹುಬ್ಬಳ್ಳಿಯವರು ಬಂದು ನಿನ್ನ ಕೈ ಹಿಡಿತಾರ ಅಂದ ತಕ್ಷಣ ಬಡವ ನಾ ನಿನ್ನ ಕಣ್ಣಲ್ಲಿ ಕಸವಾಗಿ ಬಿಟ್ಟೆ. ನಿನ್ನ ಮೇಲಿನ ಪ್ರೀತಿಯೇ ಈಗ ನನ್ನ ಜೀತದಾಳಾಗಿ ನಿಲ್ಲಿಸಿದ್ದು ಲಕ್ಷ್ಮಿ. ಜಿದ್ದು ಹಾಕಿದವರ ಮನಿಯ ಹೆಣ್ಣನ್ನು ಗೆದ್ದೊಯ್ಯದಿದ್ದರೆ ನಮ್ಮಪ್ಪನ

ಮಗನೇ ನಾನಲ್ಲ. ಹುಬ್ಬಳ್ಳಿಯವರು ಬರ್‍ತಾರಂತೆ ಇವಳು ಮಾಡಿಕೊಂಡ ಹೋಗತಾಳಂತೆ ಹುಬ್ಬಳಿಯವರಂತ ಹುಬ್ಬಳಿಯವರು

॥ ಪದಾ ॥

ನಾರಿ ನಿನ್ನ ನೋಡಲಾಕ ದೂರದಿಂದ ಬರತಾರಂತ ॥
ದೂರದಿಂದ ಬರತಾರಂತ ಹುಬ್ಬಳ್ಳ್ಯಾಗ ಇರತಾರಂತ ॥ ನಾರೀ ॥
ಊರಿಗೆ ಭಾರಿ ಸಾವಕಾರಂತ । ಬಂಗಾರದೊಡವೆ ಮಾಡಿಸ್ಯಾರಂತ ॥
ದುಂಡುಮುಖದ ಹುಡುಗಿ ನಿನ್ನ ಕಂಡು ಮಳ್ಳ ಆಗ್ಯಾರಂತ ನಾರೀ ॥
ಅಡತಿ ಬಜಾರದಂಗಡಿಯಂತ ॥ ಸಿನೆಮಾ ಥೇಟರ ಕಟ್ಟಿಸ್ಯಾರಂತ ॥
॥ ನಾರಿ ॥ ಗವಿಗೆ ಬಂದ ರಾತ್ರಿ ಹೊತ್ತ ಆದಿದ್ದಲ್ಲ ಮದುವೆ ಮಾತ ॥
ಕೇಳತೀಸಿ ಎದುರಿಗೆ ನಿಂತ ॥ ಇಷ್ಟು ಬೇಗ ಮರ್‍ತಾಂಗ ಹೋತ ॥
॥ ನಾರಿ ॥ (ಪದ ಮುಗಿದ ಮೇಲೆ ಹೋಗುವನು)

ಲಕ್ಷ್ಮಿ - ಭದ್ರೀ.

ಭದ್ರಿ - ಇನ್ನೆಲ್ಲಿ ಭದ್ರಿ ಬಡವನನ್ನು ಮರೆತ ಶ್ರೀಮಂತನ ಕೈ ಹಿಡಿದು ಹೋಗಬೇಕಾದ ನೀನು ಮೊದಲ ನನ್ನೊಂದಿಗೆ ಮಾತು ಬಿಟ್ಟಿದ್ದು ಒಂದು ದೃಷ್ಟಿಯಿಂದ ಒಳ್ಳೆಯದೇ

ಲಕ್ಷ್ಮಿ - ಭದ್ರಿ ಮೊದಲು ಹೇಳು. ನಿನಗಾರು ಹೇಳಿದರು ಇದನ್ನ

ಭದ್ರಿ - ಯಾವದನ್ನ ?

ಲಕ್ಷ್ಮಿ - ನಮ್ಮಪ್ಪ ನನ್ನಗೆ ವರ ನೋಡಲಿಕ್ಕೆ ಹುಬ್ಬಳ್ಳಿಗೆ ಹೋದ ವಿಷಯ

ಭದ್ರಿ - ಯಾರ್‍ಯಾಕೆ ಹೇಳಬೇಕು. ಈ ನಿನ್ನ ಮುಖ ಹೇಳುತ್ತದೆ. ಊರಿಗೆ ತಿಳಿದ ಮಾತು ನನಗೆ ತಿಳಿಯಲಾರದೇನು ?

ಲಕ್ಷ್ಮಿ - ನಮ್ಮಪ್ಪ ನನಗೊಂದು ವರ ನೋಡಲಿಕ್ಕೆ ಹುಬ್ಬಳ್ಳಿಗೆ ಹೋದದ್ದೇನೋ ನಿಜ. ಆದರೆ ನನ್ನ ಒಪ್ಪಿಗೆಯಿಂದಲ್ಲ ಭದ್ರಿ. ನಿನ್ನ ವಿಷಯದಲ್ಲಿ ನಾನೆಂದು ಮನಸ್ಸು ಬದಲಿಸಲಿಲ್ಲ

ಭದ್ರಿ - ಹೌದು ಬದಲಿಸಲಿಲ್ಲ. ಆದ್ದರಿಂದಲೇ ಈ ವರೆಗೆ ನನ್ನ ಮಾತಾಡಿಸೋದಿರಲಿ ಮುಖ ನೋಡಲಿಕ್ಕೂ ನಿನ್ನ ಮನಸ್ಸು ಒಪ್ಪಲಿಲ್ಲ ಅಲ್ಲವೆ ?

ಲಕ್ಷ್ಮಿ - ತಪ್ಪು ನನ್ನದಲ್ಲ ಭದ್ರಿ. ನನ್ನ ತಂದೆ ಯಾವದಕ್ಕೂ ಅವಕಾಶ ನೀಡಲಿಲ್ಲ. ಸತ್ಯ ಹೇಳುವದಾದರೆ ಬಲಿಯಲ್ಲಿ ಬಿದ್ದ ಹುಲಿಯಂತಾಗಿದೆ ನನ್ನ ಪಾಡು

ಭದ್ರಿ - ನಮ್ಮಿಬ್ಬರ ಮದುವೆಗೆ ನಿನ್ನ ತಂದೆಯನ್ನು ಒಪ್ಪಿಸುವದಾಗಿ ಮಾತು ಕೊಟ್ಟಿರಲಿಲ್ಲವೆ ನೀನು ನನಗೆ

ಲಕ್ಷ್ಮೀ - ಹೌದು ಕೊಟ್ಟಿದ್ದೆ. ಎಷ್ಟು ಪರಿಯಲ್ಲಿ ಹೇಳಿದರೂ ಒಪ್ಪಲಿಲ್ಲ. ಅತ್ತು ಹೇಳಿದೆ ಕಾಡಿ ಹೇಳಿದೆ. ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಹೆದರಿಸಿದೆ. ಯಾವುದಕ್ಕೂ ನನ್ನ ತಂದೆ ಒಪ್ಪಲಿಲ್ಲ. ನಮ್ಮಿಬ್ಬರ ಮದುವೆಗೆ ಸಮ್ಮತಿಸಲಿಲ್ಲ. ಭದ್ರಿ ... ನಿನ್ನ ಕೂಡ ಮಾತನಾಡುವದಿರಲಿ, ಮನೆಗೆ ಬಂದಾಗ ನಿನ್ನ ಮುಖ ಕೂಡಾ ನೋಡಬಾರದೆಂದು ಕಟ್ಟಪ್ಪಣೆ ಮಾಡಿದ್ದಾರೆ. ನಾನು ಮನೆಯಿಂದ ಹೊರ ಬೀಳದಂತೆ ಬಂದೊಬಸ್ತಿನಲ್ಲಿಟ್ಟು ಹಗಲು ರಾತ್ರಿ ನನ್ನ ಕಾಯ್ತಾರೆ. ಎಂದು ಪೋಲೀಸರು ನಿನ್ನ ಬಂಧಿಸಿ ಒಯ್ದರೊ ಅಂದೆ ಮನೆಯಲ್ಲಿ ನನ್ನ ಬಂಧಿಸಿಟ್ಟರು ಭದ್ರಿ

ಭದ್ರಿ - ಈ ವಿಷಯ ಇಷ್ಟು ದಿವಸ ಕಳೆದರೂ ನೀನು ನನಗೇಕೇ ತಿಳಿಸಲಿಲ್ಲ ?

ಲಕ್ಷ್ಮೀ - ಯಾವಾಗ ಹೇಳಲಿ ? ಹೇಗೆ ಹೇಳ್ಲಿ ? ಈಗ ನಮ್ಮಪ್ಪ ಊರಿನಲಿಲ್ಲವಂದ ನಾನಿಲ್ಲಿಗೆ ಬಂದದ್ದು. ಅದು ನನ್ನ ಕಾವಲಿಗಿದ್ದ ತಳವಾರ ಚೆನ್ನವ್ವನಿಗೆ ಹತ್ತು ರೂಪಾಯಿ ಲಂಚಾ ಕೊಟ್ಟು ಬರಬೇಕಾಯಿತು. ಭದ್ರಿ ಎಂದೋ ನಿನಗೆ ಮನಸ್ಸನ್ನು ಒಪ್ಪಿಸಿದ್ದೇನೆ. ನಿನ್ನ ಮೇಲೆ ನನ್ನ ಪ್ರೀತಿ ಇರದಿದ್ದರೆ ಅಂದು ಹೊಲದಲ್ಲಿ ನಮ್ಮ ಗೂಡು ಸುಟ್ಟ ದಿನ ನಿನ್ನ ಜೀವಕ್ಕೆ ಅಪಾಯ ತಟ್ಟಬಾರದೆಂದು ಯಾರಿಗೂ ತಿಳಿಯದಂತೆ ನಮ್ಮ ನೆಲಮನೆಯಲ್ಲಿಟ್ಟು ನಿನ್ನ ರಕ್ಷಿಸುತ್ತಿದ್ದೆನೆನೆ ? ಹೀಗಿದ್ದು ನೀನು ಬೇರೆ ಭಾವಿಸಬೇಕೆ ? ಮಾತಾಡು ಭದ್ರಿ. ಇಷ್ಟು ದಿನ ಬಂಧಿಸಿಟ್ಟ ನಮ್ಮಪ್ಪ ನನ್ನ ಹೊಟ್ಟೆ ಉರಿಸಿದರೆ, ಈಗ ನೀನು ಸುಮ್ಮನೆ ನಿಂತು ನನ್ನ ಹೊಟ್ಟೆ ಉರಿಸಬೇಡ ಮಾತಾಡು ಭದ್ರಿ ನನ್ನ ಕೈಬಿಡಬೇಡ

ಭದ್ರ - ಲಕ್ಷ್ಮೀ ಹಿಡಿದ ನಿನ್ನ ಕೈಬಿಡುವ ಮಾತು ಈ ಜನ್ಮದಲ್ಲಿಯೇ ಸಾಧ್ಯವಿಲ್ಲ. ನನ್ನ ಬಾಳಿನ ಕಣ್ಣಾದ ಹೆಣ್ಣು ನೀನು. ಒಲಿದು ಬಂದು ನನ್ನ ಕೈಯಲ್ಲಿ ಬಿದ್ದ ಈ ಹಣ್ಣನ್ನು ಕಸಿದು ತಿನ್ನುವ ಧೈರ್ಯ ಮಾಡಿದವನ ದೇಹವನ್ನೇ ಸೀಳಿ ಬಿಡುತ್ತೇನೆ. ಪ್ರಪಂಚ ಅಡ್ಡ ನಿಂತರೂ ತುಳಿದುಬಿಡುತ್ತೇನೆ. ಈ ಹೋರಾಟದಲ್ಲಿ ನನಗೆ ಸಾವು ಬಂದರೂ ಸರಿ

ಲಕ್ಷ್ಮೀ - ಛೀ ಬಿಟ್ಟಿತು ಅನ್ನು. ಆ ಸಾವಿನ ಮಾತು ನಿನ್ನ ಬಾಯಲ್ಲಿ ಬಂದರೆ ನಾನು ಸಹಿಸೋದಿಲ್ಲ. ಬರುವದಿದ್ದರ ಆ ಸಾವು ಅದೃಷ್ಟ ಹೀನೆಯಾದ ನನಗ ಬರಲಿ. ಈ ಒಂದು ಹೆಣ್ಣಿಗಾಗಿ ಊರಿನ ಕಣ್ಣನಾತಿದ್ದ ನೀನು ಸಾಯಬಾರದು ಹಾಗೇನಾದರೂ ಈ ದುರಂತದಲ್ಲಿ ನಾ ಸತ್ತು ಹೋದರ ನನಗಾಗಿ ನೀ ಕಣ್ಣೀರು ಹಾಕಬಾರದು. ದೇಶ ಸೇವೆಗೆ ನಿನ್ನ ದೇಹ ಮೀಸಲಾಗಬೇಕು. ಭದ್ರಿ ವೀರ ಸೈನಿಕನಾಗಿ ವೈರಿ ವಿನಾಶಕ್ಕ ಈ ನಿನ್ನ ಪೌರುಷದಾನವಾಗಬೇಕು ದುರ್ದೈವದಿಂದ ಹಾಗೇನಾದರೂ ಅದಲ್ಲಿ ಸಾವಿನಲ್ಲಿಯಾದರೂ ಸಮಾಧಾನ

ತಂದುಕೊಂಡೆನೆ ವಿನಹ ಬೇರೆಯವನಿಗೆ ದೇಹ ಒಪ್ಪಿಸಿ ಆತ್ಮಕ್ಕೆ ಆ ಜನ್ಮ ನೋವು ತಂದುಕೊಳ್ಳಲಾರೆ

ಭದ್ರಿ - ಲಕ್ಷ್ಮೀ ನಾನೇ ನಿಮ್ಮಪ್ಪನಿಗೆ ಇನ್ನೊಂದು ಸಲ ತಿಳಿಸಿಬಿಡುತ್ತೇನೆ. ಒಪ್ಪಿದರೆ ಒಳ್ಳೆಯದಾಯಿತು. ಒಂದು ವೇಳೆ ನನ್ನ ಮಾತು ಮೀರಿ ನಿನ್ನನ್ನು ಬೇರೆಯವನಿಗೆ ಮದುವೆ ಮಾಡುವುದಾದರೆ ಮದುವೆಯ ಹಂದರಕ್ಕೆ ಬೆಂಕಿ ಇಟ್ಟು ಎದುರಿಗೆ ಬಂದವರನ್ನೆಲ್ಲ ಸುಟ್ಟು ಬಿಡ್ತೀನಿ

ಲಕ್ಷ್ಮೀ - ಈ ಧೀರ ನಿರ್ಧಾರ ಕಂಡೆ ನಾನು ನಿನಗೆ ಮರುಳಾಗಿ ಮನಸ್ಸು ಒಪ್ಪಿಸಿದ್ದು. ಭದ್ರಿ ಒಲಿದ ಹೆಣ್ಣನ್ನು ವರಿಸುವುದಾಗಿ ಏನೋ ಹೇಳಿದಿ. ಆದರೆ ಆ ಹೆಣ್ಣಿನ ಮನಸ್ಸು ಮೆಚ್ಚುವಂತ ಮಾತ್ರ ಹೇಳಲಿಲ್ಲ. ರಸಿಕ ಹೇಳುವ ರೀತಿಯಲ್ಲಿ ಆ ಮಾತು ನಿನ್ನ ಮುಖದಿಂದ ಬರಲಿಲ್ಲ

ಭದ್ರಿ - ಅದು ಹೇಗೆ ಹೇಳಬೇಕು ನೀನೇ ಹೇಳಿಕೊಡು

ಲಕ್ಷ್ಮೀ - ಅಂದು ನನ್ನ ತಂದೆ ಎದುರು ಹೇಳಿದಿಯಲ್ಲ (ಕೆನ್ನೆಗೆ ಹೊಡೆದು) ಥೀ ಕಳ್ಳ

ಭದ್ರಿ - ಲಕ್ಷ್ಮಿ ನೀನು ಬಲು ಘಾಟಿ ಹೆಣ್ಣು

ಲಕ್ಷ್ಮೀ - ಈ ಹೆಣ್ಣನ್ನು ಗೆದ್ದ ನೀನು

॥ ಪದ ॥

ಜೀವನ ಒಂದು ಕ್ಷಣವಂತೆ ॥ ಮಲ್ಲಿಗೆ ಹೂವಿನ ಹಾಗಂತೆ ॥ ಒಂದೇ ದಿನದಲ್ಲಿ ಬಾಡುವದಂತ ॥ ಜೀವ ॥ ಹೂವಿನ ಹೃದಯ ಮೃದುವಂತೆ, ಪ್ರೇಮಿಗಳೊಲಿಮೆಯ ಹಾಗಂತ ॥ ಇದನ್ನ ಕವಿಗಳು ಬರೆದಿಹರಂತೆ ॥ ಸಾವಿಗ ಹೆದರದ ಪ್ರೀತಿಯು ಜಗದಲಿ ದೇವರು ಮುಡಿಯುವ ಹೂವಂತ ॥ ಆದರೆ ಇದರಲ್ಲಿ ನಾವಂತೆ ॥ ಜೀವ ॥

(ಪದ ಮುಗಿಯುವಾಗ ವೆಂಕಪ್ಪ ಬಂದು ನಿಲ್ಲುವನು)

ಲಕ್ಷ್ಮಿ - ಮತ್ತೆ ಭೆಟ್ಟಿ

ಭದ್ರಿ - ಯಾವಾಗ

ಲಕ್ಷ್ಮಿ - ಅಪ್ಪ ಊರಿಗೆ ಬರುವವರೆಗೆ ನಿತ್ಯ ನಾನೇ ಬರತೀನಿ. ಆದರೆ ಒಂದು ಮಾತು.

ಭದ್ರಿ - ಏನು

ಲಕ್ಷ್ಮಿ - ನೀನು ದಪ್ಪು ಬಾರಿಸುತ್ತ ಲಾವಣಿ ಹಾಡಬೇಕು

ಭದ್ರಿ - ನನ್ನ ಹಾಡಿಗ ಸರಿಯಾಗಿ ನೀನು ಕುಣಿಯಬೇಕು (ಲಕ್ಷ್ಮೀ ವೆಂಕಪ್ಪನನ್ನು ನೋಡಿ ಹೆದರಿ ಓಡಿ ಹೋಗುವಳು. ಅವಳನ್ನೇ ನೋಡುತ್ತ ಭದ್ರಿ ನಿಲ್ಲುವನು)

ವೆಂಕಪ್ಪ - ಕೇಳಬಾರದ್ದು ಕೇಳಿರಿ ಕಾಣಬಾರದ್ದು ಕಂಡೀರಿ ಅಂತಾ ಸಾರೋ ಏನೋರು

ಹೇಳುವ ಮಾತೇನು ಸುಳ್ಳಾಗಲಿಲ್ಲ. ಊರಿಗೇ ಭಾರಿ ಶ್ರೀಮಂತನ ಮಂಗಳಂದ್ರೇನು ಈ ಬಡ ರಂಡೇ ಮಗನ್ನ ಪ್ರೀತಿ ಮಾಡತ್ತಂದ್ರೇನು ? ನನ್ನ ಕಣ್ಣಿಗೆ ಕಂಡ ಹಾಗೆ ಮರಿಯಪ್ಪನ ಕಣ್ಣಿಗೇನಾದರೂ ಕಂಡಿದ್ದರೆ ಇವನ್ನ ಕೊಂದ ಹಾಕತಿದ್ದ. ಕಾಲಜ್ಞಾನದೊಳಗ ಬರದಿಟ್ಟಿಂಗ ನಡೆದು ಹೋಯಿತು. ।। ಹಲ್ಲು ಕಲ್ಲಿಗೆ ಜಗಳಬಿತ್ತಣ್ಣ ಶುಲ್ಲೆದ್ದು ಬಡಿದರೆ ಕಲ್ಲು ಪುಡಿ ಪುಡಿಯಾಯ್ತು ನೋಡಣ್ಣಾ ।। ನಮಸ್ಕಾರಪಾ ಭದ್ರಣ್ಣಾ ಇದೀಗ ಚಿಲಕ್ ಪಲಕ್ ಅಂತಾ ಓಡಿ ಹೋಯಿತಲ್ಲ ಆ ಹುಡುಗಿ ಯಾವದಂತೀದಿ ?

ಭದ್ರಿ - ಅವಳ್ಯಾರಾದರ ನಿನಗೇನು ?

ವೆಂಕಪ್ಪ - ನನಗ ಕಣ್ಣು ಸ್ವಲ್ಪ ಮಂದ. ಅದಕ ಕೇಳಿದೆ ಮರಿಯಪ್ಪನ ಮಗಳು ಲಕ್ಷ್ಮಿ ಬಾಯಿ ಅಲ್ಲ ತಮ್ಮ

ಭದ್ರಿ - ಮರಿಯಪ್ಪನ ಮಗಳು ಲಕ್ಷ್ಮಿ ಹೌದು. ನೋಡಿದ ಮ್ಯಾಲೆ ಕೇಳಿ ಮಾಡ್ತಿ ಏನು ?

ವೆಂಕಪ್ಪ - ನಾನೇನು ಮಾಡ್ಲೆಪ್ಪಾ ? ಅವರಪ್ಪ ಅವಳಿಗೆ ವರ ನೋಡಲಿಕ್ಕೆ ಹುಬ್ಬಳ್ಳಿಗೆ ಹೋದ ವಿಷಯ ಗೊತ್ತಿದ್ದ ನೀನು ಆ ಹುಡಿಗೇ ಕದ್ದು ಮುಚ್ಚಿ ಚಕ್ಕಂದ ಆಡೋದು ಧರ್ಮ ಅಲ್ಲಪ್ಪಾ

ಭದ್ರಿ - ಕದ್ದು ಮುಚ್ಚಿ ಯಾಕೆ ಕುಲಕರ್ಣಿರೆ ? ಅವರಪ್ಪನ ಎದುರು ಮುಗಿಸಿದ್ದೇನೆ ಅವಳ ಕಥೀನ. ಎಂದಿದ್ದರೂ ಲಕ್ಷ್ಮಿ ನನಗೊಲಿದ ಹೆಣ್ಣು. ಯಾರಾದರೂ ಈಗ ಅಗಲಿಸಲು ಬಯಸಿದರೆ ಅವನ ಕಣ್ಣೇ ಕಿತ್ತಿ ಬಿಡತೀನಿ

ವೆಂಕಪ್ಪಾ - ಇದು ಧರ್ಮ ಅಲ್ಲಪ್ಪ. ಇನ್ನಾದರೂ ಲೋಕ ಒಪ್ಪವ ರೀತಿಯಲ್ಲಿ ಬಾಳೋದು ಕಲಿ. ನೆಲವಿಗೆ ಹಾರತೀನಿ ಅಂತಾ ಬೆಕ್ಕು ಆಕಾಶಕ್ಕೆ ಹಾರಲಿಕ್ಕೆ ಹೋಗೆ ಕಾಲು ಮುರಕೊಂಡು ಬಿದ್ದದ್ದು. ಮರಿಯಪ್ಪನ ಅಂತಸ್ತೇನು ನಿನ್ನ ಅಂತಸ್ತೇನು ?

ಭದ್ರಿ - ಅಂತಸ್ತು ಗಿಂತಸ್ತು ನನಗೀಗ ಬೇಕಾಗಿಲ್ಲ. ಎಂದಿದ್ದರೂ ಲಕ್ಷ್ಮಿ ನನಗೊಲಿದ ಹೆಣ್ಣು. ಯಾರು ಯಾವ ರೀತಿ ಅಡ್ಡ ಬಂದರೂ ಜೀವಂತ ಉಳಿಯಲಾರರು. ಇಂದಿಲ್ಲ ನಾಳೆ ಲಕ್ಷ್ಮಿ ನನ್ನ ಹೆಂಡತಿಯಾಗುತ್ತಾಳೆ. ಕುಲಕರ್ಣಿರೆ ಇಂದು ನಿಮಗ ಕೊನೆಯ ಮಾತನ್ನೇ ಹೇಳುತ್ತೇನೆ. ಲಕ್ಷ್ಮಿಗೆ ವರ ನೋಡುವ ವಿಚಾರ ಬಿಟ್ಟು ಬಿಡು ಅಂತಾ ಹೇಳ್ರಿ. ಒಂದು ವೇಳೆ ನನ್ನ ಮಾತು ಮೀರಿ ನೀವೆಲ್ಲಾ ಮದುವೆಯ ವಿಚಾರದಲ್ಲಿ ಮುಂದುವರಿದಿದ್ದಾದರೆ ಮದುವೆಯ ಹಂದರಕ್ಕೆ ಬೆಂಕಿ ಇಟ್ಟು ಎದುರಿಗೆ ಬಂದವರನ್ನೆಲ್ಲ ಕರುಳು ತಗೆದು ತೋರಣ ಕಟ್ಟುತ್ತೇನೆ. ಹುಷಾರ್ (ಹೋಗುವನು)

ವೆಂಕಪ್ಪ - ಅಂತೂ ನಮ್ಮೂರ ವಾತಾವರಣ ಮತ್ತ ಹದಗೆಟ್ಟಿತು. ನಾನೇನು ಊರಿಗ ಒಳ್ಳೆದಾಗಲಿ ಎಂದು ನೀರು ತಿಳಿಮಾಡೋದ ಅಷ್ಟೇ ತಡ ಈ ಹುಡುಗ

ಎಮ್ಮಿ ತಂದು ಅದರಾಗ ಮಲಗಿಸಿ ಗೊಡಗೆಬ್ಬಿಸಿ ಕೈ ಬಿಡತಾನ. ಈ ಬಡತನ ಸಾವಕಾರಕಿ ಒಮ್ಮೆ ನಮ್ಮ ದೇಶದೊಳಗಿಂದ ತೀರಿ ಹೋಗುವ ತನಕ ಇವು ಇರೋವೆ. ಆ ದೇವರು ಅವತಾರ ಎತ್ತಿ ಭೂಮಿಗೆ ಬರಬೇಕು. ಇದಕ ಪರಿಹಾರ ನೀಡಬೇಕು

॥ ಪದ ॥

ದಾನವ ಕಂಸನ ಮಧುರೆಯ ಮೇಲೆ । ಘನ ಘೋರಾಂಧತೆ ಕವಿದಂತೆ ॥
ಗ್ರಾಮದ ಜೀವನ ಕಲುಷಿತವಾಯ್ತು ॥ ವೈರದ ದೆಶೆಯಿಂದ ॥
ಪೀತಾಂಬರಗಳೂ ಉಡುತಿಹರು ॥ ಸ್ವಾಸ್ಥದೀ ಸಿರಿಯುತರು ।
ಹರಕು ಚಿಂದಿಗೂ ಗತಿ ಇರದಾಗಿ । ಬಳಲುತಲಿಹರು ಬಡ ಜನರು ।
ಬರಲಿ ದೇವರ ಅವತಾರ ॥ ದೇಶದ ಬಾಳಿಗ ಉದ್ಧಾರ ॥ ದಾನವ ॥

ಅಂತು ಮರಿಯಪ್ಪನ ಮಗಳು ಲಕ್ಷ್ಮೀಬಾಯಿ ಭದ್ರಿನ್ನೇ ಮದುವೆಯಾಗತೀನಿ ಅಂತ ಹಟ ಹಿಡಿದರೆ ಮರಿಯಪ್ಪನ ಪುರಾಣಕ್ಕೆ ಮಂಗಳಾರತಿಯಾಗುತ್ತ ಖಂಡಿತ ಲಕ್ಷ್ಮಿಯ ಮನ ಒಲಿಸಿಕೊಂಡ ಭದ್ರಿ ಕೂಸಿನ ಕೊರಳಿಗೆ ಸುತ್ತಿದ್ದ ಹಾವಿನಂತಾದ. ಹಾವಿಗೆ ಗುರಿ ಇಡುವ ಬರ್ಚಿ ಕೂಸಿಗೇನಾದರೂ ಬಿದ್ದರೆ ತುಂಬಾ ಅಪಾಯ. ಅಂತು ಕೊನೆಯ ಸನ್ನಿವೇಶದಲ್ಲಿ ನಾಟಕ ಮತ್ತಿಷ್ಟು ರುದ್ರವಾಯಿತು. ಗೆಲುವು ಭದ್ರಿಯುದೋ ಮರಿಯಪ್ಪನದೋ ನಿರ್ಣಯಿಸಬೇಕು

- ತೆರೆ -

# ದೃಶ್ಯ ೧೩

## ಹೊಲದ ದೃಶ್ಯ

(ಭದ್ರಿ, ಲಕ್ಷ್ಮಿ ಸಂತೋಷದ ಭಾವದಲ್ಲಿ)

॥ ಪದ ॥

ಬಿಜಾಪುರಾ ಬಿಜಾಪೂರಾ ಆ...ಆ...ಆ...
ನಾಡಿನೊಳು ಹೆಸರಾಂತ ಬಿಜಾಪೂರ ॥ ಇತಿಹಾಸ
ಹೆಸರಾಂತ ಬಿಜಾಪೂರ ॥ ದೇಶದ ರಕ್ಷಣೆಗಾಗಿ । ರಾಶಿ
ಬಂಗಾರವ । ದಾನವ ಮಾಡಿದ ಜಿಲ್ಲೆ ಬಿಜಾಪೂರ
ಚಾಲುಕ್ಯ ಅರಸರ ರಾಜಧಾನಿಯು ನಮ್ಮ ॥ ಬಾದಾಮಿ
ಇಹ ಜಿಲ್ಲೆ ಬಿಜಾಪೂರ ॥ ಮಾ ॥
ಐಹೊಳ್ಳಿ ಪಟ್ಟದಕಲ್ಲು ॥ ಕೋಟಿಲಿಂಗದಾ ಕ್ಷೇತ್ರ ಮಹಾ
ಕೂಟ । ಏಕಶಿಲೆ ನಟರಾಜ । ತಾಯಿ ಬನಶಂಕರಿ ।
ತಾಯಿ ಬನಶಂಕರೀ
ಆದಿಲ್‌ಶಾಹಿಯ ಅಚ್ಚರಿಯ ಕಟ್ಟಡವೂ ।
ಸಪ್ತ ಪ್ರತಿಧ್ವನಿಯ ಗೋಳಗುಮ್ಮಟವೂ
ಗಗನ ಆಸರ ಮಹಾಲು ಜುಮ್ಮಾ ಮಸೀದಿ ।
ಶತ್ರು ಭೀಕರ ಕೋಟೆ ಉಪ್ಪಲಿಯ ಬುರುಜು
ಕೋಟೆಯಾ ನರಸಿಂಹ ಇಬ್ರಾಹಿಮ್ ರೋಜ ॥
ಕಣ್ಮನವ ಸೆಳೆವಂಥ ಬಿಜಾಪೂರಾ ಜಿಲ್ಲೆ ಬಿಜಾಪೂರಾ
ಇಂಗಳೇಶ್ವರ ಧನ್ಯ ಬಾಗೇವಾಡಿಯು ಗ್ರಾಮ
ಅಣ್ಣ ಬಸವಣ್ಣನ ಜನ್ಮಸ್ಥಳ
ಕೂಡಲ ಸಂಗಮ ಯಾತ್ರಾ ಸ್ಥಳ ॥
ಅಲ್ಲಮ ಮಹಾಪ್ರಭುದೇವ ತಪಗೈದ ತಾಣಾ
ಬಿಜಾಪೂರ ಜಿಲ್ಲೆ ತೇರದಾಳ ॥
ಸೀಲ ಗಂಗಾಬಿಕೆಯು ಐಕ್ಯಸ್ಥಳ

ತಂಗಡಗಿ ಇಹ ಜಿಲ್ಹೆ ಬಿಜಾಪೂರ ॥ ೪ ॥

ಸಿದ್ಧಪುರುಷನ ವಾಸ ಶ್ರೀ ಕೊಳ್ಳ ಕೈಲಾಸ ॥
ಮುದ್ದು ಸಂಗನವಾಸ ಶ್ರೀಶೈಲನಿವಾಸ ಶ್ರೀಶೈಲನಿವಾಸ ॥ ಬಿಜಾಪೂರ ॥ ೫ ॥

ಶ್ರೀ ವಿಜಯಾ ಮಹಾಂತೇಶ ಮುರ್ತುಜಾಖಾದರಿ
ಎರಡು ಮತಗಳ ಭಾವಸಂಗಮದ ಘನಸಿರಿ ॥
ವಿಶ್ವದಾ ಮನಸೆಳೆದಾ ಸೀರೆಯ ಕಲೆಗಾರ ॥
ನೇಯುವಾ ನೇಕಾರ ತಾನಿರುವ ಇಲಕಲ್ಲು । ನಾಗರಿಕರ ॥
ತಾಯಿ ಮಲಪ್ರಭೆ ॥ ತಾಯಿ ಘಟಪ್ರಭೆ, ಕೃಷ್ಣೆ, ಭೀಮೆ, ದ್ರೋಣ
ಪಂಚ ನದಿಗಳು ಹರಿಯುವ ಪುಣ್ಯ ತಾಣ ಭೂಲೋಕ
ಸ್ವರ್ಗವಿದು ॥ ಬಿಜಾಪೂರ ॥

(ಪದ ಮುಗಿಯುವ ಹೊತ್ತಿಗೆ ಮರಿಯಪ್ಪ ಬರುವನು)

ಮರಿಯಪ್ಪ - ಲಕ್ಷ್ಮಿ ಏನಿದು ನಿನ್ನ ಅಸಂಬದ್ಧ ವರ್ತನೆ

ಲಕ್ಷ್ಮಿ - ಏನಾಯಿತಪ್ಪ ?

ಮರಿಯಪ್ಪ - ಈ ವಿಷಸರ್ಪದ ಸಹವಾಸದಲ್ಲಿ ನಲಿದಾಡುವ ದೃಶ್ಯ ಕಣ್ಣಿಗೆ ಕಂಡರೂ ಮತ್ತೆ ಏನಾಯಿತಪ್ಪಾ ಎಂದು ಕೇಳುವಿಯಾ ? ಹಾವಿನ ಚೆಲುವು ಕಣ್ಣಿಗೆ ಕಂಡಿತೆಂದು ಅದರ ಮುಖಕ್ಕೆ ಮುದ್ದಿಕ್ಕಬೇಡ. ಮನುಷ್ಯನೇ ಇವನು ? ವಿಷಪೂರಿತ ಘಟಸರ್ಪ

ಲಕ್ಷ್ಮಿ - ವಿಷಸರ್ಪವಲ್ಲ. ನನ್ನ ಮನಸೆಳೆದ ಮನದನ್ನ

ಮರಿಯಪ್ಪ - ಮುಚ್ಚುಬಾಯಿ ! ಅಂತಸ್ತಿನ ಅಂತರ ಮರೆತು ಆಡದಿರು. ನವಿಲು ತನ್ನ ಅಂತಸ್ತಿನ ಅಂತರ ಮರೆತು ಹದ್ದಿನ ಮುಖಕ್ಕೆ ಮುದ್ದಿಕ್ಕಬಹುದೇ ? ಕೂಲಿ ಮಾಡಲು ಹೇಸದ ಇವನ ಸಹವಾಸ ಬಯಸಲು ನಿನಗೆ ನಾಚಿಕೆಯಾಗಬೇಕಿತ್ತು ! ಆ ಬಡವನ ಕೈಹಿಡಿದು ಯಾವ ಭವಣೆಗೀಡಾಗಬೇಕನ್ನುವಿ

ಲಕ್ಷ್ಮಿ - ಮನ ಒಪ್ಪಿದವನು ಎಂಥವನಿದ್ದರೂ, ಏನಿದ್ದರೂ ಏನಪ್ಪಾ ? ಅಂತರ ತರಬಹುದೆ ನಿನ್ನ ಮನೆಯ ಸಂಪತ್ತು. ನಾಚಿಕೆ ಪಡಲಿಕ್ಕೆ ನಿನ್ನ ಮಗಳೇನು ನೀತಿ ತಪ್ಪಿ ನಡೆದಿಲ್ಲ

ಮರಿಯಪ್ಪ - ಇದಂಥಾ ನೀತಿ ? ಇದಂಥಾ ಧರ್ಮ ?

ಲಕ್ಷ್ಮಿ - ಹಿಂದಿನಿಂದಲೂ ಗೃಹಿಣಿಯಾಗಿ ಬಾಳಿದ ಹೆಣ್ಣುಮಕ್ಕಳು ಅನುಸರಿಸಿದ ನೀತಿ. ಅವರು ಪಾಲಿಸಿದ ಧರ್ಮ

ಮರಿಯಪ್ಪ - ಹಡೆದವರ ಮನಸ್ಸಿನ ವಿರುದ್ಧ ತನ್ನ ಮನ ಮೆಚ್ಚಿದವನ ಕೈಹಿಡಿದು ಹಿಂದಿನ ಯಾವ ಗೃಹಿಣಿಯೂ ತವರುಮನೆ ತೊರೆದು ಓಡಿ ಹೋಗಿಲ್ಲ

ಲಕ್ಷ್ಮಿ - ಅದೇಕೆ ಓಡಿ ಹೋಗಿಲ್ಲ. ಬಲರಾಮನ ತಂಗಿ ಸುಭದ್ರೆ ಸಂಭ್ರಮದಿಂದ ಅಣ್ಣನ ಅನುಮತಿಯಂತೆ ಮದುವೆಯಾದಳೋ, ತನ್ನ ಮನಗೆದ್ದ ಅರ್ಜುನನ ಬೆನ್ನು ಹತ್ತಿ ಹೋಡಿಹೋದಳೋ

ಮರಿಯಪ್ಪ - ಮುಚ್ಚುಬಾಯಿ. ನಿನ್ನಿಂದ ಪಾಠ ಕಲಿಯಬೇಕಿಲ್ಲ. ನಾನಿಂದು ನಿಶ್ಚಯಿಸಿದ ವರನೊಂದಿಗೆ ನಿನ್ನ ಮದುವೆ ನಡೆದುಹೋಗಲೇಬೇಕು, ಇದು ನನ್ನ ನಿರ್ಧಾರ

ಭದ್ರ - ಮರಿಯಪ್ಪ, ಈ ನಿನ್ನ ನಿರ್ಧಾರ ಕನಸಿನಲ್ಲಿ ಕೂಡಾ ಕೈಗೂಡದು. ಈ ಲಕ್ಷ್ಮಿ ನಿನ್ನ ಮಗಳಲ್ಲ. ನನ್ನ ಮಡದಿ. ಯಾರು ಯಾವ ರೀತಿ ಅಡ್ಡಾವರೂ ಅವರು ಜೀವಂತ ಉಳಿಯಲಾರರು

ಮರಿಯಪ್ಪ - ಥೂ ಚಾಂಡಾಲ ! ಎಂದೋ ಮುಗಿದು ಹೋಗಬೇಕಿದ್ದ ನಿನ್ನ ಕಥೆ ಮುಂದುವರೆದು ನನ್ನ ಬಾಳಿಗೆ ಬಂಡೆಗಲ್ಲಾದಿ. ನನ್ನ ಮಗಳಿಗೆ ಅದೇನು ಮಾಡಿ ಮರುಳು ಮಾಡಿದಿಯೋ ನಾ ಕಾಣೆ. ಲಕ್ಷ್ಮಿ ತಂದೆ ಬೇಕಿದ್ದರೆ ಈ ಹಂದಿಯನ್ನು ತೊರೆದುಬಿಡು. ಇಲ್ಲದಿದ್ದರ ಇಲ್ಲಿಗೆ ಮುಗಿದುಹೋಯಿತು ಮಗಳ ಋಣಾನುಬಂಧ

ಲಕ್ಷ್ಮಿ - ಅಪ್ಪಾ ಮಗಳು ಬದುಕಲೆಂದು ನಿನ್ನ ಮನಸ್ಸಿದ್ದರೆ ಇವನಿಗೆ ಕೊಟ್ಟು ನನ್ನ ಮದುವೆ ಮಾಡು. ಇಲ್ಲದಿದ್ದರೆ ಸತ್ತಳೆಂದು ತರ್ಪಣ ಕೊಟ್ಟು ಬಿಡು

ಮರಿಯಪ್ಪ - ಆಗಲಿ.... ಲೇ ಭದ್ರಿ ನನ್ನ ಮಗಳ ತಲೆ ಕೆಡಿಸಿ ನಾನಿಟ್ಟ ಅನ್ನದ ಅಗುಳಿಗೆ ದ್ರೋಹ ಬಗೆದಿಯಾ ? ನನ್ನ ಮಾನ ಮಣ್ಣಿನಲ್ಲಿ ಬರೆಸಿದೆಯಾ ? ಆಗಲಿ ನಿನ್ನ ಸಾವಿನ ಸಮಾಧಿಯ ಮೇಲೆ ನನ್ನ ಮಗಳ ಬಾಳಮಂದಿರ ಕಟ್ಟದಿದ್ದರೆ ನನ್ನ ಹೆಸರೇ ಅಲ್ಲ (ಹೋಗುವಾಗ)

ಲಕ್ಷ್ಮಿ - ಅಪ್ಪಾ.....

ಮರಿಯಪ್ಪ - ಅಪ್ಪಾ ಥೂ ಅವಿವೇಕಿ (ದೂಡಿ ಹೋಗುವನು)

ಭದ್ರಿ - ಲಕ್ಷ್ಮಿ ನಿನಗಿಂದು ನಿನ್ನ ತಂದೆಯ ಮನೆ ಎರವಾಯಿತು !

ಲಕ್ಷ್ಮಿ - ತವರಿನ ಆಸೆಯನ್ನು ನಾನೆಂದೋ ಕಡೆದುಕೊಂಡಿದ್ದೇನೆ

ಭದ್ರಿ - ಹಾಗಿದ್ದರೆ ನಡೆ ನಮ್ಮ ಮನೆಗೆ

ಲಕ್ಷ್ಮಿ - ನಿಮ್ಮ ಮನೆಗೆ ಕರೆದೊಯ್ದರೆ ನಿಮ್ಮಣ್ಣ ಸುಮ್ಮನಿರುವರೇ ?

ಭದ್ರಿ - ಅಣ್ಣ ಸಿಟ್ಟು ಮಾಡುವನೆಂದು ನಿನ್ನ ಬಿಟ್ಟು ಹೋಗಲೆ ಲಕ್ಷ್ಮಿ. ನನ್ನತ್ತಿಗೆ ಕ್ಷಮಿಸಿದರೆ ಸಾಕು, ಅಣ್ಣನ ಹೆದರಿಕೆಯೇ ನನಗಿಲ್ಲ ನಡೆ

ಲಕ್ಷ್ಮಿ - ಎಲ್ಲಿಗೆ ?

ಭದ್ರಿ - ಸಿದ್ದನ ಕೊಳ್ಳಕ್ಕೆ ಹೋಗಿ ಮದುವೆಯಾಗಿ ಮನೆಗೆ ಹೋಗೋಣ ನಡೆ (ಹೋಗುವರು)

# ದೃಶ್ಯ ೧೪
## ಜಂಗಲ್ ರಸ್ತಾ

ಮರಿಯಪ್ಪ - ಸಿದ್ದ ... ನಿಲ್ಲು ಸಿದ್ದಾ....

ಸಿದ್ದ - ಯಾಕೆ ಸಾವುಕಾರರ ಎಷ್ಟು ಗಾಬರಿಯಿಂದ ಕೂಗ್ತಾ ಓಡಿ ಬಂದಿರಲ್ಲ... ಏನಾಯಿತು ಹೇಳ್ರಿ...

ಮರಿಯಪ್ಪ - ಏನು ಹೇಳಲಿ ಸಿದ್ದಾ ಹೇಗೆ ಹೇಳಲಿ ? ನನ್ನ ಮನೆ ಮುಳುಗಿ ಹೋಯಿತಪ್ಪಾ... ಮುಳುಗಿ ಹೋಯಿತು ನಿಮ್ಮ ಭದ್ರಿ ಕೊನೆಗೂ ನನ್ನ ಮಗಳ ತಲೆ ಕೆಡಿಸಿ ನನ್ನ ಮಾನ ಕಳೆದಾ

ಸಿದ್ದ - ಆ .... ಏನಂದಿರಿ ನಮ್ಮ ಭದ್ರಿ ಹೀಗೆ ಮಾಡಿದನೆ ?

ಮರಿಯಪ್ಪ - ಹೌದು ಸಿದ್ದ ಹೌದು. ಈಗ ನನ್ನ ಮಗಳು ಭದ್ರಿಯನ್ನೇ ಮದುವೆಯಾಗತ್ತೇನೆಂದು ಹಟ ಹಿಡಿದಿದ್ದಾಳೆ. ಈಗವಳಿಗೆ ವರ ಗೊತ್ತು ಪಡಿಸಿಕೊಂಡು ಬಂದಿದ್ದೇನೆ. ಮದುವೆಯನ್ನು ನಿಶ್ಚಯಿಸಿದ್ದೇನೆ. ನನ್ನ ಮನೆಯ ಅನ್ನ ಉಂಡ ರಕ್ತ ನಿನ್ನ ಮೈಯಲ್ಲಿ ಹರಿದಾಡುತ್ತಿದ್ದರೆ, ಹಿಂದೊಮ್ಮೆ ಭದ್ರಿಯಿಂದ ನಮಗೇನು ಕೇಡಾಗದಂತೆ ಕಾಯುವದಾಗಿ ನನಗೆ ಕೊಟ್ಟ ನಿನ್ನ ವಚನ ಕಾಯ್ದುಕೋ. ಭದ್ರಿಯ ಹಿಡಿತದಲ್ಲಿ ಸಿಕ್ಕ ನನ್ನ ಮಗಳನ್ನು ಬಿಡಿಸಿ ನನ್ನ ಮಾನ ಉಳಿಸು, ಸಿದ್ದಾ ನಿನ್ನ ಕಾಲಿಗೆ ಬೀಳುತ್ತೇನೆ

ಸಿದ್ದ - ಮರಿಯಪ್ಪನವರ ಇದನ್ನೇನು ಮಾಡಿದಿರಿ ? ನೀವು ಹಿರಿಯರು, ನಮ್ಮ ಬಾಯಲ್ಲಿ ಅನ್ನವಿಟ್ಟ ಪುಣ್ಯವಂತರು. ಹೀಗಿದ್ದು ನೀವು ನನ್ನ ಕಾಲು ಹಿಡಿಯುವದು ನನಗೆ ಶ್ರೇಯಸ್ಸಲ್ಲ. ನಿಮಗಿಂದು ಮಾತುಕೊಟ್ಟಂತೆ ನಮ್ಮಪ್ಪನ ಮಗನೇ ನಾನಾಗಿದ್ದರ ನನ್ನ ಪ್ರಾಣ ಕೊಟ್ಟಾದರೂ ನಿಮ್ಮ ಮಾನ ಉಳಿಸುತ್ತೇನೆ. ನೀವು ಸಮಾಧಾನದಿಂದಿರಿ

ಮರಿಯಪ್ಪ - ಆಯಿತು ಸಮಾಧಾನವಾಯಿತು. ಸಿದ್ಧ ನನ್ನ ಮಗಳ ಮದುವೆ ಸುಸೂತ್ರ ನಡೆಸಿಕೊಟ್ರೆ ನಿನ್ನ ಮದುವೆಗೆ ಕೊಟ್ಟ ಸಾಲ ಮುಟ್ಟಿತೆಂದು ಅವತ್ತೆ ಕಾಗದ ಬರೆದುಕೊಟ್ಟು ಬಿಡತೀನಿ ಅಷ್ಟು ಉಪಕಾರ ಮಾಡತಿಯಾ ಸಿದ್ದ

ಸಿದ್ದ - ಉಪಕಾರದ ಮಾತೇಕೆ ಶ್ರೀಮಂತರ ? ನಿಮ್ಮ ಮಗಳಿಗೆ ಹುಚ್ಚು ಹಿಡಿಸಿ ನಿಮ್ಮ ಮಾನಹರಣಕ್ಕೆ ಸಿದ್ದನಾದ ನನ್ನ ತಮ್ಮನ ಮರಣ ಇಂದು ನಿಶ್ಚಿತ.

ಅವನ ಕೊಂದು ನಿಮ್ಮ ಮಗಳನ್ನು ತಂದು ನಿಮಗೊಪ್ಪಿಸುತ್ತೇನೆ (ಹೋಗ ಹತ್ತುವನು)

ಮರಿಯಪ್ಪ - ತಡಿ ಸಿದ್ದ (ಕೋಟಿನ ಜೇಬಿನಿಂದ ಪಿಸ್ತೂಲ ತೆಗೆದು) ತೆಗೆದುಕೊ ಈ ವಸ್ತು ನಿನ್ನ ಬಳಿ ಇರಲಿ. ಭದ್ರಿ ಯಾವ ಘಳಿಗೆಯಲ್ಲಿ ಏನು ಮಾಡಲಿಕ್ಕೂ ಹೇಸಲಾರ. ಪ್ರಸಂಗ ಬಿದ್ದರೆ ನಿನ್ನ ಪ್ರಾಣರಕ್ಷಣೆಗೆ ಈ ವಸ್ತು ನಿನ್ನ ಬಳಿಯಿರಲಿ

ಸಿದ್ದ - ಈಗ ಭದ್ರಿ ಎಲ್ಲಿದ್ದಾನೆ ಸಾವುಕಾರರೆ ?

ಮರಿಯಪ್ಪ - ಮತ್ತೆಲ್ಲಿ ನಿಮ್ಮ ಮನೆಯಲ್ಲಿ. ಹಾಡಹಗಲೆ ನನ್ನ ಮಗಳ ಕೈಹಿಡಿದು ನಿಮ್ಮ ಮನೆಗೆ ಕರೆದೊಯಿದ !

ಸಿದ್ದ - ಆಗಲಿ ಯಜಮಾನರೆ ನೀವಿನ್ನು ನಿಶ್ಚಿಂತೆಯಿಂದಿರಿ (ಹೋಗುವನು)

ಮರಿಯಪ್ಪ - (ನಗೆಯೊಂದಿಗೆ) ನಿಶ್ಚಿಂತ... ನಾನಿಂದು ನಿಶ್ಚಿಂತ... ಅಣ್ಣನಿಂದ ತಮ್ಮನ ಕೊಲೆಯಾಗುವುದು ಖಂಡಿತ. ಭದ್ರಿಯ ಕೊಲೆಯಾದ ನಂತರ ಈ ಸಿದ್ದ ಕಾರಾಗೃಹವಾಸಿ. ಅವನ ಪತ್ನಿ ಪಾರ್ವತಿ ನನ್ನ ಪ್ರೇಯಸಿ (ನಗೆ) ಕಣ್ಣಿಟ್ಟ ಹೆಣ್ಣಿನ ಮೈಯ ಸುಖದ ಪುಣ್ಯ ಉಣ್ಣದೆ ಬಿಟ್ಟರ ನಾನು ಮರಿಯಪ್ಪನೇ ಅಲ್ಲ (ನಗುವಾಗ ವೆಂಕಪ್ಪ ಬರುವನು)

ವೆಂಕಪ್ಪ - ಏ ಮರಿಯಪ್ಪ ಏನಿದು ನಿನ್ನ ನಗೆ ? ಈ ನಿನ್ನ ನಗೆಯೇ ನಾಳೆ ನಂಜಿನ ಹೊಗೆಯಾಗಿ ಹರಡೀತು

ಮರಿಯಪ್ಪ - ವೆಂಕಪ್ಪ ಮನಸ್ಸಿನಲ್ಲಿ ಮಾಡಿಕೊಂಡ ಕೆಲಸ ಮನಸಿನಂತೆ ನಡೆದುಹೋಯಿತು. ಬಾಯಿಲ್ಲಿ ಹೇಳ್ತೀನಿ (ಕಿವಿಯಲ್ಲಿ ಹೇಳುವನು) ಹೇಗಿದೆ ನನ್ನ ವಿಚಾರ ?

ವೆಂಕಪ್ಪ - ಮರಿಯಪ್ಪ, ಈ ದುಷ್ಟ ವಿಚಾರ ಇಷ್ಟು ದೂರ ಓಡಿಸಬಾರದಿತ್ತು. ಇಂಥ ನೀಚ ವಿಚಾರಕ್ಕೆ ಮನಸ್ಸು ಮಾಡಿದ ನಿನ್ನ ಪೂರ್ವಜನ್ಮದ ಪುಣ್ಯದ ಬುತ್ತಿ ಇಲ್ಲಿಗೆ ಮುಗಿತು ಅಂತಾ ತಿಳಿ. ಇಂಥ ಕೆಟ್ಟ ಕೆಲಸ ಇನ್ನು ನಮ್ಮೂರಾಗ ಆಗೋದ ಬ್ಯಾಡ ತಡಿ. ನಡಿಯೋ ನನ್ನ ಕಾಲು ಸ್ವಲ್ಪ ಕುಂಟ ಐತಿ (ಇಬ್ಬರೂ ಹೋಗುವರು)

## ದೃಶ್ಯ ೧೫

ಸಿದ್ದನ ಮನೆ

(ಭದ್ರಿ, ಲಕ್ಷ್ಮಿಯನ್ನು ಮದುವೆಯ ವೇಷದಲ್ಲಿ ಕರೆತಂದು)

ಭದ್ರಿ - ಅತ್ತಿಗೆ....

ಪಾರ್ವತಿ - (ಒಳಗಿನಿಂದ) ಯಾರದು (ನೋಡಿ ಗಾಬರಿಯಿಂದ) ಅರೆ... ಇದೇನಪ್ಪಾ ನೀವಿಬ್ಬರೂ ...

ಭದ್ರಿ .... ಹೌದು ಅತ್ತಿಗೆ ನಾವಿಬ್ಬರೂ ಸಿದ್ದನ ಕೊಳಕ್ಕೆ ಹೋಗಿ ಮದುವೆ ಆಗಿ ಮನೆಗೆ ಬಂದಿದ್ದೇವೆ. ಅತ್ತಿಗೆ ಈ ನಮ್ಮ ಮದುವೆಗೆ ಹಂದರವಿಲ್ಲ. ಹಾಲು ಗಂಬವಿಲ್ಲ. ಮದುಮಕ್ಕಳಾದ ನಮಗೆ ಹೊಸ ಬಟ್ಟೆಗಳಿಲ್ಲ. ಮದುಮಗಳ ಕೈಗೆ ಹಸಿರು ಬಳೆಗಳಿಲ್ಲ. ಅರಿಷಣ ಕುಂಕುಮ ಅಕ್ಷತೆಗಳೊಂದೂ ಇಲ್ಲ. ಆದರೂ ಅತ್ತಿಗೆ ಈ ಭದ್ರಿಗೆ ಹಾಲಿಟ್ಟು ಸಲುಹಿದ ನಿನ್ನ ಪುಣ್ಯಮಯ ಹಸ್ತದಲ್ಲಿ ಅವೆಲ್ಲ ಉಂಟೆಂದು ನಂಬಿ ಬಂದಿದ್ದೇವೆ. ಆಶೀರ್ವದಿಸು ನನ್ನವ್ವ

ಲಕ್ಷ್ಮಿ - ಅಹುದಕ್ಕ ಆಶೀರ್ವದಿಸು (ಪಾರ್ವತಿಯ ಕಾಲಿಗೆ ಬೀಳುವರು. ಸಿದ್ದ ಸಿಟ್ಟಿನಿಂದ ಬರುವನು)

ಸಿದ್ದ - (ಭದ್ರಿಯ 'ಹಾರ ಹರಿದು) ಭದ್ರಿ.... ಏನಿದು

ಭದ್ರಿ - ಇದು ಮದುವೆ !

ಸಿದ್ದ - ಇದು ಮದುವೆಯಲ್ಲ ... ನಿನ್ನ ಮನೆಮುರುಕತನ ! ಅರಿಯದ ಹುಡುಗಿಯನ್ನು ಅಪಹರಿಸಿ ಅವಳ ತಲೆ ಕೆಡಿಸಿ ಅನ್ನ ಬಿಟ್ಟವರ ಬಾಯಿಯಲ್ಲಿ ಮಣ್ಣೆಕ್ಕಿ ನಲಿಯುವ ಹೇಯತನ !

ಲಕ್ಷ್ಮಿ - ತಲೆ ಕೆಡಿಸಿ ಕೈ ಹಿಡಿದವನಲ್ಲ ಮಾವ. ನನ್ನ ಮನವಲಿಸಿ ಪಡೆದವನು. ಜಿದ್ದು ಹಾಕಿ ಹೆಣ್ಣನ್ನು ಗೆದ್ದು ಮದುವೆಯಾದವನು.

ಸಿದ್ಧ - ನಿನ್ನ ಮಾತಿನ ಮತಿತಾರ್ಥ ನನಗೆ ಬೇಕಿಲ್ಲ ಭದ್ರಿ. ನಿನಗೀಗಲೇ ಹೇಳುತ್ತೇನೆ ಲಕ್ಷ್ಮಿಯ ಕೈಬಿಟ್ಟು ಕೊಟ್ಟು ...

ಭದ್ರಿ - ಪಡೆದ ಲಕ್ಷ್ಮಿಯ ಕೈಬಿಟ್ಟು ಕೊಡಲಿಕ್ಕೆ ನಾನೇನು ಹೇಡಿಯಾಗಿ ಹುಟ್ಟಿಲ್ಲ

ಸಿದ್ಧ - ಬಿಡದಿದ್ದರೆ ಮನೆಯಲ್ಲಿ ಮಾರಮ್ಮನ ಹಬ್ಬ ನಡೆಯುತ್ತದೆ. ಅದಕ್ಕೆ ಬಲಿಯ ನೈವೇದ್ಯವೆಂದು ಇಲ್ಲಿ ನಿನ್ನ ಹೆಣ ಉರುಳುತ್ತದೆ. ಇಂಥ ಹೇಸಿ ಕೆಲಸಕ್ಕೆ ಕೈಯಿಟ್ಟ ನೀನೂ ನಮ್ಮಪ್ಪನ ಮಗನೆ ಅಲ್ಲ

ಭದ್ರಿ ... ಅಣ್ಣಾ ಹುಟ್ಟಿನ ವಿಷಯಕ್ಕೆ ಮಾತನಾಡಿ ಅವ್ವನ ಶೀಲಕ್ಕೆ ನೀರತ್ತಬೇಡಣ್ಣ. ನೀನಲ್ಲದೆ ಬೇರೆಯವರೆಂದಿದ್ದರೆ ಅಂತವರ ಹೆಣ ನೆಲದ ಹೂಳಿನಲ್ಲಿ ಉರುಳುತ್ತಿತು. ದೇವರೆ ಅಡ್ಡ ನಿಂತರೂ, ಹಿಡಿದ ಲಕ್ಷ್ಮಿಯ ಕೈ ಯಾವ ಕಾಲಕ್ಕೂ ಬಿಡಲಾರೆ

ಸಿದ್ದ - ನೀನೀಗ ಹಿಡಿದದ್ದು ಲಕ್ಷ್ಮಿಯ ಕೈಯನ್ನಲ್ಲ. ಹಾವಿನ ಮೈಯನ್ನು ಥೂ ನಾಚಿಗೇಡಿ !

ಭದ್ರಿ - ನಾಚಿಗೆ ಪಡೆಯಲಿಕ್ಕೆ ನಾನೇನು ನೀತಿ ತಪ್ಪಿ ನಡೆದಿಲ್ಲ. ಹೇಡಿಯಾಗಿ ಬಾಳಿಲ್ಲ. ಒಲಿದು ಬಂದ ಹೆಣ್ಣಿನ ಹಿಂದಿರುಗಿ ಹೋಗೆಂದು ಹೇಳುವ ಹೇಡಿ ನಾನಲ್ಲ

ಸಿದ್ದ - .... ಅವರಪ್ಪ ಒಪ್ಪದಿದ್ದರೂ ಅಪಹರಿಸಿ ತಂದು ಮದುವೆಯಾದರೆ ನಾಳೆ ಜನ ಏನಂದಾರು ?

ಭದ್ರಿ - ಜನರ ಮನಸ್ಸಿನ ಸಮಾಧಾನಕಲ್ಲಣ್ಣಾ ನಾನಿವಳ ಮದುವೆಯಾದದ್ದು. ಒಲಿದು ಬಂದದ್ದಕ್ಕೆ, ನಮ್ಮಿಬ್ಬರ ಹಿತಕ್ಕಾಗಿ. ಮರಿಯಪ್ಪನವರಿಗೆ ಎಂದೋ ತಿಳಿಸಿ ಬಿಟ್ಟಿದ್ದೇನೆ ಎಂದಿದ್ದರೂ ನಿನ್ನ ಮಗಳ ಗಂಡ ನಾನೇ ಎಂದು.

ಸಿದ್ದ - ಕಂಡ ಕಂಡವರಿಗೆಲ್ಲ ಗಂಡನೆಂದು ಬೊಗಳಲಿಕ್ಕೆ ನೀನೇನೂ ಅರ್ಜುನನಲ್ಲ, ತಲೆದಂಡ ಒಪ್ಪಿಸಬೇಕಾದೀತು. ನಿಮ್ಮ ಮಗಳನ್ನು ತಂದೊಪ್ಪಿಸುವೆನೆಂದು ಮರಿಯಪ್ಪನವರಿಗ ನಾನು ಮಾತು ಕೊಟ್ಟು ಬಂದಿದ್ದೇನೆ. ಮೊದಲು ಅವಳನ್ನು ಕಳಿಸಿಕೊಡು ಮನೆಗೆ

ಭದ್ರಿ - ನನ್ನ ದೇಹದಲ್ಲಿ ಜೀವ ಇರುವರೆಗೆ ಅವರಿವರೇಕೆ ಸಾಕ್ಷಾತಾ ಹರಿ ಹರ ಬ್ರಹ್ಮಾದಿಗಳು ಬಂದರೂ ನಮ್ಮಿಬ್ಬರನ್ನು ಅಗಲಿಸಲು ಸಾಧ್ಯವಿಲ್ಲ

ಸಿದ್ದ .... ಬೇಡ ಭದ್ರಿ ಸುಮ್ಮನೆ ನನ್ನ ಸಿಟ್ಟಿಗೆಬ್ಬಿಸಬೇಡಾ ! ಹಟದಲ್ಲಿ ಮುಂದುವರೆದೆಯಾದರೆ ಇಲ್ಲಿ ನಿನ್ನ ಘಟ ಉಳಿಯಲಾರದು. ನಿನ್ನ ಕೊಂದಾದರೂ ಮರಿಯಪ್ಪನವರಿಗ ಕೊಟ್ಟ ನನ್ನ ಮಾತನ್ನು ನಾನುಳಿಸಿ ಕೊಳ್ಳುವೆ

ಭದ್ರಿ - ಅಣ್ಣಾ ನಿನ್ನ ಮಾತನ್ನ ನೀನುಳಿಸಿಕೊಳ್ಳುವಂತೆ ನನ್ನ ಮಾತನ್ನು ನಾನುಳಿಸಿಕೊಳ್ಳುವೆ. ಎಂದಿದ್ದರೂ ಲಕ್ಷ್ಮಿ ನನ್ನ ಹೆಂಡತಿ

ಸಿದ್ದ - (ತಡೆಯಲಾರದ ಸಿಟ್ಟಿನಿಂದ ಪಿಸ್ತೂಲು ತೆಗೆದು) ಲಕ್ಷ್ಮಿ ನಿನ್ನ ಹೆಂಡತಿ (ಪಿಸ್ತೂಲ್ ಹಾರಿಸುವನು. ಅಡ್ಡಬಂದ ಲಕ್ಷ್ಮಿಗೆ ಗುಂಡು ಬಡಿಯುವದು) ಲಕ್ಷ್ಮಿ

ಭದ್ರಿ - ಲಕ್ಷ್ಮಿ (ಎಂದು ಚೀರಿ ಕೊಡ್ಲಿ ತೆಗೆದುಕೊಂಡು ಅಣ್ಣಾ ಮೇಲೆ ಏರಿ ಹೋಗುವನು ಪಾರ್ವತಿ ಅಡ್ಡ ಬರುವಳು) ಚಾಂಡಾಲಾ ಅಣ್ಣನೆಂದು ಸುಮ್ಮನಿದ್ದರೆ ನನ್ನ ಪ್ರೀತಿಯ ಹೆಣ್ಣನ್ನು ಗುಂಡಿನಿಂದ ಸುಟ್ಟು, ನನ್ನ ಹೊಟ್ಟೆ ಉರಿಸಿದಿಯಾ (ಸಿದ್ದನ ಮೇಲೆ ಏರಿ ಹೋಗುವನು. ಪಾರ್ವತಿ ತಡೆಯುವಳು)

ಪಾರ್ವತಿ ... ಭದ್ರಿ ... ಅವರನ್ನು ಕೊಲ್ಲುವುದಕ್ಕಿಂತ ಮೊದಲು ನನ್ನನ್ನು ಕೊಂದು ಬಿಡು. ಅಮಂಗಲೆಯಾಗಿ ಬದುಕುವದಕ್ಕಿಂತ ಸುಮಂಗಲೆಯಾಗಿ ಸಾಯುವುದು ಮೇಲು

ಭದ್ರಿ - ಅತ್ತಿಗೆ (ಹಿಂದೆ ಸರಿದು 'ಲಕ್ಷ್ಮಿ' ಎಂದು ಚೀರಿ ಅವಳ ಬಳಿ ಹೋಗುವನು)

ಲಕ್ಷ್ಮಿ ... (ಮೆಲ್ಲಗೆ ಎದ್ದು ಅವನ ಅಂಗಿ ಹಿಡಿದು ತತ್ತರಿಸುತ್ತ) ಭದ್ರಿ ಒಂದು ಹೆಣ್ಣಿಗಾಗಿ ಅಣ್ಣನ ಕೊಲೆ ಮಾಡುವಿಯೊ ಛೀ (ಕಿನ್ನಗೆ ಹೊಡೆದು) ಅಣ್ಣನನ್ನು ಕೊಂದು ಹಾಲು ಕುಡಿಸಿದ ನಿನ್ನತ್ತಿಗೆಯ ಬಾಯಲ್ಲಿ ಹಾಲಾಹಲ ಹಾಕಿ ಅವಳ ಕುಂಕುಮ ಅಳುಕಿಸಿ ಬಳೆ ಒಡಿಸಿ ದಂಡೆಯ ದಾರ ಹರಿದರೆ ಗುಂಡು ಬಡಿದ ನಿನ್ನ ಹೆಂಡತಿ ಬದುಕುವಳೆ ? ನೀ ಬಯಸಿದರೆ ನನ್ನಂಥ ನೂರು ಹೆಣ್ಣು ಬಂದು ನಿನ್ನ ಕಣ್ಣು ತುಂಬುವುದು. ಆದರ ಅಣ್ಣ ಸಿಗುವನೆ ?

ಭದ್ರಿ - ಸಾಧ್ಯವಿಲ್ಲ ಲಕ್ಷ್ಮಿ ನಿನ್ನ ಸಾಯಗೊಡಲಾರೆ

ಲಕ್ಷ್ಮಿ - ಏನು ಮಾಡಿದರೂ ನನ್ನ ಸಾವನ್ನು ಮಾತ್ರ ನೀನು ತಡೆಯಲಾರೆ (ಮರಿಯಪ್ಪ ಬರುವನು)

ಮರಿಯಪ್ಪ - ಮಗು ಲಕ್ಷ್ಮಿ ಏನಾಯಿತಮ್ಮಾ ನಿನ್ನ ಅವಸ್ಥೆ ?

ಲಕ್ಷ್ಮೀ - ನೋಡಪ್ಪಾ ಇದು ನಿನ್ನ ಸಂಪತ್ತಿನ ದಾಹದಿಂದ ನನಗೊದಗಿದ ವಿಪತ್ತು. ಯಾರು ನಿನ್ನ ಅಳಿಯನಾಗಲೆಂದು ನಾನು ಬಯಸಿದೆನೋ ಅವರಣ್ಣನ ಕೈಗೆ ಪಿಸ್ತೂಲ ಕೊಟ್ಟು ಕೊಲ್ಲೆಂದು ಕಳಿಸಿದಿ. ಆದರ ಅದರೊಡಲು ನನ್ನನ್ನೇ ಸುಟ್ಟಿತು. ರಕ್ತ ಕುಡಿಯಲೆಂದು ಹುಟ್ಟಿದ ಗುಂಡಿಗೆ ಯಾರ ರಕ್ತವಾದರೆ ಏನು ? ಹೇಳಪ್ಪ. ನೋಡು ಈ ಆಯುಷ್ಯದ ಅಂಚಿನಲ್ಲಿ ನಿಂತು ನಿನಗೊಂದು ಮಾತು ಹೇಳುತ್ತೇನೆ. ಈ ಸಾವಿಗೆ ಯಾರೂ ಕಾರಣರಲ್ಲ. ನಮ್ಮ ದುರ್ದೈವ. ಬಡವರನ್ನು ಮರುಗಿಸಿ ಕೂಡಿಸಿದ ನಿನ್ನ ಸಂಪತ್ತಿನ ಪ್ರಭಾವ. ಅಪ್ಪ ನನ್ನ ಅಂತಿಮ ಆಸೆಯೊಂದಿದೆ, ಅದನ್ನು ನಡೆಸಿಕೊಡುವಿನ ಏನಪ್ಪಾ ?

ಮರಿಯಪ್ಪ - ಅದೇನಿದ್ದರೂ ಹೇಳಮ್ಮಾ ಮನ ಮುಟ್ಟಿ ಎದೆ ತಟ್ಟಿ ಪಾಲಿಸುತ್ತೇನೆ

ಲಕ್ಷ್ಮಿ ... ಅಪ್ಪಾ ನಾನು ಸತ್ತನೆಂದು ಶೋಕಿಸದ ಪಾರ್ವತಕ್ಕನೇ ನಿನ್ನ ಮಗಳು ಲಕ್ಷ್ಮಿ ಎಂದು ಭಾವಿಸಿ ನಡಿ

ಮರಿಯಪ್ಪ - ಆಗಲಮ್ಮಾ ನಿನ್ನಾಣೆ ನನ್ನಾಣೆ ಈ ಮಾತು ನಡೆಸುತ್ತೇನೆ. ಇನ್ನು ಮೇಲೆ

ಮಗಳೆಂದರೂ ಅವಳೇ... ತಾಯಿ ಎಂದರೂ ಅವಳೆ..

ಭದ್ರಿ ಲಕ್ಷ್ಮಿ ನಾನು ನಿನ್ನ ಜೊತೆ ಬರುತ್ತೇನೆ (ಕೆಳಗೆ ಬಿದ್ದು ಪಿಸ್ತೂಲ ತೆಗೆದುಕೊಂಡು ತನ್ನೆದೆಗೆ ಗುರಿ ಇಟ್ಟು ಕೊಳ್ಳುವನು. ಎಲ್ಲರೂ ಬಿಡಿಸಿಕೊಳ್ಳುವರು)

ಲಕ್ಷ್ಮಿ - (ಕೊಸರಿಕೊಂಡು) ಛೀ ಹೇಡಿಯಂತೆ ಹೀಗೆ ಮಾಡಬಾರದು. ನಾನು ಸತ್ತರೂ ನೀನು ಬದುಕಿರಬೇಕು. ವೀರನಾಗಿ ಮೆರಯಬೇಕು

ಭದ್ರಿ - ಹೌದು ವೀರನಾಗಿ ಮೆರೆಯಬೇಕು. ಆ ಧೈರ್ಯ ಆ ಸಾಹಸ ಯಾರಿಗಾಗಿ ಏತಕ್ಕಾಗಿ ?

ಲಕ್ಷ್ಮಿ - ದೇಶಕ್ಕಾಗಿ ನಿನಗೆ ಜನ್ಮ ಕೊಟ್ಟ ನೆಲಕ್ಕಾಗಿ

ಭದ್ರಿ - ಅದೆಲ್ಲ ನನಗೆ ಬೇಡ. ನೀ ಸತ್ತ ಮೇಲೆ ನನ್ನ ಸಾಹಸ ಕಂಡು ಸಂತಸ ಪಡುವವರು ಯಾರು ?

ಲಕ್ಷ್ಮಿ - ನಾ ಸತ್ತರೂ ನಿನ್ನೆ ಎದೆ ಹುತ್ತದಲ್ಲಿ ಸದಾ ವಾಸವಾಗಿರುತ್ತೇನೆ. ನಿನ್ನ ದಿಗ್ವಿಜಯ ಕಂಡು ಸಂತಸ ಪಡುತ್ತೇನೆ

ಭದ್ರೀ - ಇಲ್ಲ ಲಕ್ಷ್ಮಿ ನೀನಿಲ್ಲದ ಬಾಳು ಕಾಡಿನಲ್ಲಿ ಬಿದ್ದ ಬೆಳದಿಂಗಳು

ಲಕ್ಷ್ಮಿ - ಅದರಲ್ಲಿಯೇ ನಿನ್ನ ಪ್ರೇಮ ವಿಲಾಸಿನಿ ಸದಾ ಸಂಚರಿಸುತ್ತಾಳೆ. ಭದ್ರಿ ಕೇವಲ ಒಂದು ಹೆಣ್ಣಿನ ಅಗಲುವಿಕೆಗೋಸ್ಕರ ನಿನ್ನ ಪೌರಷ್ಯದ ಸೆಲೆ ಬತ್ತಬಾರದು. ಇಲ್ಲಿಯವರೆಗೆ ಸುತ್ತಲಿನ ಹತ್ತು ಜನರ ಬಾಯಲ್ಲಿ ಪುರುಷ ಸಿಂಹ ಎಂದು ಹೊಗಳಿಸಿಕೊಂಡ ನೀನು ಇನ್ನು ಮುಂದೆ ದೇಶದ, ಜನರ ಮುಖದಿಂದ ಹೊಗಳಿಸಿ ಕೊಳ್ಳಬೇಕು. ವೈರಿ ವಿನ್ಯಾಸಕ್ಕೆ ಹಾತೊರೆಯುವ ಭರತ ವರುಷದ ಸೇನಾ ಸಾಗರಕ್ಕೆ ದಿಕ್ ಸೂಚಿ ಧ್ರುವತಾರೆ ನೀನಾಗಬೇಕು. ತ್ರಿವರ್ಣ ಧ್ವಜ ಹಿಡಿದು ನಿಂತ ರಣಚಂಡಿ ಚಾಮುಂಡಿ ಆ ಹಿಮಗಿರಿಯ ಗೌರಿ ನಿನ್ನನ್ನು ಆಹ್ವಾನಿಸುತ್ತಾಳೆ ಹೋಗು ಮುಂದಾಗು. ಭರತ ಸೈನ್ಯದಲ್ಲಿ ಸೇರಿ ನಮ್ಮೂರಿನ ರಾಷ್ಟ್ರ ರಕ್ಷಣೆಯ ಮಹಾನಿಧಿಯಾಗು ಸಾಗು ಮುಂದಾಗು

ಭದ್ರಿ ಆಗುತ್ತೇನೆ ಲಕ್ಷ್ಮಿ ನೀನಂದಂತ ನಾನು ಭಾರತ ಸೈನಿಕ. ನನ್ನತ್ತಿಗೆಯ ಪಾದ ತಟ್ಟಿ ಪ್ರಮಾಣ ಮಾಡುತ್ತೇನೆ

ಲಕ್ಷ್ಮಿ - ಆಶೀರ್ವದಿಸಕ್ಕ

ಪಾರ್ವತಿ - ಏನೆಂದು ಆಶೀರ್ವದಿಸಲಿ ? (ತಲೆಯ ಮೇಲೆ ಕೈಯಿಟ್ಟು) ಭದ್ರಿ ನನ್ನಪ್ಪಾ ಗೌರಿಯ ವಜ್ರ ಕವಚ ಕದನ ಮುಖದಲ್ಲಿ ನಿನ್ನ ರಕ್ಷಿಸಲಿ. ಕಂದಾ ನಿನ್ನಿಂದ ನಲಿಯಲಿ ಆ ವಿಶ್ವ ಭಾರತೀಯ ಅಂತರಂಗ

ಲಕ್ಷ್ಮಿ - ಆಹಾ ಹಾ ಎಂಥ ಮಾತು ನಿನ್ನಿಂದ. ನಲಿಯಲಿ ವಿಶ್ವ ಭಾರತೀಯ ಅಂತರಂಗ (ಲಕ್ಷ್ಮಿ ಸಾಯುವಳು. ಪರದೆ ಬೀಳುವದು)

(ರಸ್ತಾ)

ವೆಂಕಪ್ಪ - ಆಹಾ ಮರಿಯಪ್ಪ ಎಂಥಾ ಸಾವಪ್ಪ. ಇಂಥ ಪವಿತ್ರ ಸಾವಿನಿಂದ ನಿನ್ನ ಜನ್ಮ ಸಾರ್ಥಕವಾಯಿತು. ಹತ್ತು ಹಡಿಯುದಕ್ಕಿಂತ ಈ ಒಂದು ಮುತ್ತ ಪಡೆದು ನೀನು ಧನ್ಯನಾದಿ. ನಿನ್ನ ಮಗಳು ಬರೀ ಲಕ್ಷ್ಮಿಯಲ್ಲ. ನಮ್ಮೂರಿನ ಶ್ರೀ ಲಕ್ಷ್ಮಿ. ಭಾರತದ ಲಕ್ಷ್ಮಿ. ಸಂಪತ್ ಲಕ್ಷ್ಮಿ. ಸಂಪತ್ತಿಗೆ ಸವಾಲು ಹಾಕಿದ ವಿಜಯ ಲಕ್ಷ್ಮಿ. ಮರಿಯಪ್ಪ ಭದ್ರಿ ಮಿಲ್ಟ್ರಿಗೆ ಹೊರಟರುವನಂತೆ... ಊರ ಜನರೆಲ್ಲಾ ಹಾರ ತುರಾಯಿಗಳನ್ನು ಹಾಕಿ ಕಳಿಸಿ ಕೊಡುವರಂತೆ. ನಾವು ಹೋಗನ ನಡಿ ಮಿಲ್ಟ್ರಿಗೆ ಸೇರಿದರೆ ಭದ್ರಿಯಂತ ದಿಟ್ಟ ಹುಡುಗರು ಸೇರಬೇಕು. ಸಿದ್ದನಂಥ ಸಾತ್ವಿಕ ಹುಡುಗರು ಒಕ್ಕಲುತನ ಮಾಡಬೇಕು. ಅಂದ್ರನೆ ನಮ್ಮ ದೇಶ ಲಾಲಬಹಾದ್ದೂರ ಶಾಸ್ತ್ರಿಗಳು ಹೇಳಿದಂತೆ ಜೈ ಜವಾನ, ಜೈ ಕಿಸಾನ ಆಗತದ ಇರದಿದ್ರ ನಾನೇ ನಾನೇ ಜೈ ಜವಾನ ನೀನೇ ಜೈ ಕಿಸಾನ ಆಗತದ. ನಮ್ಮ ನಿಮ್ಮಂಥವರು ಸೈನ್ಯಕ್ಕೆ ಸೇರಿದರೆ ಕೂಳಿನ ಪಗಾರಕ್ಕೆ ದಂಡ. ಮೂರು ತಿಂಗಳದಾಗ ಹೇಳದೆ ಕೇಳದೆ ಓಡಿ ಬರೋದು. ನಡಿಯಪ್ಪ ಆ ಭದ್ರಿನ್ನ ಕಳಿಸಿ ಬರೋನು (ಹೋಗವರು)

॥ ಮಂಗಲ ॥

# ಮಲಮಗಳು

ಅರ್ಥಾತ್

# ಮುದುಕನ ಮದುವೆ

## ಪಾತ್ರ ಪರಿಚಯ

೧. ರಾಜೀವಪ್ಪ

೨. ಸಾಹುಕಾರ ರಂಗಣ್ಣ

೩. ಶೇಷಣ್ಣ

೪. ಶ್ಯಾಮ

೫. ಲಚ್ಚಿ

೬. ಗುಂಡಣ್ಣ

೭. ಕಾವೇರಿ

೮. ಕಲ್ಯಾಣಿ

೯. ಮಂದಾಕಿನಿ

೧೦. ಅಜ್ಜಮ್ಮ

೧೧. ಕಳ್ಳ

೧೨. ಪೋಲೀಸ

## ಮಲಮಗಳು

॥ ಶ್ರೀ ಗುರು ಮುದ್ದುಸಂಗ ಕಾಯಲಿ ॥
॥ತೇನವಿನಾ ಪ್ರಣಾಮಪಿನ ಚಲತಿ ॥

## ನಾಂದಿ

# ದೃಶ್ಯ - ೧

### ರಾಜೀವಪ್ಪನ ಮನೆ

ರಾಜೀವಪ್ಪ - ಶ್ರೀದೇವಿ

ಕಾವೇರಿ - (ಬಂದು) ಇದೇನಿದು ಕುಳಿತು ಬಿಟ್ಟಿರಲ್ಲ... ನಾನು ನಿನ್ನೆ ಹೇಳಿದ ಮಾತು ಏನು ಮಾಡಿದಿರಿ ?

ರಾಜೀವಪ್ಪ - ನಿನ್ನೆ ಹೇಳಿದ ಮಾತು ಏನೇ ಅದು ?

ಕಾವೇರಿ - ಇಷ್ಟರಲ್ಲಿ ಮರೆತುಬಿಟ್ಟಿರಾ ? ಇವತ್ತು ನಮ್ಮಣ್ಣ ಬರುವವನಿದ್ದಾನೆ ಎಂದು ಹೇಳಿರಲಿಲ್ಲವೇ ?

ರಾಜೀವಪ್ಪ - ಹೌದು ಹೇಳಿದ್ದಿ. ಆದರೆ ಈಗೇನಾಯಿತು ?

ಕಾವೇರಿ - ಸರಿ ಹೋಯಿತು. ನಿಮ್ಮೊಂದಿಗೆ ಸಂಸಾರ ಮಾಡುವದು, ಮಹಾಪೂರ ಬಂದಾಗ ನದಿ ಹಾರುವದು - ಎರಡೂ ಒಂದೇ. ಅಲ್ರಿ ನಮ್ಮ ಮದುವೆಯಾದ ವರುಷದಲ್ಲಿ ಬಂದು ಹೋದ ಆ ನಮ್ಮಣ್ಣ ಇದುವರೆಗೂ ಇತ್ತ ಬಂದಿಲ್ಲ

ರಾಜೀವಪ್ಪ - ಅಲ್ಲೇ ಮೇಲಿಂದ ಮೇಲೆ ಬಂದು ಹೋಗಲಿಕ್ಕೆ ನಿಮ್ಮಣ್ಣನಿಗೆ ನಾನೇನಾದರೂ ಬೇಡವೆಂದು ಹೇಳಿದ್ದೇನು ?

ಕಾವೇರಿ - ನಾನು ಕರದರೇನು ಬಂದು ಹೋಗುವಷ್ಟು ಸಮೀಪದಲ್ಲಿದ್ದನೇನು ಗುಂಡಣ್ಣ. ಅದೆಲ್ಲೋ ಕೋಲಾರದ ಚಿನ್ನದ ಗಣಿಯಲ್ಲಿ ನೌಕರಿ ಮಾಡಿ ಪೆನ್ಷನ್ ಪಡೆದು ಈಗ ಸಿದ್ದಾಪುರಕ್ಕೆ ಬಂದಿದ್ದಾನೆ. ನಾನು ಬರಲಿಕ್ಕೆ ತಿಳಿಸಿದ್ದೆ. ಇವತ್ತು ಬರುವದಾಗಿ ಬರೆದ ಅವನ ಪತ್ರ ನಿನ್ನೆ ಬಂದು ಮುಟ್ಟಿತು

ರಾಜೀವಪ್ಪ - ಬಂದರೆ ಬರುತ್ತಾನೆ, ನಾಲ್ಕು ದಿನವಿದ್ದು ಹೋಗುತ್ತಾನೆ. ಅದಕ್ಕೆಲ್ಲ ನೀನೆಷ್ಟು ಯೋಚನೆ ಮಾಡುತ್ತಿಯೇ ?

ಕಾವೇರಿ - ಬಂದರೆ ಬಂದಾ, ಹೋದರೆ ಹೋದ ಎಂದು ಹೇಳಲಿಕ್ಕೆ ಅವನೇನು ನಿಮ್ಮಂತೆ ಸಾಮಾನ್ಯ ಮನುಷ್ಯನೇನು ? ಈಗ ಪೆನ್ಷನ್ ತಿಂಗಳಿಗೆ ಸಾವಿರದನೂರಿಪ್ಪತ್ತು ರೂಪಾಯಿ ಬರುತ್ತದಂತೆ. ಇದಲ್ಲದೇ ನೌಕರಿಯ ಮೇಲಿದ್ದಾಗ ಸಾಕಷ್ಟು ಸಂಪಾದಿಸಿಕೊಂಡು ಸಿದ್ಧಾಪುರಕ್ಕೆ ಬಂದಿದ್ದಾನೆ

ರಾಜೀವಪ್ಪ - ಅದಕ್ಕೆ ನಾನೇನು ಮಾಡಲಿ ? ಅವನು ಸಂಪಾದಿಸಿಕೊಂಡು ಬಂದರೆ ಅದು ಅವರಿಗೆ ಒಳ್ಳೆಯದು. ಅದರಿಂದ ನಮಗೆ ಬಂದ ಭಾಗ್ಯವೇನು ?

ಕಾವೇರಿ - ಇದಕ್ಕೆ ನಿಮಗೆ ವ್ಯವಹಾರ ಜ್ಞಾನ ಎಷ್ಟೂ ಇಲ್ಲ ಅಂತ ನಾನು ಹೇಳೋದು. ಅಲ್ರಿ ಗುಂಡಣ್ಣನಿಗೆ ಮದುವೆ ವಯಸ್ಸಿಗೆ ಬಂದ ಮಗನಿದ್ದಾನೆ

ರಾಜೀವಪ್ಪ - ಹೌದು ಹೌದು... ನಮ್ಮ ಮದುವೆಯಲ್ಲಿ ಆ ಹುಡುಗ ಐದು ವರ್ಷದ ಕೂಸಾಗಿತ್ತು. ಆತನ ಹೆಸರು

ಕಾವೇರಿ - ಅದೇ ಶ್ಯಾಮ. ನೋಡ್ರಿ ಅಣ್ಣನಿಗೆ ಸ್ವಲ್ಪ ಉಪಚಾರ ಮಾಡಿ ಕೇಳಿಕೊಂಡರ ನನ್ನ ಮಗಳು ಮಂದಾಕಿನಿಯನ್ನು ಶ್ಯಾಮನಿಗೆ ತೆಗೆದುಕೊಳ್ಳಲಿಕ್ಕೆ ಒಪ್ಪಬಹುದು

ರಾಜೀವಪ್ಪ - ಅಲ್ಲೇ ಮಂದಾಕಿನಿಗಿಂತ ಕಲ್ಯಾಣಿ ದೊಡ್ಡವಳು. ಮೊದಲು ಹಿರಿಯ ಮಗಳ ಲಗ್ನ ಮಾಡುವ ವಿಚಾರ ಬದಿಗಿಟ್ಟು ಕಿರಿಯ ಮಗಳ ಲಗ್ನಕ್ಕೆ ಆತುರ ಪಡುವದು ಮೂರ್ಖತನವಲ್ಲವೇ ?

ಕಾವೇರಿ - ಅವಳಿಗೂ ಮದುವೆ ಮಾಡೋಣವಂತೆ. ಇದು ನನ್ನ ತವರು ಮನೆಯ ಸಂಬಂಧ. ಅಂದ ಬಳಿಕ ಅವರು ನನ್ನ ಮಗಳನ್ನೇ ತೆಗೆದುಕೊಳ್ಳಲು ಇಷ್ಟ ಪಡುವದು ಸ್ವಾಭಾವಿಕ

ರಾಜೀವ - ಕಾವೇರಿ ಕಲ್ಯಾಣಿ ನಿನ್ನ ಮಗಳಲ್ಲವೇನು ? ಅವಳು ಸವತಿಯ ಮಗಳೆಂಬ ದುರಭಿಮಾನ ನಿನಗಿರಬಾರದು. ಹಡೆದ ಮಗಳಂತೆ ಪಡೆದ ಮಗಳನ್ನು ಕಾಪಾಡಿಕೊಂಡು ಹೋಗುವದು ಗೃಹಿಣಿಯಾದ ನಿನ್ನ ಕರ್ತವ್ಯ

ಕಾವೇರಿ - ಕಲ್ಯಾಣಿಗೆ ನಾನೇನು ಕಡಿಮೆ ಮಾಡಿದ್ದೇನೆ. ಅವಳನ್ನು ಮಂದಾಕಿನಿಯನ್ನು ಒಂದೇ ಭಾವನೆಯಿಂದ ಕಾಣುತ್ತ ಬಂದಿಲ್ಲವೇನು ನಾನು

ರಾಜೀವ - ಅಷ್ಟು ಉದಾರ ಹೃದಯ ನಿನಗಿದ್ದರೆ ಕಲ್ಯಾಣಿಯನ್ನು ಸ್ಕೂಲ್ ಬಿಡಿಸಿ ದುಡಿಯಲಿಕ್ಕೆ ಹಚ್ಚಿ, ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಂದಾಕಿನಿಗೆ ಬಣ್ಣದ ಬಟ್ಟೆಯಂತೆ ವೇಷ ಮಾಡಿಕೊಂಡು ಸ್ಕೂಲಿಗೆ ಹೋಗಲು ಅವಕಾಶ ಕೊಡುತ್ತಲಿದ್ದಿಯಾ ?

ಕಾವೇರಿ - ಎಷ್ಟೆಂದರೂ ಕಲ್ಯಾಣಿ ಮಂದಾಕಿನಿಗಿಂತ ಮೂರು ವರ್ಷ ದೊಡ್ಡವಳು. ಮೈನರೆದ ಹುಡುಗಿಯನ್ನು ಮನೆ ಬಿಟ್ಟು ಹೊರಗೆ ಕಳಿಸುವದು ಮನೆತನದ ಗೌರವಕ್ಕೆ ಚ್ಯುತಿಯೆಂದು ತಿಳಿದು ಸ್ಕೂಲು ಬಿಡಿಸಿದೆ. ಇದು ತಪ್ಪೇನು ?

ರಾಜೀವ - ಹಾಗಿದ್ದರೆ ಮೈನೆರೆದು ದೊಡ್ಡವಳಾದ ಕಲ್ಯಾಣಿಯನ್ನು ಮನೆಯಲ್ಲಿ ಕೂಡ್ರಿಸಿ ಚಿಕ್ಕವಳಾದ ಮಂದಾಕಿನಿಯ ಮದುವೆ ಮಾಡುವದು ಒಪ್ಪೇನು

ಕಾವೇರಿ - ಅದೇನೆಂದರೂ ಸರಿ. ಹೆಣ್ಣಿನ ಬೇರು ತವರಿನಲ್ಲಿ ಎನ್ನುವಂತೆ ನನ್ನ ಮಗಳನ್ನು ನನ್ನ ಅಣ್ಣನ ಮಗನಿಗೆ ಕೊಡಬೇಕೆಂಬುದೇ ನನ್ನಾಸೆ. ದಯವಿಟ್ಟು ನೀವು ಈ ನನ್ನಾಸೆಗೆ ಕಲ್ಲು ಹಾಕಬೇಡಿ

ರಾಜೀವ - ಕಲ್ಲು ಹಾಕಲಿಕ್ಕೆ ನಿನ್ನಲ್ಲಿರುವ ಕ್ಷುಲ್ಲಕತನ ನನ್ನಲ್ಲಿರಬೇಕಲ್ಲ. ಯಾಕೆಂದರೆ ಕಲ್ಯಾಣಿಯಂತೆ ಮಂದಾಕಿನಿಯೂ ನನ್ನ ಮಗಳೆ

ಕಾವೇರಿ - ಅಷ್ಟಾದರೂ ಒಪ್ಪಿಕೊಳ್ಳುವ ಔದಾರ್ಯ ನಿಮ್ಮ ಹೃದಯದಲ್ಲಿದೆಯಲ್ಲ, ಅದೇ ನನ್ನ ಪುಣ್ಯ (ಸಿಟ್ಟಿನಿಂದ ಹೋಗುವಳು)

ರಾಜೀವ - ಮಕ್ಕಳಿದ್ದೂ ಮದುವೆ ಮಾಡಿಕೊಂಡವನ ಭಂಡಬಾಳು ಇದು. ರೆಕ್ಕೆ ಸುಟ್ಟು ಕೆಂಡದಲ್ಲಿ ಬಿದ್ದ ಪತಂಗದಂತೆ ನಿತ್ಯ ಸಂಕಟ ಪಡುವದೇ ನನ್ನ ಗೋಳು (ಫೋಟೋ ನೋಡಿ) ಶ್ರೀದೇವಿ ಕಲ್ಯಾಣಿಯನ್ನು ಹೆತ್ತು ನೀನು ಸತ್ತ ನಂತರ ಈ ಮನೆಯು ಸರ್ವ ಸಂಪತ್ತು ಸರ್ವನಾಶವಾಗಿ ಹೋಯಿತು. ಮೊದಲಗಿತ್ತಿಯಾಗಿ ನನ್ನ ಮನೆಯಲ್ಲಿ ಕಾಲಿಕ್ಕುವಾಗ ಸಂಪತ್ತಿನೊಂದಿಗೆ ಸಂತಸದ ನಗೆ ಉಕ್ಕಿಸಿದಿ. ಹೆತ್ತಬೇನೆಯೇ ಕರಾಳ ಮೃತ್ಯುವಿನ ರೂಪ ತಳೆದು ನಿನ್ನ ಕತ್ತು ಮುರಿದಾಗ, ದುಃಖ ದುಮ್ಮಾನಗಳ ನನಗಿತ್ತು, ಇಹದಿಂದ ನೀ ಕಾಲ್ಕಿತ್ತಿದಿ. ಆಗ ನಿನ್ನ ಹೊಟ್ಟೆಯ ಕರುಳು ಕಲ್ಯಾಣಿ ಕೇವಲ ಎರಡು ತಿಂಗಳ ಹಸುಳೆ. ತಾಯಿ ಸತ್ತ ಕೂಸಿನ ಪೋಷಣೆಗೆ ಹೆಣ್ಣು ಜೀವವೊಂದು ಮನೆಯಲ್ಲಿರಬೇಕೆಂದು ಬಂಧು-ಬಾಂಧವರೆಲ್ಲ ಒತ್ತಾಯ ಮಾಡಿದರು. ಮರು ಮದುವೆಯಾದೆ. ಅದೇ ನನ್ನ ಅಪರಾಧವಾಯಿತು. ಶ್ರೀದೇವಿ ನಿನ್ನ ಸ್ಥಾನ ತುಂಬುವ ಯೋಗ್ಯತೆ ಕಾವೇರಿಗಿಲ್ಲವೆಂದು ನಾನು ಮೊದಲೇ ಅರಿತಿದ್ದರೆ ಈ ಮರು ಮದುವೆಗೆ ಒಪ್ಪುತ್ತಿರಲಿಲ್ಲ. ನಿನ್ನ ನಂತರ ನನ್ನ ಕೈ ಹಿಡಿದು ನನ್ನ ಮನೆ ತುಂಬಿದ ಕಾವೇರಿ ನನ್ನ ಮನ ತುಂಬಲಿಲ್ಲ. ನಿನ್ನ ಮಗಳಿಗೆ ತಾಯಿಯಾಗುವ ಬದಲು ಮಲತಾಯಿಯಾದಳು. ತನ್ನ ಹೊಟ್ಟೆಯಲ್ಲಿ ಮಂದಾಕಿನಿ ಹುಟ್ಟಿದ ಮೇಲಂತೂ ಕಲ್ಯಾಣಿಯನ್ನು ಕಣ್ಣೆತ್ತಿ ನೋಡುವದಿರಲಿ, ಕಣ್ಣೀರೇ ಅವಳಿಗೆ ಗತಿ ಎನ್ನುವಂತ ಮಾಡಿದಳು. ಶಿವ ಶಿವ ಮೊದಲ ಮಡದಿ ಸತ್ತ ಬಳಿಕ ಮತ್ತ ಮದುವಯಾಗುವದೆಂದರ ಪಡದು ಸತ್ತ ಹೆಂಡತಿಯ ಕೂಸಿನ ಕತ್ತ ಮುರಿದಂತ (ಕಲ್ಯಾಣಿ ಕೈ ಒರಿಸುತ್ತ ಬರುವಳು) ಮಗೂ ಕಲ್ಯಾಣಿ ಏನು ಮಾಡುತ್ತಲಿದಿಯಮ್ಮಾ

ಕಲ್ಯಾಣಿ - ಪಾತ್ರೆ ಬೆಳಗಿದೆನಪ್ಪ. ಇನ್ನು ಮೇಲೆ..

ರಾಜೀವ - ಪಾತ್ರೆ ಬೆಳಗಲಿಕ್ಕೆ ಕಸುಮುಸುರೆ ಮಾಡುವ ಲಕ್ಷ್ಮಮ್ಮ ಇರಲಿಲ್ಲವೇನಮ್ಮ?

ಕಲ್ಯಾಣಿ - ಇದ್ದಳಪ್ಪ ಆದರೆ ಅಮ್ಮ ಅವಳನ್ನು ಕೆಲಸಕ್ಕೆ ಬರಬೇಡವೆಂದು ಬಿಡಿಸಿಬಿಟ್ಟಳು. ಆದ್ದರಿಂದ .....

ರಾಜೀವ - ಬಿಡಿಸಿಬಿಟ್ಟಳು ! ಏನು ಕಾರಣ ? ಕಾವೇರಿ ಕಾವೇರಿ

ಕಾವೇರಿ - (ಬರುತ್ತ) ಏನು ? (ಕಲ್ಯಾಣಿಗೆ) ಏನೇ ಎರಡು ಪಾತ್ರೆ ಬೆಳಗಲಿಕ್ಕೆ ಎರಡು ಗಂಟೆ ಹಿಡಿಯಿತೇನು ! ಗಯ್ಯಾಳಿ ನೀನು ಹೀಗೆಲ್ಲ ಮೈಗಳ್ಳತನ ಮಾಡುತ್ತ ಹೋದರೆ ನಾಳೆ ನಿನ್ನ ಕೊಟ್ಟ ಮನೆಯವರು ನನ್ನ ಹಾಡಿ ಹರಸುತ್ತಾರೆ.

ರಾಜೀವ - ಪಾತ್ರೆ ಬೆಳಗಲಿಕ್ಕೆ ಕಸಮುಸುರೆ ಮಾಡುವ ಅಚ್ಚಮ್ಮ ಇರಲಿಲ್ಲವೇನು ?

ಕಾವೇರಿ - ಹಣ ಕೊಟ್ಟರೆ ಅಚ್ಚಮ್ಮನು ಬರುತ್ತಾಳೆ. ಹುಚ್ಚವ್ವನೂ ಬರುತ್ತಾಳೆ. ಆದರೆ ಕೊಡಲಿಕ್ಕೆ ಬೇಕಲ್ಲ ಹಣ

ರಾಜೀವ - ಮನೆ ಖರ್ಚಿಗೆ ಹಣ ಒದಗಿಸುವವನು ನಾನು. ನೀನಲ್ಲ ತಿಳಿಯಿತೇನ ?

ಕಾವೇರಿ - ತಿಳಿಯದೇನು ಮಾಡುತ್ತದೆ. ಈ ಮನೆಗೆ ಬಂದು ಸಂಸಾರ ಮಾಡಲಿಕ್ಕೆ ಹತ್ತಿ ಹದಿನಾರು ವರ್ಷವಾಯಿತು. ಇನ್ನೂ ತಿಳಿಯಲಾರದೇನು ನಿಮ್ಮ ಯೋಗ್ಯತೆ ? ಮನೆಯಲ್ಲಿ ಆದಾಯ ಕಡಿಮೆಯಾಗಿ ಖರ್ಚು ಹೆಚ್ಚುತ್ತ ನಡೆದು ಸಾಲ ಪ್ರತಿವರ್ಷ ಮಲೇರಿಯಾ ಜ್ವರದಂತೆ ಏರುತ್ತ ನಡೆದಿದೆ. ನಾಳೆ ಇವರ ಮದುವೆಗೆ ಬೇಕೆಂದು ಮನೆಯ ಖರ್ಚುಗಳನ್ನು ಕಡಿಮೆ ಮಾಡಬೇಡವೇ ? ಏಕೆ ಎರಡು ಪಾತ್ರೆ ಬೆಳಗಿದರೆ ನಿಮ್ಮ ಮಗಳ ಕೈ ಸವೆದು ಹೋಗುತ್ತವೇನು ?

ರಾಜೀವ - ಒಂದು ಮಾತಿಗೆ ಹತ್ತು ಮಾತು ಆಡುವದು ನಿನಗೆ ಹುಟ್ಟು ಗುಣವಾಗಿದೆ. ಮುಂಜಾನೆಯಿಂದ ಸಂಜೆಯವರಿಗೆ ತಾಯಿ ಸತ್ತ ಮಗುವನ್ನು ದುಡಿಸುವದು ಒಳಿತಲ್ಲವೆಂದು ತಿಳಿಹೇಳಿದೆ

ಕಾವೇರಿ - ಹೌದು ನನಗೆ ತಿಳುವಳಿಕೆಯಿಲ್ಲ. ಮೊಮ್ಮಕ್ಕಳನ್ನು ಕಾಣುವ ದಿವಸ ಸನಿಹಕ್ಕೆ ಬಂದರೂ ನಿಮ್ಮಿಂದ ಹಿಯಾಳಿಸಿಕೊಳ್ಳುವುದು ತಪ್ಪಲಿಲ್ಲ ನನ್ನ ಬಾಳಿಗೆ. ಬೆಂಕಿ ಹಚ್ಚಲಿ

ಕಲ್ಯಾಣಿ - ಅಪ್ಪ ನಮ್ಮ ಅಮ್ಮ ನನಗೆ ಉದ್ಯೋಗ ಕಲಿಸಿಕೊಡದೆ ಇನ್ನಾರು ಕಲಿಸಿಕೊಡಬೇಕು ? ಇಷ್ಟಕ್ಕೆಲ್ಲ ನೀನು ಸಿಟ್ಟಾಗಿ ಬಿಡಬಾರದು

ರಾಜೀವ - ನೀನು ಹೀಗೆ ಮಾತನಾಡಿ ನನ್ನ ಕಣ್ಣಲ್ಲಿ ನೀರು ಹರಿಸಬೇಡ ಮಗು. ನಿನಗೆ ತಾಯಿಯಾಗಿ ಬಂದ ಈ ಮಾರಿ ತೋರುವ ತಾರತಮ್ಯ ತಿಳಿಯದಷ್ಟು ನಿನ್ನ ತಂದೆ ತಿಳಿಗೇಡಿಯಲ್ಲಮ್ಮ. ಮಕ್ಕಳಿದ್ದು ಮರು ಮದುವೆಯಾದದ್ದು ನನ್ನ ತಪ್ಪು, ಕಂದಾ. ಬೇವಿನ ಮರದಲ್ಲಿ ಮಾವಿನ ಫಲವನ್ನು ಅಪೇಕ್ಷಿಸಿದಂತಾಯಿತಮ್ಮ ನನ್ನ ಪಾಡು. ಮಗು ತಾಯಿ ಸತ್ತು ತಬ್ಬಲಿಯಾದ ನಿನ್ನ ಸಹನೆ ನನಗೆ ಮತ್ತಿಷ್ಟು ಸಂಕಟ ಕೊಡುವದೇ ವಿನಃ ಶಾಂತಿಯನ್ನೀಯಲಾರದಮ್ಮ

ಕಾವೇರಿ - ಭ್ರಾಂತಿ ಇಟ್ಟುಕೊಂಡವರ ಮನದಲ್ಲಿ ಶಾಂತಿಯಂತು ಮೂಡೀತು ? ಮಗಳನ್ನು ಮೇಲುಗಟ್ಟಿ ಮಡದಿಯನ್ನು ನಿಂದಿಸುವ ಚಟ ಆವರಿಸಿಬಿಟ್ಟಿದೆಯಲ್ಲ ನಿಮ್ಮ ಹೃದಯದಲ್ಲಿ

ರಾಜೀವ - ರಾಕ್ಷಸಿ... ಮಾತಿಗೆ ಮಾತು ಬೆಳಸುತ್ತ ಹೋದರೆ ನಿನ್ನನ್ನು ಭೂಮಿಯಲ್ಲಿ ಹುಗಿದು ಬಿಟ್ಟೇನು ? ಏನೆಂದು ತಿಳಿದಿರುವಿ

ಕಲ್ಯಾಣಿ - ಅಪ್ಪಾ ಈ ನಿನ್ನ ಸಿಟ್ಟು ಸಂಕಟ ನಿರಾಧಾರವಾದದ್ದು. ಹೆಣ್ಣಾಗಿ ನಿಮ್ಮ ಮನೆಯಲ್ಲಿ ಹುಟ್ಟಿದ ನಾನು ಎಂದಿದ್ದರೂ ಕೊಟ್ಟ ಮನೆ ಸೇರಬೇಕಾದ ಇನ್ನೊಬ್ಬರ ವಡವೆ. ನನ್ನ ಹಡೆದವ್ವ ಕಲಿಸಬೇಕಾದುದನ್ನು ಈಗ ಪಡೆದ ತಾಯಿ ಕಲಿಸುತ್ತಿದ್ದಾಳೆ. ಇದರಲ್ಲಿ ನನಗೆ ಒಳಿತು ಇರುವದು, ವಿನಃ ಕೆಡಕಿಲ್ಲ. ದೋಷವಿರುವದು ನಿನ್ನ ದೃಷ್ಟಿಯಲ್ಲಿಯೇ ಹೊರತು, ಅವ್ವನ ನಡತೆಯಲ್ಲಲ್ಲ. ಅವಳ ದೃಷ್ಟಿಯಲ್ಲಿ ಮಂದಾಕಿನಿ ಬೇರೆಯಲ್ಲ, ನಾನು ಬೇರೆಯಲ್ಲ. ನೀನು ಸುಮ್ಮನಿದ್ದು ಬಿಡಪ್ಪ. ಅವ್ವಾ ಅಪ್ಪನ ಮಾತುಗಳನ್ನು ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡವ್ವ

ಕಾವೇರಿ - ಇಲ್ಲವಮ್ಮ ನಿಮ್ಮ ತಂದೆ ಸುಮ್ಮ ಸುಮ್ಮನೆ ನನ್ನ ಮೇಲೆ ರೇಗುತ್ತಾರೆ. ನನಗೂ ತಡೆದುಕೊಳ್ಳುವಷ್ಟು ಸಹನೆ ಇಲ್ಲ. ಇರಲಿ ಬಿಡಮ್ಮ

ರಾಜೀವ - ಮಗು ಒಂದಿಷ್ಟು ಚಹಾ ಮಾಡಿ ಕೊಡವಿ ಏನಮ್ಮಾ ಆಯಾಸವಾಗಿದೆ

ಕಲ್ಯಾಣಿ - ಆಗಲಪ್ಪಾ ಈಗಲೇ ಮಾಡಿಕೊಡುತ್ತೇನೆ. (ಹೋಗ ಹತ್ತುವಳು)

ಕಾವೇರಿ - ಕಲ್ಯಾಣಿ ನಾನೆಲ್ಲ ಮಾಡಿಕೊಡುತ್ತೇನೆ. ನೀನು ಹೋಗಿ ಮೈಲಿಗೆ ಬಟ್ಟೆಗಳನ್ನು ಮಡಿ ಮಾಡಿಕೊಂಡು ಬಾರಮ್ಮ. ಯಾಕಂದರೆ ಇವತ್ತೆ ನಿಮ್ಮ ಸೋದರ ಮಾವ ಬರುವವನಿದ್ದಾನೆ

ಕಲ್ಯಾಣಿ - ಆಗಲಮ್ಮಾ (ಹೋಗುವಳು)

ಕಾವೇರಿ - ನೋಡಿ, ಅಣ್ಣ ಬರುವ ಹೊತ್ತಾಯಿತು. ನೀವೇ ಸ್ವಲ್ಪ ರೋಡಿನವರೆಗೆ ಗಾಡಿ ಮಾಡಿಕೊಂಡು ಹೋಗಬಾರದೆ ?

ರಾಜೀವ - ಆಗಲಿ ಮಹಾರಾಯಳೇ ! ಒಂದಿಷ್ಟು ಚಹಾ ಕೊಡು ಕುಡಿದು ಹೋಗುತ್ತೇನೆ. (ಕಾವೇರಿ ಹೋಗುವಳು) ನನ್ನ ಮಗಳು ಕಲ್ಯಾಣಿ ತುಂಬಾ ಸದ್ಗುಣವಂತ. ತಾಯಿಯ ಗುಣವೇ ಮೈವೆತ್ತು ಬಂದಿದೆ. ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿ ತರುವ ನಾರೀರತ್ನ ನನ್ನ ಮಗಳು

ಮಂದಾಕಿನಿ - (ಬರುತ್ತ) ಅಪ್ಪಾ ಅಪ್ಪಾ

ರಾಜೀವ - ಬಾರಮ್ಮ ಮಂದಾಕಿನಿ ಸ್ಕೂಲಿಗೆ ಹೋಗಿದ್ದಿಯಾ ಮಗು ?

ಮಂದಾಕಿನಿ - ಹೌದಪ್ಪ ಸ್ಕೂಲಿಗೆ ಹೋಗಿದ್ದೆ. ನೋಡಪ್ಪ ನನ್ನ ಗೆಳತಿ ಮೀನಾಕ್ಷಿಗೆ ಅವರಪ್ಪ

ಒಂದು ಜಾರ್ಜೆಟ್ ಸೀರೆ ತಂದು ಕೊಟ್ಟಿದ್ದಾನೆ. ನೀನೂ ನನಗೆ ಅಂತಹ ಸೀರೆ ಕೊಡಪ್ಪ

ರಾಜೀವ - ನೋಡಮ್ಮಾ ಮೀನಾಕ್ಷಿಯ ತಂದೆ ಶ್ರೀಮಂತರು. ಅವರಿಗೆ ತಂದು ಕೊಡಲು ಸಾಧ್ಯ ಅವರಂತೆ ಖರ್ಚು ಮಾಡಲು ನಮಗೆ ಹಣ ಬೇಕಲ್ಲಮ್ಮ. ನಾವು ಬಡವರು

ಮಂದಾಕಿನಿ - ಅದೆಲ್ಲ ಹೇಳಬೇಡಪ್ಪಾ... ನೀನು ನನಗೆ ತಂದು ಕೊಡಲಿಕ್ಕೆ ಬೇಕು

ರಾಜೀವ - ನೋಡಮ್ಮ ನಿನಗೆ ತಂದುಕೊಟ್ಟರೆ ನಿನ್ನ ಅಕ್ಕನಿಗೂ ತರಬೇಕಾಗುತ್ತದೆ. ತಿಳಿಯಿತೇ ?

ಮಂದಾಕಿನಿ - ಅವಳಿಗೇಕೆ ತರಬೇಕು. ಅವಳೇನೂ ನನ್ನಂತ ಸ್ಕೂಲಿಗೆ ಹೋಗುತ್ತಿರುವಳೇನು ? ಮನೆಯ ಕೆಲಸ ಮಾಡಿಕೊಂಡು ಬಿದ್ದಿರುವವಳು. ಅವಳಿಗೇಕಪ್ಪ ಬೆಲೆಯುಳ್ಳ ಸೀರೆ

ರಾಜೀವ - ಅಂದರೆ ! ನೀನು ಸ್ಕೂಲಿಗೆ ಹೋದರೆ ಹೆಚ್ಚು. ಮನೆಯಲ್ಲಿ ಉಳಿದರೆ ಅವಳು ಕಡಿಮೆ ಏನು ?

ಮಂದಾಕಿನಿ - ಅಹುದು. ಕಲಿತವಳ ಯೋಗ್ಯತೆ ಕಲಿಯದವಳಿಗೆ ಹೇಗೆ ಬಂದೀತು ?

ರಾಜೀವ - ಈ ವಿಚಾರ ನಿನ್ನ ತಲೆಯಲ್ಲಿ ತುಂಬಿದವರಾರು ಮಂದಾ ....

ಮಂದಾಕಿನಿ - ಅವ್ವನೇ ಹೇಳಿದಳು. ಮಂದಾ ನೀನು ಕಲಿತವಳು. ನಿನ್ನ ಯೋಗ್ಯತೆ ಕಲ್ಯಾಣಿಗೆ ಹೇಗೆ ಬಂದೀತು ಅಂತಾ

ರಾಜೀವ - ಏನು ಅವ್ವಳು ಹೀಗೆ ಹೇಳಿದಳೇ ? ಕಾವೇರಿ ಕಾವೇರಿ...

ಕಾವೇರಿ - (ಬಂದು) ಏನು ?

ರಾಜೀವ - ಮಕ್ಕಳ ಮುಗ್ಧ ಮನಸ್ಸಿನಲ್ಲಿ ಈಗಾಗಲೇ ವಿರಸದ ಬೀಜ ಬಿತ್ತಲು ಮೊದಲು ಮಾಡಿದೆಯಾ ? ನಾಲ್ಕು ಅಕ್ಷರ ಹೆಚ್ಚು ಕಲಿತ ಮಾತ್ರಕ್ಕೆ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಂದಾಕಿನಿಯ ಯೋಗ್ಯತ ಹೆಚ್ಚಾಗಿ ಕಲ್ಯಾಣಿಯ ಯೋಗ್ಯತ ಕಡಿಮೆಯಾಯಿತೇ ?

ಕಲ್ಯಾಣಿ - ಏಕಾಗಬಾರದಪ್ಪ ಕಲಿತವಳ ಯೋಗ್ಯತೆ ಕಲಿಯದವಳಿಗೆ ಹೇಗೆ ಬಂದೀತು ?

ರಾಜೀವ - ಇಲ್ಲ, ಇಲ್ಲ, ಮಗೂ ನಿನ್ನಂತೆ ಮಂದಾ ನನ್ನ ಮಗಳೆ. ಆದರೆ ಅವಳು ನಿನ್ನ ಯೋಗ್ಯತೆಗ ಬರಬೇಕಾದರ ಇನ್ನೂ ಹತ್ತು ಸಲ ಹುಟ್ಟಿಬರಬೇಕು. ಆ ಮೇಲೆ ಅವಳಿಗೆ ನಿನ್ನ ಯೋಗ್ಯತ ಸಿಲುಕಬೇಕು. ಈಗ ಜನ ಅವಳಲ್ಲಿ ನಿನ್ನ ಯೋಗ್ಯತೆ ಕಂಡರೆ ಅದು ಹೂವಿನೊಂದಿಗೆ ನಾರು ಸ್ವರ್ಗಕ್ಕೇರಿದಂತೆ

ಕಾವೇರಿ - ಈಗಲಾದರೂ ಅರ್ಥವಾಯಿತೇನಮ್ಮಾ... ಕಲ್ಯಾಣಿ, ನಿಮ್ಮ ತಂದೆಯವರ ಭಾವನೆ. ಹೊಟ್ಟೆಯ ಮಕ್ಕಳಲ್ಲಿ ತಾರತಮ್ಯ ಕಲ್ಪಿಸಿದವಳು ನಾನೋ ಅಥವಾ

ನಿನ್ನ ತಂದೆಯವರೊ ?

ಕಲ್ಯಾಣಿ - ಇರಲಿ ಬಿಡಮ್ಮಾ... ಅದೇಕೆ ಇವತ್ತು ವೇಳೆ ಸರಿಯಾಗಿಲ್ಲವೆಂದು ಕಾಣುತ್ತದೆ, ನೀನೇ ಸುಮ್ಮನಿದ್ದು ಬಿಡಮ್ಮಾ

ರಾಜೀವ - ಮಗು ಚಹನಾದರೂ ಕುಡಿದು ಹೋಗಮ್ಮ. ಹಾಗೇಯೇ ಹೊರಟು ಬಿಟ್ಟಿಯಲ್ಲ

ಕಲ್ಯಾಣಿ - ಇಲ್ಲಪ್ಪ ಬಟ್ಟೆಗಳನ್ನು ಮಡಿ ಮಾಡಿಕೊಂಡು ಬಂದ ನಂತರ ಕುಡಿಯುತ್ತೇನೆ. (ಹೋಗುವಳು)

ರಾಜೀವ - ಮಗೂ ಕಲ್ಯಾಣಿ, ನೋಡಿದಿಯೇನೆ ಹಾಗೇ ಹೊರಟು ಹೋದಳಲ್ಲ. ಪಾಪ ಮುಂಜಾನೆಯಿಂದ ಒಂದೇ ಸಮನೇ ದುಡಿದು ಪಣ್ಣಾಗುವ ಹುಡುಗಿಗೆ ಚಹನಾದರೂ ಕುಡಿದು ಹೋಗು ಎಂದಾದರೂ ಹೇಳಬಾರದೇನೆ ರಾಕ್ಷಸಿ

ಕಾವೇರಿ - ಅವಳಿಗೆ ಕುಡಿದು ಹೋಗಲಿಕ್ಕೆ ತಿಳಿಯಬಾರದೇನು ? ಅದನ್ನು ನಾನೇ ಹೇಳಬೇಕೇನು ? ಮುಖ್ಯ ನಿಮ್ಮ ಕೈಯಿಂದ ನನ್ನ ಬೈಸಬೇಕೂ ಅಂತ ಅವಳಿಗೆ ಇಷ್ಟ. ಅಂತೆಯೇ ಹೀಗೆಲ್ಲ ಮಾಡುತ್ತಾಳೆ. ಹಾಳಾದವಳು (ಅಳುವಳು)

ಮಂದಾಕಿನಿ - ಇರಲಿ ಬಿಡಪ್ಪ. ಈಗ ಬಂದು ತಾನೆ ಕುಡಿಯುತ್ತಾಳೆ, ನೀನು ಚಹಾ ಕುಡಿಯಪ್ಪ

ರಾಜೀವ - ಬೇಡವಮ್ಮಾ (ಏಳುವನು)

ಕಾವೇರಿ - ಏಕೆ ನಿಮಗೇನಾಯಿತು ?

ರಾಜೀವ - ಏನಾಯಿತು ? ಮನಸ್ಸಿಗೆ ಸಾವಿರ ಚೇಳು ಕಡಿದಷ್ಟು ನೋವಾಯಿತು. ಹೊಟ್ಟೆಯ ಮಗಳನ್ನು ಬರಿ ಹೊಟ್ಟೆಯಲ್ಲಿ ಹೊರಗಟ್ಟಿ ನಾನು ಕುಡಿವರ ಹಾಲು ಸಕ್ಕರ ಬೆರತ ಈ ಚಹಾ ನನ್ನ ಹೊಟ್ಟೆಯಲ್ಲಿ ಹಾಲಾಹಲವಾಗುತ್ತದ

ಮಂದಾಕಿನಿ - ಇರಲಿ ಕುಡಿಯಪ್ಪ

ರಾಜೀವ - ಇಲ್ಲಮ್ಮಾ ಮಂದಾ ನೀನೇ ಕುಡಿಯಮ್ಮ. ನಾನು ಬೇಗನೆ ರೋಡಿನವರೆಗೆ ಗಾಡಿಯನ್ನು ಒಯ್ದು ನಿನ್ನ ಮಾವನನ್ನು ಕರತರುತ್ತೇನೆ. ಈಗಾಗಲೇ ಬಸ್ಸು ಬರುವ ವೇಳೆ ಸಮೀಪಿಸಿತು. (ಹೋಗುವನು)

ಮಂದಾಕಿನಿ - ಕುಡಿದು ಹೋಗಪ್ಪ

ಕಾವೇರಿ - ಇರಲಿ ಬಿಡ ? ಮನೆಯಲ್ಲಿ ಕುಡಿಯದಿದ್ದರ ಏನಾಯಿತು ? ಅಂಗಡಿಯಲ್ಲಿ ಇವಳಿಗಾಗಿ ಹತ್ತು ಸಲ ಕುಡಿದಿರುತ್ತಾರ ನಿಮ್ಮಪ್ಪ

ಮಂದಾಕಿನಿ - ಯಾಕಮ್ಮ ಅಪ್ಪ ಇವತ್ತು ಖಾರವಾಗಿದ್ದಾರ !

ಕಾವೇರಿ - ಇವತ್ತು ನಿನ್ನ ಮಾವ ಬರುತ್ತಾರಂತ ಗೊತ್ತಷ್ಟ

ಮಂದಾಕಿನಿ - ಗೊತ್ತು ನೀನೆ ನಿನ್ನೆ ಹೇಳಿದಿಯಲ್ಲ

ಕಾವೇರಿ - ಅವರ ಮಗ ಶ್ಯಾಮ ಬಿ.ಎ. ಪರೀಕ್ಷೆ ಕಟ್ಟಿದ್ದಾನೆ. ಅವನಿಗೆ ನಿನ್ನ ಕೊಡಬೇಕು ಅಂತ ನನ್ನಿಷ್ಟ. ಕಲ್ಯಾಣಿಯನ್ನು ಕೊಡಬೇಕು ಅಂತ ಅವರಿಷ್ಟ. ಅದಕ್ಕಾಗಿಯೇ ಇಷ್ಟೆಲ್ಲ ರಾದ್ಧಾಂತ

ಮಂದಾಕಿನಿ - ಅವ್ವಾ ಅವರು ಕಲಿತವರು ಅಂದ ಬಳಿಕ ಕಲಿತವಳನ್ನಲ್ಲದೆ ಈ ಮೂದೇವಿಯನ್ನು ಕಟ್ಟಿಕೊಂಡಾರೇನು ? ಹೋಗಲಿ ಬಿಡೆ ಅವ್ವ ಇವತ್ತು ನನ್ನ ಗೆಳತಿ ಮೀನಾಕ್ಷಿ ಜಾರ್ಜೆಟ್ ಸೀರೆ ಉಟ್ಟುಕೊಂಡೆ ಬಂದಿದ್ದಳು. ಅವ್ವ ನೀನೂ ನನಗೆ ಅಂತಹ ಸೀರೆ ತರಿಸಿಕೊಡೆ. ಆ...

ಕಾವೇರಿ - ಒಂದೇಕಮ್ಮಾ ಹತ್ತು... ನೂರು... ಸಾವಿರ ಉಡುವ ಕಾಲ ಬಂದಿದೆ ಮಂದಾ ನಿನಗೆ. ದೊಡ್ಡವರ ಮನೆ ಸೇರಿಬಿಟ್ಟರೆ ನನಗೆ ತುಂಬಾ ಸಂತೋಷವಾಗುತ್ತದಮ್ಮ. ಶ್ಯಾಮಾ ನಿನ್ನ ಒಪ್ಪದೇನು ಮಾಡುತ್ತಾನೆ. ಮಗಳೇ ಇವತ್ತು ನನ್ನ ಪೀತಾಂಬರವನ್ನೇ ಉಟ್ಟುಕೋ, ತಲೆಗೆ ಹೂ ಮುಡಿದಿಕೊ. ಹೋಗು ನಿನ್ನ ಮಾವ ಬರುವ ವೇಳೆಯಾಯಿತು. (ಮಂದಾ ಹೋಗುವಳು) ದೇವಾ ನನ್ನ ಮಗಳು ನನ್ನ ತವರು ಮನೆಗೆ ಸೇರಿ ಕರುಳಿನ ಬಳ್ಳಿ ಹೂ ಬಿಡಲಿ

(ಪದ) 'ಬಲಮಾ ಬಲಮಾ' ಧಾಟಿ

ಕಾವೇರಿ - ಮದನಾ ಮೋಹನಾ । ನಿನ್ನ ಮುರಲಿಯ ಧ್ವನಿ ನಿನ್ನ ಮುರಲಿಯ ಧ್ವನಿಯ । ಕೇಳಲು ಮನ ಬಯಸುವದು ತಾ। ಮದನಾ । ಯಮುನೆಯ ದಡದಲ್ಲಿ ಲೀಲೆಯನಾಡಿ ।। ರಾಧೆಯ ಕಾಡಿ ಮೋಡಿಯಮಾಡಿ । ನಾದ ಸುನಾದ । ವೇದಸಮೋದ । ವೇದಾಂತಮೂರ್ತಿ ಸಲಹೋ ಶ್ರೀಶಾ ।। ಮದನ ।।

ಶೇಷ - (ಬಂದು) ನಿಮ್ಮ ಯಜಮಾನರು ಮನೆಯಲ್ಲಿ ಇದ್ದಾರೇನಮ್ಮ ?

ಕಾವೇರಿ - ಬನ್ನಿ ಶೇಷಪ್ಪ, ಅವರು ಇದೀಗ ಹೊರಗೆ ಹೋದರಲ್ಲಾ

ಶೇಷ - ರೋಡಿಗೆ !

ಕಾವೇರಿ - ಹೌದು ಈ ಹೊತ್ತು ನಮ್ಮಣ್ಣ ಬರುವವರಿದ್ದಾರೆ. ಕರಿಯಲಿಕ್ಕೆ ಅಂತ ಹೋದರು

ಶೇಷ - ಆಗಲೆಮ್ಮ, ಬಂದ ನಂತರ ನಾನು ಬಂದಿದ್ದೆ ಅಂತ ಹೇಳು ತಾಯಿ

ಕಾವೇರಿ - ಆಗಲಪ್ಪ. ಅಂದ ಹಾಗೆ ಶೇಷಪ್ಪ ಯಜಮಾರನ್ನು ಕೇಳಿಕೊಂಡು ಮೇಲಿಂದ ಮೇಲೆ ಬರುತ್ತೀರಲ್ಲ, ಏನಾದರೂ ವಿಶೇಷ ?

ಶೇಷ - ವಿಶೇಷವಿಲ್ಲದೆ ಈ ಶೇಷ ಬರೋದಿಲ್ಲ ತಾಯಿ. ಈಗ ನಿಮ್ಮ ಯಜಮಾನರಿಗೆ ಕುತ್ತಿಗೆಗೆ ಬಂದಿದೆಯಮ್ಮ

ಕಾವೇರಿ - ಏನದು ?

ಶೇಷ - ಸಾಲ... ನಮ್ಮ ಸಾಹುಕಾರ ರಂಗಣ್ಣನವರಲ್ಲಿ ನಿಮ್ಮ ಯಜಮಾನರು ಮಾಡಿದ

ಸಾವಿರ ರೂಪಾಯಿ ಸಾಲ ಮೇಲೆ ಎರಡು ವರ್ಷದ ಬಡ್ಡಿ ಕೂಡಿ ಎರಡು ಸಾವಿರ ಆಗಿಬಿಟ್ಟಿದೆ. ಮೊದಲೇ ಆ ನಮ್ಮ ಬಡ್ಡಿ ಸಾವುಕಾರ ರಂಗಣ್ಣ ಈಗಂತೂ ರಂಗ ರಂಗ ಆಗಿಬಿಟ್ಟಿದ್ದಾನೆ. ಏನಾದರೂ ಮಾಡಿ ಸಾಲ ತೀರಿಸುವ ಹಂಚಿಕೆ ಮಾಡಿಕೊಳ್ಳಿ ತಾಯಿ

ಕಾವೇರಿ - ಇದೇನಪ್ಪಾ ಶೇಷಾ ? ಸಾವಿರ ರೂಪಾಯಿಗೆ ಸಾವಿರ ರೂಪಾಯಿ ಬಡ್ಡಿಯೆಂದರೆ ?

ಶೇಷ - ಹೌದಮ್ಮ, ಅವನ ಬಡ್ಡಿನೇ ಬಹಳ ಅಡ್ಡಾ ದಿಡ್ಡಿ. ಕಷ್ಟದಲ್ಲಿರುವ ಮಂದಿ ಕೊಟ್ಟು ಕೊಟ್ಟು ಸವಿಗಲಿಸಿಬಿಟ್ಟಿದ್ದಾರಮ್ಮ. ರಕ್ತದ ರುಚಿ ಕಂಡ ನಾಯಿ ನಾಯಿಯಾಗಿಬಿಟ್ಟಿದ್ದಾನೆ

ಕಾವೇರಿ - ಇಷ್ಟು ಬಡ್ಡಿ ತಿನ್ನುವದು ತಪ್ಪು ಅಂತ ಅವನಿಗೆ ಯಾರೂ ಹೇಳುವದಿಲ್ಲವೇ ?

ಶೇಷ - ಹೇಳದೇ ಏನಮ್ಮಾ, ಹೇಳಿದವರವನ್ನು ನಿರ್ವಂಶ ಮಾಡಿ ಸೇಡು ತೀರಿಸಿಕೊಳ್ಳುವುದರಲ್ಲಿ ಕೆರಳಿದ ಹುಲಿಯಮ್ಮಾ ಅವನು. ಅಂತಾನೇ ಮಕ್ಕಳಿಲ್ಲ ಮರಿ ಇಲ್ಲ. ನಾಲ್ಕು ಹೆಂಡಿರನ್ನು ಮಾಡಿಕೊಂಡ. ಒಬ್ಬಳಾದರೂ ದಕ್ಕಲಿಲ್ಲ. ನೋಡ್ರೆಮ್ಮ ನಿಮ್ಮ ಯಜಮಾನರಿಗೆ ಹೇಳ್ರಿ. ನಾನು ಬಂದು ಹೋದೆ ಅಂತಾ.... (ಹೋಗುವನು)

ಕಾವೇರಿ - ಆಗಲೆಪ್ಪ ಹೇಳಿತೀನಿ, ಸಾವಿರ ರೂಪಾಯಿಯ ಸಾಲಕ್ಕೆ ಸಾವಿರ ರೂಪಾಯಿ ಬಡ್ಡಿ ತೀರಿಸುವ ಬಗೆ ಎಂತು ? ಏನೇ ಆಗಲಿ ಆದಷ್ಟು ಬೇಗನೆ 'ಮಂದಾಕಿನಿಯ ಮದುವೆ' ಮುಗಿಸಬೇಕು. ಅಂದರೆ ಮಗಳ ಮನೆಯಲ್ಲಿ ನಾನೊಬ್ಬಳು ಸುಖದಿಂದ ಕಾಲ ಹರಣ ಮಾಡಬಹುದು. ಸಾಲ ಮಾಡಿಕೊಂಡವರ ಸಂಕಟ ನಾವೇಕೆ ಅನುಭವಿಸಬೇಕು. ಬೇಕಿದ್ದರೆ ತಂದೆ ಮಗಳು ಅನುಭವಿಸಲಿ

ರಾಜೀವ - (ಗುಂಡಣ್ಣನೊಂದಿಗೆ ಬರುತ್ತ) ಬನ್ನಿ ಗುಂಡಣ್ಣನವರೇ. ಕಾವೇರಿ ಬಂದಾ ನೋಡು ನಿಮ್ಮಣ್ಣ

ಕಾವೇರಿ - ಅಣ್ಣಾ ?

ಗುಂಡಣ್ಣ - ತಂಗೀ ಚೆನ್ನಾಗಿ ಇದ್ದಿಯೇನಮ್ಮಾ

ಕಾವೇರಿ - ಹೀಗಿದ್ದೇನೆ ನೋಡಣ್ಣಾ... ನೀನು ಒಂದು ಸಲವಾದರೂ ಈ ಕಡೆ ಬರಲಿಲ್ಲವಪ್ಪ. ಹದಿನಾರು ವರ್ಷ ಕಳೆಯಿತು

ಗುಂಡಣ್ಣ - ಹೌದಮ್ಮಾ, ಇಲ್ಲಿಗೆ ಬರಬೇಕು ನಿಮ್ಮೆಲ್ಲರನ್ನು ಕಾಣಬೇಕು ಅಂತ ಬಲವಾದ ಆಸೆ ಆಗುತ್ತಿತ್ತಮ್ಮ. ಆದರೆ ಈಗ ವರುಷದ ಹಿಂದೆ ಅವಳು ತೀರಿಕೊಂಡ ಬಳಿಕ ಏನೋ ಒಂದು ಬಗೆಯ ಮಂಕು ಕವಿದ ಹಾಗಾಗಿ ಯಾವುದರಲ್ಲೂ

ನನಗೆ ಆಸಕ್ತಿ ಉಳಿಯಲಿಲ್ಲ. ಬರಲಾಗಲಿಲ್ಲ. ಏನೋ ಅಮ್ಮಾ ಮಗ ಶ್ಯಾಮನ ಮುಖ ನೋಡಿ ಅವಳ ದುಃಖ ಮರೆಯುತ್ತಿದ್ದೇನೆ

ಕಾವೇರಿ - ಅಣ್ಣ ಅತ್ತಿಗೆಗೆ ಏನಾಗಿತ್ತು ?

ಗುಂಡಣ್ಣ - ಅದೇನೋ ಹೊಟ್ಟೆಯಲ್ಲಿ ಹುಣ್ಣಾಗಿತ್ತಂತೆ. ಎಷ್ಟು ತೋರಿಸಿದರೂ ಗುಣವಾಗಲಿಲ್ಲ. ಕೊನೆಗೆ ಕೈ ಬಿಟ್ಟು ಹೋದಳಮ್ಮ ನಿನ್ನ ಅತ್ತಿಗೆ. ಹೋಗಲಿ ಬಿಡಮ್ಮ ನನ್ನ ಗೋಳಿನ ಕಥೆ ನೀವು ಚೆನ್ನಾಗಿದ್ದೀರಾ ?

ರಾಜೀವ - ಏನೋ ಒಂದು ವಿಧವಾಗಿ ನಡೆದಿದೆ

ಮಂದಾಕಿನಿ - (ಬಂದು) ಅವ್ವಾ

ಕಾವೇರಿ - ಬಾರೇ ಮಂದಾ ಇಲ್ಲಿ ನಿಮ್ಮ ಮಾವ ಬಂದಿದ್ದಾರೆ ನಮಸ್ಕಾರ ಮಾಡು

ಗುಂಡಣ್ಣ - ಇವಳೇ ಏನಮ್ಮ ನಿನ್ನ ಮಗಳು ಮಂದಾಕಿನಿ ?

ಕಾವೇರಿ - ಅಹುದಣ್ಣ ಇವಳೇ. ಇನ್ನು ಮೇಲೆ ನಿನ್ನ ಸೊಸೆಯಾಗಿ ನನ್ನ ತವರು ಮನೆಯ ಬಳ್ಳಿ ಇವಳಿಂದಲೇ ಹಬ್ಬಬೇಕಂತ ನನ್ನ ಇಷ್ಟ

ಗುಂಡಣ್ಣ - ಆಯಿತಮ್ಮಾ... ಯೋಗ್ಯವಾದ ವಿಚಾರ. ದೇವರ ಮನಸ್ಸಿಗೆ ಬಂದರೆ ಯಾಕಾಗಬಾರದಮ್ಮಾ ?

ರಾಜೀವ - ಗುಂಡಣ್ಣನವರೇ ನಾವು ಬಡವರು. ಯಾಕೆಂದರೆ ಮೊದಲಿನ ನನ್ನ ಸ್ಥಿತಿ ಉಳಿದಿಲ್ಲ. ನೀವು ಸಿರಿವಂತರು. ಅಲ್ಲದೆ ನಿಮ್ಮ ಮಗನು ಹೆಚ್ಚು ಕಲಿತು ಶಹರದ ರುಚಿ ಕಂಡವನು. ನಮ್ಮ ಹುಡಿಗಿ ಹೆಚ್ಚು ಕಲಿತವಳಲ್ಲ, ಹಳ್ಳಿಯಲ್ಲಿ ಹುಟ್ಟಿ ಬೆಳೆದವಳು. ಅಂತಸ್ತಿನ ಅಂತರದ ಜತೆ ಸಂಸ್ಕೃತಿಯ ಅಂತರವು ಅಡ್ಡ ನಿಲ್ಲುವದೋ ಏನೋ ಎಂದು ....

ಗುಂಡಣ್ಣ - ಸಂಶಯಪಡುವಿರೇನು ? ಅದಕ್ಕೆ ಅವಕಾಶವಿಲ್ಲ. ರಾಜೀವಪ್ಪ ನನ್ನ ಮಗ ಶ್ಯಾಮ ವಿದ್ಯಾವಂತನಿರುವನಷ್ಟೆ ವಿನಯವಂತ. ಶಹರದಲ್ಲಿದ್ದರೂ ಹಳ್ಳಿಯ ಬದುಕನ್ನು ಕಡೆಗಣಿಸುವನಲ್ಲ. ಎಲ್ಲರಿಗೂ ಬೇಕಾದ ಮಲ್ಲಿಗೆಯಂತೆ ಬೆಲ್ಲದ ಅಚ್ಚಾಗಿ ಬಾಳುವನು. ಸದ್ಯಕ್ಕೆ ನಾವಾದರೂ ಹಳ್ಳಿಯವರಲ್ಲವೇ ?

ಕಾವೇರಿ - ಮುಂದಾದರೂ ನೀವು ಸಿದ್ದಾಪುರದಲ್ಲಿಯೇ ಇರುತ್ತಿರೇನಣ್ಣ ?

ಗುಂಡಣ್ಣ - ಇಲ್ಲದಿದ್ದರ ನಮ್ಮ ಭೂಮಿ ನಮ್ಮ ಕೈ ಬಿಟ್ಟು ಹೋಗುತ್ತಿವೆ. ಮಗನು ಊರಿಗೆ ಬಂದ ನಂತರ ಒಕ್ಕಲುತನದಲ್ಲಿಯೇ ಹೆಚ್ಚಿನ ಸುಧಾರಣೆ ಮಾಡಿ ಭೂಮಿಯಲ್ಲಿ ದುಡಿದು ಸ್ವತಂತ್ರವಾಗಿ ಬದುಕುತ್ತಾನಂತೆ. ಅವನಿಗೆ ಅತಂತ್ರ ಜೀವನವಾದ ನೌಕರಿ ಮಾಡುವ ಆಸೆಯಿಲ್ಲ

ರಾಜೀವ - ಹೌದು, ಹೌದು ಈಗ ಉಳುವವನೇ ಹೊಲದ ಒಡೆಯ. ಟೆನೆನ್ಸಿ ಆ್ಯಕ್ಟ್ ಜಾರಿಗೆ ಬಂದಾಗಿನಿಂದ ಹೊಲದೊಡೆಯನಿಗೆ ಕುತ್ತಿಗೆಗೆ ಹಗ್ಗ ಹಾಕಿದಂತಾಗಿದೆ

ಗುಂಡಪ್ಪ - ಆ ರೀತಿ ಮಾಡಿದ್ದು ಒಳ್ಳೆದೇ ಆಯಿತು. ಇಲ್ಲದಿದ್ದರೆ ನಮ್ಮ ಕಣ್ಣು ಭೂಮಿ ತಾಯಿಯತ್ತ ಹೊರಳುತ್ತಿರಲಿಲ್ಲ. ನೋಡು ನಮ್ಮ ಊರ ಸುತ್ತ ತುಂಗಭದ್ರಾ ಜಲಾಶಯದ ಕಾಲುವೆ ಹರಿದು ಬಂದಿದೆ. ಹರಿದು ಬರುವ ನೀರು ಬರೀ ನಿರಲ್ಲ. ಸುವರ್ಣದ ತೇರು. ಅದರ ಬಲದಿಂದ ವರ್ಷಕ್ಕೆ ಮೂರು ಫಲ ಪಡೆಯುತ್ತಾರೆ. ಕಾವೇರಿ ಒಂದು ಎಕರೆ ಭೂಮಿಯಲ್ಲಿ ನಾಲ್ಕು ಸಾವಿರ ಲಾಭ ಪಡೆದುಕೊಳ್ಳಬಹುದು. ಅಂದ ಬಳಿಕ ನೂರ ಇನ್ನೂರು ರೂಪಾಯಿ ಸಂಬಳದ ನೌಕರಿಗಾಗಿ ಅತಂತ್ರವಾಗಿ ಬಿಡುವದಕ್ಕಿಂತ ಭೂಮಿಯಲ್ಲಿ ದುಡಿದು ಸ್ವತಂತ್ರನಾಗಿ ಬಾಳುವದು ಒಳ್ಳೆಯದಲ್ಲವೇ ?

ರಾಜೀವ - ಹೌದು ಗುಂಡಣ್ಣನವರೆ, ನೌಕರಿ ಆಸೆಯಿಂದ ಇದ್ದ ಭೂಮಿಯನ್ನು ಬಂಜೆರು ಗೆಡವಿದ ಪಾಪ ನಮ್ಮ ಸಮಾಜಕ್ಕೆ ಶಾಪವಾಗಿ ಹರಡಿದೆ. ಅದರಿಂದ ಪಾರಾಗದೇ ನಮಗೆ ಮುಕ್ತಿ ಇಲ್ಲ

ಕಲ್ಯಾಣಿ - (ಬರುತ್ತ) ಅಪ್ಪ ಅಪ್ಪಾ ರತ್ನ ಪಕ್ಷಿ ಮುಖ ಕಂಡರೆ ಒಳ್ಳೇದಂತೆ ಹೌದೇನಪ್ಪಾ ? ನಾನು.. (ಮಾವನನ್ನು ಕಂಡು)

ರಾಜೀವ - ಇವಳು ನನ್ನ ಮೊದಲನೆ ಮಡದಿಯ ಮಗಳು ಕಲ್ಯಾಣಿ. ಮಗು ನಿನ್ನ ಮಾವನವರಿಗೆ ನಮಸ್ಕರಿಸಮ್ಮ

ಗುಂಡಪ್ಪ - ಅಹುದು ಲಗ್ನದಲ್ಲಿ ಕಂಡಿದ್ದೆ. ಆಗ ಇವಳು ಎರಡು ತಿಂಗಳ ಕೂಸು. ಎಷ್ಟು ಬೆಳೆದುಬಿಟ್ಟಿದ್ದಾಳೆ. ಏನಮ್ಮಾ ತಂಗಿ, ನಾವು ಈಗ ಒಕ್ಕಲುತನ ಪ್ರಾರಂಭಿಸುವ ಪೂರ್ವದಲ್ಲಿ ಒಂದು ಜತೆ ಎತ್ತುಕೊಳ್ಳಬೇಕಾಗಿತ್ತು. ಆ ಎತ್ತು ಕೊಳ್ಳುವುದಕ್ಕಿಂತ ಈ ನಿನ್ನ ಮಕ್ಕಳನ್ನು ಕೊಟ್ಟುಬಿಡು ಕೊಂಡುಕೊಳ್ಳುತ್ತೇನೆ. ಯಾಕೆಂದರೆ ಹೂಡಲಿಕ್ಕೆ ಜೋಡಿ ಒಳ್ಳೇ ಚೆನ್ನಾಗಿವೆ

ಕಲ್ಯಾಣಿ - ಕೇಳಿದೇನೆ ಅಪ್ಪಾ... ನಿನ್ನ ಅಣ್ಣನ ಕಣ್ಣಿನಲ್ಲಿ ನಾವು ಎತ್ತಾದವು

ರಾಜೀವ - ಹಾಗಲ್ಲಮ್ಮ ನೀವಿಬ್ಬರೂ ಅವರ ಕಣ್ಣಿನಲ್ಲಿ ಶ್ರೀದೇವಿ, ಭೂದೇವಿಯವರಂತೆ ಕಂಡಿದ್ದೀರಿ ತಿಳಿಯಿತೇನು ? ಕಾವೇರಿ ಬಹಳ ದಿನಕ್ಕೆ ನಿಮ್ಮ ಅಣ್ಣ ಮನೆಗೆ ಬಂದರೆ ಬರೆ ಬಾಯ ಉಪಚಾರ ಪ್ರಾರಂಭಿಸಿದೆ. ಅಲ್ಲೆ ಏನಾದರೂ ಸ್ವಲ್ಪ ತಿಂಡಿ ಚಹಾ ಮಾಡಿ ಕೊಡಬಾರದೇ ?

ಗುಂಡಣ್ಣ - ಊಟದ ವೇಳೆಯಾಗಿದೆಯಲ್ಲ ? ಈಗೇಕೆ ತಿಂಡಿ ಚಹಾ

ಮಂದಾಕಿನಿ - ಅಂದ ಹಾಗೆ ಮಾವ ಹಸಿದ ಹೊಟ್ಟೆಯಲ್ಲಿಯೇ ನಮ್ಮ ಮನೆಗೆ ಬಂದಿದ್ದಾನೆ. ಬನ್ನಿ ಮಾವಾ ಅಡಿಗೆಯಾಗಿದೆ ಊಟ ಮಾಡಿ

ಕಾವೇರಿ - ಸಾಕು ಸುಮ್ಮನಾಗಿರೇ, ನಡೆಯಿರಿ ಒಳಗೆ.

## ದೃಶ್ಯ - ೨

### ರಸ್ತಾ ಸೀನಿನಲ್ಲಿ ಶೇಷಪ್ಪ ಪದ ಹಾಡುತ್ತಾ ಬರುವನು

ಶೇಷ - ಪದ

ಈ ಕೆಂಪು ವರ್ಣ । ಈ ಕೆಂಪು ವರ್ಣ । ನೀ ಧರಿಸಿ ಪೂರ್ಣ ಬಡವರದೆಗೆಡಿಸುವ ನಿಷ್ಕರಣಾ । ಸೆಳೆವ ಹರಣ ।। ಪಲ್ಲ ।। ವಂಚನೆ ನಿನ್ನಯ ನಿಲಯ । ವಂಚಿಸಿತನುದಿನ ಜಗವು । ಹಾತೊರೆವುದು ಸಕಲ ಮನವು । ಕಲಿಸುವೆ ಪಾಪಮಾರ್ಗ ಪೂರ್ಣಾ ।। ೧ ।।

ಹಣವೇ ಹೆಚ್ಚಿನ ಮಂತ್ರಾ । ಆ ಮಂತ್ರದೊಳಿರುವದು ತಂತ್ರ । ನಿಜ ತಿಳಿಯದೇ ಬಾಳಿನ ಸೂತ್ರಾ । ನೋಡಲೇ ಮೂಢ ನೀ ತಿಳಿಯೋ ಜಾಣಾ ।। ೨ ।।

ಶೇಷ - ನೀನ್ಯಾಕೋ ನಿನ ಹಂಗ್ಯಾಕೋ ಕೃಷ್ಣ ನಿನ್ನ ನಾಮದ ಬಲವಂದಿದ್ದರ ಸಾಕೋ ಅಂತಾ ಹೇಳಿದ ದಾಸರು ಸುಮ್ಮನೇ ಹೇಳಿಲ್ಲ. ಯಾಕ ಅಂದ್ರ ಹೆಸರಿನ ಮ್ಯಾಲ ಹಣ್ಣು ಮಾರುವದು ಈ ಪ್ರಪಂಚದಲ್ಲಿ ಪದ್ಧತಿ. ಅದು ಒಳ್ಳೇದೇ ಇರಲಿ, ಕೆಟ್ಟದ್ದೇ ಇರಲಿ, ಮಾರುವ ದಿಟ್ಟತನ ಇದ್ದರೆ ಸಾಕು. ಬೇಕಿದ್ದರ ವಿಚಾರ ಮಾಡಬಹುದು. ಉದಾಹರಣೆಗೆಂತ ಹೇಳತೀನಿ, ಗುಡಿಗೆ ಬರುವ ಎಡೆ ದೇವರ ಹೆಸರಿಗೆ, ಒಡಲು ತುಂಬುವದು ಮಾತ್ರ ಪೂಜಾರಿಗೆ. ಕಚೇರಿ ಕೆಲಸ ಆಗೋದು ಕಲೆಕ್ಟರರಿಂದ ಹೊರಗೆ ಬರುವಾಗ ಕೈ ಬರಿದಾಗುವದು ಕಾರಾಕೂನರಿಂದ. ಹಂಗ ಸಾಲಾ ಹುಟ್ಟೋದು ನಮ್ಮ ಸಾಹುಕಾರರಿಂದ, ಸಾಲಗಾರ ಮಾನ ಉಳಿಯಬೇಕಾದರೆ ನಮ್ಮಿಂದ. ಎಷ್ಟು ವಿಚಾರ ಮಾಡಿ ಇಟ್ಟರೂ ಈ ಕಾರಕೂನ ಅಂತಾ ಹೆಸರು ಸಾಹುಕಾರನ ಖೂನ ಆದರೂ ಆಗಬಹುದು, ಇಲ್ಲಾ ಸಾಲಗಾರರ ಖೂನ ಆದರೂ ಆಗಬಹುದು. ಒಟ್ಟಿಗೆ ಒಂದು ಮಾತು... ನಮ್ಮ ಕಾರ್ಯ ನಡೆಯಬೇಕು, ಹೆಸರು ಸಾಹುಕಾರಂದು, ಕೆಲಸ ನಮ್ಮದು

ಈ ಮೊದಲ ನಾಟಕ ಕಂಪನಿಯಲ್ಲಿ ಮ್ಯಾನೇಜರನಾಗಿದ್ದು ಮರ್ಯಾದೆ

ಕಾಯ್ದುಕೊಂಡೆ. ಕೈ ನಡೆಯುವ ಕಾಲದಲ್ಲಿ ನಾಲ್ಕು ಕಂಪನಿ ಉಳಿಸಿದೆ. ಎಂಟು ಮಂದಿ ಬದುಕಿಸಿದೆ. ಕೈ ನಿಂತ ಕಾಲದಲ್ಲಿ ನಾಲ್ಕು ಕಂಪನಿ ಸಾಯಿಸಿದೆ. ಹದಿನೆಂಟು ಜನರನ್ನು ಬದುಕಿಸಿದೆ. ಆ ಮೇಲೆ ಈ ಊರ ತಿರುಗುವದು ಸಾಕೆನಿಸಿ ನಮ್ಮ ಸಾಹುಕಾರರಲ್ಲಿ ಗುಮಾಸ್ತನಾಗಿ ನಿಂತೆ ಡೇಂಜರ ಮಾರ್ಕಿನ ಕೆಂಪು ವಹಿ ಕಂಕುಳದಲ್ಲಿ ಇಟ್ಟುಕೊಂಡು. ಈ ವಹಿ ಬಲ್ಲವನೇ ಬಲ್ಲ. ಇದನ್ನು ಇಟುಕೊಂಡು ಬಜಾರದಲ್ಲಿ ಹೊರಟೆ ಅಂದರೆ ಎಂಥಾ ಮರ್ಯಾದಿ. ಛೆ, ಛೆ, ಕಂಪನಿಗೆ ಲಾಯಿಸನ್ಸಿಗೆ ಹೋದಾಗ ದೊರಕಲಿಲ್ಲ ಈ ಮರ್ಯಾದಿ ಈ ವಹಿ ಬಲದಿಂದಾಗಿ ಶೇಷಾ ಅಂತಾ ಕರೆಯಿಸಿಕೊಳ್ಳುತ್ತಿದ್ದ ನಾನು ಈಗ ಶೇಷಣ್ಣಾ, ಶೇಷಪ್ಪ,. ಶೇಷಪ್ಪನವರೇ ಅಂತಾ ಸಹಿತ ಕರೆಯಿಸಿಕೊಳ್ಳಹತ್ತಿರುವೆ. ಅಂದ ಬಳಿಕ ಇದರ ಬೆಲೆ ಎಷ್ಟು ದೊಡ್ಡದಾಯಿತು ? ಆಗದೇನು ಮಾಡತವ ಬಹಳ ಜನರ ಭವಿಷ್ಯನ ಇದರೊಳಗೆ ಬರದ ಬಂದೈತಿ. ಮುಂಜಾನೆ ಒಂದ ಸಲ ಸಾಲಗಾರರ ಮನೆಗೆ ಹೋದರೆ ಸಾಕು ಪುಕ್ಕಟ ಎಲ್ಲಾ ಪುಕ್ಕಟ ಆದರ ಈ ವಹಿ ಮಾತ್ರ ಕಂಕುಳದಲ್ಲಿ ಇರಬೇಕು. ಅಹಃ ಅಹಃ ಹೇ ಡೇಂಜರ ಮಾರ್ಕಿನ ಕೆಂಪು ವರ್ಣದ ದೇವತಾ ಏನು ನಿನ್ನ ಆತ್ಮಕಥಾ

(ಪದ - ಈ ಕೆಂಪು ವರ್ಣ)

ರಂಗಣ್ಣಾ - (ಬರುತ್ತ) ಹಾದಿಯೊಳಗ ಮಾತಾಡತಾ ನಿಂತಿದ್ದಿಯಲ್ಲ ಶೇಷಾ ? ಯಾಕ ಮತ್ತ ಹಿಡಿತೇನು ನಾಟಕದ ಹುಚ್ಚು

ಶೇಷ - ಇದು ನಾಟಕದ ಹುಚ್ಚಲ್ಲ ಯಜಮಾನರೇ, ಜೀವನದ ಹುಚ್ಚು

ರಂಗಣ್ಣಾ - ಜೀವನದ ಹುಚ್ಚೋ ನನ್ನ ಸಾಹುಕಾರಕಿ ನೋಡಿ ಪಡುವ ಹೊಟ್ಟೆ ಕಿಚ್ಚೋ

ಶೇಷ - ಹೊಟ್ಟೆ ಇದ್ದವರಿಗೆ ಹೊಟ್ಟೆ ಕಿಚ್ಚು .... ಆದರೆ ಬಡವರಿಗೆ ಎಲ್ಲಿದೆ ಹೊಟ್ಟೆ

ರಂಗಣ್ಣಾ - ಬಡವರಿಗೆ ಹೊಟ್ಟೆನೇ ಇಲ್ಲವೇ ?

ಶೇಷ - ಇಲ್ಲ. ಪಂಚವಾರ್ಷಿಕ ಯೋಜನೆಯ ಪ್ರಭಾವದಿಂದ ಜೀವನಾಶ್ಯಕ ಪದಾರ್ಥಗಳ ಬೆಲೆ ಐದು ಪಟ್ಟು ಏರಿ ಆಹಾರದ ಅಭಾವ ಮಾಡಿ ಬಡವರ ಅರ್ಧಹೊಟ್ಟೆ ಸರಕಾರ ಸುಟ್ಟಿತು. ಇನ್ನರ್ಧ ಹೊಟ್ಟೆಯನ್ನು ಕಳ್ಳ ಪೇಟೆಯಲ್ಲಿ ನೀವು ಸಿರಿವಂತರು ಸುಟ್ಟಿರಿ. ಇನ್ನೆಲ್ಲಿ ಬಡವರಿಗೆ ಹೊಟ್ಟೆ ಉಳಿದಿರುವದು, ಬೆನ್ನಷ್ಟೆ

ರಂಗಣ್ಣಾ - ಈ ಮಟ್ಟಕ್ಕೆ ಇರಬೇಕಾದರ ನಾನು ಎಷ್ಟು ಕಷ್ಟಪಟ್ಟೆ

ಶೇಷ - ಇರದಿದ್ದರ ಬೆಳಿತಿತ್ತೇನ್ರಿ ನಿಮಗ ಇಂಥ ದೊಡ್ಡ ಹೊಟ್ಟೆ

ರಂಗಣ್ಣಾ - ಮನಸು ಕೆಟ್ಟ ಮಾಡಿದರ ಸಾಕು ಶೇಷಾ. ಮನಶ್ಯಾ ಸಟ್ಟನೆ ಸಿರಿವಂತ ಆಗತಾನ

ಶೇಷ - ಒಪ್ಪಿಕೊಂಡೆ ಯಜಮಾನ್ರ. ಅಂಥಾ ಬುದ್ಧಿ ಕಳಕೊಂಡ ಮ್ಯಾಲೇ ನೌಕರಿಗ

ನಿಂತುಕೊಂಡೆ

ರಂಗಣ್ಣಾ - ಹಿಂಗ ಹಾದಿಗೆ ಬಾ. ಅದಿರಲಿ ಎಷ್ಟಾಯಿತೊ ಇವತ್ತ ಬಡ್ಡಿ ವಸೂಲಿ

ಶೇಷ - ಆಗ ಬೇಕಾದಷ್ಟು ಆಯಿತಲ್ಲ ಯಜಮಾನ್ರೆ

ರಂಗಣ್ಣಾ - ಆಗಬೇಕಾದಷ್ಟು ಆಯಿತೆಂದರೆ ಮುಂದಿನದು ಹೇಗಪ್ಪ ಶೇಷಾ ?

ಶೇಷ - ಅದೇ ಯಜಮಾನರೆ ನನ್ನ ಹೆಸರು ಶೇಷ ಉಳದದ್ದಕ್ಕ ಅರ್ಥನೂ ಶೇಷಾ

ರಂಗಣ್ಣಾ - ಅಲ್ಲ ನಿನ್ನ ಸೌಕರಿ ಇಟಗೊಂಡು ನನ್ನ ಮನೆ ನಾಮ ಶೇಷಾ. ನಿನ್ನಿಂದ ಸುಖ ಇಲ್ಲ ಶೇಷ

ಶೇಷ - ಹಾಗಲ್ಲ ಯಜಮಾನರೇ ನಿಮ್ಮಲ್ಲಿ ಸಾಲಾ ಮಾಡಿದವರ ಮನೆ ನಾಮ ಶೇಷಾ ಅನ್ರಿ

ರಂಗಣ್ಣಾ - ಹೋಗಲಿ ಬಿಡಪ್ಪಾ ಶೇಷಾ

ಶೇಷ - ಹೇಳ್ರಿ ಯಜಮಾನ್ರೆ ಮತ್ತೇನು ವಿಶೇಷ ? ಇತ್ತ ಕಡೆಯಿಂದ ದಯಮಾಡಸ್ತಲ್ಲ ತಮ್ಮ ಸವಾರಿ

ರಂಗಣ್ಣಾ - ಅದೇ ಹೊಸ ಮನಿ ನೋಡೋಣ ಅಂತಾ ಹೋಗಿದ್ದೆ ಶೇಷಾ. ಮನೆ ಕಟ್ಟಿಸುವ ಕೆಲಸ ಇವತ್ತಿಗೆ ಪೂರ್ತಿ ಮುಗಿದಂತಾಯಿತು ನೋಡು

ಶೇಷ - ನಿಮ್ಮ ಹೊಸ ಮನಿ ಮುಗಿಯುವ ಹೊತ್ತಿಗೆ ಬಡವರ ಮನಿ ಎಷ್ಟು ಮುರಿದವು ಯಜಮಾನ್ರೆ

ರಂಗಣ್ಣಾ - ಯಾರ ಮನಿ ಮುರಿದರ ನನಗೇನಪ್ಪ. ನನ್ನ ಮನೆಯೊಂದು ಮುಗಿತು ಸಾಕು

ಶೇಷ - (ಸ್ವ) ಮುರಿತೈತ್ರಿ ಯಜಮಾನರೇ ಒಂದಿಲ್ಲ ಒಂದು ದಿನ ಈ ಶೇಷನ ಕೈಯಲ್ಲಿ ನಾಲವತ್ತು ಜನರಿದ್ದ ನಾಲ್ಕು ನಾಟಕ ಕಂಪನಿ ಮುರಿದ ಈ ನನ್ನ ಕೈಗೆ ನಿನ್ನ ಮನಿ ಮುರಿಯೂದು ಏನು ಮಹಾ (ಪ್ರ) ಆಯಿತಲ್ಲ ಯಜಮಾನರೇ !

ರಂಗಣ್ಣಾ - ಐತಪ್ಪ ಹೊಸಮನಿ ಲಕ್ಷ್ಮಿ ಪೂಜಾ

ಶೇಷ - ಹೌದಲ್ಲ ಯಜಮಾನರೇ ನಿಮ್ಮ ಹೊಸಮನಿ ಮುಗಿಯೋ ಹೊತ್ತಿಗೆ ಅಷ್ಟು ಲಕ್ಷ್ಮಿ ಪೂಜಾ ಆಗುವವರೆಗೆ ಇನ್ನೆಷ್ಟು ಮನಿ ಪೂಜಾ ಆಗಬೇಕು ಹೇಳ್ರಿ. ಸಿದ್ಧವಾಗಿ ಇದ್ದಾನ ನಿಮ್ಮ ಶೇಷಾ

ರಂಗಣ್ಣಾ - ಮನಿ ಪೂಜಾ ಆಗಿಬಿಟ್ಟರೆ ಮುಗಿಯಲಿಲ್ಲ ಶೇಷಾ .... ಮನಿ ಕಟ್ಟಿಸಿದರ ನನ್ನ ಮದವಿ ಆಗಬೇಡವೆ

ಶೇಷ - ಈ ವಯಸ್ಸಿನಲ್ಲಿ ಮದುವೆ ಆಗತೀರ ನೀವು ?

ರಂಗಣ್ಣಾ - ವಯಸ್ಸು ಏನು ಮಾಡಿತಪ್ಪ ಶೇಷಾ. ಏನೆಲ್ಲಾ ಮಾಡಿಸೂದು ಹಣ

ಶೇಷ - ಹಣ ಇರಲಿ ಯಜಮಾನರೇ, ಈಗ ನೀವು ನಾಲ್ಕು ಮದುವಿ ಮಾಡಿಕೊಂಡಿರುವಿರಿ

ರಂಗಣ್ಣ - ಹೌದಪ್ಪ. ಇನ್ನು ಮುಂದೆ ಮಾಡಿಕೊಳ್ಳುವ ಮದವಿ ಐದನೇಯದು. ಆದರೇನಾಯಿತು ? ನಾಲ್ಕು ಜನ ಹೆಂಡರಲ್ಲಿ ಒಬ್ಬಳಾದರೂ ಉಳಿದರೆ ನಾನ್ಯಾಕ ಮದುವಿ ಆಗುತ್ತಿದ್ದೆ ? ನೋಡ ಶೇಷ ಮನಿ ಆಯಿತು. ಹೊಲಾ ಆಯಿತು. ಸಾಕಷ್ಟು ಸಂಪತ್ತು ಕೂಡಿತು. ಆದರೆ ಮನಸ್ಸಿಗೆ ಸುಖ ಕೊಡಲಿಕ್ಕೆ ವಂಶ ಬೆಳಗಿಸುವದಕ್ಕೆ ಅಂಥ ಒಂದು ಹೆಣ್ಣು ದೇವಿ ಬೇಕಲ್ಲ

ಶೇಷ- ಬೇಕಪ್ಪ ಬೇಕು, ಏನು ಇರುವದೆಲ್ಲಾ ಸುಖ ಅಲ್ಲೇ

ರಂಗಣ್ಣ - ಇರಲಿ ಆ ರಾಜೀವನ ಮನೆಗೆ ಹೋಗಿದ್ದೇನು ಬಡ್ಡಿ ವಸೂಲಿಗೆ

ಶೇಷ - ಹೋಗಿದ್ದೆನಲ್ಲ ಯಜಮಾನರೇ, ಯಾಕ ?

ರಂಗಣ್ಣ - ಏನಂದಾ ಆ ಬಡವಾ

ಶೇಷ - ಅವನ ಮನೆಯಲ್ಲಿ ಅವನ ಹೆಂಡತಿ ಅಣ್ಣ ಗುಂಡಪ್ಪ ಬಂದಿದ್ದಾನೆ ಅದಕ್ಕೆ....

ರಂಗಣ್ಣ - ಈಗೇನು ಕೇಳುದಂತ ಹಾಗೇ ಬಂದುಬಿಟ್ಟೆ ಹೌದಲ್ಲೋ

ಶೇಷ - ಹೌದು ಯಜಮಾನರೇ, ಮನೆಗೆ ಬೀಗರು ಬಂದಾಗ ಕಣ್ಣೆನಿಂದ ಕಂಡೂ ಅದು ಹ್ಯಾಂಗ ಕೇಳುವದು

ರಂಗಣ್ಣ - ಅಲ್ಲೇ ಇರೋದು ಶೇಷಾ ಜಾಣತನ, ಎಷ್ಟು ಸಲ ಹೇಳಿ ಕೊಡಬೇಕು ವ್ಯವಹಾರದ ರೀತಿನಾ ? ಮನೆಗೆ ಯಾರಾದರೂ ಸಂಬಂಧಿಕರು ಬಂದಾಗ ಸಾಲ ಕೇಳುವದು ಹೆಚ್ಚು ಮಾಡಿ, ಮಾನಕ್ಕೆ ಚ್ಯುತಿ ತರಬೇಕು ತಿಳಿತೇನು

ಶೇಷ - ತಿಳಿಯಿತು. ಆಗಲಿ ಯಜಮಾನರೆ ಇನ್ನು ಮೇಲೆ ಹಾಗೆ ಮಾಡತೀನಿ

ರಂಗಣ್ಣ - ಹೋಗಲಿ ಆ ಗುಂಡಪ್ಪ ಏಕೆ ಬಂದಾನಂತ ಕೇಳಿದೆಯೇನು ?

ಶೇಷ - ಅದೇನೋ ತನ್ನ ಮಗನಿಗೆ ಕನ್ಯೆ ನೋಡಲಿಕ್ಕೆ ಬಂದಾನಂತ ಯಜಮಾನರೇ

ರಂಗಣ್ಣ - ಕನ್ನೆ ನೋಡಲಿಕ್ಕ, ಯಾರ ಮನೆಯಲ್ಲಿ ?

ಶೇಷ - ಇನ್ನಾರ ಮನೆಯಲ್ಲಿ. ಆ ರಾಜೀವಪ್ಪನ ಮನೆಯಲ್ಲಿ ಮದುವೆಗ ನಿಂತ ಹುಡಿಗಿಯರು ಒಂದಲ್ಲ ಎರಡಿಲ್ಲವೇ ?

ರಂಗಣ್ಣ - ಏನಾರ ಆಯಿತ ?

ಶೇಷ - ಆಗಿರಬೇಕಂತ ಕಾಣುತ್ತ

ರಂಗಣ್ಣ - ಹಾಗೇ ಆಗಲಿ ನೋಡಕೊಂತೀನಿ

ಶೇಷ - ಅಲ್ಲ ಯಜಮಾನರೇ, ಸಾವಿರ ರೂಪಾಯಿ ಸಾಲ ಕೊಡಲಿಕ್ಕೆ ಅಸಮರ್ಥನಾದ

ಆ ರಾಜೀವಪ್ಪ, ಇನ್ನು ಬಡ್ಡಿ ಎಲ್ಲಿಂದ ತಂದುಕೊಟ್ಟಾನು ಅಂತ

ರಂಗಣ್ಣ - ಮಂದಮುಂದೇದ್ದ, ಹಣ ತೆಗೆದುಕೊಳ್ಳೊದು ಹಣ ಕೊಟ್ಟ ನನಗೇ ಗೊತ್ತು. ಕೊಟ್ಟ ಹಣಕ್ಕೆ ಬದಲಾಗಿ ಆ ರಾಜೀವಪ್ಪನ ಮಗಳನ್ನು ಕೊಂಡು ಮುಟ್ಟಿಸಿಕೊಳ್ಳಬಹುದು. ಶೇಷಾ ಆ ಬಡ ರಾಜೀವನಿಗೆ ಮದುವೆ ವಯಸ್ಸಿಗೆ ಬಂದ ಮಗಳು, ತಾಯಿ ಸತ್ತ ಪರದೇಸಿ ಮಗಳಿದ್ದಾಳೆ ಗೊತ್ತೇನೊ ?

ಶೇಷ - ಗೊತ್ತಿಲ್ಲ ಯಜಮಾನರೇ, ಆ ಹುಡುಗಿ ಕಲ್ಯಾಣಿ ಕಂಚಿನ ಗೊಂಬೆ ಹಾಗೆ ಇದ್ದಾಳೆ. ಅಂತೂ ಈ ನಿಮ್ಮ ಹದ್ದಿನ ಕಣ್ಣು ಆ ಮುದ್ದು ಹುಡಿಗೆ ಮೇಲೆ ಬಿತ್ತು ಏನ್ರಿ

ರಂಗಣ್ಣ - ಆ ಕಲ್ಯಾಣಿ ನನ್ನ ಕಣ್ಣಿಗೆ ಬೀಳದೇ ಹೋಗಿದ್ದರೆ ಏಕಾಏಕಿ ಸಾವಿರ ರೂಪಾಯಿ ಸಾಲಾ ಕೊಡಲಿಕ್ಕೆ ನನ್ನ ತಲೆ ಕೆಟ್ಟಿದೆಯೆಂದು ತಿಳಿದಿಯೇನೋ ಶೇಷಾ

ಶೇಷ - ಒಪ್ಪಿಕೊಂಡೆ ಯಜಮಾನರೇ ಒಪ್ಪಿಕೊಂಡೆ

ರಂಗಣ್ಣ - ಅಯ್ಯೋ ಪ್ರಾಣಿ ನೀ ಯಾಕೆ ಒಪ್ಪಿಕೊಂತಿಯಾ

ಶೇಷ - ಹೌದಲ್ಲ ಯಜಮಾನರೇ ಒಪ್ಪಿದರ ಏನಾಗಬೇಕು. ಮಗಳನ್ನು ಕೊಡಲಿಕ್ಕೆ ರಾಜೀವ ಒಪ್ಪಬೇಕಲ್ಲ

ರಂಗಣ್ಣ - ಅವರಪ್ಪ ಒಪ್ಪತಾನೆ, ಅವರಪ್ಪ. ಹಣಕ್ಕೆ ಹೆಣ ಕೂಡಾ ಬಾಯಿ ತೆರೆಯುವಾಗ ಮನುಷ್ಯನೇನು ಮಹಾ ? ಶೇಷಾ ಸಾಲಾ ಅನ್ನೋದು ಗಂಡಸಿಗೆ ಗಂಡ ಇದ್ದಂತೆ. ಒಂದು ವೇಳೆ ಆ ರಾಜೀವ ಸಾಲಕ್ಕಂಜಿ ಮಗಳ ಕೊಡಲು ಒಪ್ಪದಿದ್ದಲ್ಲಿ ಅವನ ಎರಡನೇ ಹೆಂಡತಿಗೆ ಹಣದಾಸೆ ಹಚ್ಚಿಯಾದರೂ ಆ ಕಲ್ಯಾಣಿಯನ್ನು ಹಾರಿಸುವ ಹಂಚಿಕೆ ಮಾಡಬೇಕು. ಅವಳಿಗಂತೂ ಈ ಹುಡುಗಿ ಹೊಟ್ಟೆ ಮಗಳಲ್ಲ, ಹೇಳಿ ಕೇಳಿ ಸವತಿಯ ಮಗಳು. ಸಾಲ ಹೋಗಿ ಸವತಿಯ ಮಗಳಿಗೆ ಮದುವೆಯಾಗಿ ಕೈಗೆ ಹಣ ಬರುವದೆಂದರೆ ಅವಳು ಒಪ್ಪುವದಷ್ಟೇ ಅಲ್ಲ, ತನ್ನ ಗಂಡನನ್ನು ಒತ್ತಾಯದಿಂದ ಒಪ್ಪಿಸುತ್ತಾಳೆ. ಶೇಷಾ ಈ ರಂಗಣ್ಣಾ ಹಾಕಿದ ಅಡಿಪಾಯ ಎಂದೂ ಅದ್ರ ಆಗುವುದಿಲ್ಲ. ನೋಡು ಶೇಷಾ ಗುಲಾಬಿ ವರ್ಣದ ಹೆಣ್ಣು ನನ್ನ ಕೈ ಹಿಡೀತಂದ್ರ ನಾನೇ ಇಂದ್ರ. ಭೂಲೋಕದಲ್ಲಿ ಚಂದ್ರ. (ಅಚ್ಚಮ್ಮ ಬರುವಳು)

ರಂಗಣ್ಣ - ಏನಚ್ಚಿ ಬಂದೆಲ್ಲ ಎಲ್ಲಿಂದ ?

ಅಚ್ಚಮ್ಮ - ಮತ್ತೆಲ್ಲಿಂದ ನಮ್ಮ ಮನೆಯಿಂದ

ರಂಗಣ್ಣ - ಕಾಯಿಪಲ್ಲೆ ಕಳಿಸಿದ್ದೆಲ್ಲಾ ಬಂತಾ

ಅಚ್ಚಮ್ಮ - ಬಂತ್ರಿ ಸಾಮಕಾರ್ರ. ಅಡಿಗೆ ಮಾಡಿ ಇಟ್ಟು ಬೆಂಕಿ ಹಾಕಿ ಬಂದೀನಿ

ಶೇಷ - ಏನು ಸಾಹುಕಾರ್ರ ಮಸಿಗ್ಯಾ

ಅಚ್ಚಮ್ಮ - ಮನಿಗಲ್ರಿ ನೀರೊಲಿಗೆ, ಸಾಹುಕಾರು ಸ್ನಾನಾ ಮಾಡ್ತಾರಂತ

ಶೇಷ - ಹಾಂಗ ಆಗಲಿ. ಏನ ಅಚ್ಚಮ್ಮಾ ಎಲ್ಲಾ ಅಚ್ಚುಕಟ್ಟಾಗಿ ನಡೆದೈತಾ

ಅಚ್ಚಮ್ಮ - ಮೆಚ್ಚಿ ಮದುವೆ ಆಗು ಗುಂಡ ಸಿಕ್ರ ನಡದೀತಪಾ ನಂದು ಅಚ್ಚುಕಟ್ಟಾಗಿ. ಆದರ, ನನ್ನಂಥಾ ಪರದೇಸಿಯದು ಏನು ನಡಿತೈತಿ, ಅಚ್ಚಗಿದ್ದಲ್ಲಿ ಮೇದು ಬೆಚ್ಚಗ ಇದ್ದಲ್ಲೇ ಮಲಗೂದೆ ಆಗೇತಿ ನನ್ನ ಬಾಳು

ಶೇಷ - ಕಾಲ ಬಂದೀತು ಅಚ್ಚಮ್ಮ, ನಿನ್ನ ತಲಿಮ್ಯಾಲೆ ಅಕ್ಕಿಕಾಳು ಬಿದ್ದು ನೀನು ಮುತ್ತೈದಿ ಆಗು ಅಂತಾ ಕಾಲಾ ಬಂದೀತು

ರಂಗಣ್ಣ - ಕಾಲ ಬರುದ್ರೊಳಗೆ ಇವಳ ತಲಿ ಹೋಗತೈತಿ ಅಲ್ಲ. ಕಂಡು ಕಂಡು ಈ ಬಣ್ಣದ ಹೆಣ್ಣಿನ ಕೈ ಹಿಡಿಯೋ ಗಂಡು ಒಬ್ಬ ಸಿಗಬೇಕಲ್ಲ

ಅಚ್ಚಮ್ಮ - ಯಾಕ ಕಪ್ಪು ಇದ್ದರೆ ಯೇನಾತು, ನಾ ಹೆಣ್ಣಲ್ಲೇನು ?

ರಂಗಣ್ಣ - ಹೆಣ್ಣು ಹೌದು, ಸೀರೆ ಉಟ್ಟು ಕುಬುಸಾ ತೊಟ್ಟಿಯಲ್ಲಾ ಹೆಣ್ಣು ಅನದಿದ್ದರ ಹ್ಯಾಂಗ ? ನಿನಗ್ಯಾಕ ಹಿಡಿತಲೇ ಮದುವಿ ಹುಚ್ಚು. ಅಮವಾಸಿ ಬಣ್ಣದಾಕಿ ನಿನಗ್ಯಾಕ ಮದುವಿ ಹುಚ್ಚು

ಅಚ್ಚಮ್ಮ - ಯಾಕ ನಾ ಏನ ಚಂದಿಲ್ಲಾ, ನಾ ಕಪ್ಪಗಿದ್ರೂ ಕಳಾ ಅದೀನಿ. ಕತ್ತೀವರಿ ಆಗೀನಿ

ರಂಗಣ್ಣ - ಕತ್ತಿವರೀ ಆಗಿಲ್ಲಾ ನೀನು ಕತ್ತಿ ಮರಿ ಆಗೀದಿ. ಕನಡ್ಯಾಗ ನೋಡಿಕೋ ಒಂದ್ಸಲ ನಿನ್ನ ರತಿ ರೂಪಾನ. ಅಂದಗೇಡಿ ಹಳೇ ಅಂದಗೇಡಿ ಚಂದಿಲ್ಲಾ ಅಂತಾ ಕೇಳತಾಳ. ಆರೇದ ಹುಡುಗರು ಬೆಳದಿಂಗಳದಾಗ ನೋಡಿಬಿಟ್ರ ದರಗಾಕ ಹೋಗಿ ಅಂತ್ರಾ ಕಟ್ಟಿಸಿಕೋಬೇಕು. ಮೋರ್ಯಾಗ ಹಲ್ಲು ಒಂದೇ ಕಾಣತಾವ ಬೆಳ್ಳಗ

ಶೇಷ - ಅಲ್ಲಾ ಯಜಮಾನರೇ ನನ್ನ ತಲ್ಯಾಗ ಒಂದು ವಿಚಾರ ಬಂದೈತಲ್ಲ

ರಂಗಣ್ಣ - ಮತ್ತೇನ ಬಂತಪಾ ವಿಚಾರ, ಅದಕ್ಕ ಮತ್ತ್ಯಾರ ತಲಿ ಸಿಗಲಿಲ್ಲ

ಶೇಷ - ನಿಮಗ ಒಳ್ಳೇದಾಗ್ಲಿ ಅನ್ನೂ ವಿಚಾರ ನನ್ನ ತಲ್ಯಾಗ ಬರ್ತ ಇನ್ಯಾರ ತಲ್ಯಾಗ ಬರಬೇಕು. ನೋಡ್ರಿ ಸದ್ಯಾ ನೀವಂತೂ ಮದುವಿ ಮಾಡಿಕೊಳ್ಳಾಕ ತಯಾರ ಆಗಿರಿ. ಅಂದ ಮೇಲೆ ಈ ಅಚ್ಚಮ್ಮನ್ನ ಯಾಕ ಮಾಡ್ಕೋಬಾರ್ದು ?

ರಂಗಣ್ಣ - ಏನು ನಾನು ಇವಳನ್ನು ಮದುವಿ ಮಾಡಿಕೊಳ್ಳಲ್ಯಾ ?

ಶೇಷ - ಹೌದು ಈ ಅಚ್ಚಮ್ಮನ ಜರಾ ನೀವು ಮದುವಿ ಆಗಿಬಿಟ್ಟಿರ ನಿಮ್ಮ ಸಂಸಾರ ಇಷ್ಟ ಅಚ್ಚುಕಟ್ಟಾಗಿ ನಡಿತೈತಿ. ಛೆ, ಛೆ, ನಾನೇನ ಹೇಳ್ಲಿ ಯಜಮಾನರೇ ನಿಮಗ ಬೆಚ್ಚನ್ನ ಮನಿಯುಂಟು, ವೆಚ್ಚಕ್ಕೆ ಹೊನ್ನು ಉಂಟು, ಇಚ್ಛೆಯರಿತ ಈ ಅಚ್ಚಮ್ಮ ನಿಮ್ಮ ಸತಿಯಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಾ ಶೇಷಾ

ರಂಗಣ್ಣ - ಏನಲೇ ಶೇಷಾ ನೀನು ಸರ್ವಜ್ಞನ ತುಂಡು ಆದೆಲ್ಲೋ

ಶೇಷ - ತುಂಡರ ಅಗ್ಲಿ, ತುಕುಡೆರ ಆಗ್ಲಿ ನೀವು ಹೂಂ ಅನ್ರಿ. ಯಾಕಚ್ಚಮ್ಮ ನಿನ್ನ ಒಪ್ಪಿಗೇ ಅದ ಇಲ್ಲ ಮತ್ತೆ

ಅಚ್ಚಮ್ಮ - ಸಾಹುಕಾರು ಹೂಂ ಅಂದ್ರ ನಾನೇನಪ್ಪ ತಯ್ಯಾರ

ರಂಗಣ್ಣ - ಹೂಂ ಅಂದಾರ, ಅನ್ನದೇನು ಮಾಡ್ಯಾರು, ಎಲೇ ಅಚ್ಚಿ ನಿನ್ನ ಯಾರರ ಮದುವಿ ಅಕ್ಕಾರಂತ ಮಾಡಿದೇನೆಲೇ ?

ಅಚ್ಚಮ್ಮ - ಮತ್ತ ನಿಮಗರ ಏನ ಕನ್ಯಾ ಸಿಗತದ ಅಂತಾ ತಿಳಿದೀರೇನು ನೀವು

ರಂಗಣ್ಣ - ಯಾಕ ಸಿಗಾಕಿಲ್ಲೇನು, ನಾವೇನಾಗೀವಿ

ಅಚ್ಚಮ್ಮ - ನೀವು ಏನಾಗೀರಿ ಮಂಡ ಗಣಸಾಗಿರಿ, ಸಾಯು ದಿವಸಾ ಸಮಿಪ ಅದಾವ. ಮದುವಿ ಅಕ್ಕೀವಿಂತಾ ಹೇಳಬ್ಯಾಡ್ರಿ. ಸುಡಗಾಡಿಗೇ ಹೊಕ್ಕಿವಂತಾ ಹೇಳ್ರಿ. ಇವತ್ತು ಮನ್ಯಾಗ, ನಾಳೆ ಮಣ್ಣಾಗಲಿ ಇದರ ಮ್ಯಾಲೆ ಮದವಿ ಅಕ್ಕಾರಂತ. ಮಾರಿಮ್ಯಾಲೆ ಚಿವುಟಿದ್ರ ಹಸಿನೆತ್ತರ ಹೊಂಡೋದಿಲ್ಲ. ಗಂಡಲ್ಲ ಒಣ ಕಟಗಿ ತುಂಡು

ರಂಗಣ್ಣ - ಏನಲೆ ಅಚ್ಚಿ ಬಾಯಿ ಬಲೇ ಉದ್ದ ಬಿಟ್ಟಿ ? ಹೇಳಿ ಕೇಳಿ ಅಡಿಗಿ ನೀರಿನ ಕೆಲಸ ಮಾಡೋ ಹುಡುಗಿ ನೀನು. ನಿನಗೇನು ಗೊತ್ತು ನನ್ನ ಸಮಾಚಾರ. ರತಿ ಅಂತ ಹೆಣ್ಣು ತಂದು ಲಗ್ನ ಅಕ್ಕೀನೊ ಇಲ್ಲ ನೋಡಿ ಅಂತ ನೀನು

ಅಚ್ಚಮ್ಮ - ನೋಡಿನಲ್ಲ ಹಿಂದ್ಕ ನಿಮ್ಮ ಹೆಂಡತಿ ಕತೀನ. ಮದುವೀ ನಿಮ್ಮ ಕೂಡ ಮಾಡಿಕೊಂಡು ಓಡಿ ಹೋದಳಲ್ಲ ಮತ್ತೊಬ್ಬನ್ನ ಕಟ್ಟಿಕೊಂಡು. ಅವಳು ಮಾಡಿದಾಂಗ ಮುಂದೆ ಬಂದವಳೂ ಮಾಡಿದಳು. ಕಡೀಗೆ ನಿಮ್ಮ ಕೈಗೆ ಉಳಿಯುವದು, ಬರಿ ಚಿಪ್ಪ

ಶೇಷ - ಹಾ ! ಹಾ ! ಅಚ್ಚಮ್ಮ ದೇವರ ಮನಿಯಾಗ ಮಾತಾಡು ಮಾತು ಹಿಂಗ ದಾರ್‍ಯಾಗ ಮಾತಾಡಬಾರದು. ದೊಡ್ಡವರ ಸುದ್ದಿ ಬಹಳ ದೊಡ್ಡವು ಇರತಾವ

ಅಚ್ಚಮ್ಮ - ಸಣ್ಣವರದಾದರ ಸಿಕ್ಕಲ್ಲೇ ಮಾತಾಡಕ ಬರತೈತೇನ ? ಓಡಿ ಹೋದ ಹೇಣ್ತೇ ಸುದ್ಧೀ ಎತ್ತಾನ ಹ್ಯಾಂಗ ನಿಂತಾನ ನೋಡು... ಬೆಲ್ಲಾ ಜಜ್ಜಿದ ಕಲ್ಲಿನಾಂಗ ಮಕಾ ಮಾಡಿಕೊಂಡು. ಮಾತಾಡ್ರಿ ಸಾಹುಕಾರ್ರ ಇಷ್ಟತ್ತನ ಔಡಲ ತಿಂದ ಆಡಿನಾಂಗ ಮಾಡಿದ್ರಿ. ಒಮ್ಮೆಲೇ ಬಿತ್ತಲ್ಲ ನಿಮ್ಮ ಬಾಯಿಗೆ ಬ್ರೆಕ್

ಶೇಷ - ತೋರಿಸ್ದೆಲ್ಲ ಕೆಂಪು ನಿಶಾನಿನ ನೀನು ಡೇಂಜರ್ ಅನ್ನೊದ ಗೊತ್ತಾತು ಸಾಮಕಾರರಿಗೆ

ರಂಗಣ್ಣ - ಹೌದು ಮತ್ತ ಅಂದ ಅನಿಸಿಕೊಂಡು ಚಂದಗೇಡಿ ಆಗಬಾರದು. ಯಾಕಂದ್ರ

ಹೆಣ್ಣು ಮಗಳು ಸ್ವಲ್ಪ ಸಿಟ್ಟಿನ್ಯಾಕಿ ಅಂತ ಕಾಣಸ್ತದ

ಅಜ್ಜಮ್ಮ - ಇನ್ನು ಕೇಳ್ತಿರೇನು ? ಮಂತ್ರಾಲಯದ ಮಂಚಾಲಮ್ಮಗ ನಡಕೊಂಡ ಹಡದಾಳ ನಮ್ಮವ್ವ ನನ್ನ ?

ರಂಗಣ್ಣ - ಗೊತ್ತಾತು... ನನಗೆ ತಿಳಿಸಿ ಹೇಳೋ ಕಾರಣಾನ ಬ್ಯಾಡ. ಆಗಲೀ ಆಗಲೀ ಶೇಷಾ ನಾಸಿನ್ನು ಬರತೀನಿ. ನೋಡು ಮತ್ತೆ ಯಾರದಾದರೂ ಮನಿಗೆ ಹೋಗೋದಿದ್ದರ ಹೋಗಿ ಬಾ, ಬಡ್ಡಿ ವಸೂಲಿಗೆ (ಹೋಗುವನು)

ಶೇಷ - ಭಲೇ ಹಾವ ಆಗಿತ್ತು ಈ ಮುದುಕ ಮುಂಡೆ ಮಗಂದು. ಮಂಗಳಾರತಿ ಬೆಳಗಿ ಬೇಸಿ ಮಾಡಿದಿ ಅಜ್ಜಮ್ಮ

ಅಜ್ಜಮ್ಮ - ಆದರೇನು ಹೇಳ್ತಿ ಬಿಡು. ಹಳೆದಕ್ಕ ಚಿಂತಿಮಾಡಿ ಹಿತ್ತಲದಾಗ ಅತ್ತವರಂಗ ಅದರ ಸುದ್ದೀನ ಬ್ಯಾಡ. ಮತ್ತೆ ನೀ ಏನ ಅಂತೀ ಹೇಳು

ಶೇಷ - (ಗಾಬರಿಯಿಂದ) ನಾನೇನು ಅನ್ಲಿ

ಅಜ್ಜಮ್ಮ - ಮತ್ತ ನೀನ ನನ್ನ ಮದಿವಿ ಆಗಿಬಿಡಲ್ಲ. ಹ್ಯಾಂಗೂ ನೀನು ಒಬ್ಬನ ಅದೀದಿ, ಹಿಂದಿಲ್ಲ... ಮುಂದಿಲ್ಲ... ಹೇಳಿಕೇಳಿ ನಾಟಕದವ ಅದಿದಿ. ನಿನಗೆ ಹೆಣ್ಣು ಹುಟ್ಟುವದಿಲ್ಲ, ನನಗೆ ದಿಕ್ಕಿಲ್ಲ. ನಿನಗೆ ಇದಿರಿಲ್ಲ. ಹಂತಿಗಂತ ಕೂಡಿದರ ಸಂತೀ ಬಲೇ ಪಾಡಂತ

ಶೇಷ - ಹಾಂಗ ಮಾತಾಡ್ಕೊಂತ ಹೀಂಗ ಮಾತಾಡ್ಕೊಂತ ನನ್ನ ಕುತ್ತಿಗ್ಗೆ ತಂದಲ್ಲ ನೋಡು ಅಜ್ಜಮ್ಮ ನನಗ ಮದವೀ ಆಗೋ ಮನಸಿಲ್ಲ

ಅಜ್ಜಮ್ಮ - ನಿನಗಿರದಿದ್ದರೆ ಏನಾತು ನನಗೈತೆಲ್ಲ

ಶೇಷ - ನಿನಗಿದ್ದರೆ ನನಗೆ ಬಂತೇನು

ಅಜ್ಜಮ್ಮ - ಅದರಾಗ ಅರ್ಧಾ ಕೊಡುತೀನಿ

ಶೇಷ - ಅರ್ಧಾನು ಬ್ಯಾಡ ಗಿರ್ದಾನು ಬ್ಯಾಡಾ. ನಿನಗಂತ ಒಂದು ವರ ಹುಡುಕಿ ನಿನ್ನ ತಲಿಮ್ಯಾಲ ಅಕ್ಕೀಕಾಳು ಹಾಕೂಭಾರ ನನಗಿರಲಿ ತಿಳಿತೆ

ಅಜ್ಜಮ್ಮ - ಏನಪ್ಪ ಬರೇ ಹೀಂಗ ಹೇಳತೀದಿ... ಎಲ್ಲಾರಂಗ. ನಾನು ಒಂದ ಮನಿ ಹೆಣ್ಣಾಗಿ (ಅಳುತ್ತ) ಒಬ್ಬನ ಹೆಂಡತಿ ಅಂತ ಆಗಿ ಎಂದ ಬಾಳ ಮಾಡೇನೊ **ಅನಸತ್ತ**. ಆದರೇನು ಮಾಡೂದಪ್ಪಾ ಹರಿ ಬರದಾನಲ್ಲ, ನನ್ನ ಹಣೆಯಾಗ. ಕಂಡವರ ಮನಿ ಅಡಿಗೆ ನೀರಿನ ಕೆಲಸಾನ. ಅವನ ಹಣಕ ಹೆಂಟಗಲ್ ಏರಿಸಲಿ

ಶೇಷ - ಹಾಕ ಬ್ಯಾಡ ಅಜ್ಜವ್ವ ಕಷ್ಟ ಕಳಿಯೋ ಕಾಲಬಂದಾಗ ಕಣ್ಣೀರ. ಅಂಥಿಂಥ ಮನಿ ಸೇರೋದಿಲ್ಲ ನೀನು. ನನ್ನ ಕೆಲಸದಾಗ ಆ ಮಂತ್ರಾಲಯದ ರಾಯರಪ್ಪ

ಕೈಗೊಡಿದರೆ ಸಾಕು. ಒಳ್ಳೇ ದಿಲ್‌ದಾರ ಮನೀನ ಸಿಗತ್ತ ನಿನಗ. ಕಣ್ಣ ತಗದರ ನೋಡವ್ವ. ಕಲ್ಲಂತಾದ ಮಲ್ಲಿಗೆ ಆಗತ್ತಂತ ನಿನ್ನ ಮದುವಿ ಆಗೊದಂದರೇನು

ಅಚ್ಚಮ್ಮ - ನೋಡಣ್ಣ ಶೇಷಣ್ಣ ಏನರ ಮಾಡಿ ನನ್ನ ತಲೆ ಮ್ಯಾಲೆ ನಾಲ್ಕು ಅಕ್ಕಿಕಾಳು ಹಾಕಿದಿ ಅಂದ್ರ ಈ ಪರದೇಶಿ ಉದ್ಧಾರ ಮಾಡಿದ ಪುಣ್ಯ ನಿನಗ ಕಟ್ಟುತ್ತ

ಶೇಷ - ಆಗಲಿ ಅಚ್ಚಮ್ಮ ಅದರೊಂದು ಮಾತು

ಅಚ್ಚಮ್ಮ - ಮತ್ತೇನಪ್ಪ

ಶೇಷ - ನೀನು ಮಾತ್ರ ಯಾವಾಗಲೂ ನಾ ಹೇಳಿದಂತೆ ಕೇಳಬೇಕು. ತಯಾರ ಆದೀಯಾ

ಅಚ್ಚಮ್ಮ - ನಿನ್ನ ಮಾತು ನಾನ್ಯಾಕ ಮೀರಲಿ ಶೇಷಣ್ಣ. ತಂದಿ ಅಂದ್ರೂ ನೀನ, ತಾಯಿ ಅಂದ್ರೂ ನೀನ

ಶೇಷ - ಆಗಲಿ ಅವ್ವ ನನಗೊಪ್ಪಿತು. ಸದ್ಯ ನಂದೂ ಸ್ವಲ್ಪ ಕೆಲಸದ. ಮತ್ತ ಭೆಟಿಯಾಗತೇನಿ

ಅಚ್ಚಮ್ಮ - ಆಗಲಿ ಹೋಗು (ಹೋಗುವನು) ಅಂತು ಎಲ್ಲಾರಂತ ನನಗೂ ಮದುವಿ ಅಂತ ಆಗತದ ಅಂದಾಂಗಾತು. ನಾಟಕದ ಶೇಷಣ್ಣ ಮನಸ್ಸು ಮಾಡಿದರ ಏನಾದೀತು ಏನಾಗಲಿಕ್ಕಿಲ್ಲ. ಎಲ್ಲಾರಂಗ ನನಗೂ ಒಬ್ಬ ಗಂಡ ಸಿಕ್ಕು ಮದಿವಿ ಆದರ ಆಗ ಹೇಳತೀನಿ ಈ ನಕಲಿ ಮಾಡೋ ರಂಡೆರಿಗೆ. ಎಲ್ಲಾರಂಗ ನಾನು ರಾಮದೇವರ ಗುಡಿಗೆ ಪುರಾಣ ಕೇಳಲಿಕ್ಕೆ ಒಳ್ಳೇ ಸಡಗರದಿಂದ ಹೋಗತೀನಿ. ಒಂದಿಲ್ಲೊಂದು ದಿನ ನನಗೂ ಅಂಥಾ ಸುಖ ಪಡೆಯೋ ಕಾಲ ಬಂದೀತು

## ಪದ

ಅಚ್ಚಮ್ಮ - ಅಕ್ಕ ಪಕ್ಕದೆಲ್ಲ ಜನ ನಕ್ಕರೇನ ಸಿಕ್ಕಿ ಮದುವಿ ಆಗತೀನಿ ನಾನು । ಹೆಣ್ಣು ಕಪ್ಪಿದ್ದರೇನೇ ಬಲು ಕಳ । ಹಣ್ಣು ತಿಂದರ ನೋಡೊ ನೀರಲ ಕೆಂಪು ವರ್ಣದ ಹಣ್ಣಿಗೆ ಬಲು ಕುಳ । ಮನಸೀನ ಚಲುವೇ ತಾ ಪರಿಮಳ ಪಕ್ಕ ।

# ದೃಶ್ಯ - ೩

## ರಾಜೀವಪ್ಪನ ಮನೆ

ಗುಂಡಣ್ಣ - ಆಗಲಿ ರಾಜೀವಪ್ಪ ನಾನು ಹೋದ ತಕ್ಷಣ ನನ್ನ ಮಗ ಶ್ಯಾಮನನ್ನು ಕಳಿಸಿ ಕೊಡುತ್ತೇನೆ

ಕಾವೇರಿ - ನೋಡಣ್ಣ ನೀನು ದೊಡ್ಡ ಮನಸ್ಸು ಮಾಡಿ ಮಂದಾಕಿನಿಯನ್ನು ಶ್ಯಾಮನಿಗೆ ತೆಗೆದುಕೊಂಡು ನಮ್ಮನ್ನು ಉದ್ಧಾರ ಮಾಡಬೇಕು. ಎಲ್ಲಾ ನಿನ್ನನೇ ಕೂಡಿದೆ

ರಾಜೀವ - ಗುಂಡಣ್ಣನವರೆ ಸಧ್ಯ ನನ್ನ ಸ್ಥಿತಿ ಎಷ್ಟೂ ಚೆನ್ನಾಗಿಲ್ಲ. ನಿಮ್ಮ ಮಗನಿಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಡುವಷ್ಟು ಪ್ರಾಣ ನನ್ನಲ್ಲಿ ಉಳಿದಿಲ್ಲ ಇದ್ದ ವಿಷಯ ಇದ್ದಂತೆ ನಿವೇದಿಸುತ್ತಲಿದ್ದೇನೆ. ದಯವಿಟ್ಟು ತಾವು ಬೇಜಾರು ಮಾಡಿಕೊಳ್ಳಬಾರದಾಗಿ

ಗುಂಡಣ್ಣ - ರಾಜೀವಪ್ಪ ಇಂದು ನೀವು ಕಷ್ಟದಲ್ಲಿದ್ದಂತೆ, ಅಂದು ಕಾವೇರಿಯನ್ನು ನಿಮಗೆ ಮದುವೆ ಮಾಡಿಕೊಟ್ಟಾಗ ನಾನು ಇದೇ ಸ್ಥಿತಿಯಲ್ಲಿದ್ದೆ. ಆಗ ನೀವು ವರದಕ್ಷಿಣೆ ವರೋಪಚಾರ ಒಂದೂ ಕೇಳದೆ ಕಾವೇರಿಯ ಕೈ ಹಿಡಿದು ಕನ್ಯಾ ಸೆರೆಯಿಂದ ನನ್ನನ್ನು ಪಾರುಮಾಡಿದಿರಿ. ಆ ನಿಮ್ಮ ಉಪಕಾರ ಭಾರ ತೀರಿಸುವ ಭಾಗ್ಯವನ್ನು ದೇವರು ತಾನಾಗಿ ದಯಪಾಲಿಸಿದ್ದಾನೆ. ಅಂದ ಬಳಿಕ ಇದನ್ನು ನಾನೇಕೆ ಕಳೆದುಕೊಳ್ಳಲಿ

ಕಾವೇರಿ - ಅಣ್ಣಾ ನಿನ್ನ ಹೃದಯ ಬಲು ದೊಡ್ಡದು. ನಿನ್ನ ಯೋಗ್ಯತೆ ನಮಗಿಲ್ಲ. ನಾವು ಬಡವರು

ಗುಂಡಣ್ಣ - ತಂಗೀ ಹಾಗನ್ನಬೇಡಮ್ಮ, ನೀನು ಗಂಡಾಗಿ ಹುಟ್ಟಿದ್ದರೆ ಇಂದು ನನ್ನ ಆಸ್ತಿಯ ಅರ್ಧ ಭಾಗ ನಿನಗೆ ದೊರೆಯುತ್ತಿರಲಿಲ್ಲವೇ ? ಮನೆಯ ಹೆಣ್ಣು ಮಗಳು ನಿನ್ನ ಮನಸ್ಸು ನೋಯಿಸಿದರ ಮೆಚ್ಚುತ್ತಾನೆಯೇ ದೇವರು. ರಾಜೀವಪ್ಪ ನೀವು ಯಾವುದಕ್ಕೂ ಚಿಂತಿಸಬೇಡಿ. ಶ್ಯಾಮ ಒಪ್ಪಿಕೊಂಡು ಬಿಟ್ಟರೆ ಎಲ್ಲಾ ನಿಮ್ಮ ಮನಸ್ಸಿನಂತೆ ನಡೆದು ಬಿಡುತ್ತದೆ

ಕಾವೇರಿ - ಆಗಲಣ್ಣಾ ಶ್ಯಾಮನನ್ನು ಎಂದು ಕಳಿಸಿಕೊಡುತ್ತೀರಿ

ಗುಂಡಣ್ಣ - ನಾನು ಹೋದ ತಕ್ಷಣ ಕಳಿಸಿ ಕೊಡುತ್ತೇನೆ. ತಂಗಿ ಇಷ್ಟು ದಿನ ಕಳೆದರೂ ನಾನು ನಿನಗೇನೂ ಕೊಟ್ಟಿಲವಮ್ಮ. ಸದ್ಯಕ್ಕೆ ಈ ಸೀರೆ ತೆಗೆದುಕೊಳ್ಳಮ್ಮ. (ಕೊಡುವನು)

ಕಾವೇರಿ - ನನಗೇಕಣ್ಣಾ ಸೀರೆ ಇನ್ನು ನಿನ್ನ ಸೊಸೆಗೆ

ಗುಂಡಣ್ಣ - ಅವಳಿಗೂ ಇದೆ ಅಮ್ಮಾ (ಕೊಡುವನು) ಮಗೂ ಕಲ್ಯಾಣಿ ಇದು ನಿನಗೆ

ಕಲ್ಯಾಣಿ - ಇದೇನು ಮಾಮಾ ನನಗೇಕೆ

ಗುಂಡಣ್ಣ - ಕಾವೇರಿ ನನಗೆ ತಂಗಿಯಾದಂತೆ, ಗತಿಸಿದ ನಿನ್ನ ತಾಯಿ ಶ್ರೀದೇವಿ ಕೂಡಾ ನನಗೆ ತಂಗಿಯಮ್ಮ ನಾಚಬಾರದು ತೆಗೆದುಕೊಳ್ಳಮ್ಮ

ರಾಜೀವ - ತೆಗೆದುಕೊಳ್ಳಮ್ಮ, ನಾಚಬಾರದು (ತೆಗೆದುಕೊಳ್ಳುವಳು)

ಮಂದಾಕಿನಿ - ನನಗೇನು ತಂದಿಲ್ಲವೇನು ಮಾಮಾ ?

ಗುಂಡಣ್ಣ - ಇದು ನಿನಗೆ (ಕೊಡುವನು) ಹೂಂ ವೇಳೆಯಾಯಿತು. ರಾಜವಪ್ಪ ನಾನಿನ್ನು ಬರುವೆ. ಒಳ್ಳೇ ಊರಪ್ಪ ನಿಮ್ಮದು, ರೋಡಿಗೆ ನಾಲ್ಕು ಮೈಲು ನಡದೇ ಹೋಗಬೇಕು. ವಾಹನ ಸೌಕರ್ಯ ಕೂಡಾ ಇಲ್ಲ ಬಹಳ ದರಿದ್ರ ಊರು

ಕಾವೇರಿ - ಏ ಹಾಗೇ ನಿಂತು ಬಿಟ್ಟಿಯಲ್ಲೇ ಮಂದಾ ನಮಸ್ಕರಿಸು ನಿನ್ನ ಮಾವನಿಗೆ (ಎಲ್ಲರೂ ನಮಸ್ಕರಿಸುವರು)

ಗುಂಡಣ್ಣ - ಹೂಂ ರಾಜೀವಪ್ಪ ನಾನು ಬರಲೆ ? ಬರತೇನಿ ಕಾವೇರಿ (ಹೋಗುವನು)

ಕಾವೇರಿ - ನೋಡಿದ್ರೇನ್ರಿ ನಮ್ಮಣ್ಣ ಎಷ್ಟು ದೊಡ್ಡ ಗುಣದವನು. ಇನ್ನೇನು ಮಂದಾಕಿನಿಯ ಮದುವೆ ಆದಂತೆ

ರಾಜೀವ - ಅದು ಹೇಗೆ ಹೇಳಲಿಕ್ಕೆ ಬರುತ್ತದೆ

ಕಾವೇರಿ - ಶುಭ ನುಡಿಯೋ ಆಚಾರಿ ಅಂದ್ರ ಆ ಮುಂಡೆ ಮದುಮಗಳನ್ನು ಹಂದರದಲ್ಲಿ ಅಂತ ಅನ್ನುವಂತೆ, ಯಾವಾಗಲೂ ನಿಮ್ಮ ತಲೆಯಲ್ಲಿ ಅಶುಭ ಕಲ್ಪನೆಗಳೇ ತುಂಬಿರುತ್ತವೆ

ರಾಜೀವ - ದೈವದ ಅನುಗ್ರಹ ತಪ್ಪಿ ಕಷ್ಟದಲ್ಲಿರುವ ನಾವು ಶುಭವನ್ನು ಕಲ್ಪಿಸಿ ಕೊರಗುವದಕ್ಕಿಂತ ಅಶುಭವನ್ನು ಆಮಂತ್ರಿಸಲು ಸಿದ್ಧರಾಗಬೇಕು ಕಾವೇರಿ

ಕಾವೇರಿ - ಆದರೂ ನನ್ನ ಅಳಿಯ ಶ್ಯಾಮ ಅಂಥವನಲ್ಲ

ರಾಜೀವ - ಅಳಿಯ ! ಕಾವೇರಿ ಅಳಿಯ ಅನ್ನುವ ಶಬ್ದದ ಅರ್ಥ ಬಹಳ ಭಯಂಕರವಾದದ್ದು. ಜಾ ಮಾತೂ ದಶಮಗ್ರಹ. ಒಂಭತ್ತು ಗ್ರಹಗಳು ಒಂಭತ್ತು ರೀತಿಯಲ್ಲಿ ಕೂಡಿದರೆ ಹತ್ತನೆಯ ಗ್ರಹವೆಂದು ಕರೆಯಿಸಿಕೊಳ್ಳುವ ಈ ಅಳಿಯ ದೇವರು ಹತ್ತೂ ಕಡೆಯಿಂದಲೂ ಕಾಡುತ್ತದೆ. ಕೈ ಹಿಡಿದ ಹೆಣ್ಣಿನ

ಕಣ್ಣೀರಿನೊಂದಿಗೆ ಹಡೆದವರ ಕಣ್ಣೀರು ಕೂಡಾ ಹರಿದರೆ ಇಂದಿನ ಅಳಿಯಂದಿರ ಅಳಿಯ ತನಕ್ಕೆ ಭೂಷಣ. ಕಾವೇರಿ ಈ ವಿಚಾರಕ್ಕೆ ನಿನ್ನಳಿಯ ಶ್ಯಾಮ ಒಬ್ಬ ಹೊರತಿದ್ದ ಅದು ನಿನ್ನ ಪೂರ್ವ ಜನ್ಮದ ಸುಕೃತವೆಂದು ಭಾವಿಸು

ಕಲ್ಯಾಣಿ - ಅವ್ವ ಛಿಂತೂ ಮಂದಾ ಸದ್ಯಕ್ಕೆ ಶ್ಯಾಮ ಮಾಮಾನ ಹೆಂಡತಿಯಾದ ಹಾಗ ಅನ್ನು

ಮಂದಾಕಿನಿ - ಮತ್ತೆ ನಿನ್ನ ಗಂಡ ಅಂತ ತಿಳಿದಿದ್ದೆ ಏನೇ ನೀ ?

ಕಾವೇರಿ - ಏ ಇರಲಿ ನಡಿಯೇ ! ಏ ಕಲ್ಯಾಣಿ ಪಾತ್ರೆ ತೊಳೆಯುವ ಕೆಲಸ ಹಾಗೇ ಬಿಟ್ಟುಕೊಟ್ಟು ಇಲ್ಲಿಯೇ ನಿಂತು ಬಿಟ್ಟಿಯಲ್ಲ

ರಾಜೀವ - ಒಂದು ಘಳಿಗೆ ಅವಳು ತನ್ನ ತಂಗಿಯೊಡನೆ ಸರಸವಾಡಿದರ ನಿನಗ ಸಮಾಧಾನವಿಲ್ಲವೇನೆ ?

ಕಾವೇರಿ - ಮಾತಾಡಿಕೊಳ್ಳಿರಮ್ಮ ಮಾತಾಡಿಕೊಳ್ಳಿ (ರಂಗಣ್ಣ ಬರುವರು)

ರಂಗಣ್ಣ - ರಾಜೀವ !

ರಾಜೀವ - ಬನ್ನಿ ಸಾಹುಕಾರರೇ ಕುಳಿತುಕೊಳ್ಳಿ

ರಂಗಣ್ಣ - ಬರುವದು ಕುಳಿತುಕೊಳ್ಳವದು ಆ ಮೇಲೆ. ಮೊದಲು ನಮ್ಮ ಬಡ್ಡಿ ಮತ್ತು ಸಾಲ ಕೊಟ್ಟುಬಿಡು

ರಾಜೀವ - ಇನ್ನೂ ಕೆಲವು ದಿನಾ ಅವಕಾಶ ಕೊಡಿ ಸಾಹುಕಾರರೇ ?

ರಂಗಣ್ಣ - ಕೆಲವು ದಿನಗಳೇಕೆ ಕೆಲವು ನಿಮಿಷ ಕೂಡಾ ಕೇಳುವದಿಲ್ಲ. ಹೇಳುವದಕ್ಕೂ ಕೇಳುವದಕ್ಕೂ ಒಂದು ಮಿತಿ ಇರುತ್ತದೆ. ಸಾವಿರ ರೂಪಾಯಿ ಸಾಲ ತಂದು ಈ ಹೊತ್ತಿನ ಮಿತಿಗೆ ಎರಡು ವರ್ಷವಾಯಿತು. ಗಂಟಿನ ವಿಷಯ ಇರಲಿ, ಒಂದು ಕಾಸು ಬಡ್ಡಿ ಕೂಡಾ ಕೊಟ್ಟಿಲ್ಲ. ಇದು ಮನುಷ್ಯ ರೀತಿಯೇನೋ ?

ಶೇಷ - ಅಲ್ಲ ಯಜಮಾನ್ರೆ ಇದು ಮನುಷ್ಯರ ರೀತಿಯಲ್ಲ

ರಾಜೀವ - ಹೋದ ವರ್ಷ ಮಳೆ ಆಗಿ ಬೆಳೆ ಬಂದಿದ್ದರೆ ನಿಮ್ಮ ಋಣ ತೀರಿಸದೆ ಇರುತ್ತಿರಲಿಲ್ಲ ಯಜಮಾನರೇ. ಆದರೆ ಭೂಮಿಯಿಂದ ಇಡಿ ದವಸ ಕೂಡಾ ಬರಲಿಲ್ಲ. ಹೀಗಾಗಿ ನಿಮ್ಮ ಸಾಲ ತೀರಿಸಲಾಗಲಿಲ್ಲ. ದಯವಿಟ್ಟು ಇನ್ನು ಕೆಲವು ದಿನ ಅವಕಾಶವಿತ್ತರೆ ಖಂಡಿತವಾಗಿ ನಿಮ್ಮ ಸಾಲ ತೀರಿಸುತ್ತೇನೆ

ರಂಗಣ್ಣ - ಹುಂ ಹುಂ ಅದಾಗದು. ಈ ಹೊತ್ತು ಹಣ ನಮಗೆ ಬೇಕೇ ಬೇಕು. ಶೇಷ ಸುಮ್ಮನೆ ನಿಂತು ಬಿಟ್ಟಿಯಲ್ಲಪ್ಪ

ಶೇಷ - ಅದೇ ಯಜಮಾನರೇ ನಿಮ್ಮನ್ನು ಕೇಳಿ ಕುಳಿತುಕೊಳ್ಳಬೇಕು ಅಂತಾ ಮಾಡಿದ್ದೆ (ಕುಳಿತುಕೊಳ್ಳುವನು)

ರಂಗಣ್ಣ - (ಕಿವಿ ಹಿಡಿದು) ಕೂಡಲಿಕ್ಕಲ್ಲಪ್ಪ ನಾನು ಹೇಳಿದ್ದು. ಸಾಲಾ ವಸೂಲ ಮಾಡಲಿಕ್ಕ

ಶೇಷ - ಹೌದಲ್ಲಾ ಯಜಮಾನರೇ. ಏ ಕೊಟ್ಟುಬಿಡೋ ರಾಜೀವಪ್ಪ ನಮ್ಮ ಯಜಮಾನರ ಸಾಲ. ನಮ್ಮ ಯಜಮಾನರು ಮಹಾ ಕೋಪಿಷ್ಟರು. ಕಲ್ಲಿಗೆ ಸಾಲ ಕೊಟ್ಟು ಕಲ್ಲಿನಿಂದ ತೆಗೆದುಕೊಳ್ಳುವಷ್ಟು ಕಲ್ಲೆದೆ ಅವರದು

ರಾಜೀವ - ಹೀಗೆ ಹಟ ಹಿಡಿಯಬೇಡಿ ಯಜಮಾನರೆ. ನಿಂತ ಕ್ಷಣ ಕೊಟ್ಟು ಕಳಿಸಲಿಕ್ಕೆ ಸಾಲದ ಅಂಕೆ ಸಣ್ಣ ಮೊತ್ತವಲ್ಲ. ಎರಡು ಸಾವಿರ ರೂಪಾಯಿ ಎಲ್ಲಿಂದ ತಂದು ಕೊಡಲಿ ?

ರಂಗಣ್ಣ - ಎಲ್ಲಿಂದ ತಂದು ಕೊಡಲಿ ಅಂದರೇನು ಹೇಳುವದು ? ಸಾಲ ಕೊಟ್ಟವನೇ ಅದನ್ನು ಮುಟ್ಟಿಸುವ ಬಗೆ ಹೇಳಿ ಕೊಡಬೇಕೇನು ? ಊಂ, ಹುಂ ಅದೆಲ್ಲ ನಡೆಯುವದಿಲ್ಲ ನಮಗೀಗ ಹಣಬೇಕು

ಶೇಷ - ಅಹುದು ಬೇಕೆ ಬೇಕು

ರಾಜೀವ - ಯಜಮಾನ್ರೆ ಈಗ ನನ್ನಿಂದ ಸಾಧ್ಯವಿಲ್ಲ

ರಂಗಣ್ಣ - ಸಾಧ್ಯವಿಲ್ಲವೆಂದರೆ ಹೇಗೆ ? ನಿನಗೆ ಸಾದ್ಯವಾದಾಗ ತಂದು ಕೊಡಲೆಂಬ ಉದಾರ ಹೃದಯದಿಂದ ನಾನು ನಿನಗೆ ಸಾಲ ಕೊಟ್ಟಿಲ್ಲ. ಈ ಹೊತ್ತು ಸಾಲ ಕೊಡಬೇಕು ಒಂದು ಇಲ್ಲವೇ ಈ ಮನಿ ನಮ್ಮ ವಶಕ್ಕೆ ಒಪ್ಪಿಸಬೇಕು ಒಂದು

ಕಾವೇರಿ - ರಂಗಣ್ಣನವರೆ ನಿಮ್ಮ ಸಾಲದ ಬಗ್ಗೆ ಅಷ್ಟೇ ಮಾತನಾಡಿ. ಮನೆ ಖಾಲಿ ಮಾಡುವ ವಿಷಯ ಮಾತನಾಡಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ

ರಂಗಣ್ಣ - ಏನ್ರಮ್ಮಾ ನಾಲಿಗೆ ಬಹಳ ಉದ್ದ ಬಿಡಿತೀರಲ್ಲ. ಇಷ್ಟಪಟ್ಟು ಸಂಪಾದಿಸಿದ ನನ್ನ ಸಂಪತ್ತಿಗೆ ಬೆಲೆ ಇರಬೇಡವೇ ? ನಿಮ್ಮ ಯಜಮಾನರಿಗೆ ಸಾವಿರ ರೂಪಾಯಿ ಸಾಲ ಕೊಡುವಾಗ್ಗ ಹಣಕ್ಕೆ ಭರವಸೆ ಕೇಳಿದವು. ಆಗ ಇವರು ಸಾಲ ಮಟ್ಟಿಸುವದಾಗದೇ ಹೋದಲ್ಲಿ ಈ ಮನೆಯನ್ನು ನಮ್ಮ ವಶಕ್ಕೆ ಒಪ್ಪಿಸುವದಾಗಿ ಹೇಳಿದರು. ಕಚೇರಿ ಖರ್ಚನ್ನು ನಾನೇ ಕೈಯಿಂದ ತೆತ್ತು ನಿಮ್ಮ ಯಜಮಾನರಿಂದ ಈ ಮನೆಯನ್ನು ನನ್ನ ಹೆಸರಿಗೆ ಖರೀದಿಸಿಕೊಂಡಿದ್ದೇನೆ. ಪುಗಸಟ್ಟೆ ಮಾತಲ್ಲ

ರಾಜೀವ - ಹೌದು, ಕಾವೇರಿ ಮನೆ ಬರದುಕೊಟ್ಟಿದ್ದು ನಿಜ

ಕಾವೇರಿ - ಅಯ್ಯೋ ಇದ್ದ ಇದೊಂದು ಮನೆಯನ್ನು ಬರೆದು ಕೊಟ್ಟಿರಾ ? ನಿಮ್ಮ ಕೈ ಹಿಡಿದ ನನ್ನ ಒಂದು ಮಾತು ಕೇಳಬಾರದಿತ್ತೇ ? ರಾಮ ರಾಮಾ ಮನೆಕಳಕೊಂಡು ಜನರಿಗೆ ಮುಖ ತೋರಿಸುವ ಬಗೆಯಂತು ?

ರಾಜೀವ - ಹುಚ್ಚಿ ಏನಾದರೂ ಮುಚ್ಚಬಹುದು, ಆದರೆ ಬಡತನವನ್ನು ಮುಚ್ಚಲು ಬರುವದೇನೇ ? ಅದೇ ಸಂಪತ್ತೊಂದಿದ್ದರೆ ಕೊಲೆ ಸುಲಿಗೆ ಅನ್ಯಾಯಗಳನ್ನೆಲ್ಲ

ಮಾಡಿ ಗಳಿಸಿದ ಸಂಪತ್ತಿನ ಮುಸುಕಿನಲ್ಲಿ ಅವೆಲ್ಲ ಮುಚ್ಚಿ ಮಾಯಾವಾಗುತ್ತಿವೆ ಹುಚ್ಚೀ ಇದಕ್ಕೆ ಅಚ್ಚರಿ ಪಡುವ ಕಾರಣವೂ ಇಲ್ಲ. ಭೀತಿ ಪಡಲಿಕ್ಕೆ ಇದೇನು ಕಳ್ಳತನವಲ್ಲ, ಕೊಲೆಯಲ್ಲ

ಕಾವೇರಿ - ಈ ಕಷ್ಟದಲ್ಲಿ ನೀವು ಅದೇನೋ ಹಾಳು ವೇದಾಂತವನ್ನು ಹೇಳಲು ಬರಬೇಡಿ ಮನೆ ಹೋದ ಬಳಿಕ ಮಾನ ಉಳಿಯುತ್ತದೇನು ? ಇಲ್ಲ ರಂಗಣ್ಣನವರೇ ಏನಾದರೂ ಸರಿ ನಾವು ಈ ಮನೆಯನ್ನು ನಿಮ್ಮ ವಶಕ್ಕೆ ಒಪ್ಪಿಸುವ ಮಾತು ಮಾತ್ರ ಸುಳ್ಳು. ನೀವು ಬೇಕಾದ್ದು ಮಾಡಿಕೊಳ್ಳಿ

ರಂಗಣ್ಣ - ಒಪ್ಪಿಸುವದಿಲ್ಲ ಅಂದ್ರ ಕೋರ್ಟಿನಿಂದ ಆರ್ಡರ್ ತಂದು ಒಪ್ಪಿಸಿಕೊಳ್ಳತೀವಿ. ಏನಮ್ಮಾ ನನ್ನನ್ನು ಯಾರು ಅಂತ ತಿಳಿದರಿ ನೀವು. ಈ ಸಾಹುಕಾರ ರಂಗಣ್ಣ ಅಂದ್ರೆ ಹರಿದುಹೋಗುವ ಸರ್ಪ ನಿಲ್ಲುತ್ತದೆ ತಿಳಿದಿರೇನು

ಕಾವೇರಿ - ಅಯ್ಯೋ ಮುಂದೇನು ಗತಿ ? ಇದ್ದ ಮನೆ ಮದುವೆ ಮುಂಚೆ ಪರರ ಕೈಗೆ ಬಿದ್ದುಹೋದರೆ... ಮನೆ ಕಳೆದುಕೊಂಡರೆ ಮಗಳನ್ನು ಮದುವೆಯಾಗಲು ಯಾರು ಒಪ್ಪುತ್ತಾರೆ. ರಂಗಣ್ಣನವರೇ ಸದ್ಯ ನನ್ನ ಮಗಳ ಮದುವೆಯಿದೆ. ಮದುವೆ ಮುಗಿಯುವವರೆಗಾದರೂ ಸ್ವಲ್ಪ ಅವಕಾಶಕೊಡಿ

ರಂಗಣ್ಣ - ಆಗದಮ್ಮಾ ಆದಾಗದು. ನಿಮಗೆ ನಿಮ್ಮ ಮಗಳ ಮದುವೆ ಆಗಬೇಕು. ನನಗೆ ನನ್ನ ಮದುವೆ ಆಗಬೇಕು. ಅದಕ್ಕೆಲ್ಲ ನಾವು ಈಗಿಂದೀಗಲೇ ಅನುಕೂಲ ಮಾಡಿಕೊಳ್ಳಬೇಕು. ಹೂ, ಈ ಹೊತ್ತು ಹಣಾ ಕೊಡಬೇಕು, ಇಲ್ಲವೇ ಮನಿ ಖಾಲಿ ಮಾಡಬೇಕು

ಕಾವೇರಿ - ದಯೆ ತೋರಿ ಶ್ರೀಮಂತರೆ ಕೂಡಿ ಬಂದ ನನ್ನ ಮಗಳ ತಾಳಿ ಗಳಿಗೆಯನ್ನು ಹಾಳ ಮಾಡಬೇಡಿ. ನಿಮ್ಮ ಕಾಲಿಗ ಬೀಳುತ್ತೇನೆ. ಶೇಷಣ್ಣಾ ನೀನಾದರೂ ಹೇಳಪ್ಪ

ಶೇಷ - ಅಮ್ಮಾ ಈ ಶೇಷಣ್ಣ ಇರೋದೆ ಅದಕ್ಕ. ತಾಯಿ ಮಗಳು ಮದುವೇನೂ ಆಗಬೇಕು, ಇರಲಿಕ್ಕೆ ನಿಮಗೆ ಮನೇನೂ ಉಳಿಯಬೇಕು ಅಂದ್ರೆ ನಾನೊಂದು ಹಂಚಿಕೆಯನ್ನು ಹೇಳುತ್ತೇನೆ. ಅದರಂತೆ ನೀವು ನಡೆದರ ನಿಮ್ಮ ಮಕ್ಕಳ ಮದುವೆಯೂ ಆಗುತ್ತದೆ. ಈ ಮನ ನಿಮಗ ಉಳಿಯುತ್ತವ. ಹೇಳಮ್ಮಾ

ಕಾವೇರಿ - ಅಯ್ಯೋ ಹೇಳ್ರಿ, ಶೇಷಣ್ಣ ನಮಗ ಒಳ್ಳೆಯದಾದರ ಸಾಕು (ರಾಜೀವಪ್ಪನಿಗೆ) ಕೇಳ್ರಿ, ಶೇಷಣ್ಣ ಅದೇನೊ ಹೇಳುತ್ತಾನಂತ

ರಾಜೀವ - ಹೇಳು ಶೇಷಣ್ಣ. ಅರ್ಥ ತೋಯಿಸಿಕೊಂಡವನು ಇನ್ನರ್ಥ ತೋಯಿಸಿಕೊಳ್ಳಲಿಕ್ಕೆ ಅಂಜುವನೇ ? ಅದೇನು ಹೇಳಬೇಕೆನ್ನುವಿಯೋ ಹೇಳಿ ಮುಗಿಸಿ ಬಿಡಪ್ಪ

ಶೇಷ - ನೋಡಿ ರಾಜೀವಪ್ಪ ನಿಮ್ಮ ಹಿರಿಯ ಮಗಳು ಕಲ್ಯಾಣಿಯನ್ನು ನಮ್ಮ ಯಜಮಾನರಿಗೆ ಮದುವೆ ಮಾಡಿಕೊಡಲಿಕ್ಕೆ ಒಪ್ಪಿಗೆ ಕೊಟ್ಟರೆ ಸಾಲ ಮುಟ್ಟಿದ ಬಗ್ಗೆ ಪಾವತಿ ಕೊಡುತ್ತಾರೆ. ಅಲ್ಲದೇ ಕಿರಿಯ ಮಗಳ ಮಂದಾಕಿನಿಯ ಮದುವೆಗೆಂದು ಒಂದು ಸಾವಿರ ರೂಪಾಯಿಯ ಸಹಾಯಧನ ಸಲ್ಲಿಸುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳ ಮದುವೆಯಾಗಿ ಕನ್ಯಾಸೆರೆ ಹರಿದು ನಿಮ್ಮ ಮನೆ ಉಳಿದು ಬಿಡುತ್ತದೆ

ರಾಜೀವ - ಏನು ನನ್ನ ಸಂಸಾರ ಸಂಕಟದಲ್ಲಿ ಮಾಡಿಕೊಂಡ ಸಾಲಕ್ಕಾಗಿ ಹೊಟ್ಟೆಯ ಮಗಳನ್ನು ಈ ಮುದುಕನಿಗೆ ಮಾರಿಕೊಳ್ಳಲಿ ? ಛೇ ಇದು ಸಾಧ್ಯವಿಲ್ಲ

ಶೇಷ - ಹಾಂ ರಾಜೀವಪ್ಪ ಸ್ವಲ್ಪ ಶಾಂತರಾಗಿ ವಿಚಾರ ಮಾಡು. ಒಂದೇ ಕಲ್ಲಿನ ಹೊಡತಕ್ಕೆ ಎರಡು ಹಣ್ಣು ಪಡೆಯಬಹುದು. ಮನೆಯೂ ಉಳಿಯುತ್ತದೆ. ಮಕ್ಕಳ ಮದುವೆಯು ನಡೆಯುತ್ತದೆ. ದುಡಿಕಿದರ ಬಡವ ನೀನು ಕೆಟ್ಟು ಹೋಗುತ್ತಿ. ಯಾಕೆ ಕಾವೇರಮ್ಮ ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು ?

ಕಾವೇರಿ - ಶೇಷಣ್ಣ ನಮ್ಮ ಕಲ್ಯಾಣಿಯನ್ನು ಸಾಹುಕಾರರು ಲಗ್ನವಾಗಬಯಸುತ್ತಾರೇನಪ್ಪ

ಶೇಷ - ಅಹುದಮ್ಮ ಸಾಹುಕಾರರು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡಿದ್ದಾರೆ

ಕಾವೇರಿ - ಶೇಷಣ್ಣ ಅಂಥಾ ಅಗರ್ಭ ಶ್ರೀಮಂತರ ಮನೆ ಸೇರುವ ಭಾಗ್ಯ ನಮ್ಮ ಕಲ್ಯಾಣಿಗೆ ದೊರೆತದ್ದು ಅವಳ ಪೂರ್ವ ಜನ್ಮದ ಪುಣ್ಯ. ಹಿಂದಿನ ಜನ್ಮದಲ್ಲಿ ಗೌರಿ ವ್ರತವನ್ನು ಬಹಳ ಚೆನ್ನಾಗಿ ಮಾಡಿದಂತೆ ಕಾಣುತ್ತದೆ. ಅಂತೇ ಶ್ರೀಮಂತರು ಕಲ್ಯಾಣಿಯನ್ನು ಕೈಹಿಡಿಯಲು ಮನಸ್ಸು ಮಾಡಿದ್ದಾರೆ

ಶೇಷ - ಅಹುದಮ್ಮೆ ನೀವು ಮನಸ್ಸು ಮಾಡಿದರೆ ಹತ್ತು ಲಕ್ಷ ರೂಪಾಯಿಗೂ ಮಿಕ್ಕಿದ ಆಸ್ತಿಗೆ ನಿಮ್ಮ ಮಗಳು ಒಡತಿಯಾಗುತ್ತಾಳೆ. ಮಲಮಕ್ಕಳಿಲ್ಲ ಸವತಿಯರಿಲ್ಲ ಅಲ್ಲದೆ ಇಂಥ ಯೋಗ್ಯವಾದ ರೂಪವಂತ ವರ..... ಹತ್ತು ಪರದಾರಿಯಲ್ಲಿ ನೀವೇ ಹುಡುಕಿದರೆ ಸಿಕ್ಕಿತೇನಮ್ಮ ?

ಕಾವೇರಿ - ಅಹುದಪ್ಪ ಶೇಷಣ್ಣ ನಿನ್ನ ಮಾತು ನಿಜ. ನೋಡ್ರಿ ಸ್ವಲ್ಪ ವಿಚಾರ ಮಾಡ್ರಿ. ಕಲ್ಯಾಣಿಯನ್ನು ಶ್ರೀಮಂತನಿಗೆ ಕೊಟ್ಟು ನಾವೇಕೆ ಅವರ ಸಂಬಂಧ ಬೆಳೆಸಬಾರದು ?

ರಾಜೀವ - ಕಾವೇರಿ ನೀನೇನು ಹೆಣ್ಣೋ ಅಥವಾ ಹೆಣ್ಣಿನ ರೂಪ ತಳೆದು ಭೂಮಿಗಿಳಿದ ರಾಕ್ಷಸಿಯೋ ? ನಳನಳಿಸುವ ಮಲ್ಲಿಗೆಯ ಬಳ್ಳಿಯಂತ ನನ್ನ ಮಗಳನ್ನು ಸಿಡಿಲು ಹೊಡದ ಮರದಂತಿರುವ ಈ ಡೊಗರು ಹೋದ ದೇಹದ ಮುದುಕನಿಗೆ ಮಾಡಿಕೊಡಲೇ ? ಕಾವೇರಿ ನಿನ್ನ ಹೊಟ್ಟೆಯ ಮಗಳಾಗಿದ್ದರೆ ನೀನು ಹೀಗೆ ಹೇಳುತ್ತಿದ್ದಿಯಾ ? ಅವಳು ನಿನ್ನ ಸವತಿಯ ಮಗಳೆಂದಲ್ಲವೇ

ನೀನು ಹೀಗೆ ಹೇಳುವದು ? ಕಲ್ಯಾಣಿಯ ಬಲಿದಾನದ ಮೇಲೆ ಮಂದಾಕಿನಿಯ ಬಾಳಮಂದಿರ ಕಟ್ಟ ಬಯಸಿದರೆ ಅದು ಎಷ್ಟು ದಿನ ಗಟ್ಟಿಯಾಗಿ ನಿಂತೀತು. ಏನಾದರೂ ಸರಿ... ನಾಲ್ಕು ನೆರಳು ಸರಿದು ಅರಳು ಮರಳಾದ ಈ ದುರಳನ ಕೊರಳಿಗೆ ನನ್ನ ಮಗಳನ್ನು ಕಟ್ಟಲು ನಾನೆಂದೂ ಒಪ್ಪಲಾರೆ

ಕಾವೇರಿ - ನೆರಳು ಸರಿದ ಮೇಲೆಯೇ ಅಲ್ಲವೇನು ನಾನು ನಿಮ್ಮ ಕೈ ಹಿಡಿದಿದ್ದು. ಬೇರೊಬ್ಬಳ ಜೊತೆ ಸಂಸಾರ ಮಾಡಿದ ಈ ನಿಮ್ಮ ಕರಗಳಿಂದಲೇ ಅಲ್ಲವೇನು ನಾನು ನನ್ನ ಕೊರಳಿಗೆ ಮಾಂಗಲ್ಯ ಬಿಗಿಸಿಕೊಂಡದ್ದು. ಅದೇನಿದ್ದರೂ ನೋಡಿ ಗಂಡಸರ ವಿಷಯಕ್ಕೆ ದೋಷವೆಣಿಸುವದು ಶುದ್ಧ ತಪ್ಪು. ನಡೆದಿರುವದೆಲ್ಲ ನಮ್ಮ ಒಳ್ಳೆಯದಕ್ಕೆ ನಡೆಯುತ್ತದೆ. ಕಲ್ಯಾಣಿಗೆ ಇಂಥ ಮನೆ ಸಿಕ್ಕುತ್ತಿರುವದು ಅವಳ ಪುಣ್ಯ. ದಯವಿಟ್ಟು ನೀವು ಅವರಿಗೆ ಒಪ್ಪಿಗೆ ಕೊಟ್ಟುಬಿಡಿ

ರಾಜೀವ - ಸಾದ್ಯವಿಲ್ಲ ಕಾವೇರಿ. ಅಗ್ನಿ ಕುಂಡದಲ್ಲಿ ಅವಳು ಮಲ್ಲಿಗೆಯ ಮೊಗ್ಗನ್ನು ಚೆಲ್ಲಿ ಕೊಡುವಂತ ಅರ್ಧ ಸ್ಮಶಾನ ಯಾತ್ರೆ ನಡೆದು ಹೋದ ಈ ಮರಕ್ಕೆ ನನ್ನ ಮಗಳನ್ನು ಧಾರೆ ಎರೆಯಲು ನಾನೊಪ್ಪಲಾರೆ

ರಂಗಣ್ಣ - ಒಪ್ಪದಿದ್ದರೆ ಬರೆದುಕೊಟ್ಟಂತೆ ಮನೆಯನ್ನು ನಮ್ಮ ಸ್ವಾಧೀನಕ್ಕೆ ಒಪ್ಪಿಸಿಬಿಡು

ರಾಜೀವ - ಸಂತೋಷವಾಗಿ 'ಒಪ್ಪಿಸುತ್ತೇನೆ. ಸಾಹುಕಾರರೇ ಮಾಡಿಕೊಂಡ ಸಾಲಕ್ಕೆ ಹೊಟ್ಟೆಯ ಮಗಳನ್ನು ಮಾರಿಕೊಳ್ಳುವದಕ್ಕಿಂತ ಮನೆಯನ್ನೇ ಮಾರಿಕೊಳ್ಳುವದು ಹೆಚ್ಚು ಒಳ್ಳೆಯದು. ತೆಗೆದುಕೊಂಡು ಬಿಡಿ ಮನೆಯನ್ನು

ಕಾವೇರಿ - ಅಯ್ಯೋ ಮಂದಾಕಿನಿ ನಿಮ್ಮ ತಂದೆ ನಮ್ಮನ್ನು ನಡು ನೀರಿನಲ್ಲಿ ಕೈ ಬಿಟ್ಟರಲ್ಲೇ ಮಂದಾ. ನಿನ್ನ ಮದುವೆಗೆ ಕಲ್ಲು ಹಾಕಲೆಂದೇ ತಂದೆ ಮಗಳು ಇಷ್ಟೆಲ್ಲ ನಾಟಕ ನಡೆಸಿದ್ದಾರಮ್ಮ. ನಿನ್ನ ಮದುವೆ ಅವರಿಗೆ ಹೇಗೆ ಸಂತೋಷವಾಗಬೇಕಮ್ಮ

ರಾಜೀವ - ಏ ರಾಕ್ಷಸಿ ಸುಮ್ಮನೆ ಬಾಯಿ ಮುಚ್ಚಿಕೊಳ್ಳುವಿಯೋ ಅಥವಾ .

ಕಾವೇರಿ - ಕೊಂದುಬಿಡ್ರಿ ನನ್ನನ್ನು, ನನ್ನ ಮಗಳನ್ನು. ಅಂದರೆ ಈ ಸಂಕಟ ತಪ್ಪುತ್ತದೆ ನಿಮಗೆ ಸುಖವಾಗಿರಲು ಅನುಕೂಲ ದೊರೆಯುತ್ತದೆ. ನಿಮ್ಮ ಸುಖಕ್ಕೆ ತಾಯಿಮಗಳು ಅಡ್ಡವಾಗಿದ್ದೇವ

ರಂಗಣ್ಣ - ಹೊಂ ರಾಜೀವಪ್ಪ ಹೊರಡಿರಿನ್ನು ಮನೆಬಿಟ್ಟು

ರಾಜೀವ - ಆಗಲಿ ಯಜಮಾನ್ರೇ (ಕಾವೇರಿ, ಮಂದಾ ಅಳುವಾಗ) ಮಗೂ ಕಲ್ಯಾಣಿ ಬಾರಮ್ಮ ಹೋಗೋಣ

ಕಲ್ಯಾಣಿ - ತಡೆ ಅಪ್ಪಾ. ಸಾಹುಕಾರರೇ ನಾನು ನಿಮ್ಮ ನ್ನು ಮದುವೆಯಾಗುತ್ತೇನೆ. ನನ

ತಂದೆ ತಾಯಿಗಳನ್ನು ಮನೆಯಿಂದ ಹೊರದೂಡಬೇಡಿ. ನಾನು ನಿಮ್ಮೊಂದಿಗೆ ಮದುವೆಯಾಗುತ್ತೇನೆ

ರಂಗಣ್ಣ - ಆ !! ಇದು ಸತ್ಯವೇ

ಕಲ್ಯಾಣಿ - ಹೌದು ಸತ್ಯ

ರಂಗಣ್ಣ - ಯಜಮಾನ್ರೆ (ಅಪ್ಪಿಕೊಳ್ಳುವರು)

ಕಲ್ಯಾಣಿ - (ಕಾವೇರಿಗೆ) ಅವ್ವ

ಕಾವೇರಿ - ಮಗೂ ಕಲ್ಯಾಣಿ ನನ್ನವ್ವ (ಅಪ್ಪಿಕೊಳ್ಳುವರು)

ರಂಗಣ್ಣ - ಹುಡುಗಿ ನನ್ನ ಮದುವೆಯಾಗಲಿಕ್ಕೆ ಒಪ್ಪಿಕೊಂಡು ಬಿಟ್ಟಳು ಶೇಷ !

ಶೇಷ - ಹೌದಲ್ಲ ಯಜಮಾನ್ರೆ,

ಕಲ್ಯಾಣಿ - ಅಪ್ಪಾ

ರಾಜೀವ - ಮಗು

ಕಲ್ಯಾಣಿ - ನಾನು ಅವರನ್ನು ಮದುವೆಯಾಗುತ್ತೇನೆ. ನೀನು ಒಪ್ಪಿಕೊಂಡು ಬಿಡಪ್ಪ

ರಾಜೀವ - ಕಲ್ಯಾಣಿ... ಮಗೂ ನಾನು ಹೇಗೆ ಒಪ್ಪಿಕೊಳ್ಳಲಮ್ಮ. ಈ ನನ್ನ ಬಡತನದ ಕಡುತಾಪದಲ್ಲಿ ನಾನು ಮಾನ ಕಳೆದು ಕೊಂಡಿರಬಹುದು. ಆದರೆ ಮನುಷ್ಯತ್ವವನ್ನು ಇನ್ನೂ ಕಳೆದು ಕೊಂಡಿಲ್ಲವಮ್ಮಾ. ಮಗೂ ಈಗ ನೀನೇ ಕುಳಿತು ನಿನ್ನ ತಂದೆಯ ಮನುಷ್ಯತ್ವವನ್ನು ಕಳೆದು ಬಿಡಬೇಡಮ್ಮ

ಕಲ್ಯಾಣಿ - ಎಲ್ಲವನ್ನು ಕಳೆದಕೊಂಡ ಮೇಲೆಯೇ ಅಲ್ಲವೇನಪ್ಪ ಈ ಪ್ರಪಂಚದಲ್ಲಿ ಬಡವರು ಸುಖದಿಂದ ಬದುಕುವದು. ಹಿಂದೊಮ್ಮೆ ನೀನೇ ಹೇಳಿರಲಿಲ್ಲವೇ ? ಹಣದ ಪ್ರಭಾವದ ಮುಂದೆ ಪೌರುಷವು ತಲೆ ತಗ್ಗಿಸುವದೆಂದು. ಅಂದ ಬಳಿಕ ಹಣದ ಪ್ರಭಾವ ಈ ಪ್ರಪಂಚದಲ್ಲಿ ಎಲ್ಲಿಯವರೆಗೆ ಇರುವುದೊ ಅಲ್ಲಿಯವರೆಗೆ ಹಣದ ಅಭಾವದಿಂದ ಬಳಲುವ ಬಡವರು ಸತ್ತವರಂತೆಯೇ ಬದುಕಬೇಕಲ್ಲ. ಕಳೆದುಕೊಳ್ಳುವದೇ ಆದಲ್ಲಿ ಮಾನವೇನು ? ಮನುಷ್ಯತ್ವವೇನು ಒಪ್ಪಿಕೊಂಡು ಬಿಡಪ್ಪ

ರಾಜೀವ - ಬೇಡಮ್ಮ ನೀನು ಹೀಗೆ ಮಾತನಾಡಿ ನನ್ನೆದೆಗೆ ಶೂಲದಿಂದ ಇರಿಯಬೇಡ. ಮಾನ ಹೋಗಲಿ, ಮನೆ ಹೋಗಲಿ, ಆದರೆ ಆತ್ಮದ್ರೋಹ ಮಾತ್ರ ನನ್ನಿಂದಾಗದಿರಲಿ. ಗತಿಸಿದ ನಿನ್ನ ತಾಯಿಗೆ ನನ್ನಿಂದ ವಂಚನೆಯಾಗದಿರಲಿ

ಕಲ್ಯಾಣಿ - ಮದುವೆಗೆ ನಾನೇ ಸಂತೋಷದಿಂದ ಒಪ್ಪಿಕೊಂಡ ಬಳಿಕ ನೀನೇಕೆ ಅಳುವಿಯಪ್ಪ. ನೋಡು ಮನೆ ಕಳೆದು ಕೊಂಡರೆ ಮುಂದೆ ನೀವು ಇರುವದೆಲ್ಲಿ? ಈಗ ನೀವು ನನಗಾಗಿ ಸಾಹುಕಾರರೊಂದಿಗೆ ಜಗಳವಾಡಿ ತಂಗಿ

ಮಂದಾಕಿನಿಯ ಮದುವೆಗೆ ತಡೆ ಹಾಕಿದರೆ ಅವ್ವ ನೊಂದುಕೊಳ್ಳುವದಿಲ್ಲವೆ?

ರಾಜೀವ - ಮಂದಾಕಿನಿಯ ಮದುವೆಗಾಗಿ ನಾನು ನಿನ್ನ ಬಲಿಕೊಡಲು ಸಿದ್ಧನಿಲ್ಲಮ್ಮ. ಕಲ್ಯಾಣಿ ಅವಳಂತೆ ನೀನೂ ನನ್ನ ಮಗಳೆ

ಕಲ್ಯಾಣಿ - ತಂಗಿಯ ಸುಖಕ್ಕಾಗಿ ನಾನೇ ಈ ತ್ಯಾಗಕ್ಕೆ ಸಿದ್ಧವಾಗತ್ತೇನಪ್ಪ. ನೀನು ಒಪ್ಪಿಕೊಂಡು ಬಿಡು. ಇದು ನನಗೂ ಶ್ರೇಯಸ್ಸು ನಿನಗೂ ಶ್ರೇಯಸ್ಸು. ಸಾಹುಕಾರರೇ ಮದುವೆಯಾಗಲಿಕ್ಕೆ ನಾನು ಸಿದ್ಧಳಾಗಿದ್ದೇನೆ

ರಂಗಣ್ಣ - ಆಗಲಿ ಸಂತೋಷ. ಹೂಂ ಹೇಳು ಮದುವೆಯನ್ನು ಎಂದು ನಿರ್ಧರಿಸೋಣ?

ಕಲ್ಯಾಣಿ - ನಿಮಗೆ ಬೇಕಾದಾಗ ಮಾಡಿಕೊಳ್ಳಬಹುದು. ಆದರೊಂದು ಮಾತು, ನಮ್ಮ ತಂದೆಯ ಸಾಲ ಮುಟ್ಟಿದ ಬಗ್ಗೆ ಮದುವೆಯ ಮೊದಲ ದಿನವೆ ನೀವು ಕಾಗದ ಬರೆದುಕೊಡಬೇಕು. ಇದಾದ ಮೇಲೆಯೇ ಮದುವೆ

ಶೇಷ - ಅಯ್ಯೋ ಅದನ್ನು ನನಗೆ ಒಪ್ಪಿಸಿಬಿಡಿ. ಅದಕ್ಕೆಲ್ಲ ನಾನು ಜವಾಬ್ದಾರನಾಗಿದ್ದೇನ. ಯಾಕೆ ಯಜಮಾನ್ರೆ

ರಂಗಣ್ಣ - ಈ ಹೊತ್ತೆ ಸಾಲ ಮುಟ್ಟಿದ ಬಗ್ಗೆ ಬರೆದುಕೊಡುತ್ತೇನೆ. ರಾಜೀವ ಇಲ್ಲಿ ಕೇಳು ಈ ಹೊತ್ತಿಗೆ ಹದಿನೈದನೇ ದಿನಕ್ಕೆ ಸರಿಯಾಗಿ ಅಡವಿ ಅಮರೇಶ್ವರ ದೇವಸ್ಥಾನದಲ್ಲಿ ಲಗ್ನ ನಿಶ್ಚಿಯಿಸಲಾಗುತ್ತದೆ

ಶೇಷ - ಅಲ್ಲದೆ ಮದುವೆಯ ಖರ್ಚಿಗೊಂದು ನಾಳಿಗೇನೇ ನಿಮಗೆ ಒಂದು ಸಾವಿರ ರೂಪಾಯಿ ಅಡ್ವಾನ್ಸ್ ಕೊಟ್ಟು ಬಿಡುತ್ತೇವೆ. ಯಾಕೆ ಯಜಮಾನ್ರೆ

ರಂಗಣ್ಣ - ವಿಳಂಬವೇಕೆ ಶೇಷ ? ಇವತ್ತೇ ಈಗಲೇ ಸಾವಿರ ರೂಪಾಯಿ ಚೆಕ್ಕು ಬರೆದು ಕೊಡುತ್ತೇನೆ (ಬರೆದು) ಕೊಡೋ ಶೇಷ

ಶೇಷ - ಕಾವೇರಮ್ಮ ತಗೊಳಮ್ಮ, ಕೊಟ್ಟು ಬಿಡಮ್ಮ ನಿಮ್ಮ ಯಜಮಾನರ ಕೈಗೆ. (ಕೊಡುವನು)

ರಂಗಣ್ಣ - ಶೇಷ ನಡೆ ಹೋಗೋಣ (ಹೋಗುವನು)

ಕಾವೇರಿ - ಮಗು ಕಲ್ಯಾಣಿ ಕೊಡಮ್ಮ ಇದನ್ನು ನಿಮ್ಮ ತಂದೆಯವರಿಗೆ

ಕಲ್ಯಾಣಿ - ತೆಗದುಕೊಳ್ಳಪ್ಪ ಈ ಚೆಕ್

ರಾಜೀವ - ನಾನು ಪಾಪಿ... ನನ್ನ ಸಾಲಕ್ಕೆ ಹೊಟ್ಟೆಯ ಮಗಳನ್ನೇ ಮಾರಿಕೊಂಡ ದ್ರೋಹಿ. ಶ್ರೀದೇವಿ ನೀನು ಸಾಯುವ ಕಾಲಕ್ಕೆ ನಿನಗಿತ್ತ ವಚನ ಪಾಲಿಸದ ಪಾಪಿ ನಾನು. ಇದು ನನ್ನ ಮಗಳ ಮದುವೆ ಅಲ್ಲ, ಇದು ನನ್ನ ಮಗಳ ಮದುವೆಯಲ್ಲ... ಮಸಣ... ನನ್ನ ಮಗಳ ಜೀವಂತ ಸಾವು ! (ಅಳುವನು)

# ದೃಶ್ಯ - ೪

## ಜಂಗಲ್ ರಸ್ತಾ

ಶ್ಯಾಮ - ಎಂತಪ ಉಷ್ಣ ಪ್ರದೇಶವಪ್ಪ ಈ ರಾಯಚೂರ ಜಿಲ್ಲೆ. ಅಂತೆಯೇ ಬಿಸಿಲಿಗೆ ಬಹಳ ಪ್ರಸಿದ್ಧವಾಗಿದೆ. ಈ ಉರಿಬಿಸಿಲಿನಲ್ಲಿ ರೋಡಿನಿಂದ ಮೂರು ಮೈಲು ನಡೆಯುತ್ತ ಬಂದದ್ದರಿಂದ ತುಂಬಾ ಬಾಯಾರಿಕೆಯಾಯಿತು. ವಾಹನ ಸೌಕರ್ಯವಂತೂ ಇಲ್ಲವೆ ಇಲ್ಲ. ಊರು ತಲುಪಬೇಕಾದರೆ ಇನ್ನೂ ಒಂದುಮೈಲು ನಡೆಯುಬೇಕೆಂದು ಕಾಣುತ್ತದೆ. ನಡೆಯುಬೇಕೆಂದರೆ ಬಾಯೊಳಗಿನ ಲಾಲಾರಸ ಬತ್ತಿ ಗಂಟಲು ಒಣಗಿ ಹೋಗಿದೆ. (ನೋಡಿ) ಓಹೋ ಯಾರೋ ಹೆಣ್ಣು ಮಗಳು ಬಟ್ಟೆಯೊಗೆಯಲೆಂದು ಇದೇ ಮಾರ್ಗವಾಗಿ ಬರುತ್ತಲಿದ್ದಾಳೆ. ಬರಲಿ ಅವರನ್ನು ಕೇಳಿ ಸಮೀಪದಲ್ಲಿ ನೀರಿದ್ದರೆ ಕುಡಿದು ಹೋದರಾಯಿತು. (ಕಲ್ಯಾಣಿ ಬರುವಳು) ಏನಮ್ಮ ಬಿಸಿಲಿನ ದಾಹದಿಂದ ತಂಬಾ ಬಾಯಾರಿಕೆಯಾಗಿದೆ. ಸಮೀಪದಲ್ಲಿ ನೀರೇನಾದರೂ ಇದ್ದರೆ ಹೇಳುವಿರಾ ?

ಕಲ್ಯಾಣಿ - ಏಕೆ ಇನ್ನೂ ಸ್ವಲ್ಪ ಮುಂದೆ ಹೋದರೆ ಊರೆ ಬಂದು ಬಿಡುವದಲ್ಲ

ಶ್ಯಾಮ - ನೀರಿನ ದಾಹದಿಂದ ನಾಲಿಗೆ ದ್ರವ ಆರಿ, ನಡೆಯುವದಿರಲಿ, ಮಾತನಾಡಲೂ ಕೂಡ ಬಾರದಂತಾಗಿದೆ. ಕಾರಣ ಸಮೀಪದಲ್ಲಿ ನೀರಿದ್ದರೆ ....

ಕಲ್ಯಾಣಿ - ಅಯ್ಯೋ ಪಾಪ ಇಲ್ಲಿ ಬಾವಿಯೆನೋ ಇದೆ. ಆದರೆ ನೀರು ಮಾತ್ರ ಅಷ್ಟೊಂದು ಸರಿ ಇಲ್ಲ

ಶ್ಯಾಮ - ಹೇಗಿದ್ದರೂ ಚಿಂತಯಿಲ್ಲ. ನಾಲಿಗೆ ಹಸಿ ಆದರೆ ಸಾಕು ತೋರಿಸುತ್ತೀರಾ ? ಕುಡಿದುಹೋಗುತ್ತೇನೆ

ಕಲ್ಯಾಣಿ - ಸ್ವಲ್ಪ ನಿಂತುಕೊಳ್ಳಿ... ಪಾಪ ದಣಿದು ಬಂದಿದ್ದೀರಿ. ನಾನೇ ತಂದು ಕೊಡುತ್ತೇನೆ (ಹೋಗುವಳು)

ಶ್ಯಾಮ - ಯಾರಿವಳು ? ಈ ಸುಂದರ ತರುಣಿ ಯಾರಾಗಿರಬಹುದು ? ಈ ಮುಗ್ಧ ಹುಡಿಗಯು ಸಾಮಾನ್ಯ ವೇಷದಲ್ಲಿದ್ದರೂ ಇವಳ ಅಸಾಮಾನ್ಯ ಸೌಂದರ್ಯ

ಎದ್ದು ಕಾಣುತ್ತದೆ. ಮಲ್ಲಿಗೆಯು ಮನಸ್ಸಿಗೆ ತಂಪನೆರಚುವಂತೆ ಮಾತನಾಡಿದ ಈ ಬಾಲೆ ದೂರದ ಮಿಂಚಿನಂತೆ ಸುಮನೋಹರವಾಗಿದ್ದಾಳೆ. ನಾನು ಮದುವೆಯಾಗಲು ನೋಡ ಹೊರಟ ನನ್ನ ಕಾವೇರತ್ತೆಯ ಮಗಳೇ ಇವಳಾಗಬಾರದೇ ? ಹಾಗಾದರೆ ನನ್ನ ಅದೃಷ್ಟಕ್ಕೆ ಎಣೆಯೇ ಇಲ್ಲ

ಕಲ್ಯಾಣಿ - (ತಂಬಿಗೆಯಲ್ಲಿ ನೀರು ತಂದು) ನೋಡಿ ನೀರು ತುಂಬಾ ಜೊಂಡಾಗಿದೆ. ಅಲ್ಲದೇ ಬಹಳ ಸೀತ ಬೇರೆ. ಸ್ವಲ್ಪ ಮಾತ್ರ ಕುಡಿಯಿರಿ. ನಿಮ್ಮ ಬಳಿ ಕರವಸ್ತ್ರವಿದ್ದರೆ ತಂಬಿಗೆಯ ಬಾಯಿಗೆ ಹಾಕಿ ಕುಡಿಯಿರಿ

ಶ್ಯಾಮ - (ಕರವಸ್ತ್ರ ನೋಡಿ) ಅಯ್ಯೋ ಬರುವಾಗ ಸಿಂಧನೂರು ಬಸ್ ಸ್ಟ್ಯಾಂಡ್‌ನಲ್ಲಿ ಕಾಫಿ ಕುಡಿಯುವಾಗ ಮರೆತು ಬಂದುಬಿಟ್ಟೆ. ಇರಲಿಬಿಡಿ (ತೆಗೆದುಕೊಂಡು ಕುಡಿಯ ಹತ್ತುವನು)

ಕಲ್ಯಾಣಿ - ಹಾ ! ಹಾ ! ಹಾಗೆ ಕುಡಿಯಬೇಡಿ.ಇಳಿದು ತುಂಬುವ ಈ ಭಾವಿಯಲ್ಲಿ ಬಟ್ಟೆ ಒಗೆಯುತ್ತಿರುವದರಿಂದ ನೀರಿನಲ್ಲಿ ಕೆಟ್ಟ ಕ್ರಿಮಿಗಳಿರಬಹುದು. ಇಲ್ಲಿಯ ನೀರನ್ನು ಸೋಸಿ ಕುಡಿಯದಿದ್ದರೆ ನಾರು ಹುಣ್ಣು ಹುಟ್ಟಿಕೊಳ್ಳುತ್ತವೆ

ಶ್ಯಾಮ - (ಗಾಬರಿ) ಆಂ ನಾರುಹುಣ್ಣು ಹುಟ್ಟುತ್ತದೆಯೇ ? ಅಯ್ಯೋ ಈಗೇನು ಮಾಡಬೇಕು. ನನ್ನ ಬಳಿ ಮತ್ತೇನೂ ಇಲ್ಲ, (ಶರಟಿನ ಬಟ್ಟೆ ಅಡ್ಡಹಿಡಿದು ಕೊಂಡು ಕುಡಿಯಲು ಹೋಗುವನು. ಅದು ಜಾರುವದು. ಕಲ್ಯಾಣಿ ನಗುವಳು)

ಕಲ್ಯಾಣಿ - (ನಗುತ್ತ) ಇದೇನಿದು ನಿಮ್ಮ ಹುಚ್ಚಾಟ

ಶ್ಯಾಮ - (ನಸು ಕೋಪದಿಂದ) ನನಗೆ ನೀರು ಹೇಗೆ ಕುಡಿಯಬೇಕೆಂಬ ಸಂಕಟ. ಅದನ್ನು ಕಂಡು ನಿಮಗೆ ನಕ್ಕು ಅಪಹಾಸ್ಯ ಮಾಡುವ ಚೆಲ್ಲಾಟವೇ

ಕಲ್ಯಾಣಿ - ಅಲ್ಲಾ ಅದು ಹೇಗೆ ಕಡಿಯಲಿಕ್ಕೆ ಬಂದೀತು (ತನ್ನ ಸೀರೆ ಸೆರಗು ತಂಬಿಗಗೆ ಹಾಕಿ) ಹೂಂ ಕುಡಿಯಿರಿ. ಹೂಂ ಬೇಗ ಕುಡಿಯಿರಿ

ಶ್ಯಾಮ - (ಕುಡಿದು) ತುಂಬಾ ಥ್ಯಾಂಕ್ಸ್. ನೀರಿನ ದಾಹದಿಂದ ಇಡೀ ದೇಹವೆ ತಲ್ಲಣಿಸಿ ಹೋಗಿತ್ತು. ಆ ದಾಹ ನೀಗಿಸಿದ ತಮ್ಮ ಉಪಕಾರ....

ಕಲ್ಯಾಣಿ - ಇದರಲ್ಲೇನು ಉಪಕಾರ ಬಂತು ? ಬಾಯಾರಿಕೆಯಿಂದ ಬಳಲಿ ಬಂದವರಿಗೆ ಸ್ವಲ್ಪ ನೀರು ಕೊಟ್ಟರೆ ....

ಶ್ಯಾಮ - ಬರಿ ನೀರು ಕೊಟ್ಟಿದ್ದರೆ ನಾನಿಷ್ಟು ಉಪಕಾರ ಹೇಳಬೇಕಾಗಿರಲಿಲ್ಲ. ಹಿಂದೊಮ್ಮೆ ಸಮುದ್ರ ಮಂಥನ ಕಾಲಕ್ಕೆ ಹೊರಟಿದ್ದ ವಿಷವನ್ನು ಶಿವನು ಕುಡಿದಂತೆ. ಆಗ ಅವನು ಕುಡಿದ ಹಾಲಾಹಲ ಶಿವನ ಹೊಟ್ಟೆ ಸೇರಿದ್ದರೆ ಆ ಶಿವನೇ ಶವವಾಗಿ ಬಿಡುತ್ತಿದ್ದ. ಹಾಗಾಗದಿರಲೆಂದು ಆತನ ಸತಿ ಪಾರ್ವತಿ ಆತನ ಕಂಠವನ್ನು ಭದ್ರವಾಗಿ ಹಿಡಿದು ಸಾಯಲಿರುವ ಶಿವನನ್ನು ಮತ್ತೆ

ಬದುಕಿಸಿದಳಂತೆ. ವಿಷ ಕಂಠದಲ್ಲಿಯೇ ಉಳಿಯಿತಂತೆ. ಅದರಂತೆ ಕೆಟ್ಟ ಕ್ರಿಮಿಗಳಿಂದ ಕೂಡಿದ ನೀರನ್ನು ತಾವು ಕೊಟ್ಟ ತಕ್ಷಣ ಕುಡಿದು ಬಿಟ್ಟಿದ್ದರೆ ದುಷ್ಟ ರೋಗ ಬರುತ್ತಿತ್ತೋ... ಏನೋ... ಹಾಗಾಗಬಾರದೆಂದು ತಾವು ಕುಡಿಯಲು ಬಾರದ ನೀರಿಗೆ ನಿಮ್ಮ ಸೀರೆಯ ಸೆರಗಿನ ಆಸರೆ ನೀಡಿ ಉಪಕರಿಸಿದಿರಿ. ಇದು ಸಾಮಾನ್ಯ ವಿಷಯವಲ್ಲ

ಕಲ್ಯಾಣಿ - ಹೊಗಳಿಕೆಯ ಮಾತಿರಲಿ. ಮೊದಲು ಬಿಸಿಲಿನ ತಾಪದಿಂದ ಬಳಲಿ ಬೆವರೊಡೆದ ನಿಮ್ಮ ಮುಖವನ್ನಷ್ಟು ಒರಿಸಿಕೊಳ್ಳಿ. ಅದೇ ನನ್ನ ಸೆರಗಿನಿಂದ (ಒರಸಿಕೊಳ್ಳುವನು) ಅಂದ ಹಾಗೆ ನೀವು ಈ ಊರಿಗೆ ಈ ಮೊದಲು ಎಂದೂ ಬಂದಿರಲಿಲ್ಲವೇ ?

ಶ್ಯಾಮ - ಇಲ್ಲ ಇದೇ ಮೊದಲು ಸಲ

ಕಲ್ಯಾಣಿ - ಯಾವ ಊರು ತಮ್ಮದು ?

ಶ್ಯಾಮ - ಸಿದ್ದಾಪುರ. ಆದರೆ ನಾನು ಹುಟ್ಟಿ ಬೆಳೆದದ್ದು ಮೈಸೂರು ಸ್ಟೇಟಿನ ಕೋಲಾರದ ಚಿನ್ನದ ಗಣಿಯಲ್ಲಿ. ಅಲ್ಲಿ ನಮ್ಮ ತಂದೆಯವರಿಗೆ ನೌಕರಿಯಿತ್ತು

ಕಲ್ಯಾಣಿ - ಅಂದರೆ ಈಗ ನೀವು ಇಲ್ಲಿ

ಶ್ಯಾಮ - ಇಲ್ಲಿ ನಮ್ಮ ಸೋದರತ್ತೆಯ ಮನೆಯಿದೆ. ಕಾವೇರಮ್ಮ ಅಂತಾ ಅವರ ಹೆಸರು

ಕಲ್ಯಾಣಿ - ತಮ್ಮ ಹೆಸರು

ಶ್ಯಾಮ - ಶ್ಯಾಮ ? ಅದಿರಲಿ ತಮ್ಮ ಹೆಸರು

ಕಲ್ಯಾಣಿ - ಕಲ್ಯಾಣಿ.

ಶ್ಯಾಮ - ಕಲ್ಯಾಣಿ... ಒಳ್ಳೇದು ನೀವು ಇದೇ ಊರವರೆಂದು ಕಾಣುತ್ತದೆ. ದಯವಿಟ್ಟು ಇನ್ನೊಂದು ಸಲ ಭೇಟಿಯಾದರೆ ಉಪಕಾರವಾಗುತ್ತದೆ, ಆಗುತ್ತೀರಾ ?

ಕಲ್ಯಾಣಿ - ಒಳ್ಳೇದು ... ಆಗುತ್ತೇನೆ

ಶ್ಯಾಮ - ಎಲ್ಲಿ ! ಯಾವ ಸ್ಥಳದಲ್ಲಿ

ಕಲ್ಯಾಣಿ - ನಿಮ್ಮ ಸೋದರತ್ತೆಯ ಮನೆಯಲ್ಲಿ

ಶ್ಯಾಮ - ಮತ್ತೆ ತಪ್ಪಿಸಿಕೂಡದು

ಕಲ್ಯಾಣಿ - ಇಲ್ಲ ತಪ್ಪಿಸುವುದಿಲ್ಲ

ಶ್ಯಾಮ - ಒಳ್ಳೇದು ನಾನಿನ್ನು ಬರುತ್ತೇನೆ

ಕಲ್ಯಾಣಿ - ಆಗಬಹುದು (ಕಲ್ಯಾಣಿ ನಗುತ್ತ ಹೋಗುವಳು)

ಶ್ಯಾಮ - ಕಲ್ಯಾಣಿ ಎಂತಹ ಸುಂದರವಾದ ಹೆಸರು. ಹೆಸರಿಗೆ ತಕ್ಕ ನೂರ್ಮಡಿ ಸುಂದರಿ

ಸೌಂದರ್ಯದ ನೂರು ಪಟ್ಟು ಹೃದಯ ವೈಶಾಲ್ಯ

ಶೇಷ - (ಉಗುಳತ್ತ ಬರುತ್ತ) ಥೂ, ಥೂ, ಬಾಯಾರಿಕೆಯಿಂದ ನೀರ ಕುಡಿಯಲು ಹೋದರೆ ಬರೀ ಹುಳಾನೇ ಹುಳಾ

ಶ್ಯಾಮ - ಏನು ನೀವು ಇದೇ ಬಾವಿ ನೀರು ಕುಡಿದೀರೇನು ?

ಶೇಷ - ಅಲ್ಲಾ ಕುಡಿಯೋಣಾ ಅಂತ ನೋಡಿದೆ ನೀವು ಕುಡಿದಿರಲ್ಲ. ಇನ್ನು ನಾನೇನು ಕುಡಿಯೋದು ಅಂತಾ ಬಿಟ್ಟೆ. ಯಾಕಂದ್ರ ಒಬ್ಬರು ಕುಡಿದ ನೀರು ಕುಡಿಯುವ ರೂಢಿ ಇಲ್ಲ ನಮಗೆ

ಶ್ಯಾಮ - ಹೋಗಲಿ ನೀವು ಇದೇ ಊರಿನವರೇನು ?

ಶೇಷ - ಹೂಂ, ಸದ್ಯ ಇದೇ ಊರು ಅಂತ ಇಟ್ಟುಕೊಳ್ಳಿ ಯಾಕೆ ?

ಶ್ಯಾಮ - ಊರಲ್ಲಿರುವ ಬಾವಿಯ ನೀರಾದರೂ ಕುಡಿಯಲು ಯೋಗ್ಯವಾಗಿರುವವಷ್ಟೆ

ಶೇಷ - ಎಲ್ಲಿ ಬಂತು ಸ್ವಾಮಿ ಇದು ರಾಯಚೂರ ಜಿಲ್ಲೆ. ಊರೊಳಗಿನ ಬಾವಿಗಳೆಲ್ಲ ಇಳಿದು ತುಂಬುವ ಬಾವಿಗಳೇ. ಇನ್ನು ಊರ ಹೊರಗೆ ಆ ಪೀರ್ ದೇವರ ಗೋರಿಯ ಬಳಿ ಒಂದೆರಡು ಬಾವಿಗಳನ್ನು ಕಟ್ಟಿಸಿದ್ದಾರೆ. ಆದರೇನು ಬಹಳ ದೂರವಾಗಿರುತ್ತವೆಂದು ಅಲ್ಲಿಯ ನೀರನ್ನು ಬಹಳ ಜನರು ತಂದು ಕುಡಿಯುವುದಿಲ್ಲ. ಬರಿಯ ಇಳಿದು ತುಂಬುವ ಬಾವಿಯಲ್ಲಿ ಹುಳಬಿದ್ದ ನೀರು ಕುಡಿದು ಆರೋಗ್ಯ ಕೆಡಿಸಿಕೊಳ್ಳುತ್ತಲಿದ್ದಾರೆ

ಶ್ಯಾಮ - ಹಾಗಿದ್ದರೆ ಊರ ಜನರ ಆರೋಗ್ಯದ ಗತಿಯೇನು ?

ಶೇಷ - ದೇವರೇ ಗತಿ. ನೋಡಿ ಈ ಅನಾರೋಗ್ಯದ ನೀರಿನ ಸೇವನೆಯಿಂದಾಗಿ ಜನರಿಗೆಲ್ಲ ನಾರುಹುಣ್ಣು ಹುಟ್ಟಿದ್ದನ್ನು ಇದೇ ಕಣ್ಣಿನಿಂದ ನೋಡಿದ್ದೇನೆ. ಹೆಸರಿಗೆ ತಕ್ಕಂತೆ ಈ ಊರು ತನ್ನ ಗೌರವ ಕಾಯ್ದುಕೊಂಡಿದೆ ಸ್ವಾಮಿ

ಶ್ಯಾಮ - ಅಂದರೆ

ಶೇಷ - ಅಂದರೆ ಅದೇ ಈ ಊರ ಹೆಸರಿನಲ್ಲಿ ಅಡಗಿರುವ ವೈಶಿಷ್ಟ್ಯ. ಈ ಊರ ಹೆಸರು ಕೇಳಿಲ್ಲವೇ ? ಇದಕ್ಕೆ ಕರೆಯುತ್ತಾರೆ ಕುರಡಿ ಅಂತ. ನೋಡಿ ಮಾನವನಿಗೆ ಕಣ್ಣು ಸರ್ವಶ್ರೇಷ್ಟವೆಂದೂ ಪರಿಗಣಿಸಲ್ಪಡುವಾಗ ಈ ಕುರಡಿ ನಾಗರಿಕತೆಯನ್ನು ಕಳೆದುಕೊಂಡು ಕುರುಡಿಯಾಗಿಬಿಟ್ಟಿವೆ

ಶ್ಯಾಮ - ಹೌದು ವಾಹನ ಸೌಕರ್ಯವಿಲ್ಲ. ನೀರಿನ ಸೌಕರ್ಯ ಇಲ್ಲ. ಎಷ್ಟೋ ಜನ ಪದವೀಧರರನ್ನು ಕೊಟ್ಟ ಈ ಊರಿನ ಗತಿ ಇಷ್ಟೇಕೆ ಹೀನ ಸ್ಥಿತಿಯಲ್ಲಿದೆ ?

ಶೇಷ - ಅವರೆಲ್ಲಾ ಇಲ್ಲಿಲ್ಲ ಸ್ವಾಮಿ. ಧಾರವಾಡ ರಾಯಚೂರು ಗುಲಬರ್ಗಾ, ಬೆಂಗಳೂರು, ಮೈಸೂರಂತಹ ಊರಿಗೆ ನೌಕರಿಯ ಮೇಲೆ ಹೋಗಿದ್ದಾರೆ. ಕಲಿತವರೆಲ್ಲ ಹುಟ್ಟಿದ ಹಳ್ಳಿಯ ಬಗ್ಗೆ ಲಕ್ಷ ಕೊಟ್ಟಿದ್ದರೆ ನಮ್ಮ ದೇಶದ ಸ್ಥಿತಿ

ಹೀಗಾಗುತ್ತಿತ್ತೆ ? ಕಲಿಯುವದು ನೌಕರಿಗಾಗಿ, ಸ್ವಾರ್ಥಕ್ಕಾಗಿ. ಹೋಗಲಿ ಹೋದವರು ಹೋಗಲಿ ಇದ್ದವರಾದರೂ ಲಕ್ಷ್ಯ ಕೊಡಬಾರದೇ ? ಇದೊಂದೇ ಹಳ್ಳಿಯಲ್ಲ ಸ್ವಾಮಿ... ಎಲ್ಲ ಹಳ್ಳಿಗಳ ಪಾಡು ಇಷ್ಟೆ. ಇದ್ದವರು ನನ್ನ ಬೈದರೂ ಚಿಂತೆಯಿಲ್ಲ. ನಾನಂತೂ ಈ ಮಾತುಗಳನ್ನು ಒತ್ತಿ ಹೇಳುತ್ತೇನೆ

ಶ್ಯಾಮ - ಏನೆಂದು ?

ಶೇಷ - ಅದೇ ಊರಿನ ಆರೋಗ್ಯದ ಕಥೆ. ಸ್ವಲ್ಪ ಲಕ್ಷ್ಯ ಕೊಡಿ, ಹಾಗೆ ವಾಹನ ಸೌಕರ್ಯ, ಬಾವಿ ದುರಸ್ತಿ ಮಾಡಿಕೊಳ್ಳಿ ಅಂತ. ನೋಡಿ ಸ್ವಾಮಿ ಊರವರೆಲ್ಲ ಮನಸ್ಸು ಮಾಡಿದರೆ ನಾಲ್ಕು ಮೈಲು ನಡೆಯುವ ಈ ಕಷ್ಟವಾಗಲಿ ಅಲ್ಲದೆ ಇಂತಹ ಹೊಲಸು ನೀರು ಕುಡಿಯುವದಾಗಲಿ ಯಾಕೆ ಬರುತ್ತಿತ್ತು ಹೇಳಿ. ಆದರೆ ನನ್ನ ಮಾತನ್ನು ಯಾರು ಕೇಳುತ್ತಾರೆ. ಯಾಕೆಂದರೆ ಮೊದಲೇ ನಾನು ನಾಟಕದವನು ಎಂಬ ಅಸಡ್ಡೆ. ಯಾರು ಕೇಳಬೇಕು ಸ್ವಾಮಿ ನನ್ನ ಮಾತು. ಆದರೂ ಊದುವ ಶಂಖ ಊದಬೇಕಾದದ್ದು ನನ್ನ ಕರ್ತವ್ಯ. ಅಷ್ಟು ಮಾಡಿದ್ದೇನೆ. ಬನ್ನಿ ಸ್ವಾಮಿ ಹೋಗೋಣ.

# ದೃಶ್ಯ - ೫

## ರಾಜೀವಪ್ಪನ ಮನೆ

ಶ್ಯಾಮ - ಅತ್ತೆ, ಅತ್ತೆ

ಮಂದಾಕಿನಿ - ಬನ್ನಿ ಯಾರು ನೀವು ?

ಶ್ಯಾಮ - ನಾನು ಶ್ಯಾಮ. ಕಾವೇರಮ್ಮನವರ ಸೋದರಳಿಯ ನಮ್ಮತ್ತೆಯವರಿಲ್ಲವೇ ?

ಮಂದಾಕಿನಿ - ಇದ್ದಾರೆ ಬನ್ನಿ ಕುಳಿತುಕೊಳ್ಳಿ. ಅವ್ವ ಅವ್ವ ನೋಡವ್ವ ಇಲ್ಲಿ ಯಾರು ಬಂದಿದ್ದಾರೆ ? ಗುರ್ತಿಸು

ಕಾವೇರಿ - ಇವರು ! ಯಾರಪ್ಪ ನೀವು ಎಲ್ಲಿಯೂ ನೋಡಿದಂತಿಲ್ಲ. ಯಾರು ಬೇಕಾಗಿತ್ತು

ಶ್ಯಾಮ - ನನಗೆ ನನ್ನ ಕಾವೇರತ್ತೆಯವರು ಬೇಕಾಗಿತ್ತು

ಮಂದಾಕಿನಿ - ಗುರ್ತು ಸಿಕ್ಕಲಿಲ್ಲವೇನಮ್ಮಾ ಇವರು ನಿನ್ನ ಅಳಿಯಂದಿರು

ಕಾವೇರಿ - ಆ ! ಯಾರು ಶ್ಯಾಮನೇ ನನ್ನಣ್ಣನ ಮಗ

ಶ್ಯಾಮ - ಹೌದತ್ತಿ ನಾನೇ ಶ್ಯಾಮ

ಕಾವೇರಿ - ಎಷ್ಟು ಬೆಳೆದು ಬಿಟ್ಟಿದ್ದಿಯೋ ಶ್ಯಾಮ. ನನಗಂತೂ ಗುರ್ತು ಸಿಕ್ಕಲಿಲ್ಲ. ನಿನ್ನ ನೋಡದೆ ಹದಿನಾರು ವರ್ಷವಾಯಿತು

ಮಂದಾಕಿನಿ - ನೀವು ಮುಂಚಿತವಾಗಿ ತಿಳಿಸಿದ್ದರೆ ರೋಡಿನವರೆಗೆ ಚಕ್ಕಡಿಯನ್ನಾದರೂ ಕಳಿಸುತ್ತಿದ್ದೆವು

ಶ್ಯಾಮ - ಈಗಂತೂ ಬಂದದ್ದಾಗಿದೆ. ಇನ್ನೊಂದು ಸಲ ಬರುವಾಗ ಟೆಲಿಗ್ರಾಮ್ ಕಳಿಸುತ್ತೇನೆ. ಅದಿರಲಿ ಅತ್ತಿ, ಇವಳೇ ಏನಮ್ಮಾ ನಿನ್ನ ಮಗಳು

ಕಾವೇರಿ - ಹೌದಪ್ಪ ಇವಳೇ ನನ್ನ ಮಗಳು ಮಂದಾಕಿನಿ. ಸ್ಕೂಲಿನಲ್ಲಿ ಓದುತ್ತಲಿದ್ದಾಳೆ ಕೂಡು ಶ್ಯಾಮ ನಿಂತುಕೊಂಡೆ ಮಾತನಾಡುತ್ತಿರುವೆಯಲ್ಲ

ಶ್ಯಾಮ - ಆಗಲತ್ತೆ (ಕೂಡ್ರುವನು)

ಮಂದಾ - ಅವ್ವ ದಣಿದು ಬಂದಿದ್ದಾರ ಬೇಗನೆ ತಿನ್ನಲಿಕ್ಕನಾದರೂ ಮಾಡಿ ಸ್ವಲ್ಪ ಚಹ ಮಾಡಬಾರದೆ ? ಯಾವಾಗ ಊಟ ಮಾಡಿದರೋ ಏನೋ

ಶ್ಯಾಮ - ಛೆ ! ಛೆ ! ಬರುವಾಗ ಊಟ ಮಾಡಿಕೊಂಡೇ ಬಂದಿರುವೆ. ಅಲ್ಲದೇ ಸಿಂಧನೂರ ಬಸ್ ಸ್ಟ್ಯಾಂಡ್‌ನ ಅಶೋಕ ಭವನದಲ್ಲಿ ಬಿಸಿದೋಸೆ ತಿಂದು ಬಂದಿರುವೆ. ಈಗ ತಿಂಡಿಗಿಂಡಿ ಏನೂಬೇಡ. ಬರೀ ಚಹಾ ಆದರೆ ಸಾಕು

ಕಾವೇರಿ - ಇರಲಿ ಕೂಡಪ್ಪ. ಬಹಳ ದಿನಗಳ ಮೇಲೆ ಅತ್ತೆ ಮನೆಗೆ ಬಂದಿರುವೆ. ಸಿಹಿ ಕೊಡದೆ ಬರಿ ಚಹ ಕೊಡುವದು ಭೂಷಣವಲ್ಲ. ಅದಿರಲಿ ಶ್ಯಾಮ, ಅಣ್ಣಾ ಆರೋಗ್ಯವಾಗಿದ್ದಾರೇನಪ್ಪ

ಶ್ಯಾಮ - ಇದ್ದಾರೆ ಅತ್ತೆ. ಅದಿರಲಿ ಎಲ್ಲಿ ಮಾವನವರೇ ಕಾಣಲಿಲ್ಲ

ಮಂದಾ - ಹೊರಗೆ ಹೋಗಿದ್ದಾರೆ. ಇನ್ನೇನು ಬರುವ ಸಮಯವಾಗಿದೆ. ಹೋಗು ಅವ್ವ ಬೇಗನೆ ಸ್ವಲ್ಪ ಚಹ ಮಾಡು

ಕಾವೇರಿ - ಆಗಲಮ್ಮಾ ನೀನು ನಿಮ್ಮ ಮಾವನ ಸಂಗಡ ಮಾತನಾಡುತ್ತಲಿರು. ಅಷ್ಟರಲ್ಲಿ ನಾನು ಚಹಾ ಮಾಡುತ್ತೇನೆ

ಮಂದಾ - ಮಾಮಾ ನೀವು ಬೆಂಗಳೂರು, ಮೈಸೂರು ನೋಡಿದ್ದೀರಾ ?

ಶ್ಯಾಮ - ಓಹೋ ಅನೇಕ ಸಲ ನೋಡಿದ್ದೇನೆ ಏಕೆ ?

ಮಂದಾ - ಶಹರದ ಜೀವನ ಬಹಳ ಸುಖಕರ ಅಲ್ಲವೇ ?

ಶ್ಯಾಮ - ಅದು ಅವರವರ ಅಭಿರುಚಿಗೆ ಸಂಬಂಧಪಟ್ಟಿರುತ್ತದೆ. ಹಾಗೆ ನೋಡಿದರೆ ನನಗೆ ಮಾತ್ರ ಶಹರದ ಜೀವಕ್ಕಿಂತಲೂ ಹಳ್ಳಿಯ ಜೀವನವೇ ಹೆಚ್ಚು ಹಿತಕಾರಿಯಾಗಿ ಕಾಣುತ್ತದೆ

ಮಂದಾ - ಇದೇನು ಮಾಮಾ ಪಟ್ಟಣದಲ್ಲಿ ಕಲಿತು ಪದವೀಧರರಾದ ನೀವು ಹಳ್ಳಿಯ ಜೀವನ ಬಯಸುವಿರಾ ?

ಶ್ಯಾಮ - ಮಂದಾಕಿನಿ ನಾನು ಕಾಲೇಜಿನಲ್ಲಿ ಕಲಿತದ್ದು ಸಸ್ಯಶಾಸ್ತ್ರವನ್ನು. ಅದರಲ್ಲಿಯೂ ತೋಟಗಾರಿಕೆಯನ್ನು ಹೆಚ್ಚಾಗಿ ಅಭ್ಯಾಸ ಮಾಡಿದ್ದೇನೆ. ನಮ್ಮ ಭೂಮಿಯನ್ನೇ ತೋಟವನ್ನಾಗಿರಿಸಿ ವಿದ್ಯಾಲಯ ನನಗೆ ನೀಡಿದ ಶಿಕ್ಷಣ ಸದ್ವಿನಿಯೋಗ ಹೊಂದಬಯಸಿರುವೆ

ಮಂದಾ - ಅಂದರೇನು ಮಾಮಾ ಕಷ್ಟಪಟ್ಟು ಕಲಿತು ಮೈ ಕೈ ಕೆಸರು ಮಾಡಿಕೊಳ್ಳಲು ಬಯಸುವಿರಾ ?

ಶ್ಯಾಮ - ಕೈ ಕೆಸರಾದರೇನ ಬಾಯಿ ಮೊಸರು ಮಂದಾ

ಮಂದಾ - ಕೂಲಿಯಾಳಿನ ಹಾಗೆ ಕಷ್ಟ ಪಡುತ್ತ ಹಳ್ಳಿಯಲ್ಲಿ ಬಾಳುವದಕ್ಕಿಂತ ಸಾಕಷ್ಟು ಸಂಬಳವಿರುವ ನೌಕರಿ ಹಿಡಿದು ಶಹರದಲ್ಲಿ ಜೀವಿಸುವದು ಮೇಲಲ್ಲವೇ ?

ಶ್ಯಾಮ - ಹತ್ತು ಜನಕ್ಕೆ ಅನ್ನ ಹಾಕಬಲ್ಲ ಭೂಮಿ ತಾಯಿಯ ಬಲಿಷ್ಠ ಮಗನಾದ

ನಾನು, ತುತ್ತು ಅನ್ನಕ್ಕಾಗಿ ನೌಕರಿ ಹಿಡಿದು ಸರಕಾರದ ಗುಲಾಮನಾಗಲೇನು ?

ಮಂದಾ - ಮಾಮಾ ಈಗ ನೌಕರಿ ಮಾಡುವವರೆಲ್ಲ ಸಣ್ಣವರೆಂದು ನಿಮ್ಮ ಭಾವನೆಯೇನು ?

ಶ್ಯಾಮ - ಹಾಗಲ್ಲ. ಸ್ವತಂತ್ರವಾಗಿ ಜೀವನ ಸಾಗಿಸಲು ಅನುಕೂಲವಿಲ್ಲದ ಬಡವರು ಕಷ್ಟಪಟ್ಟು ಕಲಿತು ನೌಕರಿ ಹಿಡಿದು ಜೀವಿಸಬಹುದು. ಆದರೆ ಕಲಿತವರೆಲ್ಲ ನೌಕರಿಯನ್ನೇ ನೋಡುತ್ತ ಹೋದರೆ ಗತಿ ಏನು ? ಮಂದಾಕಿನಿ ವಿದ್ಯಾರ್ಜನೆ ಇರುವದು ವಿಶ್ವ ಕಲ್ಯಾಣಕ್ಕಾಗಿ. ಬಡವರ ದೀನದಲಿತರ ಹಿತಕ್ಕಾಗಿ. ವಿದ್ಯಾವಂತರಾದವರು ತಾವು ಪಡೆದುಕೊಂಡ ಶಿಕ್ಷಣದ ಆಯುಧದಿಂದ ಅಜ್ಞಾನ ಹಾಗೂ ಅಂಧಕಾರದಲ್ಲಿ ಬಳಲುವ ದೀನ ದಲಿತರ ಅಂಧ ಶ್ರದ್ಧೆಯೆಂಬ ಅವಸರ್ಪಿಣಿಯನ್ನು ಕತ್ತರಿಸಿ ಹಾಕುವ ಪ್ರಯಾಸ ಬಿಟ್ಟು ಕಲಿತವರೆಲ್ಲ ನೌಕರಿಗಾಗಿ ಬಡಿದಾಡುತ್ತಿರುವದು ದೇಶದ ದುರ್ದೈವವೆಂದೇ ಹೇಳಬೇಕು. ಇಂದು ನಮ್ಮ ಭಾರತದ ವಿದ್ಯಾಲಯಗಳು ವಿದ್ಯಾವಂತರನ್ನು ನಿರ್ಮಾಣ ಮಾಡುವ ವಿದ್ಯಾಕೇಂದ್ರಗಳಾಗಿರದೆ, ಬರಿ ಲೆಕ್ಕ ಬರೆದಿಡುವ ಕಾರಕೂನರನ್ನು ಹುಟ್ಟಿಸುವ ಕಾರಖಾನೆಗಳಾಗಿ ಬಿಟ್ಟಿವೆ

ಕಾವೇರಿ - ಶ್ಯಾಮಾ ನೀರು ಬಿಸಿಯಾಗಿವೆ. ದಣಿದು ಬದಿದ್ದೀ ... ಮೊದಲು ಸ್ನಾನ ತೀರಿಸು ಆಮೇಲೆ ಉಪಹಾರ ಮಾಡುವೆಯಂತೆ

ಶ್ಯಾಮ - ಆಗಲಿ ನಡೆ ಅತ್ತೆ (ಹೋಗುವನು)

ಮಂದಾ - ಅಂತೂ ಮಾವ ಒಳ್ಳೆ ರೂಪವಂತರಿದ್ದಾರೆ. ವಿದ್ಯಾವಂತಿಕೆಯ ಜೊತೆ ವಿನಯವಂತೂ ಹೇಳತೀರದು. ಅದರಲ್ಲಿಯೂ ಆ ಪೌರುಷಕ್ಕೆ ಒಪ್ಪ ಹಾಕಿದಂತಹ ಆ ಗಾಂಭೀರ್ಯ ನನ್ನ ಮನಸ್ಸನ್ನು ಕೂಡಲೇ ಎಳೆದುಬಿಟ್ಟಿದೆ. ಅವರು ಮಾತನಾಡುವಾಗ ಎಷ್ಟು ಬೇಡವೆಂದರೂ ಕೇಳದ ನನ್ನ ಕಣ್ಣುಗಳು ಅವರ ಮುಖವನ್ನೇ ನೋಡುತ್ತಲಿದ್ದವು. ಎಲ್ಲಿ ಅವರಿಗೆ ನನ್ನ ದೃಷ್ಟಿ ತಾಕಿತೂ ಏನೋ ? ಮತ್ತೆ ಮತ್ತೆ ಅವರನ್ನು ನೋಡಬಯಸುತ್ತಿದ್ದ ಈ ಖೋಡಿ ಮನಸ್ಸಿನ ಚಪಲ

ಮಂದಾಕಿನಿ - ಪದ

ಕಂಗಳು ಕಂಡ ನಿನ್ನಾ ಚಲುವ ಈಗೆನಗೆ ಬಾರದೀಗ ನಾಚಲು । ಎರಡೂ ಮನಗಳೂ । ಒಂದೆ ಆಗಲು । ಸಮರಸದಿಂದ । ನಿನಗೆ । ಒಲಿದೆನಾ ನಾನು । ನಲುಮೆ ಇದೇನು । ಕಬ್ಬಿಗ ಜೇನು । ಬಾಳಿಗ ಬಣ್ಣ । ಏತಕೆ ಇನ್ನ । ಸವಿಬಾ ಚೆನ್ನ । ದೇವನೇ ನನ್ನ ! ಆಶಾ ಜೀವನ । ಮನಸೇ ಚೇತನ ಕನಸೇ ಬಾಳಿನ । ಕಾಣಲೇದಿನ ।

ಕಾವೇರಿ - (ಬಂದು) ಮಂದಾ ನೋಡಿದೆಯೇನಮ್ಮ ನಿನ್ನ ಮಾವನನ್ನು ? ಹೇಳು ಏನಿದೆ ನಿನ್ನ ಮನಸ್ಸಿನಲ್ಲಿ

ಮಂದಾ - ನನ್ನ ಕೇಳಿದರೆ ನಾನೇನು ಹೇಳಲಮ್ಮ. ಎಲ್ಲಾ ನಿಸ್ಸಿಷ್ಟ

ಕಾವೇರಿ - ದೇವರು ಕಣ್ಣು ಬಿಟ್ಟು ನೋಡುವ ಹೊತ್ತಿಗೆ ಎಲ್ಲಾ ಕಷ್ಟ ಪರಿಹಾರವಾಗುತ್ತದೆ. ಅಂತಹ ಕಾಲ ಬಂದಿದೆ ಮಂದಾ ನಿನಗೆ

ಶ್ಯಾಮ - (ಬರುತ್ತ) ಅತ್ತೆ... ಮಾವಾ ಇನ್ನೂ ಬರಲಿಲ್ಲವೇ

ಕಾವೇರಿ - ಇನ್ನೇನು ಬರುವ ಹೊತ್ತಾಯಿತು ಕೂಡಪ್ಪ (ಕಲ್ಯಾಣಿ ಬರುವಳು) ಎಷ್ಟು ಹೊತ್ತೆ ಮೂದೇವಿ ಎರಡು ಬಟ್ಟೆ ಮಡಿ ಮಾಡಿಕೊಂಡು ಬರಲಿಕ್ಕೆ ? ಮೂರು ಗಂಟೆ ಹಿಡಿಯಿತೇನು ನಿನಗೆ (ಹೊಡೆಯುವಳು)

ಶ್ಯಾಮ - ಅತ್ತೆ ಇವಳು ?

ಕಾವೇರಿ - ಅಹುದಪ್ಪ ಇದೊಂದು ನನ್ನ ಬೆನ್ನಿಗೆ ಬಿದ್ದ ಬೇತಾಳ. ಅಂದರೆ ಅವರ ಮೊದಲ ಹೆಂಡತಿಯ ಮಗಳು

ಶ್ಯಾಮ - ಆ !!! ಅಂದರೆ ಇವಳೂ ನಿನ್ನ ಮಗಳೆ

ಕಾವೇರಿ - ನನ್ನ ಮಗಳಲ್ಲವಪ್ಪ ನಿನ್ನ ಮಾವನವರ ಮಗಳು (ಕಲ್ಯಾಣಿಗೆ) ಏ ನಿಂತು ಬಿಟ್ಟೆಯಲ್ಲೇ ಅವನನ್ನೇನು ನೋಡುತ್ತಿಯೇ ? ಕಣ್ಣು ಸಿಡಿದು ಹೋಗುವಂತೆ. ಮತ್ತೆ ಆ ಹುಡುಗನಿಗೆ ನಿನ್ನ ದೃಷ್ಟಿ ತಾಕೀತು. ಕೆಟ್ಟ ಕಣ್ಣವಳೇ ನಡೀ ಒಳಗೆ. ಅವನು ನಿನ್ನ ಅಮಂಗಳ ಮುಸುಡೆ ನೋಡಲಿಕ್ಕೆ ಬಂದಿಲ್ಲ. ಮಂದಾಕಿನಿಯನ್ನು ಮೊದಲೇ ಕಂಡು ಮೆಚ್ಚಿಕೊಂಡಿದ್ದಾನೆ

ಶ್ಯಾಮ - ಹುಂ ನಿಜ ಅತ್ತೆ. ನಿನ್ನ ಈ ಮಕ್ಕಳಿಬ್ಬರಲ್ಲಿ ನಾನು ಮೆಚ್ಚಿಕೊಂಡಿದ್ದು ಮೊದಲು ಕಂಡವಳನ್ನೇ

ಕಲ್ಯಾಣಿ - ಹಾಂ !!!

ಕಾವೇರಿ - ಆ ಎಂದೇಕೆ ಇಷ್ಟಗಲ ಬಾಯಿ ತೆರೆಯುತ್ತೀಯೆ ? ಹಾಳಾದವಳೇ ಸುಶಿಕ್ಷೆಯಾದ ಮದಾಕಿನಿಯನ್ನು ಬಿಟ್ಟು ಮುಸುರೆ ತಿಕ್ಕುವ ನಿನ್ನನ್ನು ಮೆಚ್ಚುತ್ತಾನೇನು ನಮ್ಮ ಶ್ಯಾಮ

ಕಲ್ಯಾಣಿ - ಇಲ್ಲ ಅವ್ವ ಅವರು ಮೊದಲು ಕಂಡದ್ದು ನನ್ನನ್ನೇ

ಶ್ಯಾಮ - (ನಡುವೆ) ಬಾಯಿಹಾಕಿ ಕಸಮುಸುರೆ ಮಾಡುವ ಕನಿಷ್ಟ ದರ್ಜೆಯ ಹೆಣ್ಣೇ ನಿನ್ನನ್ನು ಕಟ್ಟಿಕೊಂಡು ಕಣ್ಣಲ್ಲಿ ಮಣ್ಣು ಸುರುವಿಕೊಳ್ಳಲೇನು ? ಅತ್ತೆ ನನಗೆ ಎಂಥಾ ಹೆಂಡತಿ ಬೇಕು ಗೊತ್ತೆ

ಕಾವೇರಿ - ಎಂಥವಳು ಬೇಕಪ್ಪ ?

ಶ್ಯಾಮ - ॥ ಪದ ॥

ಪಾಲಿಸ ಚಪಲಿ ಮೆಟ್ಟಿರಬೇಕು ಸಾಲಿಗಂತ ಆಕಿ ಹೋಗುತ್ತಿರಬೇಕು ।

ಕಂಡವರೆಲ್ಲ ಕರಿತಿರಬೇಕು । ಅವರ ಕಂಡ ನಾ ಅಳತಿರಬೇಕು । ಅತ್ತೆ ನನಗೆ ಇಂಥ ಹೆಂಡತೀನೇ ಬೇಕು । ಜಾರ್ಜೆಟ್ ಸೀರೆ ಉಟ್ಟಿರಬೇಕು ಒಳಗಿನ ಲಂಗಾ ಕಾಣತೀರಬೇಕು । ಕಂಡವರು ಕಣ್ಣ ಹೊಡಿತಿರಬೇಕು । ಅವರ ಕಂಡ ನಾನು ಹೊಯಕೊಂತಿರಬೇಕು । ಅತ್ತೆ ನನಗೆ ಇಂಥಾ ಹೆಂಡತಿನೇ ಬೇಕು ॥ ೨ ॥

ಖುರ್ಚಿ ಮೇಲೆ ಕೂತಿರಬೇಕು । ಪುಸ್ತಕ ಪೇಪರ ಓದುತಿರಬೇಕು. ಆಗ ನಾನು ಚಹಾ ಸೋಸುತಿರಬೇಕು. ಬೇಸಿಲ್ಲಂತ ಒದಿತಿರಬೇಕು ಅತ್ತೆ

ಕಾವೇರಿ - ಇರಲಿ ನಡಿಯಪ್ಪ

ಶ್ಯಾಮ - ಆಗಲಿ ಬಾ ಅತ್ತೆ (ಹೋಗುವನು)

ಕಾವೇರಿ - (ಕಲ್ಯಾಣಿಗೆ) ಏನೇ ನಿಂತುಬಿಟ್ಟೆಯಲ್ಲೆ... ಬಟ್ಟೆಗಳನ್ನು ಹೊಂದಿಸಿ ಒಳಗಿಡುವುದಿಲ್ಲವೇ

ಕಲ್ಯಾಣಿ - ಇಡುತ್ತೇನವ್ವ ಆದರೆ ..

ಮಂದಾ - ಮತ್ತೇನಾಯಿತು ?

ಕಲ್ಯಾಣಿ - ಒಗೆದು ಬಾವಿಯ ದಂಡೆಯ ಮೇಲೆಹಾಕಿದ ಮಂದಾಕಿನಿಯ ಸೀರೆಯನ್ನು ದನ ತುಳಿದು ಹರಿದುಬಿಟ್ಟಿತು

ಮಂದಾ - ಆಂ ಎಲ್ಲಿ (ನೋಡಿ) ನೋಡಿದೆಯೇನು ಅವ್ವ. ನನ್ನ ಸೀರೆಯ ಮೇಲೆ ಇವಳಿಗೆ ಹೊಟ್ಟೆಕಿಚ್ಚು. ಆದ್ದರಿಂದ ಈ ಹೊತ್ತು ಇದನ್ನು ಬೇಕಂತ ಹರಿದು ತಂದಿದ್ದಾಳೆ. ಹಾಳಾದವಳು

ಕಲ್ಯಾಣಿ - ಇಲ್ಲವಮ್ಮಾ ಮಂದಾ ನನ್ನಾಣೆಯಾಗಿಯೂ ನಾನು ಹಾಗೆ ಮಾಡಿಲ್ಲ. ಮಾಡುವವಳೂ ಅಲ್ಲಾ

ಕಾವೇರಿ - ಆ ! ಹಾ ! ಹಾ ! ನೀನು ಮಹಾ ಗುಣವಂತೆಯಮ್ಮ. ಅಂದಬಳಿಕ ನೀನೇಕೆ ಹಾಗೆ ಮಾಡುವೆ ? ಇರಲಿ ಸಾಕು ಬಾಯಿ ಮುಚ್ಚು ಆಣೆ ಮಾಡುತ್ತಾಳೆ ಆಣೆ. ಮಾನಗೆಟ್ಟವಳಿಗೆ ಆಣೆ ಒಂದು ಕೇಡು. ಹಾಳು ರಂಡೆ ಹೊಸಸೀರೆಯನ್ನು ದನ ತುಳಿದು ಹರಿಯುತ್ತಿದ್ದಾಗ ನೀನೇನು ಮಾಡುತ್ತಿದ್ದೆ ?

ಮಂದಾಕಿನಿ - ಇನ್ನೇನು ಮಾಡುತ್ತಾಳೆ ? ಬಾವಿ ದಂಡೆಗಿರುವ ಹುಣಸೆ ಮರದ ಕೆಳಗೆ ಕುಳಿತು ಯಾರದರೊಬ್ಬ ತಲೆ ಮಾಸಿದವನಿಗೆ ದಾರಿ ಕಾಯುತ್ತಿರಬೇಕು

ಕಲ್ಯಾಣಿ - ಇದೇನು ಮಂದಾ ಮರ್ಮಕ್ಕೆ ತಾಕುವಂತೆ ಹೀಗೇಕೆ ಮಾತನಾಡುವಿಯಮ್ಮ ? ಹೀಗೇ ಆಡುವದಕ್ಕಿಂತ ನನ್ನ ಕಿವಿಯಲ್ಲಿ ಕಾಯ್ದ ಕಬ್ಬಿಣದ ರಸವನ್ನು ಹೊಯಿದಿದ್ದರೆ ಒಳಿತಿತ್ತು

ಮಂದಾ - ಕಾಮದ ಮಬ್ಬು ಹಿಡಿದವರಿಗೆ ಕಬ್ಬಿಣದ ರಸವೇನು ಮಾಡೀತು ?

ಕಾವೇರಿ - ಅದಿರಲಿ ಈಗ ಅವರ ಮಾವ ಕೊಟ್ಟ ಸೀರೆ ಹರಿದುಕೊಂಡು ಬಂದಿರುವೆಯಲ್ಲ. ನನ್ನ ಮಗಳೇನು ಬತ್ತಲೇ ನಿಲ್ಲಬೇಕೇನು ?

ಕಲ್ಯಾಣಿ - ಬೇಕಿದ್ದರೆ ನನ್ನ ಸೀರೆ ಉಟ್ಟುಕೊಳ್ಳಲಿ ಅವ್ವ. ನಾನಿದನ್ನು ಉಡುತ್ತೇನೆ

ಮಂದಾ - ಏನು ? ನೀನು ಉಟ್ಟು ಬಿಟ್ಟ ಸೀರೆ ನಾನು ಉಡಬೇಕೆ ? ಕೇಳಿದೆಯೇನೆ ಅವ್ವ ಇವಳ ಮಾತುಗಳನ್ನು. ನಾನು ಕಲಿತವಳು ಇವಳು ಬಿಟ್ಟ ಸೀರೆ ಉಡಬೇಕಂತೆ ನಾನು (ಹೊಡೆಯುವಳು)

ಕಾವೇರಿ - ಏ ಗಯ್ಯಾಳಿ ನೀನು ಉಟ್ಟು ಬಿಟ್ಟ ಸೀರೆ ಉಡಲಿಕ್ಕೆ ನನ್ನ ಮಗಳನ್ನೇನು ಭಿಕ್ಷೆಬೇಡಿ ತಂದಿಲ್ಲ ನಾನು. ಹತ್ತು ತಿಂಗಳ ಹೊತ್ತು ಹಡೆದಿದ್ದೇನೆ ಪರದೇಶಿ (ಹೊಡಯುವಳು)

ಶ್ಯಾಮ - ಅತ್ತೆ

ಕಾವೇರಿ - ಹ ! ತಡೆಯಪ್ಪ (ಕಲ್ಯಾಣಿಗೆ) ಹೋಗೆ ಆ ಶ್ಯಾಮನಿಗಷ್ಟು ಕಾಫಿ ಕೊಡು ಹೋಗು ಒಲೆಯ ಮೇಲೆ ಇಟ್ಟು ಬಂದಿದ್ದೇನೆ. ನೋಡು (ಹೋಗುವಳು) ಏನೇ ಮಂದಾ ಈ ಹುಡುಗ ಹುಚ್ಚನಂತ ಮಾಡುತ್ತಾನಲ್ಲೇ

ಮಂದಾ - ಅದು ಹುಚ್ಚಲ್ಲ ಅವ್ವ. ಕಲ್ಯಾಣಿಯ ಮೇಲಿನ ಮಚ್ಚು. ಅಂತೆಯೇ ನನಗೆ ಚುಚ್ಚು ಮಾತು ಹೇಳಲೆಂದೇ ಆ ಪದ್ಯ ಹಾಡಿದರು. ಅವ್ವ ಬರುವಾಗ ದಾರಿಯಲ್ಲಿ ಅವರು ಅವಳೊಂದಿಗೆ ಮಾತನಾಡಿ ಬಂದಿರಬೇಕೆಂದೆ ಕಾಣುತ್ತದೆ

ಕಾವೇರಿ - ಆ ! ಏನಂದೆ

ಮಂದಾ - ಅಹುದು ಅವ್ವ. ಇಲ್ಲದಿದ್ದರೆ ಅವಳಿಗೆ ಹಿಯಾಳಿಸಿದಂತೆ ಹಾಡಿ ಕಣ್ಣು ಸನ್ನೆ ಮಾಡಿದರು, ಅದನ್ನು ಸ್ಪಷ್ಟವಾಗಿ ಕಂಡಿದ್ದೇನೆ. ನೋಡವ್ವ ಯಾವ ಹುತ್ತದಲ್ಲಿ ಯಾವ ಹಾವು ಆಡಗಿರುತ್ತದೆ

ಕಾವೇರಿ - ಹೀಗಿಯೋ ಸಮಾಚಾರ ? ಆಗಲಿ (ರಾಜೀವಪ್ಪ ಬರುವನು) ಏನ್ರಿ ನೋಡ್ರಿ ನಿಮ್ಮ, ಮುದ್ದು ಮಗಳು ಮಾಡಿದ ಶತಕೃತ್ಯ. (ಸೀರೆ ತೋರಿಸುತ್ತ) ಮಂದಾಕಿನಿಯ ಹೊಸ ಸೀರೆ ಹರಿದು ತಂದಿದ್ದಾಳೆ

ರಾಜೀವ - ಆಗಲಿ, ಇದು ಹರಿದರೆ ಬೇರೆ ಇನ್ನೊಂದು ಹೊಸ ಸೀರೆ ತಂದು ಕೊಡುತ್ತೇನೆ. ನೀನು ಅವಳಿಗೆ ಏನೂ ಅನ್ನಬೇಡ

ಕಲ್ಯಾಣಿ - (ಬಂದು) ಅಪ್ಪಾ ಶ್ಯಾಮೂ ಮಾಮಾ ಬಂದಿದ್ದಾನ ನೋಡಪ್ಪ

ರಾಜೀವ - ಹೌದೇನೇ ಕಾವೇರಿ ಶ್ಯಾಮಾ

ಶ್ಯಾಮ - (ಉಪ್ಪಿಟ್ಟು ತಿನ್ನುತ್ತ ಬಂದು) ಮಾಮಾ

ರಾಜೀವ - ಯಾವಾಗ ಬಂದೆಯಪ್ಪ ಮಗೂ

ಮಲಮಗಳು

ಶ್ಯಾಮ - ಇದೀಗ ಬಂದೆ ಬಾ ಮಾಮಾ ಚಹಾ ಕುಡಿಯಲಿಕ್ಕೆ

ಕಲ್ಯಾಣಿ - ಬಾರಪ್ಪ ಮಾಮಾ ಒಬ್ಬರೆ ಆಗಿದ್ದಾರೆ

ಮಂದಾಕಿನಿ - ಒಬ್ಬರೇ ಇದ್ದಾರಂತೆ ಜತೆಗೆ ನೀನಿದ್ದಿಯಲ್ಲ

ಕಾವೇರಿ - ಆಗಲಿ ಮಂದಾ. ನೀನು ಸುಮ್ಮನಿರು, ಇವಳಿಗೆ ನಾನೆಲ್ಲ ತಕ್ಕದು ಮಾಡುತ್ತೇನೆ. ಆ ಮುದುಕನ ಕೊರಳಿಗೆ ಇವಳನ್ನು ಕಟ್ಟದೇ ಹೋದ್ರೆ ನಾನು ಕಾವೇರಿನೇ ಅಲ್ಲ.

## ದೃಶ್ಯ - ೬

### ರಸ್ತಾ

ಶೇಷ - ಇನ್ನು ಬರಲಿಲ್ಲವಲ್ಲ ಈ ಕೃಪಣ ಸಾರ್ವಭೌಮ. ಅಲ್ಲಾ ಆ ಮುದಿ ರಂಗನ ಮದುವೆಯಾಗಲಿಕ್ಕೆ ಆ ಹುಡುಗಿ ಕಲ್ಯಾಣಿ ಒಪ್ಪಿದ್ದು ನನ್ನ ಸರ್ವಿಸಿನಲ್ಲಿಯೇ ಒಂದು ಹೊಸ ವಿಷಯವಾಗಿ ಹೋಯಿತು. ಹದಿನೆಂಟು ವರ್ಷ ನಾಟಕದಲ್ಲಿ ಪಾರ್ಟು ಮಾಡಿದೆ. ಇಂತಹ ವಿಚಿತ್ರ ಸನ್ನಿವೇಶ ನಾಟಕದಲ್ಲಿಯೂ ಕೂಡಾ ಕಂಡು ಬಂದಿರಲಿಲ್ಲ. ಪಾಪ ತಂದೆಯ ಕಷ್ಟ ತಪ್ಪಲಿ ಅಂತ ತನ್ನ ಕುತ್ತಿಗೆ ತಾನೇ ಮುರಿದುಕೊಳ್ಳಲಿರುವ ಈ ಕೂಸಿಗೆ ಒಳ್ಳೇದು ಮಾಡದಿದ್ದಲ್ಲಿ ಶಿವ ನನಗ ಹ್ಯಾಗೆ ಮೆಚ್ಚುತ್ತಾನೆ ? ಆಗಲಿ ಆಗಲಿ ತಲೆ ಓಡಿಸ್ತೀನಿ. ರಾಜೀವಪ್ಪನ ಸಾಲಾನೂ ತೀರಬೇಕು. ಮುದಿರಂಗನ ಮದುವಿನೂ ಆಗಬೇಕು. ಆದರೆ ಕಲ್ಯಾಣಿ ಕೂಡ ಅಲ್ಲ. ಹಾ ಇದೆ ಪ್ಲ್ಯಾನು. ಎಲ್ಲೆ ರಂಗ್ಯಾ ನಿನ್ನ ಮದುವಿ ಮಾಡತೀನಿ. ಮೂರು ಜನ್ಮಕ್ಕೂ ನಿನಗೆ ನೆನಪು ಉಳಿದಿರಬೇಕು. ಹಾಂಗ ಮಾಡತೀನಿ

ರಂಗಣ್ಣ - (ಬರುತ್ತ) ಇಲ್ಲಿ ನೋಡು ಶೇಷ... ಇವು ಆರು ನೂರು ರೂಪಾಯಿ ಇವೆ. ಎಲ್ಲಾ ಸಾಮಾನು ಸರಂಜಾಮ ಒಂದು ಬಿಡದಂಗ ನಾನು ಬರಕೊಟ್ಟೇನಲ್ಲ ಆ ಯಾದೀ ಪ್ರಕಾರ ತಂದುಬಿಡು. ಯಾಕಂದ್ರ ನಾನೀಗಲೇ ಹೇಳತೀನಿ ಮದವೀ ಒಳಗ ಇಂತಾದ್ದು ಕಡಮಿ ಆತು ಅನಬಾರದು

ಶೇಷ - ಯಜಮಾನ್ರೇ ನನ್ನ ಮ್ಯಾನೇಜಮೆಂಟು ಅಂದ ಬಳಿಕ ಕೇಳೋದೇನಿದೆ ? ಹೂಂ ಹೂ ಎತ್ತಿದ ಹಾಗೆ ಮಾಡತೀನಿ ನಿಮ್ಮ ಮದವೀನಾ

ರಂಗಣ್ಣ - ನೋಡಪ್ಪ ಎಲ್ಲಾ ನಿನ್ನ ಕೂಡೇದ. ಯಾಕಂದ್ರ ಇದೇ ನನ್ನ ಕಡೇ ಮದವಿ ಅನ್ನೂ ಹಾಂಗ ಕಾಣತದ

ಶೇಷ - ಯಾಕೆ ಇನ್ನು ಆಸೆ ಇಟಗೊಂಡಿರೇನು ?

ರಂಗಣ್ಣ - ಇಲ್ಲಪ್ಪ ಮಾತಿನ ಮುಂದೆ ಹಾಂಗಂದೆ. ಪಾಪ ನೀನು ರೋಡಿನ ತನಕಾ ನಡಿತಾನೆ ಹೋಗಬೇಕಾತಲ್ಲ ಅಂತ

ಶೇಷ - ಇರಲಿ ಬಿಡ್ರಿ ಯಜಮಾನರೇ. ಕಂಪನಿ ಮ್ಯಾನೇಜಮೆಂಟ್ ಮಾಡೋವಾಗ ಹತ್ತಿಪ್ಪತ್ತು ಮೈಲು ನಡಿದಾಡಿ ನನಗೂ ರೂಢಿಯಾಗಿ ಬಿಟ್ಟಿದೆ

ರಂಗಣ್ಣ - ಆಗಲಿ ಶೇಷ. ಖರೀದಿ ಮಾಡಿದ ಮಾಲು ಲಾರಿಯವರ ವಶಕ್ಕೆ ಒಪ್ಪಿಸಿ ನೀನು ಸಾಯಂಕಾಲ ತಪ್ಪದೆ ಬಂದು ಬಿಡು. ಮದವೀ ದಿವಸ ಸಮೀಪಕ್ಕೆ ಬಂತು

ಶೇಷ - ಆಗಲಿ ಯಜಮಾನ್ರೆ ನಾನೂ ನಾಲ್ಕೂವರೆ ಬಸ್ಸಿಗೆ ಬಂದ ಬಿಡತೀನಿ

ರಂಗಣ್ಣ - ಮರೆತಿದ್ದೆ ಶೇಷ. ಮದವೀ ಮಂದೀ ಒಯ್ಯಲಿಕ್ಕೆ ಲಾರಿ ಬಾಡಿಗೇನು ಮುಗಿಸೇ ಬಂದು ಬಿಡು

ಶೇಷ - ಆಗಲಿ ಯಜಮಾನ್ರೆ ಹಾಗೇ ಮಾಡತೀನಿ

ಲಚ್ಚಿ - (ಬರುತ್ತ) ನಮಸ್ಕಾರ ಶೇಷೂ ಮಾಮಾ

ಶೇಷ - ಎಲಾ ಇವನ ಇದೇನೋ ಲಚ್ಚಿ ಎಲ್ಲಿಂದ ಬರೋಣ

ಲಚ್ಚಿ - ಅದೇ ಗಂಗಾವತಿ ಕ್ಯಾಂಪಿನಿಂದ ಬಂದು ಬಿಟ್ಟೆ. ಯಾಕೆ ಮಾಮಾ ಪತ್ರ ಮುಟ್ಟಲಿಲ್ಲೇನು ?

ಶೇಷ - ಮುಟ್ಟಿತಪ್ಪ ಮುಟ್ಟಿತು

ಲಚ್ಚಿ - ಮೂರು ತಿಂಗಳು ರಜಾ ತೆಗೆದುಕೊಂಡು ಬಂದೆ ಮಾಮಾ

ರಂಗಣ್ಣ - ಇವನಾರೋ ಶೇಷ

ಶೇಷ - ಇವನ ಹೆಸರು ಲಚ್ಚಿ. ನಾಟಕ ಕಂಪನಿಯಲ್ಲಿದ್ದಾನೆ. ಯಜಮಾನ್ರೆ ಇವನಿಗೂ ಮದುವೆ ಮಾಡಿಕೊಳ್ಳುವ ಖಯಾಲಿ. ಅದಕ್ಕಂತ ಬಂದಿದ್ದಾನೆ

ರಂಗಣ್ಣ - (ನಗುತ್ತ) ಮದುವ. ಇವನಿಗೆ ಮದುವೆ. ಹೆಣ್ಣು ಯಾರು ಕೊಡತಾರಂತ ಊರು ಊರು ಅಲೆಯುವ ಈ ನಾಟಕದವರಿಗೆ

ಲಚ್ಚಿ - ಯಾಕೆ ಕೊಡೋದಿಲ್ಲ ಯಜಮಾನ್ರ. ತಿಂಗಳಿಗೆ ಸಾವಿರ ರೂಪಾಯಿ ಸಂಬಳಾ ಉಂಟು ನನಗೆ. ಅಲ್ಲದೇ ಊಟದ ವೆಚ್ಚ ರೂಮಿನ ಬಾಡಿಗೆ ಕಂಪನಿಯವರೇ ಕೊಡುತ್ತಾರ

ರಂಗಣ್ಣ - ಆದರೇನಾತು ಹೆಣ್ಣು ಅಂದ್ರೆ ಕಂಡವರಿಗೆಲ್ಲಾ ಸಿಗಲಿಕ್ಕೆ ಅದೇನು ಹಣ್ಣು ಅಂತಾ ಮಾಡಿದಿಯೇನ ?

ಶೇಷ - ಹೋಗಲಿ ಬಿಡೋ ಲಚ್ಚಿ ರೂಮಿನ ಬಾಡಿಗೆ ಅಂದ್ರ ನನಗೆ ದ್ಯಾಸಕ ಬಂತು. ಅಲ್ಲಪ್ಪ ಲಚ್ಚಿ ಮತ್ತ ನೀನು ಹೋದಲೆಲ್ಲ ಬರೀ ಗೊಂಚಲ ಮುತ್ತೈದಿಯರ ಓಣಿಯಲ್ಲಿಯೇ ಹಿಡಿದಿಯಂತಲ್ಲ ಬಾಡಿಗಿ ರೂಮು..

ಲಚ್ಚಿ - ಇದನ್ನು ನಿನಗಾರು ಹೇಳಿದರು ಮಾಮಾ

ಶೇಷ - ಇನ್ನಾರು ಆ ಹಾರುವರ ಹುಡುಗ ಡುಮ್ಮಣ್ಣ ಹೇಳಿದ. ಯಾಕಂದ್ರ ಮನ್ನೆ ರಾಯಚೂರ ಬಸ್ ಸ್ಟ್ಯಾಂಡಿನಲ್ಲಿ ಬೆಟ್ಟಿಯಾಗಿದ್ದ

ಲಚ್ಚಿ - ಅವನೇ ಹೇಳಿರಬೇಕು ಮಾಮಾ ನನ್ನ ಮೇಲಿನ ಹೊಟ್ಟೆ ಕಿಚ್ಚಿನಿಂದ. ದೊಡ್ಡ ಹೊಟ್ಟೆ ಇರೋರಲ್ಲ ಬರೀ ಹೊಟ್ಟೆ ಕಿಚ್ಚಿನವರೆ ಇರತಾರೆ

ರಂಗಣ್ಣ - ಯಾಕಲೇ ನಾಟಕದ ಬಚ್ಚಿ. ಬಲ್ಲಂಗ ಮಾತಾಡತಿದಿ. ನಾನು ಯಾರಂತ ಮಾಡಿದಿ

ಲಚ್ಚಿ - ನೀವು ಯಾರಾದರ ನನಗೇನು ನಿಮ್ಮದ್ಯಾಕ ನಿಮ್ಮಪ್ಪನ ಹೆದರಕಿ ಇಲ್ಲ ನನಗ

ಶೇಷ - ಎಲೆ ಲಚ್ಚಿ ಎನಲೆ ಇದು ನೀನೀಗ ಮದವಿ ಮಾಡಿಕೊಳ್ಳಾಕ ಬಂದಿಯೋ... ಏನು ಮಂದಿ ಕೂಡ ಜಗಳಾಡಾಕ ಬಂದಿಯೋ

ಲಚ್ಚಿ - ಮದವೀ ಮಾಡಿಕೊಳ್ಳಾಕ ಬಂದೀನಿ

ಶೇಷ - ಅಂದ ಮ್ಯಾಲೆ ನಾಲ್ಕು ಮಂದಿ ಹಚಗೊಂಡ ಮಾತಾಡಬೇಕಪ್ಪ. ಮಂದಿ ಅನ್ನೂವಂಗ ಮಾಡಬಾರದು

ಲಚ್ಚಿ - ಏನಂತಾರ

ಶೇಷ - ಏನಂತಾರ... ನಾಟಕ ಕಂಪನಿ ಅಂದ್ರ ಹಜಾಮರ ಹಸಬಿ ಇದ್ದಂಗ. ಕತ್ತಿ ಮುಟ್ಟಿದರೂ ಸೈ ಬಟ್ಟೆ ಮುಟ್ಟಿದರೂ ಸೈ, ಮೈಲಿಗೆ ಆತ ಅನ್ನೂದ. ಹಾಂಗ ಮಾಡಬ್ಯಾಡಪ್ಪ ಇವರು ಈ ಊರ ಪ್ರಮುಖರು. ನಮಸ್ಕಾರ ಮಾಡವರಿಗೆ

ಲಚ್ಚಿ - ಹಿಂಗೇನು ನನಗೆ ತಿಳಿಲಿಲ್ಲ ನಮಸ್ಕಾರ ಯಜಮಾನ್ರೆ

ರಂಗಣ್ಣ - ಯಜಮಾನ್ರೆ ಅನ್ನ ಬ್ಯಾಡಪ್ಪಾ ಅದು ವಯಸ್ಸು ಹೋದದ್ದನ್ನು ಸೂಚಿಸ್ತದ. ಅದನ್ನು ಕೇಳಿ ನನಗೆ ಕೆಟ್ಟನಸ್ತದ

ಲಚ್ಚಿ - ಮತ್ತೇನನನ್ನು ಬೇಕು ನಿಮಗ

ರಂಗಣ್ಣ - ರಂಗಣ್ಣನವರೇ ಅನ್ನು. ಇಲ್ಲಾ ಮಿಷ್ಟರ ಅನ್ನು (ಅಚ್ಚಮ್ಮ ಬರುವಳು) ಬಾ ಅಚ್ಚಮ್ಮ

ಲಚ್ಚಿ - ಆಗಲಿ ಮಿಷ್ಟರ ರಂಗಣ್ಣನವರೇ. ಕನ್ಯಾರ್ಥಿಯಾಗಿ ಬಂದ ನನಗೆ ಒಂದು ಕನ್ಯಾ ಹುಡಕಿ ಮದುವೆ ಮಾಡಿ ಉಪಕಾರ ಮಾಡ್ರಿ

ರಂಗಣ್ಣ - ಆಗಲಪ. ಯೋಗ್ಯ ವಿಚಾರ ತಮ್ಮಾ. ನೀನು ನಮ್ಮ ಊರಿಗ ಬರುವಾಗ ನರಿ ಮುಖಾ ನೋಡಿ ಬಂದೀದಿ ಅಂತ ಕಾಣತದ. ಯಾಕಂದ್ರ ನೀನ ಯಾವ ವಸ್ತುವನ್ನು ಬಯಸಿ ಬಂದಿರುವಿಯೋ ಆ ವಸ್ತು ಈಗ ಸದ್ಯ ನಿನ್ನ ಮುಂದ ಬಂದು ನಿಂತಿದೆ ನೋಡು ಒಪ್ಪಿಗ್ಯಾ

ಲಚ್ಚಿ - ಹಾ...

ರಂಗಣ್ಣಾ - ಮತ್ತೆ ಅಲ್ಲೇನಿದು ಕನ್ಯಾ. ಈ ಅಚ್ಚಮ್ಮ ಅಂದ್ರೆ ಬಹಳ ಅಚ್ಚುಕಟ್ಟು ಹೆಣ್ಣುಮಗಳು ಅಡಗಿ ಕೆಲಸದಲ್ಲಿಯಂತೂ ಎತ್ತಿದ ಕೈ. ಅಚ್ಚಮ್ಮ ನೋಡು ನೀನು ಮದವೀ ಅಂತಾ ಹಾರಾಡತಿದ್ದಿ. ಹುಡುಕೋ ಬಳ್ಳಿ ಕಾಲಿಗೆ ತೊಡಕಿತು ಅಂದಂಗ ಈ ನಮ್ಮ ಲಚ್ಚಿ ಮದವೀ ಆಗತೀನಿ ಅಂತಾ ಬಂದಾನ. ಅವನೂ ನಾಟಕದ ಹುಡುಗ. ವಯಸ್ಸಿನಾಗ ನಿನಗಿಂತ ಸಣ್ಣವನು ಕಂಡಾಂಗ ಆಗತಾನ. ಆದರೇನಾಯಿತು ನಡೀತದ ಈಗಿನ ಕಾಲದಾಗ

ಅಚ್ಚಮ್ಮ - ಕೇಳ್ರಿ ಅವರನ್ನ ನಂದೇನು ಅವರ ಹೂಂ ಅಂದ್ರ ಆಗತೀನಿ. ಸಾವಕಾರ ವರ ನನ್ನ ಮನಸ್ಸಿಗೆ ಬಂದೈತಿ

ರಂಗಣ್ಣಾ - ಹಂ ಅಡ್ಡಿ ಇಲ್ಲ. ನೋಡಪ್ಪ ಲಚ್ಚಿ ಅಚ್ಚಮ್ಮ ಮಾತು ಕೊಟ್ಟಳಪ್ಪ ನಿನ್ನ ಮೆಚ್ಚಿ. ನಿನ್ನ ಮನಸ್ಸಿನಂದಷ್ಟು ಹೇಳಿ ಬಿಡು ಬಿಚ್ಚಿ. ನೋಡು ಅವಳಿಗೂ ಹಿಂದಿಲ್ಲ ಮುಂದಿಲ್ಲ, ತಾಯಿ ಇಲ್ಲದ ಪರದೇಶಿ. ಹೂಂ ಅಂದು ಬಿಡು ಯಾಕ ಶೇಷ

ಶೇಷ - ಯಲ್ಲಾ ಖರೆ, ಆದರ ಅವ ಹೂಂ ಅನ್ನಬೇಕಲ್ಲ ? ಯಾಕಪ್ಪ ಲಚ್ಚಿ ಮಾಡಕೊಂತಿಯಾ ಅಚ್ಚಮ್ಮನ

ಲಚ್ಚಿ - ಇದು ಏನು ಮಾಮಾ ? ಅತ್ತೂ ಕರೆದೂ ಔತಣ ಹೇಳಿಸಿಗೊಂಡ್ರ ಕತ್ತಿಮ್ಯಾಲಿ ಮೆರವಣಿಗೆ ತಗದರು ಅಂದಂಗ. ಮೂರು ವರ್ಷದಿಂದ ಮದವಿ ಮಾಡು ಅಂತ ಗಂಟು ಬಿದ್ರ ಈ ಮುತ್ತಿನಂತ ಕನ್ಯಾ ಹುಡಕಿದ್ಯಾ ನನಗಂತ

ರಂಗಣ್ಣಾ - ಯಾಕ ಚಂದಿಲ್ಲೇನು ಏನಾಗ್ಯಾಳ ಲಚ್ಚಿ

ಲಚ್ಚಿ - ಅದನ್ನೂ ನಾನು ಹೇಳಬೇಕೇನು ಬಾಯಿ ಬಿಚ್ಚಿ. ತೊಳದ ಕೆಂಡ ಆಗ್ಯಾಳ

ಶೇಷ - ದೇವರು ಕೊಟ ಬಣ್ಣಪ್ಪಾ ಅದಕೇನು ಮಾಡೋದು ? ಬಣ್ಣ ತೊಗೊಂಡ ಏನು ತೊಳಕೊಂಡು ಕುಡಿಯೋದ. ಕಪ್ಪಿದ್ರೂ ಹೆಣ್ಣು ಮಗಳು ಕಣ್ಣೇಲೆ ಮೂಗಿಲೆ ಕಳಾ ಅದಾಳ

ಲಚ್ಚಿ - ಹಾಗಿದ್ರ ನೀನ ಮದವೀ ಮಾಡಿಕೊಂಡು ಬಿಡು

ರಂಗಣ್ಣಾ - ನಿನ್ನಂಗ ಅವನೇನು ಮದವಿ ಆಗತೇನಿ ಅಂತಾ ಬಂದಿಲ್ಲ. ಹೇಡಿದ ಕನ್ಯಾ ಸಿಗುದಂದ್ರ ಬಹಳ ಜಡಾ ಆದ. ಅದರಾಗ ಮೊದಲೇ ನಾಟಕದ ಹುಡುಗ. ನೋಡ ಲಚ್ಚಿ ಖರೇ ಹೇಳಬೇಕಂದ್ರ ನನ್ನಂಥಾ ಬಂಗಾರದಂತಾ ಮನಿಗೆ ಒಂದು ಉತ್ತಮ ಕನ್ಯಾ ಸಿಕ್ಕಬೇಕಾದರೆ ಏಳೂ ಹನ್ನೊಂದಾತು

ಲಚ್ಚಿ - (ನಗುತ್ತ) ಬಂಗಾರದಂತಾ ವರಾನ - ನೀವು

ರಂಗಣ್ಣಾ - ಯಾಕ ನಗತೀಯಲ್ಲ... ಮತ್ತ ಅಲ್ಲೇನು ? ನಾನು ಲಕ್ಷಾಧೀಶ ಅಂದಿಂದ ಬಂಗಾರದಂತಾ ವರಾ ಅಲ್ಲೇನು

ಅಚ್ಚಮ್ಮ - ಇರಬಹುದು ಯಜಮಾನ್ರೆ... ನೀವೇನೋ ಲಕ್ಷಾಧೀಶರಿರಬಹುದು. ಅವರ

ವರ ಮಾತ್ರ ಅಲ್ಲ

ರಂಗಣ್ಣಾ - ಅಲ್ಲಾ ? ಮತ್ತೇನ ನಾವು...

ಅಚ್ಚಮ್ಮ - ವರಾ ಅಲ್ಲಾ ನೀವು ಮಾಡಿಕೊಂಡಾಕಿ ಪಾಲಿಗೆ ಖಾಯಂ ಬರಾ... ನೀವು ಗಂಡೂಂತಾ ಯಾರ ಕರಿಬೇಕು ? ನಿಮಗ. ಕಟಗೊಂಡಾಕಿ ಹೆಣ ಸುಡು ಕಟಗಿ ತುಂಡು ಮ್ಯಾಲೆನೋ ಹೇಳತಾರಲ್ಲ. ತಾವೇನೋ ಬಂಗಾರದಂಥ ವರಾ ಅಂತಾ

ರಂಗಣ್ಣಾ - ಏನಲೇ ಅಚ್ಚಿ ಮಂದ್ಯಾಗ ನನ್ನ ಮಾನಾ ಕಳೀತಿಯಾ ? ಅಡಗೀ ನೀರಿನ ಕೆಲಸದ ಮೂಳಿ ನೀನು, ನಿನಗ್ಯಾಕ ಇಷ್ಟು ಸೊಕ್ಕು. ಶೇಷ ಅದು ಹಸಿದು ಬಂದತಿ ಇದು ಹಳಸಿ ಕುಂತೈತಿ ಹಾಕಿಬಿಡಲೇ ಗಂಟ

ಲಚ್ಚಿ - ಸಾಹುಕಾರ ನೀವೆಲ್ಲೋ ಪಾದರಕ್ಷಿ ಪೂಜಾ ಮಾಡಿಸಿಕೊಳ್ಳುವ ಮಂದಿ ಅನ್ನುವಂಗ ಕಾಣಸ್ತದ. ಯಾಕಂದ್ರ ಈ ವಯಸ್ಸಿಗೂ ನೀವು ವರಾ ಅನಕೊಂತೀರಿ ಅಂದಿಂದ

ರಂಗಣ್ಣಾ - ಏನೋ ಬಡವಾ ಹಾಗಂದ್ರ ? ಸದ್ಯ ನನ್ನ ಮದವೀ ನಿಶ್ಚಿತಾರ್ಥ ಕೂಡಾ ಆಗಿ ಬಿಟ್ಟದ. ಬೇಕಿದ್ರ ಕೇಳ ಈ ನಿನ್ನ ಶೇಷನ್ನ

ಲಚ್ಚಿ - ಅಂ ಹೌದೆನೋ ಮಾಮಾ

ಶೇಷ - ಹೌದಪ್ಪಾ ಮರಿ. ಈಗ ನಡಿದಿರೋ ಮದವಿ ಐದನೇದ್ದು

ಲಚ್ಚಿ - (ಗಾಬರಿಯಿಂದ) ಐದನೇದು ?!

ರಂಗಣ್ಣಾ - ಹೌದಪ್ಪಾ ದೊರಿ ಐದನೇದು. ಅದಕ್ಕ ನೀ ಯಾಕ ಮುಖ ಹಿಂಗ ಮಾಡಿದಿ? ಮಂಗನ ಕಳಕೊಂಡ ಕೊರಸನಂಗ

ಲಚ್ಚಿ - ಮಾಡಬೇಕಾದ್ದೆ ಯಜಮಾನ್ರೆ. ಆದರೆ ದ್ವಿಪತ್ನಿ ಪದ್ಧತಿ ಕಾಯ್ದೆ ನಿಮ್ಮ ಪಾಲಿಗೆ ರದ್ದಾತೇನೋ ಅಂತಾ

ರಂಗಣ್ಣಾ - ಒಬ್ಬಳಿದ್ದಾಗ ಬೇರೊಬ್ಬಳನ್ನು ಮದುವೆಯಾಗಲಿಕ್ಕೆ ಬರೋದಿಲ್ಲ. ಆದರೆ ಸತ್ತ ಬಳಿಕ ಏನಂಜಿಕೆ ?

ಲಚ್ಚಿ - ಅಂದ್ರ ನಾಲ್ಕೂ ಮಂದಿ ಹೆಂಡ್ರು ಸತ್ತು ಹೋಗ್ಯಾರೇನು ?

ರಂಗಣ್ಣಾ - ಸತ್ತಂಗ ಅಂತಾ ತಿಳಿ

ಲಚ್ಚಮ್ಮ - ಅವರು ಸತ್ತಿಲ್ರಿ. ಅವರ ಪಾಲಿಗೆ ಇವರು ಸತ್ತಾರು. ತಮಗ ಬೇಕಾದವರನ್ನು ಕಟಗೊಂಡು ಸುಖದಿಂದ ಅದಾರು. ಈಗ್ಲೂ ಮೂವರು ಬದಕ್ಯಾರ. ಸತ್ತಾಕಿ ಒಬ್ಬಾಕಿನ ಮೊದಲನಾಕಿ

ರಂಗಣ್ಣಾ - ಏ ಅಚ್ಚಿ ನಿನ್ನನ್ನ ಇಲ್ಲಿ ಪಿರೇತನ ಮಾಡಾಕ ಕರಿಸಿಲ್ಲ ಸುಮ್ಮನೇ ನಿಂದ್ರು

ಅಚ್ಚಮ್ಮ - ಮಂದಿದಾದ್ರ ಆಡಿಕೊಳ್ಳಾಕ ಬರುತ್ತೇನ ನಿಮಗ. ನಿಮ್ಮ ಎಲಿಯಾಗ ಕತ್ತಿ ಸತ್ತು ಬಿದ್ರೂ ಮಂದಿ ಎಲಿಯಾಗಿನ ನೊಣಾ ಕಂಡು ನಗೂದು ಬಿಡ್ರಿ. ಇನ್ನಾದರು ಮುದುಕರಾದ್ರಿ

ರಂಗಣ್ಣಾ - ಮುದುಕ ! ದಾರಿ ದಾರ್‍ಯಾಗ ಮುದಕಾ ಅಂದ ಬಿಡತಾಳಲ್ಲೊ ಶೇಷ ಈಕಿ!

ಅಚ್ಚಮ್ಮ - ಬಿಳೇ ಮೀಸಿಗೆ ಕರೇಬಣ್ಣಾ ಹಚಗೊಂಡ್ರ ಹರೆ ತಿರಗತೈತೇನು

ರಂಗಣ್ಣಾ - ನಾನು ಮೀಸೆಗೆ ಬಣ್ಣಾ ಹಚ್ಚೂದು ನಿನ್ನ ಕಣ್ಣಿಗೆ ಯಾವಾಗ ಬಿತ್ತು ?

ಅಚ್ಚಮ್ಮ - ಕಣ್ಣಿದ್ದವರಿಗೆ ಕಂಡೇ ಕಾಣುತ್ತ. ನಿಮ್ಮಂಗ ಮಂದಾಗಿಲ್ಲ ನನ್ನ ಕಣ್ಣು

ರಂಗಣ್ಣಾ - ಅಂತೂ ನಿನ್ನ ಕಣ್ಣಾಗ ನಾ ಮುದಕಾ ಅನ್ನು

ಅಚ್ಚಮ್ಮ - ಸಾಹುಕಾರಾ ಹನ್ನೊಂದು ಹೇಳುವದಕಿನ್ನ ಇನ್ನೊಂದು ಹೇಳತಿಸಿ ಕೇಳಿರಿ. ಇದರ ಮ್ಯಾಲೆ ನೀವು ಮದುವಿ ಆಗೋದು ಮನಸ್ಸಿನ ಚಪಲಕ್ಕೆ. ಮಾಡಿಕೊಂಡಾಕಿ ದುಃಖಕ್ಕ. ಸಾಹುಕಾರ ಸಿಡಿ ಹಾದ ಗಿಡಕ್ಕೆ ಹಚ್ಚಸತಾರೇನ್ರೀ ಮಲ್ಲಿಗೆ ಬಳ್ಳೀನ

ರಂಗಣ್ಣಾ - ಇಷ್ಟು ಹಾರಾಡಕಿ ಮೊದಲ ಹೂಂ ಅಂದಿದ್ದೆಲ್ಲ ನನ್ನ ಮದವೀ ಆಗಾಕ

ಅಚ್ಚಮ್ಮ - ಅಂದಿದ್ದೆ. ಶೇಷಣ್ಣಾ ಹೇಳಿದ್ದ ಅಂತ. ದೊಡ್ಡವರ ಮಾತು ಮೀರಬಾರದು ಅಂತ

ಶೇಷ - ಇರಲಿ ನೀ ಈಗ ಹೋಗ ಅಚ್ಚವ್ವ

ಅಚ್ಚಮ್ಮ - ಹೂನಪ್ಪ... ಅಲ್ಲ ಶೇಷಣ್ಣಾ ಮತ್ತ ನನ್ನ ಕೆಲಸಾ ಏನ ಮಾಡಿದಿ ?

ಶೇಷ - ಮಾಡತೀನವ್ವಾ ವರಾ ಹುಡುಕೀಸಿ. ನೀ ಏನ ಕಾಳಜಿ ಮಾಡಬ್ಯಾಡ

ಅಚ್ಚಮ್ಮ - ಹೂಂ ಅಂತಾ ತಡಾ ಮಾಡಬ್ಯಾಡಪಾ. ಹೋದ ದಿವಸ ತಿರುಗಿ ಬರೋದಿಲ್ಲ (ಹೋಗುವಳು)

ಶೇಷ - ಯಾಕಪ್ಪ ಲಚ್ಚಿ ಸುಮ್ಮನೇ ನಿಂತುಬಿಟ್ಟೆ

ಲಚ್ಚಿ - ಮತ್ತೇನ ಮಾಡ್ಲಿ ಮಾಮಾ ? ಅಲ್ಲಾ ಮಾಮಾ ಮುದುಕರೆಲ್ಲಾ ಐದು ಆರು ಮದುವೆ ಮಾಡಿಕೊಂಡು ಕನ್ಯಾದ ಮಾರ್ಕೆಟು ಬಹಳ ತೇಜಿ ಮಾಡಿಬಿಟ್ರು. ನಮ್ಮಂಥಾ ಹರದ ಹುಡುಗರಿಗೆ ಕನ್ಯಾ ಬೇಕಂದ್ರ ಹಗಲದೀಪ ಹಿಡಿದು ಹುಡುಕಬೇಕಾಯಿತು. ಹೋಗಲಿ ಈಗಂತೂ ನಾನು ಮದವೀ ಸೀಜನ್ನಿಗೆ ಸರಿಯಾಗಿ ಬಂದಿನಿ. ನನಗ ನೀನು ಮದವೀ ಮಾಡಲಿಕ್ಕೇ ಬೇಕು ನೋಡು ಮಾಮಾ

ರಂಗಣ್ಣಾ - ಮದವೀ ಮಾಡಲಿಕ್ಕೆ ಬೇಕು ಅಂತಾ ಆರ್ಡರ ಮಾಡತೀಯಲ್ಲಪ್ಪ ? ಲಚ್ಚಿ ಅವಿಸಿಗೇನು ಮಾಡದೆಪಾ ಅಂಥಾ ಉಪಕಾರನ

ಲಚ್ಚಿ - ಹಾಗಲ್ಲ ಯಜಮಾನ್ರೆ ನಾನು ಮನೆಯಲ್ಲಿದ್ದಿರೆ ಈ ಹೊತ್ತಿಗೆ ಮದುವೆ ಆಗಿ ಮಕ್ಕಳು ಸಹಿತ ಆಗುತ್ತಿದ್ದವು. ಆದರೆ ಮನಿ ಬಿಡಿಸಿ ನನ್ನ ತನ್ನ ಕಂಪನಿಗೆ ಕರೆತಂದು ಮುಖಕ್ಕೆ ಬಣ್ಣ ಬಳಿದು ಊರೂರು ತಿರಗಾಕ ಹಚ್ಚಿ ನಿಂತಾನಲ್ಲ ಭೂಪತಿ. ಇವನಿಗಲ್ಲದೆ ನಾನು ಇನ್ನಾರಿಗೆ ಗಂಟು ಬೀಳಬೇಕು. ಮದವೀ ಅಂತಾ

ರಂಗಣ್ಣಾ - ಅಂದರೇನೋ ಶೇಷ ? ನೀನು ಒಂದ ಕಾಲಕ್ಕೆ ಕಂಪನಿ ಮಾಡಿದ್ದೀ ಅನ್ನು

ಶೇಷ - ಹೌದು ಯಜಮಾನ್ರೆ ಮಾಡಿದ್ದೆ. ನೋಡ್ರಿ ಯಜಮಾನ್ರೆ ಆಡು ಮುಟ್ಟದ ಗಿಡಾಯಿಲ್ಲ ನಾ ಮಾಡದ ಉದ್ಯೋಗ ಇಲ್ಲ. ಏನು ಮಾಡಿದರೂ ಏಳ್ಗಿ ಇಲ್ಲ. ಮಾಡಿ ಮಾಡಿ ಮಂಗಳಾ ಹಾಡಿಯೇ ನಾನು ನಿಮ್ಮಲ್ಲಿ ನೌಕರಿಗಂತ ನಿಂತದ್ದು. ಅದಿರಲಿ ಲಚ್ಚಿ... ಮದುವೆಯ ಖರ್ಚಿಗೆ ಬೇಕಲ್ಲ ಹಣ ಎಷ್ಟು ತಂದೀದಿ

ಲಚ್ಚಿ - ಸದ್ಯ ನನ್ನ ಬಳಿ ಎಂಟನೂರ ಅವ. ಸಾಲದಿದ್ರ ವಾಯರ್‌ಕೊಟ್ಟು ಮತ್ತೆ ತರಸ್ತಿನಿ

ಶೇಷ - ಆಗಲಪ್ಪ ನೋಡೋಣ, ಮತ್ತೆ ದೇವರಿದ್ದಾನ. ನೀನೀಗ ಸದ್ಯ ರೂಮಿಗೆ ಹೋಗು. ನಾನೀಗ ರಾಯಚೂರಿಗೆ ಹೋಗಿ ಸಾಯಂಕಾಲ ಬಂದಬಿಡತೇನಿ (ನೋಡಿ) ಎಲಾ ಇವನ ಇದೇನೋ ಲಚ್ಚಿ ಬಗಲಿಗೆ ಹಾಕಿರೋದು

ಲಚ್ಚಿ - ಇದು ಕ್ಯಾಮರಾ ಮಾಮಾ. ಶೋಕೀಗಂತಾ ಕೊಂಡೀನಿ ಬಹಳ ಚನ್ನಾಗಿ ವರ್ಕ ಕೊಡುತ್ತದ

ರಂಗಣ್ಣಾ - ಆಗಲಿ ಶೇಷಾ. ನಾ ಹೇಳಿದ ಕೆಲಸಾ ಮರೀದ ಮಾಡಿಕೊಂಡು ಬಾ ನಾನೀಗ ಹೊರಟೆ (ಹೋಗುವನು)

ಲಚ್ಚಿ - ಇವನಾರ್ದೋ ಮಾಮಾ

ಶೇಷ - ಇದೂ ರೂಪಾಯಿ ಚೀಲಾ

ಲಚ್ಚಿ - ಇಂತದಕೂ ಮದವೀ ಮಾಡತೀಯಾ ಮಾವಾ

ಶೇಷ - ಮಾಡತೀನಿ ಇವನ ಮದವೀ. ಲಚ್ಚಿ ಮೂರು ಜನ್ಮಕ್ಕೂ ನೆನಪು ಉಳವಂಗ ಮಾಡತೀನಿ

ಲಚ್ಚಿ - ಅಂತೂ ಮಜಾ ಆದ. ಆಯಿತು... ನನ್ನದೇನುಮಾಡತಿ ಹೇಳು

ಶೇಷ - ನಾ ಏನೋ ನೋಡೀನಿ ಲಚ್ಚಿ. ಆದರ ಯಾವುದಕ್ಕೂ ಸ್ವಲ್ಪ ಅವಕಾಶ ಕೊಡು ಆಗಲಿ ನಾ ಹೋಗತೀನಿ. (ಶೇಷ ಹೋಗವನು)

ಲಚ್ಚಿ - ಅಂತೂ ನನಗೂ ಮದುವೆ ಆಗುತ್ತದೆ (ಎದುರಿಗೆ ನೋಡಿ )ಇದು ಯಾವದಪ್ಪಾ ಬಣ್ಣದ ಚಿಟ್ಟೆ ? ಹಾಡಿಕೊಂತ ಈ ಕಡೆಗೇ ಬರಲಿಕ್ಕೆ ಹತ್ತಿತಲ್ಲ. ಅಬ್ಬಾ

ನಡಿಗಿ ಏನ ನಡಿಗಿ. ಇದರ ನಡಿಗ್ಯಾಗೂ ಒಂದು ರೀತಿ ಬೆಡಗ ಅದ. ಅಂತೂ ಬಹಳ ನೋಡುತ್ತ ಬರುತ್ತ ಅಂದಮ್ಯಾಲೆ ಇದು ಎಲ್ಲೋ ಬಣ್ಣಾ ಹಚ್ಚಿದ ನಮ್ಮ ಮುಖಾ ಕಂಡಿರಲಿಕ್ಕೆ ಬೇಕು. (ಮಂದಾಕಿನಿ ಪೆನ್ನು ಬೀಳಲು ಎತ್ತಿ ಕೊಡುವನು)

ಥ್ಯಾಂಕ್ಸ್ ಉಪಕಾರವಾಯಿತು. ನೀವು ನಾಟಕದವರಲ್ಲವೇ ?

ಹೌದು ನಿಮಗೆ ಹೇಗೆ ಗೊತ್ತು

ನಾಟಕದಲ್ಲಿ ನೋಡಿದ್ದೆ. ನಿಮ್ಮ ಅಭಿನಯವನ್ನೂ ಮೆಚ್ಚಿಕೊಂಡಿದ್ದೆ

ಅಂ ಮೆಚ್ಚಿಕೊಂಡಿದ್ದಿರಾ ?

ಅಭಿನಯವನ್ನು ಮಾತ್ರ, ನಿಮ್ಮನ್ನಲ್ಲ. ಸ್ವಲ್ಪ ಹೊಗಳಿದ ಮಾತ್ರಕ್ಕೆ ಮಂಗತನದ ಪ್ರದರ್ಶನ ಮಾಡಿ ಇಷ್ಟಗಲ ಬಾಯಿತೆರೆದು ಮೂವತ್ತೆರಡೂ ಹಲ್ಲುಗಳನ್ನು ಹೊರಗೆ ಇಟ್ಟು ಬಿಡಬೇಡಿ. ಕಲಾವಿದರಾದ ನಿಮ್ಮನ್ನು ಸ್ವಲ್ಪ ಹೊಗಳಿದ ಮಾತ್ರಕ್ಕೆ ತಕ್ಷಣ ಅಮಲು ಬಂದು ಬಿಡುತ್ತದೆ ನಿಮಗೆ

ಹೊಗಳಿಕೆಯಿಂದ ಅಮಲು ಯಾರಿಗೆ ಬರುವುದಿಲ್ಲ. ನೀವಂದ ಹಾಗೆ ಅದೊಂದು ದೊಡ್ಡ ರೋಗ ನಮಗೆ. ಇರಲಿ ನೀವು ನಮ್ಮ ಯಾವ ನಾಟಕ ನೋಡಿದ್ದಿರಿ

ಅದೇ ಗಂಗಾವತಿಯಲ್ಲಿ 'ಮದುವೆಯ ಹುಡುಗಿ' ನಾಟಕದಲ್ಲಿ ನೀವು ಮದುಮಗನ ಪಾತ್ರ ವಹಿಸಿದ್ದಿರಲ್ಲ. ಅದಿರಲಿ, ಇಲ್ಲಿ ನೀವು ಎಷ್ಟು ದಿನ ಇರುತ್ತೀರಿ ?

ಏನೋ ಎಂಟು ಹತ್ತು ದಿನ ಇರಬಲ್ಲೆ ಯಾಕೆ ?

ಹಾಗಿದ್ದರೆ ಸಮಯ ದೊರೆತರೆ ಒಂದೆರೆಡು ಸಲ ನಮ್ಮ ಮನೆಯವರಿಗೆ ದಯಮಾಡಿಸಿ. ನಾಟಕದ ಒಂದೆರೆಡು ಹಾಡ ಬರಕೊಟ್ಟು ಕಲಿಸಿಕೊಡ್ರಿ

ಓಹೋ ! ಯಾಕಾಗಬಾರದು ? ಅದಿರಲಿ, ನಿಮ್ಮ ಮನೆ ಎಲ್ಲಿ

ಪೋಷ್ಟ ಆಫೀಸಿನ ಹತ್ತಿರ ಬಂದು ರಾಜೀವಪ್ಪನವರ ಮನೆ ಯಾವುದೆಂದು ಕೇಳಿದರೆ ತಿಳಿಸುತ್ತಾರ. ಖರ್‍ರಿ ಬರುತ್ತೀರಾ ?

ಆಗಲಿ ಬರುತ್ತೇನೆ

ನಮಸ್ತೆ (ಹೋಗುವಳು)

ಅಂತೂ ಹಾಡು ಹೇಳಿಕೊಡುವ ಸುಸಂದರ್ಭವೇನೂ ದೊರೆಯಿತು. ಹುಡುಗಿಗೆ ಮದುವೆ ಆದುದನ್ನು ತೋರಿಸುವ ಯಾವ ಆಭರಣಗಳೂ ಮೈ ಮೇಲೆ ಕಾಣಲಿಲ್ಲ. ನೋಡೋಣ ಪಯತ್ನ ಮಾಡಿ ನೋಡೋಣ...

ದೇವರಿದ್ದಾನೆ

ಲಚ್ಚಿ - ॥ ಪದ ॥ ರಾಗ ಸಾರಂಗ

ಲಲನೆಯ ಮನ ಮೋಹಿಪ ಜೀವನ । ಸಾಧಿಸುವನು ತಾ ಬಹುನಟನ
ಕಲೆಯನರಿಯುವಾ । ಕುಲಿಯುವಾ ಕುಲವತಿಯರಾ । ಬಲು ರೂಪಸಿಯರ ।
ವಲಿಸುವ ಬಾರಾ ಕವಿನಟತಾನೆ । ಕಲಾಕರ । ಲಲನೆಯಾ ॥ ೧ ॥

## ದೃಶ್ಯ - ೭

### ರಾಜೀವಪ್ಪನ ಮನೆ

ಕಲ್ಯಾಣಿ - || ಪದ ||

ತಾಯಿಯ ನೆನದರೆ ತಾವರೆ ಅರಳುವ । ತರದಲಿ । ಸಂತಸ ದೊರೆಯುವದು । ಗತಿಸಿದ ಮಾತೆಯ ಸ್ಮೃತಿ ಮನದಲಿ ಬರೆ ಹತಭಾಗಿಯು.ತಾ । ನೆನೆಸುವದು । ಮರದಲಿ ಬೆಳೆವುದು ಹೂ ಚಿಗುರು । ಆಸರವದಕೆ ಕೆಳಗಿನ ಬೇರು । ತಾಯಿಯಿರಲು । ಸುಖವು ತವರು । ಕುಲ ವಧುವಿಗೆ ತಾ ಸವಿನೀರು

|| ತಾಯಿಯ ||

ಕಲ್ಯಾಣಿ - ತಾಯಿ ಇಲ್ಲದ ತವರು, ಬೇರು ಮುರಿದ ಮರವಿದ್ದಂತೆ. ನನ್ನ ಹೆತ್ತವ್ವಸಿದ್ದರೆ ಹೊತ್ತು ಗೊತ್ತಿಲ್ಲದೆ ಕತ್ತೆಯಂತೆ ದುಡಿಯುವ ಈ ಕಷ್ಟ ಬರುತ್ತಿತ್ತೆ ? ಎಷ್ಟೊಂದು ಅಚ್ಚು ಕಟ್ಟುತನದಿಂದ ಮನೆಕೆಲಸ ಮಾಡಿಕೊಂಡು ಹೋದರೂ ಮೂದಲಿಸಿ ಮಾತನಾಡುವ ಮಲತಾಯಿಯ ಕೈಯಲ್ಲಿ ಏನಾಗುವದೋ ತಿಳಿಯದಾಗಿದೆ. ಮೇಲೆ ನನ್ನ ಮಲತಂಗಿಯಂತೂ ಛಲವಂತೆಯಾಗಿ ಕಾಣುತ್ತಿದ್ದಾಳೆ. ದೇವ ಈ ಸಂಕಟದ ಬೆಂಕಿಯ ಸಂಕೋಲೆಯಿಂದ ಇನ್ನೆಂದಿಗೆ ನನಗೆ ಬಿಡುಗಡೆ ? ಇವರ ಈ ಚುಚ್ಚು ಮಾತುಗಳು ಹುಚ್ಚುನಾಯಿಯ ಕಡಿತಕ್ಕಿಂತಲೂ ಹೆಚ್ಚು ಮತಭೇದವಾಗಿವೆ. ಇವೆಲ್ಲವುಗಳನ್ನು ಹೇಗಾದರೂ ಮಾಡಿ ಸಹಿಸಬಹುದು ಆದರೆ ನನ್ನ ಕಷ್ಟಕಂಡು ಕಣ್ಣೀರಿಡುವ ನನ್ನ ತಂದೆಯ ಚಿತ್ರ ಕಣ್ಣೆದುರು ಬಂದ ತಕ್ಷಣ ನನ್ನ ಹೃದಯವೇ ಒಡೆದು ಹೋಗುತ್ತದೆ. ಒಟ್ಟಾರೆ ತಾಯಿಯಿಲ್ಲದ ತವರಿನಲ್ಲಿ ಬದುಕುವದೆಂದರೆ ನೀರಿಲ್ಲದ ಬಾವಿಯಲ್ಲಿ ಹಾರಿಕೊಂಡಂತೆ. (ಶ್ಯಾಮ ಕಣ್ಣು ಮುಚ್ಚುವನು) ಯಾರು

ಶ್ಯಾಮ - (ಕಣ್ಣು ಬಿಟ್ಟು) ನಾನು

ಶ್ಯಾಮ - ಏಕೆ ಕಲ್ಯಾಣಿ ನೀನೆಷ್ಟು ಗಾಬರಿ ಪಡುವಿಯೇ ? ನಾನು ನಿನ್ನ ಕಣ್ಣು ಮುಚ್ಚಿ ಸರಸವಾಡಬಾರದೇನು ?

ಕಲ್ಯಾಣಿ - ಮಾಮಾ ನೀವು ನನ್ನ ತಂಗಿ ಮಂದಾಕಿನಿಯ ಕೈ ಹಿಡಿಯುವವರು. ಅಂದ

ಬಳಿಕ ಯಾರೂ ಇಲ್ಲದಾಗ ನನ್ನ ಕಣ್ಣು ಮುಚ್ಚಿ ಸರಸವಾಡುವುದನ್ನು ಅಕಸ್ಮಾತ್ತಾಗಿ ಯಾರಾದರೂ ಕಂಡರೆ

ಶ್ಯಾಮ - ಕಾಣಲಿ. ಅದಕ್ಕೇನು ? ಇದನ್ನು ಇನ್ನೊಬ್ಬರು ಕಾಣಬಾರದೆಂದು ನಾನೇಕೆ ದಿಗ್ಬಂಧನ ಹಾಕಿಕೊಳ್ಳಲಿ

ಕಲ್ಯಾಣಿ - ಇದು ಧರ್ಮವಲ್ಲ ಮಾಮಾ

ಶ್ಯಾಮ - ನಾನು ಮೆಚ್ಚಿದ ಹೆಣ್ಣಿನ ಕಣ್ಣು ಮುಚ್ಚಿ ಸರಸವಾಡುವದು ಧರ್ಮವಾಗದಿದ್ದಲ್ಲಿ ಇನ್ನಾವದಿದೆ ಧರ್ಮ ಈ ಪ್ರಪಂಚದಲ್ಲಿ

ಕಲ್ಯಾಣಿ - ಮೆಚ್ಚಿದ ಹೆಣ್ಣು ಯಾರು ?

ಶ್ಯಾಮ - ಇನ್ನಾರು ? ನೀನು ಬಂದ ದಿನವೇ ನನ್ನತ್ತೆಯ ಮುಂದೆ ಸ್ಪಷ್ಟ ಅಭಿಪ್ರಾಯವನ್ನೇ ಇತ್ತೆನಲ್ಲ, ನಿನ್ನೊಬ್ಬಳಿಗೆ ಅರ್ಥವಾಗುವಂತೆ ಕಲ್ಯಾಣಿ ಎಂದು. ನಿಸರ್ಗ ಸಹಜ ಒಲವಿನಿಂದ ನಿನ್ನ ಸೀರೆಯ ಸೆರಗು ಎಂದು ನನ್ನ ಕರವನ್ನು ಸೋಂಕಿತೋ ಅಂದೇ ನನ್ನ ಮನದಲ್ಲಿ ನಿನ್ನ ಮೂರ್ತಿ ನೆಲಸಿತು. ಜನ್ಮ ಜನ್ಮಾಂತರದ ಜತೆಗಾರ್ತಿ ಇವಳೆಂದು ನನ್ನಾತ್ಮ ಉಸಿರಿತು

ಕಲ್ಯಾಣಿ - ಮಾಮಾ ಏನು ಮಾತಾಡುತ್ತಿರುವಿರಿ ನೀವು ? ನಿಮ್ಮತ್ತೆಯವರು ನಿಮ್ಮನ್ನಿಲ್ಲಿಗೆ ಬರಮಾಡಿಕೊಂಡಿದ್ದು ಮಂದಾಕಿನಿಯನ್ನು ನಿಮಗೆ ಮದುವೆ ಮಾಡಿಕೊಡಲೆಂದು. ಅಂದ ಬಳಿಕ ನೀವು ಮಂದಾಕಿನಿಯನ್ನು ಬಿಟ್ಟು ನನ್ನ ಬಯಸುವದು ನ್ಯಾಯವಲ್ಲ. ಹಿರಿಯರ ಮನ ನೋಯಿಸುವದು ಧರ್ಮವಲ್ಲ

ಶ್ಯಾಮ - ಕಲ್ಯಾಣಿ ಧರ್ಮ, ನ್ಯಾಯ ನೀತಿಗಳನ್ನು ನೀನು ನನಗೆ ಕಲಿಸಬೇಕಾಗಿಲ್ಲ. ಮದುವೆ ಮುನ್ನ ಕೈ ಹಿಡಿಯುವ ಕನ್ಯೆಯನ್ನು ಆಯ್ದುಕೊಳ್ಳುವ ಸಂಪೂರ್ಣ ಹಕ್ಕು ನನಗಿದೆ. ಅದರಂತೆ ಮನಸಾ ನಾನ ನಿನ್ನನ್ನೇ ಮೆಚ್ಚಿಕೊಂಡಿದ್ದೇನೆ. ಅಲ್ಲದೆ ಪರಿಶುದ್ಧ ಜೀವಿಯಾದ ನನ್ನ ಪ್ರೇಮವು ಹಲವು ಹೂಗಳ ಮೇಲೆ ಹಾರುವ ಭ್ರಮರದಂತೆ ಅಲ್ಲ. ನೋಡು ಕಲ್ಯಾಣಿ ಅನ್ಯರ ಒತ್ತಾಯಕ್ಕಾಗಿ ಮನ ಒಪ್ಪದ ಕನ್ಯೆಯ ಕೈ ಹಿಡಿದು ನನ್ನ ಬಾಳನ್ನು ದುರಂತ ದುಃಖಕ್ಕೀಡು ಮಾಡಲು ನಾನು ಸಿದ್ಧನಿಲ್ಲ. ನೀನೊಪ್ಪಿದರೆ ನನ್ನ ಪುಣ್ಯವೆಂದು ಭಾವಿಸಿ ನಿನ್ನನ್ನು ಲಗ್ನವಾಗುತ್ತೇನೆ ಒಪ್ಪದಿದ್ದಲ್ಲಿ ಮದುವೆಯ ಆಸೆ ನೀಗಿಕೊಂಡು ಮನಗೆ ಹೋಗುತ್ತೇನೆ

ಕಲ್ಯಾಣಿ - ಮಾಮಾ...

ಶ್ಯಾಮ - ಏಕೆ ಕಲ್ಯಾಣಿ ನನ್ನ ಮದುವೆಯಾಗಲು ಮನಸ್ಸಿಲ್ಲವೇ ?

ಕಲ್ಯಾಣಿ - ಮಾಮಾ ನಿಮ್ಮ ಮದುವೆಯಾಗಿ ನಿಮ್ಮ ಮನೆ ತುಂಬುವ ಭಾಗ್ಯವನ್ನು ಬರದಿಲ್ಲ ಮಾಮಾ ವಿಧಿ ಈ ಹತಭಾಗ್ಯಳ ಹಣೆಯಲ್ಲಿ. ಇನ್ನೆಂಟು ದಿನಕ್ಕೆ

ನನ್ನ ಮದುವೆ. ಈಗ ಅದರ ನಿಶ್ಚಿತಾರ್ಥ ಕೂಡಾ ನಡೆದು ಹೋಗಿದೆ

ಶ್ಯಾಮ - ಆ !!! ಇದು ಸತ್ಯವೇ ?

ಕಲ್ಯಾಣಿ - ಹೌದು ಸತ್ಯ. ಈ ಊರಿನ ಶ್ರೀಮಂತರೊಬ್ಬರು ನನ್ನ ಕೈ ಹಿಡಿಯುತ್ತಾರೆ

ಶ್ಯಾಮ - ಎಂತಹ ಅಪರಾಧವಾಗಿ ಹೋಯಿತು ಕಲ್ಯಾಣಿ ನನ್ನಿಂದ. ನಿನ್ನ ಮದುವೆ ನಿಶ್ಚಿತಾರ್ಥ ನನಗೆ ತಿಳಿದಿದ್ದರೆ ನನ್ನ ಮನಸ್ಸನ್ನು ಇಷ್ಟು ದೂರ ಹರಿಬಿಡುತ್ತಿರಲಿಲ್ಲ. ನಿನ್ನ ಮುಟ್ಟಿ ಮೋಹಗೊಳ್ಳುತ್ತಿರಲಿಲ್ಲ. ಕಲ್ಯಾಣಿ ನಿನ್ನ ಮನಸ್ಸನ್ನು ಗೆದ್ದು ನಿನ್ನ ಒಲುಮೆಯನ್ನು ಸಂಪಾದಿಸಿ ನಿನ್ನ ಮದುವೆಯಾಗಲಿರುವ ಪುರುಷ ನಿಜವಾಗಿಯೂ ಪುಣ್ಯವಂತ

ಕಲ್ಯಾಣಿ - ಮಾಮಾ ಈಗ ನನ್ನ ಮದುವೆ ನಡೆದಿರುವದು ಒಲುಮೆಯಿಂದಲ್ಲ, ಅವರಲ್ಲಿರುವ ಸಂಪತ್ತಿನ ಬಲುಮೆಯಿಂದ

ಶ್ಯಾಮ - ಅಂದರೆ

ಕಲ್ಯಾಣಿ - ಬಡತನದ ಆಪತ್ತಿನಲ್ಲಿ ತಂದೆ ಮಾಡಿದ ಸಾಲಕ್ಕೆ ನಡೆದು ಹೋಯಿತು ಮಗಳ ದೇಹದ ಮಾರಾಟ. ಮಾಮಾ ನನ್ನ ತಂದೆಗೂ ಮೀರಿದ ವಯಸ್ಸು ಕೈ ಹಿಡಿಯಲಿರುವ ವರನದು. ಇನ್ನೆಂಟು ದಿನಕ್ಕೆ ಮಗಳಂತೆ ಕಾಣುವ ನನ್ನನ್ನು ಮಡದಿ ಎಂದು ಮಾಂಗಲ್ಯ ಕಟ್ಟುವರು ತನ್ನಲ್ಲಿರುವ ಹಣದ ಪ್ರಚಂಡ ಶಕ್ತಿಯಿಂದ. ಹಣದ ಪ್ರಭಾವ ಇದು. ಅದರ ಅಭಾವದಿಂದ ಬಳಲುವ ನನ್ನ ತಂದೆಗೀಗ ಹೃದ್ರೋಗ ಆವರಿಸಿದೆ

ಶ್ಯಾಮ - ಮಾಡಿಕೊಂಡ ಸಾಲಕ್ಕೆ ಹೊಟ್ಟೆಯ ಮಗಳನ್ನೆ ಮಾರುವಷ್ಟು ದುಷ್ಟತನ ಆವರಿಸಿತೆ ನಿನ್ನ ತಂದೆಗೆ ?

ಕಲ್ಯಾಣಿ - ಮಾಮಾ ನಿರಪರಾಧಿಯಾದ ನನ್ನ ತಂದೆಯನ್ನು ನಿಂದಿಸಬೇಡಿ. ಈ ಮದುವೆಗೆ ಮನಸಾ ಒಪ್ಪಿದವಳೇ ನಾನು, ನನ್ನ ತಂದೆಯವರಲ್ಲ. ನಾನೇ ಸ್ವ ಸಂತೋಷದಿಂದ ಮಾರಿಕೊಂಡಿದ್ದೇನೆ ವಿನಃ ನನ್ನ ತಂದೆ ಮಾರಲಿಲ್ಲ

ಶ್ಯಾಮ - ಏನು ನಿನ್ನನ್ನು ನೀನೇ ಮಾರಿಕೊಂಡಿಯಾ ? ಕಲ್ಯಾಣಿ ಆ ಮುದುಕನ ಕೈಯಿಂದ ಮಾಂಗಲ್ಯ ಕಟ್ಟಿಸಿಕೊಳ್ಳಲು ನಿನ್ನ ಮನಸ್ಸು ಅದು ಹೇಗೆ ಒಪ್ಪಿತು

ಕಲ್ಯಾಣಿ - ಮನಸ್ಸು ಒಪ್ಪದಿದ್ದರೂ ಹಣ ಒಪ್ಪಿಸಿತು. ಅಂದು ನಾನು ಅವರನ್ನು ಮದುವೆಯಾಗಲು ಒಪ್ಪದಿದ್ದರೆ ಇದು ಈ ಮನೆ ಅವರ ಪಾಲಾಗುತ್ತಿತ್ತು. ಶ್ರೀಮಂತನಿಗೆ ನನ್ನ ಮಾರಾಟ ಮಾಡಿ ಮಂದಾಕಿನಿಯ ಮದುವೆ ಮಾಡುವ ಬಯಕೆ ಮಲತಾಯಿಯ ಮನಸ್ಸಿನಲ್ಲಿತ್ತು. ಅದಕ್ಕೆ ನನ್ನ ತಂದೆ ವಿರೋಧಿಸಿದರು. ಸಾಲಕ್ಕೆ ಮನೆಮಾರಿ ಹೋದರೆ ಮುಂದೆ ನನ್ನ ತಂದೆಗೆ ಆಸರೆ ಯಾರು ? ಮಡದಿಯ ವಡಲುರಿಯ ಚುಚ್ಚು ಮಾತು ಸಂಕಟಗಳಿಂದ ನನ್ನ ತಂದೆ

ಮುಕ್ತರಾಗಲೆಂದು ತಾಯಿಯ ಅಭಿಲಾಷೆಯಂತೆ ನಾನೇ ಈ ಮದುವೆಗೆ ಒಪ್ಪಿದೆ. ಮಾಮಾ ಇದೇ ಈ ತಾಯಿ ಸತ್ತ ಮಗಳ ದಾರುಣ ಕಥೆ

ಶ್ಯಾಮ - ಕಲ್ಯಾಣಿ ನನ್ನ ಅತ್ತಿ ಇಷ್ಟೊಂದು ಕೆಟ್ಟ ಸ್ವಭಾವದವಳೆಂದು ನಾನು ತಿಳಿದಿರಲಿಲ್ಲ. ಹಡೆದ ಮಕ್ಕಳ ಹಿತಕ್ಕಾಗಿ ಪಡೆದ ಮಗಳನ್ನು ಮಾರಿಕೊಳ್ಳುವ ಈಕೆ ಮಾನವಿಯಲ್ಲ, ದಾನವಿ. ತಾಯಿ ಗತಿಸಿ ಮಲ ತಾಯಿಯ ಕೈಯಲ್ಲಿ ಬೆಳೆದ ಮಲಮಗಳಾದ ನಿನ್ನ ಕಥೆ ಬಹು ದಾರುಣವಾಗಿದೆ. ಆಗಲಿ... ಮಾವನವರ ಅಭಿಪ್ರಾಯವೇ ದೈವಿ ನಿರ್ಣಯವಲ್ಲ. ನಿನ್ನ ತಂದೆ ಸಾಲದ ಸಂಕಟದಿಂದ ಮುಕ್ತರಾಗಿ ನಿನ್ನ ತಾಯಿಗೆ ಇರಲು ಈ ಮನೆ ಉಳಿದು ಅವನ ಚುಚ್ಚು ಮಾತಿನ ಕಿಚ್ಚು ಆರಿಸಲೋಸುಗ ನಾನು ನಿನ್ನ ತದೆಯ ಸಾಲ ತೀರಿಸಿ ನಿನ್ನ ಮದುವೆಯಾಗುವೆ

ಕಲ್ಯಾಣಿ - ಸಾಕಷ್ಟು ವರದಕ್ಷಿಣೆ ಪಡೆದು ಶ್ರೀಮಂತ ಹುಡುಗಿಯ ಕೈ ಹಿಡಿಯಬಲ್ಲ ಯೋಗ್ಯತೆ ಪಡೆದ ತಾವು ನನ್ನ ತಂದೆಯು ಸಾಲ ತೀರಿಸುವ ಹವ್ಯಾಸಕ್ಕೆ ಬಿದ್ದರೆ ಮನೆಯವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಬೇಡ ಮಾಮಾ ನನಗಾಗಿ ಹೂವಿನಂತಹ ನಿಮ್ಮ ಹೃದಯ ದಾರುಣವಾಗಿ ದಾವಾನಲದಲ್ಲಿ ಬೆಂದು ಹೋಗಬಾರದು. ಮರೆತು ಬಿಡಿ ಮಾಮಾ ನನ್ನನ್ನು ಮರೆತುಬಿಡಿ

ಶ್ಯಾಮ - ಮೆಚ್ಚಿ ಕೊಂಡಷ್ಟು ಸುಲಭವಲ್ಲ ಕಲ್ಯಾಣಿ ಮರೆತು ಬಿಡುವದು. ಮೆಚ್ಚಿಕೆಯ ಮಾತು ಮನದಿಚ್ಛೆ ವಿರೋಧ ಸಾಗಿದರೆ ನಾ ಹುಚ್ಚನಾಗಬಹುದು. ಕಾರಣ ನಿನ್ನ ಮದುವೆಯೊಳಗಾಗಿ ಹಣ ತಂದು ನಿನ್ನ ತಂದೆಯ ಸಾಲ ತೀರಿಸಿ ಎಲ್ಲರ ಅನುಮತಿ ಪಡೆದು ನಿನ್ನ ಕೈ ಹಿಡಿಯ ಬಯಸಿರುವೆ. ಇದಕ್ಕೆ ನಿನ್ನ ಒಪ್ಪಿಗೆಯೇ ?

ಕಲ್ಯಾಣಿ - ನಿಮ್ಮ ಕೈ ಹಿಡಿವ ನನ್ನ ಭಾಗ್ಯಕ್ಕಿಂತ ಹೆಚ್ಚಿನ ಭಾಗ್ಯವಿದೆಯೇ ಮಾಮಾ, ನಿಮ್ಮ ಕಲ್ಯಾಣಿಗೆ. ಆದರೆ ಈಗ ಅವರಿಗೆ ಕೊಟ್ಟ ಮಾತು

ಶ್ಯಾಮ - ಕಲ್ಯಾಣಿ ಕೊಯಿಸಿಕೊಳ್ಳಲೆಂದು ಕಟುಕನ ಮನೆ ಸೇರುವ ಕುರಿಯು ತನ್ನ ಅಸಹಾಯಕ ಸ್ಥಿತಿಯಿಂದ ಆದಂತೆ ಆತ್ಮಾಭಿಲಾಷೆಯಿಂದಲ್ಲ. ಅದರಂತೆ ನೀನು ಮದುವೆಗೆ ಮಾತು ಕೊಟ್ಟದ್ದು. ಸಾಲದ ಒಲುಮೆಯಿಂದಲ್ಲದೆ ಮನದ ಒಲುಮೆಯಿಂದಲ್ಲ. ಮನ ಒಪ್ಪದವನಿಗೆ ತನು ಒಪ್ಪಿಸುವದು ನೀತಿ ಬಾಹಿರ ರೀತಿ. ನೋಡು ಅಂದು ಬಾವಿಯ ದಂಡೆಯ ಬಳಿ ಯಾವ ಶಕ್ತಿಯು ನಿನ್ನ ಸೀರೆಯ ಸೆರಗನ್ನು ನನ್ನ ಕೈಗೆ ಕೊಡುವಂತ ಮಾಡಿತೋ ಆ ನಿಸರ್ಗ ಶಕ್ತಿಯೇ ಬೇರೊಬ್ಬಳನ್ನು ನೋಡಲು ಬಂದ ನನ್ನ ಮನಸ್ಸಿಗೆ ಮೋಡಿ ಹಾಕಿ ನಿನ್ನ ಒಲಿಯುವಂತ ಮಾಡಿತು. ಮಾನವರ ಮಾತಿಗೆ ನಿಲುಕದ ದೈವೀ ಪ್ರೇರಣೆಯಿಂದ ನಮ್ಮಿಬ್ಬರ ಬಾಳ ಬಳ್ಳಿ ಹಬ್ಬಿ ಹೂ ಬಿಡುವ ಕಾಲ ಬಂದಾಗ

ಹರಿದು ಹಾಕುವುದೇಕೆ ಮಲ್ಲಿಗೆ ಬಳ್ಳಿಯನ್ನು. ಒಪ್ಪು ಕಲ್ಯಾಣಿ, ಒಪ್ಪು ಕಲ್ಯಾಣಿ

ಕಲ್ಯಾಣಿ - ಆಗಲಿ ಮಾಮಾ ನಾನು ನಿಮ್ಮವಳು

ಶ್ಯಾಮ - ಆಹಾ ! ಆಹಾ ! ನಾನೆಂತಹ ಭಾಗ್ಯಶಾಲಿ. ಕಲ್ಯಾಣಿ ಈ ವಿಷಯವನ್ನು ಈಗಲೇ ಬಹಿರಂಗಪಡಿಸುವದು ಬೇಡ. ಯಾಕಂದರೆ ಆ ಮುದುಕನಿಗೆ ನಿನ್ನ ಕೊಟ್ಟು ಮಂದಾಕಿನಿಯನ್ನು ನನ್ನ ಕೊರಳಿಗೆ ಕಟ್ಟಬಯಸಿದ ನಮ್ಮತ್ತೆ ನಿನ್ನ ಮಲತಾಯಿ ನಮ್ಮಿಬ್ಬರ ಈ ಒಲುಮೆಗೆ ಕಲ್ಲು ಹಾಕುವ ಪ್ರಯತ್ನ ಮಾಡಬಹುದು. ಈ ವಿಷಯ ಗುಪ್ತವಾಗಿರಲಿ. ಕಲ್ಯಾಣಿ ನನ್ನಿಂದ ಲೋಕಕ್ಕೆ ಒಳಿತಾಗದಿದ್ದರೂ ಬೆಂಕಿಗೆ ಬಿದ್ದು ಬಾಡಿಹೋಗಲಿರುವ ಕುಸುಮದಂತಿದ್ದ ನಿನ್ನ ಉದ್ಧಾರವಾದರೆ ಸಾಕು. ಆ ಪುಣ್ಯವೇ ನನ್ನ ಜನ್ಮ ಜನ್ಮಾಂತರಕ್ಕೂ ಕಾಯುವದು

ಕಲ್ಯಾಣಿ - ಮಾಮಾ ನಿಮ್ಮ ಹೃದಯವೆಷ್ಟು ದೊಡ್ಡದು. ನಿಮ್ಮಂಥವರು ಲಕ್ಷಕೊಬ್ಬರೂ ಅಲ್ಲ ಕೋಟಿಗೊಬ್ಬರು ಮಾಮಾ. ನಿಮಗೆ ಏನಾದರೂ ಕೊಡಬೇಕು ಅನ್ನಿಸುತ್ತದೆ. ಆದರೆ ಕೊಡಲಿಕ್ಕೆ ನನ್ನ ಬಳಿ ಏನೂ ಇಲ್ಲವಲ್ಲ

ಶ್ಯಾಮ - ಕಲ್ಯಾಣಿ ಕೊಡಬೇಕಾದುದನ್ನು ಪ್ರಥಮ ದರ್ಶನ ದಿನವೇ ಕೊಟ್ಟು ಬಿಟ್ಟಿರುವೆ. ಇನ್ನೇನಿದೆ ಕೊಡಲಿಕ್ಕೆ ನಿನ್ನ ಬಳಿ. ಏನೂ ಇಲ್ಲವಲ್ಲಾ ...

ಕಲ್ಯಾಣಿ - ಅದೇನೋ

ಶ್ಯಾಮ - ಜ್ಞಾಪಿಸಿಕೊ. ಭಾವಿಯ ದಂಡೆಯ ಬಳಿ ನೀರು ಕುಡಿಯಲು ಬಂದಾಗ ನೀನು ನನ್ನ ಕೈಗೆ ಏನು ಕೊಟ್ಟಿ

ಕಲ್ಯಾಣಿ - ಏನು ಕೊಟ್ಟೆ ?

ಶ್ಯಾಮ - ಹೇಳಲೇ... ಕೇಳು ಹಾಗಾದರೆ... ಹಿಂದಿನಿಂದಲೂ ಹಿರಿಯರು ಒಂದು ಮಾತು ಹೇಳುತ್ತ ಬಂದಿದ್ದಾರೆ ಪತಿಯ ಸಮ್ಮುಖದಲ್ಲಿ ಮೈ ತೆರೆದು ಮಡದಿಯಾಗಬೇಕಂತೆ, ಮಗುವಿನ ಸಮ್ಮುಖದಲ್ಲಿ ಎದೆತೆರೆದು ತಾಯಿಯಾಗಬೇಕಂತೆ, ಯೌವ್ವನದ ಅಧಿದೇವತೆ ನಿನ್ನ ಮೈ ಮುಚ್ಚಿದ ಸೆರಗನ್ನು ನನ್ನ ಕೈಗಿತ್ತು, ಅಂದು ನನ್ನ ಹೃದಯ ಪರಿವರ್ತಿಸಿದಿ. ಇಂದು ಹೃದಯ ಬಿಚ್ಚಿ ಮಾತನಾಡಿ ಮನವನ್ನರ್ಪಿಸಿದಿ. ಆ ಅಧಿಕಾರದ ಬಲದಿಂದ ಹೃದಯ ಸ್ವಾಮಿಯಾಗಬಯಸಿದ ನಾನು, ಹಮ್ಮಿನಿಂದ ಹೂ ಮುಡಿದ ನಿನ್ನ ಜಡೆಯನ್ನು ಹಿಡಿದೆಳೆದು ಕೇಳುವೆ. ನೀನನ್ನ ಮಡದಿಯಾಗುವಿಯಾ ಎಂದು

ಕಲ್ಯಾಣಿ - ಅವತ್ತು ಮಂದಾಕಿನಿಯ ಮುಂದೆ ದುಷ್ಯಂತ ಅಭಿನಯಿಸಿ ಹಾಡಿದಿರಲ್ಲ ಆ **ಹಾಡು** ಅಭಿನಯ ಇನ್ನೊಂದು ಬಾರಿ ಆಗಲಿ. ಆಗ ಒಪ್ಪುತ್ತೇನೆ

ಶ್ಯಾಮ - ಯಾರ ಮುಂದೆ ಯಾವ ಹಾಡು ಹೇಳಬೇಕೋ ಅವರೆದುರು ಅದನ್ನು

ಹಾಡಿದರೆ ಚಂದ ಈಗ ನಿನ್ನೆದುರು ಹಾಡುವ ಹಾಡೇ ಬೇರೆ

ಶ್ಯಾಮ - ಕಲ್ಯಾಣಿ ॥ ಪದ ॥ ರಾಗ ಡ್ಯುಯಟ್

ಕಲ್ಯಾಣಿ - ಸವಿಗಾರ ಬಾ ಭ್ರಮರಾ । ನನ್ನ ಮನಗೆಲಿದ ನವಚದುರಾ ।

ಶ್ಯಾಮ - ನಡೆ ಮಂದಗಮನೆ । ನುಡಿ ಅಂದದ ಲಲನೆ । ನಿಡುಜಡೆಯ । ಲಲಿತಾಂಗಿ।

ಕಲ್ಯಾಣಿ - ಈ ವಿರಹ ಕಾಟಾ । ನಾ ಸಹಿಸೆ ಸಂಕಟ ಈ ಆಟ । ಆ ನೋಟ ನವ ಪ್ರೇಮದಿ

ಶ್ಯಾಮ - ಈ ಮಂದ ಸುಮರಾಸಿ । ನನ್ನ ಸನ್ಮೋದ ಮನದರಸಿ । ಈ ಅಂದ ಸುಮರಾಸ ।

ಕಲ್ಯಾಣಿ - ಈ ನಿಮ್ಮ ಮಿಲನ । ಅನುರಾಗ ಸದನ । ಅನುಭವಿಸುವವದನ

ಶ್ಯಾಮ - ಕಣ್ಣೆರಳಿ ನಿನ್ನ । ಕರೆಯುತಲಿ ನನ್ನ । ತನು ಅರಳಿ । ಮನ ಕೆರಳಿ । ಅನುರಾಗದಿ ।

ಇಬ್ಬರೂ - ಘನ ಪ್ರೇಮದಾಸದ । ಸವಿ ಶೃಂಗಾರ ಮನಮಿಲನ

ಶಾಮ - ಇದೇನು ಕಲ್ಯಾಣಿ ಇಷ್ಟು ಹೊತ್ತಾದರೂ ಗುಡಿಗೆ ಹೋದ ನಮ್ಮತ್ತಿಯೂ ಬರಲಿಲ್ಲ. ಸ್ಕೂಲಿಗೆ ಹೋದ ಅವಳ ಮಗಳೂ ಬರಲಿಲ್ಲ

ಕಲ್ಯಾಣಿ - ಹೊರಗೆ ಹೋದ ನಿಮ್ಮ ಮಾವನೂ ಬರಲಿಲ್ಲ

ಶ್ಯಾಮ - ಬಂದಿದ್ದರೆ ನಾನೂ ಊರಿಗೆ ಹೋಗಬೇಕಾಗಿತ್ತು

ಕಲ್ಯಾಣಿ - ಇವತ್ತೆ ಹೋಗುವ ನಿರ್ಧಾರ ಮಾಡಿದಿರಾ ?

ಶ್ಯಾಮ - ಹೌದು ಆದಷ್ಟು ತೀವ್ರ ಹಣ ಹೊಂದಿಸಿಕೊಂಡು ಬರಬೇಡವೇ ?

ಕಲ್ಯಾಣಿ - ಮಾಮಾ ನನ್ನಿಂದ ನಿಮಗೆಷ್ಟು ತೊಂದರೆ

ಶ್ಯಾಮ - ಕಲ್ಯಾಣಿ ಇದು ನಿನ್ನಿಂದ ಪ್ರಾಪ್ತವಾಗಿಲ್ಲ. ಪ್ರಪಂಚದಲ್ಲಿ ಹಣದ ಪ್ರಭಾವ ಮನುಷ್ಯನಲ್ಲಿರದ ಉನ್ನತ ಭಾವನೆಯ ಅಭಾವ. ಅದಿರಲಿ ಕಲ್ಯಾಣಿ ನಿನಗಾಗಿ ಎಂತಹ ಸಂಕಟವನ್ನಾದರೂ ಕಾಲ ಹೊಳಿಯಂತೆ ದಾಟ ಬಲ್ಲೆ. ನಿನ್ನೊಲುಮೆಯಿಂದೇ ನೈವೇದ್ಯ ನನ್ನದಾಗುವಲ್ಲಿ ಎಲ್ಲವನ್ನೂ ಎದುರಿಸಲು ಸಿದ್ಧವಿರಬಲ್ಲೆ. ಆಗಲಿ ನಾನು ಊರಿಗೆ ಹೋದೆನೆಂದು ತಿಳಿಸಿಬಿಡು

ಕಲ್ಯಾಣಿ - ಆಗಲಿ (ಶ್ಯಾಮ ಹೋಗುವನು) ಇವರು ನನ್ನ ಕೈ ಹಿಡಿಯವರೇ ? ನನ್ನ ತಂದೆಯು ಎರಡು ಸಾವಿರ ಸಾಲ ತೀರಿಸಿ ವಿಷಮ ವಿವಾಹದಿಂದ ನನ್ನ ಉಳಿಸಿ ತಾವು ಮಾತು ಕೊಟ್ಟಂತೆ ನಡೆಯುವರೇ ? ಹೌದು ಕೊಟ್ಟ ಮಾತಿಗೆ ತಪ್ಪುವವರಲ್ಲ ನನ್ನ ಶ್ಯಾಮ. ಅವರ ಕೈ ಹಿಡಿಯಲಿರುವ ನಾನೆಷ್ಟು ಭಾಗ್ಯಶಾಲಿ ವಿಧಿಗ ವಂದಿಸಬೇಕೋ, ನಿಂದಿಸಬೇಕೋ ತಿಳಿಯದಾಗಿದೆ. ಕನಸಿನಲ್ಲಿಯೂ

ಆಶಿಸದ ಫಲ ನೆನಪಿನಲ್ಲಿ ನೆಲೆಸುವದೆಂದರೆ ಸಣ್ಣ ಮಾತಲ್ಲ. ನಿಜವಾಗಿಯೂ ನಾನು ಬಹಳ ಭಾಗ್ಯಶಾಲಿ

ಕಲ್ಯಾಣಿ - ॥ ಪದ ॥

ಸಂಗೀತದ ಸವಿಗಾನ ಸುಪಾವನ । ನೀಡುವೆ ನಿನಗೆ ಬಾ ಮದನಾ । ಸಂಸ್ಕೃತಿ ಅಲಾಪ ಆಮೋದ ನಾ ನೀಡಲು । ಪ್ರತಿ ಶೃಂಗಾರದಾ ಹಾಡು ಜಡೆ ಗೊಡಲು । ಅದು ಸುಖ ಸಾಧನಾ । ಸವಿಬಾ ಮೋಹನಾ । ನವ ಕನಸಿನ ಕಣ್ಣು ಕಾಣಲಿದ ಸುಖ ॥ ೧ ॥ ಸುಖಯವ್ವನದಿ ಮೈ ಮಾಟ ಹಣ್ಣಾಗಿದೆ ॥ ಸುಖ ಅನುರಾಗಾದ ಬಯಕೆ ಕಣ್ಣಾಗಿದೆ । ಮನ ತಾ ಬಯಸಿದ । ರತಿ ಸುಖ ಕೆಳಸಿದೆ । ಅತಿ ಮಿಲನದ ಬಯಕೆ ಬಯಸುತಿದೆ ಸುಖ ॥ ಸಂ ॥

ಕಾವೇರಿ - ಏನೇ ಹಾಳಾದವಳೆ ? ಹಾಡುತ್ತ ಕುಣಿದಾಡಲಿಕ್ಕೆ ಇದೇನು ಸೂಳೆಯರ ಮನೆಯಲ್ಲ. ಮುಂಜಾನೆ ಹೆಣೆದು ಕೊಂಡ ಜಡೆ ಮಾಸಿರುವದಲ್ಲದೆ ಹೂ ಗೊಂಚಲೂ ಬಾಡಿ ಹೋಗಿದೆಯಲ್ಲ. ಯಾವನ ಜೊತೆಗಾರರೂ ಸರಸವಾಡಿದೆಯೇನೇ ಗಯ್ಯಾಳಿ. ನಿನ್ನ ಮೈಯಲ್ಲಿ ಉಕ್ಕುವ ಸೊಕ್ಕನ್ನು ಹೇಗಾದರೂ ಮಾಡಿ ಇನ್ನೆಂಟು ದಿನ ತಡೆದುಕೊ. ಆಂದರೆ ಆ ಮುದುಕನ ಕೈಯಿಂದ ಮಾಂಗಲ್ಯ ಕಟ್ಟಿಸಿಕೊಳ್ಳುವಿ. ಆ ಬಳಿಕ ಹಾಡುತ್ತಲಾದರೂ ಹಾರಾಡು ಇಲ್ಲವೇ ಸೂಳೆಯರಂತೆ ಮೆರೆದಾಡು

ಕಲ್ಯಾಣಿ - ಮನಸ್ಸಿನ ಸಂತೋಷಕ್ಕಾಗಿ ಸ್ವಲ್ಪ ಹಾಡಿಕೊಂಡೆ ಚಿಕ್ಕಮ್ಮಾ. ಅಷ್ಟಕ್ಕೆ ?

ಕಾವೇರಿ - ಅಷ್ಟಕ್ಕೆ ಏನು ? ಸಂತೋಷಪಡಲಿಕ್ಕೆ ಹಾಡುತ್ತ ಹಾರಾಡಲಿಕ್ಕೆ ಈ ಮನೆ ಸೂಳಿಗೇರಿಯಲ್ಲ

ಕಲ್ಯಾಣಿ - ಇರಲಿ ಬಿಡು ಚಿಕ್ಕಮ್ಮಾ... ನನ್ನ ಮನಸ್ಸಿನ ಸಂತೋಷಕ್ಕಾಗಿ ನಾನು ಹಾಡಿಕೊಳ್ಳವದು ನಿನ್ನ ದೃಷ್ಟಿಯಲ್ಲಿ ತಪ್ಪಾಗಿ ಕಂಡರೆ ಕ್ಷಮಿಸು. ಇನ್ನೆಂದಿಗೂ ಹೀಗೆ ಮಾಡುವದಿಲ್ಲ

ಕಾವೇರಿ - ಇರಲಿ ಶ್ಯಾಮನೆಲ್ಲಿ ?

ಕಾಲ್ಯಾಣಿ - ಅವರು ಈವರೆಗೂ ದಾರಿ ಕಾಯ್ದು ಇದೀಗ ತಮ್ಮ ಊರಿಗೆ ಹೋದರು

ಕಾವೇರಿ - ಏನು ! ನನಗ ಹೇಳದೇ ಹೋದನೇ ಶ್ಯಾಮ. ಏನೇ ಕಲ್ಯಾಣಿ ಹೋಗುವಾಗ ನಿನಗೇನಾದರೂ ಹೇಳಿ ಹೋದರೇನು ?

ಕಲ್ಯಾಣಿ - ಇಲ್ಲ ಚಿಕ್ಕಮ ಹಾಗೇ ಹೋದರು

ಕಾವೇರಿ - ಆಗಲಿ ಹೋಗು. ನೀನು ಮನೆಯಲ್ಲಿ ಇನ್ನೇನಾದರೂ ಕೆಲಸವಿದ್ದರ ಮಾಡಿಕೋ (ಕಲ್ಯಾಣಿ ಹೋಗುವಳು) ಮಂದಾಕಿನಿಯನ್ನು ನೋಡಲು ಬಂದ ಈ ಹುಡುಗನ ಮನಸ್ಸೇ ಅರ್ಥವಾಗಿಲ್ಲ. ನನ್ನ ಮಗಳು ಹೇಳಿದಂತೆ ಈ

ಕಲ್ಯಾಣಿಯನ್ನು ಒಪ್ಪಿದನೋ ಏನೋ ? ಏನೇ ಆಗಲಿ ಅವಳ ಮದುವೆಯೇ ಸಮೀಪಿಸಿದೆ. ಮೊದಲು ಆ ಕಲ್ಯಾಣಿಯನ್ನು ಆ ಮುದುಕನ ಕೊರಳಿಗೆ ಕಟ್ಟಬೇಕು. ಅಂದರೆ ಮುಂದೆ ಅಣ್ಣನ ಒತ್ತಾಯದಿಂದಲಾದರೂ ಮಂದಾಕಿನಿಯನ್ನು ಶ್ಯಾಮನ ಕೊರಳಿಗೆ ಕಟ್ಟಲು ಬಂದೀತು. ಹೌದು ಹಾಗೇ ಮಾಡಿದರೇನೇ ನನ್ನ ತವರು ಮನೆ ಸಂಬಂಧ ಶಾಶ್ವತವಾಗಿ ನಿಲ್ಲುವದು

ಮಂದಾ - (ಬಂದು) ಅವ್ವಾ ಎರಡು ಕಪ್ಪು ಚಹಾ ಮಾಡು. ಈಗ ಸದ್ಯ ಆ ನಾಟಕದ ಲಕ್ಷ್ಮಿನಾರಾಯಣ ಬರುವವರಿದ್ದಾರೆ

ಕಾವೇರಿ - ಯಾವನೇ ಅವನು ನಾಟಕದವನು. ಏನೇ ಮಂದಾ ಕಂಡ ಕಂಡ ಗಂಡಸರನ್ನು ಪರಿಚಯ ಮಾಡಿಕೊಳ್ಳಲಿಕ್ಕೆ ಮನೆಗೆ ಕರೆತರಲಿಕ್ಕೆ ನೀನೇನು ಗಂಡಸಲ್ಲ ಮೈನೆರೆದ ಹುಡುಗಿ. ನೀನೇ ಹೀಗೆಲ್ಲ ಮಾಡುತ್ತ ಹೋದರೆ ನಾಳೆ ನಿನಗೆ ಕೆಟ್ಟ ಹೆಸರು ಬರುತ್ತದೆ

ಮಂದಾ - ಕೆಟ್ಟ ಹೆಸರು ಯಾಕೆ ಬರುತ್ತದಮ್ಮ ? ಅವರು ನಮ್ಮ ನಾಡಿನ ಶ್ರೇಷ್ಠ ಕಲಾವಿದರು. ಅಂಥವರು ನಮ್ಮ ಮನೆಗೆ ಬರುವದು ಭಾಗ್ಯ ಅಲ್ಲವೆ ? ಅವರಿಂದ ಒಂದೆರಡು ಹಾಡು ಬರೆಯಿಸಿಕೊಳ್ಳಬೇಕಾಗಿದೆ ಬರಲಿಕ್ಕೆ ಕೇಳಿದೆ. ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡರು

ಕಾವೇರಿ - ಅಂದರೇನೇ ಹಾಡು ಕಲಿತು ಊರೂ ಊರು ಅಲೆಯುವ ನಾಟಕದವನನ್ನು ಮದುವೆಯಾಗಬಯಸಿದೆಯೇನು ?

ಮಂದಾ - ಈಗ ಇಲ್ಲಿಗೆ ಬರುತಾರಲ್ಲ ಕೇಳಿ ನೋಡವ್ವಾ ... ಅವರು ಒಪ್ಪಿದರೆ ಏಕೆ ಮದುವಿಯಾಗಬಾರದು ನಾನು

ಕಾವೇರಿ - ಏನೇ ನಿನ್ನ ತಲೆ ಕೆಟ್ಟಿತೇನು ? ಕಂಡೂ ಕಂಡೂ ಆ ನಾಟಕದವನನ್ನು ಕಟ್ಟಿಕೊಳ್ಳುವಿಯಾ ?

ಮಂದಾ - ನೋಡವ್ವಾ ಹಾಗೆಲ್ಲಾ ಹೀಯಾಳಿಸಿ ಮಾತಾಡಬೇಡ ? ಯಾಕೆಂದರೆ 'ಕಲೆಯ ನರಿತಾ ಪುರಷನ ಪಡೆವುದು ಲಲನೆತಾ ಪೂರ್ವದಲಿ ಮಾಡಿದ ಪುಣ್ಯದಂತೆ' ಅವರು ನನಗೆ ದೊರೆತರೆ ಅವ್ವಾ ನಿಜವಾಗಿಯೂ ನಾನು ಭಾಗ್ಯವಂತೆ

ಕಾವೇರಿ - ಮಳೆಯ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈವಡ್ಡುವಿಯಾ ? ಹುಚ್ಚಿ ಶ್ಯಾಮನಂತಹವನನ್ನು ಬಿಟ್ಟು ಈ ನಾಟಕದ ಹುಡುಗನನ್ನು ಗಂಟು ಹಾಕಿಕೊಳ್ಳುವುದೇ ? ಯಾವ ಊರೋ ? ಯಾವ ಜಾತಿಯೋ ಹಾಳಾದವಳೇ ನಾಲ್ಕು ಅಕ್ಷರ ಕಲಿತ ಮಾತ್ರಕ್ಕೆ ನೀನೇನು ಸರಸ್ವತಿಯಾಗಲಿಲ್ಲ. ಸುಮ್ಮನೆ ಬಾಯಿ ಮುಚ್ಚು

ಮಂದಾ - ಅವ್ವಾ ನನ್ನ ನೋಡಲು ಬಂದ ನಿನ್ನ ಅಳಿಯ ನೋಡಿ ಮೆಚ್ಚಿದ್ದು

ಕಲ್ಯಾಣಿಯನ್ನು. ಅಂದ ಬಳಿಕ ಒಲವಿಲ್ಲದ ಪತಿಯ ಸತಿಯಾಗುವದಕ್ಕಿಂತ ಇದು ಒಳಿತಲ್ಲವೇನು ? ಹೋಗಲಿ ಇವರು ಇಲ್ಲಿಗೆ ಬಂದಾಗ ನೀನು ಮರ್ಯಾದೆಯಿಂದ ಮಾತನಾಡು

ಕಾವೇರಿ - ಪಾಠ ಕಲಿಸಿ ಕೊಡುತ್ತೀಯೇ ನನಗೆ. ಬರಲಿ ಆ ನಾಟಕದವನು ಪೊರಕೆ ಪೂಜೆ ಮಾಡಿ ಮನೆಯಿಂದ ಹೊರಗೆ ದಬ್ಬುತ್ತೇನೆ

ಅಚ್ಚಮ್ಮ - (ಬರುತ್ತ) ಯಾರಿಗರೀ ಪೊರಕೆ ಪೂಜೆ ಕಾವೇರಮ್ಮಾ

ಕಾವೇರಿ - ನಾಟಕದವನಂತೆ ಇವಳ ಮಾತು ಕೇಳಿ ಮನೆಗೆ ಬರತಾನಂತೆ

ಅಚ್ಚಮ್ಮ - ಅವರಿಗ್ಯಾಕರೀ ಅಂಥವರು

ಕಾವೇರಿ - ಅವನು ಒಂದು ಹಾಡು ಕಲಿಸುತ್ತಾನಂತೆ. ಇವಳು ಕುಣಿತಾಳಂತೆ

ಅಚ್ಚಮ್ಮ - ಕಲ್ತರ ಏನ ತಪ್ಪಾತರಿ ? ಹ್ಯಾಂಗೂ ಮನಿಗೆ ಬರತಾನಂತೀರಿ. ನನಗೂ ಅಷ್ಟ ಕಲಸಂತ ಹೇಳ್ರಿ ನಾನು ಒಂದು ಕೈ ನೋಡತೀನ

ಲಚ್ಚಿ - ಏ ಕರಿಮಾರಿ ದುರಗಿ ನಿನಗ್ಯಾಕೆ ಬೇಕು ಹಾಡು, ಕುಣಿತ

ಅಚ್ಚಮ್ಮ - ಯಾಕ ನಾನು ಕಲಿಬಾರದೇನ್ರೀ ? ಎಂಥೆಂಥೆವ್ರು ಕಲಿತಾರಂಥ ಅವರಿಗಿಂತ ಕಡಿಮಿ ಏನ್ರಿ ನಾನು. ಹಾಡು ಕುಣಿತಾ ಕಲಿತರ ಹಣೆ ಅಕ್ಕಿ ಕೂಡಿಬಂದು ನಾನೂ ಮದವಿ ಆದ್ರ ಸಾಕು

ಕಾವೇರಿ - ಅಡಗಿ ನೀರಿನ ಕೆಲಸಾ ಮಾಡು ಮೂಳಿ ನೀನು. ಗಡಗೀ ತೊಳೆಯುವ ಕೆಲಸಾ ಬಿಟ್ಟು ಕುಣಿತಾ ಕಲಿತಾಳಂತ ಕುಣಿತಾ. ನಿನಗೆ ಮದುವೆಯಾಗೂದು ಲೋಕ ಲಯಾ ಆಗೂದು ಒಂದೇ ಕಾಲಕ್ಕೆ

ಲಚ್ಚಿ - (ಬರುತ್ತ) ನಮಸ್ತೆ

ಮಂದಾ - ಬನ್ನಿ ಕುಳಿತುಕೊಳ್ಳಿ. ಅವ್ವಾ ಹೋಗು ಬೇಗನ ಚಹಾ ಮಾಡು (ಕಾವೇರಿ ಸಿಟ್ಟಿನಿಂದ ಹೋಗುವಳು)

ಲಚ್ಚಿ - ಈ ನಿಮ್ಮ ಮನಿ ಬಹಳ ಚೆನ್ನಾಗಿದೆ. ಏನು ಅಚ್ಚಮ್ಮ ನೀನು ಬಂದಿದ್ದಿ

ಅಚ್ಚಮ್ಮ - ಸುಮ್ನ ಬಂದಿನ್ರಿ. ಅಲ್ರಿ ಮತ್ತ ನನಗಷ್ಟ ಕಲಸರೀ ನಾನೂ ಹಾಡತೀನಿ

ಮಂದಾ - ನಿನಗೆ ಹಾಡಲಿಕ್ಕ ಬರೋದಿಲ್ಲ. ಹಾಡ್ಯಾಡಿಕೊಂಡ ಅಳಲಿಕ್ಕ ಮಾತ್ರ ಬರತದ

ಲಚ್ಚಿ - ಇರಲಿ ಈಗ ನಿಮಗ ಯಾಕ ಹೇಳಬೇಕು ?

ಅಚ್ಚಮ್ಮ - ನಿಮಗೆ ತಿಳಿದಿದ್ರ ಹೇಳ್ರಿ. ನಾ ಕಲಿತೀನಿ

ಮಂದಾ - ಏ ಸುಮ್ಮನೆ ನಿಲ್ಲು. ನಾನು ನಿನ್ನ ಹೇಳಿದ್ದೆನಲ್ಲ. ಆ ತುಳಸಿ ಪೂಜೆ ಹಾಡು ಮೊದಲು ಅವನ್ನೇ ಹೇಳಿಕೊಡಿರಿ

ಅಚ್ಚಮ್ಮ - ಹಾಂ ನನಗೂ ಅದೇ ಇರಲಿ

ಲಚ್ಚಿ - ತೆಗೆದುಕೊಳ್ಳಿ (ಹಾಡು ಬರೆದ ಕಾಗದ ಕೊಡುವನು) ನಾನು ಮೊದಲು ಅನ್ನುತ್ತೇನೆ ಅದರಲ್ಲಿ ನೀವು ಹಿಂದಿನಿಂದ ಅನ್ನು ಬೇಕು (ಹಾಡವನು) (ಅಚ್ಚಮ್ಮ - ಧ್ವನಿ ಗೂಡಿಸುವಳು)

ಲಚ್ಚಿ - ॥ ಪದ ॥

ಮಂದಾಕಿನಿ

ಹರುಷದ ಹೊನಲಲಿ । ಸರಸದಿ ನಲಿವಾ । ವಿರಸದ ಭಾವಾ । ತಳೆದಿದೆ ಮುದವಾ । ನಗುನಗು ಚಲುವಾ । ಕಣ್ಣಲಿ ಕುಣಿವುದು ಪ್ರೇಮದ ನೋಟಾ । ಪಣ್ಣಾಗಿದೆ ಸುಖಿ ಈ ಮೈ ಮಾಟಾ ಪ್ರಣಯ ಕಾತುರಪಡುವದು ಅಕಟಾ । ನಗ ಮುಖಿ ದಾ । ಸಖಾ । ತಾಸುಖಿ । ಅಹಹಹಾ । ಓಹೋ ಹೊಹೋ । ಲಲಲಾ ॥ ೧ ॥

ಲಚ್ಚಿ - ಇನ್ನೊಂದು ಹಾಡಲೇನು ?

ಮಂದಾ - ಹಾಡಿರಿ

ಅಚ್ಚಮ್ಮ - ಇಂತಹ ಹಾಡು ಎಷ್ಟು ಬೇಕಾದಷ್ಟು ಕಲಿಸರಿ, ನಾನಂತೂ ಕೂಳು ನೀರು ಬಿಟ್ಟು ಕಲೀತೀನಿ. ಅಲ್ಲ ಮಾಸ್ತರ ಮತ್ತ ನಿಮಗೆ ಕುಣಸಾಕ ಬರತ್ತೇನ್ರಿ ? ಅದನ್ನೂ ಕಲಿಬೇಕಂತೀನಿ

ಲಚ್ಚಿ - ಏ ಸುಮ್ಮನ ನಿಲ್ಲು

ಅಚ್ಚಮ್ಮ - ಯಾಕ ನಾ ಕಲಿಬಾರದೇನ್ರಿ. ಇಲ್ಲಿ ಕಲಿಯೋದ ನಿಮಗೆ ಒಬ್ಬರಿಗೆ ಬರಕೊಟ್ಟೆತೇನ್ರೀ ? ನಾಯೇನು ನಿಮ್ಮಿಂದ ಪುಗಸಟ್ಟೆ ಕಲಿಯಾಕಿ ಅಲ್ಲ. ಕೂಲಿ ಕೊಟ್ಟು ಕಲಿತೇನಿ

ಲಚ್ಚಿ - ಅವ್ವಾ ಮಹಾತಾಯಿ ಅಚ್ಚಮ್ಮ ದಯಮಾಡಿ ಸುಮ್ಮನೆ ನಿಲ್ಲತೀಯಾ ?

ಮಂದಾ - ಹ್ಯಾಂಗ ಇದ್ದಾಳೆ ನಮ್ಮ ಅಚ್ಚಮ್ಮ

ಲಚ್ಚಿ - ಸಾಕ್ಷಾತ್ ಗೌರೀ ಈ ನಿಮ್ಮ ಅಚ್ಚಮ್ಮ ! ಯಾವ ಪುಣ್ಯಾತ್ಮ ಸೃಷ್ಟಿ ಮಾಡಿದನೋ ಅವರ ಮನಿ ಹಾಳಾಗ .

ಮಂದಾ - ಹೋಗಲಿ ಬಿಡಿ. ಮೈಸೂರ ಮಲ್ಲಿಗೆ ಅಂತ ಕವನ ಸಂಕಲನ ಇದೆ. ಅದರಲ್ಲಿಯ ಹಾಡುಗಳಿಗೆ ನೀವು ದಾಟಿ ಹಚ್ಚುವಿರೇನು

ಲಚ್ಚಿ - ತರ್ರಿ ನೋಡೋಣ

ಮಂದಾ - ಐದು ನಿಮಿಷ ಕುಳಿತುಕೊಳ್ಳಿ ನನ್ನ ಗೆಳತಿಯ ಮನೆಯಲ್ಲಿದೆ. ಕೂಡಲೇ ತರುತ್ತೇನೆ. (ಹೋಗುವಳು)

ಅಚ್ಚಮ್ಮ - ಹೂಂ ಆಕಿ ಬರೂತನ ಕಲಿಸರಿ, ಕಲಿತೇನಿ

ಲಚ್ಚಿ - ಈಗ ಕಲಿಸಿದಷ್ಟು ಕಲಿತುಕೊಳ್ಳವ್ವ. ಮತ್ತೆ ನಾಳಿಗೆ ಬಾ ಹೋಗು, ಕಲಿಸ್ತನಿ

ಅಚ್ಚಮ್ಮ - ಮತ್ತೆ ತಪ್ಪಿಸಕೂಡದು

ಲಚ್ಚಿ - ಇಲ್ಲ ಮಾರಾಯಳೇ, ತಪ್ಪಿಸುವದಿಲ್ಲ. ಹೋಗು (ಹೋಗುವಳು) ಅಪರಿಚಿತನಾದ ನನ್ನನ್ನು ಇಷ್ಟು ಸಲುಗೆಯಿಂದ ಕರೆತಂದ ಈಕೆಯನ್ನು ನೋಡಿದರೆ ಇವಳಿಗೆ ನನ್ನ ಮೇಲೆ ಮೋಹ ಹುಟ್ಟಿರಲಿಕ್ಕೇಬೇಕು. ಇವಳಿಗಂತೂ ಒಡಹುಟ್ಟಿದ ಅಣ್ಣ.... ತಮ್ಮಂದಿರಿಲ್ಲ. ಅಂದ ಬಳಿಕ ಹಕ್ಕುದಾರರಿಲ್ಲದ ಈ ತರುಣಿ ದಕ್ಕುವದಾದರೆ ನಮ್ಮಂಥವರಿಗೇ ದಕ್ಕಬೇಕು. ನೋಡೋಣ ಶಿವ ಇದ್ದಾನೆ

ರಾಜೀವ - (ಬಂದು) ಯಾರು ತಾವು

ಲಚ್ಚಿ - ನಾನು ನಾಟಕದವನು

ರಾಜೀವ - ಇಲ್ಲಿ ನಮ್ಮಲ್ಲಿ ಏನಾದರೂ ಕೆಲಸವಿತ್ತೇನು ?

ಲಚ್ಚಿ - ಇಲ್ಲ ನಿಮ್ಮ ಮಗಳು ಕರೆತಂದಳು ಬಂದೆ

ರಾಜೀವ - ನಮ್ಮ ಮಗಳು ಕರೆತಂದಳೋ ! ಏತಕ್ಕೋಸ್ಕರ

ಕಾವೇರಿ - (ಬಂದು) ಹಾಡು, ಕುಣಿತ ಕಲಿತುಕೊಂಡು ನಾಟಕದಲ್ಲಿ ಪಾರ್ಟು ಮಾಡುವದಕ್ಕೋಸ್ಕರ. ಇನ್ನೇತಕ್ಕಾಗಿ ಕರೆತರುತ್ತಾಳೆ

ರಾಜೀವ - ಅಹುದೇನು ?

ಲಚ್ಚಿ - ಪಾರ್ಟು ಮಾಡುವ ವಿಷಯ ತಿಳಿಸಲಿಲ್ಲ. ನಿಮ್ಮ ಮಗಳು ಹಾಡು ಕಲಿಸಲೆಂದು ಮಾತ್ರ ಕರೆತಂದಳು. ನಾವು ಬಂದೆವು

ರಾಜೀವ - ಸ್ವಾಮಿ ನಾವು ಗೃಹಸ್ಥರು

ಲಚ್ಚಿ - ಅದು ನಮಗೆ ತಿಳಿದಿದೆ

ರಾಜೀವ - ಸ್ವಾಮಿ, ಹಾಡು ಕುಣಿತ ಕಲಿಸಲಿಕ್ಕೆ ಇದೇನು ವೇಶ್ಯಯರ ಮನೆಯಲ್ಲ

ಲಚ್ಚಿ - ಛೇ ಛೇ ಕಲೆ ಇರಬೇಕು ಯಜಮಾನ್ರೆ, ಅವರಲ್ಲಿಯೂ ಈಗಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ನಮ್ಮಂಥವರನ್ನು ಕರೆತಂದು ಅವಶ್ಯ ಕಲಿಸಬೇಕು

ರಾಜೀವ - ಬೇಡ್ರಿ ಸ್ವಾಮಿ ಅದೆಲ್ಲ ನಮಗೆ ಬೇಡ್ರಿ

ಲಚ್ಚಿ - ಅಲ್ಲಾ ಯಜಮಾನ್ರೆ ನಾನು ಸಂಭಾವನೆ ಸಹಿತ ಕೇಳುವನಲ್ಲ ಪುಕ್ಕಟೆಯಾಗಿ

ರಾಜೀವ - ಏ ಸುಮ್ನ ಹೊರಡೋ... ತ್ಯಾಗರಾಜರ ಅಪರಾವತಾರ. ಹೇಳಲು ಬಂದಿದಾನೆ. (ಕಾವೇರಿಗೆ) ಏನು ಇವನನು ಯಾರು ಕರೆತಂದರು

ಕಾವೇರಿ - ಇನ್ನಾರು ಅವಳೇ ಇದ್ದಾಳಲ್ಲ ನಿಮ್ಮ ಮುದ್ದುಮಗಳು ಕಲ್ಯಾಣಿ

ರಾಜೀವ - ಏನು ಕಲ್ಯಾಣಿಯಿಂದ ಇಷ್ಟು ಉದ್ದಟತನವೇ ? ಛೆ. ಇದನ್ನು ನಾನು ನಂಬಲಾರೆ

ಕಾವೇರಿ - ನೀವು ನನ್ನ ಯಾವ ಮಾತನ್ನು ನಂಬಿದ್ದೀರಿ ತಾಯಿ ಸತ್ತ ಮಗಳೆಂಬ ಮೋಹದಿಂದ ಮಿತಿಮೀರಿ ಸಲಿಗೆಕೊಟ್ಟಿರಿ. ಈಗವಳು ತಲೆಗೇರಿದ ನಾಯಿಯಾಗಿದ್ದಾಳೆ. ಶ್ರೀಮಂತ ಕೈ ಹಿಡಿದನೆಂಬ ಸೊಕ್ಕು ಈಗಂತೂ ಮೈಯಲ್ಲಿ ಉಕ್ಕಿ ಹರಿಯುತ್ತದೆ. ಅಂತೆಯೇ ಕಂಡ ಗಂಡಸರನ್ನು ಕರೆತಂದು ಹಾಡು ಕುಣಿತ ಕಲಿಯುತ್ತಿದ್ದಾಳೆ. ತಾಳಿ ಇನ್ನಷ್ಟು ದಿನ ಅಂದರೆ ನಾಳೆ ಮನೆಗೆ ಬಂದ ಗಂಡಸರ ಸೇವೆ ಮಾಡಲಿಕ್ಕೆ ಆಜ್ಞೆ ಮಾಡುತ್ತಾಳೆ ನಿಮಗೆ

ರಾಜೀವ - ಏನು ಕಲ್ಯಾಣಿ ಅಷ್ಟು ಉದ್ದಾಮ ವೃತ್ತಿಗೀಡಾದಳೇ ? ಕಾವೇರಿ ಇದು ಸತ್ಯವೇ

ಕಾವೇರಿ - ನಿಮ್ಮೆದುರಿಗೆ ಸುಳ್ಳು ಹೇಳಿ ನಾನೇನು ಸಾಧಿಸಬೇಕಾಗಿದೆ. ನನಗಾಗಲೇ ಸಂಶಯ ಬಂದಿತ್ತು. ಮುದುಕನಿಗೆ ಮದುವೆ ಮಾಡಿ ಕೊಡಲು ನಮ್ಮಿಬ್ಬರಿಗಿಲ್ಲದ ಮನಸ್ಸು ಇವಳಿಗೆ ಹೇಗೆ ಬಂತು ಅಂತ. ನೋಡ್ರಿ ನಾನೀಗಲೇ ಹೇಳಿ ಬಿಡತೇನಿ. ಹೇಗೂ ನಾನು ನಿಮ್ಮ ಕಣ್ಣಲ್ಲಿ ನಿಷ್ಠುರವಾಗಿದ್ದೇನೆ. ಸಾಕಷ್ಟು ಸಂಪತ್ತುಳ್ಳ ಮುದುಕನನ್ನು ಹೆಸರಿಗೆ ಗಂಡನೆಂದು ಹೇಳುತ್ತ ತನ್ನ ಮನಬಂದ ಹತ್ತಾರು ಜನ ಮಿಂಡರೊಂದಿಗೆ ಹಾದರ ಮಾಡುವ ಹೇಯ ಭಾವನೆ ಅವಳಿಗಿದೆ. ಆದ್ದರಿಂದಲೇ ಒಪ್ಪಿದಳು ಆ ಮುದುಕನನ್ನು

ರಾಜೀವ - ಏ ಕಾವೇರಿ ಸಾಕು ನಿಲ್ಲಿಸು. ನಿನ್ನ ಹೊಲಸು ನಾಲಿಗೆಯನ್ನು

ಕಾವೇರಿ - ಕಣ್ಣೆದುರು ಕಂಡರೂ ಕನಸೆಂದೂ ಭ್ರಮಿಸಿದರೆ ಮದ್ದನ್ನೆಲ್ಲಿಂದ ತರುವದು ? ಹೀಗೆ ಬಿಟ್ಟರೆ ಈ ಹೊತ್ತು ಹಾಡುತ್ತ ಕುಣಿದಾಡುತ್ತಾಳೆ ನಾಳೆ ಹಾದರ ಮಾಡುತ್ತಾ ಹಾರಾಡುತ್ತಾಳೆ. ಬೇಕಿದ್ದರೆ ಕರೆತರುತ್ತೇನೆ ಕೇಳಿ ನೀವೆ ಅವಳನ್ನು

ರಾಜೀವ - ಸಾಕು ಸಾಕು ಕೇಳಲಾರೆ ನಾನಿದನ್ನು. ನನ್ನ ಮಗಳು ಜಾರುವ ದಾರಿಯಲ್ಲಿ ನಡೆಯಬಯಸುವಳೇ. ಛೇ ನಂಬಲಾರೆ ನಾನಿದನ್ನು. ಹೌದು ಕಾವೇರಿಯ ಮಾತು ಸತ್ಯ. ಇಂತಹ ಹೊಲಸು ಆಸೆ ತುಂಬಿಕೊಂಡಿದ್ದರಿಂದಲೇ ಆ ಮುದಿರಂಗನ ಕೈ ಹಿಡಿಯಲು ಇವಳು ಮನಸ್ಸು ಮಾಡಿರಬೇಕು. ಹೆಣ್ಣಿನ ಮನಸ್ಸಿನಲ್ಲಿ ಎಂತಹ ಕಣ್ಣು ಮುಚ್ಚಾಲೆ ಆಟ ನಡೆದಿದೆಯೋ ಬಲ್ಲವರಾರು ? ಅಂತೂ ಕೊನೆಗೊಮ್ಮೆ ನನ್ನ ಮಗಳು ಜಾರಿಣಿಯಾಗಬಯಸಿದಳೇ ? ದೈವ ಮುನಿದ ಕಾಲಕ್ಕೆ ಹಸುವಿನ ಕೆಚ್ಚಲಿಂದ ಹಾಲಿನ ಬದಲಾಗಿ ರಕ್ತ ಚಿಮ್ಮುವಂತೆ ಸ್ತ್ರೀದೇವಿಯಂಥ ಸಾಧ್ವಿಯ ಹೊಟ್ಟೆಯಿದ ಸೂಳೆಯಯಾಗಬಯಸುವ ಕಲ್ಯಾಣಿ ಹುಟ್ಟಿದಳೇ ? ಶಿವ ಶಿವ ಇಂತಹ ಅವಮಾನದಾಯಕವಾದ

ಬರಹವನ್ನು ನನ್ನ ಹಣೆಯಲ್ಲಿ ಬರೆಯುವುದಕ್ಕಿಂತ ಸನ್ಯಾಸವನ್ನೇ ಬರೆದಿದ್ದರೇನು ಕೆಡಕಾಗುತ್ತಿತ್ತು ?

ಕಲ್ಯಾಣಿ - (ಬಂದು) ಅಪ್ಪಾ ನನ್ನ ಕರೆದಿಯಂತೆ, ಚಿಕ್ಕಮ್ಮ ಹೇಳಿದಳು

ರಾಜೀವ - ಅಪ್ಪಾ ಎಂದು ಉಚ್ಚರಿಸದಿರು ಜಾರಿಣಿ. ಪವಿತ್ರ ಶಬ್ದವನ್ನು ಉಚ್ಚರಿಸದಿರು ನಿನ್ನ ಅಪವಿತ್ರ ಮುಖದಿಂದ, ಈ ರಾಜೀವಪ್ಪನಿಗೆ. ಹಾಳು ರಂಡೆ ಹಾಡುತ್ತ ಕುಣಿದಾಡಲಿಕ್ಕೆ ಈ ನಿನ್ನ ತಂದೆಯ ಮನೆ ಸೂಳಿಗೇರಿಯಲ್ಲ. ಯಾರ ಮಾನ ಕಳೆಯಲು ಹುಟ್ಟಿದೆಯೆ ನನ್ನ ಮನೆಯಲ್ಲಿ. ಕಬ್ಬಿನ ಹೊಟ್ಟೆಯಲ್ಲಿ ಸೂಲಂಗಿ ಹುಟ್ಟುವಂತೆ

ಕಲ್ಯಾಣಿ - ಅಪ್ಪಾ ಮನಸ್ಸಿನ ಸಂತೋಷಕ್ಕೂ ನಾನು ಹಾಡಿಕೊಳ್ಳಬಾರದೇನಪ್ಪಾ ?

ಕಾವೇರಿ - ಹಾಡಿಕೊಂಡಾದರೂ ಸಂತೋಷಪಡು ಇಲ್ಲವೇ ಕಲಿಸಿಕೊಟ್ಟವನನ್ನು ಕೂಡಿಕೊಂಡಾದರೂ ಸಂತೋಷಪಡು. ಅಲ್ಲದೆ ಈ ಮನೆ ಬಿಟ್ಟು ಹೋದ ಬಳಿಕ ಮಾಡುವ ಈ ನಿನ್ನ ಕೆಟ್ಟ ಚಟ ನನ್ನ ಮುಗ್ಧ ಹುಡುಗಿ ಮಂದಾಕಿನಿಗೆ ಅಂಟಿಕೊಂಡರೆ ನಾನೇನು ಮಾಡಲೇ ಗಯ್ಯಾಳಿ

ಕಲ್ಯಾಣಿ - ಚಿಕ್ಕಮ್ಮಾ ಇಷ್ಟು ಚಿಕ್ಕ ವಿಷಯವನ್ನು ಎಷ್ಟು ದೊಡ್ಡದು ಮಾಡಿ ಹೇಳುತ್ತಿಯಮ್ಮಾ, ಪಾಪ ಏನೂ ಕಾಣದ ತಂದೆ ನನ್ನ ಬಗ್ಗೆ ಏನು ತಿಳಿದುಕೊಂಡಾರು

ಕಾವೇರಿ - ಆಹಾಹಾ ಮಹಾ ಮಾನವತಿಯೇ ನೀನು, ಕಲಿಯುಗದ ಸಾವಿತ್ರಿ. ಹುಟ್ಟಿಸಿಕೊಂಡು ಆಡಲಿಕ್ಕೆ ಹಾವಿಗಿರುವಂತೆ ನನಗೇನು ನಾಲಿಗೆ ಎರಡಿಲ್ಲ

ಕಲ್ಯಾಣಿ - ಅಪ್ಪಾ ಚಿಕ್ಕಮ್ಮ ಏನೇ ಹೇಳಿದರೂ ನಾನು ಮಾತ್ರ ನಿರ್ದೋಷಿ, ನಿರಪರಾಧಿ. ಎಂದಿದ್ದರೂ ಈ ನಿನ್ನ ಮಗಳು ಹಸಿರೆಲೆಯ ಮೇಲಿನ ಹಿಮ ಮಣಿಯೆಂದು ಭಾವಿಸಪ್ಪ. ಅಪ್ಪಾ ನಿನ್ನ ಮನೆತನದ ಪವಿತ್ರ ಚರಿತ್ರೆಗೆ ಕಲಂಕ ಹಚ್ಚುವ ಯಾವ ಕೃತಿಯೂ ಈ ನಿನ್ನ ಮಗಳ ಕೈಯಿಂದ ಘಟಿಸಿಲ್ಲ, ಮುಂದಾದರೂ ಘಟಿಸಲು ಸಾಧ್ಯವಿಲ್ಲ

ರಾಜೀವ - ಕಲ್ಯಾಣಿ ಅಂಗೈ ಹುಣ್ಣಿಗೆ ಕನ್ನಡಿಬೇಕಿಲ್ಲ. ನಿನ್ನ ಜಾರ ಕೃತಿಯ ಸಂಚನ್ನು ಪ್ರತ್ಯಕ್ಷ ಕಂಡು ಪ್ರಮಾಣಿಸಿ ನೋಡಿದ್ದೇನೆ (ಹೊಡೆಯಲು ಹೋಗಿ ಶ್ರೀದೇವಿಯ ಭಾವಚಿತ್ರ ಕಂಡು ದುಃಖಿಸಿ) ಕಲ್ಯಾಣಿ ಕಂಬನಿದುಂಬಿ ಕೈಮುಗಿದು ಹೇಳುತ್ತೇನಮ್ಮಾ. ಜಾರುವ ದಾರಿಯಲ್ಲಿ ನಡೆಯುವದು ನಿನ್ನ ಅಪೇಕ್ಷೆ ಇದ್ದಲ್ಲಿ ನಿನ್ನ ಕೈಯಿಂದಲೇ ಈ ನಿನ್ನ ತಂದೆಗೆ ವಿಷಕೊಟ್ಟು ಬಿಡು, ಕುಡಿದು ಹೋಗುತ್ತೇನೆ

ಕಲ್ಯಾಣಿ - ಅಪ್ಪಾ ನಾನು ನಿಮಗೆ ವಿಷಕೊಡಲೇನಪ್ಪ. ನನ್ನ ಹೆತ್ತು ಸತ್ತ ಆ ನಿನ್ನ

ಮಡದಿಯನ್ನೊಂದು ನಿಮಿಷ ನೆನದುಕೋ. ನಿನ್ನ ಸಂಗದಲ್ಲಿ ತನ್ನ ಅಂಗವಷ್ಟನ್ನೇ ಅಲ್ಲ, ಅಂತರಂಗವನ್ನು ಅರ್ಪಿಸಿ ಮೂರೇ ಮೂರು ವರ್ಷ ಸಂಸಾರ ಮಾಡಿದರೂ ನೂರು ವರ್ಷಗಳ ಪರ್ಯಂತರ ತನ್ನ ನೆನಪು ನಿರಂತರ ನಿನ್ನ ಮನದಲ್ಲಿ ನೆಲೆಸುವಂತೆ ನಡೆದು ಸಾವಿನೂರಿಗೆ ಸಾಗಿದಳೆಂದು ನೀನೇ ಹೇಳುತ್ತಲಿದ್ದೆಯಲ್ಲ. ಆ ಗರತಿಯ ರಕ್ತವೇ ನನ್ನ ರಕ್ತದಲ್ಲಿ ತುಂಬಿಕೊಂಡಿದೆ ಅಪ್ಪ. ಅಮೃತವನ್ನುಣಿಸಿ ಮಡಿದ ನಿನ್ನ ಮಡದಿಯ ಒಡಲಿನಿಂದ ವಿಷವನ್ನುಣಿಸುವ ಮಗಳು ಜನಿಸಬಹುದೇನಪ್ಪಾ ? ಅಂತಹ ಹೊಟ್ಟೆಯಲ್ಲಿ ಹುಟ್ಟಿ ಬಂದ ಈ ನಿನ್ನ ಮಗಳಿಂದ ನಿನ್ನ ಮನೆತನದ ಗೌರವಕ್ಕೆ ಚ್ಯುತಿ ತರುವ ಕೃತಿ ಘಟಿಸುವದೆಂಬ ಸಂದೇಹ ನಿನಗಿದ್ದರೆ ನೀನೆ ನಿನ್ನ ಕೈಯಾರೆ ಈ ನಿನ್ನ ಮಗಳಿಗೆ ವಿಷಕೊಟ್ಟುಬಿಡು. ಕುಡಿದು ನಾನೇ ಸತ್ತು ಹೋಗುತ್ತೇನೆ

ರಾಜೀವ - ಮಗು ಕಲ್ಯಾಣಿ ಹೊಟ್ಟೆ ಮಗಳಿಗೆ ವಿಷ ಕೊಟ್ಟು ಕೊಲ್ಲುವಷ್ಟು ದುಷ್ಟನೇನಮ್ಮಾ ಈ ನಿನ್ನ ತಂದೆ. ಕಂದಾ ನನ್ನಿಂದ ವಿಷಕುಡಿದು ಸಾಯಬಯಸುವಿ ಏನಮ್ಮಾ ?

ಕಲ್ಯಾಣಿ - ಅಪ್ಪಾ ಹುಟ್ಟಿದ ಬಳಿಕ ಸಾವು ತಪ್ಪಿದ್ದಲ್ಲ. ಜನನ ಮರಣವನ್ನು ಕರೆದುಕೊಂಡೆ ಬರುತ್ತದಂತೆ. ಈ ನನ್ನ ಮಲತಾಯಿಯ ಕೈಯಲ್ಲಿ ನಿಮಿಷಕ್ಕೊಮ್ಮೆ ಸತ್ತು ಬದುಕುವದಕ್ಕಿಂತ ಶಾಶ್ವತವಾಗಿ ಸಾಯುವದು ಒಳ್ಳೆತ್ತಲ್ಲವೇ ? ನೀನಾದರೂ ಎಷ್ಟಂತ ಸಹಿಸುವಿ ಅಪ್ಪಾ. ಒಂದು ಕಡೆ ಮಡದಿಯ ಮೋಹ. ಇನ್ನೊಂದು ಕಡೆ ಮಗಳ ಮೇಲಿನ ವಾತ್ಸಲ್ಯ. ಈ ಇಬ್ಬಗೆಯ ಧರ್ಮ ಕತ್ತಲೆಯಲ್ಲಿ ಇನ್ನೆಷ್ಟು ದಿನ ಸಂಕಟ ಪಡವಿ. ಅರ್ಧ ಆಯುಷ್ಯಕ್ಕೇನೆ ಆಯುರ್ಮಾನ ಮುಗಿದ ಮುದುಕನಂತೆ ಮುಖದಲ್ಲಿ ಸುಕ್ಕು ಇಕ್ಕಿ ಮುಪ್ಪು ಆವರಿಸಹತ್ತಿದೆಯಪ್ಪ. ಒಂದೇ ಒಂದು ಸಲ ನೀನು ನಕ್ಕದನ್ನು ಕಾಣಲಿಲ್ಲವಪ್ಪಾ ಈ ನಿನ್ನ ಹತಭಾಗ್ಯ ಮಗಳ ಕಂಗಳು. ನೋಡಲಾರೆನಪ್ಪಾ ಸಾಲ ಶೂಲದ ಸಂಕಟದಿ ಸಿಕ್ಕು ಸುಕ್ಕಾದ ಈ ನಿನ್ನ ಕೃಶ ದೇಹವನ್ನು, ನಾನು ನೋಡಲಾರೆನಪ್ಪಾ.

ರಾಜೀವ - ಮಗೂ ಕಲ್ಯಾಣಿ ಮಗೂ

ಕಾವೇರಿ - ಮಗಳ ಮೇಲಿನ ವಾತ್ಸಲ್ಯ ಮನೆಯಲ್ಲಿ ಕಣ್ಣೆದುರು ನಡೆದ ಘಟನೆಯನ್ನು ಮರೆಯಿಸಿಬಿಟ್ಟಿತೇನೋ. ಆಗಲೇ ಎಷ್ಟು ಸೋಗು ಮಾಡುವದನ್ನು ಕಲಿತಿದ್ದಾಳೆ ಹಾಳಾದವಳು. ಏನೇ ಗಯ್ಯಾಳಿ ಇಷ್ಟೆಲ್ಲ ನಟನೆ ಕಲಿಯಲೆ ಮನೆಯಲ್ಲಿ ಕೂಡಿಸಿದ್ದಿಯೇನೆ ಆ ನಾಟಕದವನನ್ನು

ಕಲ್ಯಾಣಿ - ನಾಟಕದವನು ಯಾರವನು

ರಾಜೀವ - ಇದೀಗ ನೀನು ಕೂಡಿಸಿರಲಿಲ್ಲವೇನಮ್ಮಾ ಆ ಹುಡಗನನ್ನು. ಅವನು ನಾಟಕದವನಲ್ಲವೇ ?

ಮಂದಾ - (ಬರುತ್ತ) ಎಲ್ಲಿಗೆ ಹೋದರಮ್ಮಾ ಆ ನಾಟಕದವರು. ಅವರಿಂದ ಈ

ಪುಸ್ತಕದೊಳಗಿನ ಹಾಡು ಹೇಳಿಸಿಕೊಳ್ಳಬಯಸಿ ಕಾಡಿ ಬೇಡಿ ಕರೆ ತಂದಿದ್ದೆ. ಆಗಲೇ ಕಳಿಸಿಬಿಟ್ಟರೇನೋ ನೀವು ಅವರನ್ನು

ರಾಜೀವ - ಏನು ನೀನು ಕರೆದುಕೊಂಡು ಬಂದಿದ್ದಿ ಏನಮ್ಮಾ ಆ ನಾಟಕದವನನ್ನು

ಮಂದಾ - ಹೌದು ಏಕೆ ಅಮ್ಮ ಹೇಳಲಿಲ್ಲವೇನು ? ಏನಾದರೂ ಅಂದು ನೀವು ಕಳಿಸಿದಿರೇನೋ ?

ರಾಜೀವ - ಹೇಳಿದಳಮ್ಮ ನಿನ್ನಮ್ಮ ಈ ಹೊಲೆ ಮಾರಿಯ ಮಾತನ್ನು ನಂಬಿ ಕೈಯೊಳಗಿನ ಹುಣ್ಣನ್ನು ಹೊಟ್ಟೆಯ ಹುಣ್ಣೆಂದು ಭ್ರಮಿಷ್ಟನಾದೆ. ಎಲೆ ಹೊಯ್ಮಾಲಿ ಯಾರ ಅಪರಾಧವನ್ನು ಯಾರ ತಲೆಯ ಮೇಲೆ ಮೇಲೆ ಹೊರಿಸಿ ಯಾರ ಕೈಯಿಂದ ಇಂಥ ಪಾಪ ಮಾಡಿಸುವದಕ್ಕೂ ಹೇಸುವಳಲ್ಲ ನೀನು, ಶಿವಶಿವ ಎಂಥ ವಿಷ ರಕ್ತದ ಹೆಣ್ಣಿನೊಂದಿಗೆ ನನ್ನ ರಕ್ತ ಬೆರೆಸುವಂತೆ ಮಾಡಿದೆಯೋ ? ನಾನಾವ ಅಪರಾಧ ಮಾಡಿದ್ದೆನೆಂದು ನನಗೆ ಈ ಮರು ಮದುವೆಯಾಗುವ ಹೀನ ಬುದ್ದಿ ದಯಪಾಲಿಸಿದ ದೇವರು. ಎಲೇ ರಾಕ್ಷಸಿ ನಿನ್ನ ಮಾತನ್ನು ನಂಬಿ ನಿರಪರಾಧಿಯಾದ ನನ್ನ ಮುದ್ದು ಮಗಳ ಗಲ್ಲಕ್ಕೆ ಹೊಡೆದ ಅಪವಿತ್ರವಾದ ಈ ಕರಗಳಿಂದಲೇ ನನ್ನ ಕುತ್ತಿಗೆ ಹಿಚುಕಿ ಆ ಪಾಪಕ್ಕೆ ಪರಿಮಾರ್ಜನೆ ಮಾಡಿಕೊಳ್ಳುತ್ತೇನೆ (ಕಾವೇರಿಯ ಕುತ್ತಿಗೆ ಹಿಡಿಯುವನು) ಸಾಯಿ ರಾಕ್ಷಸಿ ಚಾಂಡಾಲಿನಿ

ಕಲ್ಯಾಣಿ - ಇದನ್ನೇನು ನಡೆಸಿದೆ ಅಪ್ಪಾ ಬಿಡಪ್ಪ

ರಾಜೀವ - ನಿನ್ನ ಉದ್ದಾರಕ್ಕೆಂದು ನಾನು ಮಾಡಿಕೊಂಡ ಈ ಮದುವೆಯ ಕರ್ಮ ನಿನ್ನೀ ಕೈಯಿಂದಲೇ ಕತ್ತರಿಸಿ ಬೀಳಲಿ ಬಿಡು ಕಲ್ಯಾಣಿ. ಸಾಧ್ವಿಯ ರೂಪದಲ್ಲಿ ಬಂದು ನನ್ನ ಮನೆ ಸೇರಿದ ಈ ಅವಸರ್ಪಿಣಿಯ ಸಂಹಾರವಾಗದೆ, ನನ್ನ ಮನಕ್ಕೆ ಶಾಂತಿ ದೊರೆಯಲಾರದು

ಕಾವೇರಿ - ಮಂದಾಕಿನಿ ನಾ ಸತ್ತೆ

ಕಲ್ಯಾಣಿ - ಬಿಡಪ್ಪಾ ಚಿಕ್ಕಮ್ಮನ ಬಿಟ್ಟು ಕೊಡಪ್ಪಾ. ಇದೋ ಅಪ್ಪ ಚಿಕ್ಕಮ್ಮನನ್ನು ಹೊಡದೆಯಾದರೆ ನಿನಗೆ ನನ್ನಾಣೆ. ನನ್ನ ಹೆತ್ತಮ್ಮನಾಣೆ

ರಾಜೀವ - (ಬಿಟ್ಟು) ಮಗೂ ನನ್ನ ನಿನ್ನ ಸಾವನ್ನು ಬಯಸಿದ ಈ ರಾಕ್ಷಸಿಗೆ ಜೀವ ದಾನವೇ. ಇಷ್ಟಾದರೂ ಇವಳಿಗೆ ಕ್ಷಮೆಯೇ ?

ಕಲ್ಯಾಣಿ - ಅಪ್ಪಾ ತಪ್ಪು ಮಾಡುವದು ಮನುಷ್ಯನ ಸ್ವಭಾವ. ಕ್ಷಮೆನೀಡುವದು ದೈವೀಗುಣ. ನೀನು ಶಾಂತನಾಗು. ನಡೆದ ಘಟನೆಯನ್ನು ಮರೆತು ಬಿಡು. ನಡೆ ಮಂದಾ ಅಪ್ಪನನ್ನು ಕರೆದುಕೊಂಡು ಒಳಗಡೆ (ಹೋಗುವರು)

# ದೃಶ್ಯ - ೮

## ರಸ್ತಾ

ಲಚ್ಚಿ - ನಾನೇನೋ ಹೆಣ್ಣು ನೋಡಿದ. ಮನಸ್ಸಿಗೂ ಬಂತು. ಆದರೆ ಮದುವಿ ಮಾಡಿಸೋ ಹಿರೇರ ಮನಸ್ಸಿಗೊಂದ ಬರಬೇಕಲ್ಲ. ಎಲ್ಲಾದಕ್ಕೂ ಈ ನಮ್ಮ ಶೇಷೂ ಮಾಮಾನ ಬೇಕು. ಮದವೀ ಸುದ್ದಿ ಎತ್ತಿದರ ಸಾಕು. ನಾಲ್ಕು ದಿನ ತಡಿ ಅಂತಾನ. ಅದರಾಗ ಆ ಸಾವುಕಾರ ರಂಗಣ್ಣನ ಲಗ್ನದಾಗ ಬಿದ್ದಾನು. ಟಾಯಿಮ ಇಲ್ಲ. ಅವರು ಈ ಹೊತ್ತು ಹೊರಡಬೇಕಂತೆ ಲಗ್ನಕ್ಕ. ನಾನು ಹೊರಡಬೇಕು. ಮಂದಾಕಿನಿಯ ಅಕ್ಕಾದ ಲಗ್ನ ಅಂದಿಂದ ಅವಳ ಮುಖನಾದರೂ ನೋಡು ಅವಕಾಶ ದೊರಿತದ. ಅಂದಿಂದ ಯಾಕ ಕಳಕೊಳ್ಳುದು. ಹೊರಟರಾತು

ಶೇಷ - (ಬರುತ್ತ) ಯಾಕೋ ಲಚ್ಚಿ ಇನ್ನೂ ಇಲ್ಲೇ ನಿಂತಿಯಲ್ಲ ಬಟ್ಟೆ ಕಟಗೊಂಡು ತಯಾರಾಗಪ್ಪ. ಲಗ್ನದ ಮಂದಿ ಒಯ್ಯಾಕ ಲಾರಿ ಬರತದ ಈಗ ಸದ್ಯ

ಲಚ್ಚಿ - ಯೇನ ಬಿಡೋ ಮಾಮಾ ಬರೆ ಮಂದೀ ಮದುವೀ ನೋಡೋದ ಆತಲ್ಲ ನಂದೇನ ಮದವೀ ಮಾಡತಿಯೋ ಇಲ್ಲೋ ?

ಶೇಷ - ತಡೀ ಲಚ್ಚಿ ಇನ್ನೂ ನಾಲ್ಕು ದಿನ ಅವಸರ ಮಾಡಬೇಡ. ಒಂದೊಂದು ಮುಗೀಲಿ

ಲಚ್ಚಿ - ಮಾಮಾ ಈ ಮುದುಕನ ಮದವೀ ಮಾಡದಿದ್ದರೆ ಪ್ರಪಂಚ ಪ್ರಳಯ ಆಗುತ್ತಿತ್ತೇನ. ಸಣ್ಣವರದು ಹಿಂದಕ ಹಾಕತಿ, ಮುದುಕನ್ನ ಮುಂದಕ ಮುಂದಕ ತರತೀದಿ

ಶೇಷ - ಲಚ್ಚಿ ರಂಗಣ್ಣನ ಮದವಿಯಿಂದ ಪ್ರಪಂಚ ಪ್ರಳಯ ಆಗೋದಿಲ್ಲ. ನನ್ನ ಪ್ಲಾನು ಸರಿಹೋತ ಅಂದ್ರ ಪ್ರಳಯ ಆ ರಂಗಣ್ಣಂದೆ ಆಗತದ. ನೋಡಪ್ಪಾ ಇಲ್ಲೀತನಕಾ ಗುರಿ ಇಟ್ಟ ಕೆಲಸದಾಗ ಕರಿ ತೊಗೊಳ್ದ ಬಿಟ್ಟ ಮಗನಲ್ಲ, ಈ ಶೇಷ

ಲಚ್ಚಿ - ಮಾಮ ನಿಂದ ನೀ ಹೇಳಕೊಳ್ಳುದ ಆತ. ನಂದೇನ ಮಾಡತೀದಿ ?

ಶೇಷ - ಮಾಡತೀನಿ ಲಚ್ಚಿ. ಹೇಳಲಿಲ್ಲೇನ ನಿನಗಂತ ಒಂದು ಕನ್ಯಾ ನೋಡೀನಿ

ಲಚ್ಚಿ - ನೀ ನೋಡಿದರ ಆತೇನ. ನನಗಷ್ಟು ತೋರಿಸಲ್ಲ, ಮದುವೆ ಮಾಡಿಕೊಳ್ಳಾವ ನಾನು. ನೀನಲ್ಲ

ಶೇಷ - ಲಚ್ಚಿ ನೀ ಮೆಚ್ಚಿತೀದಿ

ಲಚ್ಚಿ - ಅದು ಹ್ಯಾಂಗ ಹೇಳಲಿಕ್ಕೆ ಬರತದ. ಮೊದಲು ಕನ್ಯಾ ನನ್ನ ಕಣ್ಣಿಗೆ ಹಾಕು. ಕನ್ಯಾನೂ ನನ್ನ ನೋಡಿ ಮೆಚ್ಚಬೇಕಲ್ಲ

ಶೇಷ - ಲಚ್ಚಿ ಕನ್ಯಾ ನಾ ಹೇಳದಂಗ ಒಲ್ಲೆನ್ನುದಿಲ್ಲ. ಅದೂ ಕೂಡಾ ನಿನ್ನಂಗ ಮದುವೆ ಅಂದ್ರ ಸಾಕು ಅಂತದ ತಿಳೀತು. ಮೊದಲು ಈ ರಂಗನ ಮದುವೀ ಮುಗಿಯಲಿ ಆ ಮೇಲೆ ನಿಂದ ತೊಗೋತೀನಿ ಕೈಗೆ

ಅಚ್ಚಮ್ಮ - (ಬಂದು) ಶೇಷಣ್ಣಾ ನನ್ನ ಹುಡುಕಲಿಕ್ಕೆ ಬಂದಿದ್ದಿಯೆಂತಲ್ಲ ಹೌದ

ಶೇಷ - ಬರೀ ಹುಡಕಲಿಕ್ಕೆ ಅಷ್ಟೇ ಅಲ್ಲ, ಸಾಹುಕಾರರ ಮದುವಿಗೆ ಕರೀಲಿಕ್ಕೆ ಬಂದಿದ್ದೆ ಬರತೀಯಾ ಅಚ್ಚಮ್ಮ

ಅಚ್ಚಮ್ಮ - ಬೇರೆ ಮಂದೀ ಮದುವಿಗೆ ಬಾ ಅಂತ ಕರೆಯೋದ ಆತ ನಿನ್ನ ಕೆಲಸ. ನಂದಷ್ಟು ಮದವೀಮಾಡಿ ಈ ಪರದೇಸಿನ ಮುತ್ತೈದಿ ಅನಸ್ತಿದಿಯೋ ಏನ ಹಂಗ ಉಳಿಸ್ತಿದೋ ?

ಶೇಷ - ಮಾಡತೀನಿ ಅಚ್ಚಮ್ಮಾ ... ಒಮ್ಮೆ ಮಾತು ಕೊಟ್ಟಿಂದ ಹುಸಿ ಬೀಳುವನಲ್ಲ ನಾನು. ನಿನಗಂತ ಒಂದು ವರಾನ ಹುಡುಕಿ ಇಟ್ಟೇನಿ

ಅಚ್ಚಮ್ಮ - ಹಾಂಗಿದ್ರ ಇದಾರಾಗ ನನ್ನ ತಲಿಮೇಲೆ ನಾಲ್ಕು ಹಕ್ಕೀಕಾಳು ಹಾಕಿ ಬಿಡು. ಅಂದ್ರ ನೋಡಪಾ ಗಂಗಾಸ್ನಾನದ ಪುಣ್ಯ ಬರ್ತದ. ಅಷ್ಟ ಮಾಡತಿಯಾ ?

ಶೇಷ - ನನ್ನ ಮನಸ್ಸಿನಾಗೂ ಅಷ್ಟ ಅದ. ಆದ್ರ ಹೊತ್ತು ಹ್ಯಾಂಗ ಬರತದ ನೋಡೋನು. ಹಣ ಅಕ್ಕಿ ಕೂಡಿಬಂದ್ರ ಹಡದವರೂ ತಡದರೂ ಹೋಗತದ. ಅಂದ ಮ್ಯಾಲೆ ನಿಂದೇನ ಮಹಾ ಮದುವಿಗಂತೂ ಬಾ

ಅಚ್ಚಮ್ಮ - ಯಾಕ ಬರಬೇಕು ಮಂದಿ ತಲಿಮ್ಯಾಲೆ ಅಕ್ಕಿಕಾಳು ಹಾಕಾಕ

ಶೇಷ - ಬರದಂತೂ, ಬಾ. ಮದವಿ ಕೆಲಸಾ ಮಾಡೂ ದೇವರು, ನಿಂದ ಮಾಡಲಿ

ರಂಗಣ್ಣಾ - (ಬರುತ್ತ) ಶೇಷ ದಾರಿವಳಗ ಮಂದಿ ಕೂಡ ಮಾತಾಡ್ತ ನಿಂತ ಬಿಟ್ಟಿದ್ದಿಯಲ್ಲ

ಶೇಷ - ಮಾತಾಡ್ತ ನಿಂತಿಲ್ಲ ಯಜಮಾನ್ರ ಇವರಿಗ ಮದವೀಗೆ ಕರೀತ ನಿಂತೀನಿ ಯಜಮಾನ್ರೇ. ಈ ಲಚ್ಚವ್ವನೂ ಮದವೀ ಆಗತಾಳಂತೆ

ರಂಗಣ್ಣಾ - ಗೊತ್ತದೆ ನನಗೆ. ಅವಳಿಗೂ ಆ ಹುಚ್ಚು ಹಿಡಿದು ಬಹಳ ದಿನಾ ಆಗೇದ

ಅಚ್ಚಮ್ಮ - ಯಾಕ ಹಿಡಿಬಾರದೇನು ? ನಿನ್ನಂಥ ಮುದುಕಗ ಹಿಡಿದಿಂದ ನನಗೆ ಹಿಡಿಯುವದೇನು ಮಹಾ

ರಂಗಣ್ಣ - ಎಲೇ ಅಚ್ಚೀ ಮದವೀ ಅಂದ್ರ ಯಾರದೋ ರೊಕ್ಕ ಯಲ್ಲವ್ವನ ಜಾತ್ರೀ ಅಂತ ಮಾಡಿದೇನ ? ಅಡಗೀ ನೀರಿನ ಕೆಲಸಾ ಮಾಡೊ ಪರದೇಶಿ, ಈ ನಿನ್ನ ಕರಿ ಮುಖ ಕಂದ್ರ ಕಾಗಿ ಸಹಿತ ನಾಚಿಕೊತ್ತೆತೆ. ಸಿಟ್ಟಿಗೇಳಬ್ಯಾಡು ಅಚ್ಚು ನಿನಗ್ಯಾಕಲೆ ಮದವೇ ಹುಚ್ಚು. ಹೂಂ ಶೇಷ ನಿನಗೆ ಟಾಯಿಮ ಇಲ್ಲ. ಲಾರಿ ಬಂದ ಕೂಡ್ಲೆ ಮಂದಿ ಕೂಡಿಸಿ ಬಿಡಿಸಬೇಕು. ಮಳೆ ಹನಿ ದಿವಸ ಈಗ ಇಲ್ಲಿ ನೋಡು ಇದು ರಾಜೀವಪ್ಪನ ಸಾಲ ಮುಟ್ಟಿದ ಬಗ್ಗೆ ಕಾಗದ. ಅಕ್ಕಿಕಾಳ ಬಿಳುತನಕ ನಿನ್ನ ಹತ್ತಿರ ಇರ್‍ಲಿ. ಎಚ್ಚರ ಮತ್ತೆ ಕಳದೀ (ಕಾಗದ ಕೊಡುವನು)

ಶೇಷ - ಇರ್‍ಲ್ರೀಲ್ರಿ ಈ ಕಾಗದ, ಎಷ್ಟ ಕಿಮ್ಮತ್ತಿಂದ ಅನ್ನೂದು ನನಗ ಗೊತ್ತದ. ಏನ ಮರೆತರೂ ಇದನ್ನು ಮಾತ್ರ ಬಹಳ ಎಚ್ಚರದಿಂದ ಕಾಯ್ತಿನಿ

ರಂಗಣ್ಣ - ಇವು ೫೦೦ ರೂಪಾಯಿ ಅವ. ಇಟಗೋ ನಿನ್ನ ಹತ್ತಿರ ಖರ್ಚಿಗಂತ ಇರ್‍ಲಿ (ರೂಪಾಯಿ ಕೊಡುವನು) ನಾ ಹೋಗತೀನಿ (ಹೋಗುವನು)

ಅಚ್ಚಮ್ಮ - ಇಂಥವನ ಮದವಿಗೆ ನಾ ಹೆಂಗ ಬರ್‍ಲಿ ಶೇಷಣ್ಣಾ ನಾ ಒಲ್ಲೆ

ಶೇಷ - ಛೀ ಛೀ ಹಾಂಗ ಅನಬಾರದವ್ವ ನೀನು. ಬರಲಿಕ್ಕೆ ಬೇಕು. ಹೊಡತಾ ಹಾಕಿ ಬಿಡೂನ ಬರ್‍ತಿಯಾ

ಅಚ್ಚಮ್ಮ - ಆಗಲಿ ಬರ್‍ತೀನಿ ನಿನ್ನ ಮಾತು ಮೀರುವುದಿಲ್ಲ ಅಂತ ಒಮ್ಮೆ ವಚನ ಕೊಟ್ಟೇನಿ ಆ ವಚನಕ್ಕೆ ನಾ ಯಾಕ ತಪ್ಪಲಿ (ಹೋಗುವಳು)

ಲಚ್ಚಿ - ಆಗಲಿ ಮಾಮಾ ಅಪ್ಪಣೆ ಕೊಡಪಾ ನಾನು ಹೋಗತೀನಿ. ನಿನಗೂ ನೀ ಮಾಡುವ ಮದವಿಗೂ ಕೂಡೇ ನಮಸ್ಕಾರ

ಶೇಷ - ಯಾಕಲೇ ನಿನಗೇನ ಆತು ?

ಲಚ್ಚಿ - ಮಾಮಾ ನಿನ್ನ ಪ್ಲಾನು ಏನು ಅನ್ನೋದು ನನಗೆ ಈಗ ತಿಳಿಯಿತು. ನಾ ಹೋಗತೀನಿ ಬ್ಯಾಡ ಮಾಮಾ ನಾನು ಮದವೀನ ಒಲ್ಲೆ

ಶೇಷ - ಲೇ ಹಾಂಗ ಮಾತಾಡಿದರ ಏನಲೇ ? ಅದು ನನಗ ತಿಳಿಯುದಿಲ್ಲೇನು ? ಕನ್ಯಾ ನೋಡೀನಿ ಅಂತ ಹೇಳತಾ ಬಂದೀನಲ್ಲಾ

ಲಚ್ಚಿ - ನನಗಂತ ನೀ ನೋಡಿದ ಕನ್ಯಾ ಇದ ಹೌದಲ್ಲೋ !

ಶೇಷ - ಯಾಕ ಏನ ಆಗೇದ ಲಕ್ಷ್ಮಣ ಅದು

ಲಚ್ಚಿ - ಏನೂ ಆಗಿಲ್ಲ ಸಾಕ್ಷಾತ್ ಆ ಮನ್ಮಥನ ಸತಿ ರತಿ

ಶೇಷ - ಆದರೇನು ಆಯಿತೋ ? ರೂಪದಲ್ಲಿ ಆಗದಿದ್ದರೂ ಗುಣದಲ್ಲಿ ಶಿವನ ಸತಿ ಪಾರ್ವತಿ

ಲಚ್ಚಿ - ಆದರೇನು ಆಯಿತೋ, ಮಾಮ ಈ ಕಾಗಿಯ ಧ್ವನಿಯ ಕಷ್ಟ ಕೋಗಿಲೆಯನ್ನು ನನ್ನ ಕೊರಳಿಗೆ ಕಟ್ಟಿ ಮೋಜು ನೋಡಬೇಕೆಂದಿರುವಿ ಏನು ? ಮಾಮಾ ನಾಟಕದ ಪ್ರಭಾವ ಹೇಗೆ ಹೋದಿತಪ್ಪ ಕಂಪನಿ ಮ್ಯಾನೇಜಮೆಂಟ್ ಮಾಡಿ ಬಂದ ಕೆಟ್ಟ ಗುಣ ನಿನ್ನ ಹುಟ್ಟು ಗುಣವಾಗಿದೆ. ಬರತೀನಿ ಮಾಮಾ

ಶೇಷ - ಲಚ್ಚೀ ಬಾರೋ ಇಲ್ಲಿ ನಾನು ನಿನಗೆ ಆರಿಸಿದ ಕನ್ಯೆ ಇವಳಲ್ಲ. ಆ ರಾಜೀವಪ್ಪನ ಎರಡನೇ ಮಗಳು ಮಂದಾಕಿನಿ

ಲಚ್ಚಿ - ಹೌದೇನೋ ಮಾವಾ ನಿಜ ಏನೋ ?

ಶೇಷ - ನಾನೇಕೆ ಸುಳ್ಳು ಹೇಳಲಿ

ಲಚ್ಚಿ - ಮಾಮಾ ನಾನೂ ಕೂಡಾ ಅವಳನ್ನೇ ಮೆಚ್ಚಿದ್ದು. ಇದೂ ಅಲ್ಲದೇ ಅವಳೂ ನನ್ನನ್ನೇ

ಶೇಷ - ಏನಂದೆ ?

ಲಚ್ಚಿ - ಹೌದು ಮಾಮಾ ಪದ ಬರೆಯಿಸಿಕೊಳ್ಳುವ ನೆಪ ಮಾಡಿ ಮನೆಗೆ ಕರೆದುಕೊಂಡು ಹೋಗಿದ್ದಳು

ಶೇಷ - ಅಂತು ಹಾಡು ಕಲಿಸಿದೆ ಅನ್ನು. ಇನ್ನು ಅವಳನ್ನು ಒಲಿಸಿಕೊಳ್ಳುವದೇನ ಮಹಾ ನಿನಗ ? ಯಾಕಂದರೆ ಮೀನಿನ ಮರಿಗೆ ಈಸು ಕಲಿಸು ಕಾರಣನೇ ಇಲ್ಲ

ಲಚ್ಚಿ - ಒಲಿಸುವದೇಕೆ ? ವರಿಸುವದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾಳೆ

ಶೇಷ - ಅಂತೂ ನನಗಿಂತ ಒಂದು ಹೆಜ್ಜೆ ಮುಂದೆ ಇಟ್ಟಿದ್ದಿ ಅನ್ನು. ಹ್ಯಾಂಗಿದ್ರೇನಪ್ಪಾ ಲಚ್ಚಿ ನಾನು ಕಟ್ಟಿದ್ದು ಗುಡಿ, ಆದರ ನೀನು ಇಟ್ಟದ್ದು ಕಳಸ. ಆತಲ್ಲ ಲಚ್ಚೀ ನನಗ ತಿಳಿಸುವ ಮೊದಲೇ ಮುಗಿಸಿದಯಲ್ಲಪ್ಪ

ಲಚ್ಚಿ - ದೇವರ ಇಚ್ಛಾ ಮಾಮಾ ಅದು

ಶೇಷ - ಖರೇವದ ನಡಿಯಪ್ಪ. ಅಪ್ಪ ಟಿಫಿನ್ ಮಾಡೂನು ಆ ಕೃಪಣ ಸಾರ್ವಭೌಮ ರಂಗನ ೧೦೦-೧೦೦ ರೂಪಾಯಿಗಲ ಥಾನು ನನ್ನ ಜೇಬಿನೂಳಗ ಒತ್ತಲಿಕ್ಕೆ ಹತ್ಯಾದ ನಡಿಯಪಾ. ಇವನ್ನಷ್ಟು ಪರಿಸೂನ

ಲಚ್ಚಿ - ಪರಿಸೂನೂ

ಶೇಷ - ಅಂದ್ರ ಮುರಸೂದು ಅಂತ ಅರ್ಥ

ಲಚ್ಚಿ - ಅಲ್ಲಪ್ಪಾ ಮಾಮಾರ ರಂಗಣ್ಣಾಗ ಕೃಪಣ ಅಂತಾ ಕರೀತಿದಿ. ಅಲ್ಲ ಮತ್ತ ಖರ್ಚಿಗೆ ಅಂತಾ ಅವನೇ ಕೊಟ್ಟನಲ್ಲ ಐದು ನೂರು ರೂಪಾಯಿನ

ಶೇಷ - ಇಂಥಾದಕ್ಕೆ ಖರ್ಚು ಮಾಡತಾನ. ಆದ್ರ ಒಳ್ಳೇದಕ್ಕೆ ಕೊಡುದಾದ್ರ ಎಲ್ಲೋದಿಲ್ಲ

ಕೈ. ಮೊದಲೇ ಹೇಳಿಲ್ಲೇನಪ್ಪಾ ದೊಡ್ಡವರ ಪಾಪದ ಧನ ಪ್ರಾಯಶ್ಚಿತಕ್ಕಲ್ಲದೇ ಸತ್ಯಾಗ್ರಹಕ್ಕೆ ಸಲ್ಲದೂ ಅಂತಾ. ಲಚ್ಚಿ ಇಂಥಹ ಶರಣರ ಮಾತಗಳು ಸುಳ್ಳು ಆತು ಅಂದ್ರ ಈ ಜಗತ್ತಿಗೆ ಪ್ರಳಯ. ಅಷ್ಟಗ್ರಹಗಳು ಬಿಟ್ಟು ಇನ್ನೆಷ್ಟು ಗ್ರಹಗಳು ಕೂಡಿದರೂ ಈ ಖೋಡಿ ಜಗತ್ತಿಗೇನೂ ಧಾಡಿ ಆಗೋದಿಲ್ಲ. ಶರಣರ ಮಾತು ಸುಳ್ಳಾದ್ರ ಇದು ಬದುಕುದಿಲ್ಲ ಯಾಕ ನಗುವಿ. ಇದಕ್ಕೆ ಸರ್ವಜ್ಞ ಮೂರ್ತಿಯ ಮಾತು ಸತ್ ಪ್ರಮಾಣ ಅದು "ಉತ್ತರೆಯು ಹೋದರೆ, ಹೆತ್ತವ್ವ ಮುನಿದರ ಸತ್ಯವಂತರು ಹುಸಿ ನುಡಿದರೆ ಲೋಕ ಇನ್ನೆತ್ತ ಬದುಕೀತು. ಬಾ ಲಚ್ಚಿ ಬಾಯಿ ಬಿಸಿ ಮಾಡೋಣ (ಸಿಂತು) ಲಚ್ಚಿ

ಲಚ್ಚಿ - ಏನ ಮಾಮಾ ಸಿಂತಿ

ಶೇಷ - -ಸಿನ್ನ ಬಳಿ ಕ್ಯಾಮರಾ ಇತ್ತಲ್ಲ ಅದು ಎಲ್ಲಿ ಅದ

ಲಚ್ಚಿ - ರೂಮಿನಾಗ ಆದ. ಯಾಕ ಬೇಕಾಗಿತ್ತೇನದು ?

ಶೇಷ - ಇವತ್ತ ಮದುವಿಗೆ ಬರುವಾಗ ಅದನ್ನು ಮರೀದ ತಗೊಂಡ ಬರಬೇಕು ಯಾಕಂದ್ರ ನಾಳೆ ಮದುವಿಯೊಳಗ ಫೋಟೋ ಹೊಡಬೇಕಾಗೈತಿ

ಲಚ್ಚಿ - ಆ ಮುದುಕನ ಮದವಿ ಫೋಟೋ ತೆಗದು ಸುಮ್ಮನೆ ಫಿಲ್ಮ ಯಾಕ ಕೆಡಸ್ತೀದಿ

ಶೇಷ - ಲಚ್ಚಿ ಆ ರಂಗನ ಪ್ರಳಯ ಇರೋದು ಆ ಫೋಟೋದೊಳಗ, ತಿಳಿತ. ಬಡವರನ್ನು ಹಪಾ ಹಪಾ ಅನ್ನಿಸಿ ಹಣ ಕೂಡಿಟ್ಟ ಆ ರಂಗನ ಹೆಣ ಹೊರದಿದ್ರ ನನ್ನ ಹೆಸರು ಶೇಷನೇ ಅಲ್ಲ ನಡಿ.

# ದೃಶ್ಯ - ೯

(ಮದುವೆಯ ಹಂದರದಲ್ಲಿ ಕಲ್ಯಾಣಿ ಮದುಮಗಳ ವೇಷದಲ್ಲಿ ಕುಳಿತಿರುವಳು)

ಕಲ್ಯಾಣಿ - ॥ ಪದ ॥

ಮರುಭೂಮಿಯಂತೆ । ಬರಿದಾಗಿಹೋಯ್ತು । ಕುಲವದು ಏನೀಬಾಳು ಓ ದೇವನೇ ಕೇಳು । ಹಣ ಪಾಶ ಆವರಿಸೀ ಜಗದಿ । ಜನ ಮೋಸ ತಾ ಗೊಳಿಸಿ । ಇದೆಂತು ಬಾಳು । ಬದುಕೆಲ್ಲ ಗೋಳು । ಓ ದೇವ ನೀ ಪೇಳೋ

ಬಡವರ ಮನೆಯಲ್ಲಿ ಹುಟ್ಟುವ ಹೆಣ್ಣು ಮಗಳಿಗೆ ರೂಪ ಒಂದು ಶಾಪವಿದ್ದಂತೆ. ಈ ನನ್ನ ಸೌಂದರ್ಯವೇ ನನಗಿಂದು ಸರ್ಪ ಚುಂಬನವಾಯಿತು. ನಾನು ಕುರುಪಿಯಾಗಿದ್ದರೆ ನನ್ನ ತಂದೆಗೆ ಕೊಟ್ಟ ಸಾಲಕ್ಕೆ ನನ್ನ ಮಾರಾಟ ನಡೆಯುತ್ತಿತ್ತೇ? ಎಲ್ಲಾ ಈ ಸೌಂದರ್ಯದಿಂದಲ್ಲವೇ ನನಗಿಂಥ ಸಂಕಟ ? ಅಂದ ಬಳಿಕ ಸಂತೋಷಕ್ಕೆ ಬದಲು ಸಂಕಟ ಕೊಡುವ ರೂಪವನ್ನೇಕೆ ನಾನಿಟ್ಟುಕೊಳ್ಳಬೇಕು ? ಹೌದು ಹಾಳಾಗಲೇಬೇಕು ಈ ರೂಪ. ಉರಿಯುವ ಒಲೆಯೊಳಗಿನ ಕೊಳ್ಳಿಯಿಂದ ನನ್ನ ಮುಖವನ್ನು ಈಗಲೇ ಸುಟ್ಟುಕೊಳ್ಳುತ್ತೇನೆ. ಹೋಗಲಿನ್ನು ರೂಪಸೃಷ್ಟಿ

ಓನ್ನೆಲೆ (ಎದ್ದು ಹೋಗುವಾಗ) ಹಾ ದೇವರು ಕೊಟ್ಟ ರೂಪವನ್ನು ಸುಟ್ಟುಕೊಳ್ಳುವ ಅಧಿಕಾರ ನಿನಗಿಲ್ಲ. ದೈವ ನಿರ್ಣಯ ಮಾನವರ ಮಾತಿಗೆ ಸಿಲುಕಿಲ್ಲ. ನಿನ್ನ ರೂಪ ಅವನ ಶಾಪವೆಂದು ಭ್ರಮಿಸಿದರೆ ಕೊಟ್ಟ ದೇವರ ಮನಕ್ಕೆ ತಾಪವಾದೀತು

ಕಲ್ಯಾಣಿ - ಆಗಲಿ, ಇಂದು ಈ ರೂಪವೇ ನನ್ನ ಮನಕ್ಕೆ ತಾಪ ನೀಡಿ ನನ್ನ ಮನದ ದೇವರಿಗೆ ಅರ್ಪಿತವಾದ ಈ ರೂಪ ಕುಸುಮವನ್ನು ಸ್ಮಶಾನಕ್ಕೆ ಹೊರಟ ಶವಕ್ಕೆ ಅರ್ಪಿಸಲೆ ? ಛೀ ಮನಸ್ಸನ್ನು ಒಬ್ಬರಿಗೆ ಅರ್ಪಿಸಿ, ದೇಹವನ್ನು ಇನ್ನೊಬ್ಬರಿಗೆ ಅರ್ಪಿಸಲೇ ?

ಓನ್ನೆಲೆ - ಮಂಗಲಾಕ್ಷತೆಗೆ ಇನ್ನೂ ಅರ್ಧ ಗಂಟೆಯ ಅವಕಾಶವಿದೆ. ದುಡುಕಿದರೆ ದುಃಖ ಪಡಬೇಕಾದೀತು. ನಿನ್ನ ದೈವ ಕಣ್ಣು ತೆರೆದರೆ ಈ ವಿಷ ಗಳಿಗೆಯೇ ಅಮೃತ

ಗಳಿಗೆಯಾದೀತು

ಕಲ್ಯಾಣಿ - ಅಂದರೆ ಇನ್ನೂ ನಾನು ಆಸೆ ಇಟ್ಟುಕೊಳ್ಳಲೇ ? ನನ್ನ ಶ್ಯಾಮ ಹಣ ತಂದು ನನ್ನ ಕಷ್ಟ ಪರಿಹರಿಸಿ ನನ್ನ ಕೈ ಹಿಡಿಯುವನೆಂದು ಭಾವಿಸಲೇ ?

ಹಿನ್ನೆಲೆ - ಹೌದು, ಹಾಗೇ ಭಾವಿಸಿ ಸಮಾಧಾನ ತಂದುಕೊ. ನಿನ್ನ ಜೀವಿತದ ಸದ್ಭಾವನೆಯು ನಿನ್ನನ್ನು ಕಾಯದಿದ್ದಲ್ಲಿ ಇನ್ನಾರೂ ಕಾಯಬೇಕು

ಕಲ್ಯಾಣಿ - ಹೌದು ನನ್ನ ಧರ್ಮ ನನ್ನನ್ನು ಕಾಯದಿದ್ದಲ್ಲಿ ಇನ್ನು ಈ ವಿಪತ್ತಿನಲ್ಲಿ ನನ್ನನ್ನು ಯಾರು ಕಾಯಬೇಕು ? ನನ್ನ ಶ್ಯಾಮ ಬರುತ್ತಾರೆ (ಶಹನಾಯಿ ವಾದನ) ಇದೇನು ಸದ್ದು ? ಅಯ್ಯೋ ಇದು ನನ್ನ ಮದುವೆಗೆಂದು ನಡೆಯುವ ಮಂಗಲ ವಾದ್ಯಗಳ ಧ್ವನಿ ತರಂಗ. ದೇವ ಮಂದಿರದ ಹತ್ತಿರ ನಡಿಯುತ್ತಿದೆ. ಉಳಿದವರಿಗೆ ಮಂಗಲದಂತೆ ಕಾಣುವ ನನಗೆ ಇದು ಅಮಂಗಲದ ಗಳಿಗೆ, ಮಾಂಗಲ್ಯ ಧಾರಣೆಯ ಸಮಯ ತೀರಾ ಸಮೀಪಿಸಿತು. ನನ್ನ ಶ್ಯಾಮ ಬರಲಿಲ್ಲ ಹಣ ತರಲಿಲ್ಲ. ಅವರ ವಿಚಾರಕ್ಕೆ ಅವರ ತಂದೆ ಒಪ್ಪಿರಲಿಕ್ಕಿಲ್ಲ ಇನ್ನು ಯಾವ ಮುಖ ಹೊತ್ತು ಇಲ್ಲಿಗೆ ಬರುವದೆಂದು ಬಿಟ್ಟಿರಬೇಕು. ನನ್ನ ಶ್ಯಾಮ ನನ್ನ ಕೈಬಿಟ್ಟರು. ನನ್ನ ಮರೆತುಬಿಟ್ಟರು ಇದು ನನ್ನ ಮದುವೆಯೇ ? ಅಲ್ಲಲ್ಲ ನನ್ನ ಬದುಕಿನ ಮಸಣ. ಜೀವಂತ ಸಾವು

ಶೇಷ - (ಬಂದು) ಇದೇನು ಕಲ್ಯಾಣಮ್ಮ ನಿಮ್ಮ ಕಲ್ಯಾಣ ಸಮಯದಲ್ಲಿ ನೀವೇ ಕಣ್ಣೀರು ಹಾಕತಾ ಇದ್ದೀರಲ್ಲ ?

ಕಲ್ಯಾಣಿ - ಇಲ್ಲ ಶೇಷಣ್ಣ. ಈಗ ಸುರಿಯುತ್ತಿರುವ ಹನಿ ಕಂಬನಿಯಲ್ಲ, ಆನಂದದ ಹನಿ

ಶೇಷ - ಆಗಬಹುದು ಅದಕ್ಕೂ ಹೂಂ ಅಂದೆ. ಈ ವಿಷಮ ವಿವಾಹಕ್ಕೆ ನಿಮ್ಮ ಹೊರಗಿನ ಒಪ್ಪಿಗೆ ಇರುವಂತೆ, ಒಳಗಿನ ಒಪ್ಪಿಗೆ ಇದ್ದರೆ ಈ ಹನಿ ಉದುರುತ್ತಿರಲಿಲ್ಲ. ನೀವಂದಂತೆ ಆನಂದದ ಹನಿಯೇ ಉದುರುತ್ತಿತ್ತು

ಕಲ್ಯಾಣಿ - ಏನು ಮಾಡುವದು ಹೇಳು ಶೇಷಣ್ಣ. ಮುಖ್ಯ ನಾನು ಹತಭಾಗ್ಯಳು

ಶೇಷ - ಈಗಲಾದರೂ ಕಾಲ ಮಿಂಚಿಲ್ಲ ತಾಯಿ ? ನೀವು ಮನಸ್ಸು ಮಾಡಿದರೆ ಭಾಗ್ಯ ನಿಮ್ಮದಾದರೂ ಆಗಬಹುದು. ಮುಂಜಾನೆ ಹೇಳಿದಂತೆ ನೀವೇಕೆ ಪ್ರಯತ್ನ ಮಾಡಬಾರದು ? ಅದೇಕೋ ನಿಮ್ಮ ಪರೀಕ್ಷೆ ಸುಳ್ಳು ಆಯಿತು. ಇನ್ನವರ ಹಾದಿ ಕಾಯುವದು ಒಳಿತಲ್ಲ

ಕಲ್ಯಾಣಿ - ಅವರು ಹಣ ತಂದಿದ್ದರೆ ಏನಾದರೂ ಮಾಡಬಹುದಿತ್ತು. ಈಗ ನೀವು ಹೇಳಿದಂತೆ ನಾನೇನೇ ಮಾಡಿದರೆ ನನ್ನ ತಂದೆಗೆ ಸಂಕಟವಾಗುತ್ತದೆ

ಶೇಷ - ಸಂಕಟವಾಗದಂತೆ ನೋಡಿಕೊಳ್ಳಲಿಕ್ಕೆ ನಾವಿಲ್ಲವೇನಮ್ಮ ? ಈಗಲಾದರೂ

ನೀವು ಸಿದ್ದಾಪುರಕ್ಕೆ ಹೋಗಿ ಪ್ರಯತ್ನಿಸಬಾರದೇಕೆ ?

ಕಲ್ಯಾಣಿ - ಶೇಷಣ್ಣ ಅವಧಿಯೂ ಸಮೀಪಿಸಿದೆ. ಅಂದ ಬಳಿಕ ನಾವೀಗ ಆಸೆಯನ್ನು ನೆನೆಯುವದೆಂದರೆ ಮಾರಿಯ ಬಲಿಗೆಂದು ಹೋಗುವ ಕುರಿ ತನ್ನ ಕೊರಳಲ್ಲಿ ಕಟ್ಟಿದ ಬೇವಿನ ಸೊಪ್ಪನ್ನು ತಿಂದು ಹಸಿವು ನೀಗಿಸಿ ಕೊಳ್ಳಬಯಸಿದಂತೆ. ನನಗೂ ಉದ್ಧಾರವಿಲ್ಲ. ನನ್ನ ತಂದೆಯ ಸಂಕಟವೂ ಪರಿಹಾರವಾಗುವಂತಿಲ್ಲ

ಶೇಷ - ಅಮ್ಮಾ ಮಾಡುವ ಪ್ರಯತ್ನವನ್ನು ಕೊನೆಯವರೆಗೂ ಮಾಡಬೇಕೆಂದೇ ನಾನು ಹೇಳುತ್ತೇನೆ. ಈಗಲೇ ಯಾರಿಗೂ ತಿಳಿಯದಂತೆ ಬೆಳೆದ ಹೊಲದಲ್ಲಿ ಹಾಯ್ದು ಇನ್ನೊಬ್ಬರಿಗೆ ಕಾಣದಂತೆ ರೋಡು ಮುಟ್ಟಿ ಯಾವದಾದರೊಂದು ಬಸ್ಸು ಹಿಡಿದು ಹೊರಟು ಬಿಡಿ, ಜತೆಗೆ ನನ್ನ ಶಿಷ್ಯ ಲಚ್ಚಿಯನ್ನು ಕಳಿಸುತ್ತೇನೆ. ಅವನು ರೋಡು ಮುಟ್ಟಿಸಿ ಬರುತ್ತಾನೆ. ಕಲಾ ಸೇವೆಗಾಗಿ ಜೀವ ಸವೆಸಿ ಕೊನೆಗೆ ಎಲ್ಲರ ಕೈಯಲ್ಲಿ ನೀತಿ ಬಾಹಿರನೆಂಬ ಅಪಖ್ಯಾತಿಗೆ ಗುರಿಯಾಗಿ ಕಲ್ಲಾದ ಈ ಶೇಷನ ಎದೆಯನ್ನು ಅಪ್ಪಾ ಅಣ್ಣಾ ಎಂದು ಕರೆದು ಮಲ್ಲಿಗೆಯಂತರಳಿಸಿದ ತಾಯಿ. ಕರುಣಾಹೀನ ಪ್ರಪಂಚದ ಕಟುಕತನ ಕಂಡು ಬತ್ತಿಸಿದ ನನ್ನ ಕಂಬನಿಯನ್ನು ಮತ್ತೆ ಚಿಮ್ಮಿಸಿದಿ. ಹೋಗಿ ಬಾರಮ್ಮ, ನಾನಿರುವವರಿಗೂ ನಿನಗಾಗಲಿ ನಿನ್ನ ತಂದೆಗಾಗಲೀ ಯಾವ ತೊಂದರೆ ಆಗದೆಂದು ಭಾವಿಸು ಲಚ್ಚಿ ಲಚ್ಚಿ

ಲಚ್ಚಿ - (ಬರುತ್ತಾ) ಯಾಕ ಮಾಮಾ ಕೂಗಿದಿಯೇನು ?

ಶೇಷ - ಇಲ್ಲಿ ಕೇಳು ಸದ್ಯ ಈ ತಾಯಿಯನ್ನು ರೋಡಿನವರೆಗೂ ಮುಟ್ಟಿಸಿ ಬಾ. ನನ್ನ ಈ ತಂಗಿಯ ಒಂದು ಕೂದಲೆಳೆ ಕೊಂಕದಂತೆ ನೋಡಿಕೋ. ನಾನು ನಿನಗೆ ಹೇಳಿದಂತೆ ಮಾಡಿ ಬಂದು ಬಿಡಬೇಕು. ಹೋಗುವಿಯಾ ?

ಲಚ್ಚಿ - ಆಗಲಿ ಮಾಮಾ... ನಾನು ಹೋಗಿ ಬೇಗ ಬಂದು ಬಿಡುತ್ತೇನೆ ಹೂಂ, ನಡೆಯಿರಮ್ಮಾ (ಹೋಗುವರು)

ಶೇಷ - ಬೇಕು ಯಾವುದಕ್ಕೂ ದೈವದ ಅನುಗ್ರಹವೊಂದು ಬೇಕೇ ಬೇಕು. ಅಂತೇ ಹೇಳಿದ್ದಾರೆ ಬಲ್ಲವರು ತೇನವಿನಾ ತೃಣಮಪಿನ ಚಲತಿ ಎಂದು. (ಅಚ್ಚಮ್ಮ ಬರುವಳು)

ಅಚ್ಚಮ್ಮ - ಏನ ಶೇಷಣ್ಣ ನನ್ನ ಮಾಡಿಕೊಳ್ಳುವರು ಇಲ್ಲಿ ಬಂದಿರುತ್ತಾರೆ ಬಾ ಅಂತಾ ಹೇಳಿದ್ದಿ. ನೋಡೋಣ ತೋರಸಪ್ಪಾ ಸ್ವಲ್ಪ

ಶೇಷ - ತೋರಸೋದೇನು ಬಂತು ? ಅಚ್ಚಮ್ಮ ನನ್ನ ಮಾತಿನ ಮೇಲೆ ನೆಚ್ಚಿಗಿ ಇಲ್ಲವೆ ? ಇನ್ನರ್ಧಗಳಿಗೆ ತಾಳು ಅಂದ್ರೆ ನೀನೇ ಮದುಮಗಳು

ಅಚ್ಚಮ್ಮ - ಮದುವಿಗೆ ಮುಂಚೆ ನಾನು ನೋಡಬಾರದೇನ ಮತ್ತ ?

ಶೇಷ - ಮದುವೆಯಾದ ಬಳಿಕ ಎಷ್ಟು ಬೇಕೋ ಅಷ್ಟು ನೋಡಿಕೊಳ್ಳುವೆಯಂತೆ ಹೋಗಮ್ಮಾ ಸ್ನಾನಮಾಡಿ ಸಿದ್ದಳಾಗು

ಅಚ್ಚಮ್ಮ - ಆಗಲೆಪ್ಪ ಹಾಗೆ ಮಾಡತೀನಿ (ಹೋಗುವಳು)

ಶೇಷ - ಹತ್ತು ಸುಳ್ಳು ಹೇಳಿ ಒಂದ ಮದವಿ ಮಾಡಬೇಕಂತೆ. ಅದೂ ಇಂಥ ಅಚ್ಚಮ್ಮನಂಥವರದೇ ಇರಬೇಕು

ಮಂದಾ - (ಬಂದು) ಶೇಷಣ್ಣ ಆ ನಾಟಕದ ಲಕ್ಷ್ಮಣರಾಯರು ಎಲ್ಲಿ ಕಾಣಲಿಲ್ಲ

ಶೇಷ - ಏನಮ್ಮಾ ಮಂದಮ್ಮಾ ಅವನೇಕೆ ಬೇಕಮ್ಮ ಈಗ ನಿನಗೆ ?

ಮಂದಾಕಿನಿ - ಹೀಗೆ ಕೇಳಿದರೆ ಏನು ಹೇಳಬೇಕು ? ಬೇಕಾಗಿತ್ತು. ಇದ್ದ ಸ್ಥಳ ತಿಳಿಸಿದ್ದರೆ ನೆಟ್ಟಗಿತ್ತು

ಶೇಷ - ನನಗೆಲ್ಲಾ ಗೊತ್ತಮ್ಮ ನಿಮ್ಮ ಗತ್ತು. ಅದಿರಲಿ ಮಂದಮ್ಮ ಮದುವೆಯ ಗಳಿಗೆ ಸಮೀಪಿಸಿತು. ಎಲ್ಲಿದ್ದಾಳಮ್ಮಾ ಮದುಮಗಳು (ಕಾವೇರಿ ಬರುವಳು) ಕಾವೇರಮ್ಮ ಎಲ್ಲಿ ನಿಮ್ಮ ಮಗಳು ? ಹೂಂ ಕರೆದುಕೊಂಡು ಬಾರಮ್ಮ ಸಮಯ ಸಮೀಪಿಸಿತು

ಕಾವೇರಿ - ಏಕೆ ಇದೀಗ ಇಲ್ಲಿಯೇ ಇದ್ದಳಲ್ಲ ? ನೋಡೆ ಮಂದಾ ಅಲ್ಲಿದ್ದಾಳೆನೋ ಜನರ ಗುಂಪಿನಲ್ಲಿ

ಮಂದಾಕಿನಿ - ಅಲ್ಲಿಂದಲೇ ಬಂದೆನಮ್ಮ ನಾನೀಗ. ಅಲ್ಲಿಲ್ಲ ಅವಳು

ಕಾವೇರಿ - ಹಾಗಾದರೆ ಮತ್ತೆಲ್ಲಿ ಹೋದಳು ? ಎಲ್ಲಾ ಶೃಂಗರಿಸಿ ನಾನು ಇಲ್ಲಿಯೇ ಕೂಡಿಸಿ ಹೋಗಿದ್ದನಲ್ಲ

ಶೇಷ - ಆ !!! ಹೌದು ಇದ್ದರೂ ಇರಬಹುದಮ್ಮ ನೋಡಿರಮ್ಮ ಮತ್ತೆಲ್ಲಿ ಹೋದಳು? (ಕಾವೇರಿ, ಮಂದಾಕಿನಿ ಹೋಗುವರು) ಹೋಗಿ ಹುಡುಕಿರಿ ಹಣಕ್ಕೆ ಮಗಳನ್ನು ಮಾರಬಯಸಿದ ಮಾರಿ, ಇನ್ನು ನಿಮಗೆ ಈ ಶೇಷನ ಮಾತೊಂದೇ ದಾರಿ

ಕಾವೇರಿ - (ಹುಡುಕಿ ಬಂದು) ಇಲ್ಲ ಶೇಷಣ್ಣ ಅವಳೆಲ್ಲಿಯೂ ಇಲ್ಲ, ಹೇಳದೆ ಓಡಿಹೋದಳೇನೋ

ಶೇಷ - ಆ !!! ಹೌದು ಇದ್ದರೂ ಇರಬಹುದಮ್ಮ. ಯಾಕಂದರೆ ನನಗೆ ಮೊದಲೇ ಅನುಮಾನವಿತ್ತು. ಇದು ಅವಳಿಗ ಮನಸಿಲ್ಲದ ಮದುವೆ ಅಂತ

ಕಾವೇರಿ - ಅಯ್ಯೋ ಶೇಷಣ್ಣ ಈಗವಳು ಓಡಿ ಹೋದದ್ದೇ ಸತ್ಯವಾದರ ಮುಂದೇನು ಮಾಡುವದು. ಸಾಲಕ್ಕೇನು ಹೇಳುವದು ?

ಶೇಷ - ಇಷ್ಟು ದಿವಸ ಏನು ಕೊಟ್ಟು ಮುಟ್ಟಿಸಬೇಕಂತ ಮಾಡಿದ್ದರೋ ಈಗಲೂ ಅದನ್ನೇ ಕೊಟ್ಟು ಮುಟ್ಟಿಸಬೇಕಮ್ಮ

ಕಾವೇರಿ - ಅಂದರೆ ?

ಶೇಷ - ಹಿರಿಯ ಮಗಳು ತಲೆ ಮರೆಸಿ ಕಣ್ಮರೆಯಾದರೆ ಇದ್ದಾಳಲ್ಲ ಕಿರಿಯ ಮಗಳು? ಅವಳನ್ನು ಕೊಟ್ಟು ಸಾಲ ಮುಟ್ಟಿಸಿರಿ. ಕೊಟ್ಟ ಸಾಲಕ್ಕೆ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣನ್ನು ಕೊಂಡು ಮುಟ್ಟಿಸಿಕೊಳ್ಳಲಿಕ್ಕೆ ಹೇಗೋ ಶ್ರೀಮಂತರು ಗಟ್ಟಿ ಇದ್ದಾರಲ್ಲ

ಕಾವೇರಿ - ಅಂದರೇನು ಶೇಷಣ್ಣ, ನನ್ನ ಹೊಟ್ಟೆಯ ಮಗಳು ಮಂದಾಕಿನಿಯನ್ನು ಕೊಡಬೇಕೆ ?

ಶೇಷ - ಮಾಡಿದ ಸಾಲಕ್ಕೆ ಮಗಳನ್ನು ಮಾರುವವರಿಗೆ ಕಲ್ಯಾಣಿ ಏನು ? ಮಂದಾಕಿನಿ ಏನು ?

ಕಾವೇರಿ - ನೆಟ್ಟಗೆ ಮಾತನಾಡು ಶೇಷಪ್ಪ. ನಾನೇನು ಸಾಲ ಮಾಡಿದವಳಲ್ಲ ಮುಟ್ಟಿಸಬೇಕಾದ ಪ್ರಮೇಯವೂ ಇಲ್ಲ. ಬೇಕಿದ್ದರೆ ಸಾಲ ತಂದವರೆ ಎದೆಗೆ ಶೂಲವಿಟ್ಟಾದರೂ ಕೊಟ್ಟ ಹಣ ಪಡೆದುಕೊಳ್ಳಿ. ಅದಕ್ಕೆ ನಾನು ಅಡ್ಡ ಬರಲಾರೆ

ಶೇಷ - ಕಾವೇರಮ್ಮ ಸಾಲದ ಹಣಕ್ಕೆ ಕಲ್ಯಾಣಿಯನ್ನು ಕೊಡಲಿಕ್ಕೆ ಒಪ್ಪಿಗೆ ಕೊಟ್ಟ ಮೇಲೆಯೇ ಅಲ್ಲವೇನು ಮಂದಾಕಿನಿ ಮದುವೆಗೆಂದು ನಮ್ಮ ಸಾವುಕಾರರಿಂದ ಸಾವಿರ ರೂಪಾಯಿ ಚಕ್ಕು ಬರೆಯಿಸಿ ನಾನು ನಿಮ್ಮ ಕೈಯಲ್ಲಿ ಕೊಟ್ಟಿದ್ದು ?

ರಾಜೀವ - (ಬಂದು) ಕಾವೇರಿ ಕಲ್ಯಾಣಿ ಎಲ್ಲಿಯೂ ಇಲ್ಲ. ಎಲ್ಲ ಕಡೆಗೂ ಹುಡುಕಿಸಿ ಆಯಿತು

ಮಂದಾ - ಒಳ್ಳೇ ಸಮಯಕ್ಕೆ ಕೈ ಕೊಟ್ಟು ಓಡಿಹೋದಳಮ್ಮ ಇವಳು

ರಾಜೀವ - ಎಲ್ಲಿ ನನ್ನ ಮಗಳು ಆತ್ಮ ಹತ್ಯೆ ಮಾಡಿಕೊಂಡಳೋ ?

ಶೇಷ - ಆತ್ಮಹತ್ಯೆಯನ್ನು ಮಾಡಿಕೊಳ್ಳುವದಕ್ಕೆ ನೀವು ಉಳಿಸಿದ್ದಿರೇನು ? ಸಾಲದ ಮೊತ್ತಕ್ಕೆ ಎಂದೋ ಮಾರಿ ಬಿಟ್ಟಿದ್ದೀರಲ್ಲ ಅದನ್ನು. ಅಮ್ಮಾ ಕಾವೇರಮ್ಮ ಹುಟ್ಟುವಾಗಲೇ ಗುಣವನ್ನು ಕಳೆದುಕೊಂಡ ನಮ್ಮ ರಂಗಣ್ಣ ಈಗ ಹೆಣ್ಣಿಗಾಗಿ ಹಣವನ್ನು ಕಳೆದುಕೊಂಡು ಮರಿ ಅಗಲಿದ ಹುಲಿಯಾಗಿದ್ದಾನೆ. ಮದುವೆಯ ಹೆಣ್ಣು ಪರಾರಿಯಾದಲ್ಲಿ ಮಹಾ ಮಾರಿಯಾಗುತ್ತಾನೆ

ಕಾವೇರಿ - ನೋಡಪ್ಪ ಶೇಷಣ್ಣ, ಈಗಂತೂ ಆ ಹೊಯ್ಮಾಲಿ ಓಡಿಹೋಗಿ ನನಗೊಂದೂ ತೋರದಂತೆ ಮಾಡಿದಳು. ಈಸಂಕಟದಿಂದ ನನ್ನನ್ನು ನೀನೇ ಪಾರು ಮಾಡಬೇಕು (ನಮಸ್ಕರಿಸುವಳು)

ಶೇಷ - **ಆಗಲಿ** ಕಾವೇರಮ್ಮ. ಆ ದೇವರ ಮೇಲೆ ಭಾರಹಾಕಿ ನಿಮ್ಮನ್ನು ಆ ರಂಗಣ್ಣನ ಕೈಯಿಂದ ಪಾರು ಮಾಡಲು ಪ್ರಯತ್ನಿಸುತ್ತೇನೆ. ಆದರೆ ಒಂದು ಕರಾರಿನ ಮೇಲೆ

ಕಾವೇರಿ - ಅದೇನು ನಿಮ್ಮ ಕರಾರು ?

ಶೇಷ - ಈ ನಿಮ್ಮ ಮಂದಾಕಿನಿಯನ್ನು ಸದ್ಯ ನೀವು ಮದುವೆ ಮಾಡಿಕೊಡಲು ಒಪ್ಪಿದರೆ

ಕಾವೇರಿ - ಯಾರೊಂದಿಗೆ ?

ಶೇಷ - ಅವಳು ಒಪ್ಪಿದ ವರನೊಂದಿಗೆ

ರಾಜೀವ - ಯಾರದು ?

ಶೇಷ - ಈ ನಾಟಕದ ಲಕ್ಷ್ಮಣನಿಗೆ

ರಾಜೀವ - ಏನು ಇವನಿಗೆ ?

ಶೇಷ - ಹೌದು ಇವನಿಗೆ. ಏಕೆ ರಾಜೀವಪ್ಪ ಇವನೇನು ಕುರುಡನೇ ಕುಂಟನೇ ? ಇಲ್ಲವೇ ಆ ರಂಗಣ್ಣನಂತೆ ದಿನ ಹೋದ ಮುದುಕನೇ ? ರಾಜೀವಪ್ಪ ಹಸಿರೆಯನ್ನು ಕೆಸರಿನಲ್ಲಿ ಕಲಿಸುವಂತೆ ಎಳೆಯ ಹುಡುಗಿಯನ್ನು ಹಳೆಯ ಮುದುಕನಿಗೆ ಕಟ್ಟ ಅನುಮತಿ ಕೊಟ್ಟ ನಿನ್ನ ಮನಸ್ಸಿಗೆ ಈ ಮದುವೆ ಸರಿ ಬರಲಿಕ್ಕಿಲ್ಲ. ಯಾಕೆಂದರೆ ಕೊಟ್ಟ ಸಾಲಕ್ಕೆ ಹೊಟ್ಟೆಯ ಮಗಳನ್ನೇ ಮಾರಿಕೊಂಡ ದುಷ್ಟ ಚೇತನ ನಿನ್ನದು. ಅಂದ ಬಳಿಕ ಇಂತಹ ಶ್ರೇಷ್ಠ ಸಂಸ್ಕೃತಿಯ ಮದುವೆ ಹೇಗೆ ಮನಸ್ಸಿಗೆ ಬಂದೀತು. ಇದೂ ಅಲ್ಲದೇ ನಿನಗೆ ಸಾಕಷ್ಟು ಸಾಲ ಕೊಟ್ಟು ನಿನ್ನ ಮಗಳನ್ನು ಕೊಳ್ಳುವ ಆ ರಂಗನ ದುಷ್ಟಗುಣ, ಪಾಪ ಈ ಹುಡುಗನಲ್ಲಿ ಹೇಗೆ ಬಂದೀತು ?

ಕಾವೇರಿ - ಏನಾದರೇನು ಶೇಷಣ್ಣ ರಾತ್ರಿ ಕಂಡ ಬಾವಿಯಲ್ಲಿ ಹಗಲೇ ಹಾರುವಂತೆ ಜಾತಿ ಬಿಟ್ಟು ನೀತಿಗೆಟ್ಟ ಈ ನಾಟಕದವನಿಗೆ ಅದು ಹೇಗೆ ಮಗಳನ್ನು ಕೊಡುವದು ?

ಶೇಷ - ಅಮ್ಮ ಜಾತಿ ಕೆಟ್ಟಿರಬಹುದು, ಆದರೆ ನೀತಿ ಕೆಟ್ಟಿಲ್ಲ. ಒಂದು ವೇಳೆ ಅದು ಕೆಟ್ಟಿದ್ದರೂ ನಿಮ್ಮಷ್ಟು ಕೆಟ್ಟಿಲ್ಲ

ಕಾವೇರಿ - ಅಂದರೆ ?

ಶೇಷ - ಅಂದರೇನವ್ವ ಕಾವೇರವ್ವ ? ಹೊಟ್ಟೆಯ ಮಗಳಿಗೆ ಹಾಲು ಕುಡಿಸಿ ಮಲಮಗಳ ಹೊಟ್ಟೆಗೆ ಹಾಲಾಹಲ ಕುಡಿಸುವದು ನೀತಿಯೇನಮ್ಮ ? ಮಲಮಗಳ ಮಾರಾಟದಿಂದ ಬಂದ ಹಣದಲ್ಲಿ ಹೊಟ್ಟೆಯ ಮಗಳಿಗ ಮಾಂಗಲ್ಯ ಧಾರಣೆ ಮಾಡಬಯಸುವದೇ ನಿಮ್ಮಂಥ ಶೀಲವಂತರ ಜಾತಿಯ ನೀತಿಯಾದಲ್ಲಿ ಈ ನಿಮ್ಮ ಜಾತಿಯಾಗಲೀ, ರೀತಿಯಾಗಲೀ ಎರಡಕ್ಕೂ ಈ ಹುಡುಗ ಹೊರತಾಗಿದ್ದಾನೆ. ಏಕೆ ಮಂದಾಕಿನಿ ಈ ಮದುವೆಗೆ ನಿನ್ನ ಒಪ್ಪಿಗೆಯೇ ?

ಮಂದಾ - ಅಹುದು ಶೇಷಣ್ಣ ನಾವಿವರನ್ನು ಮದುವೆಯಾಗುವದಕ್ಕೆ ಸಿದ್ಧಳಿದ್ದೇನೆ

ಕಾವೇರಿ - ಅಂದರೇನು ಮಂದಾ ಆ ನನ್ನ ಅಳಿಯ ಶ್ಯಾಮನಿಗೆ ?

ಮಂದಾ - ಅವ್ವ ಒಪ್ಪದ ವರನೊಂದಿಗೆ ಒತ್ತಾಯದಿಂದ ಕಟ್ಟುವ ಹಂಬಲವ ಬಿಡು. ಇವರನ್ನು ನಾನು ಮನಸಾ ಒಪ್ಪಿದ್ದೇನೆ. ಅಪ್ಪನೂ ನೀನೂ ಕೂಡಿ ಇವರೊಂದಿಗೆ ನನ್ನ ಮದುವೆ ಮುಗಿಸಿ ಬಿಡಿ

ಶೇಷ - ಏಕೆ ರಾಜೀವಪ್ಪ ಇದಕ್ಕೆ ನಿಮ್ಮ ಒಪ್ಪಿಗೆಯೇ ?

ರಾಜೀವ - ಮಗಳೇ ಒಪ್ಪಿದ ಮೇಲೆ ಮುಗಿದೇ ಹೋಯಿತಲ್ಲ ! ಇನ್ನು ನಮ್ಮ ಒಪ್ಪಿಗೆ ಏಕೆ ಬೇಕು ? ನಿಮ್ಮ ಇಷ್ಟ ಬಂದಂತೆ ಮಾಡಿ

ಶೇಷ - ಕಾವೇರಮ್ಮ

ಕಾವೇರಿ - ತಂದೆ ಮಗಳು ಒಪ್ಪಿದ ಮೇಲೆ ನನ್ನದೇನಿದೆಯಪ್ಪ

ಶೇಷ - ಹೂಂ ಈ ಮದುವೆ ರಂಗಣ್ಣನಿಗೆ ತಿಳಿಯುವ ಮೊದಲೇ ಇಲ್ಲಿ ಈಗಲೇ ಮುಗಿದು ಬಿಡಲಿ. ಇಲ್ಲದಿದ್ದರೆ ಕಲ್ಯಾಣಿಯನ್ನು ಕಳೆದುಕೊಂಡ ಅವನು ಕಾಳಸರ್ಪದಂತಹ ತನ್ನ ಕೈಯನ್ನು ಮಂದಾಕಿನಿಯತ್ತ ಚಾಚಬಹುದು. ಲಚ್ಚೀ ಹಾರ ತಾರಪಾ (ಲಚ್ಚಿ ಹಾರ ತರುವನು) ಹೂಂ ಲಚ್ಚಿ ಮೊದಲು ನೀನು ಹಾಕಬೇಕು. ಇಲ್ಲಿ ಕೇಳು ಕಾಯಾ ವಾಚಾ ಮನಸಾ ದೇವರನ್ನು ಸ್ಮರಿಸಿ ಇವಳನ್ನು ಪರಿಗ್ರಹಿಸುತ್ತೇನೆಂದು, ಧರ್ಮ ಅರ್ಥ ಮೋಕ್ಷ ಕಾಮದಲ್ಲಿ ಇವಳನ್ನು ಮೀರಿ ನಡೆಯುವದಿಲ್ಲವೆಂದು ಪ್ರಮಾಣಮಾಡಿ ಮಂದಾಕಿನಿಯ ಕೊರಳಿಗೆ ಮಾಲೀ ಹಾಕು, ಹಾಗೂ ಮಂಗಳ ಸೂತ್ರ ಕಟ್ಟು

ಲಚ್ಚಿ - ಅಯ್ಯೋ ಅದನ್ನು ತಂದಿಲ್ಲ ಮಾಮಾ

ಶೇಷ - ನಾನು ತಂದೀನಪಾ ಮರಿ. ತಗೋ ಹಾರಾ ಹಾಕಿ ಕಟ್ಟು ಅವಳ ಕೊರಳಿಗೆ

ಲಚ್ಚಿ - ಸೂರ್ಯ ಚಂದ್ರರ ಸಾಕ್ಷಿಯಾಗಿ ನಾನಿಂದು ಕಾಯಾ ವಾಚಾ ಮನಸಾ ಮಂದಾಕಿನಿಯನ್ನು ಪರಿಗ್ರಹಿಸುತ್ತಿದ್ದೇನೆ. ಹಾಗೂ ಧರ್ಮ, ಅರ್ಥ, ಮೋಕ್ಷ ಕಾಮಗಳಲ್ಲಿ ಇವಳನ್ನು ಮೀರಿ ನಡೆಯುವದಿಲ್ಲೆಂದು ಪ್ರಮಾಣ ಮಾಡುತ್ತೇನೆ (ಮಾಲೆ ಹಾಕುವನು)

ಮಂದಾ - ಮುಂಬರುವ ಸುಖ ದುಃಖಗಳನ್ನು ಸಮಭಾಗಿನಿಯಾಗಿ ಇವರೊಂದಿಗೆ ಸ್ವೀಕರಿಸುತ್ತ ನಾನಿವರೊಂದಿಗೆ ಬಾಳುವೆನೆಂದು ಸೂರ್ಯ ಚಂದ್ರರ ಸಾಕ್ಷಿಯಾಗಿ ಇಂದಿವರ ಕೈ ಹಿಡಿಯುವೆ. ನಮ್ಮ ಬಾಳಿಗೆ ಬೆಳಕು ನೀಡಿರೆಂದು ವಶಿಷ್ಟ ಅರುಂಧತಿಯರಲ್ಲಿ ಬೇಡುವೆ (ಮಾಲೆ ಹಾಕುವಳು)

ಶೇಷ - ಎಂತಹ ದಿವ್ಯವಾದ ಮದುವೆಯಪ್ಪ ಇದು ? ವರದಕ್ಷಿಣೆ ಕಾಟವಿಲ್ಲ, ಕೊಡಕೊಳ್ಳುವ ಕಾದಾಟವಿಲ್ಲ. ಯಾವ ವಿಘ್ನವಿಲ್ಲದೇ ಮುಗಿದ ಈ ಲಗ್ನವೇ ಭಾರತೀಯರ ಬಾಳಿಗೆ ಶೇಷ ಸಂಸ್ಕೃತಿಯ ಲಕ್ಷಣ. ಹೂ ವಧೂವರರು

ಸರಿಯಾಗಿ ನಿಂತುಕೊಳ್ಳಿ. ಮಾಡಿಸುತ್ತೇನೆ ಒಂದು ಫೋಟೋ (ತೆಗೆದು) ಹೂಂ ನಮಸ್ಕರಿಸಿರಿ ಹಿರಿಯರಿಗೆ (ನಮಸ್ಕರಿಸುವರು) ಹಾಂ ಕಾವೇರಮ್ಮ ಇನ್ನು ನೀವೆಲ್ಲ ಆ ಬದಿಗೆ ಹೋಗಿ ಬಿಡಿ, ರಂಗಣ್ಣ ಬರುವ ಹೊತ್ತಾಯಿತು

ಕಾವೇರಿ - ಅವರು ಬಂದ ನಂತರ ಅವರಿಗೇನು ಹೇಳುವಿಯಪ್ಪ

ಶೇಷ - ಕನ್ಯಾ ಸಿದ್ಧವಿದೆಯಮ್ಮ ಅವನಿಗೂ, ನೀವು ಮಾತ್ರ ನಾನು ಹೇಳಿದಷ್ಟು ಕೇಳಿ ಆಯಿತಾ ? (ಹೋಗುವರು) ಆಯಿತು ಮನಸ್ಸಿನಲ್ಲಿ ಮಾಡಿಕೊಂಡಂತೆ ಒಂದು ಮದುವೆ ಮುಗಿದು ಇನ್ನೆರಡು ಉಳಿದವು. ಆಗಲಿ ದೇವರಿದ್ದಾನೆ ಒಳ್ಳೇ ಕೆಲಸಕ್ಕೆ ಉಪಯೋಗವಾಗಲಾರನೇನು ಆ ನನ್ನ ಮಗ ದೇವರು ! ಎಲೆ ರಂಗಾ ನಿನ್ನ ಮಂಗತನದ ನಾಟಕಕ್ಕೆ ಮಂಗಲ ಹಾಡುವ ಮುಹೂರ್ತ ತೀರಾ ಸಮೀಪಿಸಿತಲೋ ಪ್ರಾಣಿ

ರಂಗಣ್ಣ - (ಬರುತ್ತ) ಏನು ಶೇಷ ಇನ್ನೂ ಬರಲಿಲ್ಲ ಕನ್ಯಾಮಣಿ ಕಲ್ಯಾಣಿ

ಶೇಷ - ಬರುತ್ತಾಳೆ ಯಜಮಾನರೇ, ಊರಿಗೆ ಬಂದವಳು ನೀರಿಗೆ ಬರದೆ ಇರುತ್ತಾಳೆಯೇ ?

ರಂಗಣ್ಣ - ಇನ್ನೂ ಯಾವಾಗ ಬರ್ತಾಳೆ. ಮುಹೂರ್ತ ಸಮೀಪಿಸಿತು

ಶೇಷ - ಎಲ್ಲಿ ಯಜಮಾನ್ರೇ ಇನ್ನೂ ಐದು ನಿಮಿಷ ಇದೆಯಲ್ಲ ಧಾರೆಗೆ ಅವಕಾಶ

ರಂಗಣ್ಣ - ಐದು ನಿಮಿಷ ಕಳದು ಹೋಗೋದೇನು ಮಹಾ ? ಕರೆದು ಕೊಂಡು ಬಾ ಆ ಸಾಲಂಕೃತ ವಧುವನ್ನು

ಶೇಷ - ಆಗಲಿ ಯಜಮಾನರೇ (ಒಳಗೆ ಹೋಗಿ ಅಚ್ಚಮ್ಮನನ್ನು ವದುವಿನ ವೇಷದಲ್ಲಿ ಮುಸುಕು ಹಾಕಿ ಕರೆತರುತ್ತಾನೆ) ಹೂಂ ಇಲ್ಲಿ ಕೂಡಮ್ಮ. ಹಸೆಯ ಮೇಲೆ ಅಂದರೆ ಮದುವೆಯ ಹಂದರದಲ್ಲಿ, ನಿಮ್ಮ ಯಜಮಾನರ ಎಡಭಾಗದಲ್ಲಿ. (ಕೂಡ್ರಿಸುವನು) ಮತ್ತೇನು ಯಜಮಾನ್ರೆ... ಮಂತ್ರವನ್ನು ಹೇಳಲು ಆಚಾರಿಗೆ ಅಪ್ಪಣೆ ದಯಪಾಲಿಸಿರಿ

ರಂಗಣ್ಣ - ಮಂತ್ರವಷ್ಟೇ ಏಕೆ ಮಂಗಲವಾದ್ಯ ಊದಲು ಖರ್ಚು ಕೊಟ್ಟು ಕರೆತಂದಿರುವೆಯಲ್ಲ ಓಲಗದವನನ್ನು ಊದಲು ಹೇಳು

ಶೇಷ - ಆಗಲಿ ಯಜಮಾನ್ರೆ, ಏ ಬಾಜೀ ಮಾಡಿರೋ ಹಾಗೆ ಕಳಿತೀರಲ್ಲ ಶ್ರೀಮಂತರ ಹಣವೇನು ಪುಕ್ಕಟೆಯಲ್ಲ (ಶಹನಾಯಿ ಊದುವರು)

ರಂಗಣ್ಣ - ಊದಿದ್ದೇ ಊದತಾರಲ್ಲಪ್ಪ ಶೇಷ ಅವರು

ಶೇಷ - ಹೌದು ಯಜಮಾನ್ರೆ ಅದು ರೆಕಾರ್ಡ ಆಗಿದೆ

ರಂಗಣ್ಣ - ಹೂಂ ಮಂತ್ರಾ ಸುರು ಮಾಡ್ರಿ ಆಚಾರ್ಯರೆ (ಮಂತ್ರ ಮಾಂಗಲ್ಯ ಧಾರಣೆಯಾಗುವದು).

ಶೇಷ - ಏನ್ರಪ್ಪ ವಧುವರರ ಭಾವಚಿತ್ರ ತೆಗೆಯುವ ಕಾರ್ಯ ನಡೆಯುತ್ತದೆ. ಇಲ್ಲಿ ನೀವೆಲ್ಲ ಹೋಗಿ ಬಿಡ್ರಿ. ಊಟದ ವ್ಯವಸ್ಥೆ ನೋಡಿಕೊಳ್ಳಿ (ಎಲ್ಲರೂ ಹೋಗುವರು). ಯಜಮಾನ್ರೆ ನನ್ನ ಬಳಿ ಕ್ಯಾಮರಾ ಇದೆ. ಈಗಲೇ ನಿಮ್ಮ ಮದುವೆಯ ಭಾವಚಿತ್ರ ತೆಗೆದುಬಿಡುತ್ತೇನೆ. ಎಲ್ಲಿ ಯಜಮಾನ್ರೆ ಒಂದು ನಿಮಿಷ ನನ್ನ ಕಡೆ ನೋಡ್ರಿ. ಅಮ್ಮಾ ಮದುಮಗಳೇ ಎಲ್ಲಿ ಮುಸುಕು ಸರಿಸಿ ಮುಖಾ ಮೇಲಕ್ಕೆತ್ತರಿ (ಇಬ್ಬರ ಫೋಟೋ ತೆಗೆದುಕೊಂಡು) ಹೂಂ ಯಜಮಾನ್ರೆ ನೂತನ ದಂಪತಿಗಳಾದ ನಿಮ್ಮನ್ನುಳಿದು ಇಲ್ಲಿ ಇನ್ನಾರು ಇಲ್ಲ, ನಾನು ಕೂಡಾ ಊಟದ ವ್ಯವಸ್ಥೆ ನೋಡಿಕೊಳ್ಳುತ್ತೇನೆ. ನಿಮ್ಮ ಮೆಚ್ಚಿನ ಮಡದಿಯೊಂದಿಗೆ ನಾಲ್ಕು ಪ್ರೀತಿಯ ಮಾತು ಆಡಿಕೊಳ್ಳಿ

ರಂಗಣ್ಣಾ - ರಸಿಕ ಅಂದೆಲ್ಲ ಶೇಷ, ನನ್ನಲ್ಲಿ ರಸಿಕತೆಯನ್ನು ನೀನು ಹೇಗೆ ಗುರ್ತಿಸಿದಿ ?

ಶೇಷ - ಅಯ್ಯೋ ಯಜಮಾನ್ರೆ ರಸಿಕರಾದ ತಾವು ಸಾಕಷ್ಟು ಹಣ ಸೂರೆಮಾಡಿ ಇಂತಹ ದಿವ್ಯ ಸುದರಿಯನ್ನು ಮದುವೆಯಾದದ್ದು ಯಾಕೆ ? ಇಷ್ಟೂ ತಿಳಿಯಬಾರದೇ ನನಗೆ ? ಬರುತ್ತೇನೆ (ಹೋಗುವನು)

ರಂಗಣ್ಣಾ - ಆಗಲಿ ಆಗಲಿ ಹೋಗು (ವಧುವನ್ನು ಮುಟ್ಟಿ) ಹೇ ನನ್ನ ಮನಕಾಸರ ಹಂಸೆ ರೂಪವಂತೆ ಗುಣವಂತೆ ಉದ್ದನ ಜಡೆಯುಳ್ಳಾಕಿ ಸಣ್ಣಾ ನಡವಿದ್ದಾಕಿ ಯಾವಾಗಲೂ ಅಳುವ ಅಲ್ಲಲ್ಲ ನಗುವ ಮುಖಾ ಉಳ್ಳಾಕಿ ಇಂದು ನನ್ನ ಮದುವೆ ಆದಾಕಿ. ನಿನ್ನ ಪಡಿಬೇಕಾರ ನನ್ನ ದುಡ್ಡು ಎಷ್ಟು ಖರ್ಚಾಯಿತಲ್ಲೇ ? ಆದರೂ ನೀ ದೊರಕಿದೆಯಲ್ಲೆ ? ಬಾ ಬಾಮಾಮಣಿ

ಶೇಷ - (ಮತ್ತೆ ಬಂದು) ಯಜಮಾನ್ರೆ ನನ್ನ ಛತ್ರಿ (ತೆಗೆದುಕೊಳ್ಳುವನು)

ರಂಗಣ್ಣಾ - ಎಲ್ಲಿ ಹೋಗುತ್ತಿತ್ತೋ ? ಹಿಂದಿನಿಂದ ಬಂದು ತೆಗೆದುಕೊಳ್ಳಲು ಬರುತ್ತಿರಲಿಲ್ಲವೇ ? ನೂತನ ದಂಪತಿಗಳು ಸರಸವಾಡುವಾಗ ಬಂದು ವಿರಸ ಮಾಡುತ್ತಾರೆನೋ ? ಹೋಗೋ ಹಾಳಾದವನೇ

ಶೇಷ - ಹೊರಟೆ ಯಜಮಾನ್ರೇ (ಹೋಗುವನು)

ರಂಗಣ್ಣಾ - ಸುಂದರೀ ಸಿಟ್ಟಾಗಬೇಡ. ಆ ಶೇಷ ಸ್ವಲ್ಪ ಹುಚ್ಚನಾಗಿದ್ದಾನೆ. ಪಾಪ ತಿಳಿಯಲಾರದೆ ಬಂದಿದ್ದಾನೆ. ಚಿನ್ನಾ ನನ್ನ ರನ್ನ, ನನ್ನ ಮನೆಗೆ ಬಂದ ಬಳಿಕ ಅಲ್ಲಿ ನೀನೇ ರಾಣಿ, ನಾನೇ ರಾಜಾ. ಬೆಳ್ಳಿಯ ಮಂಚದ ಮೇಲೆ ನಿನ್ನ ಕೂಡ್ರಿಸಿ ಸುವರ್ಣದ ಒಡವೆಗಳಿಂದ ಅಲಂಕರಿಸಿ ನಾನೇ ನಿನ್ನ ದಾಸನಾಗಿ ಸೇವೆ ಮಾಡುತ್ತೇನೆ. ಎಲ್ಲಿ ಹೊದ್ದು ಕೊಂಡಿರುವ ಮುಸುಕನ್ನು ಸರಿಸಿ ಈ ನನ್ನ ಕಾತರಿಸುವ ಕಣ್ಣುಗಳಿಗೆ ಹಬ್ಬದೂಟವನ್ನುಣಿಸು. ಎಲ್ಲಿ ನಿನ್ನ ಸುಂದರ ಮುಖವನ್ನು ತೋರಿಸು ಎಲ್ಲಿ ? (ಮುಸುಕು ತೆಗೆಯುವನು)

ಅಚ್ಚಮ್ಮ - ಆಹಾ ನನ್ನ ರಾಜಾ (ಅಪ್ಪಲು ಹೋಗುವಳು)

ರಂಗಣ್ಣಾ - (ಗಾಬರಿಯಿಂದ) ಅಯ್ಯೋ ಇವಳು ಕಲ್ಯಾಣಿ ಅಲ್ಲ. ಅಬ್ಬಾ ಘಾತವಾಯಿತು ಘಾತವಾಯಿತು ಎಲೆ ಶೇಷ

ಶೇಷ - (ಬಂದು) ಏನಾಯಿತು ಯಜಮಾನ್ರೆ

ರಂಗಣ್ಣಾ - ಇವಳು ಕಲ್ಯಾಣಿ ಅಲ್ಲ. ಅಡಗೀ ನೀರಿನ ಅಚ್ಚಿ ?.

ಅಚ್ಚಮ್ಮ - ಇನ್ನು ಮೇಲೆ ನಾನೇಕೆ ಅಡಗೀ ನೀರಿನ ಅಚ್ಚಿ. ಮದುವೆಯಾಗಿದ್ದೀರಲ್ಲ ನೀವು ನನ್ನ ಮೆಚ್ಚಿ

ರಂಗಣ್ಣಾ - ಸುಳ್ಳು, ನಾನೇಕೆ ನಿನ್ನ ಮದವೀ ಆಗಲಿ

ಅಚ್ಚಮ್ಮ - ಯಾಕ್ರೀ ಹಸೆಮಣೆ ಮೇಲೆ ನನ್ನ ಬಲಕ್ಕೆ ಕುಂತು ಮಂಗಲಾಕ್ಷತೆ ಹಾಕಿಸಿಕೊಂಡು ನನ್ನ ಕೊರಳಿಗೆ ಕಟ್ಟಿದ್ದೀರಲ್ಲ ಮಾಂಗಲ್ಯಾನ. ಇದು ನೋಡ್ರಿ ಸುಳ್ಳೇನು?

ಶೇಷ - ಇದಕ್ಕೆ ಸಾಕ್ಷಿಯಾಗಿ ಬೇರೆ ಮೂಡಿಬಿಟ್ಟಿದೆಯಲ್ಲ ನನ್ನ ಬಳಿಯಿದ್ದ ಕ್ಯಾಮರಾದಲ್ಲಿ ನಿಮ್ಮಿಬ್ಬರ ಭಾವಚಿತ್ರ. ಅದೂ ಮದುವೇ ಹಂದರದಲ್ಲಿ, ಅಂದಬಳಿಕ ಮಾಡಿಕೊಂಡ ಮದುವೆ ಸುಳ್ಳಾದೀತೇ

ರಂಗಣ್ಣಾ - ಕೊಯ್ದಿ ಶೇಷ ನೀ ನನ್ನ ಕುತ್ತಗಿ ಕೊಯ್ದಿ. ಶೇಷ ನಿನ್ನ ನಂಬಿ ನಾಕೆಟ್ಟೆ

ಶೇಷ - ನೀವು ನನ್ನನ್ನು ನಂಬಿ ಕೆಟ್ಟಿಲ್ಲ, ಯಜಮಾನ್ರೆ ನಿಮ್ಮಲ್ಲಿದ್ದ ಹಣ ನಂಬಿ ಕೆಟ್ಟಿರಿ. ಹಣ ಒಂದಿದ್ದರೆ ಏನೆಲ್ಲ ಕೊಳ್ಳಬಹುದೆಂದು ನೀವು ಮನಸ್ಸು ಮಾಡಿದಿರೊ ಅಂದೇ ನೀವು ಕೆಟ್ಟಿರಿ. ಕೊಟ್ಟ ಸಾಲಕ್ಕೆ ನೀವು ಇಷ್ಟ ಪಟ್ಟರೋ ಅಂದೇ ನೀವು ಕೆಟ್ಟಿರಿ. ಮೆಚ್ಚಿಕೊಂಡ ಅಚ್ಚಮ್ಮನೊಂದಿಗೆ ನಿಮ್ಮ ಮದುವೆ ಮಾಡಿಸಿ ಕೆಟ್ಟಿದ್ದ ನಿಮ್ಮನ್ನಿಂದು ನೆಟ್ಟಗೆ ಮಾಡಿದ್ದೇನೆ. ಹೂಂ ಹೊರಡಿರಿನ್ನು ಮಾಡಿಕೊಂಡ ಮಡದಿಯನ್ನು ಕರಕೊಂಡು ಮನೆ ತುಂಬಿಸಿಕೊಳ್ಳಿ

ರಂಗಣ್ಣಾ - ಇಲ್ಲ, ಇಲ್ಲ, ಇದು ನನ್ನಿಂದ ಸಾಧ್ಯವಿಲ್ಲ

ಅಚ್ಚಮ್ಮ - ನಿಮ್ಮಿಂದ ಮನೀ ತುಂಬಿಸಿಗೊಳ್ಳುವದು ಆಗದಿದ್ದರೆ ಬಿಡಿ. ನಿಮ್ಮ ಕೈಹಿಡಿದ ಅಧಿಕಾರದಿಂದ ನಾನೇ ಮನಿಗೆ ಹೋಗತೀನಿ. ಏನಂತ ತಿಳಿದಿರಿ ಸಾಹುಕಾರ ನನ್ನ ಮಾಡಿಕೊಂಡ ಹೆಂಡತಿ ಎಂದಾದರೂ ಕೂಡಿಕೊಂಡವಳಾಂಗ ಬೇಡಿಕೊಳ್ಳತಾಳಂತ ತಿಳಿದೀರೇನು ?

ರಂಗಣ್ಣಾ - ಮನಿ ಸನೇಕ ಬಂದ್ರ ನಿನ್ನ ಕೊಂದ ಹಾಕತೇನಿ

ಅಚ್ಚಮ್ಮ - ಅಯ್ಯ ಸೂರ ಕೊಂದ ಹಾಕಾಕ ನಾ ಏನ ಹಂದೀ ಮರಿ ಅಲ್ಲ. ನನ್ನ ಹೆಸರು ಅಚ್ಚಮ್ಮಾ ಅಚ್ಚಾಗಿ ನಡೆದೀ ಅಂದ್ರ ಬೇಸಿ ಆತ. ತುಚ್ಛ ಮಾಡಿ ಕಂಡೀ ಅಂದ್ರ ನಿನ್ನ ಮೈ ಬೆಚ್ಚಗಾಗತೈತಿ ತಿಳಿ. ಮದವಿ ಆದಿಂದ ಆರ್ಧಾ ಹಕ್ಕು ನಂದು

ರಂಗಣ್ಣಾ - ಮದುವಿ ಆತಂತ ಯಾರ ಹೇಳತಾರ ?

ಅಚ್ಚಮ್ಮ - ನಾನು

ರಂಗಣ್ಣಾ - ನೀನು ಹೇಳಿದರೆ ಅದನ್ನು ನಂಬವುರ್‍ಯಾರು ? ನಿನಗೆ ಹಕ್ಕು ಕೊಡಿಸುವವರ್‍ಯಾರು ?

ಶೇಷ - ನಾನು ಯಜಮಾನರೇ, ನಾನು ಕೊಡಿಸುತ್ತೇನೆ. ನಾನು ಕೊಡಿಸದಿದ್ದರೂ ನನ್ನ ಕೈಯೊಳಗಿನ ಕ್ಯಾಮರಾ ಕೊಡಿಸತ್ತೈತಿ. ಮದವೀ ಮಂಟಪದಾಗ ತೆಗೆದ ಈ ಫೋಟೋದ ಬಲದಿಂದ ನಿಮ್ಮ ಕೈಯಿಂದ ಯಾಕೆ ಕಾಯ್ದೆ ಶೀರ ಕೋರ್ಟಿನ ಕೈಯಿಂದ ಕೊಡಿಸ್ತೀನಿ ಯಜಮಾನ್ರೆ, ಅರ್ಧಾಂಗಿ ಅಂದಿಂದ ಅರ್ಧಾ ಆಸ್ತಿ ದೊರೀದ ಏನ ಮಾಡತದ ?

ರಂಗಣ್ಣಾ - ಆಸ್ತಿ ಕೊಡದಿದ್ದರೆ ಕಡೀಕ ಅಸ್ತಿನಾದರೂ ಕೊಡಿಸೋ ಪೈಕಿ ನೀನು. ಶೇಷ ತೋರಿಸಿದೆಲ್ಲಪ ಕಡೆಗೂ ನಿನ್ನ ನಾಟಕ ಕಂಪನಿ ಕೈನ. ಏನಮಾಡಿ ಬಿಟ್ಟೆಪ್ಪ ಶೇಷಾ !

ಶೇಷ - ನಿಮಗೇನೂ ಕೇಡಿಲ್ಲ ಯಜಮಾನ್ರೆ. ಸುಮ್ಮನೆ ನನ್ನ ಮಾತು ಕೇಳ್ರಿ. ಅಚ್ಚಮನ ಕೂಡ ಬಾಳೇ ಮಾಡಿಕೊಂಡು ಹೋಗ್ರಿ

ರಂಗಣ್ಣಾ - ಏನಾತೋ ಶೇಷ ನನ್ನ ಬಾಳೇವ (ಅಳುವನು)

ಶೇಷ - ಕಲ್ಯಾಣಕಾರ್ಯ ಮಾಡಿಕೊಂಡು ಕಣ್ಣೀರು ಹಾಕಬಾರದು ಯಜಮಾನ್ರೆ

ರಂಗಣ್ಣಾ - ಈ ಕರೀ ಬಣ್ಣದ ಹೆಣ್ಣಿನ ಕೂಡ ಅದು ಹ್ಯಾಗಪ್ಪ ಬಾಳೇ ಮಾಡೋದು !

ಶೇಷ - ಅಚ್ಚಮ್ಮನ ಬಣ್ಣ ಕಪ್ಪಿದ್ದರೂ ಒಳಗಿನ ಗುಣಾ ಕಪ್ಪಿಲ್ಲ ಯಜಮಾನ್ರೆ. ನೇರಲ ಹಣ್ಣು ಕಪ್ಪಿದ್ರ ಸವಿ ಬಹಳ. ಅತ್ತಿ ಹಣ್ಣು ಕೆಂಪಿದ್ರ ಹುಳಾ ಬಹಳ

ರಂಗಣ್ಣಾ - ದುಡ್ಡು ದುಡ್ಡು ಎಲೆ ರಾಜೀವ ಮಗಳ ಕೊಡತೀನಿ ಅಂತಾ ನನ್ನ ಹಣ ತೆಗೆದುಕೊಂಡ ಆ ರಾಜೀವ ಎಲ್ಲಿ ?

ಶೇಷ - ಹಾ, ಹಾ, ಯಜಮಾನ್ರೇ ಅಷ್ಟ ಉದ್ರೇಕ ಆಗಬೇಡಿರಿ. ಮತ್ತೆ ನಿಂತಲ್ಲೇ ಹಾರ್ಟ್‌ಫೇಲ ಆಗಿ ಸತ್ತೀರಿ

ಅಚ್ಚಮ್ಮ - ಹೌದ ಮತ್ತ ನನ್ನ ಆಸೇಕ್ಕ ಕಲ್ಲ ಬಡದೀರಿ. ನೀವು ಸಾಯೋದಿರಲಿ..

ರಂಗಣ್ಣಾ - ಹೇಳು ಶೇಷ ಆ ರಾಜೀವ ಎಲ್ಲಿ ?

ಶೇಷ - ಕನ್ಯಾದಾನ ಮಾಡಿದ ಬಳಿಕ ವರನ ಮನೆಯ ಊಟ ಮಾಡಬಾರದು ಅಂತ ಶಾಸ್ತ್ರ ಇದೆಯಲ್ಲ ? ಅದರ ಪ್ರಕಾರ ಧಾರೆ ಮುಗಿದ ಕೂಡ್ಲೆ ಅವರನ್ನು ಲಾರಿಗೆ ಹತ್ತಿಸಿ ನಾನೀ ಕಡೆ ಬಂದೆ

ರಂಗಣ್ಣಾ - ಎಲ್ಲಾ ಥಣ್ಣಗ ಮಾಡೀದಿ ಅನ್ನು. ಆಗಲಿ ಊರಿಗೆ ಹೋದಮೇಲೆ ನನ್ನ ಸಾಲಕ್ಕೆ ತೊಂದರೀ ಕೊಟ್ಟ ಅವನ ಮಾನಕ್ಕೆ ಚ್ಯುತಿ ತರತೇನೆ. ಅವನ

ತಲಿಮ್ಯಾಲೆ ಕಲ್ಲ ಹಾಕತೀನಿ. ಊರೊಳಗೆ ಬಾಳ್ವೆ ಮಾಡದಂಗ ಮಾಡತೇನಿ ಇಷ್ಟು ಮಾಡದಿದ್ದರೆ ನಾನು ಸಾಹುಕಾರ ರಂಗಣ್ಣನೇ ಅಲ್ಲ. ಹೋಗತೀನಿ ಶೇಷ ಅವನ ಹೆಣ ಹೊರತೀನಿ

ಶೇಷ - ಅವನ ಹೆಣ ಹೊರೋದಿರಲಿ ಈಗ ನಿಮ್ಮ ಹೆಣಾ ನಾನು ಹೊತ್ತೀನಿ. ಯಜಮಾನ್ರೆ ರಾಜೀವಪ್ಪನ ಸಾಲ ಮುಟ್ಟಿದ ಬಗ್ಗೆ ನೀವು ಬರೆದುಕೊಟ್ಟ ಕಾಗದ ಸದ್ಯ ನನ್ನ ಜೇಬಿನಲ್ಲಿ ಭದ್ರವಾಗಿ ಕುಳಿತುಬಿಟ್ಟಿದೆ. ಇನ್ನು ಮೇಲೆ ಅವನಿಗೆ ನೀವೇನು ಮಾಡಬಲ್ಲಿರಿ ? ಅವನೀಗ ನಿಮ್ಮ ಎಲ್ಲ ಸಾಲದಿಂದ ಮುಕ್ತನಾಗಿದ್ದಾನೆ ಯಜಮಾನ್ರೆ. ವೈಕುಂಠದಲ್ಲಿರುವ ಆ ಶ್ರೀರಂಗನನ್ನು ಆದಿಶೇಷ ಹೊತ್ತಂತೆ, ಭೂಮಿಯಲ್ಲಿರುವ ಈ ರಂಗನನ್ನು ಈ ಶೇಷ ಹೊತ್ತಿದ್ದಾನೆ. ಬಡವರನ್ನು ಮರುಗಿಸಿ ಹಣ ಗಳಿಸಿದ ನಿಮ್ಮ ಹೆಣ ಹೊರಲಿಕ್ಕೆ ಅಂತಾನೆ ಆದದ್ದು ಈ ಶೇಷನ ಅವತಾರ ತಿಳಿತೇನು ? ಇನ್ನು ಮೇಲಿಂದ ನಿಮ್ಮ ಕೈ

ರಂಗಣ್ಣ - ಕೂಡಿಸಿದ್ದಿಯಲ್ಲಾ ಇವಳ ಕೈಯಲ್ಲಿ (ಅಚ್ಚಮ್ಮಮ ಕೈ ಹಿಡಿದು) ಆಗಲಿ ಬಾ ಅಚ್ಚೀ, ಪಾಲಿಗೆ ಬಂದದ್ದೇ ಪಂಚಾಮೃತ. ಯಾಕ ಶೇಷ

ಶೇಷ - ಹು ಹಸಿದ ನಾಯಿಗೆ ಹಳಸಿದ ಬುತ್ತಿಗೆ ಯೋಗ್ಯ

ರಂಗಣ್ಣ - ನಡಿಯೋ ಊಟಕ್ಕೆ ಏನಾದರೂ ಇದ್ದರೆ ನೋಡು ನಡೆ. ಹಸಿವೆ ಆಗುತ್ತಿದೆ. ಬಾರಪ್ಪ ಶೇಷ

ಶೇಷ - ಬಂದೆ, ಯಜಮಾನ್ರೆ ದಂಪತಿಗಳು ಮಂದಾಗಿರಿ (ಹೋದ ಬಳಿಕ) ಅಂತೂ ಆಯಿತು ನನ್ನ ಮನಸ್ಸಿನಲ್ಲಿ ಮಾಡಿಕೊಂಡಂತೆ ನಂ ೨ನೇ ಮದುವೆ. ಇನ್ನುಳಿದ ಮದುವೆ ನಂ. ಮೂರು. ಶ್ಯಾಮ ಕಲ್ಯಾಣಿ, ಆಗಲಿ ಶಿವ ಇದ್ದಾನೆ. ಒಳ್ಳೇ ಕೆಲಸಕ್ಕೆ ಉಪಯೋಗ ಆಗಲಾರನೇನು ಆ ನನ್ನ ಮಗ ದೇವರು ? ಎಲೆ ರಂಗ ನಿನ್ನ ಮಂಗತನದ ನಾಟಕಕ್ಕೆ ಮಂಗಲ ಹಾಡಿ ಬಿಟ್ಟಿನಲ್ಲೋ ಪ್ರಾಣಿ (ಹೋಗುವನು).

## ದೃಶ್ಯ - ೧೦

ರಸ್ತಾ ಜಂಗಲ್

ಶ್ಯಾಮ - (ಕೈಯಲ್ಲಿ ಹಣದ ಚೀಲ ಹಿಡಿದು ಶ್ಯಾಮ ಬರುವನು)

ತಂದೆಯವರ ಮನ ಒಲಿಸಿ ಹಣ ತರಬೇಕಾದರೆ ಸಾಕಷ್ಟು ತೊಂದರೆ ಯಾಯಿತು. ನಾನು ದೇವಸ್ಥಾನ ಮುಟ್ಟುವದರಲ್ಲಿ ಧಾರೆ ನಡೆದು ಹೋಗಿರಲಿಕ್ಕಿಲ್ಲವಷ್ಟೆ ? ನನ್ನ ಕಲ್ಯಾಣಿ ನನ್ನ ಕೈಬಿಟ್ಟು ಮಾರಿಗೆ ಬಲಿ ಯಾಗುವ ಕುರಿಯಾಗದಿರಲಿ (ಎದುರಿಗೆ ದಾರಿಕಾರ ಬರುವನು) ಏನಪ್ಪಾ ಅಲ್ಲಿ ಕಾಣುವದೇ ದೇವಸ್ಥಾನವೇನು ?

ದಾರಿಕಾರ - ಹೌದು. ಏಕೆ ನೀವು ಮದುವಿಗೆ ಹೊರಟಿದ್ದೀರೇನು. ಮದುವೆ ಮುಗಿದು ಹೋಯಿತಲ್ಲ

ಶ್ಯಾಮ - ಆ ಏನು ಮದುವೆ ಮುಗಿದು ಹೋಯಿತೇ ? ಯಾರದು ?

ದಾರಿಕಾರ - ಇನ್ನಾರದು... ಅದೇ ರಾಜೀವಪ್ಪನ ಮಗಳು ಕಲ್ಯಾಣಿಯದು. ಆ ಮುದುಕ ರಂಗಣ್ಣನೊಂದಿಗೆ ಮುಗಿದು ಬಿಟ್ಟಿತು ಸ್ವಾಮಿ. ಆ ವಿಷಮ ವಿವಾಹವನ್ನೇನು ನೋಡುವದು ಬಿಡಿ. ಹೆಸರು ಬೇಳೆಯನ್ನು ಕೆಸರಿನಲ್ಲಿ ಕಲೆಸುವಂತೆ ಆ ಹಸು ಮಗಳನ್ನು ಮುದುಕನಿಗೆ ಮಾಡಿದರು. ಪಾಪ, ಆ ಹುಡುಗಿ ಮುಖಕ್ಕೆ ಹಾಕಿದ ಮುಸುಕು ಮೇಲೆ ಸರಿಸಿ ಒಂದು ಸಲ ನೋಡಲಿಲ್ಲ. ಅಳುತ್ತಿರಬೇಕು ನನಗಂತೂ ನೋಡಲಾಗಲಿಲ್ಲ. ಹಾಗೇ ಹೊರಟು ಬಂದೆ (ಹೋಗುವನು)

ಶ್ಯಾಮ - ಆಯಿತೇ ಕಲ್ಯಾಣಿಯ ಮದುವೆ ? ಕೊನೆಗೂ ವಿಧಿಯ ಕೈಯೇ ಮೇಲಾಯಿತೇ ? ದೈವ ನಿರ್ಣಯದ ಮುಂದೆ ಮಾನವ ಪ್ರಯತ್ನಕ್ಕೆ ಸೋಲಾಯಿತೇ ? ದುರ್ದೈವಿ ಶ್ಯಾಮ ಎಂತಹ ಹತಭಾಗ್ಯನೋ ನೀನು ? ಸಮಾಜದೆದುರು ನಿಂತು ಒಂದು ಹೆಣ್ಣಿನ ಕೈ ಹಿಡಿಯದಷ್ಟು ನಿರ್ಬಲನಾದೆಯಾ ? ಪಾಪ ! ಕೊಟ್ಟ ನನ್ನ ಮಾತನ್ನು ನಂಬಿ ಕಲ್ಯಾಣಿ ನನಗಾಗಿ ಎಷ್ಟು ದಾರಿ ಕಾಯ್ದಿರಬೇಕು. ಅರಳು ಮಲ್ಲಿಗೆಯ ಮೊಗ್ಗೆಯಂತಹ ನನ್ನ ಮುದ್ದು ಕಲ್ಯಾಣಿ, ನನ್ನ ಮನಗೆದ್ದ ಕಲ್ಯಾಣಿ ಇನ್ನೊಬ್ಬನ ಮಡದಿಯಾದಳೇ ? ಇಲ್ಲ ಇದನ್ನು ನಾನು ಸಹಿಸಲಾರೆ.

ಎಲ್ಲಿದ್ದರೂ ಅವಳು ನನ್ನವಳೇ. ಅಲ್ಲ ಅವಳೀಗ ಆ ಸಾಹುಕಾರನ ಮಡದಿ. ಅವಳಿಗೂ ನನಗೂ ಯಾವ ಸಬಂಧವಿಲ್ಲ. ಅಯ್ಯೋ ನನ್ನ ಮನಸ್ಸಿನ ಕನ್ನಡಿ ಒಡೆದು ಸಾವಿರ ಚೂರಾಗಿ ಬಿತ್ತೇ ? ನಾನು ಬಂದು ನಿಂತೆನಿಲ್ಲಿ ಮಸಣಗಾಡಿನಲ್ಲಿ. ನನ್ನ ಮೃತ ಸ್ವಪ್ನದಾ ಅಂತ್ಯಕ್ರಿಯೆಗೆಂದು ಬಾಳಿನಲ್ಲಿದ್ದ ವಿಧಿಯ ಧೂಳಿನೊಂದಿಗೆ ಹಾರುತಿವೆ ನನ್ನ ಆಶಾ ಕಿರಣಗಳು. ಮುಂಬರುವ ಕಾಲ ನನ್ನ ನಿರಾಶೆಗೆ ಮೂಲ

ಕಲ್ಯಾಣಿ - (ಓಡಿ ಬಂದು) ಮಾಮಾ

ಶ್ಯಾಮ - ಯಾರು ನೀನು ?

ಕಲ್ಯಾಣಿ - ನಾನು ಮಾಮಾ... ಕಲ್ಯಾಣಿ, ನಿನ್ನ ಕಲ್ಯಾಣಿ

ಶ್ಯಾಮ - ನನ್ನ ಕಲ್ಯಾಣಿ ಅಲ್ಲ, ಈಗ ನೀನು ಬೇರೊಬ್ಬರ ಕಲ್ಯಾಣಿ

ಕಲ್ಯಾಣಿ - ಮಾಮಾ ನನ್ನ...

ಶ್ಯಾಮ - ಮುಚ್ಚು ಬಾಯಿ ಮದುವೆಯ ಮಂಗಲ ವೇಷದಲ್ಲಿ ನನ್ನ ಮುಂದೆ ನಿಂತು ನನ್ನ ಮನಸ್ಸಿಗೆ ನೋವನ್ನು ನೀಡಬಯಸಬೇಡ. ಕಣ್ಣು ಬೇನೆ ಬಂದವರ ಮುಂದೆ ದೀಪವನ್ನಿಟ್ಟು ಮತ್ತಿಷ್ಟು ಯಾತನೆಗೊಳಿಸುವಂತೆ ನನ್ನಿಂದ ಸಿಡಿದು ಹೋದ ನೀನು ನನ್ನ ಮುಂದೆ ನಿಂತು ಮತ್ತಿಷ್ಟು ಯಾತನೆಗೊಳಿಸಬೇಡ. ಕಲ್ಯಾಣಿ ಮದುವೆಯಾದ ಬಳಿಕ ಮುಗಿದೇ ಹೋಯಿತು. ಒಬ್ಬನ ಮಡದಿಯಾದವಳು ಮತ್ತೊಬ್ಬನನ್ನು ಬಯಸುವದೆಂದರೆ ವ್ಯಭಿಚಾರ ವೆನಿಸುತ್ತದ. ಎಲೆ ಜಾರಿಣಿ ಜಾರುವ ದಾರಿಯಲ್ಲಿ ನೀನು ನಡೆದು ನನ್ನನ್ನೂ ನಡೆಯ ಹಚ್ಚಲು ಬಂದೆಯಾ ? ಬೇಡ. ಇನ್ನು ನಿನ್ನ ಮುಖದರ್ಶನ ಈ ಜನ್ಮದಲ್ಲಿಯೇ ಬೇಡ, ನಿನ್ನ ಮೇಲಿನ ಹಂಬಲದಿಂದ ನನ್ನ ತಂದೆಯನ್ನೇ ವಿರೋಧಿಸಿ ಎರಡು ಸಾವಿರ ಹಣ ತಂದೆ ನೋಡು. ಈ ಶ್ಯಾಮನು ಕೊಟ್ಟ ಮಾತನ್ನು ಮೀರುವವನಲ್ಲ. ನಿನಗೆಂದು ತಂದ ಹಣ ನಿನಗಿತ್ತು ನಾನು ಹೊರಟೆ ಕೈ ಬಿಟ್ಟ ಬಳಿಕ ಈ ಹಣ ಕಟ್ಟಿಕೊಂಡೇನು ಮಾಡಲಿ ತೆಗೆದುಕೊ ? (ಹಣ ಎಸೆದು ಓಡಿ ಹೋಗುವನು)

ಕಲ್ಯಾಣಿ - ಮಾಮಾ.... (ಹಣ ತೆಗೆದುಕೊಂಡು) ನನ್ನ ಮದುವೆಯಾಗಿದೆಯೆಂದು ಇವರು ಭಾವಿಸಿದಂತಿದ. ಹೌದು ಹಾಗೆ ಭಾವಿಸಿಕೊಂಡ ತಲೆ ಕೆಡಿಸಿಕೊಂಡಿದ್ದಾರೆ. ಪಾಪ ನನಗಾಗಿ ತಮ್ಮ ತಂದೆಯವರನ್ನು ವಿರೋಧಿಸಿ ಹಣ ತಂದಿದ್ದಾರೆ. ಈಗ ನಾನೇನು ಮಾಡಲಿ. ಏನಾದರಾಗಲಿ ಇವರ ಬೆನ್ನು ಹತ್ತಿ ಹೋಗುವೆ. (ಹೋಗುವಳು)

(ರಸ್ತಾ)

(ಸಾಹುಕಾರ ರಂಗಣ್ಣ ಬರುವನು)

ರಂಗಣ್ಣ - ಅಂತೂ ಈ ಕಾಲದಾಗ ಯಾರನ್ನೂ ನಂಬಬಾರದು. ನಂಬಿಕೆಯವನಂತೆ ನಟಿಸಿದ ಶೇಷ ಕೊನೆಗೂ ಕೈಕೊಟ್ಟು ಹೋಗೋ ಕಾಲಕ್ಕೆನ್ನ ವಿಚಾರವನ್ನೇ ಬುಡಮೇಲು ಮಾಡಿಬಿಟ್ಟ. ಮೂರು ಜನ್ಮಕ್ಕೂ ಮುಟ್ಟಿ ಮುಟ್ಟಿ ನೋಡಿಕೊಳ್ಳುವಂತೆ ಮಾಡಿಟ್ಟ. ಒಟ್ಟಾರೆ ಈ ಪ್ರಪಂಚದಲ್ಲಿ ಯಾರನ್ನೂ ನಂಬಬಾರದು... ಯಲಾ ಇವನ ಬ್ಯಾಂಕಿನಲ್ಲಿ ಚಕ್ಕು ಮುರಿಸಿ ತಂದ ಹಣವನ್ನು ಒಂದೇ ಸಲ ಎಣಿಸಿದ್ದೇನೆ. ಸರಿಯಾಗಿರುವವೋ ಇಲ್ಲವೋ (ಹಣ ಎಣಿಸ ಹತ್ತುವನು. ಕಳ್ಳ ನೋಡುವನು)

ಕಳ್ಳ - ಅಂತೂ ದೇವರಿದ್ದಾನೆ ಎಂಟು ದಿನದಿಂದ ಹೊಂಚು ಹಾಕಿದರೂ ಒಂದೂ ಬೇಟೆ ಸಿಕ್ಕಿರಲಿಲ್ಲ. ಅನಾಯಾಸವಾಗಿ ಹಣ್ಣಿದ ಬೇಟೆ ಸಿಕ್ಕಿತು. ಕಂಡ ತಕ್ಷಣ ಲಕ್ಷ್ಮೀದರ್ಶನ. ಸಮೀಪದಲ್ಲಿ ಯಾರ ಸುಳಿವೂ ಇಲ್ಲ (ಸಮೀಪ ಬಂದು) ಏನು ಸ್ವಾಮಿ, ಒಂದು ಕಡ್ಡೀ ಕೊಡುತ್ತೀರಾ ?

ರಂಗಣ್ಣ - ಏ ಸರಿಯೋ ಆಚೆಗೆ

ಕಳ್ಳ - ಸ್ವಾಮಿ ಚೇಳು ಚೇಳು

ರಂಗಣ್ಣ - ಎಲ್ಲಿ ? ಎಲ್ಲಿ ?

ಕಳ್ಳ - ಇಲ್ಲಿ ನಿಮ್ಮ ಕೋಟಿನ ಒಳಗೆ ಸರಿಯಿತು. (ಹಣ ಹೊಡೆದುಕೊಂಡು ಓಡುವನು)

ರಂಗಣ್ಣ - ಎಲೆ ಹಣ ನನ್ನ ರೂಪಾಯಿ. ಅಯ್ಯೋ ಕಳ್ಳ ಪೋಲೀಸ್ ಕಳ್ಳ

ಪೋಲೀಸ್ - (ಬಂದು) ಏನಾಯಿತು ?

ರಂಗಣ್ಣ - ಕಳ್ಳ ಆಗೋ ಓಡಿ ಹೋಗುತ್ತಿದ್ದಾನೆ ನೋಡಿ. ಹೋಗಪ್ಪಾ ಹಿಡಿಯಪ್ಪ (ಪೋಲೀಸ್ ಓಡುವನು) ಏನು ಊರಾಯಿತಪ್ಪ ಈ ರಾಯಚೂರು. ಹಗಲು ಸಹಿತ ದರೋಡೆ ನಡೀಯುತ್ತಲ್ಲ ? ಇಲ್ಲಿ (ಹೋಗುತ್ತ) ಅಯ್ಯೋ ನನ್ನ ಹಣ !

# ದೃಶ್ಯ - ೧೧

## ಗಾರ್ಡನ್

(ಉದ್ಯಾನ (ಪಾರ್ಕ್) ಆಗಬಹುದು)

ಶೇಷ - ಬಿಸಿಲಿನಿಂದ ರಣಗಡುವ ಈ ರಾಯಚೂರಿನಲ್ಲಿ ತಂಪಾದ ಸ್ಥಳ ಈ ಗಾರ್ಡನ್ ಒಂದೇ. ಇಲ್ಲಿ ಗಿಡಬಳ್ಳಿಗಳನ್ನು ಸಮೃದ್ಧಿಯಾಗಿ ಬೆಳೆಯಿಸಿ ನಗರ ಸಭೆಯವರು ಬಹಳ ಉಪಕಾರ ಮಾಡಿದ್ದಾರೆ. (ಒಂದು ಬದಿಗೆ ಕುಳಿತು) ಅಂತೂ ಒಳ್ಳೇದು ಮಾಡಿದವರಿಗೆ ಕಾಲವಿಲ್ಲ. ಕಾಲವಷ್ಟೇ ಏಕೆ ಕೂಳು ಸಹಿತ ಸಿಕ್ಕುವದು ದುಸ್ತರ. ರಂಗಣ್ಣನೇನೋ ನನ್ನನ್ನು ನೌಕರಿಯಿಂದ ತೆಗೆದ. ಮುಂದೇನು ಮಾಡುವದು ?

ಶ್ಯಾಮ - (ಬೇರೊಂದು ಬದಿಯಿಂದ) ಮುಂದೇನು ಮಾಡುವದು ತಲೆ ಮರೆಯಿಸಿಕೊಳ್ಳಲೇ ಅಥವಾ ಆತ್ಮಹತ್ಯೆ ಮಾಡಿಕೊಳ್ಳಲೇ ? ಎಷ್ಟು ಮರೆಯಲು ಪ್ರಯತ್ನಿಸಿದರೂ ಕಲ್ಯಾಣಿಯ ನೆನಪು ಮತ್ತೆ ಮತ್ತೆ ನನ್ನ ಚಿತ್ತವನ್ನು ಸೆರ ಹಿಡಿದು ನೆತ್ತರ ಹೀರುತಿದೆ. ಏನು ಮಾಡಲಿ ಎಲ್ಲಿಗೆ ಹೋಗಲಿ ? (ಬೇರೊಂದು ಕಡೆ ಕೂಡ್ರುವನು)

ಕಳ್ಳ - (ಶ್ಯಾಮನಿಗೆ) ಒಂದು ಕಡ್ಡಿ ಕೊಡತೀರಾ ?

ಶ್ಯಾಮ - ಇಲ್ಲ. ಸೇದುವ ಅಭ್ಯಾಸ ನನಗಿಲ್ಲ (ಬೇರೊಂದು ಬದಿಗೆ ಮುಖ ತಿರುಗಿಸುವನು. ಕಳ್ಳ ಹಣ ಶ್ಯಾಮನ ಜೇಬಿನಲ್ಲಿಟ್ಟು ಓಡುವನು. ಆಗ ಶೇಷ ಅವನ ಬೆನ್ನು ಹತ್ತುವನು ಪೋಲೀಸ, ರಂಗಣ್ಣ ಬರುವರು)

ಪೋಲೀಸ - (ಶ್ಯಾಮನನ್ನು ಹಿಡಿದು) ಇವನೇ ಅಲ್ಲವೇ ನೀವು ತೋರಿಸಿದ ಕಳ್ಳ

ರಂಗಣ್ಣ - ಹೌದು ಇವನೇ, ಇದೇ ಚಾಂಡಾಲನೇ ನನ್ನ ಹಣ ಕದ್ದುಕೊಂಡು ಬಂದವನು

ಶ್ಯಾಮ - ಏನು ನಾನು ಕಳ್ಳನೇ

ರಂಗಣ್ಣ - ಕಳ್ಳನಷ್ಟೇ ಅಲ್ಲ ಹಗಲಗಳ್ಳ, ಹೂ ಹುಡುಕಿರಿ

ಪೋಲೀಸ - (ಶ್ಯಾಮನ ಜೇಬಿನಿಂದ ಹಣ ತೆಗೆದು) ಏ ಬದ್ಮಾಸ ಎಲ್ಲಿತ್ತೋ ಈ ಹಣ ?

ರಂಗಣ್ಣ - ಹಣ ಹೇಗೆ ಬರುತ್ತದಪ್ಪ. ದುಡಿಯಲಾರದೇ ತಿನಬಯಸಿದ ನಿಮ್ಮಂಥವರಿಗೆ

ದೊರೆಯಬೇಕಾದರೆ ಯಾರ ಜೇಬಿನಿಂದಾದರೂ ಕಳವು ಮಾಡಬೇಕು. ಆಗ ಅದು ನಿಮಗೆ ದೊರೆಯಬೇಕು

ಶ್ಯಾಮ - ನಾನು ಕಳುವು ಮಾಡಿದೆನೆ ?

ರಂಗಣ್ಣ - ಕಳವು ಯಾಕೆ ದರೋಡೇನೇ ಅನ್ನು. ಎಲ್ಲ ಕಳ್ಳರು ಕತ್ತಲಲ್ಲಿ ಕಳವು ಮಾಡಿದರೆ ನೀವು ಶಹರದ ಕಳ್ಳರು ಹಾಡು ಹಗಲೇ ನಿಂತಲ್ಲಿ ಕೂತಲ್ಲಿ ಹೆಜ್ಜೇನು ರಾಜಮಾರ್ಗದಲ್ಲಿ ಕೂಡಾ ಕಳವು ಮಾಡುತ್ತೀರಿ. ನೋಡ್ರಿ ಪೋಲೀಸರೇ ಇವನ ವೇಷ ಭೂಷಣಗಳು. ಇವನು ಮಾಡಿದ ಹೊಲಸು ಕೆಲಸವೇನು ಹೂಂ ಮತ್ತೇಕೆ ತಡೆ ಕೈಗೆ ಹಾಕಿರಿ ಬೇಡೀನ

ಶ್ಯಾಮ - ಇದೇನು ನನ್ನ ಕೈಗೆ

ರಂಗಣ್ಣ - ಕಳವು ಮಾಡಿದವರಿಗೆ ಕಬ್ಬಿಣ ಕಡಗ ಹಾಕದೆ ಬಂಗಾರದ ಕಡಗ ಹಾಕುತ್ತಾರೇನಪ್ಪ. ಪೋಲಿಸರೇ ಕಳುವಿನ ಮಾಲಿನೊಂದಿಗೆ ಅಪರಾಧಿ ಸಿಕ್ಕಿದ್ದಾನೆ. ಎಳೆದುಕೊಂಡ ನಡೆಯಿರಿ ಸ್ಟೇಶನ್ನಕ್ಕೆ. ನಾನು ಬರ್ತೇನೆ ಇವನ ಹೆಣ ಹೊರಲಿಕ್ಕೆ

(ರಸ್ತಾ)

(ಕಲ್ಯಾಣಿ ಬರುವಳು)

ಕಲ್ಯಾಣಿ - ಅಯ್ಯೋ ಮಾಮಾ ಇದೇನು ನಿಮ್ಮ ಅವಸ್ಥೆ ಮಾಮಾ. ನೀವು ಪೋಲೀಸರ ವಶದಲ್ಲಿ ಯಾವ ಅಪರಾಧಕ್ಕೆ ನಿಮಗೆ ಈ ಅವಸ್ಥೆ

ಶ್ಯಾಮ - ಕಲ್ಯಾಣಿ ! ಯಾವ ಅಪರಾಧವನ್ನೂ ಮಾಡದೇ ಈ ಶ್ಯಾಮನಿಗೆ ಬಂದೊದಗಿದ ಈ ದುರವಸ್ಥೆ

ರಂಗಣ್ಣ - ಯಾರು ಕಲ್ಯಾಣಿ, ನನ್ನ ಮದುವೆ ಹಂದರದಿಂದ ಓಡಿ ಹೋದ ವಧು, ಪೋಲೀಸರು ನೋಡಿ ಇವಳು ನನ್ನ ಮಡದಿ

ಕಲ್ಯಾಣಿ - ಮಡದಿ, ಮುಚ್ಚುಬಾಯಿ. ಇನ್ನೊಮ್ಮೆ ಆ ಶಬ್ದ ಉಚ್ಚರಿಸಿದರೆ ಹಾಕಿಸಿದ ನಿನ್ನ ಹಲ್ಲು ಬಿಚ್ಚಿ ಬಿದ್ದಾವು

ರಂಗಣ್ಣ - ಅಲ್ಲವೇನು ಮತ್ತೆ ? ನಿನ್ನ ತಂದೆಗೆ ಕೊಟ್ಟ ನನ್ನ ಹಣ ಪುಕ್ಕಟೆಯಲ್ಲ

ಕಲ್ಯಾಣಿ - ಹಣವಂತೆ ಹಣ. ಆ ವಿಷಯ ಎತ್ತಿದರ ಹೆಣವಾಗಿ ಬೀಳುವಿ ನನ್ನ ಕೈಯಲ್ಲಿ. ಮಗ್ಗಲಲ್ಲಿ ನಿಂತರ ಮಗಳಂತೆ ಕಾಣುವ ನನ್ನನ್ನು ಬಯಸಿದ ನಿನಗ ನಾಚಿಕೆಯಾಗಬೇಕು. ಕೊಟ್ಟ ಹಣಕ್ಕ ಹೆಣ್ಣು ಕೊಳ್ಳುವ ಮನಕ್ಕ ಹೇಸಿಗೆಯಾಗಬೇಕು

ರಂಗಣ್ಣ - ನಾಚಿಕೆ ನನಗಲ್ಲ, ನಿನಗಿರಬೇಕು. ಮದುವೆಯಾಗುವೆನೆಂದು ಮಾತು ಕೊಟ್ಟು ಹಂದರದಲ್ಲಿ ತಲೆಮರೆಸಿಕೊಂಡು ಬಂದಿದ್ದಾಳೆ. ಇವನೆ ಇವಳನ್ನು

ಓಡಿಸಿಕೊಂಡು ಬಂದಿದ್ದಾನೆ. ಒಂದೇ ಕಲ್ಲಿನ ಹೊಡೆತಕ್ಕೆ ಎರಡು ಬೇಟೆ ಬಿದ್ದವು. ಹಾಕಿರಿ ಇವಳ ಕೈಗೂ ಬೇಡಿ

ಕಲ್ಯಾಣಿ - ನನ್ನ ಕೈಗೆ ಬೇಡಿ. ಯಾವ ಅಪರಾಧಕ್ಕಾಗಿ

ರಂಗಣ್ಣ - ಮದುವೆಯಾಗುವದಾಗಿ ಮಾತುಕೊಟ್ಟು ವಂಚಿಸಿದ್ದಾಳೆ

ಪೋಲೀಸ - ಸಾಹುಕಾರರೇ ಕಂಡವರಿಗೆಲ್ಲ ಹಾಕಲೆಂದು ಕೊಟ್ಟಿಲ್ಲ ಸರಕಾರ ನಮಗೆ ಬೇಡಿನಾಯನ್ನು. ಹೂಂ ನಡೆಯಿರಿ

(ಶ್ಯಾಮನನ್ನು ಎಳೆದುಕೊಂಡು ಹೋಗುತ್ತಿರುವಾಗ)

ಕಲ್ಯಾಣಿ - ಮಾಮಾ ನನ್ನೊಂದಿಗೆ ಮದುವೆಯ ಹಂದರದಲ್ಲಿ ಹಾಲುಗಂಬದ ಅಡಿಯಲ್ಲಿ ಮಂಗಳವಾದ್ಯಗಳ ಧ್ವನಿ ತರಂಗದಲ್ಲಿ ಮದುವೆ ಕಂಕಣ ಧರಿಸಬೇಕಾದ ಈ ನಿಮ್ಮ ಕರಗಳಿಗೆ ಕಬ್ಬಿಣದ ಸಂಕೇತ ಧರಿಸಬೇಕಾಗಿ ಬಂದದ್ದು ಈ ದರಿದ್ರ ಹತಭಾಗ್ಯಳಿಂದಲ್ಲವೇ ? ಮಾಮಾ ನಾನು ಮಹಾಪಾಪಿ, ದುರ್ದೈವಿ. ನನ್ನಿಂದ ಯಾರಿಗೂ ಸುಖವಿಲ್ಲ. ಹುಟ್ಟಿದ ಕೆಲ ದಿನಗಳಲ್ಲಿಯೇ ಹಡೆದ ತಾಯಿಯ ಮೃತ್ಯುವಿನ ಕೈಗಿಟ್ಟೆ. ತಂದೆಯನ್ನು ಸಾಲದ ಸಂಕಟದಲ್ಲಿ ಮುಳುಗಿಸಿ ಬಿಟ್ಟೆ ನಂತರ ನನ್ನ ಪ್ರೀತಿಸಿದ ನಿಮಗೆ ಈ ಕಷ್ಟ ತಂದಿಟ್ಟೆ. ಥುತ್ ನನ್ನ ಬಾಳಿಗೆ ಥುತ್ ನನ್ನ ಜೀವಿತಕ್ಕೆ... ಇನ್ನಾವ ಆಸೆಗಾಗಿ ಬದುಕಲಿ ಇನ್ನಾವ ಸುಖಕ್ಕಾಗಿ ಜೀವಿಸಲಿ

ಶ್ಯಾಮ - ಕಲ್ಯಾಣಿ ಅಧೀರಳಾಗದಿರು, ಧೈರ್ಯ ತಂದುಕೊಂಡು ದುಃಖ ನೀಗಲು ಮನಸ್ಸು ಮಾಡು. ಯುಗ ಬಂದು ಯುಗ ಸರಿದರೂ ಸುಳ್ಳು ಸುಳ್ಳಾಗಿ ಸತ್ಯ ಒಂದೇ ಸತ್ಯ ಬೆಳಗುತ್ತದೆ. ಕಟ್ಟಿದ ಬಣ್ಣ ಅಳಿದೀತೇ ವಿನಃ ಹುಟ್ಟಿದ ಬಣ್ಣ ಅಳಿಯಲಾರದು. ಕಾರಣ ದುಃಖಿಸಬೇಡ. ನಿಜವಾಗಿ ನೋಡಿದರೆ ಹಂದರದಿಂದ ತಲೆ ಮರೆಸಿಕೊಂಡು ಬಂದಾಗ ನಿನ್ನ ನಾ ನಂಬಲಿಲ್ಲ. ಮನ ಬಂದ ಹಾಗೆ ನಿಂದಿಸಿದೆ. ಆ ಶಾಪವೇ ಈ ಪಾಪಕ್ಕೆ ಕಾರಣ. ನಿಜವಾಗಿಯೂ ನೀನು ನನ್ನ ಮನಗೆದ್ದ ಮಲ್ಲಿಗೆ. ಕೈಗೆ ಬಂದಾಗ ಅದರ ಯೋಗ್ಯತೆ ಏನಂದರಿಯದೆ ಅಲ್ಲಗಳೆದೆ. ಈಗ ಕೈಗೆ ಸಂಕೋಲೆ ಬಂದಾಗ ಅದರ ಯೋಗ್ಯತೆ ಏನಂದು ತಿಳಿದೆ

ಕಲ್ಯಾಣಿ - ಮಾಮಾ

ಶ್ಯಾಮ - ಕಲ್ಯಾಣಿ

ಶೇಷ - (ಕಳ್ಳನೊಂದಿಗೆ ಬಂದು) ಕಳ್ಳ ಇಲ್ಲಿ ಇದ್ದಾನ ನೋಡೋ ಮಳ್ಳ

ರಂಗಣ್ಣ - ಯಾರು ಶೇಷ ..

ಶೇಷ - ಹೌದಪ್ಪ ... ನೀನಿದ್ದಲ್ಲಿ ನಾನಿರಲಿಕ್ಕೆ ಬೇಕಲ್ಲ ಪೋಲೀಸರೇ ಇಲ್ಲಿದ್ದಾನೆ ನೋಡಿ

ಪೋಲೀಸ - ಹೌದು ಇವನೇ ಇರಬೇಕು. ಯಾಕೆಂದರೆ ಈಗಾಗಲೇ ಕಳ್ಳತನದ ಅಪರಾಧದಲ್ಲಿ ಹತ್ತಾರು ಸಲ ಕಾರಾಗೃಹ ಅನುಭವಿಸಿದ್ದಾನೆ. ಆದರೆ ಇವನೇ ಕಳವು ಮಾಡಿದ ಬಗ್ಗೆ ಸಾಕ್ಷಿ ಬೇಕಲ್ಲ

ಶೇಷ - ಸಾಕ್ಷಿ ನಾನಿದ್ದೇನಲ್ಲ ಕದ್ದು ತಂದ ಹಣವನ್ನು ನಗರ ವನದಲ್ಲಿ ಕುಳಿತಿದ್ದ ಈ ಹುಡುಗನ ಜೇಬಿನಲ್ಲಿ ಹಾಕಿ ಓಡಿ ಹೋಗುತ್ತಲಿದ್ದ. ಇವನ ಬೆನ್ನು ಹತ್ತಿ ಹಿಡಿದುಕೊಂಡು ಬಂದಿದ್ದೇನೆ. ಯಾಕಂದರೆ ನಿರಪರಾಧಿಗೆ ಶಿಕ್ಷೆಯಾಗಬಾರದಲ್ಲ... ಅಲ್ಲವೇನೋ ಬದ್ಮಾಷ್

ಕಳ್ಳ - ಹೌದು ನಾನೇ ಕಳ್ಳ

ರಂಗಣ್ಣ - ಶೇಷ ಅಸಾಧ್ಯನಪ್ಪ ನೀನು

ಶೇಷ - ಇಲ್ಲದಿದ್ದರೆ ನಿನ್ನ ಮೀಸೆ ಮಣ್ಣಾಗುತ್ತಿತ್ತೇನಪ್ಪ ? ಬೇಡೀ ಬಿಟ್ಟಿತೀ ಏನಪ್ಪಾ ಪೋಲೀಸಪ್ಪ (ಪೋಲೀಸ ಶ್ಯಾಮನನ್ನು ಬಿಟ್ಟು ಕಳ್ಳನನ್ನು ಹಿಡಿದುಕೊಂಡು ಹೋಗುವನು)

ಕಲ್ಯಾಣಿ - ಶೇಷಣ್ಣಾ ನಿನ್ನ ಉಪಕಾರ ದೊಡ್ಡದು. ಅವಾಗಲೂ ನೀನೇ ಕಾಪಾಡಿದಿ. ಈಗಲೂ ನೀನೇ ಕಾಪಾಡಿದಿ

ಶೇಷ - ಕಷ್ಟದಲ್ಲಿದ್ದವರನ್ನು ಕಣ್ಣಿನಿಂದ ಕಂಡು ಅದು ಹ್ಯಾಗಮ್ಮ ಸುಮ್ಮನೆ ಇರೋದು? ಕೈಲೆ ಆದಷ್ಟು ಉಪಕಾರ ಮಾಡೋದು

ರಂಗಣ್ಣ - ಅವರಿಗೆ ಮಾತ್ರ ಉಪಕಾರ ಮಾಡಿದಿ, ನನಗೆ ಮಾತ್ರ ಅಪಕಾರ ಮಾಡಿದಿ

ಶೇಷ - ಮನುಷ್ಯ ಮನುಷ್ಯನಿಗೇನು ಮಾಡತಾನ್ರಿ. ನಾನು ಅಂದ್ರೆ ನರಕಕ್ಕೆ ಸರಿ. ಎಲ್ಲಾ ದೈವದ ಆಟ. ಹ್ಯಾಂಗ ನಡೀತೀವಿ ಹಾಂಗ ಪಡೀತೀವಿ. ರಂಗಣ್ಣಾ ನೀವು ಮಾಡಿದ ಪಾಪಕ್ಕೆ ನಿಮಗ ಮಹಾರೋಗ ಹತ್ತಬೇಕು. ಆದರೂ ಏತಿ ನಿಮಗ ಪುಣ್ಯ ಬಲಾ ಅಂತ ತಡದೈತಿ

ಶ್ಯಾಮ - ನನಗೆ ಬಲವಿದೆ ಶೇಷಣ್ಣಾ

ಶೇಷ - ನಿಮಗೆ ಸದ್ಯ ಬಂದೈತಲ್ಲ ಕಂಕಣ ಬಲ. ಮೆಚ್ಚಿದ ಹೆಣ್ಣಿನ ಕೂಡ ಮದುವೀ ಆಗೋದಕ್ಕಿಂತ ಇನ್ನೆಂತದು ಬೇಕು ಬಲ ? ನಡೀರಿ ಊರಿಗೆ ಹೋಗಿ ರಾಜೀವಪ್ಪನ ಮನ್ಯಾಗ ಮುಗಿಸಿ ಬಿಡತೀನಿ ನಿಮ್ಮ ಮದುವಿ

ಕಲ್ಯಾಣಿ - ಏನ ಶೇಷಣ್ಣಾ ಈಗ ನಮ್ಮ ತಂದೆಯ ಮನೆಗ ಹೋಗುವದೇ ? ಚಿಕ್ಕಮ್ಮ ಏನನ್ನುವಳೋ ಏನೋ ?

ಶೇಷ - ಇನ್ನೇನ ಅಂತಾಳರೀ ? ಕಾವೇರಮ್ಮ ಈಗ ಕೊಂಡೀ ತೆಗೆದ ಚೇಳ ಆಗ್ಯಾಳ. ಈ ರಂಗಣ್ಣಾ ಹಲ್ಲು ಕಿತ್ತಿದ ಹಾವಾಗ್ಯಾನ. ಹಾಂ ರಂಗಣ್ಣನವರೇ ಇಲ್ಲಿ ಕೇಳ್ರಿ. ಇನೆರೆಡು ದಿನ ಕಳೆದ ಮೇಲೆ ರಾಜೀವಪ್ಪನ ಮನೆಯಲಿ ಶಾ ಮದಾಯಿಗಿ...

ಕಲ್ಯಾಣಿಯವರಿಗೂ ಲಗ್ನ ನಿಯಮಿಸಿದ ಪ್ರಕಾರ ಧಾರೆ ನಡೆಯುತ್ತದೆ. ತಾವು ಸಹ ಕುಟುಂಬ ಸಹ ಪರಿವಾರದೊಂದಿಗೆ ಈ ಮಂಗಲ ಕಾರ್ಯಕ್ಕೆ ಬಂದು ವಧುವರರನ್ನು ಆಶೀರ್ವದಿಸಬೇಕೆಂದು ಕೋರುತ್ತೇನೆ ಬರುತ್ತೀರಾ ?

ರಂಗಣ್ಣ - ಬರತೀನಪ್ಪ

ಶೇಷ - ನಗನಗತಾ ಹೇಳ್ರಿ. ಹಿಂದಿನದು ಮರೆತು ಬಿಡ್ರಿ. ನಡಿರಿ ಊರಿಗೆ ಹೋಗೋಣ.

# ದೃಶ್ಯ - ೧೨

## ರಾಜೀವಪ್ಪನ ಮನೆ

ಶ್ಯಾಮ - ರಂಗಣ್ಣನವರೇ ನಮ್ಮ ಮಾವನವರು ತಮ್ಮಲ್ಲಿ ಮಾಡಿದ ಸಾಲದ ಹಣವನ್ನು ತೆಗೆದುಕೊಳ್ಳಿ. ಅವರ ಸಾಲ ಮುಟ್ಟಿದ ಬಗ್ಗೆ ಕಾಗದ ಬರೆದುಕೊಡಿ

ರಂಗಣ್ಣ - ಶೇಷಣ್ಣ ಇಷ್ಟು ದಿನಗಳವರೆಗೆ ಹಣದ ಹುಚ್ಚಿನಿಂದ ಮನುಷ್ಯತ್ವವನ್ನೆ ಕಳೆದುಕೊಂಡಿದ್ದೆ. ಏನೋ ನಿಮ್ಮೆಲ್ಲರ ಪುಣ್ಯದಿಂದ ನಾನು ಒಬ್ಬ ಮನುಷ್ಯನಾದೆ. ಈಗ ಈ ಹಣವನ್ನು ಈ ವಧೂವರರಿಗೆ ಕೊಡಬೇಕೆಂದು ಮಾಡಿರುವೆ. ಏನು ನನ್ನ ಮನೆಯ ಅರ್ಧ ಅಧಿಕಾರ ಪಡೆದ ಅರ್ಧಾಂಗಿಯೇ ಕೊಟ್ಟು ಬಿಡಲೇ ಇವನ್ನು ಇವರಿಗೆ

ಅಚ್ಚಮ್ಮ - ತರ್ರಿ ಇಲ್ಲೆ ನನ್ನ ಕೈಯಾಗ ನಾನು ಕೊಡತೀನಿ. ತಗೋ ಕಲ್ಯಾಣಮ್ಮ ಇದು ನಮ್ಮ ಕಾಣಿಕೆ (ಕೊಡುವಳು)

ಕಲ್ಯಾಣಿ - ನಮಗೆ ದೇವರ ದಯದಿಂದ ಹಣದ ಅಡಚಣೆ ಇಲ್ಲ. ಅದನ್ನು ನನ್ನ ತಂಗಿಯಾದ ಮಂದಾಕಿನಿ ಹಾಗೂ ನಾಟಕದ ಕಲಾವಿದರಾದ ಲಕ್ಷ್ಮಣರಾಯರಿಗೆ ಕಾಣಿಕೆಯಾಗಿ ಕೊಟ್ಟು ಬಿಡುವೆ. ನೋಡಿ ಲಕ್ಷ್ಮಣರಾಯರೇ ನೀವೇ ಒಂದು ನಾಟಕ ಕಂಪನಿ ಮಾಡಿ ನಮ್ಮ ಬಾಳಿನ ಇತಿಹಾಸವನ್ನೇ ಉತ್ತಮ ಕವಿಗಳಿಂದ ಬರೆಯಿಸಿ ಊರೂರಿಗೆಲ್ಲಾ ನಾಟಕ ಆಡಿರಿ ಎಂದು ನನ್ನಾಸೆ

ಶೇಷ - ಅಮ್ಮಾ ಈ ಮೂರು ಸಾವಿರದಿಂದ ಈ ಕಾಲದಲ್ಲಿ ಕಂಪನಿ ಮಾಡಿದರೆ ಕಪನಿ ಹಾಕಬೇಕಾಗುತ್ತದೆ

ರಂಗಣ್ಣಾ - ಕಡಿಮೆ ಬಿದ್ದ ಹಣವನ್ನು ನಾನು ಕೊಡುತ್ತೇನೆ

ಶೇಷ - ನೋಡೋ ಲಚ್ಚಿ ಕಲ್ಯಾಣದೊಂದಿಗೆ ಕಾಂಚಾಣವೂ ದೊರೆಯಿತು. ಮಾಡುವಿಯಾ ಕಂಪನಿಯ ?

ಲಚ್ಚಿ - ನೀನು ಮ್ಯಾನೇಜಮೆಂಟ್ ಮಾಡುವದಾದರೆ ಯಾಕಾಗಬಾರದು ಮಾಮಾ?

ಶೇಷ - ಆಗಲಿ ಒಪ್ಪಿದೆ. ಕತ್ತು ಹಿಡಿದು ದಬ್ಬಿದ ಕಲಾದೇವಿ ಮತ್ತೆ ಕರೆದರೆ ನಾನೇಕೆ

ತಿರಿಸ್ಕರಿಸಲಿ ? ಅವಳ ಸೇವಾ ಭಾಗ್ಯವೇ ನನ್ನ ಜೀವನದ ಲಾಭ. ಅಂತೂ ಮತ್ತೆ ಮ್ಯಾನೇಜರನಾದೆ. ಅಣ್ಣ ತಮ್ಮಂದಿರೇ ಅಕ್ಕ ತಂಗಿಯರೇ, ನಾಟಕದ ಒಳಗಡೆ ಇದ್ದಂತೆ ಹೊರಗೂ ಮ್ಯಾನೇಜರನಾದ ನಾನು ತಮ್ಮೆಲ್ಲರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ, ಲಲಿತ ಕಲೆಗಳಲ್ಲಿ ಒಂದಾದ ನಾಟಕ ಕಲೆ ಇಂದು ಬದುಕಿ ಬಾಳಲು ಸಹೃದಯಿಗಳಾದ ನಿಮ್ಮ ಪ್ರೋತ್ಸಾಹವೇ ಕಾರಣ. ಯಾವ ದೇಶದಲ್ಲಿ ಕಲೆ ಹಾಗೂ ಸಂಸ್ಕೃತಿಗಳು ಬಲಗೊಳ್ಳುವವೋ ಆ ದೇಶದ ಜನ ಜೀವನದ ನೆಲೆ ಭದ್ರವಾಗಿರುತ್ತದಂತೆ. ಕಲೆಗೆ ಪ್ರೋತ್ಸಾಹ ಕೊಡುವದು ನಿಮ್ಮ ಧರ್ಮ. ಅದನ್ನು ಒಳ್ಳೇ ಮಾರ್ಗದಲ್ಲಿ ಬೆಳೆಸಬೇಕಾದದ್ದು ನಮ್ಮ ಕರ್ತವ್ಯ. ನಿಮ್ಮೆಲ್ಲರ ಹರಕೆಯಿಂದ ಪ್ರಾರಂಭಿಸಿದ ಕವಿ ಪುಂಡಲೀಕ ಧುತ್ತರಗಿ 'ಮಲಮಗಳು' ಎಂಬ ನಾಟಕವು ಈ ಮಂಗಲಕೃತ್ಯದೊಂದಿಗೆ ಮುಕ್ತಾಯವಾಗುತ್ತದೆ. ನಾಳಿನ ದಿನ ಬಹು ಜನರ ಅಗ್ರಹದ ಮೇರೆಗೆ ೩೭೫ನೇ ನಾಟವಕನ್ನು ಇದೇ ರಂಗಭೂಮಿಯ ಮೇಲೆ ಅಬಿನಯಿಸುತ್ತೇವೆ. ನಾಳಿನ ನಾಟಕಕ್ಕೆ ಪ್ರೇಕ್ಷಕ ವೃಂದವು ಇದಕ್ಕಿಂತ ಹೆಚ್ಚಾಗಿ ಪ್ರೋತ್ಸಾಹಿಸಬೇಕೆಂದು ಕನ್ನಡ ನಾಟಕ ಕಲಾ ಸೇವಕನಾದ ನಾನು ತಮ್ಮೆಲ್ಲರಲ್ಲಿ ಬೇಡಿ, ನಮ್ಮೆಲ್ಲರಿಗೆ ಮಂಗಲವನ್ನುಂಟು ಮಾಡಿದ ಆ ಶಕ್ತಿ ಮಾತೆಯನ್ನು ಪ್ರಾರ್ಥಿಸುವಾ

- ಮಂಗಲ -

# ತಾಯಿ ಕರುಳು

# ಪಾತ್ರ ಪರಿಚಯ

೧) ಕಲ್ಯಾಣಶೆಟ್ಟರು

೨) ಮಹೇಶ

೩) ಮಹಾಂತೇಶ

೪) ಸೋಮಣ್ಣ ಶೆಟ್ಟರು

೫) ಯಲ್ಲಪ್ಪ

೬) ಶಿವಮೂರ್ತಿ

೭) ಶಂಕರ

೮) ಗೌರಮ್ಮ

೯) ಸರಸ್ವತಿ

೧೦) ದಾಕ್ಷಾಯಣಿ

೧೧) ಹನುಮಂತಿ

॥ ಶ್ರೀ ಗುರು ಮದ್ದ ಸಂಗ ಕಾಯಲಿ ॥

# ತಾಯಿ ಕರುಳು

ಸಾಮಾಜಿಕ ನಾಟಕ

## ದೃಶ್ಯ - ೧

### ನಾಂದಿ ಗೀತೆ

ಸಕಲ ಶಾಸ್ತ್ರಸಾಕ್ಷರ ಮಾತೆ
ನಿಖಿಲ ಲೋಕಕೆ ನೀನೆ ಸಂಗೀತೆ ।
ಆದಿ ಅಂತ್ಯಗಳ ವೇದಾಂತೆ ॥ ಪ ॥
ನಾದ ಬಿಂದು ನಿಕಳಾತೀತೆ ।
ವೇದವಾದಗಳ ವಾದಕ ತೀತೆ ।
ವೇದಾಂತಕೆ ನೀ ಮೊದಲಗೀತೆ ॥

### ಕಲ್ಯಾಣಶೆಟ್ಟರ ಮನೆ

(ಬಡತನದ ಚಿತ್ರ ಎದ್ದು ಕಾಣುತ್ತದೆ. ಬಾಗಿಲ ಮೇಲೆ ಮಹಾಂತ ಶಿವಯೋಗಿಗಳ ಭಾವಚಿತ್ರ ಹಾಗೂ ಒಂದು ಮಂಚ ಎರಡು ಖುರ್ಚಿ ಮಂಚದ ಮೇಲೆ ಮಾಸಿದ ಹಾಸಿಗೆ ಹರಿದ ದಿಂಬು ಇರುತ್ತದೆ. ಒಳಗಿನಿಂದ ಮಹೇಶ ಬಂದು ಪತ್ರಿಕೆ ನೋಡಹತ್ತುವನು.)

ಮಹೇಶ - ಸರಸ್ವತಿ ಸರಸು...

ಸರಸು - (ಒಳಗಿನಿಂದ) ಬಂದೆ (ನಂತರ ಚಹಾ ತೆಗೆದುಕೊಂಡು ಬಂದು ಮಹೇಶನಿಗೆ ಕೊಡುವಳು) (ಕುಡಿದ ನಂತರ ಮಹೇಶನು ಹೆಂಡತಿಯ ಮುಖವನ್ನು ನೋಡಿ

ನಗುವನು) ಇದೇನಿದು ಇವತ್ತು ನನ್ನ ಮುಖವನ್ನು ನೋಡುತ್ತ ಕುಳಿತಿರಲ್ಲ ಏಕೆ?

ಮಹೇಶ - ಇವತ್ತು ನಿನ್ನ ಮುಖ ಹೇಗೆ ಕಾಣುತ್ತದ ಗೊತ್ತೇನು?

ಸರಸು - ಹೇಗೆ ಕಾಣುತ್ತದೆ

ಮಹೇಶ - ಹೇಳಲೇ...ಕೇಳು ಹಾಗಿದ್ದರೆ, ಕಪ್ಪು ಮೋಡದ ಹಿನ್ನಲೆಯನ್ನು ಭೇದಿಸಿಕೊಂಡು ಪೌರ್ಣಿಮೆಯ ಚಂದ್ರ ಪೂರ್ವಾಚಲದಲ್ಲಿ ಉದಯಿಸುವುದನ್ನು ನೀನು ಕಂಡಿರುವೆಯಾ ?

ಸರಸು - ಕಂಡಿರುವೆ

ಮಹೇಶ - ಅದರಂತೆ ವಿಶಾಲವಾದ ಈ ನಿನ್ನ ಕಪ್ಪು ಕೇಶದ ರಾಶಿಯನ್ನು ಹಿಂದೆ ಹಾಕಿ ಚಂದ್ರ ಬಿಂಬದಂತೆ ಕಾಂತಿ ಸೂಸುವ ನಿನ್ನ ಮುಖ ಕಾಣುತ್ತದೆ. ಕಣ್ಣು ತುಟಿಗಳ ಮಧ್ಯ ಸೌಂದರ್ಯ ಸೇತುವಿನಂತ ಕಂಗೊಳಿಸುವ ಈ ನಿನ್ನ ನೀಳ ನಾಶಿಕ ಲಲಾಟದಲ್ಲಿ ಕುಂಕುಮ ತಿಲಕ. ಒಂದೇ ಎರಡೇ ವರ್ಣಿಸಲು...

ಸರಸು - ಇರಲಿ ಸರಿಯಿರಿ ನಿಮ್ಮ ಸರಸ

ಮಹೇಶ - ಮೆಚ್ಚಿ ಸರಸ ವಿರಸಗಳ ಸಮರಸವೇ ಸಂಸಾರ

### ಸಂವಾದ ಗೀತೆ

ಮಹೇಶ - ಸತಿಪತಿಗಳ ಈ ಶೃಂಗಾರದಲಿ ।

ಸರಸು - ಅತಿ ಮಧುರವಿದೆ ಸುಖಶಾಂತಿಯಿದೆ ॥ ಪ ॥

ಮಹೇಶ - ಸಂಸಾರ ಬಳ್ಳಿಯ ಹಣ್ಣಾದೆ ।
ಸಹ ಜೀವನದ ಬಾಳ್ವೆಗೆ ಕಣ್ಣಾದೆ ।

ಸರಸು - ಮನ ಬಯಸಿದ ಪುರುಷನಿಗೆ ಸತಿಯಾದೆ ।
ಸತಿ ಒಲುಮೆಗೆ ಸುಂದರ ಗತಿಯಾದೆ ।

ಮಹೇಶ - ಅವಿರತ ಮುದವು ನೀನಾದೆ ।

(ಮಹೇಶ ಹೊರಗೆ ಹೋಗುವನು. ಸರಸು ಒಳಗೆ ಹೋಗುವಳು. ನಂತರ ಕಲ್ಯಾಣಪ್ಪ ಬರುವನು)

ಕಲ್ಯಾಣಪ್ಪ - ಬಡತನ ! ಬಡತನ ! ಈ ಹಾಳು ಬಡತನದಲ್ಲಿ ಬೆಳೆದ ಜೀವಿಗಳ ಬಾಳು ಬರಿ ಹಾಳು, ದೇವಾ ಸೃಷ್ಟಿ ರಚನೆ ಮಾಡಿದ ನಿನ್ನ ಮನದಲ್ಲಿ ಧನಿಕ ದರಿದ್ರರೆಂಬ ವಿರಸಭಾವನೆ ಅದೇಕೆ ಉದಯಿಸಿತು? ಒಂದೆಡೆ ಸಿರಿ ಸುಖಗಳನ್ನೂ, ಬೇರೊಂದೆಡೆಗೆ ದುಃಖ ದಾರಿದ್ರ್ಯಗಳನ್ನು ಏನು ಕಾರಣ ನಿರ್ಮಾಣ ಮಾಡಿದಿ? ಸಕಲ ಜೀವಕೋಟಿಗಳೂ ನಿನ್ನ ಮಕ್ಕಳೆಂದು ಸ್ಮೃತಿಗಳು ಸಾರುತ್ತಲಿರುವಾಗ ಈ ದ್ವಂದ್ವ ಭಾವನೆಯ ಘರ್ಷಣೆಯದೇಕೆ? ವ್ಯಕ್ತಿಯ ಬದುಕಿನಲ್ಲಿ ಸಿರಿಯಳಿದು ದಾರಿದ್ರ್ಯ

ಬರುವದಕ್ಕಿಂತಲೂ ಬಡತನವಳಿದು ಒಡೆತನ ಬಂದರೆ ಒಳಿತು. ಆದರೆ... ಆಗರ್ಭ ಶ್ರೀಮಂತನಾಗಿ ಮೆರೆದುರಿದು ಮಧ್ಯಂತರದಲ್ಲಿ ಕೈ ಬರಿದಾಗಿ ನನ್ನಂತೆ ಬಡತನದಿ ಕಡು ತಾಪದಲಿ ಸಂಕಟಪಡುವ ದುರ್ದೈವಿಗಳ ಹೀನ ಸ್ಥಿತಿ... ಹೇಳತೀರದು ಅವನತಿ..

ಗೌರಮ್ಮ - (ಕೈಯಲ್ಲಿ ಗುಳಿಗೆ (ಮಾತ್ರೆ) ಸಣ್ಣ ಬಾಟ್ಲಿ ಹಿಡಿದು ಬಂದು) ಇದೋ ಇವತ್ತು ಬೇರೆಯ ಗುಳಿಗೆಗಳನ್ನು ಕೊಟ್ಟಿದ್ದಾರೆ. ಇದರಿಂದ ಎಂತಹ ಕಸವಿದ್ದರೂ ಕರಗಿ ನೀರಾಗಿ ಕತ್ತರಿಸಿ ಬೀಳುವದಂತೆ ನೋಡಿ

ಕಲ್ಯಾಣಪ್ಪ - ಗೌರ ಬದುಕುವ ಆಸೆ ಇದ್ದವರಿಗೆ ಮಾತ್ರ ಔಷಧದ ಅವಶ್ಯಕತೆ. ಬದುಕು ಸಾಕೆಂದು ಬಯಸುವವನ ಮನಕೆ ಔಷಧೋಪಚಾರವದೇಕೆ?

ಗೌರಮ್ಮ - ಛೆ ! ಹಾಗೆಲ್ಲ ಮಾತನಾಡಿ ನನ್ನ ಮನಸ್ಸಿಗೆ ನೋವನ್ನುಂಟು ಮಾಡಬೇಡಿ. ಲಲಾಟದಲ್ಲಿ ಧರಿಸಿದ ಕುಂಕುಮ ಸೌಭಾಗ್ಯ ಅಖಂಡ ವರ್ಧಿಸಲಿ ಎಂದು ಶಿವನಲ್ಲಿ ಬೇಡಿರುವೆ. ಮಗು ದಾಕ್ಷಾಯಣಿ.

ದಾಕ್ಷಾಯಣಿ - (ಕಾಫಿ ಕಪ್ಪಿನೊಂದಿಗೆ ಬರುತ್ತ) ಬಂದೆ ಅವ್ವಾ! ತೆಗೆದುಕೊಳ್ಳಪ್ಪ

ಕಲ್ಯಾಣಪ್ಪ - ಬಾರಮ್ಮ ಕುಳಿತುಕೋ, ಗೌರಿ ಈ ಮಗು ಒಂದು ನಮ್ಮ ಬಾಳ ಮರಭೂಮಿಯಲ್ಲರಳಿದ ದೇವ ಮಂದಾರ. ಅವಳ ಕೈ ಹಿಡಿಯುವ ಭಾಗ್ಯ ಯಾವ ಪುಣ್ಯಾತ್ಮನಿಗಿದೆಯೋ ನಾ ಕಾಣೆ

ದಾಕ್ಷಾಯಣಿ - ಅಪ್ಪ ನಿನಗೆ ಯಾವಾಗಲೂ ನನ್ನ ಚಿಂತೆಯೇ ?

ಕಲ್ಯಾಣಪ್ಪ - ಹೌದು ಮಗು ! ವಯಸ್ಸಿಗೆ ಬಂದ ಮಗಳ ಮದುವೆಯ ವಿಚಾರವನ್ನು ಹಡೆದ ತಂದೆಯಾದ ನಾನು ಮಾಡಬೇಕಲ್ಲದೇ ಮತ್ತಾರು ಮಾಡಬೇಕಮ್ಮ? ಶಿವ ಕಾರುಣ್ಯದಿಂದ ನೀನೊಬ್ಬಳು ಸರಿಯಾದ ಮನೆ ಸೇರಿದೆಯಾದರೆ, ನಿನ್ನ ತಂದೆಯ ತಲೆಯ ಮೇಲಿನ ಅರ್ಧಭಾರ ಕಡಿಮೆಯಾಗುವುದಮ್ಮ. ಆದರೆ ಬಡವನ ಮಗಳನ್ನು ಕೈ ಹಿಡಿಯುವ ಪುಣ್ಯಾತ್ಮರಾರಿದ್ದಾರೆ...

ದಾಕ್ಷಾಯಣಿ - ಅದೆಲ್ಲ ಇರಲಿ, ಮೊದಲು ಈ ಗುಳಿಗೆಯನ್ನು ನುಂಗಿ ಮೇಲಿಷ್ಟು ಕಾಫಿ ಕುಡಿಯಪ್ಪ ನಾನಷ್ಟು. ಸೀ ನೀರಿಗೆ..

ಸರಸು - (ಬಂದು) ದಾಕ್ಷಾಯಣಿ ನೀನು ಇಲ್ಲಿಯೇ ಮಾತನಾಡುತ್ತ ಕುಳಿತರೆ ಸೀ ನೀರಿಗೆ ಹೋಗುವುದು ಯಾವಾಗ. ನಿಮ್ಮಣ್ಣನವರು ಬರುವಷ್ಟರಲ್ಲಿ ಅಡಿಗೆಯಾಗಬೇಡವೆ?

ದಾಕ್ಷಾಯಣಿ - ಬಂದೆ ಅತ್ತಿಗೆ (ಅತ್ತಿಗೆಯ ಕೈಯಲ್ಲಿದ್ದ ಕೊಡ ತೆಗೆದುಕೊಂಡು ಹೊರಡುವಳು)

ಕಲ್ಯಾಣ - (ಕಾಫಿ ಕುಡಿಯುತ್ತ) ಹಡೆದ ಮಗಳ ಜತೆಯಲ್ಲಿ ಮಮತೆಯ ಎರಡು ಮಾತುಗಳನ್ನು ಆಡಲೂ ಅವಕಾಶವಿಲ್ಲದಾಯಿತು ಈ ಮನೆಯಲ್ಲಿ. ಮನೆಗೆ ಯಜಮಾನನಾದರೇನಾಯಿತು ? ದುಡಿಯುವದಾಗದ ಮಗನ ದುಡಿಮೆಯಲ್ಲಿ ಒಡಲು ತುಂಬಿಕೊಳ್ಳುತ್ತ ಬಿದ್ದಿರುವಾಗ ಮನೆಯ ಸೊಸೆಗೂ ಅಂಜಿ ನಡೆಯಬೇಕೇನೋ ?

ಮುಖ್ಯ ಕಾಸು ಕಳೆದುಕೊಂಡಿದ್ದೇ ಇಷ್ಟೆಲ್ಲ ಅವನತಿಗೆ ಕಾರಣ

ಗೌರಮ್ಮ - ಅವನತಿಯನ್ನು ಕುರಿತು ಆಲೋಚಿಸುವದನ್ನು ಸ್ವಲ್ಪ ಕಡಿಮೆ ಮಾಡಿ ಸ್ವಾಮಿ! ವಿಚಾರ ವಿಪ್ಲವದಲಿ ಬೆಂದ ನಿಮ್ಮ ದೇಹ ವೈಶಾಖದ ಪ್ರಖರ ಬಿಸಿಲಿಗೆ ಬಾಡಿದ ಬಳ್ಳಿಯಂತಾಗಿದೆ

ಕಲ್ಯಾಣ - ಈ ಬಳ್ಳಿ ಬಾಡಿ ಬಸವಳಿಯದಂತೆ ರಕ್ಷಿಸುವ ನಿನ್ನ ಧೈರ್ಯದ ಅಮೃತ ಸಿಂಚನ ಸದಾ ಸಿದ್ಧವಿರುವಾಗ ನನಗಾವ ಭಯ? ಗೌರಿ... ಶಿವನು ನನ್ನೆಲ್ಲ ಭೋಗ ಭಾಗ್ಯಗಳನ್ನು ಕಸಿದುಕೊಳ್ಳಲಿ. ಆದರೆ ಸೌಭಾಗ್ಯವಾದ ನಿನ್ನನ್ನು ಮಾತ್ರ ಕಸಿದುಕೊಳ್ಳದಿರಲಿ

ಗೌರಮ್ಮ - ಇವತ್ತು ಅದೇಕೋ ವಿಚಿತ್ರವಾಗಿಯೇ ಮಾತಾಡುತ್ತಿರುವಿರಲ್ಲ?

ಕಲ್ಯಾಣ - ಇನ್ನೇನು ಮಾಡಲಿ? ಸಾಲಗಾರರ ತೊಂದರೆ ಏನು ಸಾಮಾನ್ಯವೆ? ಗೌರಿ ಈ ಸಾಲ ಶೂಲಗಳಿಂದ ನಾನು ಮುಕ್ತನಾಗಲು ಸಾಧ್ಯವಿಲ್ಲವೆ?

ಗೌರಮ್ಮ - ಏಕೆ ಸಾಧ್ಯವಿಲ್ಲ? ವಯಸ್ಸಿಗೆ ಬಂದ ಮಕ್ಕಳಿದ್ದಾರೆ. ದುಡಿದು ಮುಟ್ಟಿಸುತ್ತಾರೆ. ಈ ಚಿಂತೆ ನಿಮಗೇಕೆ?

ಕಲ್ಯಾಣ - ಮಕ್ಕಳಿದ್ದಾರೆ... ಮಾತಾ ಪಿತೃಗಳ ಮೇಲೆ ಮಮತೆಯನ್ನು ಕಡಿದುಕೊಂಡು, ಕೈಹಿಡಿದ ಮಡದಿ ಕುಣಿಸಿದಂತೆ ಕುಣಿಯುವ ಹಿರಿಯ ಮಗ ಮಹೇಶನಿದ್ದಾನೆ

ಗೌರಮ್ಮ - ಆದರೂ ಮನೆತನ ನಡೆಯುತ್ತಿರುವದು ಅವನು ದುಡಿದು ತರುವ ಸಂಬಳದ ಮೇಲೆಯೇ ಅಲ್ಲವೇ ?

ಕಲ್ಯಾಣ - ಆದ್ದರಿಂದಲೇ ಅವನು ತರುವ ಸಂಬಳದಲ್ಲಿಯೇ ನಾವೆಲ್ಲ ಕುಳಿತು ತಿನ್ನುತ್ತಿದ್ದೇವೆಂದು ತಿಂಗಳಿಗೊಮ್ಮೆ ತಪ್ಪದೇ ಹಂಗಿಸುತ್ತಿದ್ದಾಳೆ ಈ ನಿನ್ನ ಸೊಸೆ

ಗೌರಮ್ಮ - ದಯವಿಟ್ಟು ನೀವು ಸರಸ್ವತಿಯ ಬಗ್ಗೆ ಕೆಟ್ಟ ಮಾತುಗಳನ್ನಾಡಬೇಡಿ. ಮಾತು ಒರಟಾಗಿದ್ದರೂ ಮನಸ್ಸು ಮಾತ್ರ ಮಲ್ಲಿಗೆಯಂತೆ ಮೃದುವಾಗಿದೆ

ಕಲ್ಯಾಣ - ಮೃದುವಾಗಿದೆ... ಗೌರೀ ಹಂಗಿನರಮನೆಗಿಂತ ವಿಂಗಡದ ಗುಡಿಲೇಸಿನಂತೆ ಆಗಿದೆ... ನಮ್ಮ ಪಾಡು. ಮಗನು ನಮ್ಮವನಾದರೆ ನಡೆಯುಲು ಬಂದ ಸೊಸೆ ನಮ್ಮವಳಾಗಬಹುದೆ? ಅವಳ ಪ್ರತಿಯೊಂದು ನಡೆ ನುಡಿಗಳನ್ನು ನೋಡಿದಾಗಲೆಲ್ಲ ನೀವೇಕೆ ನಮಗೆ ಭಾರವಾಗಿದ್ದೀರಿ ತೊಲಗಿ ಹೋಗಬಾರದೇ ಎನ್ನುವಂತೆ ವರ್ತಿಸುತ್ತಾಳೆ. ತನ್ನ ಮೈದುನ ಮಹಾಂತೇಶನನ್ನಂತೂ ಆಕೆ ಗಣನೆಗೇ ತಂದುಕೊಳ್ಳುತ್ತಿಲ್ಲ. ಹೀಗಾದರೆ ಹೇಗೆ ? ಇನ್ನೂ ಆತ ಕಲಿಯುವ ಹುಡುಗ. ಅವನು ಭಾವನಾ ಜೀವಿ. ನಾಳೆ ಮನಸ್ಸಿನ ಮೇಲೆ ಏನಾದರೂ ಪರಿಣಾಮ ಮಾಡಿಕೊಂಡು ಬಿಟ್ಟರೆ ಹೇಗೆಂಬ ಚಿಂತೆ ನನ್ನನ್ನು ಬಲವಾಗಿ ಕಾಡುತ್ತದೆ

ಗೌರಮ್ಮ - ಮಹಾಂತೇಶನ ಸ್ವಭಾವ ನಾನು ಕಾಣೆನೆ? ಮೊದಲಿನಿಂದಲೂ ಅತ್ತಿಗೆಯ ವಿಷಯಕ್ಕೆ ಬಹಳ ಗೌರವದಿಂದ ನೋಡಿಕೊಳ್ಳುತ್ತಾನೆ. ಈ ವರುಷ ಪರೀಕ್ಷೆ ಮುಗಿಸಿ

ಯಾವುದಾದರೊಂದು ನೌಕರಿ ದೊರಕಿಸಿ ಅಣ್ಣನ ಅರ್ಧಭಾರ ಹೊರುವದಾಗಿ ಹೇಳಿದ್ದಾನೆ

ಕಲ್ಯಾಣ - ತೀಕ್ಷ್ಣ ಬುದ್ಧಿಯ ಮಹಾಂತೇಶನ ವಿದ್ಯಾಭ್ಯಾಸವನ್ನು ಇಲ್ಲಿಗೇ ನಿಲ್ಲಿಸಲು ನನಗಂತೂ ಸ್ವಲ್ಪವೂ ಇಷ್ಟವಿಲ್ಲ. ಗೌರಾ... ಯಾವ ರೀತಿಯಿಂದಲೂ ಚಲಿಸಲು ಬಾರದಂತೆ ನನ್ನನ್ನು ದುರ್ವಿಧಿ ಬಲವಾಗಿ ಬಂಧಿಸಿದೆ. ನನಗೀಗ ಅವನದೇ ಕೊರಗು

ಗೌರಮ್ಮ - ಮಹಾಂತೇಶನ ವಿದ್ಯಾಭ್ಯಾಸ ನಿಂತರೆ ನೀವೇಕೆ ಇಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಕು

ಕಲ್ಯಾಣ - ನಾನು ಅವನ ತಂದೆ. ಹಡೆದ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕಾದದ್ದು ನನ್ನ ಕರ್ತವ್ಯ. ಅವನ ಭವಿಷ್ಯ ಕುರಿತು ಚಿಂತಿಸುವದು ನನ್ನ ಧರ್ಮ

ಗೌರಮ್ಮ - ಮಹಾಂತೇಶನ ವಿದ್ಯಾಭ್ಯಾಸ ನಿಲ್ಲುವದೆಂದು ಚಿಂತಿಸುವ ನೀವು ಹಿರಿಯ ಮಗ ಮಹೇಶನ ಶಿಕ್ಷಣದ ಬಗ್ಗೆ ಏಕೆ ಚಿಂತಿಸಲಿಲ್ಲ?

ಕಲ್ಯಾಣ - ಶಿಕ್ಷಣದಲ್ಲಿ ಮಹಾಂತೇಶನಿಗಿರುವ ಅಭಿರುಚಿ ಮಹೇಶನಿಗಿರಲಿಲ್ಲವಾದ್ದರಿಂದ ಹಾಗೆ ಮಾಡಿದೆ. ಕಲಿಯುವದಕ್ಕಾಗಿ ಕಾಸು ಖರ್ಚಾದರೂ ಚಿಂತೆಯಿಲ್ಲ. ಮನೆತನದ ಮೇಲೆ ಕೀರ್ತಿಯ ಕಳಸವನ್ನಿಟ್ಟಿರಬೇಕು

ಗೌರಮ್ಮ - ಕಲಿತವರೇ ಮನೆಯ ಕೀರ್ತಿ ಕಾಪಾಡುತ್ತಾರೇನು? ಮಹಾಂತೇಶ ಒಂದು ವೇಳೆ ಕಲಿಯದಿದ್ದರೂ ಮನೆಯ ಕೀರ್ತಿ ತರುವ ಸತ್ಪುರುಷ

ಸರಸು - (ಮನೆಯ ಕೆಲಸ ಮಾಡುತ್ತ ಹೊರಗೆ ಬಂದು ಮಾತನಾಡುವದನ್ನು ಕೇಳಿ) ತಿಂಗಳಿಗೊಮ್ಮೆ ತಪ್ಪದೇ ಸಂಬಳ ತಂದು ಮನೆತನ ಖಾಯಂ ನಡೆಸುವ ಹಿರಿಯ ಮಗನಿಗಿಂತ ಕಲಿಯುವ ಆ ಗಾಜಿನ ಗೊಂಬೆಯಲ್ಲಿಯೇ ನಿಮಗೆ ಹೆಚ್ಚು ಮಮತೆಯಲ್ಲವೆ? ಇಂತಹ ಸಂಕುಚಿತ ಭಾವನೆಯೇಕೆ ? ಅವರು ಕಲಿಯುವದನ್ನು ನಿಲ್ಲಿಸಿ ದುಡಿಯದೇ ಹೋಗಿದ್ದರೆ ನಿಮ್ಮ ಮನೆತನದ ಗತಿ ಏನಾಗುತ್ತಿತ್ತು ನೀವೇ ಹೇಳಿ?

ಕಲ್ಯಾಣ - ಪತಿಯ ಪಕ್ಷ ವಹಿಸಿ ಮಾತಾಡಲು ಬಂದ ಪತಿವ್ರತೆ. ನಿನ್ನ ಗಂಡ ಕಲಿಯುವ ವೇಳೆಯಲ್ಲಿ ಈ ನಿನ್ನ ಮಾವ ಕುಬೇರನಾಗಿದ್ದ. ಇಂದು ದುಡಿಯಲು ಕಾಲು ನಡುಗೆಯಲ್ಲಿ ಹೋಗುವಂತೆ ಅಂದು ನಿನ್ನ ಪತಿ ಕಾರಿನಲ್ಲಿ ಶಾಲೆಗೆ ಹೋಗುತ್ತಿದ್ದ. ಇಂದಿನಂತೆ ಒಂದಿತ್ತು ಒಂದಿಲ್ಲವೆಂದು ನಾವು ಊಟ ಮಾಡುತ್ತಿರಲಿಲ್ಲ. ಮಾಡಿಟ್ಟ ದಿನಕ್ಕೊಂದು ತರದ ಪಾಯಸ ಊಟ ಮಾಡಲು ಅಂದು ನಮಗ ನಾಲಿಗೆ ಇರಲಿಲ್ಲ

ಸರಸು - ಹಿಂದಿದ್ದ ಶ್ರೀಮಂತಿಕೆಯ ವರ್ಣನೆ ಮಾಡುವದೆ ನಿಮ್ಮ ನಿತ್ಯ ರೂಢಿಯಾಗಿದೆ. ನೀವಾದರೂ ಏನು ಮಾಡುವಿರಿ? ಕಾಸು ಕಳೆದುಕೊಂಡಿದ್ದರುಂಟಾದ ಕೆಟ್ಟ ಮಿದುಳಿನ ಪರಿಣಾಮವದು

ಗೌರಮ್ಮ - ಸರಸು ಆದೇನಿದ್ದರೂ ಹಿರಿಯರಾದ ನಿನ್ನ ಮಾವನವರಿಗೆ ಹಾಗಲ್ಲ

ಮಾತನಾಡಬಾರದಮ್ಮ

ಸರಸು - ಮತ್ತೇನು ಮಾಡಲಿ ಹೇಳಿ ಅತ್ತೆ ? ಸುಮ್ಮನೆ ಊಟಮಾಡಿಕೊಂಡು ಬಿದ್ದಿರುವುದನ್ನು ಬಿಟ್ಟು ಏನಾದರೊಂದು ಬಡಬಡಿಸುತ್ತಲೇ ಇರುತ್ತಾರೆ. ಇವತ್ತು ಅಡಿಗೆ ಆರಿ ಹೋಗಿದೆ. ಮಜ್ಜಿಗೆ ತಿಳಿಯಾಗಿದೆ. ಸಾರಿಗೆ ಉಪ್ಪು ಕಡಿಮೆ ಬಿದ್ದಿದೆ. ಹೀಗೆಯೇ ಒಂದಿಲ್ಲೊಂದು ದೋಷ ತೆಗೆಯುವದೇ ಇವರ ರೂಢಿಯಾಗಿದೆ

ಗೌರಮ್ಮ - ನೀನೆ ಸ್ವಲ್ಪ ಸಹಿಸಿಕೊಳ್ಳಬೇಕಮ್ಮ ಸರಸು. ಯಾಕೆಂದರ ಅವರು ಮೊದಲಿಸಿಂದಲೂ ತರತರದ ಪಕ್ವಾನ್ನ ಊಟ ಮಾಡಿದವರು. ಈಗ ಒಮ್ಮೆಲೇ ಬಡಿದ ಬಡತನದ ಬರಸಿಡಿಲಿನಾಘಾತ ತಡೆಯಲಾರದೆ ಎದೆಯೊಡೆದು ಹಾಗೆಲ್ಲ ಮಾತಾಡುತ್ತಾರೆ. ನೋಡು ಮಗು ನಿನ್ನ ಮಾವನ ಮಾತುಗಳನ್ನು ನೀನು ಸಹಿಸಿಕೊಳ್ಳಬೇಕಲ್ಲದೇ ಇನ್ನಾರು ಸಹಿಸಿಕೊಳ್ಳಬೇಕಮ್ಮ ?

ಸರಸು - ಮೈ ಮೇಲೆ ಬಂಗಾರ ಹಾಕಿ ಮನೆ ತುಂಬಿಕೊಂಡಿದ್ದರ ಇನ್ನೂ ಎಷ್ಟು ಅಧಿಕಾರ ನಡೆಯಿಸುತ್ತಿದ್ದರೋ ಏನೋ? ನಾನೊಲ್ಲೆ ನಮ್ಮವ್ವ ನನಗೆ ಸಾಕು ಸಾಕಾಗಿ ಹೋಯಿತು. ಉಪವಾಸವಿರಬಹುದು, ಈ ಉಪದ್ರವ ತಾಳುವದು ಕಷ್ಟ (ಒಳಗೆ ಹೋಗುವಳು)

ಕಲ್ಯಾಣ - ನೋಡಿದೆಯಾ ಗೌರಿ ಇವಳ ವಯಸ್ಸೇನು, ಮಾತೇನು? ಸ್ಥಾನ ಮಾನಕ್ಕಾದರೂ ಬೇಡವೇ ಗೌರವ?

ಗೌರಮ್ಮ - ಇರಲಿ ಬಿಡ್ರಿ, ಸಣ್ಣವಳು ಬುದ್ಧಿ ಇಲ್ಲದೇ ಸ್ವಲ್ಪ ದುಡುಕಿದರೆ ನಾವು ತಡೆದುಕೊಳ್ಳಬೇಕಲ್ಲದೇ ಇನ್ನಾರು ತಡೆದುಕೊಳ್ಳಬೇಕು?

ಕಲ್ಯಾಣ - ತಾಳಿಕೊಳ್ಳುವ ಮಾತಲ್ಲ ಗೌರಿ, ಇದು ನನ್ನ ದುರ್ದೈವದ ಫಲ ಶೃತಿ. ಬಲ ಬಿದ್ದು ಹೋದಾಗ ನೆಲವದ್ದು ಬಡಿಯಿತೆಂಬಂತೆ ಸಿರಿಯನ್ನು ಕಳೆದುಕೊಂಡು ಬಡತನಕ್ಕೆ ತುತ್ತಾದ ನಾನು ನಡೆಯಲು ಬಂದ ಈ ಮಡಿಗಿಗೆ ಅಂಜಿ ನಡಿಯುವ ಹೊತ್ತು ಬಂದಿದೆ (ಮುಖ ಚಿಕ್ಕದು ಮಾಡಿಕೊಂಡು ಮಹಾಂತೇಶ ಬರುವನು) ಏಕೋ ಮಹಾಂತೇಶ ಈಗಾಗಲೇ ಬಿಟ್ಟೆತೇನು ನಿನ್ನ ಶಾಲೆ (ಮಹಾಂತೇಶ ಮೌನವಾಗಿ ಕಣ್ಣೀರು ಸುರಿಸುವನು)

ಗೌರಮ್ಮ - ಇದೇನೋ ಮಹಾಂತೇಶ ಅಳುವೆಯೇಕಪ್ಪ. ಹೇಳು ನನ್ನ ಕಂದಾ ಏನಾಯಿತಪ್ಪ?

ಮಹಾಂತೇಶ - ಶಾಲೆಯ ಫೀ ಹಣ ಈ ವರಗೂ ತುಂಬದೇ ಇದ್ದದ್ದರಿಂದ ನನ್ನನ್ನು ಶಾಲೆ ಬಿಟ್ಟು ಹೊರಗ ಹಾಕಿದರಮ್ಮ. ಆ ಹಣ ತುಂಬದ ವಿನಃ ನಾನಿನ್ನು ಶಾಲೆಯಲ್ಲಿ ಕಾಲಿಕ್ಕಕೂಡದೆಂದು ನನಗ ಕಟ್ಟಾಜ್ಞೆಯಾಗಿದೆ

ಕಲ್ಯಾಣ - ಎಲ್ಲವನ್ನು ಕಳೆದುಕೊಂಡು ನಮಗಿಂದು ಉಳಿದಿದ್ದು ಮಹಾಂತೇಶನ ಭವಿಷ್ಯದ ಆಶಾತಂತು ಮಾತ್ರ. ಅದನ್ನೂ ಕೂಡಾ ನಮ್ಮ ದುರ್ವಿಧಿ ಇಂತು ಕತ್ತರಿಸಿ ಹಾಕಿತೆ? ಶಿವಸಿಚ್ಛೆ!!!

ಗೌರಮ್ಮ - ಅದಕ್ಕೆ ಎಷ್ಟು ಹಣ ತುಂಬಬೇಕು ಮಗು?

ಮಹಾಂತೇಶ - (ಮೌನ)

ಕಲ್ಯಾಣ - ಹೋಗದೂರಿನ ಹಾದಿ ಕೇಳಿ ಮಾಡುವದೇನೆಂಬಂತೆ ಕೈಯಲ್ಲಿ ಚಿಕ್ಕ ಕಾಸೂ ಕೂಡಾ ಇಲ್ಲದ ನೀನು ಅವನ ಫೀ ಹಣದ ಅಂಕೆಯನ್ನರಿತು ಮಾಡುವದಾದರೂ ಏನು? ಹುಚ್ಚಿ, ಎಲ್ಲ ಆಶೆಗಳಿಗೂ ತಿಲಾಂಜಲಿಯನ್ನಿತ್ತು ಬಿಡು, ಬಂದದ್ದು ಬರಲಿ ಶ್ರೀಗುರುವಿನ ದಯ ಒಂದಿರಲಿ. ಏನೇ ನಡೆದುಬಂದ ಬಾಳಿನ ದಾರಿಯಲ್ಲಿ ಬಡತನದ ಬೇಗುದಿ ನಿನಗಿನ್ನೂ ದಣವು ನೀಡಿಲ್ಲವೇನೇ? ನಿನ್ನ ಜೀವನ ಸಾವು ಬೇಡುತ್ತಿಲ್ಲವೇನೆ?

ಗೌರಮ್ಮ - ಇಲ್ಲ ಸ್ವಾಮಿ, ಹಾಗೆಲ್ಲ ಮಾತನಾಡಬಾರದು. ಈಸಬೇಕು ಇದ್ದು ಜಯಿಸಬೇಕೆಂದು ಹೇಳುವಂತೆ ಎಷ್ಟೇ ಬಡತನವಿದ್ದರೇನು ? ಬೇಗುದಿಗೆ ಜೇವ ಬಂದರೇನು ? ದೋಣಿ ಸಾಗಲಿ ಮುಂದಕೆಂದು ಧೈರ್ಯದಿಂದ ನಡೆಯುವದೇ ಒಳಿತಲ್ಲವೇ? ಅಂದರೆ ಒಂದಿಲ್ಲ ಒಂದು ದಿನ ಬೆಳಕು ಕಾಣಲಾರದೇ ಬಾಳು, ಮರುಭೂಮಿಯ ಈ ಕಾಳ ರಾತ್ರಿಯಲಿ?

ಕಲ್ಯಾಣ - ಸುತ್ತು ಮುತ್ತಲೂ ಕತ್ತಲೆಯೇ ಮುತ್ತಿಕೊಂಡಿರುವಾಗ ಬೆಳಕಿನ ಕಿರಣ ಕಾಣದವಳ ನಿನ್ನ ಮಂದಮತಿಯನ್ನು ಕಂಡು ನನಗೆ ನಗೆ ಬರುತ್ತಿದೆ ಗೌರೀ. ದುರ್ದೈವವು ಒಮ್ಮೆ ಕಾಡ ತೊಡಗಿದರೆ ದುಃಖದ ಪ್ರಸಂಗಗಳು ಒಂದರ ಹಿಂದೊಂದು ಸಮುದ್ರದ ಅಲೆಗಳಂತೆ ಅಪ್ಪಳಿಸುತ್ತವೆ. ವಿಧಿಯ ಕೈ ಮೇಲಾದಾಗ ಮಾನವಿ ಶಕ್ತಿ ಸೋತು ಶರಣಾಗತಿಯನ್ನು ಹೊಂದಲೇಬೇಕಾಗುತ್ತದೆ

ಮಹಾಂತೇಶ - ಅಪ್ಪಾ ನನ್ನಿಂದ ನಿಮಗೆಷ್ಟು ತೊಂದರೆ?....... (ಸರಸು ಬರುವಳು)

ಗೌರಮ್ಮ - (ಬಾಯಿಮುಚ್ಚಿ) ಹಾಗೆಲ್ಲ ಮಾತನಾಡಬೇಡ ಮಗು. ಎಂದಾದರೂ ಬಳ್ಳಿಗೆ ಕಾಯಿ ಭಾರವಾದೀತೇ?

ಕಲ್ಯಾಣ - ಹೌದು ಮಹಾಂತೇಶ, ಏನಾದರೂ ಚಿಂತೆಯಿಲ್ಲ. ನೀನು ಕಲಿಯಲಿಕ್ಕೇ ಬೇಕು. ಕಲಿತು ಜಾಣನೆನಿಸಿಕೊಂಡು ದೊಡ್ಡ ಪದವಿ ಪಡೆದು ನಮ್ಮ ಮನೆಯ ಮೇಲೆ ಕೀರ್ತಿಯ ಕಳಸವನ್ನಿಡಬೇಕು. ನಿನ್ನಣ್ಣನಂತೆ ವಿದ್ಯಾಹೀನನಾಗಿ ಹೆಂಡತಿಯ ಕೈಗೊಂಬೆಯಾಗಿ ಮಾತ್ರ ಬಾಳಬೇಡ

ಸರಸು - ಮಾವನವರೇ ಮಾತಿಗೊಮ್ಮೆ ಅವರನ್ನು ಹೆಂಡತಿಯ ಕೈಗೊಂಬೆಯೆಂದು ಹಂಗಿಸುತ್ತಿರಿ. ಅವರು ಯಾವ ನನ್ನ ಮಾತನ್ನು ಮನ್ನಿಸಿದ್ದಾರ ಹೇಳಿ. ನಾನೆಂದಾದರೂ ಅವರನ್ನು ಅಂಕಿಯಲ್ಲಿಟ್ಟುಕೊಳ್ಳಲು ಬಯಸಿರುವೆನೇ ?

ಕಲ್ಯಾಣ - ಮಹೇಶನನ್ನೆಂದೋ ನಿನ್ನ ಹೇಳಿಕೆಯಂತ ಕುಣಿಯ ಹಚ್ಚಿರುವಿ. ಇಷ್ಟಲ್ಲದ ಮನೆಯವರನ್ನೆಲ್ಲ ನಿನ್ನ ಮಾತಿನಂತೆ ತಾಳಹಾಕಲಿಕ್ಕೆ ಪಟ್ಟಲೆತ್ತಿಸಿರುವಿ. ಯಾವ ವಿಷ ಗಳಿಗೆಯಲ್ಲಿ ನನ್ನ ಮಗನ ಕೈ ಹಿಡಿದು ನನ್ನ ಮನೆ ತುಂಬಿದೆಯೋ ಕಾಣೆ

ಸರಸು - ಮಾವಾ ನಾಲಿಗೆಯನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಿ. ಪರಿಣಾಮ ನೆಟ್ಟಗಾಗಲಿಕ್ಕಿಲ್ಲ

ಕಲ್ಯಾಣ - ಏನೇ ಗಯ್ಯಾಳಿ ನನಗೆ ಎದುರು ವಾದಿಸುವೆಯಾ ?

(ಹೊಡೆಯ ಹೋದಾಗ)

ಗೌರಮ್ಮ - ಇದೇನು ಹುಚ್ಚಾಟ

ಕಲ್ಯಾಣ - ಹುಚ್ಚಾಟವಲ್ಲ, ಹೇಸಿ ಬದುಕಿನ ವಿಕಟ ಅಟ್ಟಹಾಸ. ಕರುಣೆ ಇಲ್ಲದ ದೈವ ಬಗೆದ ಮೋಸ

ಗೌರಮ್ಮ - ನೀನು ಒಳಗೆ ಹೋಗಮ್ಮ ಸರಸು. ನೀವು ಸ್ವಲ್ಪ ಶಾಂತರಾಗಿರಿ. ಇನ್ನೂ ಸಣ್ಣವಳು, ಇನ್ನೊಬ್ಬರ ಮಕ್ಕಳಿಗೆ ಹೀಗೆಲ್ಲ ಮಾತನಾಡಬಾರದು

ಕಲ್ಯಾಣ - ಮನೆಗೆ ನಡೆಯಲು ಬಂದು ಎರಡು ವರುಷಕಳೆದರೂ ಇನ್ನೂ ಇವಳು ಸಣ್ಣವಳೇ? ಗೌರಿ ಸೊಸೆಯ ಮೇಲೆ ನೀನೀ ರೀತಿ ಮಮತೆ ತೋರುತ್ತ ಬಂದದ್ದರಿಂದಲೆ ಇವಳು ನಮ್ಮ ತಲೆಯ ಮೇಲೆ ಮೆಣಸು ಅರೆಯುತ್ತಿದ್ದಾಳೆ

ಮಹಾಂತೇಶ - ಅಪ್ಪಾ ನೀನು ಸುಮ್ಮನಾಗಿ ಬಿಡಪ್ಪ. ನಾನೆಲ್ಲಿಯಾದರೂ ಸಾಲ ದೊರಕಿಸಿ ಕಲಿಯಲು ಮಾರ್ಗ ಮಾಡಿಕೊಳ್ಳುತ್ತೇನೆ (ಹೋಗುವನು)

ಕಲ್ಯಾಣ - ಗೌರಿ, ನಿನಗೆ ನಾನು ಮೊದಲೆ ಹೇಳಿದೆ. ಅವಳನ್ನು ನಮ್ಮ ಮಹೇಶನಿಗೆ ತೆಗೆದುಕೊಳ್ಳುವದು ಬೇಡವೆಂದು. ಆಗ ನೀನು ನನ್ನ ಮಾತು ಕೇಳದೇ ಹುಡುಗಿ ಜಾಣೆಯಾಗಿದ್ದಾಳೆಂದು ಮಹೇಶನ ಕೊರಳಿಗೆ ಕಟ್ಟಿ ಅವನ ಜೀವನವನ್ನೇ ಹಾಳು ಮಾಡಿದೆ. ಇವಳನ್ನು ಬಿಟ್ಟರೆ ನಮ್ಮ ಹುಡುಗನಿಗೆ ಬೇರೆಲ್ಲಿಯೂ ಕನ್ಯೆ ದೊರೆಯುತ್ತಿರಲಿಲ್ಲವೇನೆ?

ಸರಸು - ದೊರೆಯುತ್ತಿದ್ದರೆ ಇಲ್ಲಿ ಈ ಸೌಭಾಗ್ಯ ಉಣ್ಣಲು ನಾನೇಕೆ ಬರಬೇಕಾಗಿತ್ತು. ಈ ಮನೆಯ ಸಂಬಂಧ ಬೇಡವೆಂದು ನಮ್ಮ ಚಿಕ್ಕಪ್ಪ ಎಷ್ಟು ಹೇಳಿದರೂ ಕೇಳದೇ ನಮ್ಮ ತಂದೆ ಕೊಟ್ಟು ತಾನು ಕೈಲಸವಾಸಿಯಾದ. ಈ ಸುಡುಗಾಡು ಸಂಬಂಧ ಎಷ್ಟು ದಿನದಿಂದ ಕಾದು ಕುಳಿತಿತ್ತೋ ನನ್ನ ಪಾಲಿಗೆ

ಗೌರಮ್ಮ - ಪತಿವ್ರತೆಯರಾದ ಹೆಣ್ಣು ಮಕ್ಕಳಿಗೆ ಪತಿಗೃಹದ ಮೇಲೆ ತುಂಬ ಪ್ರೀತಿ ಅಭಿಮಾನಗಳಿರಬೇಕು ಸರಸು. ಕೊಟ್ಟ ಮನೆಗೂ ಹುಟ್ಟಿದ ಮನೆಗೂ ಒಳ್ಳೇ ಹೆಸರು ತರಬೇಕಾದದ್ದೇ ಹೆಣ್ಣಿನ ಪ್ರಥಮ ಕರ್ತವ್ಯ

ಸರಸು - ಅದು ಗಂಡನ ಮನೆ ಬೇಕಾದವರಿಗೆ ಮಾತ್ರ

ಗೌರಮ್ಮ - ಅಂದರ ಈ ಮನೆ ನಿನಗೆ ಬೇಡವಾಗಿದೆ ಏನೇ?

ಸರಸು - ಯಾವ ಬಗೆಯ ಸನ್ಮಾನ ನನಗಿಲ್ಲಿ ಕಾಯ್ದಿದೆಯೆಂದು ಈ ಮನೆಯ ಸಹವಾಸವನ್ನು ಬಯಸಬೇಕು ನಾನು?

ಕಲ್ಯಾಣ - ಕೆಸರಿನ ಮೇಲೆ ಕಲ್ಲು ಚೆಲ್ಲಿ ಮುಖಕ್ಕೆ ಸಿಡಿಸಿಕೊಳ್ಳುವಂತೆ, ಮಾನ ಬಿಟ್ಟು ನಿಲ್ಲಲು ಸಿದ್ಧಳಾದ ಈ ಹೆಣ್ಣಿನ ಜತೆ ವಾದ ಬೆಳೆಸಿದರೆ ನಮ್ಮ ಮರ್ಯಾದೆಯೇ

ಕಡಿಮೆಯಾಗುವದು

ಸರಸು - ಮಹಾ ಮಾನವಂತರು. ಈ ಮನೆಗೆ ನಡೆಯಲು ಬಂದಾಗಿನಿಂದಲೂ ನೋಡುತ್ತಲೇ ಇದ್ದೇನಲ್ಲ ನಿಮ್ಮ ಸ್ಥಾನಮಾನಗಳನ್ನು, ಎರಡು ಹೊತ್ತು ಊಟಕ್ಕೂ ಸರಿಯಾಗಿ ಸಿಕ್ಕುವದಿಲ್ಲ. ಮೇಲೆ ಮಾನವಂತರೆಂದು ಹೇಳಿಕೊಳ್ಳುತ್ತೀರಿ

ಗೌರಮ್ಮ - ನಿಮ್ಮ ಮನೆಯ ವಿಷಯವಾಗಿ ಇಷ್ಟು ಲಘುವಾಗಿ ಮಾತನಾಡಬಾರದು ಸರಸು

ಸರಸು - ಇದು ನನ್ನ ಮನೆಯೇನು? ಇದು ನನ್ನ ಮನೆಯಾಗಿದ್ದರೆ ನಾನೇಕೆ ಈ ಪರಿ ಹಂಗಿಸಿ ಕೊಳ್ಳುತ್ತಿದ್ದೆ. ತವರು ಮನೆಯಿಂದ ತಂದ ೨೦೦೦ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ನಿಮಗಿತ್ತು ತುತ್ತು ಕೂಳಿಗೆ ಬಿದ್ದ ತೊತ್ತಾಗಿದ್ದೇನೆ

ಗೌರಮ್ಮ - ಹೆಣ್ಣಿಗೆ ಗಂಡನ ಮನೆಯೇ ಶಾಶ್ವತವಾದ ಮನೆ. ಗರತಿಯಾಗಬಯಸುವ ಹೆಣ್ಣಿಗೆ ತಾಯಿಯ ಮನೆ ಅಸ್ಥಿರ. ಪತಿಗ್ರಹವೇ ಸುಸ್ಥಿರ- ಮಗು, ಹೆಣ್ಣು ಹುಟ್ಟಿದ ಮನೆಯನ್ನು ಬಿಟ್ಟು ಕೊಟ್ಟು ಅನ್ಯರ ಮನೆಗೆ ಕಾಲಿಕ್ಕಿದ ಮೇಲೆ ಅಲ್ಲಿ ಅತ್ತೆ ಮಾವಂದಿರ ಸೇವೆ ಮಾಡುತ್ತ ತನ್ನ ಪತಿಯ ಹೃದಯ ಗೆದ್ದುಕೊಂಡು ವಂಶೋದ್ಧಾರಕನಾದ ಸತ್ಪುತ್ರನನ್ನು ಹೆತ್ತು ಪತಿಗೆ ಅರ್ಪಿಸುವದೇ ಹುಟ್ಟಿ ಬಂದ ಹೆಣ್ಣಿನ ಶ್ರೇಷ್ಠ ಕರ್ತವ್ಯ

ಸೋಮಣ್ಣ - (ಬರುತ್ತ) ಓಹೋಹೋ... ಏನಮ್ಮ ಸರಸು ನಿಮ್ಮತ್ತೆಯವರು ಧರ್ಮೋಪದೇಶ ಮಾಡುತ್ತಿರುವಂತಿದೆಯಲ್ಲ?

ಸರಸು - ನನಗೆ ಸಾಕಾಗಿ ಹೋಗಿದೆ ಚಿಕ್ಕಪ್ಪ. ಇನ್ನು ಮೇಲೆ ಈ ಮನೆಯಲ್ಲಿ ಕಾಲಕಳೆಯಲು ನನ್ನಿಂದ ಸಾಧ್ಯವಿಲ್ಲ

ಕಲ್ಯಾಣ - ಹೌದು, ಸೋಮಣ್ಣನವರೆ ನಮಗೂ ಸಾಕಾಗಿ ಹೋಗಿದೆ. ದಯವಿಟ್ಟು ನಿಮ್ಮ ಮಗಳನ್ನು ಇಂದೇ ಈ ಕ್ಷಣವೇ ಕರೆದುಕೊಂಡು ಹೋಗಿಬಿಡು

ಸೋಮಣ್ಣ - ಅಯ್ಯೋ! ಗ್ರಹಚಾರವೇ ಇದೇನಿದು, ಬಸ್ಸು ತಪ್ಪಿ ನಡೆದು ಬಂದದ್ದರಿಂದ ಬಿಸಿಲಿನ ದಾಹದಿಂದುಂಟಾದ ಬಾಯಾರಿಕೆಯನ್ನು ಹಿಂಗಿಸಿಕೊಳ್ಳೋಣ ಅಂತ ಮಗಳ ಮನೆಯಲ್ಲಿ ಕಾಲಿಸಿರುವದಷ್ಟೇ ತಡ ಒಮ್ಮೆಲೇ ಮರ್ಯಾದೆಗೆ ಮಂಗಳಾರತಿಯೇ ಮೊದಲಾಗಿ ಹೋಯಿತಲ್ಲ? ಇಂದು ಮುಂಜಾನೆ ಯಾವ ದರಿದ್ರನ ಮುಖ ನೋಡಿದೇನೋ ಏನೋ! (ಕುಳಿತು) ಏನಮ್ಮಾ ಸರಸು ಅಳುವಿ ಯಾಕೆ ಏನಾಯಿತು ಹೇಳು ?

ಸರಸು - ಇನ್ನೇನಾಗಬೇಕು ಚಿಕ್ಕಪ್ಪ? ಆಗಬೇಕಾದುದೆಲ್ಲ ಆಗಿ ಹೋಯಿತು. ಇಂಥವರ ಮನೆಗೆ ನನ್ನನ್ನು ಕೊಡುವದಕ್ಕಿಂತ ಹುಟ್ಟಿದ ಕೂಡಲೆ ಕುತ್ತಿಗೆ ಹಿಚುಕಿ ಹಿತ್ತಲ ಬಾವಿಯಲ್ಲಿ ಹಾಕಿದ್ದರೆ ಬಹಳ ಒಳ್ಳೆಯದಾಗಿತ್ತು

ಸೋಮಣ್ಣ - ಈ ಮನೆಯಲ್ಲಿ ಸಂಬಂಧವನ್ನು ನಾನೆಷ್ಟು ಬೇಡವೆಂದರೂ ನನ್ನ ಮಾತು ಕೇಳದೇ ನಿಮ್ಮಪ್ಪ ಮಾಡಿಟ್ಟು ಹೋದ ಶತಕೃತ್ಯ ಇದು. ಅನವರತ ಮಗಳ ಕಣ್ಣೀರು

ಕಾಣೋ ಪುಣ್ಯ ನನಗೆ ನೀಡಿ ತಾನು ಕಣ್ಣು ಮುಚ್ಚಿಕೊಂಡ. ಮುಖ್ಯ ನನ್ನ ಕರ್ಮ

ಕಲ್ಯಾಣ - ಸೋಮಣ್ಣನವರೇ, ನಿಮ್ಮ ಮಗಳನ್ನು ನಮ್ಮ ಮಗನಿಗೆ ಮದುವೆ ಮಾಡಿದ್ದು ಇದು ನಮ್ಮ ಕರ್ಮ

ಸೋಮಣ್ಣ - ಅಡ್ಡಿಯಿಲ್ಲ, ಸೂಜಿ ಪಾಪ ಸನ್ಯಾಸಿಗೆ ಅಂತಾ ಹೇಳಿದಂಗ ನಮ್ಮಣ್ಣ ಮಾಡಿಟ್ಟ ಈ ಕರ್ಮ ಈ ಎಳೇ ಹುಡುಗಿ ಜೀವಾ ಹಿಂಡೂದಲ್ಲದ ನನ್ನ ಸಹಿತ ಸುತ್ತು ಹಾಕಲಿಕ್ಕೆ ಹತ್ತಿತು

ಗೌರಮ್ಮ - ಇರಲಿ ಬಿಡಿ ಸೋಮಣ್ಣನವರೆ, ಸಂಸಾರವೆಂದ ಮೇಲೆ ಇಂತಹ ಸಣ್ಣ ಪುಟ್ಟ ಜಗಳ ಬರವುದ್ಯಾವ ದೊಡ್ಡ ವಿಷಯ? ಇಷ್ಟಕ್ಕೆಲ್ಲ ಪಾಪ, ಶಿವಾಧೀನರಾದ ನಿಮ್ಮಣ್ಣನವರನ್ನು ನಿಂದಿಸುವುದೇಕೆ?

ಸೋಮಣ್ಣ - ಮಗಳ ಕಣ್ಣೀರ ಕಂಡರೆ ನಮಗೆ ಹ್ಯಾಂಗ ಆಗತದ ಕಲ್ಯಾಣಪ್ಪನವರೆ. ನಮಗೇನು ಹತ್ತ ಜನ ಹೆಣ್ಣುಮಕ್ಕಳಿಲ್ಲ ಇದೊಂದು ಹುಡುಗಿ. ಈಗತಿ ಕಣ್ಣೀರ ಹಾಕೂದ ಕಂಡ್ರ ನಮ್ಮಿಂದ ಸುಮ್ಮನ ಇರುವದು ಸಾಧ್ಯವಿಲ್ಲ

ಕಲ್ಯಾಣ - ಸೋಮಣ್ಣನವರೇ, ನಿಮ್ಮ ಹುಡುಗಿ ಕಣ್ಣೀರು ಹಾಕುವಂತಹುದುಲ್ಲ, ಇನ್ನೊಬ್ಬರ ಕಣ್ಣಿನಲ್ಲಿ ಕಣ್ಣೀರು ಹಾಕಿಸುವಂತಹದು

ಸೋಮಣ್ಣ - ಏನು ಹಾಕಸ್ತದರಿ! ಕಲ್ಯಾಣಪ್ಪನವರೆ ಹೆಣ್ಣ ಕೊಟ್ಟ ಬೆನ್ನ ಕೊಟ್ಟ ಅಂತಾ ಹೇಳೋವಂಗ ಮಾತಾಡತೀರಿ. ಬಾಯಿ ಸತ್ತ ಪರದೇಶಿ ಹುಡುಗಿ ಯಾರೂ ದಿಕ್ಕಿಲ್ಲ ಅಂತ ತಿಳಿದು ಮನಿಯವರೆಲ್ಲ ಒಂದಾಗಿ ನನ್ನ ಮಗಳ ಜೀವಾ ತಿನ್ನೋದು ನನಗೇನ ಚಂದ ಕಾಣೋದಿಲ್ಲ. ನಾಳೆನಾದ್ರೂ ನೀವು ಕೊಡೋ ಕಾಟ ತಾಳಲಾರದ ಪ್ರಾಣ ಕಳಕೊಂಡಳು ಅಂದ್ರ ನಿಮಗ ಏಳಕೇರಿ ನೀರು ಕುಡಿಸೇನು. ನಾಯಾರ ಅನ್ನೋದ ಗೊತ್ತ ಐತಿಲ್ಲ ನಿಮಗ. ತಾಲೂಕ ಕಾಂಗ್ರೆಸ್ ಕಮೀಟಿ ಪ್ರೆಸಿಡೆಂಟ ಅದೀನಿ ನಾ. ಗೀಚಿ ಒಗದ ಕಾಗದಂದ್ರ ರಾಮಬಾಣ ಇದ್ದಂಗ

ಕಲ್ಯಾಣ - ವಯಸ್ಸಿಗೆ ಬಂದ ಮಗಳನ್ನು ಈ ರೀತಿ ಮೇಲೆರಿಸಿ ಮಾತನಾಡಬೇಡಿ ಸೋಮಣ್ಣನವರೇ. ತವರು ಮನೆಯವರ ಸಲುಗೆ ಪತಿ ಗೃಹದಲ್ಲಿರುವ ಹೆಣ್ಣುಮಕ್ಕಳಿಗೆ ಯೋಗ್ಯವಲ್ಲ

ಸೋಮಣ್ಣ - ಯಾಕ ಯೋಗ್ಯ ಅಲ್ಲ ಅಂತ ನಾ ಕೇಳತೀನಿ. ಮಗಳ ಕಷ್ಟ ಸುಖಾನ ವಿಚಾರ ಮಾಡೋ ಹಕ್ಕು ಹಡದ ತಂದಿ-ತಾಯಿಗಿರದ ಇನ್ನಾರಿಗಿರತದ ಹೇಳ್ರಿ. ಬೇಕಾದ್ರ ನಾಲ್ಕು ಜನ ತಪ್ಪಿದ್ರ ನನ್ನ ಕಿವಿಗೆ ಹಳ್ಳಹಚ್ಚಲಿ

ಗೌರಮ್ಮ - ಇರಲಿ ಬಿಡ್ರಿ ಸೋಮಣ್ಣ. ಇದಾವ ದೊಡ್ಡ ವಿಷಯವೆಂದು ನೀವಿಷ್ಟು ಮನಸ್ಸಿಗೆ ಹಚ್ಚಿಕೊಳ್ಳುತ್ತೀರಿ. ನಮ್ಮ ಸೊಸೆಯ ಕಷ್ಟ ಸುಖ ನಮಗೆ ಸಂಬಂಧಪಟ್ಟದ್ದಲ್ಲವೇ

ಸೋಮಣ್ಣ - ಹಾಂ! ಇದು ರಾಜಮಾತ ನೋಡವ್ವ. ಕೊಡತೀನಿ ಗೌರಮ್ಮ ನಿಮ್ಮಾತಿಗೆ ನಾ

ಮರ್ಯಾದಿ ಕೊಡತೀನಿ. ಯಾಕಂದ್ರ ಕೊಟ್ಟೆಣ್ಣು ಕುಲಕ್ಕ ಹೊರತು ಅಂತ ಗಾದಿ ಮಾತ ಮಾಡಿಟ್ಟಾರ ಹಿರೇರು. ಎಂದು ನಾವು ನಮ್ಮ ಮಗಳ್ನ ನಿಮಗ ಒಪ್ಪಿಸಿದಿವಿ ಅಂದ ನಮ್ಮ ಹಕ್ಕು ಹಾರಿ ಹೋಗೇತಿ

ಗೌರಮ್ಮ - ಇರಲಿ, ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದ್ದಾರೆಯೇ ? ನಿಮ್ಮ ಮಗ ಶಿವಮೂರ್ತಿ ಸುಖವಾಗಿದ್ದಾನೆಯೇ?

ಸೋಮಣ್ಣ - ಅವಗೇನ ಧಾಡಿ ಆಗತ್ತರೀ? ತಂದ ಹಾಕಿದ್ದನ್ನ ತಿಂದು ಕೂಡೋ ಮುಂಡೆಮಗ, ಅವ ಸುಖದಿಂದ ಇರದಿದ್ರ ಇನ್ಯಾರು ಸುಖದಿಂದ ಇರತಾರ ಈ ಲೋಕದಾಗ. ನೋಡ್ರಿ ಗೌರಮ್ಮ ಈ ನಮ್ಮ ಶಿವಮೂರ್ತಿ ಸಲುವಾಗಿ ನನಗಂತೂ ಸಾಕಾಗಿ ಹೋಗೇತಿ ಒಂದು ಮನಿ ನೋಡೀತ, ಒಂದು ಹೂಲಾ ಮಾಡೀತ, ಸಾಲಿಗಂತೂ ಹೋಗಲೇ ಇಲ್ಲ. ಇದ್ದಷ್ಟು ಆಸ್ತಿ ನನ್ನ ತಲೀಲೆ ಹೋಗದಿದ್ರ ಸಾಕು. ನಾನರ ಎಷ್ಟು ದಿನ ಹೀಂಗ ದುಡಿಯಲಿಕ್ಕೆ ಸಾಧ್ಯ ಹೇಳ್ರಿ? ಹಿಂದೆ ಬಾಳಿದಷ್ಟು ಮುಂದಕ ಬಾಳತೀನಿ ಅಂತಾ ನನಗೇನ ಅನುಸೂದಿಲ್ಲ. ಮುಂದಾದರು ಮಾಡೂವಷ್ಟು ಪ್ರಯತ್ನ ಮಾಡತೀನಿ ಉಳಿದದ್ದು ಅವನ ಕರ್ಮ ಅಂತೀನಿ

ಸರಸು - ಯಾಕೆ ಚಿಕ್ಕಪ್ಪ ಶಿವು ನಿನ್ನ ಮಾತು ಕೇಳುದಿಲ್ಲವೇನು? ಸಾಕಿ ಸಲುಹಿದ ಚಿಕ್ಕಪ್ಪಗೆ ಅಂಜಬೇಡವೇ?

ಸೋಮಣ್ಣ - ಹುಟ್ಟಿಸಿದ ದೇವರ ಅಂಜಕೀನ ಇಲ್ಲ ಅವಗ, ಇನ್ನ ನನಗ್ಯಾಂಗ ಅಂಜ್ಯಾನು? ಮುಂಜಾನಿಂದ ಹಿಡಿದು ಸಂಜೀಮಟ ಊರ ಹೊರಗ ಇರೋ ಆ ಮಾವಿನ ತೋಪಿನೊಳಗ ಉಡಾಳರ ಸಹವಾಸ ಮಾಡಿಕೊಂಡು ಇಸ್ಪೇಟು ಆಡಲಿಕ್ಕೆ ಹತ್ಯಾನ

ಸರಸು - ಅವನಿಗೇನು ಬಂತು ಧಾಡಿ. ಮನೆತನದ ಕೀರ್ತಿಗೆ ಕಲಂಕ ಹಚ್ಚುವಂತಹ ಹೀನ ಚಟ ಕಲಿತನೆ ನನ್ನ ತಮ್ಮ

ಸೋಮಣ್ಣ - ಆಡ್ಲಿ ವಯಸ್ಸಿನೊಳಗ ನಾವೂ ಆಡಿದ್ದೀವಿ, ತಮ್ಮ ಮನಸು ಹಿಡಿತದಾಗ ಇಟಗೊಂಡು. ಆದರ ಇವನಂಗ ಮಿತಿ ತಪ್ಪಿ ಮಾತ್ರ ಆಡಲಿಲ್ಲ. ಮಿತಿ ತಪ್ಪೋದರಿಂದ ಅತಿ ಆಗಿ ಅನಾಹುತಕ್ಕೆ ಎಡಿ ಆಗೊದು ಬ್ಯಾಡಾ ಅಂತ ನಾನೆಷ್ಟು ಹೇಳಿದರೂ ಗುಡ್ಡಕ್ಕ ಕಲ್ಲು ಹೊತ್ತಂಗ ಆಗೇತಿ

ಸರಸು - ಚಿಕ್ಕಪ್ಪ ನೀನು ಊರಿಗೆ ಹೋದ ತಕ್ಷಣ ಶಿವಮೂರ್ತಿನ ಇಲ್ಲಿಗೆ ಕಳಸು. ನಾವಲ್ಲ ಅವನಿಗೆ ಬುದ್ಧಿ ಕಲಿಸಿ ಕಳಿಸ್ತೇವಿ

ಸೊಮಣ್ಣ - ಆಗಲವ್ವ, ಯಾರಿಂದರ ಆಗಲಿ ಅವಾ ದಾರಿಗೆ ಬಂದ್ರ ಸಾಕಾಗೇತಿ

ಗೌರಮ್ಮ - ಇರಲಿ ನಡೆಯಿರಿ. ಮೊದಲು ಮುಖ ತೊಳೆದುಕೊಂಡು ಸ್ವಲ್ಪ ಕಾಫಿಯನ್ನಾದರೂ ಕುಡಿಯಿರಿ. ಹೋಗು ಸರಸು, ನಿಮ್ಮ ಚಿಕ್ಕಪ್ಪನಿಗೆ ಕಾಫಿ ಮಾಡಿಕೊಡಮ್ಮ

ಸರಸು - ಇರಲಿ ಚಿಕ್ಕಪ್ಪ ಈಗೇನು ಕೆಲಸದ ಮೇಲೆ ಬಂದಿದ್ದಿ?

ಸೋಮಣ್ಣಾ - ಅದವ್ವ ಶೇಂಗಾ ಬೀಜ ತಗೊಂಡು ಹೋಗೋಣ ಅಂತಾ ಬಂದಿದ್ದೆ. ನೋಡ್ರಿ ಗೌರಮ್ಮ, ಕಾಲ ಏನು ವಿಚಿತ್ರ ಬಂತೂ ಅಂತೀನಿ. ಬಂಗಾರ ಹಿಡಕೊಂಡು ಅಡ್ಯಾಡಿದರು ದುಡ್ಡು ಹುಟ್ಟಲಾರದ ಹೊತ್ತು ಬಂತು. ವಾರದ ಬಡ್ಡಿ ಅಂದ್ರ ನಮ್ಮೂರಾಗ ಮಿತಿಮೀರಿ ಹೊಗಿ ಬಿಟ್ಟೆತಿ. ಇನ್ನೂರಾಐವತ್ತು ರೂಪಾಯಿ ಹುಟ್ಟಿಸಿಕೊಂಡು ಬರಬೇಕಾದರೆ ನನಗೆ ಸಾಕಸಾಕಾಗಿ ಹೋತು. ನಡಿಯವಾ ನನಗಷ್ಟು ಮುಖಾ ತೊಳೆಯಲಿಕ್ಕೆ ನೀರುಕೊಡು ನಡಿ (ಎಂದು ಕೋಟು ಕಳೆದಿಟ್ಟು ಒಳಗೆ ಹೋಗುವನು)

ಕಲ್ಯಾಣ - ಗೌರಾ ಮಹಂತೇಶನ ವಿದ್ಯಾಭ್ಯಾಸವನ್ನು ಇಷ್ಟಕ್ಕೆ ನಿಲ್ಲಿಸಲು ನನಗಂತೂ ಮನಸ್ಸೇ ಬಾರದಾಗಿದೆ. ಹಣ ತುಂಬದ ವಿನಃ ಶಾಲೆಯಲ್ಲಿ ಪ್ರವೇಶಕ್ಕೆ ಅನುಕೂಲವಾಗುವಂತಿಲ್ಲ. ತುಂಬಬೇಕೆಂದರೆ ಕೈಯಲ್ಲಿ ಒಡಕು ಕವಡ ಕೂಡಾ ಇಲ್ಲ

ಗೌರಮ್ಮ - ಮಹಂತೇಶನಾದರೂ ಮನೆಗ ಬರಲಿ ತಡಯಿರಿ. ಅವನೇ ಇದಕ್ಕೆ ಏನಾದರೂ ಮಾರ್ಗ ಮಾಡಬಹುದು

ಸರಸು - (ಬಂದು) ಅತ್ತೆ, ಇವತ್ತ ನಮ್ಮ ಚಿಕ್ಕಪ್ಪ ಇಲ್ಲಿಯೇ ಊಟ ಮಾಡುತ್ತಾರಂತೆ. ಮನೆಯಲ್ಲಿ ಅಕ್ಕಿ ತೀರಿ ಹೋಗಿವೆ. ಅನ್ನವಿಲ್ಲದೇ ಅವರಂದೂ ಊಟ ಮಾಡಿದವರಲ್ಲ

ಕಲ್ಯಾಣ - ನಮ್ಮ ಮನೆಗೆ ಊಟಕ್ಕೆಂದು ಬಂದವರು, ನಾವು ಊಟ ಮಾಡಿದ್ದನ್ನೇ ಅವರೂ ಉಣ್ಣಬೇಕು

ಸರಸು - ಹೀಗನ್ನಲಿಕ್ಕೆ ಅನ್ನದ ಕೊರತೆಯಾಗಿ ನಿಮ್ಮ ಮನೆಯ ಅನ್ನಕ್ಕೆ ಆಸೆಪಟ್ಟು ಬಂದವರಲ್ಲ. ನಿಮ್ಮಿಂದ ಊಟಮಾಡಲು ಸಾಧ್ಯವಿಲ್ಲದಿದ್ದರೆ ಸ್ಪಷ್ಟವಾಗಿ ಹೇಳಿ ಬಿಡಿ ಈಗಲೇ ಹೋಗಿ ಬಿಡುತ್ತಾರೆ

ಕಲ್ಯಾಣ - ನಾವೇಕೆ ಹೇಳಬೇಕು. ಬೇಕಿದ್ದರೆ ನೀನೇ ಹೇಳಿ ಹೊರ ದಬ್ಬಿಬಿಡು. ವಾರದಲ್ಲಿ ಮೂರು ಸಲ ಬಂದು ಊಟ ಕತ್ತರಿಸಲಿಕ್ಕೆ ಈ ಮನೆ ಅನ್ನ ಛತ್ರವಲ್ಲ

ಗೌರಮ್ಮ - ಛೀ ಹಾಗನ್ನಬಾರದು ಸ್ವಾಮಿ

ಕಲ್ಯಾಣ - ನೀನು ಸುಮ್ಮನಿರು ಗೌರಿ. ನಮ್ಮ ಕಷ್ಟವೇ ನಮಗೆ ಹಾಸಿ ಹೊದಿಯಲು ಸಾಕಷ್ಟಿರುವಾಗ ಮಗಳ ನೆನಪು ಮಾಡಿಕೊಂಡು ವಾರದಲ್ಲಿ ಮೂರು ನಾಲ್ಕು ಸಲ ಬಂದು ಆದರಾತಿಥ್ಯ ಪಡೆಯಲಿಕ್ಕೆ ಇವರಪ್ಪನೇನು ನಮ್ಮ ಮನೆಯಲ್ಲಿ ದುಡಿದಿಟ್ಟು ಸತ್ತಿಲ್ಲ

ಸರಸು - ಬಂದವರಿಗೆ ಅನ್ನ ಹಾಕಲಿಕ್ಕ ಗತಿ ಇರದ ಈ ಮನೆಯಲ್ಲಿ ಆದರಾತಿಥ್ಯ ಬೇರೆ ನಡೆಯುವುದಂತ ಆದರಾತಿಥ್ಯ! ಹೇಳಿ, ಈಗೇನು ಮಾಡಬೇಕು

ಗೌರಮ್ಮ - ತಾಳಮ್ಮ ಯಾರ ಮನೆಯಲ್ಲಿಯಾದರೂ ಅವರಿಗಾಗುವಷ್ಟು ಅಕ್ಕಿಯನ್ನು ಸಾಲವಾಗಿ ತರುತ್ತೇನೆ, ನೀನಷ್ಟು ಕಾಫಿ ಮಾಡಿಕೊಡು (ಸರಸು ಒಳಗೆ ಹೋಗುವಳು) (ಗೌರಮ್ಮ

ಹೊರಗೆ ಹೋಗುವಾಗ)

ಕಲ್ಯಾಣ - (ತಡೆದು) ಬೇಡ ಗೌರಾ

ಗೌರಮ್ಮ - ಏಕೆ?

ಕಲ್ಯಾಣ - (ದುಃಖ) ಎಷ್ಟೆಂದು ಅವರಿವರ ಮನೆಯಲ್ಲಿ ನೀನು ಸಾಲಮಾಡುವಿ. ಯಾವದಕ್ಕೆಂದು ಈ ನಿನ್ನ ಅಮೃತ ಪೂರ್ಣ ಹಸ್ತಗಳನ್ನು ಚಾಚಿ ನೆರೆಮನೆಯವರ ಬಾಗಿಲಲ್ಲಿ ನಿಂತು ಯಾಚಿಸುವಿ ? ಯಾರಿಗಾಗಿ ಏತಕ್ಕಾಗಿ ಅಂಗಲಾಚುವಿ?

ಗೌರಮ್ಮ - ನನ್ನ ಮನೆಯ ಗೌರವ ಕಾಪಾಡಲಿಕ್ಕೆಂದು ಸ್ವಾಮಿ, ಇನ್ನೊಬ್ಬರ ಬಾಗಿಲಿಗೆ ನಿಂತು ಯಾಚಿಸುವೆ. ಮನೆಗೆ ಬಂದ ಬೀಗರಿಗೆ ಅನ್ನ ಹಾಕಲಾರದ ದರಿದ್ರರೆಂದು ಪುತ್ರರ ಕೀರ್ತಿಗೆ ಕಲಂಕ ಹತ್ತಬಾರದೆಂದು ನೆರೆಮನೆಯವರು ಹೊಸ್ತಿಲಿಗೆ ನಿಂತು ಅಂಗಲಾಚುವೆ (ಹೋಗುವಳು)

ಕಲ್ಯಾಣ - ಸಿರಿತನವಿದ್ದಾಗ ಈ ಮನೆಯ ಗೃಹಲಕ್ಷ್ಮಿಯಂತಿದ್ದು ಗೌರವದಿಂದ ಬಾಳಿದ ನನ್ನ ಮಡದಿಯೇ ಇಂದು ಅರೆ ಪಾವು ಅಕ್ಕಿಯನ್ನು ಸಾಲ ದೊರೆಸಲು ಇನ್ನೊಬ್ಬರ ಹೊಸ್ತಿಲ ಬಳಿ ನಿಂತು ಯಾಚಿಸುವಂತಾಯಿತೆ? (ದುಃಖಿಸುತ್ತ) ದುರ್ದೈವವೇ ಹಿಂದೊಂದು ಕಾಲದಲ್ಲಿ ಯಾವ ಸಂಘದ ಪ್ರೆಸಿಡೆಂಟನಾಗಿ ಆದನ್ನಾಳಿದ್ದೆನೋ ಇಂದು ಅದೇ ಸಂಘದ ಕೆಳ ದರ್ಜೆಯ ನೌಕರನಾಗಿ ನನ್ನ ಹಿರಿಯ ಮಗ ಮಹೇಶನು ದುಡಿಯುವಂತಾಯಿತೆ ? ಯಾವ ಶಾಲೆಯ ವಾರ್ಷಿಕ ಸಮ್ಮೇಲನದ ಅಧ್ಯಕ್ಷನಾಗಿ ಹಾರ ತುರಾಯಿಗಳನ್ನು ಹಾಕಿಸಿಕೊಂಡಿದ್ದೇನೋ ಇಂದು ಅದೇ ಶಾಲೆಯ ಫೀ ಹಣ ತುಂಬಲಸಾಧ್ಯವಾಗಿ ನನ್ನ ಕಿರಿಯ ಮಗ ಮಹಾಂತೇಶನ ಶಿಕ್ಷಣಕ್ಕೆ ಶರಣು ಹೊಡೆಯುವಂತಾಯಿತೇ? ದೇವಾ ಬಡತನದ ಭೀಕರ ಭವಣೆಯಿಂದ ಬಿಡುಗಡೆಯೇ ಇಲ್ಲವೇ (ಕೋಟು ತೊಟ್ಟುಕೊಂಡು ಹೋಗುವಷ್ಟರಲ್ಲಿ)

ಸರಸು - ಮಾಮಾ ಕಾಫಿ ತೆಗೆದುಕೊಂಡು ಹೋಗಿ

ಕಲ್ಯಾಣ - ಅದೆಲ್ಲವನ್ನೂ ನಿನ್ನ ಚಿಕ್ಕಪ್ಪನ ಒಡಲಿಗೆ ಸುರುವಿ ಬಿಡು. ಕುಡಿದು ತೃಪ್ತಿಯಾಗಲಿ

ಸರಸು - ಮನೆಯವರನ್ನು ಬಿಟ್ಟು ಅವರು ಒಬ್ಬರೇ ಹೇಗೆ ಕುಡಿಯುತ್ತಾರೆ. ಹೋಗಿ ಕಪ್ಪಿಗೆ ಹಾಕಿ ಬಂದಿದ್ದೇನೆ. ಅವರು ನಿಮ್ಮ ಹಾದಿ ಕಾಯುತ್ತ ಹಾಗೆ ಕುಳಿತಿದ್ದಾರೆ (ಕಲ್ಯಾಣಪ್ಪ ಕೋಟು ಕಳೆದು ಒಳಗೆ ಹೋಗುವನು) (ಚಿಕ್ಕಪ್ಪನ ಜೇಬಿನಲ್ಲಿ ನೋಟು ತೆಗೆದು) ಬಿತ್ತುವ ಬೀಜಕೊಳ್ಳಲೆಂದು ತಂದ ಚಿಕ್ಕಪ್ಪನ ಜೇಬಿನಲ್ಲಿದ್ದ ಈ ನೋಟಿನ ಪುಡಿಕೆಯ ಸಹಾಯದಿಂದ ಮನೆಯಲ್ಲಿ ದುಡಿಯದೇ ಒಡೆತನ ನಡೆಸುತ್ತ ನನ್ನನ್ನು ಕಸಕ್ಕಿಂತಲೂ ಕಡೆಯಾಗಿ ಕಾಣುವ ಅತ್ತೆ ಮಾವಂದಿರನ್ನೂ ಮತ್ತು ಮೈದುನನನ್ನೂ ಕತ್ತಿಗೆ ಕೈಕೊಟ್ಟು ನೂಕಿಸುವ ಹಂಚಿಕೆ ಹೊಳೆದಂತಾಯಿತು, ಈ ನೋಟಿನ ಪುಡಿಕೆಯನ್ನು ಮಾವನ ಜೇಬಿಗೆ ಸ್ಥಳಾಂತರಿಸಿ ಕಳವಿನ ಅಪರಾಧ ಹೊರಿಸಿ ಮಗನಿಂದ ತಂದೆಯ ಮಾನಹಾನಿ

ಮಾಡಿಸಿ ಮನೆಯ ಮೇಲೆ ನನ್ನ ಸರ್ವಾಧಿಕಾರ ಸ್ಥಾಪಿಸುವೆ. ಆಮೇಲೆ ಬಿದ್ದಿರಲಿ ಈ ಮುದಿ ಪದ್ದುಗಳು ನನ್ನ ಕೈತುತ್ತಿನ ಎಂಜಲಕ್ಕೆ ಬಾಯ್ದೆರೆದು

## ಪದ

ವಂಚಿಸಲು ಹಂಚಿಕೆಯ । ಮಿಂಚಿಸಿತೀ ಕಾಂಚಾಣ ।
ಜಗಜನದ ತನುಮನವ ಬಗೆ ಬೆಳೆಯುವ ಹೂಬಾಣ ।
ಕಾಮನಿ ಕಾಂಚನ ಹೊಳೆಯಲು । ಸುಖ ಪುರುಷನು ತಾ ಹಗಲಿರುಳು ।
ಬಾಳ ಹಸಿರು । ಕಲಹಕೆ ಉಸಿರ । ಹಣವೆ ಹರಿಸುವೆ ಕಣ್ಣೀರು ॥

(ಮಾವನ ಕೋಟು ಜೇಬಿಗೆ ಸೇರಿಸಿ ಒಳಗೆ ಹೋಗುವಳು. ದಾಕ್ಷಾಯಣಿ ನೀರು ಹೊತ್ತುಕೊಂಡು ಬರುವಳು. ಒಳಗೆ ಹೋಗುವಾಗ ಸೋಮಣ್ಣಾ, ಕಲ್ಯಾಣಪ್ಪ ಹೊರಗೆ ಬರುವರು)

ಸೋಮಣ್ಣಾ - (ಬರುತ್ತಾ) ಓಹೊಹೋ ನೀರಿಗೆ ಹೋಗಿದ್ದಿ ಏನೇ ದಾಕ್ಷಾಯಣಿ

ದಾಕ್ಷಾಯಣಿ - ಹೌದು ಮಾವಾ, ಯಾವಾಗ ಬಂದೆ

ಸೋಮಣ್ಣಾ - ಇದೀಗ ಬಂದೆನಮ್ಮ (ಎಂದು ಕೋಟು ತೊಟ್ಟುಕೊಳ್ಳುವಾಗ)

ಸರಸು - (ಬಂದು) ಬೇಗ ಬಂದುಬಿಡು ಚಿಕ್ಕಪ್ಪ, ನೀನು ಬರುವದರೊಳಗಾಗಿ ನಾನು ಅಡಿಗೆ ಸಿದ್ಧಗೊಳಿಸುತ್ತೇನೆ

ಸೋಮಣ್ಣಾ - (ಜೇಬು ನೋಡಿಕೊಂಡು) ಇದೇನಮ್ಮ ಸರಸು, ಕೋಟಿನಲ್ಲಿದ್ದ ನೋಟುಗಳೇ ಮಾಯವಾಗಿ ಬಿಟ್ಟಿವೆಯಲ್ಲ

ಸರಸು - ನೋಡಪ್ಪ ಸರಿಯಾಗಿ, ಮಾಮಾ ನಮ್ಮ ಚಿಕ್ಕಪ್ಪ ಕೋಟು ಕಳೆದಿಟ್ಟು ಒಳಗೆ ಬಂದಾಗ ನೀ ಇಲ್ಲಿಯೇ ಇರಲಿಲ್ಲವೇ

ಕಲ್ಯಾಣ - ಹೌದು ಇಲ್ಲಿಯೇ ಇದ್ದೆ

ಸರಸು - ಹಾಗಿದ್ದರೆ ನೋಟು ಹೋದದ್ದೆಲ್ಲಿ

ಕಲ್ಯಾಣ - ನನಗೇನು ಗೊತ್ತು

ಸರಸು - ನನಗೆಲ್ಲ ಗೊತ್ತು ಮಹಾಂತೇಶನ ಶಾಲೆಯ ಫೀ ಹಣ ತುಂಬುವ ಆಸೆಯಿಂದ ಆ ಹಣವನ್ನು ಕದ್ದಿರಬೇಕು

ಕಲ್ಯಾಣ - ಬುದ್ಧಿಯನ್ನು ಸುದ್ದಿಯಲ್ಲಿಟ್ಟುಕೊಂಡು ಮಾತನಾಡು ಸರಸು (ಮಹೇಶ ಬರುವನು) ಮನೆಯವರ ಮೇಲೆ ಈ ರೀತಿ ಕಳವಿನ ಅಪರಾಧ ಹೊರಿಸುವ ನೀನು ನಿನ್ನ ಚಿಕ್ಕಪ್ಪ ತನ್ನ ಕೋಟಿನಲ್ಲಿ ನೋಟುಗಳನ್ನಿಟ್ಟುಕೊಂಡು ನಮ್ಮ ಮನೆಯಲ್ಲಿ ಕಾಲಿರಿಸಿದ್ದನ್ನೇನಾದರೂ ಕಂಡಿದ್ದಿಯಾ ? ಒಂದು ವೇಳೆ ಅವನ ನೋಟಿನ ಪುಡಿಕೆ

ದಾರಿಯಲ್ಲಿಯೇ ಏಕೆ ಬಿದ್ದಿರಬಾರದು?

ಸೋಮಣ್ಣ - ಛೇ ಅದು ಹ್ಯಾಂಗ ಅಂತಾ ಕೇಳತೀನಿ. ಇಷ್ಟಲ್ಲದ, ನಾನು ಕೋಟು ಕಳದ ಹಾಕೋವಾಗ ನೋಟ ನೋಡೆ ಮುಖಾ ತೊಳಿಲಿಕ್ಕೆ ಒಳಗ ಹೋಗೀನಿ

ಮಹೇಶ - ಈಗ ಆದದ್ದಾದರೂ ಏನು (ದಾಕ್ಷಾಯಣಿ, ಮಹಾಂತೇಶ, ಗೌರಮ್ಮ ಬರುವರು)

ಸರಸು - ಇನ್ನೇನಾಗಬೇಕು ? ಶೇಂಗಾಬೀಜ ಖರೀದಿ ಮಾಡಲೆಂದು ಬಂದ ನಮ್ಮ ಚಿಕ್ಕಪ್ಪನ ಕೋಟಿನಲ್ಲಿದ್ದ ನೋಟುಗಳನ್ನು ನಿಮ್ಮ ತಂದೆಯವರು ಕದ್ದು ಕೊಂಡಿದ್ದಾರೆ

ಮಹೇಶ - (ಸಿಟ್ಟಿನಿಂದ) ಸರಸು....

ಸರಸು - ಬೇಕಿದ್ದರೆ ಅವರನ್ನೆ ಪರೀಕ್ಷಿಸಿ

ಮಹಾಂತೇಶ - ನಮ್ಮ ತಂದೆ ಹಣ ಕದ್ದು ಕೊಂಡಿದ್ದನ್ನು ನೀನು ಪ್ರತ್ಯಕ್ಷವಾಗಿ ಕಂಡಿದ್ದಿಯಾ ಅತ್ತಿಗೆ

ದಾಕ್ಷಾಯಣಿ - ಗೌರವದಿಂದ ಬಾಳಿ ಬದುಕಿದ ಹಿರಿಯರಾದ ನಮ್ಮ ತಂದೆಯವರು ಪರಧನಕ್ಕೆ ಆಸೆ ಮಾಡುವವರಲ್ಲ. ಅತ್ತಿಗೆ ಕಾಣದ್ದನ್ನು ಕಂಡಂತೆ ಹೇಳುವೆಯಲ್ಲ

ಸರಸು - ಕಾಣದಿದ್ದರೇನಾಯಿತು, ಅವರು ಕೋಟು ಕಳಿದಿಟ್ಟು ಬಚ್ಚಲು ಮನೆಯಲ್ಲಿ ಮುಖ ತೊಳೆಯುವಷ್ಟರಲ್ಲಿ ಕೋಟಿನಲ್ಲಿದ್ದ ನೋಟು ಮಾಯವಾಗಿ ಬಿಟ್ಟವೆ ? ಇವರನ್ನುಳಿದು ಈ ಮನೆಯಲ್ಲಿ ಯಾರೂ ಬಂದಿಲ್ಲ, ಹೋಗಿಲ್ಲ. ಅಂದ ಮೇಲೆ ಇದ್ದ ಮೂವರಲ್ಲಿ ಕದ್ದವರು ಯಾರು ನೀವೇ ಹೇಳಿ

ಗೌರಮ್ಮ - ಏನು ಮಾತನಾಡುವೆಯಮ್ಮ ಸರಸು ? ನಿನ್ನ ಮಾವನವರ ಮೇಲೆ ನೀನೇ ಕಳವಿನ ಅಪರಾಧ ಹೊರಿಸುವದೇ ?

ಸರಸು - ಅಪರಾಧ ಮಾಡಿರುವದೇ ಸತ್ಯವಾಗಿರುವಾಗ ಅಪವಾದದ ಮಾತೆಲ್ಲಿ ಬಂತು ಅತ್ತೆ

ಮಹೇಶ - ಅಂದರೆ ನಮ್ಮ ತಂದೆ ಕಳವು ಮಾಡಿದ್ದೇ ಸತ್ಯವೆಂದು ಹೇಳುವೆಯಾ ?

ಸರಸು - ಇನ್ನೂ ಇದರಲ್ಲಿ ನಿಮಗೆ ಸಂದೇಹವೇ?

ದಾಕ್ಷಾಯಣಿ - ಏನು ಮಾತಣ್ಣ ಇದು. ತಂದೆಯವರು ಎಂದಾದರೂ ಕಳವು ಮಾಡುವವರೇ ?

ಸರಸು - ಕಳವು ಮಾಡುವವರಲ್ಲ, ಕಳವು ಮಾಡಿ ಬದುಕುವವರ ಮನೆಯ ಕುಲದೇವರು

ಮಹೇಶ - ಸರಸುವಿನ ಮಾತು ಸತ್ಯವೇನಪ್ಪ

ಕಲ್ಯಾಣ - ನಿನಗೂ ನನ್ನ ಮೇಲೆ ಸಂಶಯವೇ ಮಹೇಶ ?

ಮಹೇಶ - ಸಂಶಯದ ಮಾತಲ್ಲವಪ್ಪ, ಮನೆತನದ ಮರ್ಯಾದೆಗೆ ಸಂಬಂಧಪಟ್ಟ ಮಾತು. ಇವರೆಲ್ಲರ ಎದುರಿಗೆ ನಿನ್ನ ಜೇಬುಗಳನ್ನು ತೋರಿಸಿ ಕಳವು ಮಾಡಿಲ್ಲವೆಂದು ಸಿದ್ಧಪಡಿಸು, ಆ ಅಪವಾದದಿಂದ ಬಿಡುಗಡೆಯಾಗು

ಗೌರಮ್ಮ - ಇದೇನು ಮಾತಪ್ಪ ಮಹೇಶ ? ಮಡದಿಯ ಮಾತಿನ ಮೇಲೆ ವಿಶ್ವಾಸವಿಟ್ಟು

ಹಡೆದ ತಂದೆಯನ್ನೇ ಪರೀಕ್ಷಿಸುವೆಯಾ ? ವಡಲು ತೆರೆದು ಹಡೆದವರಿಗಿಂತ ಕೈ ಹಿಡಿದ ಮಡದಿಯೇ ನಿನಗೆ ಹೆಚ್ಚಾದಳೇ ?

ಕಲ್ಯಾಣ - ನೀನೇ ನೋಡು ಗೌರಿ, ಈ ಕಾಲಚಕ್ರದ ಪರಿಭ್ರಮಣೆಯನ್ನು. ಹೂವು ಮಾರಿದ ಸ್ಥಳದಲ್ಲಿ ಹುಲ್ಲಿನ ಮಾರಾಟ ನಡೆದ ಬಗೆಯನ್ನು. ಅನ್ಯರ ಮಾತಿಗೆ ಮನ್ನಣೆಯಿತ್ತು ಕಂದನೇ ತಂದೆಯನ್ನು ಪರೀಕ್ಷಿಸುವ ರೀತಿ, ಇದೇ ಕಲಿಯುಗದ ಕರ್ಮ ನೀತಿ

ಸರಸು - ಕಲಿಯುಗದ ಕಾಲ ಗರ್ಭದಲಿ, ಧರ್ಮ ಅಳಿದು ಕರ್ಮ ಬೆಳೆದದ್ದರಿಂದಲೇ ಹಣ ಕಳೆದುಕೊಂಡು ಹೆಣದಂತಿರುವ ನೀವು ಮನೆಗೆ ಬಂದ ಬೀಗರ ಜೇಬಿನಲ್ಲಿದ್ದ ಹಣವನ್ನೇ ಕದ್ದ ಮೇಲೆ ಹಿರಿತನವ ತುಳಿದು ಕಿರಿತನವು ತಲೆಯೆತ್ತುವದೇನಾಶ್ಚರ್ಯ. ಹೂಂ ನಿಂತಿರೇಕೆ ಸ್ವಾಮಿ ? ತಂದೆ-ತಾಯಿಗಳೆಂಬ ಮಮತೆಗೆ ಮನಸೋತು. ಮೊದಲು ನಿಮ್ಮ ತಂದೆಯವರ ಪರೀಕ್ಷೆಯಾಗಲಿ, ಆ ಮೇಲೆ ನಮಗೆ ಶಿಕ್ಷೆಯಾಗಲಿ

ಮಹೇಶ - ಅಪ್ಪಾ, ಅನಿವಾರ್ಯವಾಗಿಯಾದರೂ ನಾನು ನಿನ್ನನ್ನು ಪರೀಕ್ಷಿಸಲೇ ಬೇಕಾಯಿತು

ಗೌರಮ್ಮ - ಸರಸು! ನೀನು ನಮ್ಮ ಮನೆಯ ಹಿತಕಾರಿಯಾಗಿ ಬರಲಿಲ್ಲವಮ್ಮ, ಮಹಾಮಾರಿಯಾಗಿ ಬಂದಿ. ಕೊಟ್ಟ ಮನೆಗೆ ಕೀರ್ತಿ ಗೌರವ ತರುವದು ಸೊಸೆಯ ಕರ್ತವ್ಯವೆಂಬ ಮಾತನ್ನು ನೀನರ್ಥಮಾಡಿಕೊಳ್ಳದೆ ಹೋದೆಯಾ ಹೆಮ್ಮಾರಿ. ಊರಿಗೆಲ್ಲ ಉಡಾಳನೆಂದು ಪ್ರತೀತಿ ಪಡೆದ ಈ ನಿನ್ನ ಚಿಕ್ಕಪ್ಪನ ಮಾತೇ ನಿನಗೆ ವೇದ ವಾಕ್ಯವಾಗಬೇಕೆ ?

ಸರಸು - ನಾಲಿಗೆಯನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಿ ಅತ್ತೆ

ಮಹಾಂತೇಶ - ನಮ್ಮ ತಾಯಿ ತಂದೆಗಳಿಗೆ ಎದುರು ವಾದಿಸಲು ನೀನೆಷ್ಟರವಳು ಅತ್ತಿಗೆ! ಬಾಯಿಗೆ ಬಂದಂತೆ ಬೊಗಳಿದರ ನಿನ್ನ ನಾಲಿಗೆಯನ್ನೇ ಕತ್ತರಿಸಿ ಕೈಯಲ್ಲಿ ಕೊಟ್ಟೇನು. ಅಣ್ಣ ಬಾಯಿ ಸತ್ತವನೆಂದು ಬಲ್ಲಂತೆ ವರ್ತಿಸಿದರೆ ಪರಿಣಾಮ ಅನರ್ಥದಲ್ಲಿ ಮುಕ್ತಾಯಗೊಂಡೀತು

ಸರಸು - ತಂದೆಗೆ ಕಳುವು ಮಾಡುವಂತ ಪ್ರೇರೇಪಿಸಿ ಅಪರಾಧ ಮುಚ್ಚಲೆಂದು ತಾಯಿ ಮಗ ಪ್ರಯತ್ನಿಸುವುದನ್ನು ಅರಿಯದಷ್ಟು ಅಜ್ಞಾನಿಯಲ್ಲ ನಾನು. ನಡೆ ಚಿಕ್ಕಪ್ಪ, ಇಂತಹ ಹಗಲುಗಳ್ಳರ ಮನೆಯಲ್ಲಿರುವುದಕ್ಕಿಂತ ಈ ಸಹವಾಸ ಕಡಿದುಕೊಳ್ಳುವದೇ ಮೇಲು, ತಿಳಿಯಿತಲ್ಲ ಇವರ ಆಳ

ಕಲ್ಯಾಣ - ಮನೆಯ ಯಜಮಾನಿ ನೀನೇಕ ಹೋಗುವೆಯಮ್ಮಾ ? ನಿಮ್ಮ ಮಾನಕ್ಕೆ ಕುಂದು ತರುವ ನಾವೇ ಹೋಗುತ್ತೇವೆ. ನೀನು ನಿನ್ನ ಚಿಕ್ಕಪ್ಪ, ಈ ನಿನ್ನ ಪ್ರೀತಿಯ ಗಂಡ ಸುಖವಾಗಿರಿ (ಹೋಗ ಹತ್ತುವರು)

ಮಹೇಶ - ನಿಲ್ಲು ಅಪ್ಪ, ಸರಸು ನಿನ್ನ ನಡತೆ ಮಿತಿಮೀರಹತ್ತಿತು

ಸರಸು - ನಡತೆಯ ಪರೀಕ್ಷೆಯಾಗುವುದಾದರ ಈಗಲೇ ಈ ಕ್ಷಣವೇ ಆಗಿ ಹೋಗಲಿ.

ಹೂಂ, ಏನನ್ನುವಿರಿ?

ಮಹೇಶ - ಆಗಲಿ, ನಿನ್ನ ಮಾತಿನಂತೆ ತಂದೆಯನ್ನು ಪರೀಕ್ಷಿಸುವೆ. ಆ ಮೇಲೆ ಮುಂದಿನ ಮಾತು, ಎಲ್ಲೀ ಅಪ್ಪಾ ತೋರಿಸು ನಿನ್ನ ಎಲ್ಲ ಜೇಬುಗಳನ್ನ (ಹುಡುಕಿ ನೋಡಿ) ನೋಟಿನ ಪುಡಿಕೆ. ಅಪ್ಪಾ ಎಲ್ಲಿತ್ತು ನೋಟಿನ ಪುಡಿಕೆ?

ಸರಸು - ನೋಟಿನ ಪುಡಿಕೆ ನಮ್ಮ ಚಿಕ್ಕಪ್ಪನ ಜೇಬಿನಲ್ಲಿತ್ತು. ಕಳವು ಮಾಡಿದ್ದರಿಂದ ಈಗದು ನಿಮ್ಮ ತಂದೆಯವರ ಜೇಬಿನಲ್ಲಿ ಸಿಕ್ಕಿತು.

ಕಲ್ಯಾಣ - ಸುಳ್ಳು ಈ ಮೋಸಗಾರ್ತಿಯೇ ನನ್ನ ಜೇಬಿನಲ್ಲಿಟ್ಟಿರಬೇಕು

ಸರಸು - ಸಾಕು, ಬಾಯಿ ಮುಚ್ಚು ! ಕಳುವುಮಾಡಿದ ಅಪರಾದವನ್ನು ತಲೆಯ ಮೇಲೇ ಇಟ್ಟುಕೊಂಡು ಮತ್ತೆ ನಿಮ್ಮ ಹೇಸಿ ನಾಲಿಗೆಯನ್ನು ನುಡಿಸುವ ಹವ್ಯಾಸಕ್ಕಿಳಿಯಬೇಡಿ. ನೋಡಿ ಸ್ವಾಮಿ, ಪ್ರತ್ಯಕ್ಷ ಕಂಡದ್ದೂ ಆಯಿತು, ಪ್ರಮಾಣಿಸಿ ನೋಡಿದ್ದು ಆಯಿತು. ನಾನಿಷ್ಟು ಕಠೋರವಾಗಿ ತಂದೆಯನ್ನು ಸತ್ಕರಿಸುವದಾಗಲಿ ಇಲ್ಲವೇ ತಿರಸ್ಕರಿಸುವದಾಗಲಿ, ನಿಮ್ಮನ್ನೇ ಕೂಡಿದೆ

ಮಹೇಶ - ಅರ್ಥವಾಯಿತು, ಸರಸು ಅರ್ಥವಾಯಿತು. ಕಳುವು ಮಾಡಿದವನು ಹೆತ್ತ ತಂದೆಯಾದರೇನು ? ಜನ್ಮವಿತ್ತ ತಾಯಿಯಾದರೇನು ? ಮನೆಯ ಕೀರ್ತಿಗೆ ಕಲಂಕ ಹಚ್ಚಿದ ಈ ನೀಚನಿಗೆ ತಕ್ಕ ಶಾಸನ ಮಾಡುವೆ (ತಂದೆಯ ಮೇಲೇರಿ ಹೋಗುವನು)

ಸರಸು - (ಅಡ್ಡೈಸಿ) ತಡೆಯಿರಿ ದೊರೆ. ತಂದೆಯ ಮೇಲೆ ಕೈ ಮಾಡಿಸಿದವಳೆಂಬ ಅಪವಾದ ನನಗೆ ಬಂದೀತು ಶಾಂತರಾಗಿರಿ ! ಬೇಕಿದ್ದರೆ ನನ್ನನ್ನೇ..

ಮಹೇಶ - ನಿನ್ನ ಕೈಗಳು ಕತ್ತರಿಸಿ ಬೀಳಲಾರವೇ

ಸರಸು - ಇಲ್ಲ ನನ್ನ ರಾಜಾ! ನೀವು ನನ್ನ ಮೇಲಿಟ್ಟ ಪ್ರೀತಿಗೆ ನಾನು ನನ್ನ ಚರ್ಮವನ್ನೇ ಸುಲಿಸಿ ಮೆಟ್ಟ ಮಾಡಿಸಿ ನಿಮಗೆ ಸಲ್ಲಿಸಿದರೂ ಸಾಟಿಯಾಗಲಾರದು

ಮಹೇಶ - ಇಂತಹ ಸೌಜನ್ಯದ ಮೂರ್ತಿಯಾದ ನನ್ನ ಸತಿಯ ಮನಸ್ಸನ್ನು ನೋಯಿಸಿದ ನೀನು ನನ್ನ ತಂದೆಯಲ್ಲ ನರಕದಲ್ಲಿ ಅಲೆಯುವ ಹಂದಿ

ಗೌರಮ್ಮ - ಮಹೇಶ..

ಮಹೇಶ - ಕಳುವಿನಂತಹ ಹೀನ ಕೃತಿಗೈದ ಗಂಡನ ಭಂಡತನವನ್ನು ಮುಚ್ಚಲೆಂದು, ಧರ್ಮದೇವತೆಯಂತಿರುವ ನನ್ನ ಮಡದಿಗೆ ಬಲ್ಲಂತ ಬಿರುನುಡಿಗಳನ್ನಾಡಿ ಮಗನ ಸುಂದರ ಸಂಸಾರವನ್ನೇ ಹಾಳು ಮಾಡಲು ಸಿದ್ಧಳಾದ ನೀನು ನನ್ನ ತಾಯಿಯಲ್ಲ, ಸ್ವಾರ್ಥದ ನಾಯಿ

ಮಹಾಂತೇಶ - ಅಣ್ಣಾ!

ಮಹೇಶ - ಅಣ್ಣಾ ದುಡಿದದ್ದರಲ್ಲಿ ಅನ್ನ ತಿನ್ನುತ್ತ ನನ್ನ ಮನೆಯಲ್ಲಿ ಬಿದ್ದ ನೀನು ನನ್ನ ತಮ್ಮನಲ್ಲ,

ನನ್ನ ಭಾಗದ ಕರ್ಮ. ನಿಮ್ಮೆಲ್ಲರನ್ನು ಜೀವಂತ ಸುಟ್ಟರೂ ನನ್ನ ಸಿಟ್ಟು ಕಡಿಮೆಯಾಗಲಾರದು. ತಂದೆಯೇ ನೀನು ಚೋರಾ (ಮನಬಲ್ಲಂತೆ ಹೊಡೆಯುವನು)

ಸೋಮಣ್ಣ - (ಬಿಡಿಸುತ್ತ) ಎಂಥಾ ಪರಿ ಹುಚ್ಚ ಇದ್ದೀಯೋ ? ಎಲೆ ಮಹೇಶ, ಹಡೆದ ತಂದೆ ತಾಯಿಯ ಹೊಡೆದು ಯಾವ ನರಕಕ್ಕೆ ಹೋಗಬೇಕಂತ ಮಾಡಿಯೋ, ನೀನು. ಬಿಡು ಬಿಡು... ಹೀಗೆಲ್ಲ ಹುಚ್ಚುಚ್ಚಾರ ಮಾಡಬಾರದು. ಇದನ್ನು ಯಾರಾದರು ಕಂಡರೆ ಛೀ ಹಾಕಿ ಕೊಳ್ಳಾಗ ಚಿಪ್ಪ ಕಟ್ಯಾರು, ಮೊದಲ ವಯಸ್ಸಾದ ಜನ ! ಬಡಿಯೋದರೊಳಗೆ ನಾಲ್ಕೇಟು ಹೆಚ್ಚಿಗೆ ಬಿದ್ದು ಫಸಕ್ಕನ ಪ್ರಾಣ ಹೋತು ಅಂದ್ರ, ನಾಳೆ ಫಾಸಿ ಹೋಗೋ ಪಾಳೆ ಬಂದೀತು. ನನ್ನ ಮಾತು ಕೇಳಿಲ್ಲೆ ? ಏನ ಮಾಡಿದರೂ ತಲೀಲೆ ಮಾಡಬೇಕು, ಕೈ ಪ್ರಯೋಗ ಬುದ್ಧಿವಂತರ ಲಕ್ಷಣ ಅಲ್ಲಪ್ಪ ಬಿಡು

ಮಹೇಶ - ಇಲ್ಲ ಮಾವಾ, ಇವರೆಲ್ಲ ಸತ್ತು ಹೋದರೆ ಸಂತೋಷದಿಂದ ಅಂತ್ಯ ಸಂಸ್ಕಾರ ನೆರವೇರಿಸುತ್ತೇನೆ

ಸೋಮಣ್ಣ - ಏ ಬಾಳ ಚಂದ ಮಾತಾಡಲಿಕ್ಕ ಕಲ್ತೀಯಪ್ಪ. ಹುಡುಗ ಬಲು ಬುದ್ಧಿವಂತ ಇದ್ದಾನು ಅಂತಾ ಮಾಡಿದ್ದೆ. ಸದ್ಯ ವ್ಯಾಳ್ಯಾ ಚನ್ನಾಗಿಲ್ಲ ಯಲ್ಲಾರು ಇಷ್ಟಕ ಶಾಂತ ಆಗಿರಿ. ಈಗೇನು ಒಮ್ಮೆಲೇ ದೊಡ್ಡ ಅನಾಹುತ ಆಗಿಲ್ಲ. ನಡೆಯೋ ಮಹೇಶ ನೀ ಮದಲ ಹೊರಗ ನಡಿ... ತಂಗಿ ದಾಕ್ಷಾಯಣಿ, ನೀನು ಇಲ್ಲೆ ಇದ್ದು ಯಲ್ಲಾರನ್ನೂ ನೋಡುತ್ತಿರು (ಮಹೇಶನನ್ನು ಕರೆದುಕೊಂಡು ಹೋಗುವನು)

ಗೌರಮ್ಮ - ಸ್ವಾಮೀ... ಸ್ವಾಮೀ...

ಮಹಾಂತೇಶ - ಅಪ್ಪ ಅಪ್ಪ, ಸತ್ಯವಾಗಿಯೂ ನೀನೇ ಕಳವು ಮಾಡಿದೆಯಾ?

ಕಲ್ಯಾಣ - ಹೆತ್ತ ಮಗನೇ ತಂದೆಯಲ್ಲಿ ಸಂದೇಹಗೊಂಡು ಅಪ್ಪಾ... ಕಳವು ಮಾಡಿದೆಯಾ ಎಂದು ಕೇಳಿದ ಮೇಲೆ ಮಾಡಿಲ್ಲವೆಂದು ಹೇಳಿದರೆ ಲೋಕವೆಂತು ನಂಬುವುದು (ಹುಚ್ಚನಾಗಿ) ಕಳವು ನಾನು ಕಳ್ಳ ಹ... ಹ... ಹ..

ಗೌರಮ್ಮ - ನಿರಪರಾಧಿಗಳನ್ನು ಅಪರಾಧ ವಜ್ರಮುಷ್ಠಿಯಲ್ಲಿ ಹಿಡಿಯುವ ಶಕ್ತಿ ಲೋಕಕ್ಕಿಲ್ಲ ಸ್ವಾಮಿ...

ಕಲ್ಯಾಣ - ಗೌರಿ... ಈ ಮಾತಿನ ಮರ್ಮವನ್ನು ಹೊರ ಜಗತ್ತನ್ನೇ ಅರಿಯದ ನೀನೇನು ಬಲ್ಲಿ? ಈ ಮಾತಿನ ಮೂಲವನ್ನು ದೈವದ್ರೋಹಿಯಾದವನೊಬ್ಬನೇ ಬಲ್ಲ. ಚಿತ್ರದಲ್ಲಿದ್ದ ಹಂಸಪಕ್ಷಿ ಮುತ್ತಿನ ಮಾಲೆಯನ್ನು ನುಂಗಿದಾಗ ದೈವದ ವಿಪರ್ಯಾಸದಲ್ಲಿ ಬಳಲಿದ ವಿಕ್ರಮ ರಾಜನೊಬ್ಬ ಈ ಮಾತಿಗುತ್ತರಿಸಬಲ್ಲ. ಅಪಾರವಾದ ಸಂಪತ್ತನ್ನು ಕಳೆದುಕೊಂಡು ಮತಿವಿಕಳವಾಗಿ ಕಳವು ಮಾಡಿದನೆಂದು ಮಕ್ಕಳು ಸಂದೇಹ ಪಡುವಾಗ ಇನ್ನು ನಿರ್ದಯಿಯಾದ ಈ ಪ್ರಪಂಚ ನನ್ನಲ್ಲಿ ನಂಬಿಕೆ ಇಡುವದೇ...? ಇಲ್ಲ... ಇಲ್ಲಾ... ಇಂದಿಗೆ ಈ ಕಲ್ಯಾಣ ಶೆಟ್ಟಿಯ ಸರ್ವಸ್ವವೇ ನಿರ್ನಾಮವಾಗಿ ಹೋಯಿತು...

ನಾನಿಂದು ಎಲ್ಲ ರೀತಿಯಿಂದಲೂ ನಿರ್ಗತಿಕ

ಗೌರಮ್ಮ - ಇರಲಿ ಬಿಡಿ, ಇದೇನಿಂದು ನಿಮ್ಮ ನಡತೆ ನೋಡಿದವರು ಏನಂದಾರು?..

ಕಲ್ಯಾಣ - ಏನನ್ನುತ್ತಾರೆ, ಮಗನ ವಿದ್ಯಾಭ್ಯಾಸದ ಖರ್ಚಿಗಾಗಿ ಮನೆಗೆ ಬಂದ ಬೀಗರ ಹಣವನ್ನು ಕದ್ದ ಕಳ್ಳನೆಂದು ಹೇಳುತ್ತಾರೆ. ಸಮಾಜದಲ್ಲಿ ಅಗ್ರಸ್ಥಾನ ಪಡೆಯಬೇಕು ಎಂಬ ಕೀರ್ತಿಯ ದಾಹದಿಂದ ಸಂಪತ್ತನ್ನೆಲ್ಲ ಹಾಳುಮಾಡಿ ಮಡದಿ ಮಕ್ಕಳ ಕೈಯಲ್ಲಿ ಮಣ್ಣಿನ ಕುಡಿಕೆ ಕೊಟ್ಟು ಹೋದ ಕಟುಕನೆಂದು ಜರಿಯುತ್ತಾರೆ... ಕಳ್ಳ... ನಾನು... ಕಳ್ಳ..

ಮಹಾಂತೇಶ - ಅಪ್ಪ ಅದೇನೆ ಇರಲಿ, ಸದ್ಯ ನೀನು ಸುಮ್ಮನೇ ಮಲಗಪ್ಪ; ನಾನೆಲ್ಲವನ್ನೂ ವಿಚಾರಿಸುತ್ತೇನೆ. ಎಲ್ಲಿ ನೀನಷ್ಟು ಸುಮ್ಮನೇ ಮಲಗು (ಎಲ್ಲರೂ ಮಲಗಿಸುವರು) ಅಲ್ಲಮ್ಮ ಇನ್ನಾರ ಮನೆಯಿಂದಲೋ ಬೀಗರ ಸಲುವಾಗಿ ತಂದ ಆ ಅಕ್ಕಿಯನ್ನು ಅವರಿಗೇ ಕೊಟ್ಟು ಬಂದು ಬಿಡಮ್ಮ ಹೋಗು (ಗೌರಮ್ಮ ಹೋಗುವಳು) ತಂಗಿ ನೀನ ಒಳಗೆ ಅಪ್ಪನಿಗಾಗಿ ಒಂದು ಕಪ್ಪು ಕಾಫಿ ಮಾಡಮ್ಮ (ದಾಕ್ಷಾಯಣಿ ಒಳಗೆ ಹೋದನಂತರ ಮಹಾಂತೇಶ ತನ್ನ ರೂಮಿಗೆ ಹೋಗುವನು)

ಹಿನ್ನೆಲೆ - ಕಲ್ಯಾಣ... (ಎದ್ದು ಕೂಡುವನು) ಇನ್ನೂ ನಿನಗೆ ಬದುಕಬೇಕೆಂಬ ಆಸೆಯಿದೆಯೇ. ಪ್ರಾಣಕ್ಕಿಂತಲೂ ಅಧಿಕವಾದ ಮಾನವನ್ನು ಕಳೆದುಕೊಂಡು ಶ್ವಾನನಂತೆ ಬದುಕುವ ಲಾಲಸೆಯೇ?

ಕಲ್ಯಾಣ - ಇಲ್ಲಾ ನನಗೆ ಬದುಕುವ ಆಸೆ ತಿಲಮಾತ್ರವೂ ಇಲ್ಲ

ಹಿನ್ನೆಲೆ - ಹಾಗಿದ್ದರೆ... ಆತ್ಮ ಹತ್ಯೆಮಾಡಿಕೋ. ನಿರ್ದಯ ಪ್ರಪಂಚಕ್ಕೆ ಈ ನಿನ್ನ ಹಾಳು ಮುಖವನ್ನು ಮತ್ತೊಮ್ಮೆ ತೋರಿಸಬೇಡ. ಮಾನವೇ ಹೋದ ಬಳಿಕ ಪ್ರಾಣಕ್ಕೇನು ಬೆಲೆ? ಬೇಕಿದ್ದರೆ ಹೊಸ ಜಗತ್ತಿನ ಕೂಗನ್ನಷ್ಟು ಕೇಳು. (ಒಳಗೆ) ಕಲ್ಯಾಣಶೆಟ್ಟಿ ಕಳ್ಳ, ಕಳವು ಮಾಡಿದ ಚೋರ, ಬೀಗರ ಜೇಬಿನಲ್ಲಿದ್ದ ಹಣವನ್ನು ಹಾರಿಸಿದ ಕಳ್ಳ - (ಎಂಬ ಧ್ವನಿ ಬರುತ್ತದೆ.) ಕೇಳಿದೆಯಾ?

ಕಲ್ಯಾಣ - ಕೇಳಿದೆ... ಕರ್ಣಪಟಲ ಹರಿಯುವಂತೆ ಕೂಗಿದ ಆ ಧ್ವನಿ ಕೇಳಿದೆ. ಆದರೆ... ಕೊನೆಗೂ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೇ... ವಿಧಿ ನನ್ನ ಹಣೆಯಲ್ಲಿ ಇದನ್ನೇ ಬರೆದಿರುವನೇ?

ಹಿನ್ನೆಲೆ - ಆದರ ಹೊರತು ಬೇರಾವ ದಾರಿಯೂ ನಿನ್ನ ಪಾಲಿಗೆ ಉಳಿದಿಲ್ಲ. ಇದನ್ನು ಬಿಟ್ಟರೆ ವಿಧಿ, ನಿನ್ನ ಹಣೆಯಲ್ಲಿ ಬೇರೇನೂ ಬರೆದಿಲ್ಲ. ಹೂ ಮುಚ್ಚಿಟ್ಟುಕೊಂಡು ಆ ವಿಷವನ್ನು ಕೈಗೆತ್ತಿಕೊ... ಎಂಟು ದಿನದಿಂದಲೂ ಸಾಲಗಾರರ ಸಂಕಟ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳ ಬಯಸಿ ದೊರಕಿಸಿ ತಂದು ಜೇಬಿನಲ್ಲಿಟ್ಟುಕೊಂಡಿದ್ದ ವಿಷವನ್ನು ಕೈಗೆತ್ತಿಕೊ (ವಿಷವನ್ನು ಕೈಯಲ್ಲಿ ಹಿಡಿದುಕೊಳ್ಳುವನು) ನೋಡು ಮೃತ್ಯುವಿನ ಬಳಿ ಕರದೊಯ್ಯುವ ಈ ವಿಷವೆ ಇಂದು ನನಗೆ ಅಮೃತ ಸ್ವರೂಪ, ಗಟ್ಟಿ ಮನಸ್ಸು ಮಾಡಿ ಗಂಟಲಿಗೆ

ಸುರಿವಿಕೊ... ಹೂಂ... ಸರುವಿಕೋ (ಕುಡಿದು ಒದ್ದಾಡುತ್ತ ಬೀಳುವನು)

## ...ಹಿನ್ನೆಲೆಯಲ್ಲಿ ಹಾಡು...

ಮರಣ ಬಂದರೆ ಬರಲಿ ನಗುವಿನೊಳಗೈತರಲಿ।
ಕನಿಕರದಿ ಕಂಬನಿಯು ಹರಿಯುತಿರಲಿ॥
ಸಿರಿ ಇರಲಿ। ದುರ್ಮರಣ ವೀರೀತಿ ಬಾಳಿನಲಿ
ಬರೆದಿರಲಿ॥

ಸಿರಿ ಅಳಿದು ಬಡತನವು ಬಂದರೂ ಬರಲಿ ।
ಅದು ಜಯಲೆಳಸುವ ಹುಚ್ಚು ಮನಕಿರಲಿ ।
ಕಷ್ಟದಲಿ ಸುಖದಲ್ಲಿ ನಿಷ್ಠೆಯನ್ನು ಬಿಡದಿರುವ ಕೆಚ್ಚು
ನಮಗಿರಲಿ ॥

ದಾಕ್ಷಾಯಣಿ - (ಕಾಫಿ ತಂದು) ಅಪ್ಪಾ... ಅಪ್ಪಾ... (ಸಂಕಟಪಡುವ ತಂದೆಯನ್ನು ಕಂಡು ಅಂಜಿ ಕಪ್ಪನ್ನು ಕೈಬಿಟ್ಟು) ಅಣ್ಣಾ, ಅಮ್ಮಾ...

ಮಹಾಂತೇಶ - (ಬರುತ್ತ) ಏನಾಯಿತಮ್ಮಾ?

ದಾಕ್ಷಾಯಣಿ - ಅಪ್ಪಾ (ತೋರಿಸುವಳು)

ಮಹಾಂತೇಶ - (ನೋಡಿ ಗಾಬರಿಯಿಂದ) ಅಪ್ಪಾ (ಗೌರಮ್ಮ ಬರುವಳು) ಏನಾಯಿತಪ್ಪ... ಇದೇನು ಈ ರೀತಿ ಪ್ರಾಣ ಹಾರಿ ಹೋಗುವಂತೆ ಸಂಕಟ ಪಡುವಿರೇಕೆ ?

ಗೌರಮ್ಮ - ಸ್ವಾಮಿ... ಏನಾಗಿದ... ಸ್ವಾಮಿ

ಕಲ್ಯಾಣ - (ಸಂಕಟ ಪಡುತ್ತ ತೊದಲು ಧ್ವನಿಯಲ್ಲಿ) ಸಾವು ಸಮೀಪಿಸುತ್ತಿದೆ... ಹ... ಹರಣವನ್ನು ಕರೆದೊಯ್ಯುವದಕ್ಕಾಗಿ ಮರಣ ತೋರಣ ಕಟ್ಟುತ್ತಿದೆ. ಗೌರಿ... ಕಳುವಿನಂತಹ ಹೇಸಿ ಅಪವಾದವನ್ನು ಹೊತ್ತು ಮುಖ ತೋರಿಸಲು ಅಂಜಿ ವಿಷಪಾನ ಮಾಡಿದೆ

ಗೌರಮ್ಮ - ಆ... ವಿಷ... ವಿಷಪಾನ ಮಾಡಿದಿರಾ... ಸ್ವಾಮಿ... ಕಂದಾ ಮಹಾಂತೇಶ..

ಮಹಾಂತೇಶ - ಏನಾಯಿತಮ್ಮ ಕೊನೆಗೂ ನಮ್ಮ ಪಾಡು..

ಗೌರಮ್ಮ - ನಿಮ್ಮ ತಂದೆಯವರು ವಿಷಪಾನ ಮಾಡಿ ನಮ್ಮನ್ನೆಲ್ಲ ಅನಾಥರನ್ನಾಗಿ ಮಾಡಿದರಪ್ಪ ಮಹಾಂತೇಶ... ಮಗೂ ದಾಕ್ಷಾಯಣಿ

ಮಹಾಂತೇಶ - ತಡೆ ಅಮ್ಮಾ, ಬೇಗ ಡಾಕ್ಟರನ್ನಾದರೂ.... (ಹೋಗುವಾಗ)

ಕಲ್ಯಾಣ - ಮಹಾಂತೇಶ... ಬಾ... ಇಲ್ಲಿ ನಿನ್ನ ಡಾಕ್ಟರರು ಬರುವಷ್ಟರಲ್ಲಿ ನಾನು ಇಲ್ಲಿರುವುದಿಲ್ಲ ಕೊನ ಗಳಿಗೆಯಲ್ಲಿ ನೀನು ಅಗಲಿ ಹೋಗಬೇಡ ಗೌರೀ ಬಾ ಇಲ್ಲಿ ಮಗು (ಅವರಿಬ್ಬರ

ಕೈಯನ್ನು ಮಹಾಂತೇಶನ ಕೈಯಲ್ಲಿಟ್ಟು) ಇದೋ ನಿನ್ನ ತಾಯಿ, ಈ ಚಿಕ್ಕ ತಂಗಿಯನ್ನು ನಿನ್ನ ಕೈಯಲ್ಲಿ ನಾನು ಕೊಟ್ಟು ಹೊರಟಿದ್ದೇನೆ. ಕಂದ ನಿನ್ನ ಈ ತಂದೆ ಸಾಯುವಾಗ ನಿನಗೇನನ್ನೂ ಕೊಡಲಾರದವನಾದೆ. ಅಲ್ಲದೆ ಇವರ ಭಾರವನ್ನು ಚಿಕ್ಕವನಾದ ನಿನ್ನ ಮೇಲೆ ಹೇರಿದ್ದೇನೆ. ಸತ್ಪುತ್ರನಾದ ನೀನು ಮಹಾ ಸಾಧ್ವಿಯಾದ ನಿನ್ನ ತಾಯಿಯ ಮನಸ್ಸನ್ನು ನೋಯಿಸಬೇಡ. ಹೋಗು ಬರುವೆ ಗೌರಾ... ದಾಕ್ಷಾಯಣಿ... ಮಹಾಂತೇಶ... ಮಹೇಶ... ಸರಸ... ಮ್ಮಾ...

(ಸಾಯುವ ರೋದನ)

ಗೌರಮ್ಮ - ಸ್ವಾಮಿ... ಸ್ವಾಮೀ... (ಮಹೇಶ, ಸೋಮಣ್ಣ ಬರುವರು) ಕಂದಾ ಮಹೇಶ ನಿನ್ನ ತಂದೆ ನಮ್ಮನ್ನು ಪರದೇಶಿಗಳನ್ನಾಗಿ ಮಾಡಿ ಮರಳಿ ಬಾರದ ಮರಣದೂರಿಗೆ ಹೋದರಪ್ಪ (ದುಃಖ)

ಮಹೇಶ - (ಸಿಟ್ಟಿನಿಂದ) ಏನಾಗಿದೆ ನಿಮಗೆ? ಹೀಗೇಕೆ ಮನೆಯ ಛಾವಣಿ ಹಾರಿ ಬೀಳುವಂತೆ ಗೋಳು ಹೊಯ್ಯುವಿರಿ

ದಾಕ್ಷಾಯಣಿ - ಅಣ್ಣಾ... ತಂದೆಯವರು ವಿಷಪಾನ ಮಾಡಿ ಸತ್ತು ಹೋದರಣ್ಣಾ

ಮಹೇಶ - ಸಾಯಲಿ, ಸಂತೋಷದಿಂದ ಇವನ ಹೆಣವನ್ನು ಮಣ್ಣಲ್ಲಿ ಹೂಳಿ ಸ್ನಾನ ಮಾಡುತ್ತೇನೆ

ಸೋಮಣ್ಣ - ಎಲಾ ಹುಚ್ಚ ಮುಂಡೆಗಂಡಾ ! ನೋಡೋ ತಂದೆ ಸಾಯುವಾಗ ಸಿಟ್ಟೇನೋ... ಬಾ... ಅಯ್ಯೋ ಜೀವ ಹೋಗಿಯೇ ಬಿಟ್ಟಿದೆಯಲ್ಲೋ? ಬೇಗ ಬಾರೋ ಅಂತಿಮ ದರ್ಶನ ತಗೋಳೋ ಪಿತೃದೇವೋಭವ ಅಂತ ಹೇಳಿದೆಯೋ ಶಾಸ್ತ್ರ...

ಮಹೇಶ - ಆ ಪಾಪಿಯ ಮುಖದರ್ಶನ ನನಗಿಷ್ಟವಿಲ್ಲ ಮಾಮಾ...

ಗೌರಮ್ಮ - ಸ್ವಾಮಿ ನನ್ನ ಸೌಭಾಗ್ಯವೇ. ನಮ್ಮನ್ನಗಲಿ ಹೋದಿರಾ ? ಈಗಲಾದರೂ ನಿನ್ನ ಹೃದಯ ಶಾಂತವಾಯಿತೇನಪ್ಪ. ಹಡೆದ ತಂದೆಯ ಅಂತಿಮ ದರ್ಶನಕ್ಕೂ ನಿನ್ನ ಮನ ಕರಗಲಿಲ್ಲವೆ ? ಹೋಗಿ ಈ ಸಾವಿನ ಸೂತಕದಲ್ಲಿ ದಂಪತಿಗಳಿಬ್ಬರೂ ಸಂತೋಷದಿಂದ ಸುಖ ಭೋಜನ ಮಾಡಿರಿ. ಸ್ವಾಮಿ..

ಮಹಾಂತೇಶ - ಅಪ್ಪಾ...

ದಾಕ್ಷಾಯಣಿ - ಅಪ್ಪಾ... ಅಪ್ಪಾ...

# ದೃಶ್ಯ - ೨

## ಜಂಗಲ್ ಬೀದಿ

ಹನಮಂತಿ - ಈ ನನ್ನ ಶೆಟ್ಟಿಗೇನ ಮಾಡ್ಲಿ ಅಂತೀನಿ ಮನಿ ಕಡಿ ಕಾಳಜಿ ಒಂಜರಾನರ ಬ್ಯಾಡ. ಸೇಂಗಾದ ಬೀಜಾ ಖರೀದಿ ಮಾಡಿ ಕೊಂಡು ಬರತೀನಿ ಅಂತಾ ಹೋಗಿ ಆರು ದಿನ ಆಗಾಕ ಬಂತು, ಮನಿಗೆ ಹೋಗಿ ಧ್ವಜಾ ಊರಿದಾ ಅಂದ್ರ ಮನೀನ ಮರೀತಾನ. ಇವ ಬರಲಿ, ಎಂದ ಬರತಾನ ಬರ್ಲಿ. ನಾನರ ಏಟಂತ ಮಾಡಬೇಕು ? ಎಷ್ಟು ಮಾಡಿದರ ತಾನ ನಾ ಏನು ಮಾಡಿಕೊಂಡ ಹೇಣತಿಯಂಗ ಆಗೂದೂ ಆಟರಾಗ ಐತಿ

ಯಲ್ಲಪ್ಪ - (ಬರುತ್ತ) ಏನವ್ವ ಹನಮವ್ವ ಹೊಲಕ ಹೋಗಿದ್ದೇನು...

ಹನುಮಂತಿ - ಹೂನಪ್ಪ ಹೊಲಕ ಹೋಗಿದ್ದೆ. ನೀನು ?

ಯಲ್ಲಪ್ಪ - ನಾನೂ ಅದಕ ಹೋಗಿದ್ದೆ, ಅಲ್ಲಾ ಮತ್ತ ಶೆಟ್ಟರು ಬಂದ್ರೇನು?

ಹನಮಂತಿ - ಇನ್ನ ಇಲ್ಲ ನೋಡ ಯಲ್ಲಪ್ಪ, ಅವಾ ಊರ ಬಿಟ್ಟು ಆರು ದಿನದ ಹೊತ್ತು ಆತು... ಮನಿ ಕಡೆ ಒಂದೀಟರ ಕಾಳಜೀ ಬ್ಯಾಡಾ... ನಾ ಒಬ್ಬಾಕೆ ಎಷ್ಟಂತ ಸಾಯಬೇಕು?

ಯಲ್ಲಪ್ಪ - ಎಲ್ಲಾ ತ್ರಾಸು ಐತವ್ವ ಪರಪಂಚ, ಯಾಕ ಶೆಟ್ಟರ ಅಣ್ಣನ ಮಗ ಶಿವಪ್ಪ ಇಲ್ಲೇನು? ಕಳಸಬೇಕು ಅವನ್ನ ಹೊಲಕ

ಹನುಮಂತಿ - ಅಯ್ಯ! ಅವ ಹಂಗ ಹೊಲಾ ಮನಿ ಅಂತಾ ಚಿಂತಿ ಮಾಡಿದ್ರ ಹೊತ್ತಿಲ್ಲ ಹೊತ್ತಿನಾಗ ನಾಯಾಕ ಹೀಂಗ ತಿರಗತಿದ್ದಾ ಯಲ್ಲಪ್ಪ. ಹುಡುಗ ಹಾದ್ಯಾಗ ಇಲ್ಲ

ಯಲ್ಲಪ್ಪ - ಹೌದವ್ವ ನನ್ನ ಕಿವಿಗೂ ಜರಾ ಬಿದ್ದೈತಿ. ಹಾರಿಕಿ ಸುದ್ದಿ, ಊರನ್ನ ಉಡಾಳರನ್ನೆಲ್ಲ ಕಟಕೊಂಡು ಊರ ಹೊರಗ ಇರೋ ಮಾವಿನ ತೋಪಿನಾಗ ಇಸಪೇಟ ಆಡತಾನಂತ ನಿಮ್ಮ ಶಿವಪ್ಪ

ಹನಮಂತಿ - ಹೌದು, ಹೀಂಗಂತ ನನಗೂ ಶೆಟ್ಟೀನ ಹೇಳಿದ, ಈಟ ಇರಾಕ ಹೀಂಗ. ಮುಂದ ಹ್ಯಾಂಗಪ್ಪ ಯಲ್ಲಪ್ಪ? ಇವಗ ಹೆಣ್ಣರ ಕೊಡವರ ಯಾರು?

ಶಿವಮೂರ್ತಿ - (ಬರುತ್ತ) ಹೆಣ್ಣು ಸಿಗಲಿಲ್ಲಾ ಅಂತ ಥಣ್ಣಗ ಇದ್ದ ಬಿಡು ಹನಮವ್ವ, ಅಂದ್ರ ನೀ ಸತ್ತ ಮ್ಯಾಲೆ ನಿನ್ನ ಹೆಣಕ ಸಿಂಗಾರ ಮಾಡಿ ಸಿದಗಿ ಬಿಗಸ್ತೀನಿ. ಹೆಣ್ಣ ಹುಡಕಿ ನನ್ನ

ಕಣ್ಣಿಗೆ ಮಣ್ಣು ಹಾಕೋ ಕಾರಭಾರ ಮಾತ್ರ ಮಾಡಬ್ಯಾಡ

ಹನಮಂತಿ - ಏನ ಮಾಡತೀಯಪ ನೋಡ ನೀನೂ ಒಂದೀಟು ...

ಶಿವಮೂರ್ತಿ - ಅವ ಏನ ನೋಡತಾನ ? ಅವನೋಡೋದು ಮಾಡೋದು ಎಲ್ಲ ನಿಮ್ಮ ಹತ್ರ

ಯಲ್ಲಪ್ಪ - ಸಣ್ಣ ಶೆಟ್ಟರು ಹಾದೀ ಬಿಟ್ಟು ಮಾತಾಡತಾರ ನಾನರ ಏನ ಹೇಳ್ಳವ್ವ

ಶಿವಮೂರ್ತಿ - ನೀ ಹೇಳೋದು ಬ್ಯಾಡ. ನೀ ಏನರ ಹೇಳೋದಿದ್ರ ಇಗಾ... ಇವರಿಗೆ

ಹನುಮಂತಿ - ಅದು ಇರ್ಲಿ ಈಗ ಇತ್ತಾಗ ಹೊಂಟೈತಿ ಸವಾರಿ ?

ಶಿವಮೂರ್ತಿ - ಹೌದು ಮಾವಿನ ತೋಪಿಗೆ ಹೊಂಟೈತೆ

ಹನುಮಂತಿ - ಯಾಕ ?

ಶಿವಮೂರ್ತಿ - ಇಸ್ಪೇಟು ಆಡಾಕ

ಹನುಮಂತಿ - ಕೇಳದೇನಪ್ಪ

ಯಲ್ಲಪ್ಪ - ಕೇಳಿನೇ ಯವ್ವ ಕೇಳಿಸಿ. ಅವರಿಗೆ ಹೇಳೋದು ನಿಂತೈತೆ. ಅಲ್ಲಾ ಶೆಟ್ಟರ... ನಿಮ್ಮ ಮನೆತನ ಎಂಥಾದು, ಏನಕಥಿ ನಮ್ಮಪ್ಪ ನಿಮ್ಮ ಕಾಕಾ ಹ್ಯಾಂಗ ನಡಕೊಂಡರು ಅನ್ನೋದು ನೋಡಿ ಮನಿ ಮಾನಾ ಹೆಚ್ಚ ಮಾಡಬೇಕು

ಸೋಮಣ್ಣ - (ಬರುತ್ತ) ಇವ ಏನು ಹೆಚ್ಚ ಮಾತಾಡತಾನಲೇ ? ಇವ ಹೆಚ್ಚು ಮಾತಾಡೋದು ತಿಳಿದೈತಿ. ಇಲ್ಲೇ ನೋಡು ನಮ್ಮಣ್ಣನ ಕಾಲಕ್ಕೆ ಇದ್ದ ಮರ್ಯಾದೆ ನನಗುಳಿಲಿಲ್ಲ. ನಂದರಾಗಿಂದು ಒಂದು ಅರ್ಧಾನರ ಇವಗ ಉಳಿದರ ಅದ ದೊಡ್ಡದು

ಶಿವಮೂರ್ತಿ - ನನಗಂತ ನೀ ಉಳಿಸಿದಾಗ ಹೌದಲ್ಲ... ಅದು ಉಳಿಯೋದು

ಸೋಮಣ್ಣ - ಎಲೆ ಶಿವಮೂರ್ತಿ ನಾವು ಮರ್ಯಾದಿಗೆ ಕುಂದ ಆಗಲಾರದಂಗ ಬಾಳೇ ಮಾಡಿಕೊಂಡು ಬಂದೀವಿ. ಬೇಕಾದ್ರ ನಮ್ಮದೆಲ್ಲಾ ನೋಡಿಕೊಂತ ಬಂದ ಯಲ್ಲ ನಿಂತಾನ ಕೇಳವನ್ನ

ಶಿವಮೂರ್ತಿ - ಖರೇವದ ಕಾಕಾ ಹಾಗಲಕಾಯಿ ಬೇವಿನಕಾಯಿಗೆ ಸಾಕ್ಷಿ ಅಂದಂಗ ನಿನ್ನ ಬಗ್ಗೆ ಏನಾರ ಚೊಲೊ ಅಂತಾ ಹೇಳಬೇಕಾದರ ಈ ಯಲ್ಲಪ್ಪನೇ ಹೇಳಬೇಕು

ಸೋಮಣ್ಣ - ನೋಡಲೆ ಯಲ್ಲಾ ಈ ಹುಡುಗ ಎದರ ಮಾತಾಡೋವರ ಕಾಲಾಗ ನಮಗ ಸಾಕಾಗಿ ಹೋಗೇತಿ ನೋಡು

ಹನುಮಂತಿ - ಇರಲಿಬಿಡು, ಹುಡುಗನ ಮಾತೇನು? ನೀ ಊರಿಗೆಂತ ಹೋದಾವ ಅತ್ತಾಗ ಹೋಗೂದೇನು ? ಕಲ್ಲ ಒಗದಂಗ ಮುದುಕ ಅದಿ ಮಸಿ ಕಡೆ ಒಂದೀಟರ ಕಾಳಜಿ?

ಸೋಮಣ್ಣ - ಪ್ರಸಂಗ ಹಾಂಗ ಬಂತ ನಾನರ ಏನ ಮಾಡಲಿ? ಹನಮಂತಿ ನಾ ಹೋದ ದಿನಾನ ನಮ್ಮ ಸರಸೂನ ಮಾವ ತೀರಿಕೊಂಡ

ಹನಮಂತಿ - ಆ? ಏನಂದಿ ಕಲ್ಯಾಣಪ್ಪನವರು ಹೋಗಿಬಿಟ್ರಾ? ಏನಾಗಿತ್ತ ಈಗ ಮೂರ ತಿಂಗಳದ ಹಿಂದೆ ಬಂದಾಗ ಎಂಥಾ ಬೇಸಿ ಇದ್ರು. ಅದು ಹ್ಯಾಂಗ ಸತ್ತರು ?

ಶಿವಮೂರ್ತಿ - ಜೀವ ಹೋದ ನೆವ ಆಗಿ ಸತ್ತರಂತ

ಸೋಮಣ್ಣ - ಏನ ಅವಿವೇಕಿ ಇದ್ದಿಯೋ ಶಿವಮೂರ್ತಿ

ಶಿವಮೂರ್ತಿ - ಮತ್ತೇನೋ ಕಾಕಾ ? ಹ್ಯಾಂಗ ಸತ್ರು ಅಂದ್ರ ಏನ ಹೇಳ ಬೇಕು, ಯಾಕ ಸತ್ರು ಅಂದ್ರ ಹೇಳ್ಯಾರಪ್ಪ

ಸೋಮಣ್ಣ - ಹೂ... ಅದೇನೋ ಅಂದ್ರಪ-ಹಾಂ ಹಾರ್ಟಫೇಲು ಆಗಿ ಸತ್ರ ಅಂದ್ರ ಎದಿ ಒಡದು..

ಯಲ್ಲಪ್ಪ - ಯಾಕರಿ ಅಂತಾದೇನು ಬಂದಿತ್ತು. ಅವರಿಗೆ ಎದಿವಡದು ಸಾಯೋದಕ?

ಶಿವಮೂರ್ತಿ - ಕೈಯಾನ ಗಂಟ ಖಲಾಸ ಆಗಿತ್ತು. ಶ್ರೀಮಂತಿಕಿ ಇದ್ದಾಗ ನಂದೇನು ನಮ್ಮಪ್ಪಂದೇನು ಅಂತಾ ಮರದಾಡಿದ ಮಂದಿ ದುಡ್ಡು ತೀರಿಂದ ಬದಕೂದು ಬಾಳಾ ಜಡಾ ಯಾಕಪಾ ಕಾಕಾ?

ಸೋಮಣ್ಣ - ಏ ನೀನು ಬಾಳ ಹುಷಾರಿ ನೋಡಪ. ಶಿವು ನಮ್ಮಮನ್ಯಾಗ ಚಾಣಾಕ್ಷ ಮರಿ ಅಂದ್ರ ನೀನು

ಯಲ್ಲಪ್ಪ - ಎಪ್ಪ ಶೆಟ್ರ ತಂದೀ ತಾಯಿ ಇಲ್ಲದ ಮಗಾ ಅಂತಾ ಈ ಶಿವಪ್ಪನಾರನ್ನ ಮ್ಯಾಕ ಓದಿಸಲಾರದ ನೀವ ಅವರನ್ನ ಹಾದಿ ತಪ್ಪಸಾಕ ಹತ್ತೀರಿ. ನಿಮ್ಮಂಜಿಕಿ ಇದ್ರ ಇವರ್‍ಯಾಕ ಮಾವಿನ ತೋಪಿನೊಳಗ ಇಸಪೆಟ್ಟ ಆಡತ್ತಿದ್ದರು

ಶಿವಮೂರ್ತಿ - ಯಾಕಲೆ ಮಗನ ? ಯಲ್ಲ ನನಗ ಬುದ್ಧೀ ಹೇಳಾಕ ಬಂದೀಯಾ?

ಹನಮಂತಿ - ಅಯ್ಯ ಹಾಂಗ ಅನಬಾರದಪ್ಪ ನನ್ನ ಮಗನ, ನಿನ್ನ ಮೂರು ಪಟ್ಟು ದಿವ್ಯ ಆದ ಮನಿಶ್ಯಾ, ಯಲ್ಲಪ್ಪ ಅಂದ್ರ ಬಾಳ ಸಂಭಾವಿತ

ಶಿವಮೂರ್ತಿ - ಹನಮವ್ವ ಇಂತಾ ಸಂಭಾವಿತರ ಸೋಗ ಹಾಕಿದವರು ಮಂದಿಮನಿ ಹಾಳುಮಾಡುವವರು. ಇವನ ಬಾಯಿ ಆಟ ಸವಿ ಐತಿ ಬಂದವರಿಗೆಲ್ಲ ಎದ್ರ್ಯಾ ಯಣ್ಣಾ, ಯದ್ರ್ಯಾ ಯವ್ವ ಅಂತಾ ಕೈಮುಗದ ಮಳ್ಳಮಾಡಿ ನಂಬಿದವರ ಹೆಡಕ ಮುರೀತಾರ. ಹ್ಯಾಂಗಸಿಂತಾನ ನೋಡ ಮುಗ ಸೀರ ನಾಯಿಯಂಗ ಮುಖಮಾಡಿಕೊಂಡು. ಬೇಕಾದ ಕಡೆ ತಿರಗಿಸಿ ನೋಡ್ರಿ ಮಗನ ರೂಪೇನು ? ಅಪರೂಪ, ಎಲೆ ಎಲ್ಲಾ ದೇವರು ನಿನ್ನ ಹುಟ್ಟುಸುವಾಗ ತನ್ನ ಬುದ್ಧೀನ ಎಲ್ಲೆರ ಒತ್ತಿ ಇಟ್ಟಿರಬೇಕು ಯಾಕಲೆ?

ಸೋಮಣ್ಣ - ಏನು ಅವಿವೇಕಿ ಆದಲೆ ಶಿವ್ಯಾ ನೀನು? ಯಾರ ಮನೆತನದಾಗ ಹುಟ್ಟೀದಿ ಅನ್ನೂದರ ಖಬರ ಐತೇನಲೆ ನಿನಗ? ನಮ್ಮಂಥ ದೊಡ್ಡ ಮನೆತನಸ್ತರ ಘರಾಣೆದಾಗ ಹುಟ್ಟಿ ಎಂತಹ ಹೀನತನ ಕಲ್ತೀಲೇ ? ಊರ ಉಡಾಳರನ್ನ ಕಟ್ಟಿಕೊಂಡು ಇಸ್ಪೇಟ

ಆಡೋ ಹೊಲಸ ಚಟಾನ?

ಶಿವಮೂರ್ತಿ - ಅಬಾಬಾ ನನಗ ಬುದ್ಧಿ ಹೇಳತೀಯಲ್ಲಪ್ಪ ಕಾಕಾ. ನಿಂದಿಷ್ಟು ತೋಳಕೊಳೋ ಸೂರಾ. ಮಂದಿ ಅಂತಾರಂತ ನೀನು ದೊಡ್ಡ ಮನಿಶ್ಯಾನ ಅಂತಾ ತಿಳಿಕೊಂಡಿಯ ಹ್ಯಾಂಗ?

ಯಲ್ಲಪ್ಪ - ಏನಪ ಶಿವಣ್ಣಾ, ಇದು ಕಾಸ ನಿಮ್ಮ ಚಿಗಪ್ಪಗ ಹೀಂಗ ಮಾತಾಡೋದ ?

ಶಿವಮೂರ್ತಿ - ಚಿಕ್ಕಪ್ಪ ಆದರೇನು, ಅಪ್ಪ ಆದರೇನು ? ತಪ್ಪು ಮಾಡಿದ್ದ ಖರೇ ಇರೋವಾಗ ಮಾತಾಡಾಕ ಬಂದಿರೋದು ಏನು? ಮನಿ ದೀಪಾ ಅಂತ ಯಾರಾದರೂ ಮುದ್ದ ಕೊಡತಾರೇನು. ಕಾಕಾ ಮದಲ ನಿನ್ನ ಹಂಗಮದಾಗ ಹನಮಂತ ದೇವರ ಗುಡಿಯಾಗ ಪಗಡಿ ಯಾಡತೀಸಿ ಅಂತಾ ಹೇಳಿ, ಅಲ್ಲಿ ಈ ಹನಮವ್ವನ ಪಲಿಸಿಕೊಂಡಿ. ಇಕಿ ಕೈಲೇನ ಇಕಿ ಗಂಡಗ ವಿಷಾ ಹಾಕಿ ಮನ್ಯಾಗ ಇಟಿಗೊಂಡ ಕುಂತಿ. ನೀ ಮಾಡಿದ ಪುಣ್ಯದ ಕೆಲಸದಾಗ ಇದು ಮದಲನೇದ್ದು. ಯಾಕಪ್ಪ ಇಷ್ಟಾದರೂ ಊರಮಂದಿಯಲ್ಲಾ ನಿನಗ ದೊಡ್ಡ ಮನಿಶಾ, ಸಂಭಾವಿತ ಅಂತಾ ಶರಣ ಹೊಡೀತಾರಲ್ಲ, ಇದನ್ನು ಕಂಡ ನನಗೆ ಅಗಾಧ ಅನಸತ್ತ

ಸೋಮಣ್ಣ - ಇರಲಿ ನಡಿಯ ದೊಡ್ಡ ಮನಶಾ, ನಾವಂತೂ ಘಟಿಂಗರು. ಆತಲ್ಲ, ಈಗರ ನಡಿ, ಮದಲ ಮನಿ ಕಾಣೂನು ದಾರಿ ನಡದ ನನಗೂ ಸಾಕಾಗೇತಿ. ಇಂತಾದರಾಗ ನಿನ್ನ ಕೂಡ ಎಲ್ಲಿ ಮಾತಗಿಳಿಲಿಳಲಿ ನಡಿ

ಶಿವಮೂರ್ತಿ - ನೀನು ಹೋಗು, ನಾ ಈಗ ಮನಿ ಬಿಟ್ಟ ಬಂದೀಸಿ. ನಾ ಇನ್ನ ಬರೂದು ಸಂಜಿಕೆ. ಅದೂ ಬಂದರ ಬಂದ್ಯಾ ಬರಲಿಕ್ರ ಇಲ್ಲ. ನನ್ನ ಹಾದಿ ಮಾತ್ರ ಕಾಯಬ್ಯಾಡ ಹೂ ಹೋಗಿರಿ (ಹೋಗುವನು)

ಸೋಮಣ್ಣ - ನೋಡಿದೇನಪ ಯಲ್ಲ, ಹುಡುಗ ಮುಂಡೆಮಗ ಹ್ಯಾಂಗ ಮಾತಾಡಿ ಹೋದ

ಹನಮಂತಿ - ಅವ ಏನ ಅಲ್ಲದ್ದು ಮಾತಾಡಿದ ನೀ ಹಾಂಗ ಮಾಡಿದ್ದು ಖರೇ ಐತಿ. ಅವಾ ಕಂಡದ್ದು ಆಡಿದರ ನೀಯಾಕ ಕೆಂಡದಂಗ ಮಕಾ ಮಾಡತೀ?

ಸೋಮಣ್ಣ - ನೀನು ಇಷ್ಟೆಲ್ಲ ಆ ಮಂಗನ್ನ ಏರಿಸಿ ಕೂಡಿಸಿದಾಕಿ ನೋಡಲೀ ಯಲ್ಲಾ ? ಇವರಿಬ್ಬರ ಕೈಯಾಗ ನಾನು ಇಕ್ಕಳದಾಗ ಸಿಕ್ಕಿ ಇಲಿ ಆಗೀಸಿ

ಹನಮಂತಿ - ನೀ ಒಳ್ಳೆ ಇಲಿ ಆದಿ, ಯಾವದರ ಬ್ಯಾಟಿ ಸಿಕ್ಕರ ಹಾರಿ ತಿನ್ನೋ ಹುಲಿ ಇದ್ದಾಂಗ ಅದಿ

ಸೋಮಣ್ಣ - ಏ ಹೋಯಿಮಾಲಿ ನಿನ್ನ ಸಲುವಾಗೇ ನಾನಿಷ್ಟು ಸಣ್ಣವನಾದೆ. ಊರ ಮಂದಿ ಕಣ್ಣಾಗ ನೀನು ಎಂದು ನನ್ನ ಪದರಿಗೆ ಬಿದ್ದಿ ಅವತ್ತ ನನ್ನ ಬುದ್ದೀನ ಮಸಿ ನುಂಗಿತು

ಹನಮಂತಿ - ಅವ್ವ ಅವ್ವ ನಾ ಹ್ಯಾಂಗ ಮಾಡಲ್ಲ? ಏ ಶೆಟ್ಟಿ ನೆಟ್ಟಗ ಮಾತಾಡು. ಪಗಡಿ ಆಡಾಕ ಕಲಸ್ತೀಸಿ ಅಂತಾ ಹೇಳಿ, ನನ್ನ ಮಳ ಮಾಡಿ ಕಳ್ಳ ಹಾಲು ಕುಡಿಯಾಕ

ಹಚ್ಚಿದಿ. ಮತ್ತ ಈಗ ನನಗ ಗುರ್ರ ಅಂತಿಯಾ?

ಯಲ್ಲಪ್ಪ - ಇರಲಿ ಬಿಡು ಹನುಮವ್ವ... ಮಿಂಚಿ ಹೋದ ಮಾತಿಗೆ ಚಿಂತಿ ಮಾಡಿದರೆ ಬಂತೇನು? ನೀವ ಹೀಂಗ ಒದರ್ಯಾಡಿದರ ದಾರಿ ಹೋಗೋ ಮಂದಿ ನಿಮ್ಮ ಮಾರಿ ನೋಡಿ ನಕ್ಕಾರು

ಹನಮಂತಿ - ನಗೂವಂಗ ಆತು ನನ್ನ ಬಾಳೆ (ಅಳುವಳು) ಈ ಶೆಟ್ಟಿ ನನ್ನ ಹಾಳ ಮಾಡಿದ್ರ ಯವ್ವಾ

## ಪದ

ಬಾಳಿನ ಕನಸು । ಬಯಸಿತು ಮನಸು ।

ಬಯಕೆಗೆ ಸೋತು । ಬಲಿಯಾಯಿತು ।

ಗಂಡನ ಬಿಡಿಸಿ! ಮಾಡಿತು ಫಾಸಿ!

ಮಾತಿನ ಫಾಸಿ! ತಿಳಿಯದ ಪ್ರೇಯಸಿ ।

ಬಂದೆನು ಇವರ ಅನುಸರಿಸಿ ॥

ಸೋಮಣ್ಣ - ಅಳಬ್ಯಾಡ ಹನುಮಂತಿ ನಿನ್ನ ಕಣ್ಣಾಗ ನೀರ ಬಂದ್ರ ನನ್ನ ಹೊಟ್ಯಾಗ ಸಂಗಟ ಆಗತ್ತ

ಯಲ್ಲಪ್ಪ - ನಡಿರಿ ಶೆಟ್ರ, ನಡಿ ಹನುಮವ್ವ, ನಿಂತಂತೆಲ್ಲ ಬಿಸಲ ಬಲೀತೈತಿ ನಡ್ರಿ (ಹೋಗುವರು)

# ದೃಶ್ಯ - ೩

## ಮನೆ ಸೀನು

(ಸರಸು ಗಂಟು ಮುಖ ಮಾಡಿ ಕುರ್ಚಿಯಲ್ಲಿ ಕುಳಿತಿರುವಳು. ಆಗ ದಾಕ್ಷಾಯಣಿ ಒಳಗಿನಿಂದ ಬಂದು)

ದಾಕ್ಷಾಯಣಿ - ಅತ್ತಿಗೆ ಅಣ್ಣಾ ನಿನ್ನನ್ನು ಕರೆಯುತ್ತಿದ್ದಾರೆ (ಸರಸು ಮೌನ) ಬಾ ಅತ್ತಿಗೆ

ಸರಸು - ಇರಲಿ ಹೋಗೇ ನಾನು ಬರವದಿಲ್ಲವೆಂದು ನಿನ್ನ ಅಣ್ಣನಿಗೆ ತಿಳಿಸು

ದಾಕ್ಷಾಯಣಿ - ಕಾಫಿ ಆರಿ ಹೋಗುತ್ತದೆ ಬಾ ಅತ್ತಿಗೆ. ನಿನ್ನನ್ನು ಬಿಟ್ಟು ಕುಡಿಯಲಿಕ್ಕೆ ಯಾರೂ ಸಿದ್ಧರಿಲ್ಲ

ಸರಸು - ದಾಕ್ಷಾಯಣಿ ನಮ್ಮ ಯಾವ ಮಾತಿನಲ್ಲಿಯೂ ನೀನು ಭಾಗವಹಿಸದೇ ಸುಮ್ಮನೇ ನಿನ್ನಷ್ಟಕ್ಕೆ ನೀನಿದ್ದು ಬಿಡು... ಹೋಗು ನಾನು ಬರಲಾರನೆಂದು ನಿಮ್ಮಣ್ಣನಿಗೆ ಹೇಳಿ ಬಿಡು

ದಾಕ್ಷಾಯಣಿ - ಆಗಲಮ್ಮ (ಒಳಗೆ ಹೋಗುವಳು)

ಸರಸು - ನಾನಿನ್ನು ಸುಮ್ಮನಿರುತ್ತ ಹೋದರೆ ಈ ಹತ್ತು ವರ್ಷದ ಹುಡುಗಿಯೂ ಮನೆಯಲ್ಲಿ ಹಿರಿತನ ಪ್ರಾರಂಭಿಸಬಹುದು. ಆದಷ್ಟು ಇವಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು

ಮಹೇಶ - (ಬಂದು) ಸರಸು, ನೀನು ಹೀಗೆಲ್ಲ ಸಣ್ಣ ಮಕ್ಕಳಂತೆ ಹಟಮಾಟುತ್ತ ಕುಳಿತರೆ ನಾನೇನು ಮಾಡಬೇಕು?

ಸರಸು - ಅದನ್ನೇ ನಾನು ಕೇಳುವದು, ಅಲ್ಲ ನಾನು ನನ್ನ ತವರು ಮನೆಯಿಂದ ತಂದ ಆಭರಣಗಳನ್ನು ನಿಮ್ಮ ಮನೆಯ ಆಪತ್ತಿಗೆ ಎಷ್ಟಂತ ಮಾರಲಿಕ್ಕೆ ಕೊಡಬೇಕು?

ಮಹೇಶ - ಮನೆಯ ಆಪತ್ತಿಗೆಂದು ನಿನ್ನ ಯಾವ ಆಭರಣ ಮಾರಿದ್ದೇನೆ?

ಸರಸು - ಅದನ್ನೆಲ್ಲ ನಿಮಗೆ ನಾನೆಷ್ಟು ಸಲ ಹೇಳಿಕೊಡಬೇಕು. ಈ ಮನೆಗೆ ನಡೆಯಲು ಬಂದ ಆರು ತಿಂಗಳಲ್ಲಿಯೇ ನಿಮ್ಮ ತಂದೆಯವರ ಮೇಲಿದ್ದ ಸಾಲದ ವಾರಂಟು ರದ್ದುಗೊಳಿಸಲೆಂದು ನಮ್ಮ ಚಿಕ್ಕಪ್ಪ ಮಾಡಿಸಿ ನನ್ನ ಕೊರಳಲ್ಲಿ ಹಾಕಿದ ಚಪಲ ಹಾರವನ್ನು ಕೈಯಲ್ಲಿಯ ಚಿನ್ನದ ಬಳೆಗಳನ್ನು ಮಾರಿದಿರಿ

ಮಹೇಶ - ಅದು ಗತಿಸಿದ ತಂದೆಯವರು ಮಾಡಿದ ಅಪರಾಧ. ಈಗ ಆ ಮಾತೇಕೆ ?

ಸರಸು - ಇದಲ್ಲದೇ ಹೋದ ಸಲ ನಿಮ್ಮ ತಮ್ಮ ಪರೀಕ್ಷೆಗೆ ಕಟ್ಟಲು ಹಣವಿಲ್ಲವೆಂದು

ಒತ್ತಾಯ ಮಾಡಿ, ನನ್ನ ಚಿಕ್ಕಪ್ಪ ನನಗೆಂದು ಕೊಟ್ಟಿದ್ದ ಎಲ್ಲ ಹಣವನ್ನು ಪಡೆದಿರಿ. ನಂತರ ನಿಮ್ಮ ತಂದೆಯವರು ತೀರಿಕೊಂಡಾಗ ಸಾಲವಾಗಿದೆಯೆಂದು ಅತ್ತು ಕಾಡಿ ನನ್ನ ಮುತ್ತಿನ ಓಲೆಗಳನ್ನು ಒಯ್ದಿರಿ. ಸಿಕ್ಕಂತೆ ಮಾರಿದಿರಿ

ಮಹೇಶ - ನಿನ್ನ ಮುತ್ತಿನ ಓಲೆಗಳನ್ನು ನಾನು ಮಾರಿಲ್ಲ ಸರಸು. ತಂದೆಯವರ ದುರ್ಮರಣದ ಆಪತ್ತಿನಿಂದ ಪಾರಾಗಲು ಐನೂರು ರೂಪಾಯಿಗಳಲ್ಲಿ ನಿನ್ನ ಮುತ್ತಿನೋಲೆ ಒತ್ತಿಯಾಗಿ ಇಟ್ಟು ಹಣ ಪಡೆದಿರುವೆ. ಈ ತಿಂಗಳ ಕೊನೆಗೆ ಬಿಡಿಸಿ ತಂದು ಮತ್ತೆ ನಿನ್ನ ಕಿವಿಯನ್ನಲಂಕರಿಸುವೆ, ಆಯಿತೋ?

ಸರಸು - ಹೀಗೆಲ್ಲ ನಾನು ನಂಬಬಹುದೇ? ಒಂದು ವೇಳೆ ತಿಂಗಳ ಕೊನೆಗೆ ನಿಮ್ಮಿಂದ ತಂದು ಕೊಡುವದಾಗದಿದ್ದರೆ?

ಮಹೇಶ - ಹೀಗೆಲ್ಲ ಹಟ ಹಿಡಿದರೆ ಒಳ್ಳೆಯದಲ್ಲ ಸರಸು... ತಂದೆಯವರು ತೀರಿಕೊಂಡಿನ್ನೂ ಮಾಸ ಕೂಡಾ ಉರುಳಿಲ್ಲ. ಅವರ ಉತ್ತರ ಕ್ರಿಯಾದಿಗಳಿಗೆ ಮಾಡಿದ ಖರ್ಚಿನಿಂದ ಕೈ ಬರಿದಾಗಿ ಹೋಗಿದೆ. ಸರಸು ಈಗಾದ ಸಾಲವನ್ನ ನೋಡಿದರೆ ನನ್ನ ಮುಂದಿನ ತಿಂಗಳ ಸಂಬಳವೂ ಕೂಡಾ ನನ್ನ ಕೈಸೇರದೆಂದು ಕಾಣುತ್ತಿವೆ. ಹೀಗಿದ್ದಾಗ ನಿನ್ನ ಮುತ್ತಿನ ಓಲೆ ಹೇಗೆ ತಂದು ಕೊಡಲಿ?

ಸರಸು - ಮುತ್ತಿನ ಓಲೆ ತರದೇ ಈ ರೀತಿ ಸುತ್ತಿ ಬಳಸಿ ಮಾತನಾಡುವದೆಲ್ಲ ನನಗರ್ಥವಾಗುತ್ತದೆ. ಇದೋ ಇಲ್ಲಿ ಕೇಳಿ ಇವತ್ತು ನನ್ನ ಮುತ್ತಿನೋಲೆ (ಅಲ್ಲಿ ಗೌರಮ್ಮ ಬಂದಿರುವಳು) ನನ್ನ ಕೈಗೆ ಬರದೇ ಈ ಮನೆಯಲ್ಲಿ ತುತ್ತು ಬಾಯಲ್ಲಿರಿಸಲಾರೆ ಉಪವಾಸವಿದ್ದು ಬಿಡುವೆ

ಗೌರಮ್ಮ - ದಯವಿಟ್ಟು ಹೀಗೆಲ್ಲ ಹಟ ಮಾಡಬೇಡ ಸರಸು ಇನ್ನೆರಡು ತಿಂಗಳ ಅವಕಾಶ ಕೊಡು. ಆ ಒಳಗಾಗಿ ತಂದುಕೊಡುತ್ತಾರೆ.

ಸರಸು - ಇಷ್ಟು ದಿನ ನೋಡಿದ್ದಾಯಿತಲ್ಲ. ಇನ್ನು ಮೇಲೆ ಪದ್ಯ ರಚಿಸಿ ಹಾಡುವದಷ್ಟು ಉಳಿದಿದೆ

ಗೌರಮ್ಮ - ಏನಮ್ಮ ಸರಸು ಹೀಗೆ ಹಟಮಾಡಿದರೆ ಖರ್ಚಿನ ಮೇಲೆ ಖರ್ಚು ಮಾಡಿ ಕೈ ಸುಟ್ಟುಕೊಂಡ ಗಂಡನಿಗೆ ಮುತ್ತಿನ ಓಲೆ ತಂದು ಕೊಡೆಂದು ಹಟ ಹಿಡಿದರೆ ಪಾಪ ಅವನೇನು ಮಾಡಬೇಕು?

ಸರಸು - ಅದನ್ನು ಕೇಳೋದಕ್ಕೆ ನೀನ್ಯಾರ?

ಗೌರಮ್ಮ - ನಾನಾರು! ಸರಿಹೋಯಿತಮ್ಮ... ಇದೆಂತಹ ಮಾತನ್ನು ಆಡಿದೆಯೇ ಸರಸು

ಸರಸು - ಇರುವ ಮಾತನ್ನೇ ಆಡಿದೆ. ಇಲ್ಲದ ಮಾತನ್ನು ನಾನೆಂದೂ ಆಡಿಲ್ಲ. ನನ್ನ ಗಂಡನಿಗೆ ಬೇಕಾದುದನ್ನು ತಂದು ಕೊಡೆಂದು ಹೇಳುವ ಹಕ್ಕು ನನಗಿದೆ. ಅದನ್ನು ಕೇಳಲಿಕ್ಕೆ ನೀನಾರು ಅಂದೆ

ಗೌರಮ್ಮ - ನಾನು... ಸರಸು ನಿನ್ನ ಗಂಡನಿಗೆ ರಕ್ತ ಬಸಿದು ಜನ್ಮಕೊಟ್ಟ ಮಾತೆ. ಮಹೇಶನಿಂದ ಬೇಡಿ ಪಡೆಯುವ ಹಕ್ಕು ನಿನಗಿದ್ದರೆ, ಅದನ್ನು ಬೇಡವೆಂದು ಬಡಿದು ಬಿಡಿಸುವ ಅಧಿಕಾರ ಹಡೆದವಳಾದ ನನಗಿದೆ. ಒಟ್ಟಾರೆ ನೀನು ನಿನ್ನ ತಂದೆ ತಾಯಿಗಳಂತೆ ಗುಣವಂತೆಯಲ್ಲ. ನಿನ್ನ ತಮ್ಮನೇ ಹೇಳುವಂತೆ ಮುಂಗೋಪಿ ಇರುವದೇ ನಿಜ. ಬಲಿತ ಈ ನಿನ್ನ ಹೀನ ಬುದ್ಧಿಯನ್ನು ತಿದ್ದುವ ಕಾಲವೂ ಮುಗಿದು ಹೋಗಿದೆ. ಮುಖ್ಯ ನನ್ನ ಮಗನ ದೈವ ಕೆಟ್ಟದ್ದು

ಸರಸು - ನಿಮ್ಮ ಮಗನ ದೈವಕೆಟ್ಟಿಲ್ಲ. ಇಷ್ಟಕ್ಕೆಲ್ಲ ಕಾರಣ ನನ್ನ ಹೀನ ಅದೃಷ್ಟ. ನಮ್ಮ ಮನೆಯ ಅನ್ನ ತಿಂದು ಬೆಳೆದು ಕಂಡವರ ಮನೆಯಲ್ಲಿ ಹೀನಾಮಾನಾ ಬೈಯಸಿಕೊಳ್ಳುವದು

ಮಹೇಶ - ಇದು ಯಾರ ಮನೆಯೆಂದು ತಿಳಿದುಕೊಂಡಿರುವಿಯೇ ಹುಚ್ಚಿ... ಇದು ನಿನ್ನ ಮನೆಯಲ್ಲವೆ ಏನು?

ಸರಸು - ಇದು ನನ್ನ ಮನೆಯಾಗಿದ್ದರೆ ನಾನೆಲ್ಲಿ ನಿಮ್ಮ ತಾಯಿಯ ಕೈಯಲ್ಲಿ ಬೈಯಸಿಕೊಳ್ಳುತ್ತಿದ್ದೆ. ಹೇಳಿ (ಅಳು) ಇದೋ ಈಗಲೇ ಸ್ಪಷ್ಟವಾಗಿ ಹೇಳಿ ಬಿಡುತ್ತೇನೆ. ಇನ್ನು ಮೇಲಿಂದ ಈ ಮನೆಯಲ್ಲಿ ನಿಮ್ಮ ತಾಯಿ ಇರಬೇಕು ಒಂದು, ಇಲ್ಲವೇ ನಾನಿರಬೇಕು ಒಂದು

ಗೌರಮ್ಮ - ಇದೇನೇ ಸರಸು, ಮನೆಯೆರಡಾಗಬೇಕೆಂದು ಹೇಳುವೆಯೇ? ಮಹೇಶ ನಾನಿನ್ನೂ ಸತ್ತಿಲ್ಲವಲ್ಲಪ್ಪ

ಸರಸು - ನೀನು ಸತ್ತರೇನು ಬದುಕಿದರೇನು ಅದರಿಂದ ನನಗೇನಾಗಬೇಕು?

ಗೌರಮ್ಮ - ನಿನ್ನಿಂದ ನನಗೇನು ಆಗಬೇಕಾದುದಿಲ್ಲ. ಆದರೆ ನನ್ನ ಹಿರಿಯ ಮಗನಿಂದ ನನಗಾಗಬೇಕಾದ ಕೊನೆಯ ಕಾರ್ಯ ಒಂದಿದೆ ಸರಸು. ಹಿರಿಯ ಮಗನ ಕೈಯಿಂದಲೇ ಆಗಬೇಕಲ್ಲ ಮಾತೆಯ ದೇಹಕ್ಕೆ ಕೊನೆಯ ಸಂಸ್ಕಾರ (ಮಹೇಶ ಒಳಗೆ ಹೋಗುವನು)

ಸರಸು - ಹಿರಿಯ ಮಗನ ಕೈಯಲ್ಲಿ ಆಗದಿದ್ದರೂ ಕಿರಿಯ ಮಗನಿದ್ದಾನಲ್ಲ ಕುಲಪುತ್ರ. ವಿದ್ಯಾವಂತ... ಅವನಷ್ಟು ಈ ನಿಮ್ಮ ಮುದಿ ದೇಹಕ್ಕೆ ಮೂರು ಹಿಡಿ ಮಣ್ಣು ಹಾಕಲಾರನೇನು?

ಗೌರಮ್ಮ - ಮಹೇಶ ಏನಾಯಿತಪ್ಪ ನಿನ್ನ... ತಾಯಿಯ ಬಾಳು ಮಹೇಶಾ..

ಸರಸು - ಮಹೇಶಾ... ಎಂದು ಕೂಗಿದ ತಕ್ಷಣ ಓಡಿ ಬರಲಿಕ್ಕೆ ಕೊಟ್ಟಿದ್ದಿರೇನು ಹಣಾನ ಎರಡು ಸಾವಿರ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ನಿಮಗೊಪ್ಪಿಸಿ, ನಿಮ್ಮ ಮಗನನ್ನಿಂದೋ ಕೊಂಡುಕೊಂಡಿದ್ದೇನೆ. ಹೂ ಹೊರಟು ಹೋಗಿ. ಇಲ್ಲಾಂದ್ರೆ... (ದೂಕಿ ಬಿಡುವಳು. ಗೌರಮ್ಮ ಬೀಳುವಾಗ ದಾಕ್ಷಾಯಣಿ ಕೊಡ ಹೊತ್ತು ಕೊಂಡು ಬರುತ್ತ)

ಗೌರಮ್ಮ - ಮಾಂತೇಶ...

ದಾಕ್ಷಾಯಣಿ - ಅಮ್ಮಾ... (ಕೊಡವನ್ನು ಚೆಲ್ಲಿ ತಾಯಿಯ ಬಳಿಗೆ ಬರುವಳು)

ಸರಸು - ಕೊಡವನ್ನು ಹಾಳು ಮಾಡಿದೆಯಲ್ಲೇ ಗಯ್ಯಾಳಿ. (ಹೊಡೆಯುವಳು)

ದಾಕ್ಷಾಯಣಿ - ಅಮ್ಮಾ...

ಗೌರಮ್ಮ - ಮಗೂ... (ಕೊಡ ತೆಗೆದುಕೊಂಡು ಸರಸು ಒಳಗೆ ಹೋಗುವಳು. ಮಹಾಂತೇಶ ಬರುವನು)

ಮಹಾಂತೇಶ - ಅಮ್ಮಾ ಏನಾಯಿತಮ್ಮಾ... ಇದೇನಮ್ಮಾ ನಿನ್ನ ಹಣೆಯಲ್ಲಿ ರಕ್ತ

ದಾಕ್ಷಾಯಣಿ - ಅತ್ತಿಗೆ, ಅಮ್ಮನನ್ನು ಒಡೆದು ಬಲವಾಗಿ ನೂಕಿದಳಣ್ಣಾ...

ಮಹಾಂತೇಶ - ಹೌದೇನಮ್ಮಾ ?

ಗೌರಮ್ಮ - ಅವಳು ನೂಕಿಲ್ಲವಪ್ಪ?

ಮಹಾಂತೇಶ - ಹಾಗಾದರೆ ಮತ್ತಾರು ನೂಕಿದರಮ್ಮ ?

ಗೌರಮ್ಮ - ದೈವ... ದೈವ ನೂಕಿ ಆಳವಾದ ಗೋಳಿನ ಕಂದಕದಲ್ಲಿ ಕೆಡವಿದೆಯಪ್ಪ ಮಹಾಂತೇಶ

ಮಹಾಂತೇಶ - ನಡೆಯಮ್ಮಾ, ಮೊದಲು ಪೆಟ್ಟು ತಾಕಿ ಹಣೆಯಿಂದ ಹರಿದು ಬರುವ ರಕ್ತ ಸ್ರಾವವನ್ನು ನಿಲ್ಲಿಸಲು ಅರಿಷಿಣ, ಕುಂಕುಮ ಹಚ್ಚುತ್ತೇನೆ

ಗೌರಮ್ಮ - ಅರಿಷಿಣ, ಕುಂಕುಮ ನನ್ನ ಹಣೆಗೆ... (ನಕ್ಕು) ಕಂದಾ ಅರಿಷಿಣ, ಕುಂಕುಮ ಹಚ್ಚಿಕೊಳ್ಳುವ ಸೌಭಾಗ್ಯವನ್ನು ಕಳೆದುಕೊಂಡು ಇಂದಿಗೆ ದಿನ ಹದಿನೈದು ಗತಿಸಿದವು ಮಗನೇ ಆ ಮಂಗಲಪ್ರದ ವಸ್ತುಗಳನ್ನು ಕೈಯಿಂದ ಮುಟ್ಟುವ ಅಧಿಕಾರವೂ ನನಗುಳಿದಿಲ್ಲ

ಮಹಾಂತೇಶ - ಅತ್ತಿಗೆ

ಸರಸು - (ಬಂದು) ಏಕೆ?

ಮಹಾಂತೇಶ - ನನ್ನ ತಾಯಿಯ ಮೇಲೆ ಕೈ ಮಾಡಲು ನೀನು ಯಾರು?

ಸರಸು - ಅಷ್ಟು ದಿಟ್ಟತನದಿಂದ ನನ್ನನ್ನು ಕೇಳುವ ನೀನು ಯಾರು?

ಮಹಾಂತೇಶ - ನಾನು ನಿನ್ನ ಮೈದುನ. ನಿನ್ನ ಕೈ ಹಿಡಿದು ಯಾರು ಈ ಮನೆಗೆ ಕರೆತಂದರೋ ಅವರ ಬೆನ್ನ ಹಿಂದೆ ಹುಟ್ಟಿಬಂದ ತಮ್ಮ. ಅರ್ಥಾತ್ ಈ ಮನೆಯ ಕಿರಿಯ ಯಜಮಾನ

ಸರಸು - ಸರಿ, ಇದಕ್ಕೆ ನಾನೇನು ಮಾಡಲಿ?

ಮಹಾಂತೇಶ - ಅತ್ತಿಗೆ... ಇಂತಹ ಉದ್ಧಟತನ ನಮ್ಮ ಮನೆಯಲ್ಲಿ ನಡೆಯಗೊಡಲಾರೆ. ನೀನೀಗಲೇ ನಮ್ಮ ಮನೆ ಬಿಟ್ಟು ಹೊರಟು ಹೋಗು ಹೂ..

ಸರಸು - ಹೋಗೆಂದಾಗ ಹೋಗುವುದಕ್ಕೂ ಬಾ ಎಂದಾಗ ಬರುವದಕ್ಕೂ ನಾನು ನಿಮ್ಮಣ್ಣನ ಬೆನ್ನು ಹತ್ತಿ ಬಂದವಳಲ್ಲ. ಎರಡು ಸಾವಿರ ಹಣವನ್ನು ನಿಮ್ಮ ಆಪತ್ಕಾಲದಲ್ಲಿ ನಿಮಗಿತ್ತು ನಿಮ್ಮ ಮೇಲೆ ಹಕ್ಕು ಸ್ಥಾಪಿಸಿಕೊಂಡವಳು

ಮಹಾಂತೇಶ - ಏನೇ ರಾಕ್ಷಸಿ, ಸಿಕ್ಕಂತೆ ಮಾತಾಡುವೆಯಾ? (ಬಡಿಯಲು ಹೋಗುವನು)

ಗೌರಮ್ಮ - ಮಗು ಮಗು, (ಬಿಡಿಸಿ) ಅವಳ ಮೇಲೆ ಕೈ ಮಾಡಬಾರದಪ್ಪ ಅವಳು ನಿನ್ನ ಅತ್ತಿಗೆ ತಾಯಿ ಇದ್ದಹಾಗೆ

ಮಹಾಂತೇಶ - ಅತ್ತಿಗೆಯಾದರೇನಾಯಿತಮ್ಮ ಹೆತ್ತಮ್ಮನ ಹಣೆಯಲ್ಲಿ ರಕ್ತ ಹರಿಸಿದರೂ ಸುಮ್ಮನಿರಬೇಕೆ?

ಗೌರಮ್ಮ - ಹರಿಯಲೇಬೇಕಾದ ರಕ್ತ ಹರಿದಿದೆಯಪ್ಪ. ಈಗ ಮೂವತ್ತು ವರ್ಷಗಳ ಹಿಂದೆ ನಿನ್ನ ತಂದೆಯವರ ಹೊಡೆತದಿಂದ ಅಂದೇ ಹಣೆಯಲ್ಲಿ ರಕ್ತ ಹರದಿತ್ತು. ಆಗ ಅವರು ತವರು ಮನೆಯಿಂದ ಸಾಕಷ್ಟು ಬಂಗಾರ ತರಲಿಲ್ಲವೆಂದು ಹೊಡೆದು ರಕ್ತ ಹರಿಸಿದರು. ಅಂದವರ ಮಾತಿನಲ್ಲಿದ್ದ ಸಾರ ತವರು ಮನೆಯ ಬಂಗಾರ. ಮೂವತ್ತು ವರ್ಷಗಳ ನಂತರ ಈಗ ಮತ್ತೆ ಅದೇ ಮಾತಿನ ಪುನರಾವತಾರ. ತವರಿಸಿಂದ ಬಂಗಾರ ತರಲಿಲ್ಲವೆಂದು ನಿನ್ನ ತಂದೆ ಹೊಡೆದು ರಕ್ತ ಹರಿಸಿದರೆ ತವರಿಸಿಂದ ತಂದ ಬಂಗಾರ ತಿಂದಿರೆಂದು ಈಗ ನಿನ್ನ ಅತ್ತಿಗೆ ನೂಕಿ ರಕ್ತ ಹರಿಸಿದಳು. ಇಬ್ಬರ ಕೈಯಲ್ಲಿ ಹರಿದದ್ದು ನನ್ನೊಬ್ಬಳದೇ ರಕ್ತ ಕಂದ. ಅಂದಿನದು ತುಂಬಾ ತಾರುಣ್ಯದ ರಕ್ತ. ಆದರೆ ಇಂದಿನದು ಕಷ್ಟ ನೋವುಗಳಿಂದ ನರಳಿದ ಮುದಿ ದೇಹದ ಕಪ್ಪಾದ ರಕ್ತ. (ಅಳುವಳು)

ಮಹಾಂತೇಶ - ಈ ಕಷ್ಟ ಪರಂಪರೆಗಳಿಂದ ನಮಗೆ ಎಂದಮ್ಮ ಮುಕ್ತಿ?

ಗೌರಮ್ಮ - ಪ್ರಾಚೀನ ಕರ್ಮ ಕಳೆದಂದು, ವಿಜಯ ಮಹಾಂತೇಶ ಕಣ್ಣು ಬಿಟ್ಟು ನೋಡಿದಂದು

ಮಹೇಶ - (ಬರುತ್ತ) ಏನಮ್ಮ ಅದು ಕಣ್ಣು ಬಿಡೋದು?

ಸರಸು - ವಿಜಯ ಮಹಾಂತೇಶ ಕಣ್ಣು ಬಿಡಬೇಕಂತೆ, ತವರು ಉದ್ಧಾರವಾಗುವದಂತೆ

ಮಹಾಂತೇಶ - ಅಣ್ಣಾ ನಿನ್ನ ಪತ್ನಿಯ ಉದ್ಧಟತನ ಅತಿಯಾಗತೊಡಗಿತು

ಸರಸು - ಕಾಸು ಸಂಪಾದಿಸಿ ಮನೆಯ ಖರ್ಚು ನೋಡಿಕೊಳ್ಳುವ ಬಹದ್ದೂರ ತಮ್ಮ, ನಿಮ್ಮ ಹೆಂಡತಿಗೆ ಬುದ್ಧಿ ಹೇಳ ಬಂದಿದ್ದಾನೆ ನೋಡಿ

ಮಹೇಶ - ಮಹಾಂತೇಶ... ನನ್ನ ಪತ್ನಿಗೆ ಬುದ್ಧಿ ಹೇಳುವ ಹಕ್ಕು ನಿನಗಿಲ್ಲ. ಇನ್ನು ಮೇಲೆ ಅವಳು ಹೇಳಿದಂತೆ ಈ ಮನೆಯಲ್ಲಿರುವದಾದರೇ ಇರು, ಇಲ್ಲದಿದ್ದರೆ ಇಂದೇ ಹೊರಟು ಹೋಗು. ದುಡಿದು ತಂದು ಹಾಕುವ ಯೋಗ್ಯತೆ ನಿನಗಿರದಿದ್ದರೂ ತಮ್ಮನೆಂಬ ಅಭಿಮಾನದಿಂದ ಇಲ್ಲಿಯವರೆಗೆ ಸುಮ್ಮನಿದ್ದೆ. ಇಷ್ಟಿದ್ದರೂ ನಿನ್ನ ಅವಿವೇಕತನ ಅತಿರೇಕಕ್ಕೆ ಮುಟ್ಟುತ್ತಿದೆ

ಗೌರಮ್ಮ - ಮಹೇಶ ಅವನ ಪರೀಕ್ಷೆ ಮುಗಿಯದೇ ಅವನಿಗೆ ಸಂಪಾದನೆಯ ಹಾದಿಯಾದರೂ ಯಾವದು?

ಮಹೇಶ - ಪ್ರಪಂಚದಲ್ಲಿ ಕಲಿತವರಷ್ಟೇ ಸಂಪಾದಿಸುತ್ತಿಲ್ಲ. ಕಲಿಯದವರೂ ಸಾಕಷ್ಟು ಹಣ

ಸಂಪಾದಿಸಿ ಸಂಸಾರ ಮಾಡುತ್ತಾರೆ, ನೋಡವ್ವ ಈಗಲೇ ಸ್ಪಷ್ಟವಾಗಿ ಹೇಳಿಬಿಡುತ್ತೇನೆ. ಇನ್ನು ಮೇಲೆ ನನ್ನಿಂದ ಕಲಿಸಲು ಸಾಧ್ಯವಿಲ್ಲ. ಅಲ್ಲದೇ ನಿರುದ್ಯೋಗದಿಂದ ತಿರುಗುವ ಇವನಿಗೆ ಅನ್ನ ಹಾಕಲೂ ನನ್ನಿಂದಾಗದು

ಮಹಾಂತೇಶ - ಅಮ್ಮಾ!

ಗೌರಮ್ಮ - ಕಂದಾ ಮಹೇಶ, ನಿನ್ನ ತಮ್ಮ ನಿನಗೆ ಭಾರವಾದನೇನಪ್ಪ

ಸರಸು - ಭಾರವಾಗಿಲ್ಲ ಬಿಟ್ಟಿ ಕೂಳು ಗಿಟ್ಟಿಸಿ ಬಲಿತು ಉಬ್ಬಿದ್ದಾನೆ. ಕಲಿತಿರುವೆನೆಂದು ಕೊಬ್ಬಿದ್ದಾನೆ. ಕಾರಣ ದುಡಿತದಿಂದಾದರೂ ಈ ಕಾಯ ಸ್ವಲ್ಪ ಕರಗಲಿ

ಮಹಾಂತೇಶ - ಅಣ್ಣಾ ! ಆಗಲಿ, ಏನಾದರೂ ಉದ್ಯೋಗ ಹುಡುಕುತ್ತೇನೆ

ಗೌರಮ್ಮ - ಮಗು ಎಲ್ಲಿಗೆ ಹೊರಟೆಯಪ್ಪಾ?

ಮಹಾಂತೇಶ - ಉದ್ಯೋಗ ಹುಡುಕಲು ಹೊರಟೆನಮ್ಮ, ಬಿಡಮ್ಮಾ ನನ್ನನ್ನು ತಡೆಯಬೇಡ. ಹಣ ಸಂಪಾದಿಸದೇ ಈ ಮನೆಯಲ್ಲಿ ಗುಟುಕು ನೀರು ಕುಡಿಯಲಾರೆ. (ಹೋಗುವನು)

ಗೌರಮ್ಮ - ಕಂದಾ ಮಹಾಂತೇಶ..

## ಪದ

ಯಾವ ಜನುಮದ ಪಾಪ ಫಲಕೆ ।
ವಿಧಿಯೇ ನನಗೀ ಬಳಲಿಕೆ ॥ಪ॥
ಹಡೆದ ಮಾತೆಗೆ ಮುಗಿಲೆ ದೇವಾ ।
ಮಡದಿಗೊಲಿದ ಮಗನ ಮೋಹ ।
ಸಿಡಿಲಿನಂತಹ ಸೊಸೆಯ ಬಯಕೆ ।
ಜಡಿದು ಮಸಣವ ಮಾಡಿತೆ ॥

# ದೃಶ್ಯ - ೪

## ಬೀದಿ

(ಮಹಾಂತೇಶ ಬರುವನು)

ಮಹಾಂತೇಶ - ದುರ್ದೈವವೇ ನನ್ನ ತಂದೆಯನ್ನು ನುಂಗಿದ ನಿನಗೆ ಇನ್ನೂ ದಾಹ ತಣಿಯಲಾರದೇ? ಸೊಸೆಯ ರೂಪದಲ್ಲಿ ನಮ್ಮ ಮನೆಯವರ ಮನ ಒಡೆದು ಮಮತೆಯ ಲತೆಗೆ ದೌರ್ಭಾಗ್ಯದ ಸಿಡಿಲು ಬಡಿಯಿತು. ಕರುಣಾಮಯಿಯಾದ ತಾಯಿಯ ಹಣೆಯಲ್ಲಿ ರಕ್ತ ಹರಿಯಿತು. ಪ್ರೀತಿಯ ಅಣ್ಣ ತಮ್ಮಂದಿರ ಬಂಧುತ್ವದ ಗೋಡೆ ಬಿರುಕು ಬಿಟ್ಟಿತು. ದುಡಿಮೆ ಇಲ್ಲದೆ ಮನೆಯಲ್ಲಿ ಅನ್ನ ದೊರೆಯುವಂತಿಲ್ಲ. ತಾಯಿ, ಕಷ್ಟಕ್ಕೆ ಅಂತ್ಯವಿಲ್ಲ. ಮುಂದೆ ಕಲಿಯುವದಂತೂ ಸಾಧ್ಯವಿಲ್ಲ. ನೌಕರಿ, ಎಲ್ಲಿ ಹುಡುಕಲಿ, ಯಾರನ್ನು ಕೇಳಿದರೂ ಇಲ್ಲವೆಂಬ ಪಲ್ಲವಿ ನಿತ್ಯ ಕೇಳುತ್ತಿದೆ. ಉಳಿದ ಮಾರ್ಗ ಒಂದೇ ಒಂದು, ಇದೇ ತಿಂಗಳ ಹನ್ನೆರಡರಿಂದ ಹದಿನೈದರವರೆಗೆ ಸ್ಥಳೀಯ ಕಚೇರಿಯಲ್ಲಿ ಸೈನಿಕರನ್ನು ಭರ್ತಿ ಮಾಡಿಕೊಳ್ಳುವರಂತೆ ನಂತರ ಅದನ್ನೇ ದೊರಕಿಸಿಕೊಂಡು ತಾಯಿ ತಂಗಿಯವರಿಗೆ ಹಣ ಕಳಿಸುತ್ತ ಹೋಗುವದೊಂದೆ ನನ್ನ ಮಾರ್ಗ. ದೈವೇಚ್ಛೆ .... ದೈವೇಚ್ಛೆಗೆ ಓಗೊಡುವ ಸದಿಚ್ಛೆಯ ಅಭಾವ ಮನುಷ್ಯನಲ್ಲಿರುವದೇ ಮಾನವ ಚರಿತ್ರೆಯ ಭಯಂಕರ ಸಮಸ್ಯೆಯಾಗಿದೆ

### ಪದ

ಜಗದಿ ಜನಿಸಿ । ಬಡವರ ತಾಪ ।
ವಿಧಿಯೇ ನಿನಗಿದು ನಂದಾದೀಪ ।।ಪ।।
ಆಶನಕೆಯಲ್ಲದೆ ವ್ಯಸನ ದಾಹ ।
ಪಡುತಿಹ ಸಂಕಟ ಕಾಣದೆ ದೇವ ।।

(ಹಾಡುತ್ತ ಹೋಗುವನು)

(ಅದೇ ಬೀದಿಯಲ್ಲಿ ಯಲ್ಲಪ್ಪ ಹಾಗೂ ಸೋಮಣ್ಣ ಬರುವರು)

ಯಲ್ಲಪ್ಪ - ಅಲ್ರಿ ಶೆಟ್ರ... ಕಚೇರಿ ಬಿಟ್ಟು ಹೊರಗ ಬರುವಾಗ ಒಬ್ಬಾವ ಬಂದು ಸಲಾಮು ಮಾಡಿ ರೊಕ್ಕಾ ಬೇಡತಿದ್ದನಲ್ಲ ಅವಾ ಯಾರು ?

ಸೋಮಣ್ಣಾ - ಅವನೂ ಕಚೇರ್‍ಯಾಗ ಇರೋ ಒಬ್ಬ ನೌಕರ. ಯಾಕ?

ಯಲ್ಲಪ್ಪ - ಕಚೇರ್‍ಯಾಗ ನೌಕರಿ ಇದ್ರ ಬಂದವರಿಗೆಲ್ಲ ಸಲಾಮು ಹೊಡೆಯೋದ ಇವನ ಉದ್ಯಾಗ ಏನ್ರಿ ?

ಸೋಮಣ್ಣಾ - ಎಲೆ ಯಲ್ಲಾ, ಅವಾ ಸಲಾಮು ಹೊಡೆಯೋದು ಮಾಮೂಲ ಹಣ ವಸೂಲ ಮಾಡೋದಕ್ಕ. ನಮ್ಮ ಕೆಲಸ ಆದದ್ದ ಕಂಡು ಖುಸಿ ಬೇಡಾಕ

ಯಲ್ಲಪ್ಪ - ಹಂಗಾರ ಪಾಪ ಇವಗ ಸರಕಾರ ಸಂಬಳಾ ಕೊಡೋದಿಲ್ಲ ಏನ್ರಿ ?

ಸೋಮಣ್ಣಾ - ಮಂಕು ಮುಂಡೆಮಗ, ನಿನಗೇನ ತಿಳಿಯುತ್ತ ಬಿಡು ಕಚೇರಿ ಕೆಲಸ. ತಗೋ ನಿನ್ನ ತಗಾಯಿ ರೂಪಾಯಿ (ಕೊಡುತ್ತ) ನೋಡು ಎಣಿಸಿಗೋ

ಯಲ್ಲಪ್ಪ - ಬರಾಬರಿ ನೀವು ಎಣಿಸಿದ್ದೀರಲ್ಲ?

ಸೋಮಣ್ಣಾ - ಎಣಿಸೀನಿ. ಬರಾಬರಿ ಇನ್ನೂರಾ ಐವತ್ತು ಅದಾವು ನೋಡು

ಯಲ್ಲಪ್ಪ - ಇದೇನ್ರಿ ಶೆಟ್ರ. ನನಗ ತಗಾಯಿ ಕೊಟ್ಟಿದ್ದು ಮತ್ತ ನಾಕುನೂರಾ ಐವತ್ತು ಅಲ್ಲೇನ್ರೀ

ಸೋಮಣ್ಣಾ - ಮಂಕು ಮುಂಡೆಮಗನ ಸರಕಾರ ಮಂಜೂರ ಮಾಡಿದಷ್ಟ ಪೂರಾ ಹಣ ಎಣಿಸಿ ಕೊಡಾಕ ಕಚೇರಿ ಮಂದಿ ನಿಮ್ಮಕ್ಕನ ಮಕ್ಕಳೇನು? ಅವರಿಷ್ಟು ಇವರಿಷ್ಟು ನಾವಿಷ್ಟು ತಗೊಂಡು ಉಳಿದಷ್ಟು ಕೊಟ್ಟಿದ್ದು ಅಲ್ಲೇನು

ಯಲ್ಲಪ್ಪ - ಅಲ್ಲ ಶೆಟ್ಟರ... ಇಷ್ಟು ದಿವಸ ತಗಾಯಿ ಸಾಲಾ ಮಂಜೂರ ಮಾಡಿಸ್ತೀನಿ ಅಂತ ಅಡ್ಡಾಡೋ ಖರ್ಚಿಗೆ ಅಂತಾ ಐವತ್ತು ಕೈ ಬಿಡಿಸಿದ್ದಿರಿ. ಇದ ಈಗ ನೂರ ರೂಪಾಯಿ ತಕ್ಕೊಂಡಿರಿ ಉಳಿತೆಷ್ಟರಿ ನನಗ

ಸೋಮಣ್ಣಾ - ಇದಕ್ಕ ನೋಡಲೆ ನಿನಗ ತಲಿ ಇಲ್ಲ ಅನ್ನೂದು. ಇಲ್ಲಿ ಕೇಳು ಪರಿಸ್ಥಿತಿಗೆ ಹೊಂದಿಕೊಂಡು ಹೋಗಲಿಕ್ಕೆ ಯಾವ ಕಲೀತಾನ ಅವ ಇವತ್ತಿನ ದಿವಸದಾಗ ಬದಕತಾನ. ಇಷ್ಟರ ಕೊಡೋ ಮುಂಡೇ ಮಗ ಯಾವ ಅದಾನ ಊರೊಳಗ?

ಯಲ್ಲಪ್ಪ - ಅದು ಖರೇನ ಐತಿ, ಹಣೆ ಕೋದು ಮಿಣಿ ಮಾಡಿದರೂ ಅಣೇರೊಕ್ಕ ಹುಟ್ಟೂದಿಲ್ಲ ಊರೊಳಗ. ಅಂತೂ ಇಷ್ಟರ ಕೊಡಿಸಿದೆರೆಲ್ಲ ಸಾಕು

ಸೋಮಣ್ಣಾ - ಹ ಹೀಂಗೆ ಹಾದಿಗೆ ಬಾ. ಯಾಕಂದ್ರ ನಾನು ಇಷ್ಟರ ಕೊಡಿಸೀನಿ ಮಗನ ಆ ನನ್ನ ವೈರಿ ಸಂಗ್ಯಾನ ಬೆನ್ನಿಗೆ ಬಿದ್ರ ಅವನ ತಿಂದು ನಿನ್ನ ಮೂಲಿಗೆ ಕೂಡ್ರಸ್ತಿದ್ದ. ಇನ್ನರ ಎಚ್ಚರಾಗು. ನಮ್ಮ ಪಾರ್ಟಿ ಬಿಟ್ಟಿ ಅಂದ್ರ ಅವತ್ತ ನಿನ್ನ ಮನಿ ಜಪ್ತಿ ಮಾಡಸ್ತೀನಿ ಹುಷಾರ

ಶಿವಮೂರ್ತಿ - (ಬಂದು ಹನಮವ್ವ ಸಹಿತ) ಎಷ್ಟ ಹೆದರಿಕಿ ಹಾಕಾಕ ಹತ್ಯಾನಲ್ಲ ಕಾಕಾ? ಏನಲೆ ಅದು ಎಲ್ಲ ?

ಯಲ್ಲಪ್ಪ - ಏನೂ ಇಲ್ಲರಿ

ಹನಮಂತಿ - ಮುಗೀತನ ಎಲ್ಲಪ್ಪ ನಿನ್ನ ಕೆಲಸ ತಗಾಯಿ ಬಂತೇನು?

ಯಲ್ಲಪ್ಪ - ಕೊಡಿಸಿದರವ್ವ ನಿಮ್ಮ ಶೆಟ್ಟರು ಮುನ್ನೂರಾ ಐವತ್ತು ರೂಪಾಯಿನ

ಹನಮಂತಿ - ಹಾಂಗರ ನನ್ನ ರೂಪಾಯಿ ಬಡ್ಡಿ ಯಾವಾಗ ಕೊಡತೀ

ಯಲ್ಲಪ್ಪ - ಊರಿಗೆ ಹೋಗಾಣ ಕೊಡತೀನಿ

ಶಿವಮೂರ್ತಿ - ಅವನ್ನ ಇಲ್ಲೆ ನನ್ನ ಕೈಯಾಗ ಕೊಟ್ಟು ಬಿಡು ಯಲ್ಲ

ಯಲ್ಲಪ್ಪ - ಆಯ್ಯ ಶೆಟ್ರ ಹಾಂಗ ಮಾಡಿದರ ಮುಗದ ಹೋತು ನಮ ಕಥಿ. ಇನ್ನೊಮ್ಮೆ ಹನಮವ್ವ ನನ್ನ ಮನಿ ಸನೇಕ ಬರಗೊಡಾಕಿಲ್ಲ ತಿಳಿತರ್‍ಯಾ?

ಶಿವಮೂರ್ತಿ - ಅಂತೂ ಬಡ್ಡಿ ವ್ಯವಹಾರ ಬಲೆ ಭರ್ಜರಿ ಕಾಣತ್ತ

ಹನಮಂತಿ - ಬೇಕಲ್ಲ ನಾಳೆ ನಿನಗ. ನಾವೇನು ಮಾಡಿದರೂ ನಿನಗ ಅಲ್ಲಾ?

ಸೋಮಣ್ಣ - ನಾವೆಷ್ಟು ಕಷ್ಟ ಪಟ್ಟು ದುಡಿದರೂ ಕೊಡಿಸಿದ್ದೆಲ್ಲ ಒಂದು ವರ್ಷದಾಗ ಈ ಮಗನ ಕೈಯಾಗ ನಿಕಾಲಿ ಆಗತ್ತ. ಇದು ನನಗೆ ತಿಳಿದೈತೆ

ಶಿವಮೂರ್ತಿ - ನಿನಗ ತಿಳಿಲಾರದ್ದು ಯಾವದೈತಿ? ಹನಮವ್ವ ನಮ್ಮ ಕಾಕಾನ ಚೈನಿ ಮತ್ತ ಹೆಚ್ಚ ಆತಲ್ಲ. ಜಿನಗು ಧೋತರೇನು ಹೊಸಾ ಕೋಟೇನು. ಮೀಸಿ ಹ್ಯಾಂಗ ಕತ್ತರಿಸ್ಯಾನ ನೋಡು ಸಾಬರ ಮರಿ ಯಂಗ

ಹನಮಂತಿ - ಬರಬರತ ಇವನ ಸಡಗರ ತೇಲಾಕ ಹತ್ತೇತಿ. ಏ ಶೆಟ್ಟಿ ಉರೀತೀನಿ ಮೆರೀತೇನಿ ಅಂತಾ ಅಳತಿಗೆಟ್ಟ ಉರಿಯಾಕ ಹೋಗಬ್ಯಾಡ. ಉರದಾವನ್ನ ಊರಾಗ ಸುಟ್ಟರಂತ, ಮೆರದಾವನ್ನ ಕೇರ್‍ಯಾಗ ಸುಟ್ಟರಂತ

ಯಲ್ಲಪ್ಪ - ಶೆಟ್ಟರು ಯಾವಾಗಾದರೂ ಇಷ್ಟ ಶೋಕಿ ಇದ್ದಕೊಂತ ಬಂದಾರ. ಅದರಾಗ ಗುಂಜಿ ಹೆಚ್ಚಿಲ್ಲಾ ಗುಂಜಿ ಕಡಿಮೆ ಇಲ್ಲ

ಸೋಮಣ್ಣ - ಹೇಳಲೇ ಆ ಹುಡಗನ್ನ ಮೇಲಗಟ್ಟಿ ಬಂದಾಳ ಇವಳು

ಶಿವಮೂರ್ತಿ - ನನ್ನ ಮೇಲಗಟ್ಟಿ ಬಂದಿಲ್ಲೋ ಕಾಕಾ. ಈ ನಿನ್ನ ಸಡಗರಾ ನೋಡಿ ಮತ್ತೆಲ್ಲರ ಹೊಸಾ ಆಕಾರ ಓಡ್ಯಾನ ಅಂತ ಅಂಜಿ ಹೊಟ್ಟಿ ಉರುದು ಮಾತಾಡತಾಳ

ಯಲ್ಲಪ್ಪ - ಹಾಂಗ ಹ್ಯಾಂಗ ಆದಿತರಿಯಪ್ಪಾ ಹನಮವ್ವಗ ಶೆಟ್ಟರಿಗೆ ಪಿರೀತಿ ಕೂಡಿದ್ದು ಅದು ಏನ ಸುಮ್ಮನ ಅಲ್ಲ, ದೈವಕ ಸಂಬಂಧಪಟ್ಟ ಮಾತು

ಶಿವಮೂರ್ತಿ - ಹೌದು ಏನಡ್ಡಿಯಿಲ್ಲ. ಲೇಯಲ್ಲಾ ನಿಮ್ಮಂತ ಮಳ್ಳ ಮಂದಿ ಇವರು ಮಾಡಿದ್ದಕ್ಕೆಲ್ಲ ಮಹತ್ವ ಕೊಟಿಗೊಂತ ಬಂದಲ್ಲೇ ಈ ನಮ್ಮ ಕಾಕಾನಂತಾರಾ ಕೆಲಸ ಭಂಗ ಬರದ ಸಾಗೇತಿ. ಇರದಿದ್ರ ಮೈ ಅನ್ನೋದು ಹಂಗನ ಬಣ್ಣ ಆಕ್ಕಿತ್ತು. ಮಾಡಿದ ಹಲಕಟ್ಟತನ ಮುಚ್ಚಿಕೊಳ್ಳಾಕ ಹಿರಿಯಾಕ ಸೋಗಹಾಕಿ ಮೆರಿಯೋ ನಮ್ಮ ಕಾಕನಂತ ಹಿರಿಯರನ್ನ ಸಾಲಾಗಿ ನಿಂದರಿಸಿ ಶೂಲಕ್ಕೇರಿಸಬೇಕು

ಹನುಮಂತಿ - ಏನಪ್ಪ ಶಿವು ಇದು ಬಾಯಿ ಐತಂತ ಬಲ್ಲಂಗ ಮಾತಾಡಾಕ ಹತ್ತಿದಿ. ಬಾಳ ಶ್ಯಾಣಾ ಆದಿ ಬಿಡಪ ಬರಬರತ ನಿನ್ನ ಬುದ್ದಿ ಬೆಳಿಯಾಕ ಹತ್ತು

ಶಿವಮೂರ್ತಿ - ಅಂದ್ರೇನು ನೀವೇನು ಕೆಟ್ಟತನ ಮಾಡಿದರೂ ಅದಕ ಭಲೆ ಅನಕೊಂತ ಬಹುಮಾನ ಕೊಡಬೇಕು ? ಹನಮವ್ವ ನಿನ್ನ ನೋಡಿದರೆ ಹೀಂಗ ಅನಸತ್ತ ನನಗ. ಈ ಭಂಡನ ಮಾತಕೇಳಿ ಮಾಡಿಕೊಂಡ ಗಂಡಗ ವಿಷಾ ಹಾಕಿ ಬಾಳೋ ನಿಮ್ಮಂತ ರಂಡಿ ಮುಂಡ್ಯಾರನ್ನ ಹಿಡಿದ ಗುಂಡ ಹಾಕಿಸಬೇಕು. ಇಷ್ಟೆಲ್ಲ ನಿಮಂತಾರಿಗೇ ದೊಡ್ಡವರು ಅಂತಾ ಮರ್ಯಾದಿ ಕೊಟ್ಟು ನಮಸ್ಕಾರ ಮಾಡೋ ಈ ಯಲ್ಲನಂತಾರನ್ನ ಹಿಡಿದು ಮೂಗು ಕೂಯಿಸಬೇಕು. ಅಂದ್ರೇನರ ಊರಿಗೆ ಒಳ್ಳೇದಾಗತ್ತ

ಸೋಮಣ್ಣ - ಲೇ ಶಿವ್ಯಾ ನಿನ್ನ ಕಾಲಾಗ ನನಗ ಸಾಕಾಗಿ ಹೋತ ನೋಡಪ್ಪ, ಮನ್ಯಾಗ ಇನ್ನು ನೀನ ಇದ್ದ ಬಿಡು ಎಲ್ಯಾರ ನಾನ ಹಾಳಾಗಿ ಹೋಗಿ ಬಿಡತೇನಿ

ಶಿವಮೂರ್ತಿ - ಅಬಾಬಾ ಊರ ನೀ ಒಳ್ಳೇಬಿಟ್ಟೇಯಪಾ. ಕಟಿಗರೋಣೆ ಹಿಡಿದ ಕಾಗಿ ಇದ್ದಾಂಗ ನೀನು. ದಿನಾ ಒಂದು ದನಾಕೋದಕೊಯ್ತಾರ, ನನಗಟ ಖಂಡ ಸಿಕ್ಕ ಸಿಗತ್ತ ಅಂತ ಅದು ಹ್ಯಾಂಗ ಅಲ್ಲೆ ಮನಿ ಕಟ್ಟಿರತ್ತ ಹಾಂಗ ನೀನೂ ಊರಾಗ ಒಂದಿಲ್ಲ ಒಂದ ನ್ಯಾಯ ನಿಗದಿ ಹುಟ್ಟೇ ಹುಟ್ಟತಾವು. ಅದರಾಗ ಆಟ ಬಡಕೊಂಡ ಮೆರದಾಡಬೇಕು ಅಂತಾ ಮನಸು ಮಾಡಿದವ ನೀನು. ಊರ ಬಿಡತಾನಂತ ಊರು. ಯಾರ ಮುಂದರ ಹೇಳು ಇದನ್ನ

ಸೋಮಣ್ಣ - ಒಟ್ಟ ನಮ್ಮ ಮನತನದಾಗ ನೀ ಒಬ್ಬ ಶನಿ ಹುಟ್ಟೇದಿ

ಶಿವಮೂರ್ತಿ - ನಾ ಹುಟ್ಟೇನಿ ಅಂತ ನಿಮ್ಮ ಶನಿ ಕಾಟ ಕಮ್ಮಿ ಆಗೇತಿ. ನಾ ಏನಾರ ಮಾತಾಡತಿದ್ರ ಅದು ನಿನ್ನ ಹಿತಕ್ಕ ಅಂತಾ ತಿಳಿ. ನಾನು ನಿನ್ನ ಪಾಲಿಗೆ ಶನಿಯಲ್ಲ. ನೀ ಏಟ ಹೊಲಸ ಮಾಡತೀದಿ. ಅದನ್ನ ಸ್ವಚ್ಛ ಮಾಡೋದು ನನ್ನ ಕೆಲಸ. ತಿಳಿತು ನಡಿ ನಡಿ ಹೋಗೋಣ

ಯಲ್ಲಪ್ಪ - ಈಗೇನು ಊರಿಗೆ ಹೋಗೊದೇನ್ರಿ ?

ಶಿವಮೂರ್ತಿ - ಹೂ ಬೀಗರ ಮನಿಗೋಗಿ ಮಾತಾಡಿಸಿ ಬಂದೀವಿ ನಡಿರಿ

(ಹೋಗುವರು)

# ದೃಶ್ಯ - ೫

## ಮನೆ ಸೀನು

(ಇಬ್ಬರು ಸೈನಿಕ ಉಡುಪು ಧರಿಸಿ ಸಿಪಾಯಿಗಳೊಂದಿಗೆ ಮಹಾಂತೇಶ ಪ್ರವೇಶಿಸುವರು)

ಮಹಾಂತೇಶ - ಅಮ್ಮಾ (ಗೌರಮ್ಮ, ದಾಕ್ಷಾಯಣಿ ಬರುವರು)

ಗೌರಮ್ಮ - (ಬಂದು ಭಯದಿಂದ) ಕಂದ ಮಹಾಂತೇಶ ಇದೇನಪ್ಪ ಇವರಾರು ?

ಮಹಾಂತೇಶ - ಭಯ ಪಡಬೇಡಮ್ಮ. ನಾನಿಂದು ಭಾರತ ಸೇನೆಯಲ್ಲಿ ಸೇರ್ಪಡೆಯಾದೆ. ಇಂದಿನಿಂದ ಇವರು ನನ್ನ ವೃತ್ತಿಬಾಂಧವರು

ದಾಕ್ಷಾಯಣಿ - ಆಂ ... ನಮ್ಮನ್ನು ನಿರ್ಗತಿಕರನ್ನಾಗಿಸಿ ಸೇನೆ ಸೇರಿದೆಯಾ ಅಣ್ಣ ? ಅಣ್ಣ ಅತ್ತಿಗೆಯವರಿಗೆ ಬೇಡವಾದಂತೆ ನಿನಗೂ ಬೇಡವೆ ನಾವು. ಅಮ್ಮಾ ಅಣ್ಣನು ನಮ್ಮ ಕೈ ಬಿಟ್ಟನಮ್ಮ.. (ಅಳು)

ಗೌರಮ್ಮ - ಹೌದೇನೋ ಮಹಾಂತೇಶ ?

ಮಾಹಾಂತೇಶ - ಶಾಂತಳಾಗಮ್ಮ. ಅಸನಕ್ಕಾಗಿ ವ್ಯಸನದ ಉಸಿರು ಹಾಕುತ್ತ ಹೀನಬಾಳು ಬಾಳುವದಕ್ಕಿಂತಲೂ ಹನ್ನೆರಡು ವರುಷ ಸೇನೆಯಲ್ಲಿ ದುಡಿದರೆ, ಯಾವದಾದರೂ ಮಾರ್ಗವಾಗುತ್ತದೆ. ಅಲ್ಲದೇ ಅಲ್ಲಿಯವರೆಗೂ ತಿಂಗಳಿಗೊಮ್ಮೆ ಬರುವ ನನ್ನ ಸಂಬಳವನ್ನು ನಿನ್ನ ಹೆಸರಿನಲ್ಲಿ ತಪ್ಪದೇ ಕಳಿಸುತ್ತೇನೆ

ಗೌರಮ್ಮ - ಏನಾದರೇನಪ್ಪ ? ಹನ್ನೆರಡು ವರ್ಷಗಳ ಪರ್ಯಂತರ ಮಕ್ಕಳನ್ನಗಲಿ ಬಾಳುವದು ಮಾತೃ ಹೃದಯಕ್ಕೆ ಸಾಧ್ಯವೆ ? ಹನ್ನೆರಡು ವರ್ಷ ನಿನ್ನ ಕಾಣದೇ ಬಾಳುವದು ಹನ್ನೆರಡು ಯುಗಗಳನ್ನು ಕಳೆದಂತೆ. ಅಂದ ಬಳಿಕ ಹಣ್ಣಾದ ಈ ತಾಯಿಯ ಕರುಳು ಹರಿಯಲಾರದೇ ಕಂದ ? ಓ ವಿಧಿಯೇ ನಿನಗಿನಿತೂ ಕರುಣೆ ಇಲ್ಲವೇ ? ಮೂರು ಮಕ್ಕಳನ್ನು ಪೆತ್ತರೂ ಅವರಿಂದ ಸುಖ ಪಡೆಯದ ದೌರ್ಭಾಗ್ಯವಸ್ನಿತ್ತೆಯಾ ? ಮಗನೇ ಹತ್ತು ತಿಂಗಳ ಗರ್ಭದಲ್ಲಿ ಹೊತ್ತು ನಂತರ ಹತ್ತು ತೊಟ್ಟಿಲೊಳಿಟ್ಟು ತೂಗಿ ಜೋಗಳ ಹಾಡಿ ಈ **ವರೆಗೂ** ಅಕ್ಕರತೆಯಿಂದ ಬೆಳೆಯಿಸಿದ ನಿನ್ನನಂತು ಮೃತ್ಯು ಮಾರಿಗೆ ತುತ್ತುಗೂಳ್ ಕೊಡಲಿ ಮಗನೆ (ಅಳುವಳು)

ದಾಕ್ಷಾಯಿಣಿ - ಅಣ್ಣಾ ಹಿರಿಯಣ್ಣನು ಬುದ್ಧಿಗೇಡಿತನಂದ ಅತ್ತಿಗೆಯ ದಾಸನಾಗಿ ಎರಡು ಹೇಸಿ ನುಡಿದರ ತಿಳಿದವನಾದ ನೀನು ಈ ರೀತಿ ನಮ್ಮನ್ನಗಲಿ ಹೋಗುವದೇ.

ಬೇಡ ಬಿಡಣ್ಣಾ ಸುಖ ಬರಲಿ, ಕಷ್ಟ ಬರಲಿ, ನಮ್ಮನ್ನು ಪರದೇಸಿಗಳನ್ನಾಗಿ ಮಾತ್ರ ಮಾಡಬೇಡ

ಮಹಾಂತೇಶ - ಹಡೆದ ತಾಯಿಯ ಕರುಳು ನೊಂದು ನುಡಿದರೆ ಅದನ್ನೇ ನೀನು ಅನುಸರಿಸುವದೇ ತಂಗಿ. ನಾನೆಲ್ಲಿರಲಿ ಎಂತಿರಲಿ ನಿಮ್ಮನ್ನು ಮರೆತು ಮಾತ್ರ ಬಾಳಲಾರೆ ದುಃಖಿಸದಿರು ಅವ್ವಾ, ಈ ಹನ್ನೆರಡು ವರುಷ ಹನ್ನೆರಡು ದಿನಗಳಂತೆ ಕಳೆದು ಹೋಗುವದು

ಗೌರಮ್ಮ - ಮಗನೇ ನೀನು ಹೋದ ಬಳಿಕ ಇಲ್ಲಿ ನಮ್ಮನು ಕೇಳುವವರಾರು ? ನನ್ನದಿರಲಿ ಮದುವೆಗೆ ನಿಂತ ಈ ನಿನ್ನ ತಂಗಿಯ ಗತಿಯೇನು ಹೇಳಪ್ಪ

ಮಹಾಂತೇಶ - ನನಗಿಂತ ಕಡಿಮೆ ಅಲ್ಲವ್ವ ನಿನ್ನ ಬಗ್ಗೆ ಅಣ್ಣನ ಪ್ರೀತಿ. ನಾನತ್ತ ಹೋದ ದಿನವೇ ಇಬ್ಬರಲಿ ಹರಿದು ಹಂಚಿದ ಒಲುಮೆ ಅಣ್ಣನಲಿ ಹುರಿಗೊಂಡು ಹರಿಯುವದಿನ್ನು ನಿನ್ನೆಡಗೆ. ಹೋಗಿ ಬರುತ್ತೇನೆ. ಆಶೀರ್ವದಿಸು ತಾಯಿ ದುಃಖಪಡದೇ ಆಶೀರ್ವದಿಸು. ನಿಮ್ಮಿಬ್ಬರನ್ನು ಸುಖದಲ್ಲಿ ಬಾಳಿಸುವೆನೆಂದು ತಂದೆಗಿತ್ತ ವಚನ ಪಾಲನೆಗಾಗಿ ಮತ್ತೆ ಈ ನಿನ್ನ ಮಗನ ಅಭ್ಯುದಯಕ್ಕಾಗಿ ಪರಕೆ ಗೈ (ಹೊರಗೆ ಹೋದ ಸರಸು ಹಾಗೂ ಮಹೇಶ ಬರುವರು) ಅಣ್ಣಾ, ಅತ್ತಿಗೆ ನಾನು ಇವತ್ತಿನಿಂದ ಭಾರತದ ಸೇನೆಯಲ್ಲಿ ಸೇರಿಕೊಂಡೆ ಕಾರಣ ಈ ಕ್ಷಣವೇ ಹೊರಡಬೇಕಾಗಿದೆ, ಆಶೀರ್ವದಿಸಿರಿ

ಮಹೇಶ - ಏನು ಸೇನೆ ಸೇರಿದಿಯಾ ಮಹಾಂತೇಶ ?

ಮಹಾಂತೇಶ - ಹೌದು ಅಣ್ಣಾ ಏಕೆ ?

ಮಹೇಶ - ಈ ನೌಕರಿಗೆ ಹೋಗುವ ಪೂರ್ವದಲ್ಲಿ ನೀನು ನನ್ನದೊಂದು ಮಾತು ಕೇಳಬೇಕಿತ್ತು. ಈಗ ನಿನಗೊಂದು ನೌಕರಿ ಹುಡುಕಿದ್ದೆ

ಸರಸು - ಸಿಟ್ಟು ಬಂದಾಗ ನೀವು ಅಷ್ಟು ನಿಷ್ಠೂರವಾಗಿ ಬೈಯಬಾರದಾಗಿತ್ತು. ನೊಂದುಕೊಂಡು ಈಗವನು ಸೇನೆ ಸೇರಿದ. ಈ ಅಪವಾದ ನಾಳೆ ಯಾರ ತಲೆಗೆ ?

ಮಹಾಂತೇಶ - ಅಪವಾದವೇಕೆ ಅತ್ತಿಗೆ. ಇಲ್ಲಿದ್ದರೆ ನನ್ನ ನೌಕರಿಗಾಗಿ ಅಣ್ಣ ಇಷ್ಟೆಲ್ಲ ಕಷ್ಟ ಪಡಬೇಕು. ಅಧಿಕಾರಿ ವರ್ಗದ ಹಾಗೂ ಪ್ರತಿಷ್ಠಿತ ವ್ಯಕ್ತಿಗಳ ಕಾಲು ಹಿಡಿಯಬೇಕು. ನಮ್ಮ ಹಣ ಹರಿದು ಮೇಲಿನವರ ಮನೆ ಸೇರದೇ ನೌಕರಿ ಇಂದಿನ ಕಾಲದಲ್ಲಿ ನಮ್ಮಂಥ ಬಡವರಿಗೆ ದೊರೆಯಲಾರದು. ಅಂತೆಯೇ ದೊರೆತದ್ದನ್ನೇ ದೈವ ಪ್ರಸಾದವೆಂದು ಸ್ವೀಕರಿಸುವೆ. ದೇಶ ಸಂರಕ್ಷಣೆಯ ಭಾರ ಹೊತ್ತ ಸೈನಿಕ ನೌಕರಿ ಏನು ಸಾಮಾನ್ಯವಲ್ಲ ಅತ್ತಿಗೆ

ಮಹೇಶ - ಏನಾದರೂ ತಮ್ಮ, ಸೈನ್ಯದಲ್ಲಿ ಸೇರಿ ಉಳಿದು ಬರುವದೆಂದರೆ ಸತ್ತು ಬದುಕಿದಂತೆ, ಸಾವಿನೊಂದಿಗೆ ಸರಸವಾಡಿದಂತೆ

ಸೈನಿಕರು - ಜಲ್ದಿ ಚಲೋ ಭಾಯಿ

ಮಹಾಂತೇಶ - ಅಭಿ ಜರ ಟಹರೋಜಿ, ಅಣ್ಣಾ... ಹುಟ್ಟಿದವನಿಗೆ ಸಾವು ಬಿಟ್ಟಿದ್ದಲ್ಲ. ನಿರುದ್ಯೋಗಿಯಾಗಿ ತಿರುಗವದಕ್ಕಿಂತಲೂ ಈ ನೌಕರಿ ಹೀನವಲ್ಲ. ಆದರೆ ಅಣ್ಣ ನಿನ್ನನ್ನು ಒಂದು ಮಾತು ಕೇಳಲೇ ?

ಮಹೇಶ - ಕೇಳು ತಮ್ಮ

ಮಹಾಂತೇಶ - ತಂದೆಯವರು ದೇಹ ಬಿಡುವ ಸಮಯದಲ್ಲಿ ತಾಯಿ ತಂಗಿಯರನ್ನು ನನ್ನ ಕೈಗಿರಿಸಿ ನೋಡಿಕೊಂಡು ಹೋಗುವದಾಗಿ ನನ್ನಿಂದ ವಚನ ಪಡೆದು ದೇಹ ಬಿಟ್ಟರು. ಅವರಿಗೆ ನಾನಿತ್ತ ವಚನ ಪಾಲನೆಯ ಅರ್ಧಭಾರ ನಿನಗೊಪ್ಪಿಸಬೇಕೆಂದಿರುವೆ. ಅದೇನೆಂದರೆ ನನ್ನ ಸಂಬಳದ ಬಹು ಭಾಗವನ್ನು ತಿಂಗಳಿಗೊಮ್ಮೆ ತಪ್ಪದೇ ನಿನ್ನ ಹೆಸರಿಗೆ ಕಳಿಸುತ್ತ ಹೋಗುತ್ತೇನೆ. ಇವರನ್ನು ಸರಿಯಾಗಿ ನೋಡಿಕೊಂಡು ಹೋಗುವೆಯಾ ಅಣ್ಣಾ ?

ಸರಸು - ಮಹಾಂತೇಶ... ಅವರು ನಿನಗೆ ತಾಯಿ - ತಂಗಿಯರಿರುವಂತೆ ಅವರಿಗೂ ಆಗಿದ್ದಾರೆ, ಮನೆತನದ ವಿಷಯಕ್ಕೆ ಮಾತು ಬರುತ್ತದೆ. ಮತ್ತೆ ಮರೆಯುತ್ತದೆ. ಅದರ ವಿಷಯಕ್ಕೆ ನೀನು ಯಾವ ಚಿಂತೆಯನ್ನು ಹಚ್ಚಿಕೊಳ್ಳದೇ ಹೋದಷ್ಟು ದಿನ ಸುಖವಾಗಿದ್ದು ಬಾ. ಮನಸ್ಸನ್ನು ಚಿಂತೆಗೆ ವಶ ಮಾಡಿ ಮೈ ಕೆಡಿಸಿಕೊಳ್ಳಬೇಡಪ್ಪ. ಅದರಂತೆ ಹಿಂದಾದದ್ದನ್ನು ಮರೆತು ಬಿಡು

ಮಹೇಶ - ಮಹಾಂತೇಶ ಹೌದು ನಿನ್ನ ಅತ್ತಿಗೆ ಹೇಳಿದ ಮಾತು ನಿನ್ನ ಜ್ಞಾಪಕದಲ್ಲಿರಲಿ

ಮಹಾಂತೇಶ - ಆಗಲಿ ಅಣ್ಣ ನಾನು ಮಾತ್ರ ತಿಂಗಳಿಗೊಮ್ಮೆ ನಿನ್ನ ಹೆಸರಿನಲ್ಲಿ ನನ್ನ ಸಂಬಳ ತಪ್ಪದೇ ಕಳಸುತ್ತೇನೆ. ತಾಯಿ ತಂಗಿಯನ್ನು ಸರಿಯಾಗಿ ನೋಡಿಕೊಳ್ಳಿ ಹಾಗೂ ತಂಗಿಗೆ ಒಳ್ಳೆಯ ವರನನ್ನು ಹುಡುಕಿ ಲಗ್ನ ಮಾಡಿಬಿಡು

ಮಹೇಶ - ಆಗಲಿ. ಈಗಾಗಲೇ ಒಂದೆರಡು ಕಡೆ ನೋಡಿರುವೆ. ಸರಿ ಕಾಣದ ಪ್ರಯುಕ್ತ ಬಿಟ್ಟಿರುವೆ. ಇರಲಿ ಇವರ ಚಿಂತೆ. ನಾನಿರುವಾಗ ನಿನಗೇಕೆ ನೀನು ಸಂತೋಷದಿಂದ ಇದ್ದು ಬಾ

ಮಹಾಂತೇಶ - ಅಮ್ಮಾ ಅಣ್ಣ ಅತ್ತಿಗೆಯರು ನಿಮ್ಮನ್ನು ನೋಡಿಕೊಂಡು ಹೋಗುತ್ತಾರಂತೆ ನಾನಂತೂ ನಿಮಗೆಂದು ತಪ್ಪದೇ ಹಣ ಕಳಿಸುತ್ತೇನೆ.ನೀನೀಗ ನಗುನಗುತ್ತ ಹರಿಸಿ ಕಳಿಸಮ್ಮ

ಗೌರಮ್ಮ - ಮಗನೆ ಕೊನೆಗೂ ನಿನ್ನನ್ನು ಅಗಲಬೇಕಾಯಿತೆ... ಓ ತಾಯಿ ಜಗಜ್ಜನನಿ ಇನ್ನು ಮೇಲೆ ಇವನು ನಿನ್ನ ಮಗನಮ್ಮ. ಸಾವಿನೊಂದಿಗೆ ಸರಸವಾಡುವ ಸೈನಿಕ ನೌಕರಿ ಎಂಬ ಹುಲಿಯ ಬಿಲಕೆ ಮಗನೆ ನೀನು ಯಾವ ಧರ್ಮವನ್ನು ನಂಬಿ ಹೊರಟಿರುವೆಯೋ ಆ ಧರ್ಮವೇ ನಿನ್ನ ಕಾಪಾಡಲಿ. ಸಕಲ ಲೋಕ ಪಾಪವನ್ನು ತೊಳೆಯ ಬಲ್ಲ ಗಂಗಾ ಮಾತೆ ಸ್ನಾನಕೆಂದು ನನ್ನ ಕಂದ ಕೆರೆ ಬಾವಿಯಲ್ಲಿ ಇಳಿಯುವಾಗ ಮೀನು ಮೊಸಳೆಗಳಿಂದ ರಕ್ಷಿಸಮ್ಮ. ಸಿಡಿಲು ಮಿಂಚು ಗಾಳಿಗಳ ಅಡವಿಯಲ್ಲಿ ನನ್ನ

ಕಂದ ನಡೆಯುವ ಸಮಯದಲ್ಲಿ ಕೇಡೆಸಿಗಿದರೆ ಈ ಹಡೆದೊಡಲಿನ ಶಾಪ ತಟ್ಟೀತು ಹೋಗು ಮಗು

(ಎಲ್ಲರೂ ದುಃಖಿಸುವರು)

ಜಗಜ್ಜನನಿಯಾದ ಬನಶಂಕರಿ ನಿನ್ನ ಕಾಪಾಡಲಿ

**ಪದ ಗೌರಮ್ಮ**

ಶ್ರೀ ಶಂಕರಿ ಅಭಯಂಕರಿ !
ನೀ ಕಾಯೆ ತಾಯಿ ಈ ಕಂದನ !
ಶೋಕದ ಶರಧಿ ಏರಿದೆ ಭರದಿ ।
ಮಾತೆಯಾ ಮನ ವ್ಯಥೆಯ ।
ಶೋಕ ತಾಪ ಚಿಂತೆಲಾಪ ।
ಪರಿಹರಿಸಿ ಕಾಯೊ ಶಾಖಾಂಬರಿ

# ದೃಶ್ಯ - ೬

## ಮನೆ ಸೀನು

ಯಲ್ಲಪ್ಪ - ಸರಕಾರಕ್ಕೆ ಹೊಲ ಬರೆದ ಕೊಟ್ಟ ತಗಾಯಿ ಸಾಲ ಏನೊ ತಂದೆ. ಆದರ ತರೂದರಾಗ ಅರ್ಧ ತಿಂದ ಕೊಟ್ಟರು. ಮೂರು ದಿನ ಹೊತ್ತು ಆತು ಮನಿ ಬರದ ಕೊಡು ಅಂತ ಪೀಡಸಾಕ ಹತ್ಯಾರ. ಹೊಲ ಸರಕಾರದ ಹೆಸರಲೆ, ಮನಿ ಹನಮವ್ವನ ಹೆಸರಿಲೆ ಆದರೆ ಮುಂದ ಹ್ಯಾಂಗಪ್ಪಾ ದೇವರಂತ ಉಗೀನ ಬಿಡದೈತಿ. ಏನ ಆದದ್ದ ಆಗಲಿ, ಶಿವಪ್ಪನ ಹತ್ತರ ಮಾತನಾಡಿದರ ಜರ ಆಸರಾದಾನು ಅಂತ ಹುಡುಕಾಕ ಹತ್ತೀನಿ ಪುಣ್ಯಾತ್ಮ ಎಲ್ಲೆ ಅದಾನೋ ಏನೋ ಸಿಗವಲ್ಲ

ಶಿವಮೂರ್ತಿ - (ಬಂದು) ಯಾಕೋ ಯಲ್ಲ ನನ್ನ ಕೇಳಿಕೊಂತ ನಮ್ಮ ಆಟದ ಮನಿಗೆ ಬಂದಿದ್ದ ಅಂತಲ್ಲ ಯಾಕ ?

ಯಲ್ಲಪ್ಪ - ಯಲ್ಲ । ಯಲ್ಲಾ ಕಳಕೊಳ್ಳೊ ಪಾಳೇಕ ಬಂದಾನ್ರಿ. ಶೆಟ್ರ ನಿನ್ನ ಕಾಲ ಬೀಳತೀನಿ ಯಪ್ಪಾ ನನ್ನ ಉಳಿಸು

ಶಿವಮೂರ್ತಿ - ಉಳಿಸು - ಅಂತ ಕಾಲಿಗೆ ಬಿದ್ರ ಹ್ಯಾಂಗ ಉಳಸಾಕೊ ನಾ ಏನು ದೇವರ

ಯಲ್ಲಪ್ಪ - ನನ್ನ ಪಾಲಿಗೆ ಸದ್ಯಕ ನೀನ ದೇವರು. ಬೆನ್ನಿಗೆ ಹಾಕೊಂಡರ ನೆಳ್ಳಾಗ ಉಳೀತೀನಿ ಇರದಿದ್ದರ ಬಿಸಲ ನನ್ನ ಪಾಲಿಗೆ

ಶಿವಮೂರ್ತಿ - ಆಗಲಿ ಹೇಳು ಏನದು ನಿನ್ನ ಗೋಳು

ಯಲ್ಲಪ್ಪ - ಇನ್ನೇನಿಲ್ಲಪ್ಪ ನಿಮ್ಮ ಹನಮವ್ವನ ಹತ್ತಿರ ನನ್ನ ಮಗನ ಮದಿವ್ಯಾಗ ನಾ ೨೦೦ ರೂಪಾಯಿ ಬಡ್ಡೀ ಸಾಲಾ ಮಾಡಿದ್ದ. ಈ ಮೂರು ವರ್ಷದ ಬಡ್ಡಿ ಗಂಟು ಕೂಡಿ ಸನೇಕ ೬೦೦ ರೂಪಾಯಿ ಆಗೇತಿ. ಆದರ ಈಗ ಮನಿ ಬರಕೊಡು ಒಂದು, ಇರದಿದ್ರ ರೂಪಾಯಿ ಹಚ್ಚು ಅಂತ ಏರಿಜೇರಿ ಯಡತಾಕಾಕಾ ಹತ್ಯಾರ. ಅದಕ ನಿಮ್ಮ ಹತ್ತಿರ ಬಂದೀನಿ, (ಅಳುತ್ತ) ಎಪ್ಪ ಬಡವ ಬಂದೀನಿ. ಬದಕಿಸಬೇಕು

ಶಿವಮೂರ್ತಿ - ಅಲ್ಲಪ್ಪ ಯಲ್ಲಪ್ಪ ಈವರುಷ ನಿನಗ ತಗಾಯಿ ಬಂದಿಲ್ಲ ?

ಯಲ್ಲಪ್ಪ - ಆ ತಗಾಯಿ ಹಣ ತರೂದರಾಗ ನನ್ನ ಹಣ ಮಣ್ಣು ಆತರಿ

ಶಿವಮೂರ್ತಿ - ಯಾಕ ಸರಕಾರ ಮಂಜೂರ ಮಾಡಿದ್ದು ನಾಲ್ಕು ನೂರಾ ಐವತ್ತು ರೂಪಾಯಿ ಅಲ್ಲವೇನೋ ?

ಯಲ್ಲಪ್ಪ - ಅದು ಕಾಗಾದದಾಗರಿ. ತಿಳಿಲಾರದ ಮಂದಿಗೆ ತಗಾಯಿ ಮಂಜೂರು ಮಾಡಸೋ ತಿಳಿದವರು ತಿಂದು, ನನ್ನ ಕೈಗೆ ಕೊಟ್ಟಿದ್ದು ಇನ್ನೂರಾ ಐವತ್ತು ರೂಪಾಯಿ

ಶಿವಮೂರ್ತಿ - ಅಂತೂ ಎರಡುನೂರು ರೂಪಾಯಿ ತಿಂದ್ರು. ಯಲ್ಲಪ್ಪ ಬಡವರ ದುಡ್ಡು ತಿಂದು ಬದುಕಬಾರದು ಅನ್ನೋ ಹೇಸಿತನ ದೊಡ್ಡವರು ಬಿಡೂವರೆಗೂ ನಿಮ್ಮಂಥವರಿಗೆ ಉದ್ಧಾರ ಇಲ್ಲ. ಅವರು ಇದನ್ನ ಬಿಡುವದಿಲ್ಲ. ಬಿಟ್ರ ಅವರ ಹೇಸಿ ಚಟಕ್ಕೆ ರೊಕ್ಕ ಬೇಕಲ್ಲ

ಯಲ್ಲಪ್ಪ - ನೋಡ್ರಿಯಪ್ಪ ಇದಕ ಹ್ಯಾಂಗ ಮಾಡುತೀರಿ ?

ಶಿವಮೂರ್ತಿ - ಹನಮವ್ವನ ಹತ್ರ ನೀ ತಗೊಂಡ ಎರಡುನೂರು ರೂಪಾಯಿಕ ಎರಡು ವರುಷದ ಬಡ್ಡಿನರ ಎಷ್ಟು ಕೊಟ್ಟೀದಿ

ಯಲ್ಲಪ್ಪ - ಒಂದು ವರುಷ ಎಪ್ಪತ್ತೈದು, ಮರುವರ್ಷ ಎಪ್ಪತ್ತೈದು

ಶಿವಮೂರ್ತಿ - ನೂರಾ ಐವತ್ತು ಮುಟ್ಯಾವು ಅಂದಾಂಗ ಆತು

ಯಲ್ಲಪ್ಪ - ಹೂನ್ರಿ.,

ಶಿವಮೂರ್ತಿ - ಹಾಂಗಿದ್ರ ಇನ್ನ ಐವತ್ತ ಇದ್ದರ ಕೊಟ್ಟಿಬಿಡು, ಮುಗಿಸಿಬಿಡೂನು

ಯಲ್ಲಪ್ಪ - ತಗೊಂಡು ಬಿಡ್ರಿಯಪ್ಪ (ಕೊಟ್ಟು) ಇಷ್ಟ ಮಾಡಿದಿರಿ ಅಂದರ ಮಕ್ಕಳು ಮರಿ ನಿಮ್ಮ ಹೆಸರ ಹೇಳಿ ಬದುಕತೀವಿ. (ಹನುಮಂತಿ, ಸೋಮಣ್ಣಾ ಬರುವರು)

ಹನುಮಂತಿ - ಏ ಯಲ್ಲಪ್ಪ ಮೈ ಮ್ಯಾಲೆ ಒಂದು ಜರ ಖಬರ ಐತೇನ ?

ಶಿವಮೂರ್ತಿ - ಐ ಹನಮವ್ವ ನಾಲಿಗೆ ಸ್ವಲ್ಪ ಹಿಡಿತದಾಗಿರಲಿ

ಹನುಮಂತಿ - ಶಿವಣ್ಣಾ ಇವ ನನ್ನ ರೂಪಾಯಿ ಕೊಟ್ಟಿಲ್ಲ. ಕೊಡತೀನಿ ಅಂತಾ ಮುಂದಕ ಹಾಕಕ ಹತ್ಯನಾ. ಇವತ್ತ ಚಟ್ಟಾನ ಬೆಳಗತೀನಿ

ಶಿವಮೂರ್ತಿ - ಅವನ ಚಟ್ಟಾನ ಏನ ಬೆಳಗತೀದಿ. ಇಲ್ಲೆ ನಿಂತಾನಲ್ಲ ಇವಗ ಬೆಳಗು

ಸೋಮಣ್ಣಾ - ಅಂದ್ರೇನಲೇ ಅವಿವೇಕಿ ಶಿಷ್ಯ ?

ಶಿವಮೂರ್ತಿ - ಅದನ್ನ ಈ ಹನಮವ್ವ ಹೇಳತಾಳ ತಡಿ, ಇನ್ನ ಸ್ವಲ್ಪ ದಿನ ಬಿಟ್ಟು. ಅಲ್ಲಪ್ಪಾ ಕಾಕ ಈ ಯಲ್ಲಗ ತಗಾಯಿ ಎಷ್ಟು ಮಂಜೂರ ಮಾಡಿಸಿದಿ

ಸೋಮಣ್ಣಾ - ನಾಲ್ಕುನೂರ ಐವತ್ತು ಯಾಕ ?

ಶಿವಮೂರ್ತಿ - ಅದರಾಗ ಅವಗ ಮುಟ್ಟಿದ್ದು ಎಷ್ಟು ?

ಸೋಮಣ್ಣಾ - ಇನ್ನೂರ ಐವತ್ತು

ಶಿವಮೂರ್ತಿ - ನಾಚಿಗಿ ಐತೇನು ನಿನ್ನ ಜಲಮಕಿಷ್ಟು ? ಊರಾಗ ಹಿರಮನಿಸಾ ಅನಿಸಿಕೊಂತ ಬಡೂರ ಹಡಕ ಮರಿಯೋ ಈ ಹಲಕಟ್ಟತನ ಬಿಟ್ಟು ಸುಮ್ಮನ ಮನಿ ಹಿಡೀತಿಯೋ, ಏನ ಕೈಯರ ಕಾಲರ ಕಡಿಸಿ ನಾನ ಹಿಡಿಸಬೇಕೋ

ಹನುಮಂತಿ - ಅಯ್ಯ ಯಾಕ ಶಿವಣ್ಣ ಬಾಯಿ ಬಾಳ ಉದ್ದ ಹೋತಲ್ಲ ?

ಶಿವಮೂರ್ತಿ - ಬರೇ ಬಾಯಿಲೆ ಹೇಳಿದರ ನಿಮಗ ಬುದ್ಧಿ ಬರೋ ಲಕ್ಷಣ ಇಲ್ಲ. ನಿಮ್ಮಿಬ್ಬರಿಗೂ ಕೈ ಪ್ರಸಾದ ಸಿಕ್ಕರೆ ಮೈ ಅಳತ್ಯಾಗ ಉಳೀತೈತಿ. ಹನುಮವ್ವ ಇನ್ನ ಮ್ಯಾಲೆ ಈ ಹೊಲ್ಸ ಬಡ್ಡಿ ವ್ಯಾಪಾರ ಬಿಟ್ಟು ಸುಮ್ಮನ ಮನಿ ಹಿಡಿತಿಯೋ... ಏನ ಕಲ್ಲೆಣ್ಣೆ ಉಗ್ಗಿ ಉರಿ ಹಚ್ಚಿಸಲೋ

ಸೋಮಣ್ಣ - ನಾವಂದ್ರ ನೀ ಏನಂತೆ ತಿಳಕೊಂಡಿಲೇ ?

ಶಿವಮೂರ್ತಿ - ಜ್ಞಾಪನಾ ಮಾಡಿದ ತಂದಿ ತಾಯಿ ಅಂತ ತಿಳಿಕೊಂಡೀನಿ. ಅಂದಲ್ಲೆ ನಿಮಗ ಹೇಳತೀನಿ. ಅಲ್ಲಪ್ಪ ಶಿವನ ಪಾದಕ ಸಲ್ಲೊ ದಿವ್ಸ ಸನೇ ಮಾಡೀರಿ. ಇನ್ನರ ಸ್ವಲ್ಪ ಬುದ್ಧಿಗಲೀರಿ

ಹನಮಂತಿ - ಅಲ್ಲಪ್ಪ ನಾನ ಏನ ಗಳಿಸಿದರೂ ಅದು ನಿನಗಂತ ಅಲ್ಲ ?

ಶಿವಮೂರ್ತಿ - ದಯಮಾಡಿ ಈ ಪರಿ ಬಡೂರನ್ನ ಮರಗಿಸಿ ಗಳಸಬ್ಯಾಡ್ರಿ. ಇದರಿಂದ ವಂಶ ಸಹಿತ ಉದ್ದಾರ ಆಗೋದಿಲ್ಲ ತಿಳೀತ. ಕೊಡಲೀ ಯಲ್ಲ ಅವು ಐವತ್ತು ರೂಪಾಯಿನ

ಯಲ್ಲಪ್ಪ - ತಗೋ ಹನಮವ್ವ ಇಷ್ಟರ ಮ್ಯಾಲ ರಿಣ ಮುಟ್ಟಿಸಿಕೊಂಡು ಬಡವನ್ನು ಬದುಕಿಸು (ಕೊಡಲಿಕ್ಕೆ ಹೋಗುವನು. ಹನುಮಂತಿ ಸೋಮಣ್ಣನ ಮುಖ ನೋಡುವಳು)

ಶಿವಮೂರ್ತಿ - ಅವನ ಮಾರಿ ಏನ ನೋಡತೀ ಸುಮ್ಮ ತೊಗೋ..... ಅವನ ಮಾರಿಗೆ ಮಳ್ಳ ಆದಲೆ ದಾರಿ ಬಿಟ್ಟು ಅಡವಿ ಸೇರಿದಿ (ತೆಗೆದುಕೊಳ್ಳುವಳು) ಇಲ್ಲಿ ನೋಡು ಹನುಮವ್ವ ನಾ ಇಲ್ಲದ ನೋಡಿ ನೀವೇನರ ಆ ಯಲ್ಲಗ ತ್ರಾಸ ಕೊಟ್ಟಿದ್ದ ಆದರೆ ನಿಮ್ಮ ಅವತಾರನ ಮುಗಸ್ತಿನಿ. ಹೋಗರಿನ್ನ (ಹೋಗುವರು) ಲೇ ಯಲ್ಲ ಇನ್ನ ಏನ ತ್ರಾಸ ಬಂದರೂ ಬಡ್ಡಿ ಸಾಲಾ ಮಾಡಿದಿ ಅಂದ್ರ ನಿನಗ ಈ ಹನುಮವ್ವನ್ನ ಹಸ್ತೀನಿ, ಹುಷಾರ ಮಗನ ನಡಿ ಸುಮ್ಮನ (ಹೋಗುವರು).

# ದೃಶ್ಯ - ೭

## ಮನೆ

(ಮಂಚದ ಮೇಲೆ ದಾಕ್ಷಾಯಣಿ ಮಲಗಿದ್ದಾಳೆ. ಗೌರಮ್ಮ ಮಗಳಿಗೆ ಕಾಫಿ ತರುವಳು)

ಗೌರಮ್ಮ - ಮಗು ಏಳಮ್ಮ ಸ್ವಲ್ಪ ಕಾಫಿ ಕುಡಿ

ದಾಕ್ಷಾಯಣಿ - ಒಲ್ಲೆ ಅವ್ವ ನನ್ನ ನಾಲಿಗೆಗೇ ಏನೂ ಸೇರದಾಗಿದೆ. ನಾನು ಒಲ್ಲೆ ನೀನೇ ಕುಡಿ

ಗೌರಮ್ಮ - ಹಾಗನ್ನಬಾರದಮ್ಮ ಎರಡುದಿನ ಊಟ ಮಾಡಿಲ್ಲ. ಕಾಫಿ ಕೂಡ ಬೇಡವೆಂದರೆ ಹೇಗೆ ? ಇವತ್ತು ನಿಮ್ಮಣ್ಣ ಮನೆಗೆ ಬಂದ ಕೂಡಲೇ ಡಾಕ್ಟರರನ್ನು ಕರೆದು ತರುವಂತೆ ಹೇಳುತ್ತೇನೆ

ದಾಕ್ಷಾಯಣಿ - ಯಾರು ಬಂದು ಏನು ಮಾಡುವರವ್ವ ನನ್ನ ಆಯುಷ್ಯವೇ ಮುಗಿದು ಬಂದಾಗ? ಚಿಕ್ಕಣ್ಣನೂ ಮನೆ ಬಿಟ್ಟು ನೌಕರಿಗೆ ತೆರಳುವಾಗ ಏನೋ ಹೇಳಿ ಹೋದ. ಹೋಗಿ ಇಂದಿಗೆ ಎರಡು ವರ್ಷ ಕಳೆಯಿತು. ಒಂದು ಪತ್ರ ಕೂಡಾ ಬರೆಯಲಿಲ್ಲ. ಅವನೂ ಕೂಡ ನಮ್ಮನ್ನು ಮರೆತನೆಂದು ಕಾಣುವದು. ಇಲ್ಲಿ ಈ ಅತ್ತಿಗೆ ಕೊಡುವ ಕಷ್ಟ ಸಹಿಸುವದಕ್ಕಿಂತ ಸಾಯುವದು ಸಾವಿರ ಪಾಲು ಮೇಲಲ್ಲಲ್ಲವೇನವ್ವ ?

ಗೌರಮ್ಮ - ಕಂದಾ ಹೀಗಲ್ಲ ಮಾತಾಡಬೇಡಮ್ಮ. ಈ ಹೆತ್ತ ಹೊಟ್ಟೆ ಉರದು ಹೋಗುತ್ತದೆ. ನಿನ್ನ ಹಿರಿಯಣ್ಣ ಮಡದಿಯ ಮೋಹದಲ್ಲಿ ಹಡೆದವಳನ್ನು ಕಡೆಗಾಣಿಸಿದ. ಕಿರಿಯ ಮಗ ಮಹಾಂತೇಶ ನಮ್ಮನ್ನು ಮರೆತುಬಿಟ್ಟ. ಹೀಗಿರುವಾಗ ನೀನು ಕೂಡಾ ಈ ರೀತಿ ನುಡಿಯಬೇಕೆ ? ಈ ನಿನ್ನ ತಾಯಿಯ ಕಣ್ಣಲ್ಲಿ ನೀರು ಹರಿಸಬೇಕೇ ?

ದಾಕ್ಷಾಯಣಿ - ಮತ್ತೇನು ಮಾಡಲಿ... ಅವ್ವ ಹದಿನೈದು ದಿನಗಳಿಂದಲೂ ಜ್ವರದ ಬಾದೆ ತಾಳಲಾರದೇ ಒಂದೇ ಸಮನೆ ಒದ್ದಾಡುತ್ತಿದ್ದೇನೆ. ಒಡಹುಟ್ಟಿದ ತಂಗಿ ಪಡುವ ಯಾತನೆಯನ್ನು ಕಂಡೂ ಕಾಣದಂತಿರುವ ಅಣ್ಣ, ಸಂತೋಷ ಪಡುವ ಅತ್ತಿಗೆ, ಇಂಥವರ ಎಂಜಲ ಕೂಳಿಗೆ ಬಿದ್ದಿರುವದ್ದಕ್ಕಿಂತ ಸಾವು ಬಂದರ ಒಳ್ಳೆಯದಲ್ಲವೇ ?

ಗೌರಮ್ಮ - ದಾಕ್ಷಾಯಣಿ, ಮಹಾಂತೇಶ ಈ ರೀತಿ ನಮ್ಮನ್ನು ಮರೆತು ಬಿಡುವವನಲ್ಲ ಅವನಿಗಲ್ಲಿ ಏನು ತೊಂದರೆಯೋ ಏನೋ ?

(ಡಾಕ್ಟರನನ್ನು ಕರೆದುಕೊಂಡು ಮಹೇಶ ಬರುವನು)

ಮಹೇಶ - ಅವ್ವಾ ಡಾಕ್ಟರ ಬಂದರು. ದಾಕ್ಷಾಯಣಿ ಎಲ್ಲಿ ಸ್ವಲ್ಪ ಎದ್ದುಕೂಡು (ಸರಸು

ಒಳಗಿನಿಂದ ಬರುವಳು)

ಡಾಕ್ಟರ್ - ಬೇಡ ಅಷ್ಟೇ ಮಲಗಿಕೊಳ್ಳಮ್ಮ (ನಾಡಿ ಪರೀಕ್ಷೆ ನಡೆಸುವರು)

ಸರಸು - ಡಾಕ್ಟರರೇ ಒಂದೊಂದು ಸಲ ಹುಚ್ಚುಚ್ಚಾರಾಂಗ ಮಾಡುತ್ತಾಳೆ. ಎಂಟು ಹತ್ತು ದಿನಗಳಿಂದ ಜ್ವರ ಬಿಟ್ಟಿಲ್ಲ

ಡಾಕ್ಟರ್ - ಹೌದಮ್ಮ ಜ್ವರ ಬಂದ ಮರುದಿನವೇ ನೀವೇಕೆ ತೋರಿಸಲಿಲ್ಲ

ಮಹೇಶ - ನಮ್ಮ ಸಂಘದ ಆಡೀಟು ನಡೆದಿತ್ತು ಡಾಕ್ಟರೆ ? ಅದಕೋಸ್ಕರ....

ಡಾಕ್ಟರರು - ಇದು ಟಾಯ್‌ಫಾಯ್ಡ್ ಅಂದರೆ ವಿಷಮ ಜ್ವರ. ತುಂಬಾ ಉಲ್ಬಣಾವಸ್ಥೆಗೇರಿದೆ ಹೊಟ್ಟೆಗೇನು ಕೊಟ್ಟಿದ್ದೀರಿ ?

ಗೌರಮ್ಮ - ಈಗ ಊಟ ಬಿಟ್ಟು ಎರಡು ದಿನವಾಯಿತು ಡಾಕ್ಟರರ, ಅದಕ್ಕಿಂತ ಮುಂಚೆ.

ಡಾಕ್ಟರರು - ಊಟ ಕೊಟ್ಟಿರಬೇಕು ಅಲ್ಲವೇ ? ಆಗಲಿ ಮಿಸ್ಟರ್ ಮಹೇಶ್. ಇಂತಹ ರೋಗವನ್ನು ಈ ರೀತಿ ಬಲಿಗೊಡಬಾರದು. ದೇವರ ಮೇಲೆ ಭಾರ ಹಾಕಿ ಔಷಧ ಕೊಡುತ್ತೇನೆ. ಸದ್ಯ ನನ್ನ ಜತೆ ಬನ್ನಿ

ಮಹೇಶ - ಈಗ ಇಂಜಕ್ಷನ್ ಮಾಡುವದಿಲ್ಲವೇ ?

ಡಾಕ್ಟರರು - ಈಗಿದ್ದ ಸ್ಥಿತಿಯಲ್ಲಿ ಇಂಜಕ್ಷನ್ ಕೊಟ್ಟರೆ ಕೆಲಸ ಪೂರೈಸಿದಂತೆಯೇ. ಅಮ್ಮ ಹಣೆಯ ಮೇಲೆ ತೊಯ್ದ ಬಟ್ಟೆ ಇಡಿರಿ. ಸ್ವಲ್ಪ ಜ್ವರ ಕಡಿಮೆಯಾಗುತ್ತದೆ. ಊಟ ಕೊಡಬೇಡಿ. ನೀರಿನ ದಾಹವಾದರೆ ಗ್ಲೂಕೋಜ ಸಕ್ಕರೆ ಬೆರಸಿ ನೀರು ಮಾತ್ರ ಕೊಡ್ರಿ ನಾನಿನ್ನು ಬರ್ತೇನಿ (ಹೋಗುವನು)

ಮಹೇಶ - ಅಮ್ಮಾ ಸ್ವಲ್ಪ ತೊಯ್ದು ಬಟ್ಟೆ ಹಣೆಯ ಮೇಲಿರಿಸು (ಗೌರಮ್ಮ ಒಳಗೆ ಹೋಗುವಳು)

ಸರಸು - ಸ್ವಲ್ಪು ಕಾಫಿ ಮಾಡಿ ಕೊಡಲೇ ?

ಮಹೇಶ - ಬೇಡ

ಸರಸು - ಸಂಘದ ಕೆಲಸವೆಂದು ಹೇಳಿ ಮೂರು ದಿನದಿಂದಲೂ ಮನೆಯಲ್ಲಿ ನಿಂತಿಲ್ಲ. ಸರಿಯಾಗಿ ಊಟ ಮಾಡಿಲ್ಲ. ಬನ್ನಿ ಊಟ ಮಾಡಿ ಹೋಗುವಿರಂತೆ

ಗೌರಮ್ಮ - (ಬಟ್ಟೆ ದಾಕ್ಷಾಯಣಿಯ ಹಣೆಯ ಮೇಲಿಡುತ್ತ) ಮಹೇಶ ಬೇಗನೆ ಗುಳಿಗೆ ತಂದು ಬಿಡಪ್ಪ. ಕೊಟ್ಟು ಬಿಡೋಣ. ಜ್ವರದ ತಾಪದಿಂದ ಎಷ್ಟು ಇಳಿದು ಬಿಟ್ಟಿದ್ದಾಳೆ ನೋಡು ನಿನ್ನ ತಂಗಿ

ಸರಸು - ಮನೆಯಲ್ಲಿ ಒಂದು ಒಂದು ಕ್ಷಣ ಕೂತರೂ ಮನಸ್ಸಿಗೆ ಸಮಾಧಾನವಿಲ್ಲ ನಿಮಗೆ. ಊಟ ತೀರಿಸಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಹೋಗಿರಿ

ಗೌರಮ್ಮ - ಹಾಗಂದರ ನಮ್ಮ ಸರಸುವಿಗೆ ಇವತ್ತು ಗುಳಿಗೆ ಕೊಡಬೇಡವೇ ?

ಸರಸು - ಇವತ್ತು ಆಗದಿದ್ದರೆ ನಾಳೆ ಕೊಟ್ಟರಾಯಿತು, ಒಂದು ದಿನ ಬಿಟ್ಟರೆ ಸತ್ತು ಹೋಗುತ್ತಾಳೇನು ಈ ನಿಮ್ಮ ಮಗಳು ? ಅಂದಹಾಗೆ ಮರೆತ್ತಿದ್ದೆ ಅತ್ತೆ. ಬೇಗನೇ ಹೋಗಿ ಸೀ ನೀರು ತಂದು ಬಿಡಿ. ಹೂಂ ಬೇಗನೇ ಹೊರಡಿ, ಈಗ ಇವಳಿಗೆ ಸ್ವಲ್ಪ ನಿದ್ರೆ ಹತ್ತಿದಂತೆ ಕಾಣುತ್ತದೆ

ಗೌರಮ್ಮ - ಇವತ್ತು ಇವಳು ಹುಚ್ಚುಚ್ಚಾರ ಮಾಡತಾಳಮ್ಮ. ಏಳದಂತೆ ನೋಡಿಕೊಳ್ಳಿ ಎಂದು ಡಾಕ್ಟರರು ಇದೀಗ ಹೇಳಲಿಲ್ಲವೇ ? ಆದ್ದರಿಂದ ...

ಸರಸು - ಇಲ್ಲಿ ನಾವಿಲ್ಲವೇನು ನೋಡಿಕೊಳ್ಳಲು ? ಸುಮ್ಮನೆ ಹೋಗಿರಿ (ಗೌರಮ್ಮ ಕೊಡ ತೆಗೆದುಕೊಂಡು ನೀರಿಗೆ ಹೋಗುವಳು) ಏಳಿ ಬಟ್ಟೆ ಬಿಚ್ಚಿ ಸ್ನಾನ ಮಾಡಿರಿ

ಪೋಸ್ಟ್‌ಮೆನ್ - (ಬಂದು) ಸರ್.... ಸರ್.... ತಮ್ಮ ಲೆಟರ್ ಹಾಗೂ ಮನಿಯಾರ್ಡರ್ ಬಂದಿದೆ ತೆಗದುಕೊಳ್ಳಿ (ಸಹಿ ಹಾಕಿ ಹಣ ಪಡೆದುಕೊಳ್ಳುವನು)

ಮಹೇಶ - ನೋಡು ಮಹಾಂತೇಶನ ಹಣ ಬಂತು. ತಿಂಗಳಿಗೊಮ್ಮೆ ತಪ್ಪದೇ ತಾಯಿ ತಂಗಿಯರಿಗೆಂದು ಹಣ ಕಳಿಸುತ್ತ ಬಂದ ಅವನ ಹಣ ಪಡೆದ ನಾವು ತಾಯಿ ತಂಗಿಯರನು ಒಳ್ಳೆ ರೀತಿಯಿಂದ ನೋಡಬೇಕು

ಸರಸು - ಈಗ ಅವರಿಗೇನು ಕಡಿಮೆಯಾಗಿದೆ ಹೇಳಿ, ಇದೋ ಇಲ್ಲಿ ಕೇಳಿ ಈ ಹಣದಲ್ಲಿ ನನಗೆರಡು ಒಳ್ಳೇ ಸೀರೆ ತಂದು ಬಿಡಿ. ಅದೇನು ಪತ್ರ ಬರೆದಿರುವನೇನು ?

ಮಹೇಶ - ಹೌದು !

ಸರಸು - ಓದಿ ನೋಡೋಣ

ಮಹೇಶ - (ಓದುವನು) ಪ್ರಿಯ ಅಣ್ಣಾ, ಇದ ತಿಂಗಳ ಇಪ್ಪತ್ತನೆ ತಾರೀಕಿನಿಂದ ನಾನು ನಮ್ಮ ಮಾತೃ ಭೂಮಿಯಾದ ಭಾರತವನ್ನು ಬಿಟ್ಟು ಕೋರಿಯಾ ರಣರಂಗದಲ್ಲಿ ಶಾಂತಿ ಸ್ಥಾಪನೆಗೆಂದು ಹೋಗುವ ಭಾರತ ದಳದಲ್ಲಿ ಹೋಗಬೇಕಾಗಿ ಬಂದಿದೆ. ಹೋಗುವ ಮೊದಲು ಒಂದು ತಿಂಗಳ ರಜಕ್ಕೆ ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ದೈವಚ್ಛೆ ಅಣ್ಣಾ ನಿಮೆಲ್ಲರನ್ನು ಅಗಲಿದ ನಾನು ಇಂದು ನಮ್ಮ ದೇಶವನ್ನು ಅಗಲುತ್ತಿದ್ದೇನೆ, ದೈವ ಲಿಪಿ ಗಟ್ಟಿ ಇದ್ದರೆ ಮರಳಿ ಬಂದು ನಿಮ್ಮನ್ನು ಕಾಣುತ್ತೇನೆ. ನಾವಿರುವ ಪರ್ಯಂತರ ತಾಯಿ ತಂಗಿಯರಿಗಾಗಿ ತಪ್ಪದೇ ಹಣ ಕಳಿಸುತ್ತಲೇ ಹೋಗುತ್ತೇನೆ. ಅವರನ್ನು ಚೆನ್ನಾಗಿ ನೋಡಿಕೊಳ್ಳುವದು ನಿನ್ನ ಭಾರ. ಇನ್ನೊಂದು ವಿಷಯ, ಇನ್ನು ಮೇಲೆ ನನ್ನ ಸಂಬಳ ನೂರರಿಂದ ಇನ್ನೂರಕ್ಕೇರಿತು. ಅಲ್ಲದೇ ದೊಡ್ಡ ಸ್ಥಾನ ದೊರೆತಿದೆ. ಕಾರಣ ತಂಗಿಯ ಲಗ್ನ ಆದಷ್ಟು ಶೀಘ್ರ ಮುಗಿಸಿಬಿಡು. ಅಮ್ಮನಿಗೆ ನನ್ನ ಅನಂತ ನಮಸ್ಕಾರ ತಿಳಿಸು. ಅತ್ತಿಗೆಗ ನಾನು ಬರವಷ್ಟರಲ್ಲಿ ಒಂದು ಮಗುವಾಗಲಿ ಎಂದು ಹಾರೈಸುವ. ಇಂತಿ ನಿನ್ನ ತಮ್ಮ ಮಹಾಂತೇಶ

ಸರಸು - ಅಂದರೆ ಇವತ್ತೇ ಇಪ್ಪತ್ತನೇ ತಾರೀಖು. ಇವತ್ತೇ ಅವರು ಈ ದೇಶ ಬಿಟ್ಟು ಹೊರಟರನ್ನ

ಮಹೇಶ - ಹೌದು ಸರಸು, ಈ ಪತ್ರವನ್ನಾದರೂ ತಾಯಿಗೆ ತೋರಿಸೋಣವೆ ? ಮಹಾಂತೇಶನ ಅಗಲಿಕೆಯಿಂದ ಬಳಲುವ ಮಾತೃ ಹೃದಯಕ್ಕೆ ಸ್ವಲ್ಪ ಶಾಂತಿಯಾದರೂ ಸಿಕ್ಕುತ್ತದೆ

ಸರಸರು - ನಿಮಗಂತೂ ಒಂದು ಅರ್ಥವಾಗುವದಿಲ್ಲ, ನೋಡಿ. ಈ ಒಂದು ಸುದ್ದಿ ತಿಳಿಸಿದರೆ ಹನ್ನೊಂದು ಪ್ರಶ್ನೆ ಎದ್ದು ನಿಲ್ಲುತ್ತವೆ. ಹಣ ಕಳಿಸುತ್ತ ಬಂದ ವಿಷಯ ತಿಳಿದರೆ ನಾಳೆ ಎಷ್ಟು ತೊಂದರೆ ? ಮಗನು ತಮಗೆಂದು ಕಳಿಸಿದ ಹಣವನ್ನು ತಮಗೆ ತಿಳಿಸಲಿಲ್ಲವೆಂದು ಊರಲ್ಲಿ ಡಂಗುರ ಸಾರುತ್ತಾಳೆ ನಿಮ್ಮ ಅಮ್ಮ !

ಮಹೇಶ - ನಮ್ಮ ತಾಯಿ ಅಷ್ಟು ಕೆಟ್ಟವಳಲ್ಲ ಸರಸು

ಸರಸು - ನಾನೆಲ್ಲಿ ಕೆಟ್ಟವಳೆಂದು ಹೇಳಿದೆ. ನನ್ನ ರಾಜಾ ನನಗೆ ಸೀರೆ ತಂದು ಕೊಡುವದಿಲ್ಲವೇ ಹೇಳಿ ?

ಮಹೇಶ - ಆಗಲಿ. ಇವತ್ತು ತಂದು ಕೊಡುತ್ತೇನೆ ಆಯಿತೋ ?

ದಾಕ್ಷಾಯಣಿ - (ಚಟ್ಟನೆ ಎದ್ದು ಹುಚ್ಚಿಯಂತೆ) ಅಣ್ಣಾ ! ಅಣ್ಣ ಬಂದ ಅವ್ವಾ... ಚಿಕ್ಕ ಅಣ್ಣ ಬಂದ... ಅಣ್ಣಾ... ಬಂದ..

ಮಹೇಶ - ದಾಕ್ಷಾಯಣಿ (ಹಿಡಿದು) ಇದೇನಮ್ಮ ಯಾರು ಬಂದರು ?

ದಾಕ್ಷಾಯಣಿ - (ಕುಳಿತು) ಅಣ್ಣ ಬರಲಿಲ್ಲವೇ ? (ಗೌರಮ್ಮ ಬರುವಳು) ಅದೋ ಅಮ್ಮನನ್ನು ಕೇಳು. ಅವ್ವಾ ಅಣ್ಣ ಬರಲಿಲ್ಲವೇ ?

ಗೌರಮ್ಮ - (ಮಲಗಿಸುತ್ತ) ಮಗು ಎದ್ದು ಕೂಡಬೇಡಮ್ಮ

ಸರಸು - ಸುಮ್ಮನೆ ಮಲಗಿಕೊಳ್ಳೆ ದಾಕ್ಷಾಯಣಿ. ನಿಮ್ಮಣ್ಣ ಎಲ್ಲಿ ಬರುತ್ತಾನೆ. ಕಣ್ಣಲ್ಲಿ ಮಣ್ಣು ತೂರಿ ಹೋದವನು ಮರಳಿ ಮತ್ತೇಕೆ ಬಂದಾನು. ಸುಮ್ಮೇ ಬಿದ್ದುಕೊಳ್ಳೆ... ನಡೆಯಿರಿ ಸ್ವಾಮಿ ಸ್ನಾನಕ್ಕೆ (ಒಳಗೆ ಹೋಗುವರು)

ದಾಕ್ಷಾಯಣಿ - ಅಲ್ಲಿ ನೋಡೇ ಅವ್ವಾ ಅಣ್ಣಾ ಬಂದಿದ್ದಾನೆ. ನನಗೆಂದು ಸೀರೆ ತಂದಿದ್ದಾನೆ... ಬಾ ಅಣ್ಣಾ ಅಲ್ಲೇಕೆ ನಿತಿರುವೆ (ಮತ್ತೆ ಎದ್ದು) ಅಮ್ಮ ನಿನ್ನ ಮೇಲೆ ಸಿಟ್ಟಾಗಿಲ್ಲ... ಹೌದು ನೀನು ಮತ್ತ ಹಣ ಕಳಿಸುತ್ತೇನೆಂದು ಹೇಳಿ ಹೋದವನು ಏಕೆ ಕಳಿಸಲಿಲ್ಲ. ಮತ್ತೆ.... ಒಂದು ಪತ್ರ ಕೂಡಾ ಹಾಕಬಾರದೇನು... ನನ್ನಣ್ಣ

ಗೌರಮ್ಮ - ಎಲ್ಲಿದ್ದಾನಮ್ಮ ನಿನ್ನಣ್ಣ ? ಅವನು ಕೈ ಬಿಟ್ಟು ಹೋದರೂ ಅವನ ಹೆಸರು ಹಿಡಿದು ಸುಮ್ಮೇ ಬಡಿಬಡಿಸುವೆಯಮ್ಮಾ ನೀನು... ಹಡೆದ ಮಾತೆಯ ಒಡಲಿಗೆ ಸುಳ್ಳಿನ ಕಿಚ್ಚಿಟ್ಟು ಹೋದವನು ಮತ್ತೇಕೆ ಮರಳಿ ಬರುವನಮ್ಮ ? ಬಂದರೂ ಅವನನ್ನು ನಾನು ಕಣ್ಣೆತ್ತಿ ನೋಡಲಾರೆ

ದಾಕ್ಷಾಯಣಿ - ಹಾಗನ್ನ ಬೇಡವ್ವ ಅಣ್ಣಾ ತಪ್ಪು ಮಾಡುವವನಲ್ಲ. ನಿನ್ನ ಮಾತು ಕೇಳಿದ ಅಣ್ಣಾ ಅಳುತ್ತಲಿದ್ದಾನೆ ಅದೋ ಹೊರಟೇ ಬಿಟ್ಟ ನನ್ನಣ್ಣ (ಎದ್ದು) ನಾನು ಬರುತ್ತೇನಣ್ಣಾ ಮಾಂತಣ್ಣಾ. (ಮುಂದ ಹೋಗಿ ಬೀಳುವಳು. ಗೌರಮ್ಮ, ಅಳುತ್ತ ಎಬ್ಬಿಸುವಾಗ ಸರಸು,

ಮಹೇಶ ಹೊರಗೆ ಬರುವರು)

ಸರಸು - ಏನೇ ನಿನ್ನ ಅವಿವೇಕಿತನಕಿಷ್ಟು ಕಿಚ್ಚು ಹಚ್ಚಬೇಕು. ಹಗಲೆಲ್ಲ ದುಡಿದು ಸಾಕಾಗಿ ಹಸಿದು ಮನೆಗೆ ಬಂದರೆ ಈ ನಿನ್ನ ಹಾಳಪುರಾಣ ಬೇರೆ ಕಾದಿರುತ್ತದೆ ಅವರ ಪಾಲಿಗೆ. ಸುಮ್ಮನೆ ಮಲಗುವಿಯೋ ಏನು ನಾಲ್ಕು ಏಟು ಬೇಕೋ

ಮಹೇಶ - ಸರಸು ಕೋಪಿಸಿಕೊಳ್ಳಬೇಡ ರೋಗದ ಪ್ರಬಲ ಆಘಾತದಿಂದ ಹೀಗೆಲ್ಲ ಮಾಡುತ್ತಾಳೆ ನನ್ನ ತಂಗಿ

ಸರಸು - ಯಾರಿಗೂ ಬಾರದ ಬೇನೆ ಇವಳಿಗೆ ಬಂದಿದೆಯೇನೋ ? ನಾನೆಲ್ಲ ಬಲ್ಲೆ, ಕೆಲಸಕ್ಕೆ ಮೈಗಳ್ಳತನ ಮಾಡುವ ಸೋಗಿದು

ಗೌರಮ್ಮ - ಸೋಗಲ್ಲ ಸರಸು ಅಣ್ಣನಲ್ಲಿಟ್ಟ ಅವಳ ಅಭಿಮಾನದ ಕೂಗದು. ವಿಷಮಜ್ವರದ ತಾಪಕ್ಕೆ ಬಲಿಯಾದ ನನ್ನ ಮಗಳು ದೇಹದ ಮೇಲಿನ ಪರಿವಿಲ್ಲದೇ ವರ್ತಿಸುತ್ತಾಳೆ ಮಗು..

ದಾಕ್ಷಾಯಣಿ - (ಎದ್ದು ಕುಳಿತು) ಅಪ್ಪಾ ಅದೋ ಅಪ್ಪ ಕರಯುತ್ತಲಿದ್ದಾನೆ ಅಲ್ಲಿ ನೋಡವ್ವ ನನ್ನನ್ನು ಕೈಬೀಸಿ ಕರೆಯುತ್ತಲಿದ್ದಾನೆ. ಅವನಿಗೆ ಒಬ್ಬನೇ ಇದ್ದು ಸಾಕಾಗಿ ಹೋಗಿದೆಯಂತೆ. ನಾನು ಅಪ್ಪನ ಹಿಂದೆ ಹೋಗುತ್ತೇನೆ... ಬಂದ... ಅಪ್ಪಾ ಬಂದೆ.. (ಸಾಯುವಳು)

ಗೌರಮ್ಮ - ದಾಕ್ಷಾಯಣಿ ಕಂದಾ.. ಎಲ್ಲಿ ಹೋರಟೆಯಮ್ಮಾ ಈ ನಿನ್ನ ತಾಯಿಯನ್ನು ಬಿಟ್ಟು? ದಾಕ್ಷಾಯಂಣಿ ಕಂದಾ (ಚೀರಿ ಬೀಳುವಳು)

ಮಹೇಶ - ದಾಕ್ಷಾಯಣಿ.. (ನಾಡಿ ನೋಡಿ) ಅಯ್ಯೋ ನನ್ನ ತಂಗಿ ಹೋಗಿಯೇ ಬಿಟ್ಟಳು ತಂಗಿ

ಸರಸು - ಇದೇನಿದು ಒಮ್ಮಿಂದೊಮ್ಮಲೇ ಇದಂತಹ ವಿಚಿತ್ರ ಸಾವು ಬಂತು ದಾಕ್ಷಾಯಣಿಗೆ?

ಗೌರಮ್ಮ - ಇನ್ನಿಲ್ಲವಮ್ಮ ನನ್ನ ಮಗಳು ದಾಕ್ಷಾಯಣಿ. ನಮ್ಮೆಲ್ಲರನ್ನು ಬಿಟ್ಟು ಮರಣದೂರಿಗೆ ಅವಳ ಪರಣ ಹಾರಿಹೋಯಿತು. ಬಾಳು ಥೀ ಸುಡಲೀ ಈ ಹಾಳು ಬಾಳು. ನಾಳೆಂಬುದಿದು ಹಾಳೂರಿನೊಂದು ಸಂತೆ. ಬರಿಯ ಭ್ರಾಂತಿ, ಬಾಳಿನ ಗೋಳಿನಲ್ಲಿ ಸಿಲುಕಿ ಹಣ್ಣಾಗಿ ಕೊನೆಗೊಂದು ದಿನ ಮಣ್ಣಿನಲ್ಲಿ ಮಣ್ಣಾಗಿ ಹೋಗುವ ಬಯಲು ಭ್ರಾಂತಿ. ನನ್ನ ಪಾಲಿಗೆ ಪ್ರಪಂಚವೇ ಇಲ್ಲ. ನನ್ನ ಮಗಳಿಲ್ಲ ದಾಕ್ಷಾಯಣಿ... ದಾಕ್ಷಾಯಣಿ...

# ದೃಶ್ಯ - ೮

## ಜಂಗಲ್ ಬೀದಿ

(ಶಂಕರ ಹಾಗೂ ಮಹಾಂತೇಶ ಬರುವರು)

ಶಂಕರ - ಮಿತ್ರಾ ಮಾತೃ ಭೂಮಿಯನ್ನು ಬಿಟ್ಟು ನಾವು ಕೋರಿಯಾ ರಣರಂಗಕ್ಕೆ ಬಂದು ಇಂದಿಗೆ ಇಪ್ಪತ್ತು ದಿನಗಳುರುಳಿದವು. ಒಂದೇ ನಾಡಿನವರಾದ ನಾವು ಒಂದೇ ದಳದಲ್ಲಿ ಕೂಡಿ ಬಂದಿರುವದು ನಮ್ಮ ಭಾಗ್ಯವೆಂದು ಹೇಳಬೇಕು

ಮಹಾಂತೇಶ - ಹೌದು

ಶಂಕರ - ಇಲ್ಲಿಯ ಪ್ರಕೃತಿ ಮಾತೆಯ ಮಡಿಲಲ್ಲಿ ಮಹದಾನಂದ ಹೊಂದಬೇಕಾದ ನೀನು ಈಗ ಕೆಲದಿನಗಳಿಂದಲೂ ಏನೋ ಒಂದು ಬಗೆಯಾಗಿ ಮೂಕನಂತೆ ವರ್ತಿಸುವಿಯೇಕೆ?

ಮಹಾಂತೇಶ - ಅದೇ ನನಗೂ ಅರ್ಥವಾಗುತ್ತಲಿಲ್ಲ ಮಿತ್ರ. ಮಾತೃ ಭೂಮಿಯನ್ನು ಬಿಟ್ಟ ದಿನವೇ ನನ್ನ ಮನಸ್ಸಿನಲ್ಲಿ ಅತ್ಯಂತ ಸಂಕಟವಾಗತೊಡಗಿದೆ. ಈ ವರೆಗೂ ಎಡಬಿಡದೇ ನನ್ನ ಜೊತೆಗೂಡಿ ಬಂದಿದೆ

ಶಂಕರ - ಅಂದರೆ ಪ್ರಕೃತಿ ಸರಿಯಾಗಿಲ್ಲವೇ !

ಮಹಾಂತೇಶ - ಛೇ ಪ್ರಕೃತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಆದರೆ ಮನಸ್ಸಿನ ಮೇಲೆ ಬಲವಾದ ಭಾರ ಹೇರಿದಂತಾಗಿದೆ. ಎಲ್ಲಿಯಾದರೂ ಒಬ್ಬನೆ ಕುಳಿತು ಅತ್ತು ಬಿಡುವಂತಾಗಿದೆ. ಮನಸ್ಸು ಅನುಭವಿಸುವ ಈ ಸಂಕಟದಿಂದ ಮೈಯೆಲ್ಲ ಬಳಲಿದಂತಾಗಿದೆ ನೋಡು ಅದೋ ನೋಡು (ಪತ್ರ ಕೊಡುವವನು) ನಮ್ಮ ಠಾಣೆಗೆ ಬಂದು ಹೋದಂತಿದೆ. ನಮಗೇನಾದರೂ ಬಂದಿವೆ ಏನೋ ನೋಡು

ಶಂಕರ - (ಒಳಗೆ ಹೋಗಿ ಬಂದು) ಮಿತ್ರ ನಿನ್ನ ಹೆಸರಿನಲ್ಲಿ ಒಂದು ಪತ್ರ ಬಂದಿದೆ ತೆಗೆದುಕೋ

ಮಹಾಂತೇಶ - (ಒಡೆದು ಓದುತ್ತ) ಮಿತ್ರ,.... ಶಂಕರ ಮಸ್ತಕದ ಮೇಲೆ ವಜ್ರಾಘಾತವಾಯಿತು ಇದ್ದೊಬ್ಬ ನನ್ನ ತಂಗಿ ದಾಕ್ಷಾಯಣಿ ವಿಷಮ ಜ್ವರಕ್ಕೆ ತುತ್ತಾದಳಂತೆ ತಂಗಿ... ತಂಗಿ...

ಶಂಕರ - ಏನು ? ನಿಮ್ಮ ತಂಗಿ ಹೋಗಿ ಬಿಟ್ಟಳೆ ?

ಮಹಾಂತೇಶ - ಹೌದು ನನ್ನ ತಂಗಿ ಹೋಗಿ ಬಿಟ್ಟಳು. ಮಿತ್ರಾ ನೌಕರಿಗೆ ಸೇರಿ ಮನೆಯಿಂದ ಹೊರಟಾಗ ಅಪ್ಪಿಕೊಂಡು ಅಳುತ್ತ ಬೀಳ್ಕೊಟ್ಟ ನನ್ನ ತಂಗಿಯ ಮುಖವನ್ನು ಮತ್ತೊಮ್ಮ

ಕಾಣುವ ಭಾಗ್ಯ ನನಗಿಲ್ಲದೇ ಹೋಯಿತೇ ? ಯೋಗ್ಯ ವರನಿಗೆ ಧಾರೆಯರೆದು ನನ್ನ ತಂಗಿಯ ಬಾಳ ಬಳ್ಳಿ ವಿಕಸಿತವಾಗುವದನ್ನು ಕಾಣಬೇಕೆಂದು ಬಯಸಿದ ನನ್ನ ಬಯಕೆ ಬಿಸಿಲುಗುದರೆರಾಯಿತೇ ? ಹಾಯ್ ನಿರ್ಭಾಗ್ಯ ಮಹಾಂತೇಶ

ಶಂಕರ - ಸೈರಿಸು ಮಿತ್ರ ಹುಟ್ಟು ಸಾವುಗಳು ದೈವಾದೀನ. ಸಾವು ಬದುಕುಗಳ ಅಭದ್ರ ಸೇತುವೆಯ ಮೇಲೆ ನಿಂತ ಸೈನಿಕನಾದ ನಿನಗೆ ಹೇಳಿ ಕೊಡಬೇಕೆ ? ದುಃಖ ಸಹಿಸು ಶಾಂತನಾಗು

ಮಹಾಂತೇಶ - ಅಯ್ಯೋ ! ಅಮ್ಮಾ ನಾನು ಅಗಲಿದ ಬಳಿಕ ತಂಗಿಯನ್ನು ಕಂಡು ನನ್ನ ವಿಯೋಗ ದುಃಖ ಮರೆಯಲಿದ್ದ ನಿನ್ನ ಹೃದಯಕ್ಕೆ ತಂಗಿಯ ಸಾವಿನ ಸಿಡಿಲಿನೇಟು ಬಡಿಯಿತೇ ? ಅನಂತ ಕಷ್ಟ ಯಾತನೆಗಳಲ್ಲಿ ಸಿಕ್ಕು ಹಣ್ಣಾದ ನಿನ್ನ ಜೀವ ಈ ಮಗಳ ಮರಣ ಹೊಡೆತವನ್ನೆಂತು ಸಹಿಸೀತು ?

ಶಂಕರ - ಮಿತ್ರ ನಿನ್ನ ತಂಗಿ ಎಂದು ದೇಹಬಿಟ್ಟಳಂತೆ ?

ಮಹಾಂತೇಸ - ಹೋದ ತಿಂಗಳ ಇಪ್ಪತ್ತನೇ ತಾರೀಕಿನಂದು ದೇಹ ಬಿಟ್ಟಳಂತೆ. ಇದೋ ನಮ್ಮಣ್ಣ ತಿಳಿಸಿದ್ದಾನೆ

ಶಂಕರ - ಅಂದರೆ ನಾವು ಮಾತೃಭೂಮಿಯನ್ನು ಬಿಟ್ಟು ಹೊರಟ ದಿನ. ನೀನು ಅದೇ ದಿನದಿಂದಲೂ ಈ ಮಹಾ ಸಂಕಟವನ್ನು ಅನುಭವಿಸುತ್ತಿರಲಿಲ್ಲವೇ ?

ಮಹಾಂತೇಶ - ಹೌದು ಮಿತ್ರ. ಕಣ್ಣಿಗೆ ಕಾಣದಿದ್ದರೂ ಕರುಳಿಗೆ ಗೋಚರವಾಗುತ್ತದೆ. ಅಂತೇಯೇ ನನ್ನ ಮನಸ್ಸಿನಲ್ಲಿ ಸಂಕಟ ಪಡುತ್ತಲಿದ್ದೆ. ಮಿತ್ರ ನನ್ನ ತಾಯಿಯೂ ಬಹಳ ದಿನ ಬದುಕಲಾರಳೆಂದೇ ನನಗನಿಸುತ್ತದೆ ಸಂಸಾರದ ಅನಂತ ಸಂಕಷ್ಟಗಳಿಗೆ ತತ್ತರಿಸಿ ಬೆಂಡಾದ ಅವಳ ಜೀವ ದೀಪವನ್ನು ಮಗಳ ಸಾವಿನ ಬಿರುಗಾಳಿ ಎಲ್ಲಿ ನಂದಿಸಿ ಬಿಡುವದೋ ಎಂದು ಭಯವಾಗತೊಡಗಿದ. ವಿಧಿಯೇ ಮರಳಿ ಮಾತೃ ಭೂಮಿಗೆ ತೆರಳಿದ ನಂತರ ನನಗೆ ಮಾತೃಮುಖ ದರ್ಶನ ಇಲ್ಲದಂತೆ ಮಾಡಿದರೆ ನಿನಗೆ ನನ್ನಾಣೆಯಾಗಿದೆ

ಶಂಕರ - ಇರಲಿ ನಡೆ ಮಿತ್ರ. ಬಂದ ಸಂಕಟಗಳನ್ನು ಮೆಟ್ಟಿ ಮನಸ್ಸಿನಿಂದ ಎದುರಿಸಲೇ ಬೇಕಲ್ಲ ? ಇಂದಿನ ಕಷ್ಟಮಾಲಿಕೆಗಳು ಮುಂದಿನ ಸುಖದ ಸೋಪಾನಗಳಂತೆ. ನಡೆ ಇನ್ನೊಮ್ಮೆ ಸ್ನಾನಮಾಡಿ ಐದು ನಿಮಿಷ ಮೌನವನ್ನಾಚರಿಸಿ ಸ್ವರ್ಗಸ್ಥಳಾದ ನಿನ್ನ ತಂಗಿಯ ಆತ್ಮಕ್ಕೆ ಶಾಂತಿಯನ್ನು ಬೇಡೋಣ

ಮಹಾಂತೇಶ - ಶಾಂತಿ. ಗೆಳೆಯ ನನ್ನ ಬಳಿಯಿರದ ಶಾಂತಿ ಇನ್ನು ದೇವರಿಂದ ಈ ಲೋಕ ಬಿಟ್ಟು ಹೋದ ನನ್ನ ತಂಗಿಗೆ ದೊರೆಯುವದೇ ?

ಶಂಕರ - ದೊರೆಯದು. ನಮ್ಮ ತಿಳುವಳಿಕೆ ಹಾಗೆಯೇ ನಮ್ಮ ಶಾಸ್ತ್ರಗಳು ಹೇಳುತ್ತವೆ. ಸತ್ತವರ ಆತ್ಮಕ್ಕೆ ಶಾಂತಿ ನೀಡೆಂದು ನಿರ್ಮಲ ಮನಸ್ಸಿನಿಂದ ದೇವರನ್ನು ಬೇಡುವುದು ಇದ್ದವರಾದ ನಮ್ಮ ಕರ್ತವ್ಯ ಅದನ್ನು ನಾವು ನೆರವೇಸಲೇಬೇಕಲ್ಲ ನಡೆ ಹೋಗೋಣ.

# ದೃಶ್ಯ - ೬

## - ಮನೆ ಸೀನು -

(ಸರಸು ಗರ್ಭಿಣಿಯಾಗಿದ್ದಾಳೆ. ಕಸೂತಿ ಹಾಕಿದ ಕೆಲಸ ಮುಗಿಸಿ ಹಾಡುತ್ತಾಳೆ)

ರಸಭರಿತು ಯೌವನ । ಹೊಂದಿರುವ ಜೀವನ ।
ಅಂದದಲಿ । ಶೋಭಿಸುವ ಬೃಂದಾವನ
ಕರೆಯುವೆ ನಾ ಕೋಗಿಲೆ । ತೆರೆದಿರುವ ಬಾಗಿಲೆ ।
ಮನ ಬಯಸಿ । ಕಾತರಿಸಿ । ಪಾವನ ।
ಆವರಿಸಿ । ಸುಧೆಸುರಿ ಜೀವನ ॥

ಮಹೇಶ - (ಬಂದು) ಸರಸು ಹಾಡುವದನ್ನೇ ನಿಲ್ಲಿಸಿಬಿಟ್ಟೆ ? ಸಂತೋಷದಲ್ಲಿ ಹಾಡುತ್ತಲಿದ್ದ ನೀನು ನಾನು ಬಂದ ತಕ್ಷಣ ನಿಲ್ಲಿಸಬೇಕೆ ? ನಾನು ಕೇಳಬಾರದೇ ನಿನ್ನ ಹಾಡನ್ನು

ಸರಸು - ಒಬ್ಬಳೇ ಕುಳಿತು ಬೇಸರ ಬಂದು ಹಾಡುತ್ತಲಿದ್ದೆ. ನೀವು ಬಂದ ಬಳಿಕ ಮತ್ತೇಕೆ ಹಾಡಬೇಕು ?

ಮಹೇಶ - ಏಕೆ ನಾನು ನಿನ್ನ ಹಾಡು ಕೇಳಬಾರದೇ ರಾಣಿ... ಅದಿರಲಿ ತೆಗೆದುಕೊ. ಈ ತಿಂಗಳ ಸಂಬಳ (ಕೊಡುತ್ತ) ನೋಡು ಈ ತಿಂಗಳ ಗೆಳೆಯರ ಜತೆ ಎರಡು ಸಲ ಕ್ಲಬ್ಬಿಗೆ ಹೋದ ಪ್ರಯುಕ್ತ ಐದು ರೂಪಾಯಿ ಕಡಿಮೆ ಇದೆ

ಸರಸು - ನೋಡಿ ನಾನೊಂದು ಮಾತು ಕೇಳುತ್ತೇನೆ ನೀವು ಸಿಟ್ಟಾಗಬಾರದು

ಮಹೇಶ - ನಿನ್ನ ಮೇಲೆ ನಾನೆಂದಾದರೂ ಸಿಟ್ಟು ಮಾಡಿದ್ದೇನೇ ? ಹುಚ್ಚಿ ಒಂದೇಕೆ ನೂರು ಮಾತು ಹೇಳು ನಡೆಸಿಕೊಡುತ್ತೇನೆ

ಸರಸು - ಇನ್ನು ಮೇಲೆ ಕೈ ಸ್ವಲ್ಪ ಹಿಡಿತದಲ್ಲಿಟ್ಟು ಖರ್ಚು ಮಾಡಿ ಯಾಕೆಂದರೆ... ಸಂಸಾರ ಈಗಿದ್ದ ಸ್ಥಿತಿಯಲ್ಲಿಯೇ ಮುಂದೆಯೂ ಇರುವುದಿಲ್ಲ

ಮಹೇಶ - ಅಂದರೆ ಮುಂದ ಬೇರೊಂದು ರೀತಿ ಇರುತ್ತದೆಯೇ ?

ಸರಸು - ಹೌದು ಸಂಸಾರವೆಂದ ಮೇಲೆ ಒಂದೇ ರೀತಿ ಇರುತ್ತದೇನು ? ಅಕಸ್ಮಾತ್ ಖರ್ಚಿಗೆ ದಾರಿಯಾಗಬಾರದೇ... ಒಳ್ಳೆನಮ್ಮ ಹೇಗೆ ಬಾಯಿಬಿಟ್ಟು ಹೇಳುವದು..

ಮಹೇಶ - ಹೇಳುತ್ತಲಿದ್ದ ಮಾತನ್ನು ಥಟ್ಟನೇ ನಿಲ್ಲಿಸಿ ಬಾಯಿ ಮುಚ್ಚಿದರೂ ಮುಖದಲ್ಲಿ ಮಾತ್ರ ನಗೆದಿಂಗಳು ಮತ್ತಷ್ಟು ಪಸರಿಸಿ ಅರುಣರಾಗಕ್ಕೆ ಎಡೆಮಾಡಿಕೊಟ್ಟಿತು ಸರಸು.

ನಾನೀವರೆಗೂ ನಿನ್ನ ಮುಖ ಪದ್ಮದಲ್ಲಿ ಕಾಣದ ಆನಂದ ವ್ಯಕ್ತವಾಗುತ್ತದೆ. ಅದಾವುದೆಂದು ಕೇಳಬಹುದಷ್ಟೇ ?

ಸರಸು - ಕೇಳಬಹುದು ಆದರೆ ಹೇಳಲಿಕ್ಕೆ ನನಗೇ ನಾಚಿಗೆ.... ನಾನೊಲ್ಲೆ

ಮಹೇಶ - ನೀನೆಷ್ಟು ನನ್ನಿಂದ ಮರೆಮಾಡಿದರೂ ನಾನು ಬಿಡಲಾರೆ ಹೇಳು ಅದೇನು ?

ಸರಸು - ಹೋಗಿ ನೀವು ನನ್ನ ಕಣ್ಣನ್ನೇ ನೋಡುತ್ತಲಿದ್ದರೆ ನಾನು...

ಮಹೇಶ - ಇರಲಿ ಹೇಳು ಚಿನ್ನಾ....

ಸರಸು - ನೀ.... ವು.... ಇನ್ನು ಸ್ವಲ್ಪ.... ಕಾಲದಲ್ಲಿ ಒಂದು ಮಗುವಿನ ತಂದೆಯಾಗುತ್ತೀರಿ

ಮಹೇಶ - ಆ.... ನಿಜವೇ ಸರಸು ಈ ನಿನ್ನ ಮಾತು ? (ಹೌದೆಂದು ಒಪ್ಪಿಗೆ)

ಅಮ್ಮಾ... ಅಮ್ಮಾ....

ಸರಸು - ಇಲ್ಲ ಅವರು ಇದೀಗ ಹೊರಗೆ ಹೋಗಿದ್ದಾರೆ. ಗುಡಿಗೆ ಹೋಗಿರಬಹುದು ಏಕೆ ? ತಾಯಿಯ ಎದುರು ಆಗಲೆ ಡಂಗುರ ಸಾರಬೇಕಾಯಿತೇನೋ

ಮಹೇಶ - ಸರಸು ಈ ಸಂತೋಷದ ಸಮಾಚರಕ್ಕೆ ನಾನೆಷ್ಟು ದಿನದಿಂದ ಕಾದಿದ್ದ ಬಲ್ಲೆಯಾ? ಇದನ್ನು ಯಾವಾಗ ಜನರೊಂದಿಗೆ ಹಂಚಿ ಆನಂದ ಪಡಲಿ ಎನ್ನಿಸುತ್ತದೆ. ಸರಸು ಇವತ್ತು ನನ್ನ ಮನಸ್ಸಿಗೆ ದೊಡ್ಡ ಭಾರ ಇಳಿಯಿತು

ಸರಸು - ನನಗೂ ಹಾಗೇ ಎನ್ನಿಸಿತು. ಮಕ್ಕಳಿಲ್ಲದ ಬಂಜೆಯಾಗಿ ಫಲವಿಲ್ಲದ ಬಳ್ಳಿಯಂತೆ ನನ್ನ ಬದುಕೆಲ್ಲ ಅಸಾರ್ಥಕವಾಗುತ್ತದೋ ಎಂದು ಅಂಜಿದ್ದೆ. ಆ ಭಯವನ್ನು ಬಿಡಿಸಿ ದೇವರು ಉಪಕರಿಸಿದ. ನನ್ನ ರಾಜ ಇದು ನಿಮಗೆ ಸಮ್ಮತವೆ ?

ಮಹೇಶ - ಹುಚ್ಚಿ ನನ್ನ ಪ್ರತಿಬಿಂಬ ನಿನ್ನ ಗರ್ಭಕಮಲದಲ್ಲಿ ರೂಪಗೊಳ್ಳುವದನ್ನು ಕಂಡು ಸಂತೋಷವಾಗಲಾರದೇ ?

ಸರಸು - ಇಂದು ನಮ್ಮ ಬಾಳು ಎಲ್ಲ ರೀತಿಯಿಂದಲೂ ಫಲಿಸಿತು

**ಪದ**

ಸರಸು - ಹೃದಯ ಕಮಲದಿ ನಿಮ್ಮಯರೂಪ॥
ಮೂಡಿತು ಮನೆಯ ಬೆಳಗುವ ದೀಪ ॥
ಭ್ರಾಂತಿಯ ನೀಗಿ । ಸಂತಸಕಾಗಿ ।
ಸಂಪದವೀಗ ಬಂದು ಬೇಗ ।

ಮಹೇಶ - ಮುಖಕಮಲದಲಿ ಅರುಣರಾಗ ॥
ರಂಜಿಸುತಿಹುದೆ ಸಂತತಿಯೋಗ
ರಾಗಮಯಿ ನೀ

ಸರಸು - ಈ ಸುಖ ಸಮಯದಿ

ಬಾ ನೀ ಮುದದಿ

ಮಹೇಶ - ದಂಪತಿಗಳ ಈ ಸುಖಮಿಲನದಲಿ ॥

(ಗೌರಮ್ಮ ಬರುವಳು)

ಮಹೇಶ - ಅಮ್ಮಾ ನಿನ್ನ ಸೊಸೆ ಗರ್ಭಿಣಿಯಾಗಿದ್ದಾಳಮ್ಮ

ಗೌರಮ್ಮ - ಆ.... ಹೌದೇನೇ ಸರಸು ?

ಸರಸು - (ನಾಚಿಕೆಯಿಂದ) ಹೌದು ಅತ್ತಿ

ಗೌರಮ್ಮ - ನನಗೂ ಅನುಮಾನ ಬಂದಿತ್ತಮ್ಮ. ನಾಳೆ ಬರುವ ಹುಣ್ಣಿಮೆಗೆ ನಿನಗೆ ನೀರು ನಿಂತು ಮೂರುತಿಂಗಳಾಯಿತಲ್ಲವೇ ? ಸಂತೋಷವಮ್ಮ ಇನ್ನು ನೀನು ಒಂದು ಜೀವವಲ್ಲ. ಎರಡು ಜೀವ, ಹೆಚ್ಚಿಗೆ ದಣಿವಾಗುವ ಯಾವ ಕೆಲಸವನ್ನು ಮಾಡಬೇಡ. ನಾನೆಲ್ಲ ನೋಡಿಕೊಂಡು ಹೋಗುತ್ತೇನೆ. ಏನಾದರೂ ಬಯಕೆ ಇದ್ದರೆ ಹೇಳಮ್ಮ ಮಾಡಿಕೊಡುತ್ತೇನೆ

ಸರಸು - ಆಗಲಿ ಅತ್ತೆ

ಗೌರಮ್ಮ - ಈಗ ನಿಮ್ಮ ತಂದೆಯವರಿದ್ದರೆ ಬಹಳ ಸಂತೋಷಪಡುತ್ತಲಿದ್ದರಪ್ಪ. ತಮ್ಮ ವಂಶ ಬಳ್ಳಿ ಕುಡಿಬಿಟ್ಟದ್ದನ್ನೇ ಕಾಣುವ ಭಾಗ್ಯ ಅವರಿಗಿಲ್ಲದೇ ಹೋಯಿತೇ ? ನಿನ್ನ ತಂಗಿಯೂ ಬದುಕಲಿಲ್ಲ

ಸರಸು - ಎಲ್ಲ ಕಾಣುವ ಭಾಗ್ಯ ನಿಮಗಾದರೂ ಇದೆಯಲ್ಲ ಅತ್ತೆ ?

ಗೌರಮ್ಮ - ಹೌದಮ್ಮ. ಕೇಳಿದ ತಕ್ಷಣ ದೇವರ ಮುಂದೆ ತುಪ್ಪದ ದೀಪ ಹಚ್ಚಿಡುವದನ್ನು ಬಿಟ್ಟು ಹಾಗೇ ನಿಂತು ಬಿಟ್ಟೆ. ಬೇಗ ದೇವರ ಮುಂದೆ ದೀಪ ಹಚ್ಚಿ ಬರುತ್ತೇನೆ ತಡೆಯಿರಿ (ಒಳಗೆ ಹೋಗುವಳು)

ಮಹೇಶ - ನಾವೆಷ್ಟು ಕಷ್ಟ ಕೊಟ್ಟರೂ ನಮ್ಮ ಸುಖವನ್ನು ಕಂಡು ಸಂತೋಷ ಪಡುವ ಹಡೆದ ಈ ನನ್ನ ತಾಯಿಯನ್ನು ಇನ್ನು ಮೇಲೆ ವಂಚಿಸುವದು ಸರಿಯಲ್ಲ ಸರಸು. ಮಹಾಂತೇಶ ಹಣ ಕಳಿಸುತ್ತಲಿರುವ ವಿಷಯವನ್ನು ಇವತ್ತು ತಾಯಿಗೆ ಹೇಳಿ ಬಿಡಲೇ

ಸರಸು - ನಿಮಗಂತೂ ಪ್ರಪಂಚ ಜ್ಞಾನವೇ ಇಲ್ಲ. ನೋಡಿ ಅದಕ್ಕೂ ಒಂದು ಕಾಲ ಬರುತ್ತದೆ. ಆಗ ಹೇಳುವಿರಂತೆ. ಈಗಲೇ ಏನು ಅವಸರ ? ಸುಮ್ಮನಿರಿ

ಮಹೇಶ - ಮಗನಿಗಾಗಿ ಪಡುವ ಮೂಕ ವೇದನೆಯನ್ನು ಕಂಡು ಕರುಳಿಗೆ ಬರೆ ಕೊಟ್ಟಂತೆ ಆಗುತ್ತಲಿದೆ ಅದಕ್ಕಾಗಿ

ಸರಸು - ಇರಲಿ ನಾನೆಲ್ಲ ಹೇಳುತ್ತೇನೆ ಸದ್ಯ ಸುಮ್ಮನಿರಿ

ಮಹೇಶ - ಅಲ್ಲದೇ ಮಹಾಂತೇಶ ಮೊನ್ನೆ ಬರೆದ ಪತ್ರದಲ್ಲಿ ಕೋರಿಯಾದಿಂದ ಭಾರತಕ್ಕೆ ಮರಳುತ್ತೇನೆಂದೂ ಇಲ್ಲಿಗೆ ಬಂದ ನಂತರ ರಜೆ ದೊರೆತರೆ ಬರುತ್ತೇನೆಂದೂ

ಬರೆದಿದ್ದಾನೆ. ನಾಳೆ ಅವನು ಬಂದ ಮೇಲೆ ಏನೆಂದು ಹೇಳುವದು ?

ಸರಸು - ಅದು ಮುಂದೆ ಯೋಚಿಸಬೇಕಾದ ಮಾತು. ಸದ್ಯಕ್ಕೆ ಈ ಸಂತೋಷದ ಸಮಾಚಾರವನ್ನು ನನ್ನ ಚಿಕ್ಕಪ್ಪನವರಿಗೆ ತಿಳಿಸುವುದಿಲ್ಲವೇ ?

ಮಹೇಶ - ಇಂದೇ ಪತ್ರ ಬರೆಯುತ್ತೇನೆ ಆಯಿತೇ ಸರಸು, ಈ ಸಂತೋಷಕ್ಕಾಗಿ ನನ್ನ ನಾಲ್ಕು ಜನ ಸ್ನೇಹಿತರಿಗೆ ಚಹಾ ಪಾರ್ಟಿ ಕೊಡಬೇಂಕೆಂದಿರುವ. ಇದಕ್ಕೆ ನಿನ್ನ ಒಪ್ಪಿಗೆ ಇದೆಯಷ್ಟೆ

ಸರಸು - ಬೇಡವೆಂದವರಾರು ? ಪಾರ್ಟಿ ಮನೆಯಲ್ಲಿಯೇ ನಡೆಯಲಿ

ಮಹೇಶ - ನಿನ್ನಿಷ್ಟ ನಡೆ ಒಳಗೆ (ಹೋಗುವರು ಪರದೆ)

(ರಸ್ತೆಯಲ್ಲಿ ಹನುಮಂತಿ ಸೋಮಣ್ಣ)

ಹನುಮಂತಿ - ಪತ್ರ ಎಂದು ಬಂತಂದಿ ?

ಸೋಮಣ್ಣ - ನಿನ್ನೆ ಬಂದೈತಿ ಹೇಳಬೇಕು ಅಂದ್ರ ಮರತ ಹೋಗಿತ್ತು

ಹನುಮಂತಿ - ಇಂಥಾವು ಹ್ಯಾಂಗ ನೆನಪು ಇರತಾವು ?

ಸೋಮಣ್ಣ - ಬರೆ ಹನ್ನೆರಡು ತಾಸು ನಿನ್ನ ಮುಂದ ಕುತಂದ್ರ ಹ್ಯಾಂಗ ನೆನಪು ಇರ್ತಾವ ಹೇಳು?

ಹನಮಂತಿ - ಅಲ್ಲಾ ವಾರದಾಗ ಮೂರು ಬಾರೆ ಕಚೇರಿ ಕಲಸ ಅಂತ ಮಂದಿ ಕಟಿಗೊಂಡು ಮಗಳ ಊರಿಗೆ ಹೋಗತೀ. ಅಲ್ಲೇ ಹೋಗಿ ಮಗಳ ಮಾರಿ ನೋಡಿ ಬರಾಕ ಏನದಾಡಿ ಆಗತ್ತೇಳು ? ಇದ್ದದ್ದು ಒಂದು ಹುಡುಗಿ ಹೊಟ್ಟೇಲೇ ಆಗೆತಿ. ದೇವರು ಕಣ್ಣು ಬಿಟ್ಟು ನೋಡ್ಯಾನ ಚಲೋ. ಒಂದು ಸೀರಿ ಖಣ ತರಬೇಕು ಮತ್ತೆ ಅಳಿಯಾಗ ಏನಿಲ್ಲಂದ್ರೂ ಎರಡು ತೂಲಿ ಉಂಗುರಾ ಮಾಡಿಸಬೇಕು. ನೋಡು ಹ್ಯಾಂಗ ಮಾಡತಿ ಇನ್ನ ತಿಂಗಳದಾಗ ಎಲ್ಲಾ ಆಗಬೇಕು

ಸೋಮಣ್ಣ - ಮನೀ ಕಾರಭಾರ ನಿನ್ನ ಕೈಯಾಗ ಕೊಟ್ಟೇನಿ. ಇದರ ಮ್ಯಾಲೆ ನನಗ ಉರಲ ಹಾಕಿದರ ನಾ ಏನ ಸಾಯಲಿ ?

ಹನಮಂತಿ - ನಾಳೆ ಹಿಂಗನಾದರೂ ಖರ್ಚು ಬರತಾವು ಅಂತನ ಅವ ಎರಡನೂರು ರೂಪಾಯಿ ಕೊಡಸಿ ಯಲ್ಲಪ್ಪಗ ಬಡ್ಡಿ ಕೊಟ್ಟಿದ್ಯಾ. ಈಗ ಅವು ಸಹಿತ ಶಿವಣ್ಣನ ಕೈಗೆ ಬಿದ್ದು ಕೂಡಿದ್ದು

ಸೋಮಣ್ಣ - ಈ ಹುಡುಗನ ಕಾಲಾಗ ನನಗಂತೂ ಸಾಕಾಗಿ ಹೋತು. ಒಟ್ಟ ಹನುಮಂತಿ ಅದರ ಹತ್ತಿರ ಬಾಳೇದ ಹಾದೀನ ಇಲ್ಲ

ಹನುಮಂತಿ - ಇರಲಿ ಸಾಕು ಸುಮ್ಮನಾಗು. ನೀಬಾಳೇ ಮಾಡಿ ಬಕ್ಕಬರಲೆ ಬಿದ್ದದ್ದು ಅಷ್ಟರಾಗ ಐತಿ. ಮತ್ತೆ ಹುಡುಗನ ಸುದ್ದಿಗೆ ಯಾಕ ಹೊಕ್ಕೀದಿ ?

ಸೋಮಣ್ಣ - ಅವನೂ ನನ್ನ ಬೈಯಾವ. ನೀನೂ ನನ್ನ ಬೈಯಾಕಿ ನಿಮ್ಮ ಕೈಯಾಗ ಸಾಕಾತು ಹನಮಂತಿ. ಉರಲರ ಹಾಕ್ಕೊಳ್ಳ್ಯಾ ?

ಹನಮಂತಿ - ಉರ್ಲು ನೀ ಯಾಕ ಹಾಕ್ಕೊಂತಿ

ಸೋಮಣ್ಣ - ನೋಡ ಹನಮಂತಿ... ನಾ ಇನ್ನ ಕಡೀ ಮಾತ ಹೇಳತೀನ. ಈ ಶಿವ್ಯನ ಸಲುವಾಗಿ ಸಾಕಾತು ಮನಿಯತ್ತರ ಬೆಳೆದು ಒಂದು ಹೊಲ ಮಾಡಲಿಲ್ಲ, ಒಂದು ಮನಿ ನೋಡಲಿಲ್ಲ. ನೀ ಇವತ್ತ ಅವಗ ಸ್ಪಷ್ಟ ಹೇಳಿಬಿಡು. ಬೇಸಂಗ ಬಾಳೇ ಮಾಡಿಕೊಂಡ ಹೋದ್ರ ಪಾಡಾತು, ಇಲ್ಲಾ ಮನಿಬಿಟ್ಟು ಹೊರಗ ಹಾಕತೀನಿ

ಹನಮಂತಿ - ಅಂದಾಕರ ಬಾಳೆ ಮಾಡಿ ಹಿಂದಕ ಮುಂದಕ ದುಡುದು ಗಂಟ ಮಾಡಿಕೊಂಡೀದಿ. ಇದ್ದದ್ದೊಂದು ಹುಡುಗನ್ನ ಮನಿಬಿಟ್ಟ ಹೊರಗ ಹಾಕತಾನಂತ. ಇದ ಮಾತನ ಯಾರರ ಕೇಳಿದರ ನಿನ್ನ ಮಾರಿಗೆ ಮಸಿ ಹಚ್ಚ್ಯಾರು

ಸೋಮಣ್ಣ - ಎಂದ ನಿನ್ನ ಗಂಟ ಹಾಕ್ಕೊಂಡೀನೋ ಅಂದ ನನ್ನ ಮಾರಿಗೆ ಮಸಿ ಹತ್ತೆತಿ

ಹನುಮಂತಿ - ನನ್ನಲ್ಲಿದ್ದನ ಹಿಂಗ ಆತು ಅಂತ ನೀ ಸಲ್ಲಿಗೆ ಸಾವಿರ ಸರೆ ಹಂಗಸ ಬ್ಯಾಡ

ಸೋಮಣ್ಣ - ಹನಮಂತಿ ನಿನಗ ಮಳ್ಳಾಗಿ ನನಬಾಳೆ ಮೂರಾಬಟ್ಟೆ ಆತು. ನನ ಬುದ್ಧಿ ಅಂದ್ರು ಹ್ಯಾಂಗಿತ್ತು ಅಂತ ತಿಳದಿ. ಈ ಊರ ಮಟ್ಟಿಗೆ ನಾನಾ ಗಾಂಧಿ ಮಾರಾಜ ಅಗಿದ್ಯಾ

ಹನಮಂತಿ - ಈಗರ ಆಗು ನಿನಗ ಬ್ಯಾಡ ಅಂದವರು ಯಾರು ? ಹೂ ಬರೇ ಇದ ಹಳೇ ಪುರಾಣ ಓತ್ತೀಯ ? ಏನು ರೂಪಾಯಿಕ ಹಾದೀ ಮಾಡತೀಯ ?

ಸೋಮಣ್ಣ - ಎದರೆಲೆ ಮಾಡಂದಿ ? ಗಳಿಸಿ ಕೊಟ್ಟಿರೇನು ತಾಯಿ ಮಗ ನನ್ನ ಕೈಯಾಗ. ಹೋಗಿ ಕೇಳಲ್ಲೆ ಮಗ ಮಗ ಅಂತ ಮೇಲಗಟ್ಟಿ ಮಾತಾಡತಿದ್ದಿ

ಹನಮವ್ವ - ನಿನ್ ಕೈಲಿ ಆಗೋದಿಲ್ಲ ಹೌದಿಲ್ಲ ಈಗ ?

ಸೋಮಣ್ಣ - ಹೌದು ಆಗೋದಿಲ್ಲ

ಶಿವಮೂರ್ತಿ - (ಬಂದು) ಏನೋ ಕಾಕಾ, ಏನೋ ಆಗೋದಿಲ್ಲ ಅಂತೀಯಲ್ಲ ?

ಹನುಮಂತಿ - ನಿಮ್ಮಕ್ಕಗ ಖಿಣಾ ಮಾಡೋದು ಆಗೋದಿಲ್ಲ ಅಂತಾನ ನೋಡಪ್ಪ ಶಿವಣ್ಣ

ಶಿವಮೂರ್ತಿ - ಹೌದೇನಪ್ಪ ಕಾಕಾ

ಸೋಮಣ್ಣ - ಹೌದಪ್ಪ

ಶಿವಮೂರ್ತಿ - ಮನಿ ಹಿರಿಯಾ ನೀ ಹುಂತ ಹೀಂಗ ಆಗೋದಿಲ್ಲ ಅಂದ್ರ ಹ್ಯಾಂಗಪ್ಪ ?

ಸೋಮಣ್ಣ - ಮನಿ ಹಿರಿಯಾಂತ ಮನಿಮಂದಿ ಮರ್ಯಾದಿ ಕೊಟ್ರ ಸೈಯಪ್ಪ. ಶಿವಮೂರ್ತಿ ಮರ್ಯಾದಿ ಅನ್ನೋವಸ್ತು ಮಂದಿ ಕೊಟ್ರ ಬರೋದಲ್ಲ. ತಾನು ನೀತಿ ದಾರ್‍ಯಾಗ ನಡಕೊಂಡು ಪಡಕೊಳ್ಳೋದು

ಹನಮೂರ್ತಿ - ನೋಡು ಸಣ್ಣ ಹುಡುಗನ ಕೈಲಿ ಬುದ್ಧಿ ಹೇಳಿಸಿಗೊಳ್ಳೋ ಪಾಳೇಕ ಬಂದ ಮ್ಯಾಲೆ ಹೇಳಕೊಂತೀದಿ ಈ ಊರ ಹಿರಿಯಾ ಅಂತ !

ಶಿವಮೂರ್ತಿ - ಇವರೆಂತ ಹಿರಿಯಾರು ? ಇವರೆಲ್ಲ ಬೇಲಿ ಹಿರಿಯಾರು. ತಾವು ಮಾಡೋ ಹೊಲಸತನಕ ಹೌದ ಅನ್ನೋರ ನಾಕಮಂದಿ ಕಟಗೆಂಡು ಆದಾರು

ಹನುಮಂತಿ - ಶಿವಣ್ಣ ಅವರದು ತಿಳಿದ ಮಾತ ಐತಿ. ತಗೊಂಡು ಏನ ಮಾಡತೀ ? ಈಗಂತೂ ನಿಮ್ಮಕ್ಕಗ ಖಣಾ ಮಾಡಬೇಕಾಗೇತಿ ಖರ್ಚಿಗೆ ಹಣಾ ಇಲ್ಲ ಅಂತ ಹಣಿ ಹಿಡಿದು ಕುಂತಾನ. ಅದಕ ತಮ್ಮ ನಾ ಒಂದ ಮಾತ ಹೇಳತೀನಿ ಕೇಳು. ನಿಮ್ಮಪ್ಪಾರು ತಾವು ಇದ್ದಾಗ ನನಗಂತನ ನಾಲ್ಕು ಸಾಮಾನ ಮಾಡಿಸಿಕೊಟ್ಟಿದ್ದು ಅವನ್ನ ನಿನ್ನ ಕೈಯಾಗ ಕೊಡತೀನಿ. ಮಾರಿ ರೂಪಾಯಿ ತಗೊಂಡ ಬಂದು ಈ ಖಣಾ ಮಾಡೋ ಕೆಲಸ ಅಷ್ಟು ಮುಗಿಸಿ ಬಿಡು. ಹುಡುಗಿ ಜೀವ ಮರುಗಬಾರದು

ಶಿವಮೂರ್ತಿ - ಯಾಕ ಕಾಕನ ಕೈಯಾಗ ಕೊಡಬೇಕು

ಸೋಮಣ್ಣ - ನಾವು ಆಕಿ ಪಾಲಿಗ ಪತ್ತಗೇಡಿ ಆಗೇವಪ ಶಿವು

ಶಿವಮೂರ್ತಿ - ನೀವು ಇಬ್ಬರೂ ಹೀಂಗ ಜಗಳಾಡತ ಕುಂದರ ಬ್ಯಾಡರಿ. ಅಪ್ಪಾರು ನಿನಂಗತ ಮಾಡಿಸಿದ ಸಾಮಾನಾ ಮಾರೂದು ನನ್ನ ಕಡಿಂದ ಆಗದ ಮಾತು. ಈಗ ಈ ಖಣಾ ಮಾಡೋ ಖರ್ಚು ಎಷ್ಟು ಬರುತ್ತ ಹೇಳ ಕೊಟ್ಟ ಬಿಡತೀನಿ

ಹನಮತಿ - ಅಷ್ಟ ರೊಕ್ಕ ನಿನ್ನ ಹತ್ರ ಎಲ್ಲಿಂದ ಬರತ್ತ ಶಿವಣ್ಣ ? ಏನಿಲ್ಲ ಅಂದ್ರು ಸನೇಕ ನಾಕೈದು ನೂರು ರೂಪಾಯಿ ಬೇಕಾದೀತು

ಶಿವಮೂರ್ತಿ - ಐದು ನೂರು ಕೊಟ್ರ ಆತಲ್ಲ. ಹೂಂ ಕೊಡತೀನಿ. ನೀನೂ ಕಾಕಾ ಹೋಗಿ ಏನೇನು ಸಾಮಾನು ಬೇಕು ಅವನೆಲ್ಲ ತಂದು ಖಣಾ ಮಾಡಿ ಬಂದು ಬಿಡ್ರಿ ತಿಳಿತ

ಪನಮಂತಿ - ನೋಡ ಇಷ್ಟತ್ತನ ಎಷ್ಟು ಹಾರ್‍ಯಾಡತಿದ್ದಿ ಈಗರ ತಿಳೀತ ನನ್ನ ಮಗನ ಬುದ್ಧಿ

ಶಿವಮೂರ್ತಿ - ಇನ್ನ ಹುರಪಲೆ ಹಾಕತಾನ ಕೋಟ. ಕಿಸೇಕ ರೂಪಾಯಿ ಬಿದ್ದರ ಚಟ್ಟನ ಹಾರತಾನ. ನಡಿಯಪ್ಪಾ ಕಾಕಾ ನಡಿಯಿನ್ನ (ಹೋಗುವರು)

# ದೃಶ್ಯ - ೧೦

## - ಮನೆ ಸೀನು -

ಮಹೇಶ - (ಬಂದು) ಸರಸು ಸರಸು (ಸರಸು ಬರುವಳು) ಇವತ್ತು ನನ್ನ ಸ್ನೇಹಿತರಿಗೆಲ್ಲ ಟಿಫಿನ್ ಕೊಡುವದಾಗಿ ಹೇಳಿ ಬಂದಿದ್ದೇನೆ. ಬೇಗನೆ ಸ್ವಲ್ಪ ತಿಂಡಿ ಕಾಫಿ ಮಾಡು

ಸರಸು - ನೀವು ಹೇಳಿದ ಬಳಿಕ ಮಾಡದಿರುತ್ತೇನೆಯೆ ? ಆದಿರಿಲಿ ನಿಮ್ಮ ಸ್ನೇಹಿತರು ಎಷ್ಟು ಜನ ಬರುತ್ತಾರೆ ?

ಮಹೇಶ - ಹೆಚ್ಚೇನಿಲ್ಲ ಕೇವಲ ಮೂರು ನಾಲ್ಕು ಜನ ಬರತಾರಷ್ಟೇ

ಗೌರಮ್ಮ - (ಬಂದು) ಮಹೇಶ ! ಇವತ್ತು ಬಿಟ್ಟು ಮತ್ತೊಮ್ಮೆ ಕರೆದುಕೊಂಡು ಬಂದರಾಗುವದಿಲ್ಲವೇನಪ್ಪ ? ಇಂದು ನನಗೆ ಮೈಯಲ್ಲಿ ಸರಿಯಿಲ್ಲ

ಸರಸು - ಇವತ್ತೆ ಟಿಫಿನ್ ಕೊಡುತ್ತೇನೆಂದು ಹೇಳಿ ಬಂದಿದ್ದಾರೆ. ಈಗ ಬೇಡವೆಂದರೆ ಯಾರಾದರು ನಗಲಿಕ್ಕಿಲ್ಲವೇ ? ಇವತ್ತೊಂದು ದಿನ ಸ್ವಲ್ಪ ದುಡಿದರ ಸತ್ತು ಹೋಗುತ್ತೀಯಾ ?

ಗೌರಮ್ಮ - ಇಲ್ಲಮ್ಮ ಸರಸು... ಮೂರು ದಿನದಿಂದಲು ಕಣ್ಣಿಗೆ ಚಕ್ರ ಬಂದ ಹಾಗಾಗುತ್ತದೆ. ಪಿತ್ತದ ಪ್ರಭಾವದಿದ ತಲಿ ಸುತ್ತಿದಂತಾಗಿ ಸುಮ್ಮನೇ ಬಿದ್ದು ಕೊಳ್ಳುವಂತಾಗಿದೆ

ಮಹೇಶ - ಅದೇನು ನಡೆಯುವದಿಲ್ಲಮ್ಮ. ಇವತ್ತು ನೀನು ಕಷ್ಟಪಟ್ಟು ಎಲ್ಲವನ್ನು ತಯಾರಿಸಲೇಬೇಕು. ಇಲ್ಲವೆಂದರೆ ನಡೆಯಲಾರದು

ಸರಸು - ಹೂಂ ಅತ್ತೆ ನಾನಷ್ಟು ಮನೆ ಶೃಂಗರಿಸುತ್ತೇನೆ. ನೀನು ತಿಂಡಿ ಕಾಪಿ ಬೇಗ ಸಿದ್ದಪಡಿಸು ಹೂಂ (ಗೌರಮ್ಮ ಹೋಗುವಳು) ನೀವು ನಿಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ಬಿಡಿ

ಮಹೇಶ - ಆಗಲಿ ಸರಸು ಎಲ್ಲ ವ್ಯವಸ್ಥೆಯನ್ನು ಸರಿಯಾಗಿ ನೋಡಿಕೋ. ನಾನೀಗಲೇ ಕರೆದುಕೊಂಡು ಬಂದು ಬಿಡುವೆ (ಹೋಗುವನು)

(ಸರಸು ಪದ ಹೇಳುತ್ತ ಮನೆ ಶೃಂಗರಿಸುವಳು)

- ಪದ -

ಅಂದ ಬಾಳಂದ । ಮಧುರ ಮನದ
ಸೊಬಗು ಜಗದ । ವಿರಸ ವಿರದ

ಬಾಳು ಭವದ । ಬೆಳಗು ಈಜೀವನ ॥ ಪ ॥
ಹರಷ ಹೊನಲೆ । ಹಾಡು ಕೋಗಿಲೆ ॥
ಕುಣಿವ ನವಿಲೆ ಬೆಳಗು ತಾರೆ । ಓ...
(ಮಹೇಶ ನಾಲ್ಕು ಸ್ನೇಹಿತರನ್ನು ಕರೆದುಕೊಂಡು ಬರುವನು)

ಮಹೇಶ - (ಸರಸುವಿಗೆ) ಸರಸು ಇವರು ನನ್ನ ಸ್ನೇಹಿತರು ಬನ್ನಿ ಮಿಸ್ಟರ್ ! ಕುಳಿತುಕೊಳ್ಳಿ

ಸರಸು - ಎಲ್ಲರಿಗೂ ನಮಸ್ಕಾರ ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದ ಹಾಗಾಯಿತು

ಒಂದನೆಯವ - ನಮ್ಮ ಸ್ನೇಹಿತ ಮಹೇಶನ ಮನಗೆ ಭಾಗ್ಯಲಕ್ಷ್ಮಿಯಾದ ನೀವು ನಮಗೆ ಉಪಚಾರ ಹೇಳಬೇಕಿಲ್ಲಮ್ಮ, ಮನೆ ನಮ್ಮದೆಂದೇ ಭಾವಿಸಿದ್ದೇವೆ

ಸರಸು - ನಿಮ್ಮಂಥ ನಿರ್ಮಲ ಹೃದಯದ ಸ್ನೇಹಿತರು ಬಾಳಿನಲ್ಲಿ ದೊರೆತದ್ದು ನಮ್ಮಂಥವರ ಭಾಗ್ಯವೆಂದು ಭಾವಿಸುವೆ

ಮಹೇಶ - ಸರಸು ಮಾತಿನಲ್ಲಿ ವೇಳೆ ಕಳೆಯಬೇಡ. ಹೋಗು ಎಲ್ಲರಿಗೂ ಟಿಫಿನ್ ಕೊಟ್ಟು ಬಿಡು

ಸರಸು - ಆಗಲಿ (ಒಳಗೆ ಹೋಗುವಳು)

ಗೆಳೆಯ - ನಿಮ್ಮ ಪತ್ನಿ ಸರಳ ಸ್ವಭಾವದವರೆಂದು ಕಾಣತ್ತದೆ

ಮಹೇಶ - ಹೌದು, ಇಂತಹ ಸರಳ ಹೃದಯದ ಪತ್ನಿ ನನಗೆ ದೊರತದ್ದೇ ನನ್ನ ಭಾಗ್ಯ !

ಸರಸು - (ಬಂದು) ಎಲ್ಲ ಸಿದ್ಧವಾಗಿದೆ. ಸದ್ಯ ತರುತ್ತಾಳೆ (ಗೌರಮ್ಮ ತಿಂಡಿ ಚಹ ಹಿಡಿದು ಹೊರಗೆ ಬರುವಳು)

ಗೆಳೆಯ - ಮಿಸ್ಟರ್ ಮಹೇಶ ! ನಿಮ್ಮ ಪತ್ನಿಯರು ಗರ್ಭಿಣಿಯಾದ ಪ್ರಯುಕ್ತ ಮನೆಯಲ್ಲಿ ಈ ಅಮ್ಮನನ್ನು ಕೆಲಸಕ್ಕಿಟ್ಟು ಕೊಂಡಿರಬೇಕು ಅಲ್ಲವೇ ?

ಸರಸು - ಹೌದು ಇವಳು ನಮ್ಮ ಕೆಲಸದಳವಳು (ಗೌರಮ್ಮ ಕೈಯಿಲಿದ್ದ ಸಾಮಾನ ಕೈ ಬಿಡುವಳು) ಎಲೆ ! ಹಾಳು ರಂಡಿ ತಿಂಡಿ ಕಾಫಿಯನ್ನೆಲ್ಲ ಹಾಳು ಮಾಡಿದಿ ಹಾಳಾದವಳೆ ? ನಡೆ ಒಳಗೆ ಬೇರೆ ತಿಂಡಿ ತಂದುಕೊಡು (ಒದೆಯವಳು)

ಗೌರಮ್ಮ - ನಾನು... ಕೆಲಸದವಳೇ... ಮಹೇಶ ರಕ್ತ ಬಸಿದು ನಿನಗೆ ಜನ್ಮ ಕೊಟ್ಟ ಈ ನಿನ್ನ ತಾಯಿ ನಿನ್ನ ಮನೆಯ ಕೆಲಸದವಳೇನಪ್ಪ ಮಹೇಶ (ಗೆಳೆಯರೆಲ್ಲ ಮಹೇಶನ ತಾಯಿ ಎಂದು ಆಶ್ಚರ್ಯದಿಂದ ಎದ್ದು ನಿಲ್ಲುವರು)

ಮಹೇಶ - ಕುಳಿತುಕೊಳ್ಳಿ ಗೆಳೆಯರೇ

ಗೆಳೆಯ - ಇಲ್ಲ ಮಹೇಶ ಮಡದಿಯ ಮೋಹಕ್ಕೆ ಒಳಗಾದ ನೀನು ಹಡೆದ ತಾಯಿಯನ್ನು ಇಂತಹ ಹೀನ ಸ್ಥಿತಿಯಲ್ಲಿ ನೋಡುವಿಯೆಂದು ನಾವು ತಿಳಿದಿರಲಿಲ್ಲ. ನಿನ್ನಂತಹ ಅಸಂಸ್ಕೃತರ ಮನಯಲ್ಲಿ ಒಂದು ಗುಟುಕು ನೀರು ಕುಡಿಯುವದು ಕೂಡಾ

ಮಹಾಪಾಪ ! (ಹೋಗಿಬಿಡುವರು)

ಗೌರಮ್ಮ - (ಮಗನ ಬಳಿ ಬಂದು) ಮಗು ಮಹೇಶ ! ನಾನು ನಿನ್ನ ಮನೆಯ ಕೆಲಸದವಳೇನಪ್ಪ?

ಮಹೇಶ - ಇರಲಿ ಸಾಕು ಬಾಯಿ ಮುಚ್ಚು. ಮಂದಿಯ ಸಮ್ಮುಖದಲ್ಲಿ ಮಗನ ಮಾನ ಕಳೆದು ಈಗ ಮಹೇಶ ಎಂದು ಬಂದಿದ್ದಾಳೆ ಹಾಳಾದವಳು. ನೀನು ಈಗ ಸುಮ್ಮನೆ ಸರಸುವಿನ ನಡತೆಯನ್ನು ಸಹಿಸಿದ್ದರೆ ಹಿಂದಿನಿಂದ ಅವಳನ್ನೂ ಈ ಮನೆಬಿಟ್ಟು ಹೊರದಬ್ಬಿ ಬಿಡುತ್ತಿದ್ದೆ ?

ಗೌರಮ್ಮ - ಮಹೇಶ ! ಒಡಲು ತೆರೆದು ಹಡೆದ ಈ ನಿನ್ನ ತಾಯಿಯನ್ನು ದಾಸಿಯನ್ನ ಬೇಕೆನಪ್ಪ ಈ ನಿನ್ನ ಮಡದಿ ? ಇದನ್ನು ಕಂಡು ನಾನು ಸುಮ್ಮನಿರಬೇಕೇ ?

ಸರಸು - ಸುಮ್ಮನಿರಬೇಡ ಹೀಗೆಂದರೆಂದು ಊರೆಲ್ಲ ಡಂಗುರ ಸಾರಿಕೊಂಡು ಬಾ. ನೋಡಿ ಸ್ವಾಮಿ ! ಇಂದು ನಿಷ್ಠುರವಾಗಿ ಹೇಳಿ ಬಿಡುತ್ತೇನೆ. ಮನೆಗೆ ಬಂದ ನಾಲ್ಕು ಜನ ನಿಮ್ಮ ಸ್ನೇಹಿತರ ಮುಂದೆ ನನ್ನ ಮಾನ ಕಳೆದ ಈ ನಿಮ್ಮ ತಾಯಿ ಮನೆಯಲ್ಲಿರಬೇಕು ಒಂದು. ಇಲ್ಲವೇ ನಾನು ಮನೆಯಲ್ಲಿರಬೇಕು ಒಂದು

ಗೌರಮ್ಮ - ಸರಸು ನನ್ನ ಮಗನ ಹೆಂಡತಿಯಾಗಿ ನನ್ನ ಮನೆಗೆ ಬಂದ ನೀನು ನಮ್ಮ ಮನೆ ಮಸಣಗೈದದ್ದು ಸಾಲದೇ, ತಾಯಿ ಮಕ್ಕಳ ಮಮತೆಯನ್ನು ಕತ್ತರಿಸಿ, ನನ್ನನೇ ಮನೆ ಬಿಟ್ಟು ಹೊರದಬ್ಬಬೇಕೆಂದು ನಿನ್ನ ಗಂಡನಿಗೆ ಉಪದೇಸಿಸಬೇಕೆ ? ಮಹೇಶ ಮಡದಿಯ ಮೈಯ ಸುಖಕ್ಕೆ ಮರಳಾಗಿ ಹಡೆದ ತಾಯಿಯನ್ನೇ ಮನೆಯಿಂದ ಹೊರ ನೂಕುವೆಯೇನಪ್ಪ ?

ಮಹೇಶ - (ಸ್ವಲ್ಪ ಮುಂದೆ ಬಂದು) ಏನು ಮಾಡಲಿ ಒಂದು ಕಡೆ ರಕ್ತ ಬಸಿದು ಜನ್ಮ ಕೊಟ್ಟ ಹಡೆದ ತಾಯಿ ಕರುಳು. ಬೇರೊಂದು ಕಡೆ ಮಡದಿಯ ಮೈಯ ಮೋಹದ ಉರುಲು ಯಾವದನ್ನು ಮೆಚ್ಚಲಿ, ಯಾವುದನ್ನು ಕೊಚ್ಚಲಿ ? ಇವರಿಬ್ಬರನ್ನು ಕೂಡಿ ನಡೆಯುವದು ಸಾಧ್ಯವಿಲ್ಲ. ಈ ವಿಷಮ ಸ್ಥಿತಿಯಿಂದ ಯಾರಿಗೂ ಸುಖವಿಲ್ಲ. ಮಡದಿಯನ್ನು ಹೊರ ನೂಕಿದರೆ ನನ್ನ ಸಂಸಾರವೇ ಒಡೆದು ಹೋಗುವದು. ಇನ್ನು ತಾಯಿ.... ಈ ವಿಷಮ ಸ್ತಿತಿಯಿಂದ ಯಾರಿಗೂ ಸುಖವಿಲ್ಲ. ಅಮ್ಮ ಖರ್ಚಿಗೆ ಹಣ ಕೊಡುತ್ತ ಹೋಗುತ್ತೇನೆ. ನೀನೆ ಬೇರೆ ಮನೆಯಲಿದ್ದು ಬಿಡು. ಕೂಡಿಕೊಂಡಿರುವಲ್ಲಿ ಯಾರಿಗೂ ಸುಖವಿಲ್ಲ

ಗೌರಮ್ಮ - ಮಹೇಶ ನಿನ್ನ ಕಾಲಿಗೆ ಬೀಳುತ್ತೇನೆ. ಮನೆ ಬಿಟ್ಟು ಹೊರಗೆ ನೂಕಬೇಡಪ್ಪ. ಕಣ್ಣು ಮಂದವಾಗಿವೆ. ಕೈ ಕಾಲುಗಳಲ್ಲಿ ಶಕ್ತಿಯಿಲ್ಲ. ಮುಪ್ಪಿನವಳಾದ ನಾನು ಒಬ್ಬಳೇ ಹೇಗೆ ಬದುಕಲಪ್ಪ ಮಹೇಶ

ಸರಸು - ಬದುಕದಿದ್ದರೆ ಸಾಯಿ. ಮಂದಿಯಲ್ಲಿ ಮಾನ ಕಳೆದು ಮತ್ತೆ ಅತ್ತು ಸೋಗು ಮಾಡಲು ಬಂದಿದ್ದಾಳೆ, ಹಾಳಾದವಳು ಹೂ... (ಒಳಗೆ ಹೋಗಿ ಸೀರೆ ತಂದು ಚೆಲ್ಲಿ) ಹೂ ಇವನ್ನು ತೆಗೆದುಕೊಂಡು ಹೊರಡು. ಮೊದಲು ನನ್ನ ಮನೆಬಿಟ್ಟು ನಡೆಯಿರಿ. ಸ್ವಾಮಿ

ಒಳಗೆ ಬನ್ನಿ (ಒಳಗೆ ಹೋಗುವಾಗ)

ಗೌರಮ್ಮ - ಮಹೇಶ (ಎಂದು ಕೂಗುವಳು) ಮಹೇಶ... ಓ ವಿಧಿಯೇ ತಾಯಿ ಮಕ್ಕಳ ಋಣ ಇಲ್ಲಿಗೆ ಮುಗಿದು ಹೋಯಿತೇ

- ಪದ -

ಸುಖರಹಿತ । ಬಲು ಅಹಿತ ಈ ಬಾಳು ಏಕೆ ।
ಕಣ್ ಬೆಳಕು ತಾನಳಿದು ನಾ ಬಾಳಬೇಕೆ ?. ॥ ಪಲ್ಲ ॥
ಯವ್ವನದಿ ಪತಿಯಿಂದ ಸುಖ ಕಂಡುದಿಲ್ಲ ।
ವಾರ್ಧಿಕ್ಯದಲಿ ಸುತನು । ತಾ ನೋಡಲಿಲ್ಲ
ಸೊಸೆಗಾಗಿ ಅಳಲೆ । ಬರಿ ದುಃಖ ಉಣಲ
ಈ ಬದುಕು ಬೇವು ಬೆಲ್ಲ ॥

- ರಸ್ತಾ -

ಗೌರಮ್ಮ - ಓ ವಿಧಿಯೇ ನಿನಗಿನಿತೂ ಕರುಣೆಯಿಲ್ಲವೇ ? ನಾನಾವ ಅಪರಾದ ಮಾಡಿದೆನೆಂದು ನನಗಿಂತಹ ಘೋರ ಶಿಕ್ಷೆಯನ್ನಿತ್ತೆ ? ಯಾವ ಜನ್ಮದಲ್ಲಿ ಯಾವ ತಾಯಿಯ ಕಣ್ಣಲ್ಲಿ ನೀರು ಹರಿಸಿದ್ದೇನೆಂದು ಬದುಕಿನುದಕ್ಕೂ ಈ ಸಂಕಷ್ಟಗಳ ಸಿಡಿಲಿನ ಹೊಡೆತ ಕೊಡುತಲಿರವೆ ? ನಾನು ಮಾಡಿದ ಅಪರಾಧವಾದರೂ ಏನು ? ನಾನೇನು ಮಾಡಿದರೆ ನನ್ನ ಮೇಲಿದ್ದ ನಿನ್ನ ದಾಹ ತಣೆಯವದು ಭಗವಂತ ? ನೀನಿಷ್ಟು ನಿರ್ದಯನಾಗಬೇಕೇ ? ಪುಣ್ಯವಂತರಿಗೆ ಮಗಳಾಗಿ ಜನಿಸಿ ಆಗರ್ಭ ಶ್ರೀಮಂತರ ಪತ್ನಿಯಾಗಿ ಮುತ್ತಿನಂತಹ ಮೂರು ಮಕ್ಕಳನ್ನು ಹೆತ್ತು ಮಕ್ಕಳ ಕೈಯಿಂದಲೇ ಕತ್ತಿಗೆ ಕೈ ಕೊಟ್ಟು ಮನೆಯಿಂದ ಹೊರದಬ್ಬಿಸಿಕೊಂಡು ತುತ್ತು ಕೂಳಿಗೆ ಕೂಲಿಯಾಗಿ ದುಡಿದು ಒಡಲು ತುಂಬಿಕೊಳ್ಳುವಂತಾಯಿತೇ ನನ್ನ ಹೇಸಿ ಬಾಳು. ಬಾಳೆಂಬುದಿದು ಹಾಳು. ದೈವ ಒಲಿದು ನಡಿಸಿದರುಂಟು ಇಲ್ಲದಿದ್ದರೆ ಬರಿ ಭ್ರಮೆಯ ಗಂಟು ? ಎಂದು ಹರಿದು ಹೋಗುವದೋ ಈ ದೇಹ ಜೀವಗಳ ಗಂಟು ? ಬಾಳಿನುದ್ದಕ್ಕೂ ಕಷ್ಟ ನೋವುಗಳನ್ನುಂಡು ಹಣ್ಣಾದ ನನ್ನಿಂದ ದುಡಿದು ಒಡಲು ತುಂಬಿಕೊಳ್ಳಲು ಸಾದ್ಯವೇ ? ಮಹಾಂತೇಶ ಎಲ್ಲಿರಿವೆಯಪ್ಪಾ ನಿನ್ನ ಅಣ್ಣಾ ಅತ್ತಿಗೆಯವರಿಂದ ಮನೆಯಿಂದ ಹೊರದಬ್ಬಿಸಿಕೊಂಡು ಪರದೇಸಿಯಾಗಿ ಅಲಿಯುವ ಈ ನಿನ್ನ ತಾಯಿಯ ಕರುಳು. ಕರೆ ನಿನಗ ಕೇಳಿಸಲಾರದೇನೋ ಕಂದಾ ಮಹಾಂತೇಶ (ಎಂದು ಚೀರುತ್ತ ಹೋಗುವಳು)

# ದೃಶ್ಯ - ೧೧

(ಮಿಲ್ಟ್ರಿ ಹಾಸ್ಪೆಲು ಸನ್ನಿವೇಶ... ಮಹಾಂತೇಶ ಹಣೆಯ ಪಟ್ಟೆ ಕಟ್ಟಿಕೊಂಡು ಪಲ್ಲಂಗದ ಮೇಲೆ ಮಲಗಿದ್ದಾನೆ. ಬದಿಯ ಖುರ್ಚಿಯ ಮೇಲೆ ಶಂಕರ ಪತ್ರಿಕೆ ನೋಡುತ್ತ ಕುಳಿತ್ತಿದ್ದಾನೆ)

ಮಹಾಂತೇಶ - (ಚಟ್ಟನೆ ಎದ್ದು) ಅಮ್ಮಾ... ಅಮ್ಮಾ ?

ಶಂಕರ - (ಗಾಬರಿಯಿಂದ) ಇದೇನು ಮಿತ್ರ ಹೀಗೆಕೇ ಕೂಗಿಕೊಂಡೆ ? ಏನಾಯಿತು

ಮಹಾಂತೇಶ - ಈಗ ನಾನೆಲ್ಲಿರುವೆ...?

ಶಂಕರ - ಮಿಲ್ಟ್ರಿ ಹಾಸ್ಪೆಲಿನಲ್ಲಿ. ನಿನ್ನ ಪರೇಡಿನಲ್ಲಿ ನಿನ್ನ ಹಣೆಗೆ ಗಾಯವಾಗಿದ್ದರಿಂದ ಇಲ್ಲಿ ತಂದು ಮಲಗಿಸಿರಲಿಲ್ಲವೇ ? ಕಾರಣ ನಿನ್ನೊಬ್ಬನನ್ನೇ ಬಿಟ್ಟಿರದೇ ನಾನೂ ಇಲ್ಲಿಯೇ ಇದ್ದೇನೆ. ಅದಿರಲಿ, ನೀನು ಇದೀಗ ಹೀಗೆಕೆ ಚೀರಿದೆ ? ಯಾವದಾದರೂ ಕೆಟ್ಟ ಸ್ವಪ್ನ ಕಂಡೆಯಾ ?

ಮಹಾಂತೇಶ - ಸ್ವಪ್ನ ! ಹೌದು ಮಿತ್ರ ನನ್ನ ತಾಯಿ ಪರದೇಶಿಯಂತೆ ಅಲೆಯುತ್ತ ನನ್ನ ಹೆಸರು ಹಿಡಿದು ಕೂಗಿದಂತಾಯಿತು ಗೆಳೆಯಾ... ನನ್ನ ತಾಯಿಗಲ್ಲಿ ಯಾವ ಸಂಕಟ ಪ್ರಾಪ್ತವಾಗಿರುವದೋ ನಾಕಾಣೆ !

ಶಂಕರ - ಮನದ ದುಗುಡವನ್ನೆ ಮೆಲಕು ಹಾಕುತ್ತ ಮಲಗುವದರಿಂದ ಬೀಳುವ ನಿರಾದಾರ ಸ್ವಪ್ನಗಳಿಗಿಷ್ಟು ಬೆದರುವದೇ ?

ಮಹಾಂತೇಶ - ಸ್ವಪ್ನ ನಿರಾಧಾರವಲ್ಲ ಗೆಳೆಯ. ನಮ್ಮ ಸೂಪ್ತ ಚಿತ್ತದವಾಣಿ. ಕಣ್ಣು ಕಾಣದದ್ದನ್ನು ಕರಳು ಕಂಡು ಸ್ವಪ್ನ ರೂಪದಿ ಬರೆಯುವದೆಮ್ಮ ಚಿತ್ತ ಭಿತ್ತಿಯ ಮೇಲೆ. ಮಿತ್ರ ನನ್ನ ತಾಯಿಗಲ್ಲಿ ಏನೋ ಕೇಡಾಗಿರಲೇಬೇಕು. ಅಂತೆಯೇ ನನಗಿಂತಹ ದುಸ್ವಪ್ನ ಬಿದ್ದಿರಲು ಸಾಕು. ಮಾತೃ ಸಂದರ್ಶನದ ಸೇವೆಗಾಗಿ ಉಕ್ಕೇರುತಿದೆ ನನ್ನ ಹೃದಯ ಶರದಿ. ಎಂದು ನನಗೆ ಬಿಡುಗಡೆ ದೊರೆಯುವದೋ ನಾ ಕಾಣೆ

ಶಂಕರ - ಇಂದು ನಾಳೆ ಇಷ್ಟರಲ್ಲಿಯೇ ನಮ್ಮಿಬ್ಬರಿಗೂ ಬಿಡುಗಡೆಯ ಆಜ್ಞೆ ದೊರಡುವದೆಂದು ನಿನ್ನೆ ಮೇಲಾಧಿಕಾರಿಗಳು ತಿಳಿಸಿದ್ದಾರ. ಅಲ್ಲಿಯವರೆಗೂ ಸ್ವಲ್ಪ ಸೈರಿಸು

ಮಹಾಂತೇಶ - ಸೈರಣೆಯ ಸೂತ್ರ ಹರಿದಿದೆಯಪ್ಪ... ಒಂದೇ ಸಮ ಕರೆಯುವತಿದೆ ಹೆತ್ತವ್ವನ ಕರೆ. ಮಾತೃ ಸಂದರ್ಶನಕೆ ನನ್ನ ಹೃದಯ ಕಾತರಿಸಿ ಹರಿಯುತಿವೆ ಕಂಬನಿಯ ಧಾರ

ಕೇಳಲಾರದೇ ದೇವಾ ಈ ತಾಯಿ ಮಕ್ಕಳ ಮೊರೆ (ಒಳಗೆ ಲೆಟರ್ ಎಂದು ಕೂಗುವರು) ನೋಡು ಮಿತ್ರ ಏನದು ?

ಶಂಕರ - (ಎದ್ದು ಒಳಗೆ ಹೋಗಿ ಬಂದು) ಮಿತ್ರಾ ನೋಡಿಲ್ಲಿ ನಿನ್ನಾಸೆ ಫಲಿಸಿತು. ನಿನ್ನ ಸಂಕಷ್ಟ ಕಾಣಲಾರದೇ ದೈವ ಎಲ್ಲರನ್ನು ಕರುಣಿಸಿತು. ನಾಳಿನಿಂದಲೇ ನಮ್ಮಿಬ್ಬರ ಬಿಡುಗಡೆ

ಮಹಾಂತೇಶ - ಆ ಬಿಡುಗಡೆ ? ನಮ್ಮಿಬ್ಬರ ಬಿಡುಗಡೆ ! ಮಿತ್ರ ಈ ಸಂತಸದ ಸುದ್ದಿಯನ್ನು ಓದಿ ಹೇಳಿದ ನಿನಗಿದೋ ಶತ ನಮಸ್ಕಾರಗಳು

ಶಂಕರ - ಏಳು ಇನ್ನೇಕೆ ವಿಳಂಬ. ನಮ್ಮೆಲ್ಲ ಸಹದ್ಯೋಗಿ ಮಿತ್ರರ ಭೇಟಿಯಾಗಿ ಬರೋಣ ನಡೆ

ಮಹಾತೇಶ - ನಡೆ ಹಾಗಿದ್ದರ ಈಗಲೇ (ಹೋಗುವರು)

**ರಸ್ತಾ ಜಂಗಲ್**

(ಹನುಮಕ್ಕ, ಸೋಮಣ್ಣಾ ಗಂಟು ಎತ್ತಿಕೊಂಡು ಬರುವರು)

ಹನುಮಂತಿ - ಹೂಂ ಸರಾ ಸರಾ ಬಾ ಕಾಲಾಗೇನುರುಳಿ ಹಾಕೇತೇನು ಸಾವಕಾಶ ಬರಾಕ ?

ಸೋಮಣ್ಣಾ - ತಲಿಮ್ಯಾಲೆ ಹೊತ್ತ ಈ ಗಂಟು ಬಾಳ ವಜ್ಜೆ ಐತಿ. ಏನೇನ ಕಟ್ಟಿದೇ ಹನಮಂತಿ ಇದರಾಗ ? ಇಂತಾ ಪರಿ ಗಂಟು ಹೊತಗೊಂಡ ನಡೂದು ನನ್ನ ಕೈಲೆ ಆಗಕಿಲ್ಲ ಬಿಡು. ನಮ್ಮೂರ ರೋಡ ರಿಪೇರಿ ಮಾಡಿಸಿ ಇಲ್ಲಿಗೊಂದು ಬಸ್ ಇದ್ರಿ ಅಂತಾ ಕಮಿಟಿ ಒಳಗ ನಾ ತಿಂಗಳಿಗೊಮ್ಮೆ ತಪ್ಪದ ತಲಿ ಒಡಕೊಂಡರೂ ಕೇಳವರ ಇಲ್ಲದ್ದಂಗ ಆಗೇತಿ ಹನಮಂತಿ, ಜರ ನಿಂದರು

ಹನಮಂತಿ - ಯಾಕ ನಿಂದ್ರ ಬೇಕು ? ಹಿಂಗ ನಿಂತಗೊಂತ ಕುತಗೊಂತ ಹೋದರ ಮಗಳ ಊರು ಎಂದು ಮುಟ್ಟಬೇಕು. ಖಣಾ ಯಾವಾಗ ಮಾಡಬೇಕು ? ಬಾ ಸರಾ ಸರಾ

ಸೋಣ್ಣಾ - ಸ್ವಲ್ಪ ನಿಂದ್ರ ಹಿಂಗ್ಯಾಕ ಮಾಡತೀದಿ, ಬಾಲ ಸುಟ್ಟ ಬೆಕ್ಕಿನಂಗ. ಜರಾ ಎಲಿ ಅಡಕಿ ತಾ ಹಾಕ್ಕೊಳ್ಳೋಣ

ಹನಮಂತಿ - ಅಯ್ಯ ! ವಳೇ ಗಂಟಬಿದ್ದಿ ನೋಡ ನೀ ನನಗ

ಸೋಮಣ್ಣಾ - ಗಂಟ ನಾ ಬಿದ್ದಿಲ್ಲಿ ನೀನ ಬಿದ್ದಿದಿ ನೋಡು. ಕುಂದ್ರ ಜರ, ಎಲಿ ಅಡಕಿ ತಾ (ಗಂಟು ಇಟ್ಟು ಕೂಡುವನು)

ಹನುಮಂತಿ - (ಸಿಟ್ಟಿನಿಂದ) ನೀ ಬಲೆ ಪೀಡಾ, ಸಂಕ್ರಾತಿ ಮುದುಕ ಆದರೂ ಬುದ್ದಿನ ಬರಲಿಲ್ಲ ನಿನಗ. ಹೂ ತಗೋ ಎಲಿ ಚಂಚಿನ (ಕೊಡ ಹೋಗುವಳು)

ಸೋಮಣ್ಣಾ - ನೀನು ಹಚ್ಚಿಕೊಡ ಸ್ವಲ್ಪ ಬಾಯಿ ಕೆಂಪು ಬಡಿಯುವಂಗ. ಹಂಗ ನೀ ಅಷ್ಟ ಹಾಕ್ಕೋ

ಹನಮಂತಿ - ಜರಾನರೂ ಬುದ್ದಿ ಇಲ್ಲಲ್ಲ ಶೆಟ್ಟಿ ನಿನಗ. ಈ ಹುಡುಗ ಬಂದು ನೋಡಿದಾ ಅಂದ್ರ ನಿನ್ನ ಅಡಿ ಪಾಲು ಮಾಡ್ಯಾನು ಏಳು ಸುಮ್ಮನ (ಏಳ ಹತ್ತುವಳು)

ಸೋಮಣ್ಣ - (ಜಗ್ಗಿ ಕೂಡ್ರಿಸಿ) ಇಗ್ಗಾ ಹುಚ್ಚು ಮಳ್ಳಿ. ಕಾಚ ಸ್ವಲ್ಪು ಹೆಚ್ಚಾಗಲಿ ನೋಡ ಹನಮಂತಿ. ಹುಣಸಿ ಗಿಡ ಮುಪ್ಪು ಆದರೂ ಹುಳಿ ಹೋಗದು ಅದ್ದಂಗ ಹಳೆ ನೆನಪ ಎಂದೂ ಮರಿಯಾಕ ಸಾದ್ಯ ಇಲ್ಲ. ಆಗ ಅದ ಹುಣಸೀಗಿಡದ ಬುಡಕ ಅಲ್ಲ ಮದಲ ನೀ ನನಗ ಒಲಿದದ್ದು (ಕೈ ಹಿಡಿಯ ಹೋಗುವನು)

ಹನಮಂತಿ - (ದೂರ ಸರಿದು) ನಿನಗಂತೂ ಜರಾ ಬುದ್ಧಿ ಇಲ್ಲ ನೋಡ ಶೆಟ್ಟಿ. ಹಾದ್ಯಾಗ ಮೈ ಕೈ ಮುಟ್ಟತಿಯಲ್ಲ ಪಂಗಾಮದ ಹುಡಗರಕ್ಕಿಂತ ಕಡೀಯಾಗಿ

ಸೋಮಣ್ಣ - ನಮ್ಮ ಮುಂದ ಏನು ಮಾಡ್ತಾವ ಈಗಿನ ಪಂಗಾಮದ ಪುಡುಗರು. ನೋಡಲೆ ಹನಮಂತಿ ನನ್ನಂತ ರಸಿಕ ನಿನಗೆ ಸಿಗಬೇಕಾದರ ನೀ ಹಿಂದಿನ ಜನ್ಮದಾಗ ಬಾಳ ಪುಣ್ಯ ಮಾಡೀದಿ. ಸ್ತ್ರೀ ಅನ್ನೋದು ನನ್ನ ಕಣ್ಣಾಗ ಒಂದು ರತ್ನ ಇದ್ದಾಂಗ. ಸಮುದ್ರ ಮಥನ ಮಾಡೋ ಕಾಲಕ್ಕ ಹುಟ್ಟಿದ ಒಂಭತ್ತು ರತ್ನಗಳಲ್ಲಿ ಸ್ತ್ರೀನೂ ಒಂದು. ಇಂಥಾದನ್ನ ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಅನ್ನೋದು ಬಾಳ ಜನಕ್ಕೆ ತಿಳಿದಿಲ್ಲ

ಹನಮಂತಿ - ನಿನ್ನ ಮಾತಿಗೆ ಎಂಥಾ ಹೆಣ್ಣಾದರೂ ಮಳ್ಳ ಆಗತಾವ ನೋಡು

ಶಿವಮೂರ್ತಿ - (ಬರುತ್ತ ಯಲ್ಲನ ಜತೆಗೆ) ಗಾಡಿ ಯಾಕ ಬ್ರೆಕ್ ಡೌನ್ ಆಗೆತಲ್ಲ. ಯಾಕೋ ಕಾಕಾ ನಡಕ ನಿಂತ ನೀರ ತೊಗೊಂತೇನು ?

ಸೋಮಣ್ಣ - ಹೌದಪ್ಪ ಶಿವು ಇದು ನಮ್ಮ ನಿಲ್ದಾಣ

ಶಿವಮೂರ್ತಿ - ಅಬಬ ! ಬಾಯಿ ಎಷ್ಟ ಬರಾ ಕೆಂಪು ಆಗ್ಯಾವಲ್ಲ ಇಬ್ಬರವು. ಮಾತಿನ ಗಾಡಿ ಬಲೇ ಸಂಪಾಗೇ ನಡದಿತ್ತೇನು ? ನಾವು ಬಂದಲ್ಲೆ ಕೆಂಪ ನಿಶಾನಿ ಕಂಡಂಗ ಆಗಿ ನಿಂತಿರಬೇಕು... ಹೂ ಕಾಕಾ ಹೊರು ಇನ್ನ ಗಂಟನ

ಯಲ್ಲಪ್ಪ - ನಾನಿರೂಕ ಶೆಟ್ರ ಯಾಕ ಗಂಟು ಹೊರಬೇಕರಿ. ತರ್ರಿ ಇಲ್ಲೆ ನಾ ಹೊರತೀನಿ (ಹೊರುವನು)

ಶಿವಮೂರ್ತಿ - ಹನಮವ್ವ ನಿನ್ನ ಗಂಟ ತಾ ನ್ನ ಕೈಯಾಗ

ಹನಮವ್ವ - ಬ್ಯಾಡಪ್ಪ ನಿನ್ನ ಮ್ಯಾಗ ಗಂಟು ಹೊರಸಿ ನಾ ಬರೇ ಕೈ ಬೀಸತ ಬರಲೇನು ?

ಶಿವಮೂರ್ತಿ - ಅಂದ್ರ ತಾಯಿ ಮ್ಯಾಲೆ ಗಂಟು ಹೊರಿಸಿ ನಾ ಬರೇ ಕೈ ಬೀಸತ ಬರ್ಲ್ಯನ ? ನೋಡಿದವರು ನನಗೇನಂದಾರು ? ತಾಯಿ ಸತ್ತ ಮಕ್ಕಳನ್ನು ಪ್ರೀತಿಲೇ ಜತನ ಮಾಡೀದಿ ಹಡದ ತಾಯಿಕ್ಕಿಂತ ಪಡೆದ ತಾಯಿ ನೀ ದೊಡ್ಡಾಕಿ. ನನ್ನ ಮ್ಯಾಲ ನಿನ್ನ ಉಪಕಾರೇನು ಸಣ್ಣದ (ಹೊತ್ತು) ಹೂ ಕಾಕ ಮಳೆ ಹನಿ ದಿವ್ವ ಬಾ ಸರಾ ಸರಾ ಅಕ್ಕನೂರು ಮುಟ್ಟುನ

ಹನುಮಂತಿ - ನೋಡ ಶಿವಣ್ಣ ಹಡೆದ ತಾಯಿಕಿನ್ನ ಹೆಚ್ಚಿಗಿ ನನ್ನ ಕಾಣಕೋಂತ ಬಂದೀಯಪ್ಪ. ನಂದು ಒಂದ ಮಾತ ಐತಿ ನಡಸ್ತೀಸಿ ಅಂದ್ರ ಹೇಳತೀನಿ

ಯಲ್ಲಪ್ಪ - ಹನಮವ್ವ ಸಣ್ಣ ಶೆಟ್ರು ಎಂದೂ ದಾರಿ ಬಿಟ್ಟ ನಡೆದವರಲ್ಲ, ನೀ ಹೇಳಿಂದ ನಡಸದೇನು ಮಾಡ್ಯಾರು ?

ಹನಮಂತಿ - ಹೇಳ್ಲೇನಪ್ಪ ಶಿವು ?

ಶಿವಮೂರ್ತಿ - ಹೇಳವ್ವ ಬನದು..

ಹನಮಂತಿ - ಆದಷ್ಟು ತೀವ್ರ ನನಗ ಒಬ್ಬಾಕಿ ಸೊಸಿ ಬೇಕಾಗ್ಯಳ. ನೀ ಮದುವಿ ಮಾಡಿಕೊಂಡು ಇದು ಒಂದು ಮಾತು ನಡೆಸಿ ಬಿಡಪ್ಪ ಶಿವಣ್ಣ

ಶಿವಮೂರ್ತಿ - ಆಗಲವ್ವ ನೀ ಒಂದು ಹೆಣ್ಣು ಹುಡುಕಿ ಆರಿಸಿಬಿಡು ಮಾಡಿಕೊಂತೀನಿ ಅತಿಲ್ಲೋ ?

ಹನಮಂತಿ - ಹೌದು ಅಂದೇನು, ನೋಡ ನಮ್ಮಪ್ಪ ಸರದಾರ ನಮ್ಮವ್ವನ ಗಂಡ (ನಟಿಕೆ ಮುರಿಯುತ್ತ)

ಶಿವಮೂರ್ತಿ - ಹ... ಹ... ನನಗ ಹೆಂಡತಿ ಅಂತಾ ಆ ನಿಮ್ಮವ್ವನ ಆರಿಸಿ ಮತ್ತ ?

ಯಲ್ಲಪ್ಪ - ಹೋಗರಿ ಶೆಟ್ರ ನೀವು ಬಲೆ ಹುಡುಗಾಟದವರು

ಸೋಮಣ್ಣ - ಹೂ ಸರಾ ಸರಾ ಬರ್ರ್ಯೋ ಹೊತ್ತಾಗತ್ತ

ಶಿವಮೂರ್ತಿ - ಮಗಳ ಊರಿಗೆ ಹೋಗೂದು ಅಂದ್ರ ನಮ್ಮ ಕಾಕಾಗ ಬಲೆ ಹುರುಪು. ಆಗಲಿ ನಡಿಯಪಾ ಯಾರು ಬ್ಯಾಡಂತಾರ ?

# ದೃಶ್ಯ - ೧೨

- ರಸ್ತಾ -

(ಒಳಗೆ ಟ್ರೇನಿನ ಶಬ್ದ ಶಂಕರ ಹಾಗೂ ಮಹಾಂತೇಶ ಬರುವರು)

ಶಂಕರ - ಇದೇನೋ ಮಿತ್ರಾ... ? ಕೂಲಿ ಜನ ಒಬ್ಬರೂ ಕಾಣುತ್ತಿಲ್ಲವಲ್ಲ

ಮಹಾಂತೇಶ - ಹೌದು... ಮೊದಲೇ ನಮ್ಮದು ಹಾಳೂರು. ಮಳೆ ಬೇರೆ ಹೊಡೆದದ್ದರಿಂದ ಇರಬೇಕಾದ ಒಬ್ಬಿಬ್ಬರು ಕೂಲಿಯವರೂ ಬಂದಿಲ್ಲವೆಂದು ಕಾಣುತ್ತದೆ. ಅದೋ ಅಲ್ಲಿ ನೋಡು ಯಾರೋ ಹೆಂಗಸು ಅವಸರವಾಗಿ ಬರುತ್ತಿದ್ದಾಳೆ. ತಡೆ ನೋಡೋಣ

ಗೌರಮ್ಮ - (ಬರುತ್ತ) ಕೂಲಿ ಉಂಟೇನ್ರಪ್ಪಾ

ಮಹಾಂತೇಶ - ಉಂಟಮ್ಮ ಆದರೆ ಇಷ್ಟೊಂದು ವಯಸ್ಸಾದ ನೀನು ಭಾರವಾದ ಈ ನಮ್ಮ ಪೆಟ್ಟಿಗೆಯನ್ನು ಹೊರಬಲ್ಲೆಯಾ ?

ಶಂಕರ - ಛೆ.... ಬಲಿಷ್ಠವಾದ ನಾವೇ ಹಿಂಜರಿಯುತ್ತಿರುವಾಗ ವಯಸ್ಸಾದ ಈ ಮುದುಕಮ್ಮ ಭಾರವಾದ ಪೆಟ್ಟಗೆಯನ್ನು ಅಂದೆತು ಹೊತ್ತಾಳು ?

ಗೌರಮ್ಮ - ದಯವಿಟ್ಟು ಹಾಗನ್ನಬೇಡಿರಪ್ಪ ಹೊರುತ್ತೇನೆ. ಮೂರು ದಿವಸಗಳಿಂದಲೂ ಏನೂ ಕೂಲಿ ಸಿಗದ ಪ್ರಯುಕ್ತ ಹೊಟ್ಟೆಗಿಲ್ಲದೆ ಉಪವಾಸವಿದ್ದೇನೆ. ಕೆಲಸ ಕೊಟ್ಟು ಪುಣ್ಯ ಕಟ್ಟಿಕೊಳ್ಳಿರಪ್ಪ

ಮಹಾಂತೇಶ - ಅಯ್ಯೋ ಪಾಪ ! ಅಮ್ಮಾ ಮಳೆ ಹೊಡೆದು ನಿಂತ ಈ ಭೀಕರ ಚಳಿಯಲ್ಲಿ ಒಬ್ಬಳೇ ನಡಗುತ್ತ ಕೂಲಿ ಸಿಕ್ಕೀತೇನೋ ಎಂದು ಇಲ್ಲಿಯವರೆಗೆ ಬಂದ ನಿನ್ನನ್ನು ಬರಿಗೈಯಲ್ಲಿ ಕಳಿಸಲಾರೆವು. ಭಾರವಾದ ಸಾಮಾನು ನಾವು ಹೋರುತ್ತೇವೆ. ನೀನು ಎರಡು ಸಣ್ಣ ಸಾಮಾನು ತೆಗೆದುಕೊ

ಗೌರಮ್ಮ - ಉಪಕಾರ ಮಾಡಿದೆಯಪ್ಪ. ಪರದೇಶಿಯಾದ ನನ್ನ ಬಗ್ಗೆ ಕರುಣೆ ತೋರಿದ ನಿಮ್ಮ ತಾಯಿಯ ಹೊಟ್ಟೆ ತಣ್ಣಗಿರಲಿ

ಮಹಾಂತೇಶ - ಇಷ್ಟು ವಯಸ್ಸಾದ ನೀನು ಕುಳಿತು ಉಣ್ಣುವದನ್ನು ಬಿಟ್ಟು ಕೂಲಿ ಏಕೆ ಮಾಡುವಿಯಮ್ಮ ?

ಗೌರಮ್ಮ - ಹಸಿದ ಹೊಟ್ಟೆಗೆ ಹಿಟ್ಟು ಬೇಕಲ್ಲಪ್ಪ. ಸುಮ್ಮನೆ ಕುಳಿತರೆ ಯಾರಾದರೂ ಅನ್ನ ಹಾಕುತ್ತಾರೆಯೆ ?

ಶಂಕರ - ಏಕೆ ? ನಿಮಗೆ ಮಕ್ಕಳಿಲ್ಲವೇನಮ್ಮ ?

ಗೌರಮ್ಮ - ಮಕ್ಕಳು .... ಇದ್ದಾರಪ್ಪ

ಮಹಾಂತೇಶ - ಇದ್ದರೆ ಅವರೆಂತಹ ಮಕ್ಕಳಮ್ಮ. ವಯಸ್ಸು ಹೋದ ತಾಯಿಯನ್ನು ಈ ರೀತಿ ದುಡಿಯು ಹಚ್ಚಿದ ಆ ಚಾಂಡಾಲರಿಗೆ ಊರಲ್ಲಿ ಯಾರು ಬುದ್ಧಿ ಹೇಳುವವರಿಲ್ಲವೇ ?

ಗೌರಮ್ಮ - ಯಾರ ಕರ್ಮಕ್ಕೆ ಯಾರು ಹೊಣೆಯಪ್ಪ. ಅವರ ಕರ್ಮವನ್ನು ಅವರು ಭೋಗಿಸಲೆ ಬೇಕಲ್ಲ ?

ಮಹಾಂತೇಶ - ಏನೋ ಅಮ್ಮಾ ದಿನ ಹೋದ ತಾಯಿಯನ್ನು ಕಾಪಾಡಲಾರದ ಮಕ್ಕಳನ್ನು ಭೂಮಿ ಏಕೆ ಬಿರುದು ನಂಗಲಾರದೋ ಕಾಣೆ. ನನಗಂತೂ ನಿನ್ನನ್ನು ಕಂಡು ದುಃಖವಾಗುತ್ತದೆ ಬಾ ಮಿತ್ರಾ.... ಬಾರಮ್ಮ (ಹೋಗುವರು)

- ಮನೆ -

(ಮಹಾಂತೇಶ, ಶಂಕರ, ಗೌರಮ್ಮ ಬರುವರು)

ಮಹಾಂತೇಶ - ಶಂಕರ ಇದೇ ನೋಡು ನಮ್ಮ ಮನೆ ಬಾರಮ್ಮ ಒಳಗೆ. ಅಣ್ಣಾ ಮಹೇಶಣ್ಣ ಅತ್ತಿಗೆ (ಮಹೇಶ, ಸರಸ್ವತಿ ಒಳಗಿನಿಂದ ಬರುವರು)

ಮಹೇಶ - (ಗಾಬರಿಯಿಂದ) ಯಾರು ! ಮಹಾಂತೇಶ !

ಗೌರಮ್ಮ - (ಹುಚ್ಚಿಯಂತೆ) ಯಾರು ! ಮಹಾಂತೇಶ ! ನನ್ನ ಕಂದ ಮಹಾಂತೇಶ !!

ಮಹಾಂತೇಶ - (ತಾಯಿಯನ್ನು ಗುರುತಿಸಿ) ಯಾರು ನನ್ನ ತಾಯಿ. ಅಮ್ಮಾ (ಅಪ್ಪಿಕೊಳ್ಳುವನು) (ದುಃಖದಿಂದ) ಅಮ್ಮಾ ಗುರ್ತು ಸಿಕ್ಕಲಾರದ ಪ್ರಯುಕ್ತ ಹಡೆದ ತಾಯಿಯಾದ ನಿನ್ನ ಕೈಯಲ್ಲಿ ಕೂಲಿಯ ಗಂಟನ್ನು ಹೊರಿಸಿಕೊಂಡು ಬಂದ ಈ ನಿನ್ನ ಪಾಪಿ ಪುತ್ರನನ್ನು ಕ್ಷಮಿಸು ತಾಯಿ ! ನನ್ನ ಅಣ್ಣನು ನಿನ್ನನ್ನು ಈ ಹೀನ ಸ್ಥಿತಿಗೇಕೆ ಇಳಿಸಿದನಮ್ಮಾ ? ಬಲಾಢ್ಯರಾದ ಮಕ್ಕಳಿದ್ದರೂ ನೀನು ಈ ರೀತಿ ದುಡಿದು ಒಡಲು ತುಂಬಿಕೊಳ್ಳಬೇಕೇನಮ್ಮ ?

ಗೌರಮ್ಮ - ಹಡದ ಮಕ್ಕಳು ಮಡದಿಯ ಮೋಹಕ್ಕೊಳಗಾಗಿ ಹಡೆದವ್ವನನ್ನು ಹೊಡದು ಮನೆಯಿಂದ ಹೊರ ದಬ್ಬಿದ ಬಳಿಕ ದುಡಿದು ಒಡಲು ತುಂಬಿಕೊಳ್ಳದೆ ಮತ್ತೇನು ಮಾಡಲಪ್ಪ ?

ಮಹಾಂತೇಶ - (ಎದ್ದು ಮಹೇಶನನ್ನು ಸಿಟ್ಟಿನಿಂದ ನೋಡುತ್ತ) ಕರ್ಮ ಚಾಂಡಾಲಾ. ಮಡದಿಯ ಮಾತಿಗೆ ಮನಸೋತು ಹಡೆದ ತಾಯಿಯನ್ನು ಹೊಡೆದು ಮನೆಯಿಂದ ಹೊರದಬ್ಬಿದ ನೀನು ನನ್ನಣ್ಣನೇ ? ಕೈ ಹಿಡಿದ ಹೆಣ್ಣಿನ ಮಾತು ಕೇಳಿ ತಾಯಿಯ ಕಣ್ಣಲ್ಲಿ ನೀರು

ಹರಿಸಿದ ಮಾತೃದ್ರೋಹಿ, ಪವಿತ್ರವಾದ ನಮ್ಮ ವಂಶದಲ್ಲಿ ಅದೆಂತು ಜನಿಸಿದೆ ! ಇಲ್ಲ... ಈ ಪ್ರಪಂಚದಲ್ಲಿ ನಿನಗಿನ್ನು ಸ್ಥಾನವಿಲ್ಲ. ಸಿದ್ಧನಾಗು ಸಾಯುವದಕ್ಕೆ (ಪಿಸ್ತೂಲು ಹೊರತೆಗೆದು) ಹೆತ್ತಮ್ಮನ ಅನೇಕ ಸಂಕಷ್ಟಗಳಿಗೆ ಕಾರಣರಾದ ನಿಮ್ಮಿಬ್ಬರನ್ನು ಗುಂಡಿನಿಂದ ಸುಟ್ಟು ಹುಟ್ಟಿಲ್ಲ ಎನಿಸಿಬಿಡುತ್ತೇನೆ. ಪಾಪಿಗಳೆ, ಅನುಭವಿಸಿರಿ ನಿಮ್ಮ ಪಾಪಕ್ಕೆ ತಕ್ಕ ಪ್ರಾಯಶ್ಚಿತವನ್ನು

ಗೌರಮ್ಮ - (ಮಧ್ಯ ನಿಂತು) ಇನ್ನೊಬ್ಬರ ಪಾಪಕ್ಕೆ ಪ್ರಾಯಶ್ಚಿತ್ತವನ್ನು ನೀಡಲು ಸಿದ್ಧನಾಗಿ ನಿಂತ ಪುಣ್ಯವಂತ, ನಿನ್ನ ಪಾಪವನ್ನಷ್ಟೆ ಅಳೆದು ನೋಡು. ಹಿಂದೊಮ್ಮೆ ಸೈನ್ಯಕ್ಕೆ ಸೇರಿ ಮನೆ ಬಿಟ್ಟು ತೆರಳುವ ಸಮಯದಲ್ಲಿ ಈತಾಯಿಗೆ ಏನೆಂದು ವಚನ ಕೊಟ್ಟಿದ್ದೆ ? ತಾಯಿ ತಂಗಿಯರ ಉದರ ಪೋಷಣೆಗೆಂದು ತಿಂಗಳಿಗೊಮ್ಮೆ ತಪ್ಪದೆ ಸಂಬಳದ ಹಣ ಕಳಿಸುವೆನೆಂದು ನೀ ಕೊಟ್ಟ ವಚನ ಮರೆತು ಹೋಯಿತೇ ಮನೆಬಿಟ್ಟ ತಕ್ಷಣ..

ಮಹಾಂತೇಶ - ಮರೆತಿಲ್ಲವಮ್ಮ ನಾ ಕೊಟ್ಟ ಮಾತನ್ನು. ಇದೋ ನೋಡು ಹಣ ತೆಗೆದುಕೊಂಡ ಬಗ್ಗೆ ಅಣ್ಣನ ಹಸ್ತಾಕ್ಷರ. ಇದಕ್ಕೆ ಸಾಕ್ಷಿ ನಿಂತಿರುವನಿಲ್ಲ ನನ್ಮಿತ್ರ ಶಂಕರ

ಗೌರಮ್ಮ - ಸುಳ್ಳು... ಮಾತು ಕೊಟ್ಟಂತೆ ನೀನು ನಡೆದಿದ್ದರೆ ನಿನ್ನ ತಾಯಿ ಏಕೆ ಇಂದು ಕೂಲಿ ಮಾಡುತ್ತಿದ್ದಳು ? ನೀನು ಹಣ ಕಳಿಸಿದ್ದರೆ ನಿನ್ನ ತಂಗಿ ಔಷಧಕ್ಕೆ ಹಣವಿಲ್ಲದೆ ಹರಣ ಹಾರುವ ಪರಿಯಂತ ನಿನ್ನ ಹೆಸರು ಹಿಡಿದು ಅಣ್ಣಾ ಎಂದು ಅಂಜುತ್ತ ಏಕೆ ಸಾಯುತ್ತಿದ್ದಳು ? ನೀನು ತೆರಳಿದ ನಂತರ ಕೆಲದಿನಗಳಾದರೂ ಅನ್ನವಿಟ್ಟು ಕಾಪಾಡಿದ ಈ ನಿನ್ನ ಅಣ್ಣನನ್ನು ಗುಂಡಿಟ್ಟು ಸುಡುಲು ಸಿದ್ದನಾದ ಕುಲಪುತ್ರ ! ನಿನ್ನ ಪಾಪವನ್ನಷ್ಟು ವಿವೇಚಿಸಿ ನೋಡು

ಮಹಾಂತೇಶ - ಅವ್ವ ನಾನು ಪಾಪ ಮಾಡಿಲ್ಲ. ನಿನ್ನಾಣೆ ಕೊಟ್ಟ ಮಾತಿಗೆ ತಪ್ಪಿಲ್ಲ. ಬೇಕಿದ್ದರೆ ಗೆಳೆಯ ಶಂಕರನಿದ್ದಾನೆ ಕೇಳಿಲ್ಲಿ ಸಂಬಳ ಹಣವನ್ನು ತಿಂಗಳಿಗೊಮ್ಮೆ ಕಳಿಸಿದ್ದೇನೆ. ಪತ್ರ ಬರೆದು ನಿನ್ನ ಯೋಗ ಕ್ಷೇಮ ವಿಚಾರಿಸಿರುವೆ

ಗೌರಮ್ಮ - ಹೌದೇನಪ್ಪ ಮಹೇಶ ನಿನ್ನ ತಮ್ಮನ ಮಾತು ಸತ್ಯವೆನಪ್ಪ ?

ಮಹೇಶ - ಹೌ... ದ.... ಮ್ಮ ಸ.... ತ್ಯ....

ಮಹಾಂತೇಶ - ಏಕೆ ಸುಮ್ಮನಾದೆ ಮಾತಾಡು ಸ್ವಾರ್ಥಿ. ತಾಯಿ ತಂಗಿಯರಿಗೆಂದು ತಿಂಗಳಿಗೊಮ್ಮೆ ಕಳಿಸಿದ ನನ್ನ ಹಣ ನುಂಗಿ ತಂಗಿಯನ್ನು ಮರಣಕ್ಕೆ ಬಲಿಕೊಟ್ಟು ತಾಯಿಯನ್ನು ಮನೆ ಬಿಡಿಸಿ ಹೊರದಬ್ಬಿದ ಕರ್ಮ ಚಾಂಡಾಲಾ. ನಿನ್ನನ್ನು ಜೀವಂತ ಸುಟ್ಟು ನಂತರ ನಿನ್ನ ಬೂದಿಯನ್ನು ಹಣೆಗಿಟ್ಟುಕೊಂಡಾಗ ನನ್ನಾತ್ಮಕ್ಕೆ ಶಾಂತಿ. (ಎಂದು ಹೊಡೆಯ ಹೋಗುವನು)

ಗೌರಮ್ಮ - (ಬಿಡಿಸುತ್ತ) ಬಿಡಪ್ಪ ಇದೇನು ನಡೆಸಿದೆ ಮಗು

ಮಹಾಂತೇಶ - ಬಿಡಮ್ಮ ಸುಮ್ಮನೆ... ಈಗ ಯಾರೂ ನನ್ನ ಸಮೀಪಕ್ಕೆ ಬರಬೇಡಿರಿ.

ಮಡದಿಯ ಮಾತು ಕೇಳುತ್ತ ಮನೆ ಮಸಣವನ್ನಾಗಿ ಮಾಡಿದ ಈ ನರಾಧಮನ ಗಂಟಲು ಬಗೆದು ರಕ್ತ ಕುಡಿಯುವೆ. (ನೆಲಕ್ಕೆ ಕೆಡವಿ ಎದೆಯ ಮೇಲೆ ಕೂಡುವನು)

ಮಹೇಶ - ಅಯ್ಯೋ ಅಮ್ಮಾ, ಅಯ್ಯೋ ಸತ್ತೆ

ಸರಸು - ಅತ್ತೆಮ್ಮ ಕಾಲಿಗೆ ಬೀಳುತ್ತೇನೆ. ನಿಮ್ಮ ಮಗನ ಪ್ರಾಣ ಕಾಪಾಡಿರಿ ಅತ್ತೆ. (ಅಳುತ್ತ) ಮಹಾಂತೇಶ ನಮ್ಮ ಮಹಾ ಅಪರಾಧಗಳನ್ನು ಕ್ಷಮಿಸಿ, ಈ ನಿನ್ನ ಅತ್ತಿಗೆಗೆ ಸೌಭಾಗ್ಯ ದಾನ ಮಾಡಪ್ಪ ಎಂದೆಂದಿಗೂ ಈ ನಿನ್ನ ಉಪಕಾರ ಮರೆಯಲಾರೆ

ಮಹಾಂತೇಶ - ನಿನಗೆ ಉಪಕಾರ ಮಾಡಬೇಕೆ ಚಾಂಡಾಲಿನಿ ? ಗಂಡನ ಕಿವಿ ಹಿಂಡಿ ಅಂದು ತಂದೆಯ ಮರಣಕ್ಕೆ ಕಾರಣಳಾದಿ. ನಂತರ ನನ್ನನ್ನು ಮನೆಯಿಂದ ಹೊರದಬ್ಬಿಸಿದೆ. ಆ ಮೇಲೆ ನನ್ನ ತಂಗಿಯನ್ನು ಮುರಿದು ನುಂಗಿ ತಾಯಿಯನ್ನು ಪರದೇಶಿಯಂತ ಅಲೆಯ ಹಚ್ಚಿದ ನಿನ್ನನ್ನು ಕ್ಷಮಿಸಬೇಕೇ ? ಇಲ್ಲಾ ಅದೆಂದಿಗೂ ಸಾಧ್ಯವಿಲ್ಲ (ಎದ್ದು) ರಾಕ್ಷಸಿ ಮೊದಲು ನಿನ್ನ ಗೋಣು ಮುರಿದು ನೇಣು ಹಾಕುವೆ

ಗೌರಮ್ಮ - ಮಹಾಂತೇಶ ನಿನ್ನ ಅತ್ತಿಗೆಯ ಮೇಲೆ ಕೈ ಮಾಡಿದರೆ ನಿನಗೆ ನನ್ನಾಣೆಯಾಗಿದ. ಬಿಡು ಅವಳನ್ನು, ನಮ್ಮ ವಂಶದ ಕುಡಿಯನ್ನು ತನ್ನ ಅಮೃತ ಗರ್ಭದಲ್ಲಿ ಧರಿಸಿದ ನಿನ್ನತ್ತಿಗಯ ಮೇಲೆ ಕೈ ಮಾಡಿ ಯಾವ ನರಕಕ್ಕೆ ಹೋಗಬೇಕೆಂದಿರುವೆ ? ಅವರ ಮೇಲಿದ್ದ ನಿನ್ನ ಕೋಪ ಅವರ ಸಾವಿನಿಂದಲೇ ಶಾಂತವಾಗುವಂತಿದ್ದರೆ ನನ್ನನ್ನು ಕೊಂದುಬಿಡು. ರಕ್ತ ಕುಡಿಯಲು ಸಿದ್ಧನಾದ ನಿನ್ನ ಸಿಟ್ಟಿಗೆ ಯಾರ ರಕ್ತವಾದರೇನು ಹೇಳಪ್ಪ ?

ಮಹಾಂತೇಶ - ನೀನು ಹೀಗೆಲ್ಲ ಮಾತನಾಡಬೇಡಮ್ಮ ! ನನ್ನೆದೆ ಒಡೆದು ಹೋಗುತ್ತದ ! ರಣರಂಗದಲ್ಲಿ ವೀರ ಯೋಧರ ಗುಂಡಿನೇಟಿಗೆ ಬೆದರದ ಈ ನಿನ್ನ ಮಗನ ಗಂಡದೆ ನಿನ್ನ ಒಂದೇ ಒಂದು ನೊಂದ ನುಡಿಗೆ ನಡುಗಿ ಹೋಯಿತು. ಅಮ್ಮಾ ಈ ನೀಚರನ್ನು ಸುಮ್ಮನೇ ಬಿಡಬೇಕೇ ? ಇದೇ ನಿನ್ನ ಅಪ್ಪಣೆಯೇ

ಗೌರಮ್ಮ - ಮಗು ನನಗುಳಿದವರು ನೀವಿಬ್ಬರು ಮಕ್ಕಳು. ನನ್ನ ಎರಡು ಕಣ್ಣುಗಳಿದ್ದಂತೆ. ಯಾವ ಕಣ್ಣಿಗೆ ಪೆಟ್ಟು ತಾಕಿದರೂ ನೋವಾಗುವದು ನನಗೊಬ್ಬಳಿಗೆ. ನಿಮ್ಮಿಬ್ಬರಲ್ಲಿ ಯಾರು ಸತ್ತರೂ ನೋವಾಗುವದು ಈ ತಾಯಿಯ ಕರುಳಿಗೆ. ಇದನ್ನರಿತು ಶಾಂತನಾಗಪ್ಪ

ಮಹಾಂತೇಶ - ಅಮ್ಮಾ ಕ್ಷಮಾ ಶೀಲೆಯಾದ ನೀನೇ ಇವರನ್ನು ಕ್ಷಮಿಸಿರುವೆಯೆಂದ ಬಳಿಕ ನಾನೇಕೆ ನಿನ್ನ ಮನಸ್ಸು ನೋಯಿಸಲಮ್ಮ. ಇಂದಿನಿಂದ ಅಣ್ಣ ಅತ್ತಿಗೆಯರ ಮೇಲೆನಾನು ಕೈ ಎತ್ತಿದರ ನಿನ್ನ ಹೆತ್ತ ಕರುಳಿನಾಣೆ

ಗೌರಮ್ಮ - ಈಗ ನನ್ನ ಆತ್ಮಕ್ಕೆ ಶಾಂತಿ ದೊರೆಯಿತಪ್ಪ. ನೋಡು ಕಂದ ಗ್ರಹಗಳ ವಕ್ರದೃಷ್ಟಿ ಒಮ್ಮೆ ಮನೆತನದ ಮೇಲೆ ಬಿದ್ದರ ಆಗಬಾರದ್ದೆಲ್ಲ ಆಗಿ ಹೋಗುತ್ತದೆ ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ವಿಧಿಯ ಸಂಕಲ್ಪಕ್ಕೆ ಅಜಹರಿ ಪಿನಾಕಿಗಳೂ

ಹೊರೆತಿಲ್ಲವೆಂದು ಬಲ್ಲವರು ಹೇಳುತ್ತಾರೆ. ಅಂದ ಬಳಿಕ ಮಾನವರಾದ ನಮ್ಮ ಪಾಡೇನು ? ನೀವೆಲ್ಲರೂ ಹೊಂದಿಕೊಂಡು ನಗು ನಗುತ್ತ ಇದ್ದು ಬಿಟ್ಟರೆ ಸಾಕೆಂಬ ಬಯಕೆ ನನಗೆ ಬಲವಾಗಿದೆ. ಈ ನಿಮ್ಮ ತಾಯಿಯ ಮೇಲೆ ಮಮತೆ ನಿಮಗಿದ್ದರೆ ಅಂತ್ಯದ ನನ್ನ ಬಯಕೆ ನೆರವೇರಿಸಿ ಬಿಡಿರಪ್ಪ

ಮಹಾಂತೇಶ - ಅಮ್ಮಾ ನಿನ್ನಾಣೆ ತಾಯಿ... ನಿನ್ನ ಮಾತನ್ನು ನಾನು ಮೀರಲಾರೆ

ಮಹೇಶ - ಅಮ್ಮ ತಪ್ಪು ಕಲ್ಪನೆಯಿಂದ ನಿನ್ನ ಮಗನಾದ ನಾನು ಕೊಡ ಬಾರದ ಕಷ್ಟಗಳಲ್ಲನ್ನೆಲ್ಲ ಕೊಟ್ಟು ಘೋರ ಪಾಪ ಕಟ್ಟಿಕೊಂಡೆ. ಅದರೂ ಅವುಗಳನ್ನೆಲ್ಲ ನೀನು ನುಂಗಿ ನನ್ನನ್ನು ಕ್ಷಮಿಸಿದೆ. ಇನ್ನು ಮೇಲೆ ನಿನ್ನ ಪಾದ ಸೇವೆ ಮಾಡಿ ಪಾಪ ಕಳೆಡುಕೊಳ್ಳುವಂತೆ ಅನುಗ್ರಹಿಸು ತಾಯಿ

ಗೌರಮ್ಮ - ದೇವರು ಕಾಪಾಡುತ್ತಾನೆ ಏಳು ಮಹೇಶ

ಶಂಕರ - ಮಹೇಶ ! ಕರುಳು ನೊಂದು ತಾಯಿಯ ಪ್ರಲಾಪಕ್ಕೆ ನಿಸರ್ಗವೇ ಹೆದರಿ ನಮಸ್ಕಾರ ಹಾಕುವಾಗ ಉಳಿದವರ ಪಾಡೇನು ? ನಿಮ್ಮ ತಾಯಿ ಒಂದು ವೇಳೆ ನೊಂದು ಶಪಿಸಿದ್ದರೆ ನೀವೆಂದೋ ಮಣ್ಣುಗೂಡಿ ಹೋಗುತ್ತಿದ್ದಿರಿ. ಆದರೆ ತಾಯಿಯ ಕರುಳು ಮಕ್ಕಳ ಬಗ್ಗೆ ಎಂದೂ ನೊಂದುಕೊಳ್ಳಲಾರದು

ಸರಸ್ವತಿ - (ಅಳುತ್ತ) ಮಹಾಂತೇಶ ಅತ್ತಿಯವರು ನಮ್ಮನ್ನು ಕ್ಷಮಿಸಿದಂತೆ ನೀನೂ ನಮ್ಮನ್ನು ಕ್ಷಮಿಸಿ ಬಿಡಪ್ಪ (ನಮಸ್ಕರಿಸುವಳು)

ಗೌರಮ್ಮ - ಛೀ, ಇದೇನು ಮಾಡುತ್ತಿಯೇ ಸರಸು. ಅವನು ನಿನ್ನ ಮೈದುನ, ಮಗನಿಗೆ ಸರಿ ಸಮಾನ. ನಿನ್ನಿಂದ ನಮಸ್ಕಾರ ಪಡೆಯುವದು ಅವನಿಗೆ ಶ್ರೇಯಸ್ಸಲ್ಲ. ಏಳು ಮಹಾಂತೇಶ ಮರಳಿ ಮಣೆಯಪ್ಪ ನಿನ್ನ ಅತ್ತಿಗೆಗೆ

ಮಹಾಂತೇಶ - ಅಮ್ಮಾ ನಿನ್ನ ಆಜ್ಞೆ ನನಗೆ ಶಿರಸಾಮಾನ್ಯ. ಅತ್ತಿಗೆ ಕೋಪದಲ್ಲಿ ಬಿರುನುಡಿಗಳನ್ನಾಡಿದ ಈ ನಿನ್ನ ಮೈದುನನನ್ನು ಕ್ಷಮಿಸಬೇಕಮ್ಮ

ಸರಸ್ವತಿ - ನೀನು ಮೈದುನನಲ್ಲಪ್ಪ, ನನ್ನ ಮಗ. ದೇವರಕರುಣೆ ನಿನ್ನ ಕಾಪಾಡಲಿ (ಸೋಮಣ್ಣಾ, ಶಿವಮೂರ್ತಿ, ಯಲ್ಲಪ್ಪ, ಹನುಮಂತಿ ಬರುವರು)

ಸೋಮಣ್ಣಾ - ಓಹೋ ಮಹಾಂತೇಶ ! ಯಾವಾಗ ಬಂದಲೆ ಹುಡುಗ ?

ಶಿವಮೂರ್ತಿ - ಮಹಾಂತೇಶ ನೀ ಬಂದಲ್ಲೆ ಈ ಮನ್ಯಾಗ ಬೆಳದಿಂಗಳ ಬಿದ್ದಾಂಗ ಆಗೈತಿ ಯಾಕೋ ಕಾಕಾ ? ಇರಲಿ ಯಾವಾಗ ಬಂದೆಪ್ಪಾ ದೊರಿ

ಮಹಾಂತೇಶ - ಇವತ್ತೇ ಬಂದೇ

ಹನುಮಂತಿ - ಬೇಶ್ಯಾತಪಾ ಒಳ್ಳೆ ಹೊತ್ತಿಗೇ ಹೇಳಿ ಕಳಿಸಿದರ ಬರಾಕಿಲ್ಲ ಹಾಂಗ ಬಂದಿ ನಾವು ನಮ್ಮ ಸರಸ್ವತಿಗೆ ಖಿಸಾ ಮಾಡಾಕ ಬಂದೀವಿ

ಯಲ್ಲಪ್ಪ - ದೇವರ ಕೂಡಿಸಿ ಕೊಡಬೇಕಂದರ ಎಲ್ಲದೂ ಅನುಕೂಲ ಆಗತ್ತ ಯಾಕ್ರಿ ಶೆಟ್ರ?

ಸೋಮಣ್ಣಾ - ಹೌದಪ್ಪ ಎಲ್ಲಾ ಒಳ್ಳೇದಾಗುವ ಹೊತ್ತಿಗೆ ಎಲ್ಲಾ ಒಳ್ಳೇದ

ಶಂಕರ - ಮಿತ್ರಾ ಮಹಾಂತೇಶ ನಾನು ಊರಿಗೆ ಹೊರಡಬಹುದಷ್ಟೇ ?

ಮಹಾಂತೇಶ - ಛೇ ಈಗಲೇ ಹೊರಡುವುದೆ ?

ಶಂಕರ - ನೀನು ನಿನ್ನ ತಾಯಿ ದರ್ಶನಕ್ಕಾಗಿ ಪರಿತಪಿಸಿದಂತೆ ನನಗೂ ನನ್ನ ತಾಯಿಯ ನೆನಪು ಮರುಕಳಿಸತೊಡಗಿದೆ

ಮಹಾಂತೇಶ - ಒಳ್ಳೇದು. ಅಮ್ಮಾ ಶಂಕರ, ನನ್ನ ಮಿತ್ರ ನಾವಿಬ್ಬರೂ ಕೂಡಿ ಒಂದು ದಳದಲ್ಲಿದ್ದು ಬಹಳ ಪೊಂದಿಕೊಂಡಿದ್ದೆವು. ಇವತ್ತೇ ತಮ್ಮೂರಿಗೆ ಹೋಗುವದಾಗಿ ಪಡಿ ಹಿಡಿದ್ದಿದ್ದಾನ

ಸೋಮಣ್ಣಾ - ಅದು ಹ್ಯಾಂಗ ಆದೀತಪ ತಮ್ಮ. ಅನಾಯಾಸ ನಾವು ನಮ್ಮಮಗಳಿಗೆ ಖಣಾ ಮಾಡಾಕಂತ ಬಂದೀವಿ. ನಾಳೆ ಒಂದಿನಾ ಇದ್ದು ಹೋಳಗಿ ಉಂಡು ನಿಮ್ಮೂರಿಗೆ ಹೋಗಬೇಕು ನೋಡು

ಹನಮಂತಿ - ಹೌದಪ್ಪ ತಮ್ಮ ಹಂಗ ಹೋದರ ನಾವು ಕೇಳವರಲ್ಲ ಬಿಡು

ಶಂಕರ - ಆಗಲಮ್ಮ ನಿಮ್ಮಿಷ್ಟ ? ನೀವಿಷ್ಟು ಒತ್ತಾಯಪಡಿಸಿದ ಬಳಿಕ ಸವಿಯೂಟ ಬಿಟ್ಟು ನಾನೇಕೆ ಹೋಗಲಿ ?

ಮಹಾಂತೇಶ - ಈಗ ನನ್ನ ಮನಸ್ಸಿಗೆ ಆನಂದವಾಯಿತು ಮಿತ್ರ

ಗೌರಮ್ಮ - ಅಗಲಿದ ತಾಯಿ ಮಕ್ಕಳನ್ನು ಮತ್ತೆ ಒಂದುಗೂಡಿಸಿ ವಿಯೋಗ ದುಃಖದಿಂದ ಬಿಡುಗಡೆ ಮಾಡಿದ ಆ ಪತಿತ ಪಾವನ ಪರಮಾತ್ಮನಲ್ಲಿ ಪ್ರಾರ್ಥಿಸುವ

- ಮಂಗಲಂ -

# ಸುಖದ ಸುಪ್ಪತ್ತಿಗೆ

ಅರ್ಥಾತ್

# ನಂದ ಗೋಕುಲ

## ಪಾತ್ರ ಪರಿಚಯ

ನೀಲಾ, ಸುವರ್ಣ, ರುದ್ರ ಇವರ ತಂದೆ

ಮಹದೇವಪ್ಪನ ಹೆಂಡತಿ

ಮಹದೇವಪ್ಪನ ಅಳಿಯ, ಹಂಪವ್ವನ ತಮ್ಮ

ಸಹಕಾರಿ ಸಂಘದ ಮ್ಯಾನೇಜಿಂಗ್ ಡೈರೆಕ್ಟರ್

ಸಹಕಾರಿ ಸಂಘದ ಸೆಕ್ರೆಟರಿ

ಶೈಲಜೆಯ ತಂದೆ (ಈಶ್ವರನ ಮಾವ)

ಮಹದೇವಪ್ಪನ ಮಗ

ಮಹದೇವಪ್ಪನ ಮಗಳು

ಮಹದೇವಪ್ಪನ ಮಗಳು

ಬಸವರಾಜಪ್ಪನ ಮಗಳು (ಈಶ್ವರನ ಹೆಂಡತಿ)

ಹೂವಪ್ಪನ ಹೆಂಡತಿ

## ಸನ್ನಿವೇಶ ೧

ಮಹದೇವಪ್ಪನ ಮನೆ, ದೀಪಾವಳಿ ಹಬ್ಬದ ಸಂಭ್ರಮ :

(ಹಂಪವ್ವ, ನೀಲಾ, ರುದ್ರ, ಸುವರ್ಣ ಹಾಡುವರು)

॥ ಪದ ॥

ಆನಂದ ಶುಭ ದಿನ ದೀಪಾವಳಿ । ಅನುರಾಗ ರಸದುಂಬಿ ರಾಗಾವಳಿ ॥.
ಮರೆಯಾಗಿ ಜಗದಲ್ಲಿ ಶೋಕಾವಳಿ । ಹೊಸ ವರುಷ ಮನಸ್ಹುರುಷ ತಾ ನೀಡಲಿ ॥

ಬಾರೆ ನನ್ನ ತಂಗಿ । ಬಣ್ಣ ಬಣ್ಣದಂಗಿ ।
ಮಾವಯ್ಯ ತರತಾನೆ ಮನೆಗಿಂದು ಬರತಾನೆ ।
ಹಸನಾದ ಹೊಸ ಬಾಳು ತಾ ಬಂದಿದೆ । ನವರಾಗ ನವಭಾವ ಮನೆ ಮಾಡಿದೆ॥

(ಸುವರ್ಣ ಚಕ್ಕಲಿ ತಿನ್ನುವದು ನೋಡಿ) ನನಗಷ್ಟ ಚಕ್ಕಲಿ ತಾರ ತಂಗಿ ?

ಊ ಹೂ... ನಾನು ಕೊಡೊದಿಲ್ಲ

ಒಬ್ಬಳೇ ತಿನ್ನಬಾರದು. ನನ್ನ ತಂಗಿ ಜಾಣೆ, ನನಗಷ್ಟ ಕೊಡವ್ವ

ನಿನಗೂ ಬೇಕಿದ್ರೆ ಒಳಗೆ ಹೋಗಿ ಅವ್ವನ್ನ ಕೇಳು ಕೊಡುತಾಳೆ

ನಿನ್ನ ಹತ್ರ ಇದೆಯಲ್ಲ ಅದರಲ್ಲೇ ಸ್ವಲ್ಪ ಕೊಡವ್ವ

ಇಲ್ಲ ನಾನು ಕೊಡೋದಿಲ್ಲ.

ತಡಿ ಕಸಕೊಳ್ಳತೀನಿ (ಸುವರ್ಣ "ಅವ್ವ ಅವ್ವ" ಎಂದು ಚೀರುವಳು, ನೀಲಾ ಬಂದು ಬಿಡಿಸುವಳು,

(ಬರುತ್ತ) ಏನೆ ನೀಲಾ ಇದೆಲ್ಲ ಗದ್ದಲ ?

ನಾನಲ್ಲವ್ವ ಇವನೇ

ನಾನೇನು ಮಾಡೀನೆ ಅಕ್ಕ

ಮೋಟಾರು ಬರೋ ಹೊತ್ತಾಯಿತು. ನಿಮ್ಮ ಈಶ್ವರ ಮಾವ ಇದೇ ಬಸ್ಸಿಗೆ ಬರಬಹುದು. ರುದ್ರ ಬಸ್ಸು ನಿಲ್ಲೋ ಸ್ಥಳದವರೆಗೂ ಹೋಗಿ ಆ ನಿನ್ನ ಮಾವನ್ನ

ಕರಕೊಂಡು ಬರತೀಯಾ ?

ರುದ್ರ - ತಿನ್ನಲಿಕ್ಕೆ ನನಗಷ್ಟ ಚಕ್ಕಲಿ ಕೊಟ್ರೆ ಹೋಗತೀನಿ. ಮಾವನ್ನ ಕರಕೊಂಡ ಬರತೀನಿ

ನೀಲಾ - ಹೂ ಈಗಲೇ ತಿನ್ನಬೇಕು ಅಂತೀಯಾ ? ಪೂಜೇನೆ ಆಗಿಲ್ಲ

ರುದ್ರ - ಮತ್ತೆ ತಂಗಿ ತಿಂತಾಳಲ್ಲ ?

ಹಂಪವ್ವ - ಹೌದಪ್ಪ ರುದ್ರ. ಇವತ್ತು ದೀಪಾವಳಿ ಹಬ್ಬ ಅಲ್ಲವೇನು ? ದೇವರಿಗೆ ನೈವೇದ್ಯ ಮಾಡಿದ ಬಳಿಕ ತಿನ್ನಬೇಕು

ರುದ್ರ - ಅಂದ್ರೇನವ್ವ ನನಕ್ಕಿಂತ ದೊಡ್ಡವನೇನು ಆ ದೇವರು ?

ನೀಲಾ - ಕೇಳಿದೇನವ್ವ ಇವನ ಮಾತು. ಇದರ ಮೇಲೆ ಆರನೇ ತರಗತಿ ಶಾಲೆ ಕಲಿತಾನಂತಿವನು ? ಎಲೋ ರುದ್ರ ನೀನು ಶಾಲೆ ಕಲೆಯುವದಿಲ್ಲ. ಕೂಳು ಕತ್ತರಿಸೋದೊಂದೇ ಕಲಿತೀಯಾ ?

ರುದ್ರ - ಕತ್ತರಿಸತೇನೆ... ನೀನೇನು ಮಾಡತೀಯಾ ? ತೆನಿ ತಿಂದೆತ್ತು ತೆವರು ಎಳೀತಂತೆ ಅಂತಾರಲ್ಲವ್ವ ಮತ್ತೆ ? ಮಗ ಉಂಡ್ರ ಕೇಡಲ್ಲ, ಮಳಿ ಬಂದ್ರೆ ಕೇಡಲ್ಲ ಅಂತ ?

ನೀಲಾ - ಬಾ ಇವತ್ತು ಊಟಾ ಮಾಡೂವಂತಿ ?

ರುದ್ರ - ಅವ್ವ ಉಣ್ಣಸ್ತಾಳೇಳು ? ಮನೆ ನಂದು, ನಿಂದಲ್ಲ

ನೀಲಾ - ಯಾಕೊ ? ನಾನೂ ನಿನ್ನ ಹಾಗೇ ಈ ಮನೇಲಿ ಹುಟ್ಟಿಲ್ಲೇನು ?

ರುದ್ರ - ಹುಟ್ಟಿದರೇನಾಯಿತು ? ಹೆಣ್ಣಲ್ಲೇನು ? ಕೊಟ್ಟ ಮನೆಗೆ ಹೋಗೋದು ?

ನೀಲಾ - ನೋಡವ್ವ ಇವನು ಹೇಗೆ ಮಾತಾಡತಾನೆ ?

ಹಂಪವ್ವ - ಅವನಂದ ಮಾತು ನಿಜ ನೀಲಾ. ಹೆಣ್ಣ ಎಂದಿದ್ದರೂ ತನ್ನ ಕೈಹಿಡಿದ ಗಂಡನ ಮನೆಯಲ್ಲಿಯೇ ಗತಿ ಕಾಣಬೇಕು. ಸುತ್ತೇಳು ನೆರೆ ಗಂಜಿ, ಮಂದಿಯ ಬಾಯಲ್ಲಿ ಮತಿವಂತೆ ಅನ್ನಿಸಿಕೊಳ್ಳಬೇಕು. ಅಂದರೆ ಅವ್ವ ಶಿವ ಮೆಚ್ಚುವದು

ನೀಲಾ - ಅದೆಲ್ಲ ನನಗೆ ಗೊತ್ತು ಬಿಡವ್ವ ? ಆದರೇನಾಯಿತು, ಇವನು ಹೀಗೆಲ್ಲ ಅಡಬೇಕೇನು ?

ಹಂಪವ್ವ - ಅಳಬಾರದು. ನೋಡಪ್ಪ ರುದ್ರ, ನೀನು ಹೀಗೆಲ್ಲ ಅಂದ್ರೆ ನೊಂದುಕೊಳ್ಳುವದಿಲ್ಲವೆ ? ನೀನು ಈಗಿನಿಂದ ನಿನ್ನಕ್ಕನ ಕೂಡ ದ್ವೇಷ ಕಟ್ಟಿಕೊಳ್ಳುತ್ತ ಹೋದರೆ ನಾಳೆ ಅವಳು ಹಡೆದು ನಿನಗೆ ಹೆಣ್ಣು ಕೊಡತಾಳೇನು?

ರುದ್ರ - ಇವಳು ಕೊಡದಿದ್ರ ಅಷ್ಟೇ ಹೋಯಿತು. ನಾನು ಬೇರೆ ಹುಡುಗೀನ ಮದುವೆ ಮಾಡಿಕೊಳ್ಳತೀನಿ

ಹಂಪವ್ವ - ಅಕ್ಕನೇ ಕೊಡದಿದ್ರ ಮಿಕ್ಕವರು ಕೊಡತಾರೇನು ? ಯಾಕ ಕೊಡಲಿಲ್ಲ ಅಂತ

ವಿಚಾರಕ್ಕ ಬೀಳತಾರೆ ?

ರುದ್ರ - ದುಡ್ಡು ಕೊಟ್ರೆ ಹೆಣ್ಣಿಗೇನವ್ವ ಬರ ? ಹೆಗಲ ಮೇಲೆ ತಂದು ಕೂಡಸ್ತಾರೆ !

ನೀಲಾ - ಹೂ... ತಂದು ಕೂಡಸ್ತಾರಿವನಿಗ ? ಕೋಡಂಗಿ ಮುಖದವನಿಗೆ ? ಹೆಣ್ಣು ಅಂದ್ರೆ ಗಿಡದನ್ನ ಹಣ್ಣು ಅಂತ ಮಾಡ್ಯಾನಿವನು

ಹಂಪವ್ವ - (ಬಿಡಿಸಿ) ಎಲೋ ರುದ್ರ... ಇರಲಿ ಬಿಡೆ ನೀಲಾ ಯಾಕ ಇವನ ಸಂಗತಿ ಜಗಳಕ್ಕ ಬೀಳತೀಯಾ ? (ಹೊರಗೆ ಮಹದೇವಪ್ಪ ಕೆಮ್ಮಿದ ಸದ್ದು ಕೇಳುವದು)

ನೀಲಾ - ನೋಡವ್ವ ಅಪ್ಪ ಕೆಮ್ಮತಾ ಬರುತಾನು. ಮುಂಜಾನೆದ್ದು ಈ ಥಂಡಿ ಹವೆಯಲ್ಲಿ ಯಾಕ ಹೊಲಕ ಹೋಗಬೇಕು ?

ರುದ್ರ - ಯಾಕ ಹೋಗಬೇಕು ಅಂದ್ರೆ ? ಕೊಕ್ಕ ಕೊಕ್ಕ ಅಂತ ಕೆಮ್ಮೋದಕ ?

ಹಂಪವ್ವ - ಎರಡು ದಿವಸದಿಂದ ಮೈ ಕೈ ನೋವು ಅಂತ ಹೇಳತಿದ್ರು. ತಾವು ದಮ್ಮಿನವರಾಗಿ ಮತ್ಯಾಕ ಹೋಗಿದ್ರೊ ಹೊಲದ ಕಡಿ. ಥಂಡಿ ಗಾಳಿ ಬೇರೆ ? (ಮಹದೇವಪ್ಪ ಬರುವನು)

ಸುವರ್ಣ - ನೋಡವ್ವ ಅಪ್ಪ ಮತ್ತೆ ಬೀಡಿ ಸೇದಾಕ ಹತ್ಯಾನ ?

ಹಂಪವ್ವ - ಸಾಕಾಯಿತು ನನಗ !

ನೀಲಾ - ನಿನಗ ಸಾಕಾದರೇನಾಯಿತವ್ವ. ಸೇದೋದು ಅಪ್ಪನಿಗೆ ಬೇಕಾಗೇತಿ

ಹಂಪವ್ವ - ಈ ನಿಮ್ಮ ಚುಟ್ಟಾಕ ಬೆಂಕಿ ಹಚ್ಚಲಿ (ಬೀಡಿ ಕಸಿದು ಕೆಳಗೆ ಚೆಲ್ಲುವಳು)

ರುದ್ರ - ಬೆಂಕಿ ಹಚ್ಚಿದ ಮೇಲೆ ಅವ್ವ ಅಪ್ಪ ಇದನ್ನು ಸೇದೋದು, (ಅದನ್ನು ಮಹದೇವಪ್ಪನಿಗೆ ಕೊಟ್ಟು) ಸೇದಪ್ಪ ಸೇದು

ಹಂಪವ್ವ - ಎಲಾ ರುದ್ರ ಹೋಗಿ ಆ ನಿನ್ನ ಮಾವನ್ನ ಕರೆದುಕೊಂಡು ಬಾ ಅಂದ್ರ ?

ರುದ್ರ - ಚಕ್ಕಲಿ ಕೊಟ್ರ ಈಗಲೇ ಹೋಗತೀನಿ

ನೀಲಾ - ಅಂದ್ರೆ ? ಕೊಟ್ಟಿಂದ ಹೋಗತೀಯಾ ?

ರುದ್ರ - ಹೌದು ಮಾತು ಅಂದ್ರ ಮಾತು... ನಂದು

ನೀಲಾ - ಬೆನ್ನ ಮೇಲೆ ಎರಡು ಬಾರಿಸಿ ಕಳಸವ್ವ ಅಂದ್ರ ತಾನೇ ಹೋಗತಾನ

ಮಹದೇವಪ್ಪ - ಏನವ್ವ ಅದು ?

ನೀಲಾ - ನೋಡಪ್ಪ ಮಾವ ಬರೋ ಹೊತ್ತಾಯಿತು. ಮೋಟಾರು ನಿಂದ್ರೋ ಸ್ಥಳದ **ತನಕ ಹೋ**ಗಿ ಮಾವನ್ನ ಕರೆಂದುಕೊಂಡು ಬಾ ಅಂದ್ರ ಹ್ಯಾಂಗ ಕಾಡತಾನ?

ರುದ್ರ - ನಾನೆಲ್ಲಿ ಕಾಡತೀನಿ ಅಕ್ಕ. ಎರಡು ಚಕ್ಕಲಿ ಕೊಡ್ರಿ ತಿನಕೋತಾ ಹೋಗತೀನಿ ಅಂತ ಹೇಳಿದೆ. ಇದು ಕಾಡಿದಂಗ ಆಯಿತೇನಪ್ಪ ?

ಮಹದೇವಪ್ಪ - ಏ... ಇಲ್ಲಪ್ಪ... ಕೊಟ್ಟು ಕಳಿಸಮ್ಮ ನೀಲಾ, ಪಾಪ ತಿನ್ನಕಾತ ಹೋಗಲಿ

ಹಂಪವ್ವ - ದೇವರ ಪೂಜೆ ನೈವೇದ್ಯ ಆದ ಬಳಿಕ ಎಲ್ಲರ ಜೊತೆ ತಿನ್ನತಾನಲ್ಲ ?

ಮಹದೇವಪ್ಪ - ಇರಲಿ ಕೊಟ್ಟು ಕಳಿಸಿರಿ (ನೀಲಾ ಚಕ್ಕಲಿ ತಂದು ಕೊಡುವಳು)

ನೀಲಾ - ತಿನಬಾಕ... ಹಳೆ ತಿನ್ನಬಾಕ ...

ರುದ್ರ - ಸುವರ್ಣ ನನ್ನೊಂದಿಗೆ ಬಂದ್ರೆ ಚಕ್ಕಲಿ ಕೊಡತೀನಿ ಬರತೀಯಾ ?

ಸುವರ್ಣ - ಬರತೀನಿ ತಾ (ತಿನ್ನುತ್ತ ಸುವರ್ಣ, ರುದ್ರ ಹೊರಗೆ ಹೋಗವರು. ನೀಲಾ ಒಳಗೆ ಹೋಗುವಳು)

ಮಹದೇವಪ್ಪ - (ಹಂಪವ್ವನಿಗೆ) ಏನೆ ? ಬಾರೆ ಇಲ್ಲಿ

ಹಂಪವ್ವ - ಇಲ್ಲ ನನಗೆ ಕೆಲಸವಿದೆ ? (ಹೋಗ ಹತ್ತುವಳು)

ಮಹದೇವಪ್ಪ - ಇರಲಿ ಬಾರೆ... ಹಬ್ಬಕ್ಕೆಂದು ಮನೆಗೆ ಬರುವ ತಮ್ಮನ ಸಲುವಾಗಿ ನಡೆಸಿದ ನಿನ್ನ ಸಂಭ್ರಮ ಹೇಳತೀರದು. ಅಬ್ಬಬ್ಬ ಈ ಹೆಂಗಸರ ಜಾತೀನೇ ಬಲು ಸ್ವಾರ್ಥದ್ದು. ಕೈ ಹಿಡಿದ ಗಂಡ ನಾಸಿಲ್ಲಿ ಗುಡ್ಡದಂತೆ ನಿಂತದ್ದು ಕಾಣಲಿಲ್ಲ ಇವಳ ಕಣ್ಣಲ್ಲಿ. ಆದೇ ಹಬ್ಬಕಂತ ಮನೆಗೆ ಬರುವ ತನ್ನ ತಮ್ಮನ ಸಲುವಾಗಿ ನಡೆಸಿರುವ ಸಂಭ್ರಮ ಹೇಳತೀರದು

ಹಂಪವ್ವ - ಸಂಭ್ರಮ ಏನು ಬಂತು ? ಪ್ರತಿ ವರುಷ ಮಾಡುವ ಹಾಗೆ ಈ ವರುಷ ಕೂಡ ಮಾಡುತ್ತಿದ್ದೇವೆ ತಮ್ಮ ಬರುತಾನೆ ಅಂತ ಹಮ್ಮಿನಿಂದ ಹಬ್ಬ ಮಾಡಿದರೆ ಸುಮ್ಮನಿರತೀರಾ ? ನೀವು ಕೈ ಹಿಡಿದೋರು

ಮಹದೇವಪ್ಪ - ಸುಮ್ಮನಿರದಿದ್ರೆ ನೀನು ಬಿಡತೀಯಾ ? ಬಲ ಕಟ್ಟಿಕೊಂಡು ನನ್ನ ಮೇಲೆ ಏರಿ ಬರತೀಯಾ ? ಲೇ ಹಂಪಿ ಇಷ್ಟೆಲ್ಲ ಸಂಭ್ರಮ ಮಾಡಲಿಕ್ಕೆ ಬರೋನು ನಿನ್ನ ತಮ್ಮ ಕಣೆ, ಮೈಸೂರು ಮಹರಾಜನಲ್ಲ ?

ಹಂಪವ್ವ - ನನ್ನ ಕಣ್ಣಲ್ಲಿ ನನ್ನ ತಮ್ಮ ರಾಜನೆ ? ಎಷ್ಟೆಂದ್ರೂ ಸರಕಾರದಲ್ಲಿ ನೌಕರಿ ಮಾಡಿ ಸಂಬಳ ತರುವನು. ನಿಮ್ಮಂತೆ ಕೈ ಕೆಸರು ಮಾಡಿಕೊಳ್ಳುವನಲ್ಲ ? ಬಿಳಿ ಹಾಳಿ ಮೇಲೆ ಕರೀ ಗೀಟು ಹಾಕಿದರೆ ಸಾಕು, ಕೈತುಂಬಾ ಸಂಬಳ

ಮಹದೇವಪ್ಪ - ಹೂ, ಈ ಗೀಟು ಹಾಕೋ ಜನ ಹೆಚ್ಚಾದಲ್ಲೇ ಅಲ್ಲವೇನು, ಒಂದು ರೂಪಾಯಿಕ ಒಂದು ಕಿಲೋ ಕಾಳು ಕೊಂಡು ತಿನ್ನೋ ಈ ಕಾಲ ಬಂದದ್ದು? (ಕೆಮ್ಮುವನು)

ಹಂಪವ್ವ - ಕಡಬು ಕರಿಯೋದು ಮುಗಿದು ಅಡುಗೆ ಮನೆಯೊಳಗಿನ ಕಮರು ಆರೋತನಕ ಸ್ವಲ್ಪ ಹೊರಗ ಕೂಡತೀರೇನು ?

ಮಹದೇವಪ್ಪ - ಇರಲಿ ಬಿಡು ಕಮರಿನ ವಾಸನಕ್ಕ ಬರಲಿಲ್ಲ ಈ ಕೆಮ್ಮು. ತಂಪಿನಲ್ಲಿ ಹೊಲಕ

ಹೋಗಿದ್ದೆ ಅದಕ ಬಂದಿರಬೇಕು

ಮುಂಜಾನೆದ್ದು ಹವಾ ತಂಪಿರತ್ತ ? ಅನ್ನೋದು ತಿಳಿದಿದ್ದರೂ ನೀವ್ಯಾಕ ಹೋಗಿದ್ರಿ ಹೊಲಕ ?

ಹೊಲದ ಚಲವು ನೋಡಬೇಕೆನ್ನಿಸಿತು, ಹೋಗಿದ್ದೆ. ಅನುಗಾಲ ಭೂ ತಾಯಿಯ ಸೇವೆ ಮಾಡಿದ ಈ ನನ್ನ ಮೈ ಮನೆಯಲ್ಲಿ ಮುದ್ದಿಯಾಗಿ ಬಿದ್ದುಕೊಳ್ಳಲು ಸಮ್ಮತಿಸದು. ಅದರಲ್ಲಿಯೂ ಮಹನವಮಿ ಕಳೆದು ದೀವಳಿಗೆ ಬಂದಿರುವ ಈ ಕಾಲ ಪೈರಿನ ಚೆಲುವನ್ನು ನೋಡಲು ತುಂಬಾ ಅನುಕೂಲ. ಹೊಲದಲ್ಲಿ ಪೈರಿನ ಚೆಲುವು ಕಂಡು ನಲಿದೆ, ಮನೆಗೆ ಬಂದು ಮಡದಿಯ ಈ ಮುದ್ದು ಮುಖಕ್ಕೆ ಒಲಿದೆ

ಅಪ್ಪಯ್ಯ ?....... ಇದೇನಿದು ನಿಮ್ಮ ಹುಡುಗಾಟ....? ಹುಡುಗರಿಗಿಂತ ಹೆಚ್ಚಾಗಿ ಹೋಯಿತಲ್ಲ ? ಮದುವೆ ವಯಸ್ಸಿನ ಮಗಳನ್ನು ಮನೆಯಲ್ಲಿಟ್ಟುಕೊಂಡು ಮಡದಿಯೊಂದಿಗೆ ಸರಸವಾಡುವದೆ ?

ಮಗಳು ದೊಡ್ಡವಳಾದಳು ಅಂತ ಮಡದಿಯೊಂದಿಗೆ ಸರಸ ಬಿಟ್ಟು ವಿರಸ ಕಟ್ಟಿಕೊಳ್ಳಬೇಕೆ ? ಹೊಲದಲ್ಲಿ ಬೆಳೆದು ನಿಂತ ಪೈರಿನ ಚೆಲುವನ್ನು ವರ್ಣಿಸುವದು ನನ್ನಿಂದಾಗದು. ಹೆಡೆಬಿಚ್ಚಿದ ಹಾವಿನಂತೆ ಹೊಡೆ ಹಿರಿದು ನಿಂತಿದೆ. ಅದನ್ನು ಕಂಡು ಬಂದ ಕಾರಣ ಒಕ್ಕಲಿಗನಾದ ನನ್ನ ಮೈಯ್ಯ ನೋವು ಮಾಯವಾಗಿ ಮನದಲ್ಲಿ ಒಲವು ಶಿಲೆಯಾಗಿ ಪುಟಿಯುತ್ತಿದೆ. ಹಂಪಿ, ಹದಿನೆಂಟು ವರುಷದ ನಮ್ಮ ದಾಂಪತ್ಯದ ಬಸಂತ ಬನಸಿರಿ, ನಿತ್ಯ ಹಸಿರಿನಿಂದ ಕಂಗೊಳಿಸುತ್ತಿದೆ.... ಎಲ್ಲಿ.... (ಕೈ ಹಿಡಿಯ ಹೋಗುವನು)

ಇರಲಿ ಸರಿಯಿರಿ, ಹುಡುಗರು ಕಂಡರೆ ಏನಂದಾವು ? ವಯಸ್ಸು ಕಳೆದ ಹಾಗೆಲ್ಲ ಚೆಲುವಿನೆಡೆಗೆ ಒಲಿಯುವ ನಿಮ್ಮ ಹುಚ್ಚುತನ ಹೆಚ್ಚುತ್ತಲೇ ನಡಿಯಿತಲ್ಲ

ಅಹುದು... ವಯಸ್ಸಿನಲ್ಲಿ ಒಡನಾಡಿಗಳು ರಮಿಸಿ ಕರ್ಣದ ಕಾಪು ಕಳೆದು ಕಹಿ ಅಳಿದು ಜೀವನ ಸವಿಯಾಗುತ್ತದೆ. ಆಗ ಬಾಳಿನುದ್ದಕ್ಕೂ ಮಾಧುರ್ಯ ಒಂದೇ ಎದ್ದು ತೇಲುತ್ತದೆ. ಇಷ್ಟು ದಿನಗಳ ನಮ್ಮ ಬಾಳ ಪಯಣದಲ್ಲಿ ಅದೆಷ್ಟು ಸುಖದುಃಖಗಳನ್ನು ಉಂಡಿಲ್ಲ, ಸರಸ ವಿರಸಗಳನ್ನು ಕಂಡಿಲ್ಲ. ನೋಡು ಚಿನ್ನ ಈಗ ಜೀವ ಜೀವನವನ್ನು ಬಯಸಿ ಪ್ರೀತಿಸುವದೇ ವಿನಹ ದೈಹಿಕ ಮಿಲನದ ಮೋಹವನ್ನಲ್ಲ. ಈ ಶುದ್ಧ ಪ್ರೀತಿಯ ಬಾಳ್ತೋಟದಲ್ಲಿ ನಾನೊಂದು ಮಾಮರ ನೀನು ಮಲ್ಲಿಗೆಯ ಬಳ್ಳಿ. ಈ ರಸದೋಟದ ಹೂ ಹಣ್ಣುಗಳನ್ನುಂಡು ಹಾಡಿ ಕುಣಿಯುವ ನಮ್ಮ ಮಕ್ಕಳೇ ಈ ಬನದ ಗಿಳಿವಿಂಡು, ಕೋಕಿಲ. ಸಂತಸದಿ ನಲಿಯುವ ಈ ನನ ಮನೆ ನಿತ "ನಂದಗೋಕುಲ"

**ಹಾಡು**

ವರುಷ ವರುಷಕು ಬದುಕು । ಹರುಷ ತುಂಬಿರಲದಕು ।
ವಿರಸ ಮುನಿಸುಗಳೇಕೆ ನನ್ನ ಚಿನ್ನ ॥
ಹಣ್ಣು ನಾವಾಗಿರಲು । ಹೂವು ನೀನಾಗಿ ಅರಳ । ಬೇಕೇನು ।
ನಮ್ಮ ಬಾಳಿಗಿನ್ನ ॥
ಅರಳಿದಾ ಹೂಗಳ ಕಂಡು । ಕಳಿತಹಣ್ಣಗಳನುಂಡು ।
ಹಾಡಿ ಕುಣಿಯಲಿ ನಮ್ಮ ಸಂತತಿ ಗಿಳಿವಿಂಡು ॥

(ಡಪ್ಪಿನಲ್ಲಿ ಹಾಡಿದ ನಂತರ) ಹೇಗಿದೆ ಚಿನ್ನಾ ಈ ಹಾಡು

ಹಂಪವ್ವ - ಹಾಡಿಕೊಂಡು ಅತ್ತರೂ ತೀರದಷ್ಟು ಬದುಕಿನ ಚಿಂತೆ ಬೆಳೆದು ನಿಂತಾಗ ನೀವು 'ಹಾಡು ಹೇಗಿದೆ ಚಿನ್ನ' ಅಂತ ಕೇಳಿದರೆ ನಾನೇನು ಹೇಳಲಿ ? ಅಲ್ಲ ಇಷ್ಟಾದರೂ ನಿಮಗೆ ಈ ಡಬ್ಬು ಬಾರಿಸಿ ಹಾಡುವ ಹುಚ್ಚು ಬಿಡಲಿಲ್ಲ ಮನೆಯ ಬದುಕಿನ ಮೇಲೆ ಮೋಹ ಹುಟ್ಟಲಿಲ್ಲ. ಇದರ ಮೇಲೆ ನಿಮ್ಮ ಹಾಡು ಕೇಳಿ ಹಣೆ ಬಡಿದುಕೊಂಡು ಅಳುವದಷ್ಟೇ ಉಳಿಯಿತು ನನ್ನ ಪಾಲಿಗೆ

ಮಹದೇವಪ್ಪ - ನನ್ನ ಒಲವು ನಿಲವುಗಳನ್ನು ಅರ್ಥಮಾಡಿಕೊಂಡ ನನ್ನ ಬಾಳ ಸಂಗಾತಿ ನೀನು, ಹೀಗಂದ್ರೆ ಇನ್ನಾರ ಮುಂದೆ ಹಾಡಲಿ ? ಈಗಾಗಲೇ ಈ ದಮ್ಮು, ಕೆಮ್ಮು ನನ್ನ ಅರ್ಧ ಜೀವಾನೇ ತಿಂದಿವೆ. ಉಳಿದರ್ಧಾನ ಯಾವಾಗ ತಿಂದು ತೇಗತಾವೋ ನಾಕಾಣೆ, ನಾಳೆ ನಾ ಸತ್ತ ಬಳಿ........ ಹಾಡಿ...... ನಿನ್ನ ಕಾಡಸ್ತೀನೇನೆ ಹಂಪಿ

ಹಂಪವ್ವ - (ಗಾಬರಿಯಿಂದ) ಅಪ್ಪಯ್ಯ. ಇದೆಂಥ ಅಮಂಗಲ ಮಾತು ಆಡೋದು. ಬದುಕಿನ ಮಾತು ಹೇಳಿದರೆ ಸಾವಿನ ಭಯ ತೋರಿಸೋದೆ ?

ಮಹದೇವಪ್ಪ - ಹಂಪಿ ಈಗ ನೀನು ಮಾಡುತ್ತಿರುವ ವಿಚಾರ ಮಗಳ ಮದುವೆಯದು ತಾನೆ?

ಹಂಪವ್ವ - ಹೌದು ಅದೇನು ಸಣ್ಣ ವಿಷಯವೇನು ? ನೀಲಾ ದೊಡ್ಡವಳಾಗಿಲ್ಲವೇ ? ಅಲ್ಲದೇ ಈ ವರುಷ ಭೂಮಿತಾಯಿ ಸಾಕಷ್ಟು ಬೆಳೆ ಕೊಟ್ಟಿದ್ದಾಳೆ. ಅಂದ ಬಳಿಕ ಮಗಳ ಮದುವೆ ಮಾಡವುದು ಒಳ್ಳೇದಲ್ಲವೆ ?

ಮಹದೇವಪ್ಪ - ನಿಜ ಹಂಪಿ. ಹೊಲದಲ್ಲಿ ಬೆಳೆದು ನಿಂತ ಪೈರು ನೋಡಿದಾಗ ನನಗೂ ಈ ಯೋಚನೆ ಬರದೇ ಹೋಗಿಲ್ಲ... ಇರಲಿ... ನೀಲಕ್ಕನ್ನ... ಯಾರಿಗೆ ಕೊಡಬೇಕು ಅಂತ ನಿನ್ನಿಷ್ಟ ?

ಹಂಪವ್ವ - ನನ್ನಿಷ್ಟವೇತರದು ? ನಿಮ್ಮಿಷ್ಟಕ್ಕೆ ಅನುಸರಿಸಿ ನಡಿಯೋ ಹೆಣ್ಣು ನಾನು. ಹೇಳಿ ನೀವು ಯಾರನ್ನಾದರೂ ಆರಿಸಿರಬೇಕಲ್ಲ ?

ಮಹದೇವಪ್ಪ - ನಾನೇನು ಆರಿಸಿದ್ದೇನೆ. ನನ್ನ ಆಯ್ಕೆ ನಿನ್ನ ಮನಸ್ಸಿಗೂ ಬರಬಹುದು

ಹಂಪವ್ವ - ಯಾರನ್ನ ನೀವು ಆರಿಸಿದ್ದು ?

ಮಹದೇವಪ್ಪ - ಮತ್ತಾರು ? ಇವತ್ತು ನಿನ್ನ ಹೇಳಿಕೆಯಂತೆ ನಮ್ಮ ಮನೆಗೆ ಬರತಾನಲ್ಲ ಆ ನಿಮ್ಮ ತಮ್ಮ ...... ಅಲ್ಲದೇ ಈಶ್ವರನನ್ನು ವಿದ್ಯಾವಂತನನ್ನಾಗಿ ಮಾಡುವದಷ್ಟೇ ಅಲ್ಲ. ಅವನ ಮದುವೆ ಮಾಡಿ ಕೊಡುವದಾಗಿ ನಿನ್ನ ತಾಯಿಯ ಮರಣೋತ್ಸರಣದಲ್ಲಿ ನೀನು ಅವಳಿಗೆ ಮಾತು ಕೊಟ್ಟಿಲ್ಲವೆ ?

ಹಂಪವ್ವ - ತಮ್ಮನ ಮದುವೆ ಮಾಡುವದಾಗಿ ತಾಯಿಗೆ ಮಾತು ಕೊಟ್ಟೆನೇ ವಿನ್ಹಾ... ಆ ಮಾತಿನಲ್ಲಿ ಮಗಳ ಕೊಟ್ಟು ... ಎಂದು ನಾನು ಸೇರಿಸಿಲ್ಲ ? ನೀವೀಗ ಹಂಗಿಸಬೇಕಿಲ್ಲ ?

ಮಹದೇವಪ್ಪ - ಅಂದರೆ ? ನಿನ್ನ ತಮ್ಮನಿಗೆ ಮಗಳು ಕೊಡುವ ಇಷ್ಟ ನಿನಗಿಲ್ಲವೆ ?

ಹಂಪವ್ವ - ಮತ್ತೂ ಅದೇ ಮಾತು. ಇದರಲ್ಲಿ ನಿಮ್ಮ ಅಭಿಪ್ರಾಯವೇ ಕೊನೆಯದು

(ರುದ್ರ, ಸುವರ್ಣ, ಈಶ್ವರ ಬರುವರು. ಕೈಯಲ್ಲಿ ಬ್ಯಾಗು ಇದೆ)

ರುದ್ರ - ಅವ್ವ, ಅಪ್ಪ... ಈಶ್ವರ ಮಾವ ಬಂದ

ಸುವರ್ಣ - ಅವ್ವ... ಮಾವ ಬಂದ

ಈಶ್ವರ - ಅಕ್ಕ... ಮಾವ... (ನಮಸ್ಕರಿಸುವನು)

ಹಂಪವ್ವ - ಚೆನ್ನಾಗಿದ್ದಿಯೇನಪ್ಪ

ಈಶ್ವರ - ಚೆನ್ನಾಗಿದ್ದೇನಕ್ಕ (ಮಹದೇವಪ್ಪ ಕೆಮ್ಮುವನು) ಮಾವ ನಿಮ್ಮ ಆರೋಗ್ಯ ಈಗ ಹೇಗಿದೆ ?

ಮಹದೇವಪ್ಪ - ನನ್ನದೇನಪ್ಪ ಹಾಗೇ ನಡೆಯೋದೆ.... ನೀನು ಸರಿಯಾಗಿದ್ದೀಯಾ ?

ಈಶ್ವರ - ನಿಮ್ಮ ಆಶೀರ್ವಾದದಿಂದ ಚೆನ್ನಾಗಿದ್ದೇನೆ ಮಾವ... (ಜೇಬಿನಲ್ಲಿದ್ದ ಹಣ ತೆಗೆದು) ತೆಗೆದುಕೊಳ್ಳಿ ಮಾವ (ಕೊಡಲು ಹೋಗುವನು)

ಮಹದೇವಪ್ಪ - (ಹಣ ಕಂಡು ಆಶ್ಚರ್ಯದಿಂದ) ಇದೇನಪ್ಪ ಹಣ ಯಾಕೆ ?

ಈಶ್ವರ - ಹಣ ಯಾಕ ಅಂದ್ರ ಇದು ನನ್ನ ಸಂಬಳದ ಹಣ, ನಿಮಗಲ್ಲದೇ ಇನ್ನಾರಿಗೆ ಕೊಡಬೇಕು ನಾನಿದನ್ನ ?

ಹಂಪವ್ವ - ನಿನ್ನ ಸಂಬಳದ ಹಣ ನಮಗ್ಯಾಕಪ್ಪ ? ನಿನ್ನ ಹತ್ತಿರಾನೇ ಇಟ್ಟುಕೋ

ಈಶ್ವರ - ಅಕ್ಕ ನೀನು ಮಾವ ಹರದೇಶಿಯಾಗಿದ್ದ ನನ್ನ ಕರತಂದು ವಿದ್ಯಾವಂತನನ್ನಾಗಿ ಮಾಡದಿದ್ದರ ನನ್ನ ಗತಿ ಯಾವ ಸ್ಥಿತಿಗೆ ಮುಟ್ಟುತ್ತಿತ್ತು ನೀವೇ ಹೇಳಿ ? ಮಾವ ನನ್ನ ಈ ಶ್ರೇಯಸ್ಸು ನಿಮ್ಮ ಕೃಪೆಯಿಂದಲ್ಲದೇ ಇನ್ನಾರಿಂದಲೂ ಅಲ್ಲ. ಕಾರಣ ಇಂದು ಕೈತುಂಬ ಬರುವ ಸಂಬಳದ ಹಣವನ್ನು ನಿಮಗಲ್ಲದೇ ಇನ್ನಾರಿಗೆ ಕೊಟ್ಟು ನಾ ಸಂತೋಷಪಡಲಿ ತಗೆದುಕೊಳ್ಳಿ ಮಾವ

ಮಹದೇವಪ್ಪ - (ತೆಗೆದುಕೊಂಡು ಹೆಂಡತಿಗೆ ಕೊಡುತ್ತ) ತೆಗೆದುಕೊ... ಒಳಗಿಡು... ಒಳ್ಳೇ ಹುಡುಗ

ಹಂಪವ್ವ - ದೇವರು ನೂರು ವರುಷ ನಿನ್ನ ಸುಖವಾಗಿಡಲಿ ... ತಮ್ಮ ನಿನ್ನಿಂದ ನನ್ನ ತವರಿನ ಬಳ್ಳಿ ಬಾಳಿನ ಹಂದರಕ್ಕೆ ಹಬ್ಬಿ ಹೂ ಬಿಡಲಿ

ನೀಲಾ - (ಬರುತ್ತ) ಹೋಗಲಿ ಬಿಡು ಮಾವ ಅವರ ಮಾತು. ನನಗೇನಾದರೂ ಸೀರೆ ತಂದಿದೀಯಾ ? ಮತ್ತೆ ರುದ್ರನಿಗೆ ... ಸುವರ್ಣನಿಗೆ ಬಟ್ಟೆ ಹೊಲಿಸಿಕೊಂಡು ಬಂದಿದೀಯಾ ?

ಈಶ್ವರ - (ನೀಲಾಳನ್ನು ಸರಿಯಾಗಿ ನೋಡಿ ನಗುತ್ತ) ಅಲ್ಲವೇ ನೀಲಾ... ನೀನು ಇಷ್ಟೆತ್ತರ ಬೆಳೆದು ನಿಂತರೆ ನಾನೇನು ಮಾಡಲಿ ? ಅಲ್ಲ ನಾನು ನೋಡಿದಾಗ ಇದ್ದಂತೆ ಇದ್ದರ ಸರಿ... ಆಗಿನ ಲೆಕ್ಕಕ್ಕೆ ಸರಿಯಾಗಿ ನಿನಗಂತ ಲಂಗ, ಜಂಪರು ಹೊಲಿಸಿ ತಂದೀನಲ್ಲೆ ?

ರುದ್ರ - ಹೌದು

ಸುವರ್ಣ - ಹೌದು

ನೀಲಾ - ಹೋಗು ಮಾವ ? ಕೇಳಿದೆ ಏನವ್ವ ? ನಿನ್ನ ತಮ್ಮನ ಮಾತು ? ನಾನೇನೋ ಲಂಗ ಜಂಪರು ತೊಡಬೇಕಂತೆ ನೋಡು ?

ಈಶ್ವರ - ಈಗ ತೊಡದಿದ್ದರೆ ಬಿಡೆ, ನಾಳೆ ಮದುವೆ ಕಾಲದಲ್ಲಿ ತೊಡವಿಯಂತೆ

ರುದ್ರ - ಹೌದು...

ಸುವರ್ಣ - ಹೌದು ....

ನೀಲಾ - ಏ... ಯಾಕ್ರೋ ? ಹಾಸ್ಯ ಮಾಡತೀರಾ ?

ಈಶ್ವರ - ರುದ್ರ, ಸುವರ್ಣ ಬನ್ನಿ ... ಇಲ್ಲಿ ... (ಬ್ಯಾಗು ತೆರೆದು ಇಬ್ಬರ್ರಿಗೂ ಒಂದೊಂದು ಜೊತೆ ಬಟ್ಟೆ ಕೊಡವನು) ನೋಡು ನೀಲಾ ಬಾಯಿಲ್ಲಿ (ಸೀರೆ ತೋರಿಸುತ್ತ) ಇದು... ಈ ಜರೆ ಅಂಚಿನ ಸೀರೆ ನಿನಗಂತ ತಂದಿದೀನಿ... ಹೇಗಿದೆ. ತೋರಿಸು ನಿಮ್ಮವ್ವನಿಗೆ

ನೀಲಾ - ನೋಡವ್ವ ಸೀರೆ ... ಮಾವಂದು .... ಅಲ್ಲ ಮಾವ ತಂದದ್ದು

ಹಂಪವ್ವ - ಚಂದಾಗಿ ಐತವ್ವ ಉಟ್ಟುಕೋ ಹೋಗು. (ನೀಲಾ ಹೋಗುವಳು)

ರುದ್ರ - ನಂದು ನೋಡವ್ವ

ಹಂಪವ್ವ - ಚಂದಾಗಿದಾವಪ್ಪ

ಸುವರ್ಣ - ನನ್ನವು ನೋಡವ್ವ

ಹಂಪವ್ವ - ನಿಂದೂ ಚಂದಾಗಿದೆ. ಹೋಗರಿ ಒಳಗ ತೊಟ್ಟುಕೊಳ್ಳಿರಿ (ರುದ್ರ, ಸುವರ್ಣ

ಹೋಗುವರು) ಈಶ್ವರ ನೀಲಾಳಿಗೆಂದು ತಂದ ಆ ಜರಿ ಅಂಚಿನ ಸೀರೆಗೆ ಬೆಲೆ ಎಷ್ಟಪ್ಪ ?

ಈಶ್ವರ - ಅರವತ್ತು ರೂಪಾಯಿ ಕೊಟ್ಟಿದ್ದೇನಕ್ಕ

ಹಂಪವ್ವ - ಅರವತ್ತು ??

ಮಹದೇವಪ್ಪ - ತುಂಬಾ ಬೆಲೆಯುಳ್ಳ ಸೀರೆ, ಅಷ್ಟೆಲ್ಲ ಖರ್ಚು ಮಾಡಿ ಯಾಕಪ್ಪ ತಂದಿ

ಈಶ್ವರ - ಅದೆಲ್ಲ ನನ್ನಿಷ್ಟ ಮಾವ, ಅವರಿಗಷ್ಟೇ ಅಲ್ಲ, ಅಕ್ಕನಿಗೆ ನಿನಗೂ ಒಟ್ಟು ಎಲ್ಲರಿಗೂ ತಂದಿದ್ದೇನೆ

ಹಂಪವ್ವ - ನಿನ್ನ ಬಟ್ಟೆ ನಮಗ್ಯಾಕಪ್ಪ. ದುಡಿದು ತಕ್ಕೊಳ್ಳೊ ಶಕ್ತಿನ ದೇವರು ನಮಗಿನ್ನೂ ಕೊಟ್ಟಿದಾನಲ್ಲ ?

ಈಶ್ವರ - ಅಕ್ಕ ಇದಾರ ದುಡಿತದ ಫಲ ಅಂತ ನೀನು ತಿಳಿದು ಕೊಂಡಿದ್ದಿಯಾ ?

ಹಂಪವ್ವ - ಇನ್ನಾರದು ನೀನು ದುಡಿದದ್ದಲ್ಲವೆ ?

ಈಶ್ವರ - ಅಲ್ಲ, ಈಗ ಬರುವ ಸಂಬಳದ ಹಣ ನನ್ನದಲ್ಲ, ನಿಮ್ಮದು... ನನ್ನ ಈ ಮಟ್ಟಕ್ಕೆ ತಂದ ನಿಮ್ಮ ಉಪಕಾರ ಮರೆತ ದಿನ ಅಕ್ಕಾ ನಾನು ಮನುಷ್ಯನೇ ಅಲ್ಲ. ಇಲ್ಲಿ ನೀನು ಅಕ್ಕ ಮಳೆಯನ್ನದೇ ಚಳಿಯನ್ನದೇ ಭೂಮಿತಾಯಿಯ ಮಡಿಲಲ್ಲಿ ದುಡಿದು ಬಂದು ಪ್ರತಿಫಲವನ್ನು ಮುಡಿಪಾಗಿಟ್ಟು ಪ್ರತಿ ತಿಂಗಳು ನನ್ನ ವಿದ್ಯಾಭ್ಯಾಸದ ಖರ್ಚಿಗೆ ಒದಗಿಸದೇ ಹೋಗಿದ್ದರೆ ನನಗೆ ವಿಶ್ವವಿದ್ಯಾಲಯದ ಪದವಿ ಪಡೆಯಲು ಸಾಧ್ಯವಿತ್ತೆ ? ಇಲ್ಲ !! ಕಲಿತವನು ನಾನಾದರೂ ಕಲಿಸಿದವರು ನೀವು, ಅಂದಬಳಿಕ ಬರುವ ಸಂಬಳದ ಹಣ ನನ್ನದಲ್ಲ ನಿಮ್ಮದು. (ಅಕ್ಕನಿಗೆ ಸೀರೆ ಖಣ ಮಾವನಿಗೆ ಪಂಜೆ ಶರ್ಟು ಕೋಟು ಬ್ಯಾಗಿನಿಂದ ತೆಗೆದುಕೊಡುತ್ತ) ತೆಗೆದುಕೋ ಅಕ್ಕ, ತೆಗೆದುಕೊಳ್ಳಿ ಮಾವ (ಕೊಡುವನು)

ಹಂಪವ್ವ - (ಸೀರೆ ಖಣ ಸ್ವೀಕರಿಸಿ) ತಮ್ಮ ನಿನ್ನ ಮನಸ್ಸು ಬಲು ದೊಡ್ಡದಪ್ಪ. ಆದಿರಲಿ ನಮಗೆಲ್ಲ ಇಷ್ಟು ಬೆಲೆಯುಳ್ಳ ಬಟ್ಟೆ ಯಾಕಪ್ಪ ?

ಈಶ್ವರ - ಒಂದು ಸಲವಾದರೂ ನನ್ನಕ್ಕ ನನ್ನ ಮಾವ ಇಂಥಾ ಬಟ್ಟೆ ಉಟ್ಟರು ಅನ್ನುವ ಸಂತೋಷ ನನಗೆ ಬೇಕಿತ್ತು, ಅದಕ್ಕಾಗಿ ತಂದೆ

ಹಂಪವ್ವ - ನಮಗೆಲ್ಲ ಹಬ್ಬಕ್ಕಂತ ಬಟ್ಟೆ ತಂದಿಯಲ್ಲ ? ಮತ್ತ ನಿನಗೇನು ತಂದಿದಿಯಾ ತೋರಿಸು ನೋಡೋಣ ?

ಈಶ್ವರ - ನನಗೇಕಮ್ಮ ಬಟ್ಟೆ ? ಇದೆಯಲ್ಲ ಇನ್ನೂ ಒಂದು ಜೊತೆ ಬ್ಯಾಗಿನಲ್ಲಿವೆ

ಮಹದೇವಪ್ಪ - ದೊಡ್ಡ ಕಚೇರಿಯಲ್ಲಿ ನೌಕರಿ ಮಾಡುವ ನೀನು ಸಾದಾ ಬಟ್ಟೆ ಧರಿಸಿ ನಮಗೆಂದು ಬೆಲೆಯುಳ್ಳ ಬಟ್ಟೆ ತಂದೆ ನಿನ್ನ ಬಿಟ್ಟು ಅದು ಹೇಗಪ ನಾವು

ಉಟ್ಟುಕೊಳ್ಳೋದು ?

ಈಶ್ವರ - ಮಾವ ನೀವು ಹೀಗೆಲ್ಲ ಭಾವಿಸಬೇಡಿ. ಈ ಬಟ್ಟೆ ಧರಿಸಿ ನೀವು ನನ್ನ ಕಣ್ಣೆದುರಿಗೆ ನಿಂತ್ರೆ ನನಗದೇ ಒಂದು ಸಂತೋಷ

ಮಹದೇವಪ್ಪ - ಹೂಂ... ನಮ್ಮನ್ನ ಇನ್ನೂ ಮದುಮಕ್ಕಳು ಅಂತ ತಿಳಿಕೊಂಡಾನಿವನು

ನೀಲಾ - (ಒಳಗಿನಿಂದಲೇ) ಮಾವ ? .... ನೀರು ಕಾಯಿಸಿದೀನಿ ಸ್ನಾನಾ ಮಾಡ ಬಾ... ?

ಈಶ್ವರ - ಅಬ್ಬಾಬ್ಬ ? .... ಏನವ್ವ ಅಕ್ಕ ಇದು ಉಪಚಾರ

ಹಂಪವ್ವ - (ನಗುತ್ತ) ಜರೆ ಅಂಚಿನ ಸೀರೆ ತಂದು ಕೊಟ್ಟಿದೀಯಲ್ಲಪ್ಪ ? ಅದರ ಪ್ರಭಾವ

ಈಶ್ವರ - ಹೌದೇನಕ್ಕ ...

ಮಹದೇವಪ್ಪ - ಹೌದು ಮುಂದಿನ ಸಲ ಪೀತಾಂಬರ ತಂದು ಕೊಡು, ಇದಕ್ಕಿಂತ ಹೆಚ್ಚಾಗತ್ತ ಪ್ರೀತಿ. ಹೋಗಪ್ಪ ಸ್ನಾನ ಮಾಡು ನಡಿ

ಹಂಪವ್ವ - ನೀಲಾ ..... ? ನಿನ್ನ ಮಾವ ಸ್ನಾನ ಮುಗಿಸುವಷ್ಟರಲ್ಲಿ ಆರತೀ ತಾಟು ಸಿದ್ಧಪಡಿಸು .... ? ಆ ??

ನೀಲಾ - ಹೂ

ಹಂಪವ್ವ - ಹೋಗಪ್ಪ ಸ್ನಾನ ಮಾಡು. (ಈಶ್ವರ ಒಳಗೆ ಹೋಗುವನು)

ಮಹದೇವಪ್ಪ - ನೋಡಿದಯೇನೆ ? ಎಷ್ಟು ದೊಡ್ಡ ಗುಣ ನಿನ್ನ ತಮ್ಮನದು. ಇಂಥ ಹುಡುಗನಿಗೆ ಮಗಳು ಕೊಡದೆ ಇನ್ನೆಂಥವನಿಗೆ ಕೊಡೋದು ? ಉಚ್ಚಗುಣದ ಕಲಿತ ವರನನ್ನು ಮುಂದಿಕ್ಕಿಕೊಂಡು ಬೇರೆ ಹುಡುಗನನ್ನು ಹುಡುಕ ಹೋದರೆ ನಾಳೆ ಜನ ನನಗೇನಂದಾರು ? ಹೇಳು ಈಗಲಾದರೂ ನಿನ್ನ ಅಭಿಪ್ರಾಯವನ್ನು

ಹಂಪವ್ವ - ಆಯಿತಲ್ಲ ನಿಮ್ಮ ಅಭಿಪ್ರಾಯವನ್ನು ಖಂಡಿಸಿ ಆಡುವ ಅಧಿಕಾರ ನನಗೆಲ್ಲಿದೆ ? ನಾನು ನಿಮ್ಮ ಮಾತಿನಂತೆ ನಡೆಯುವವಳು

ಮಹದೇವಪ್ಪ - ನನಗದು ಗೊತ್ತು ಹಂಪಿ. ಆದರೂ ನಿನ್ನದು ಹೆತ್ತ ಹೊಟ್ಟೆ, ಅದು ತಣ್ಣಗಿದ್ದರೇನೆ ನೆಟ್ಟಗಂತೆ. ನೋಡು ಹೇಗಿದ್ದರೂ ನಿನ್ನ ತಮ್ಮ ಬಂದಿದ್ದಾನೆ. ಈ ಮಾತು ನಿನಗೂ ಇಷ್ಟವೆಂದು ಕಂಡರೆ ಈ ನಿನ್ನ ತಮ್ಮನ್ನ ಒಂದು ಸಲ ಸೂಕ್ಷ್ಮವಾಗಿ ಕೇಳಿ ನೋಡು. ಅವನೂ ಒಪ್ಪಿದರೆ ಮದುವೆ ಮಾಡಿಬಿಡೋಣ

ಹಂಪವ್ವ - ನಾನೊಬ್ಬಳೇ ಯಾಕೆ ? ನೀವು ಎದುರಿಗಿದ್ದು ನಿಮ್ಮ ಬಾಯಲ್ಲಿ ಈ ಮಾತು ಬಂದರೇನೆ ಚಂದ ?

ಮಹದೇವಪ್ಪ - ಆಗಲಿ ಬೇಡವೆಂದವರಾರು ? ತುಂಬಾ ಒಳ್ಳೇ ಹುಡುಗ ಕಷ್ಟಪಟ್ಟು ಕಲಿಸಿದ್ದಕ್ಕೂ ನಮಗೆ ಹೆಸರು ತಂದ. ನಡೆ ಹೊಸ ಬಟ್ಟೆ ಧರಿಸಿ ದೀಪಾವಳಿಯ

ನಿಮಿತ್ತ ನಿನ್ನ ತಮ್ಮನಿಗೆ ದೀಪದಾರತಿ ಮಾಡು. (ಒಳಗೆ ಹೋಗುವರು. ನಂತರ ವೀರಣ್ಣ ಪ್ಲಾಸ್ಟಿಕ್ ಚೀಲದಲ್ಲಿ ಸಕ್ಕರಿ ತರುವನು. ಒಳಗಿನಿಂದ ನೀಲಾ ಆರತಿ ಹಿಡಿದುಕೊಂಡು ಹೊರ ಬರುವಳು)

ವೀರಣ್ಣ - (ನೀಲೆಗೆ) ಗ-ಮ-ಪ-ಪ-ನಿ-ಸ.... ನೀಲಾ ಸಕ್ಕರಿ ತಂದೀನಿ

ನೀಲಾ - ಆ ?? ಏನಂದಿ ? ಸಕ್ರಿ ತಂದೀಯಾ ಮಾವ ?

ವೀರಣ್ಣ - ಹೌದು, ನಿಮ್ಮವ್ವ ಹೇಳಿದ್ದಳು, ವೀರಣ್ಣ ನಾಳೆ ದೀಪಾವಳಿ ಹಬ್ಬ ಸಕ್ರಿ ತಂದು ಕೊಡಪ್ಪ ಅಂತ. ಸಕ್ರಿಯಂತ ಹುಡಿಗಿ ನೀನಿದ್ದಾಗ ಸಕ್ರಿ ತರದೇ ಇರತೇನೆಯೇ ? ಹೂ... ತಗೋ ... ಸಕ್ರೀನ ?

ನೀಲಾ - ತಡಿ ಅವ್ವನ್ನ ಕರೀತೀನಿ, ಅವ್ವ ... ?

ವೀರಣ್ಣ - ಏ ?? (ಅವಳ ಬಾಯಿಮುಚ್ಚಿ) ಅವಳನ್ಯಾಕ ತರೀತೀಯೇ ? ಯಾವ ಟೈಮಿನಲ್ಲಿ ಯಾರನ್ನು ಕರೀಬೇಕು ಯಾರನ್ನ ಕರೀಬಾರದು ಅನ್ನೋದು ಒಂದೂ ತಿಳೀಲಾರದು ಇವಳಿಗೆ ... ಥೂ ನಿನ್ನ ಹಳ್ಳೀದ ... ?... ಅವ್ವ ??... ಅಂತ ಒದರುತ್ತ (ಅವಳುಟ್ಟ ಸೀರೆ ನೋಡಿ) ವ್ವಾ... ವ್ವಾ... ಹೊಸ ಸೀರೆ ಉಟ್ಟುಕೊಂಡು ಕೆನ್ನೆಗೆ ಅರಿಷಣ ಹಚ್ಚಿಕೊಂಡು ಕೈಲಿ ಆರತೀ ತಾಟು ಹಿಡಿದುಕೊಂಡು ಸಂಪತ್ತ ಲಕ್ಷ್ಮಿ ಹಾಗೆ ಎದುರಿಗೆ ನಿಂತಿದೀಯಾ ? ತಡಿ ಕಣ್ತುಂಬ ಒಂದು ಸಲ ನೋಡತೀನಿ ... ಇಲ್ಲ ಒಂದು ರೌಂಡ ಹಾಕಿ ನೋಡತೀನಿ

ನೀಲಾ - ನೋಡು

ವೀರಣ್ಣ - (ಒಂದು ಸುತ್ತ ಹಾಕಿ) ವ್ವಾ... ವ್ವಾ... ಬ್ಯೂಟಿಫುಲ್ ಭಯಂಕರ ಬ್ಯೂಟಿ ಫುಲ್ ಮೋಗಲಿ ಈ ಸೀರೆ ಯಾವಾಗ ತಂದೀರಿ ?

ನೀಲಾ- ನಾವು ತಂದಿಲ್ಲ ನಮ್ಮ ಮಾವ ತಂದಾನ

ವೀರಣ್ಣಾ - ಮಾವ ತಂದಾ... ನ ? .... (ಸುಸ್ತಾಗಿ) ಅಂದ್ರ ಈಶ್ವರ ಹಬ್ಬಕ್ಕೆ ಬಂದಾನೇನು?

ನೀಲಾ - ಹೌದು ಇದೀಗ ಬಂದ. ಎಲ್ಲರಿಗೂ ಬಟ್ಟೆ ತಂದ

ವೀರಣ್ಣ - ಹಬ್ಬಕ್ಕ ಬಂದ ಮಾವ ನಿನ್ನ ಜೀವ ಬಯಸಿದ ಬಟ್ಟೆ ತಂದುಕೊಟ್ಟ ಅಂತ ಇಷ್ಟು ಹಿಗ್ಗೋದೆ ? ಸೋದರ ಮಾವನಿಗೆ ಆರತಿ ಮಾಡಿ ಅಕ್ಷತೆಯಿಡೋ ಸಡಗರದಲ್ಲಿ ಊರಿನಲ್ಲಿರೋ ಈ ಮಾವನ್ನ ಮರಿಬ್ಯಾಡ ಕಣೆ. ನಮ್ಮನ್ನಷ್ಟು ಕಣ್ಣು ತಗದು ನೋಡ್ತಾ ಇರು. ನಾವೇನು ತೀರಾ ಕಳಪೆ ಅಲ್ಲ ? ನಾವು ನಮಗ ಬೇಕಾದವರಿಗೆ ಬೇಕಾದ್ದೇ ತಂದು ಕೊಡತೀವಿ. ದುಡ್ಡು ಕೊಟ್ರೆ ಪೇಟೆಯಲ್ಲಿ ಇಂಥಾ ಸೀರೆಗಳು ಸಾಕಷ್ಟು ಸಿಗಬಹುದು. ಆದರೆ ಸಕ್ರಿ ಸಿಕ್ಕತ್ತೇನು ಈ ಕಂಟ್ರೋಲ ಕಾಲದಲ್ಲಿ ?

ನೀಲಾ - ಅವನು ಸೀರೆ ತಂದುಕೊಟ್ಟರೇನು ಸೋದರ ಮಾವ ನಿನ್ನ ಹಾಗೆ ?

ವೀರಣ್ಣ - ನನ್ನ ಹಾಗೆ ??

ನೀಲಾ - ಮೊದಲ ನಿನ್ನ ಮುಖಕ್ಕೆ ಆರತಿ ಬೆಳಗಿ ಅಕ್ಷತಿ ಇಟ್ಟು ಬಿಡತೀನಿ ತಡಿ

ವೀರಣ್ಣ - ನನಗ ? ಆರತೀ ಬೆಳಗತಿಯಾ ಬೆಳಗು, (ಶಿಸ್ತಾಗಿ ನಿಲ್ಲುವನು, ನೀಲಾ ಆರತಿ ಬೆಳಗುವಳು)

ನೀಲಾ - ಆಯಿತಾ ? ..... ..... ಈಗಲಾದರೂ ನಮ್ಮ ತಾಯೀನ ಕರೀಲಾ ?

ವೀರಾಣ್ಣ - ಹೂ... ಕರಿ... ಕರಿ..

ನೀಲಾ - ಅವ್ವ... ವೀರೇಶ ಮಾವ ಸಕ್ರಿ ತಂದಾನ....

ಹಂಪವ್ವ - (ಒಳಗಿನಿಂದ) ಏನಂದೀ ವೀರಣ್ಣ ಸಕ್ರಿ ತಂದಾನ ? ತಕ್ಕೊಳ್ಳವ್ವ. ಅವನ್ನ ಕೂಡ ಅಂತ ಹೇಳು, ಬರತೀನಿ ರೊಕ್ಕ ಕೊಡತೀನಿ....

ವೀರಣ್ಣ - (ನೀಲಾಗೆ) ಏನೇ ನಿಮ್ಮವ್ವ ರೇಡಿಯೋ ಸ್ಟೇಷನ್ನದಲ್ಲಿ ನೌಕರಿಗಿದ್ದಳೇನು "ಎಷ್ಟ ಚಂದಾಗಿ ಹೇಳತಾಳಲ್ಲ ? ಬರತೀನಿ... ರೊಕ್ಕ ಕೊಡತೀನಿ ಅಂತ" (ಒಳಗೆ ಇದ್ದ ಹಂಪವ್ವನಿಗೆ ಕೇಳುವಂತೆ) ಇಲ್ಲತ್ತೆ ಈಗ ನನಗೆ ಬೇರೆ ಕೆಲಸ ಐತಿ, ಈಗ ಸಕ್ರಿ ಕೊಟ್ಟು ಹೋಗತೀನಿ... ಮತ್ತ ಬರತೀನಿ. ಹೂ ತಗೋ ಸಕ್ರೀನ ನೀಲಾ... (ನೀಲಾ ಸಕ್ರಿ ತೆಗೆದುಕೊಳ್ಳುವಳು)

ನೀಲಾ - ಅಲ್ಲ ಮಾವ ಯಾರಾದರೂ ಸಕ್ರಿ, ಗೋಧಿ,ಅಕ್ಕಿ ಕೇಳಿದರೆ ಅವರ ಪಾಲಿಗೆ ಬರೋದಕಿಂತ ಒಂದು ಗುಂಜಿ ತೂಕ ಹೆಚ್ಚಾಗಿ ಕೊಡೋದಿಲ್ಲ. ನಮಗಂದ್ರ ಕಿಲೋಗಟ್ಲೆ ತಂದು ಕೂಡತೀಯಲ್ಲ ಮಾವ ?

ವೀರಣ್ಣ - ಕಿಲೋ ಯಾಕ ? ಕೇಳಿದರ ನಿಮಗ ಕ್ವಿಂಟಲ್‌ಗಟ್ಲೆ ತಂದು ಕೊಡತೀನಿ

ನೀಲಾ - ಹೌದಾ

ವೀರಣ್ಣ - ಹೂ ನೋಡು.... ನೀಲಾ ನಮಗ ಬೇಕಾದವರಿಗೆ ಬೇಕಾದಷ್ಟು ಕೊಡತೀವಿ

ನೀಲಾ - ಅಗ್ಗ ದರದ ರೇಶನ್ ಅಂಗಡಿ ಮಾಡೂ ನೀನು ಹೀಗಲ್ಲ ಒಬ್ಬರಿಗೊಂದು ರೀತಿ ಮತ್ತೊಬ್ಬರಿಗೊಂದು ರೀತಿ ಮಾಡಿದರೆ ಲೆಕ್ಕ ತಪ್ಪೂದಿಲ್ಲೇನು ?

ವೀರಣ್ಣ - ಲೆಕ್ಕ ತಪ್ಪದಂಗ ಮಾಡಕ ನಮಗೇನು ಅಕ್ಕಲ ಇಲ್ಲೇನು ? ಸೊಸೈಟಿಯಲ್ಲಿ ನೌಕರಿ ಮಾಡಲಿಕ್ಕೆ ಹತ್ತಿ ಹತ್ತು ವರ್ಷ ಆಯಿತು

ನೀಲಾ - ಹೋಗಲಿ ನಮ್ಮ ಮನೆಗೆ ಬರೋದು ಯಾಕ ಬಿಟ್ಟಿ ?

ವೀರಣ್ಣ - ಮನೆಗೆ ಬರೋದು ಯಾಕ ಬಿಟ್ಟಿ ಅಂತ ಕೇಳ್ತೀಯಲ್ಲ, ನಾನೇನು ನೆಂಟನೆ ಹೇಳಿ ಕೇಳಿ ನೆರಮನೆಯವನು

ನೀಲಾ - ಮನೆಗೆ ಬರದೇ ತಿಂಗಳ ಕಳೀತ. ಬಂದ ಬಳಿಕ ನೆರಮನೆಯವನೂ ನೆಂಟನೇ?

ವೀರಣ್ಣ - ನಿನ್ನ ಮೇಲಿನ ಮೋಹದಿಂದ ಮೇಲಿಂದ ಮೇಲೆ ಬಂದರೆ ಕೊಡತೀಯಾ ಮರ್ಯಾದೇನ ?

ನೀಲಾ - ಕೊಡದೇ ಇರುತ್ತೇನೆಯೇ ? ನೀನು ಬಂದ್ರೆ ನಿನಗೆಷ್ಟೋ ಮರ್ಯಾದೆ ಕೊಟ್ಟೇ ಕೊಡತೇನೆ. ನೋಡು ಮಾವ ತಿಂಗಳಿಗೊಂದು ಸಲ ಬಂದ್ರೆ ಚಹ ಸೋಸಿ ಕೊಡತೀನಿ

ವೀರಣ್ಣ - ತಿಂಗಳಿಗೊಂದು ಸಲ ಬಂದ್ರೆ ನೀನು ಚಹಾ ಸೋಸಿ ಕೊಡ್ತಿ. ನಾನು ಕುಡಿತೇನಿ .... ಮತ್ತ... ಹದಿನೈದು ದಿವಸಕ್ಕೊಂದು ಸಲ ಬಂದ್ರೆ ?

ನೀಲಾ - ಎಲಿ ಅಡಿಕಿ ಮಡಚಿ ಕೊಡತೀನಿ

ವೀರಣ್ಣ - ಹೂ. ನೀನು ಎಲಿ ಅಡಿಕಿ ಮಡಚಿ ಕೊಡ್ತಿ, ನಾನೂ ತಿಂದೆ .... ಮತ್ತೆ... ವಾರಕ್ಕೊಂದಾವರ್ತಿ ಬಂದ್ರೆ ??

ನೀಲಾ - ವಾರಕ್ಕೊಂದಾವರ್ತಿ ಬಂದ್ರೆ ? ಕೂಡು ಮಾವ ಅಂತ ಕಂಬಳಿ ಹಾಸ್ತೀನಿ

ವೀರಣ್ಣ - ಹೂ ನೀನು ಕಂಬಳಿ ಹಾಸಿದಿ ನಾನು ಹೀಗೆ ಕೂತೆ (ಕೂತು) ಮತ್ತೆ ನಿತ್ಯ ಬಂದು ಹೀಗೆ ಕೂತುಬಿಟ್ರೆ ?

ನೀಲಾ - ಏನೂ ಇಲ್ಲ...

ವೀರಣ್ಣ - (ನಿರಾಶೆಯಿಂದ ಎದ್ದು) ಹೂ... ಏನೂ ಸಿಗದಿದ್ದರೆ ಬಿಡಲಿ ಕೊನೆಗೆ ಈ ದೇವಿಯ ಮುಖ ದರ್ಶನವಾದರೂ ದೊರೆಯುತ್ತದಲ್ಲ, ಅಷ್ಟೇ ಸಾಕ ನಯನ ತೃಪ್ತಿ

ನೀಲಾ - ನನ್ನ ದರ್ಶನದಿಂದ ನಿನ್ನ ಕಣ್ಣಿಗೆ ತೃಪ್ತಿ ದೊರೆಯುತ್ತಿದ್ದರೆ ಇಷ್ಟು ದಿವಸ ಬರದೇ ಇರುತ್ತಿದ್ದಿಯಾ ? ಇದೆಲ್ಲ ಶುದ್ಧ ಸುಳ್ಳು. ಗಂಡಸಿನ ಕಣ್ಣಿನಲ್ಲಿ ಹೆಣ್ಣಿಗೆ ಬೆಲೆ ಎಷ್ಟು ಅಂತ ನನಗೆ ಗೊತ್ತಿಲ್ಲೇನು. ಎದುರಿಗೆ ಮಾತ್ರ ಪ್ರೀತಿ ನೋಟ ಮರೆಯಾದ ಬಳಿಕ ಹೊಟ್ಟೆ ತುಂಬಿದ ಊಟ

ವೀರಣ್ಣ - ಹಾಗನ್ನಬೇಡ ನೀಲಾ, ಎಷ್ಟೆಂದರೂ ನಾನು ನಿನ್ನ ಒಲವು ಬಯಸಿ ಬರುವ ಭಿಕ್ಷುಕ. ಅದನ್ನು ನೀನು ನೀಡತೀಯಾ ಅನ್ನೂ ನಂಬಿಕೆ ಬಂದ್ರೆ ಹಗಲಷ್ಟೇ ಅಲ್ಲ ರಾತ್ರಿ ಕೂಡ ನಿನ್ನ ಮನೆಯ ಬಾಗಿಲಿಗೆ ಕಾವ ನಿಂತೇನು, ನೈಟ ಡ್ಯೂಟಿ ಪೋಲೀಸ ನಿಂತಹಾಗೆ

ನೀಲಾ - ಓ.... ಹೊ ಒಲವಿನ ಬೇಡಿಕೆಯನ್ನು ಒಗಟಿನ ಧಾಟಿಯಲ್ಲಿ ಹೇಳುವ ಕಲೆ ನಿನಗೆ ಬಹಳ ಚೆನ್ನಾಗಿ ಸಾಧಿಸಿದೆ. ಹೋಗಲಿ ಭಿಕ್ಷುಕನಾಗಿ ನನ್ನ ಬಳಿಗೆ ಬಂದ ನೀನು ಒಂದೇ ಮನೆಯ ಅನ್ನದಿಂದ ಹಸಿವು ಹಿಂಗಿಸಿ ಕೊಳ್ಳುವಿಯಾ?

ವೀರಣ್ಣ - ಓ.... ಹೊ.... ಯಾಕಾಗಬಾರದು ? ಹೊಟ್ಟೆ ತುಂಬುವಂತೆ ನೀನೊಬ್ಬಳೇ ನೀಡಿದರೆ ಮತ್ತೊಬ್ಬಳ ಮನೆಯ ಬಾಗಿಲಿಗೆ ನಿಂತು ನಾನೇಕೆ ಕೈ ಒಡ್ಡಲಿ

ನೀಲಾ - ಭಿಕ್ಷುಕರಲ್ಲಿ ಅದೊಂದು ಬಲು ಕೆಟ್ಟ ಚಟ. ಮನೆ ಮನೆ ತಿರಿಯುತ್ತ ಅಲಿಯುವದು

ವೀರಣ್ಣ - ಛೀ... ಛೀ.... ನಾನಂಥ ಭಿಕ್ಷುಕನಲ್ಲ, ಇದ್ದುದರಲ್ಲಿಯೇ ಒಂದು ನಮೋನಿ ಹೈಕ್ಲಾಸ ಭಿಕ್ಷುಕ ನೋಡು ಬೇಕಿದ್ರೆ ?

ನೀಲಾ - ಹಾಗಿದ್ರೆ ನನಗೇನೂ ಭಯವಿಲ್ಲ. ಆದರೆ ಇವತ್ತು ನನ್ನ ಮುಂದೆ ಒಡ್ಡಿದ ನಿನ್ನ ಕೈನ, ನಾಳೆ ಇನ್ನೊಬ್ಬಳ ಮುಂದೆ ಒಡ್ಡಬಾರದು

ವೀರಣ್ಣ - ಹಾಗಿದ್ರೆ ನೀಲಾ ನಾನೊಂದು ಮಾತು ಹೇಳತೀನಿ. ಆದರೆ ನಿನ್ನೊಂದಿಗೆ ನನ್ನ ಮದುವೆ ಆಗಬೇಕು. ಇಲ್ಲ ಆಜನ್ಮ ಬ್ರಹ್ಮಚಾರಿಯಾಗಿ ಉಳಿಬೇಕು ಇದು ನನ್ನ ಕೊನೆಯ ನಿರ್ಧಾರ

ನೀಲಾ - ಅಂದ್ರೆ ? ನಿನ್ನೊಂದಿಗೇ ಮದುವೆ ಆಗತೇನಿ (ಕೈ ಹಿಡಿಯುವಳು)

ಈಶ್ವರ - (ಬರುತ್ತ) ಹಾಗಿದ್ದರೆ ನಾನೀಗಲೇ ಮಂತ್ರಾ ಅಂತೇನೆ (ಇಬ್ಬರೂ ನಾಚಿ ನಿಲ್ಲುವರು) ಏನಪ್ಪ ಏ ಸೆಕ್ರೆಟರಿ ಸಾಹೇಬ, ಸಹಕಾರಿ ತತ್ವದ ತಳಹದಿಯನ್ನೇ ಹಾಕಿದಿಯಲ್ಲ ಈ ನನ್ನಕ್ಕನ ಮನೆಯಲ್ಲಿ, "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಅನ್ನೋ ಮಂತ್ರಾ ಊದೀದಿ ಏನಯ್ಯ ಇವಳಿಗೆ. ನನ್ನಕ್ಕ ಇವಳನ್ನ ನನಗ ಕೊಡಬೇಕು ಅಂತ ಲೆಕ್ಕ ಹಾಕಿದಾಳೆ. ಹೀಗಿದ್ದು ನೀನು ಒಳಗಿಂದೊಳಗೆ ಹುಡಿಗಿನ್ನ ಒಲಿಸಿಕೊಂಡಿದಿಯಲ್ಲ. ಕಂಟ್ರೋಲ ಸಕ್ರಿ, ಗೋದಿ, ಅಕ್ಕಿ ಕೊಟ್ಟು

ವೀರಣ್ಣ - (ಅಂಜುತ್ತ) ನೋಡ್ರಿ ಇನ್ನಾಕರೆಪ ಸುಳ್ಳು ಹೇಳೂದೂ ಇದರ ಮೇಲೆ ನಿಮ್ಮ ಇಷ್ಟಕ್ಕ ಬಂದಂಗ ಮಾಡ್ರಿ

ಈಶ್ವರ - ನನ್ನ ಇಷ್ಟದಂತ ಯಾಕೆ ? ನಿನ್ನ ಇಷ್ಟದಂತೆ ನಡಿಸಿ ಕೊಡತೀನಿ ಹೋಗು...

ವೀರಣ್ಣ - (ನೀಲಾಗೆ) ಗ, ಮ, ಪ, ದ, ನಿ, ಸ .... ?

ನೀಲಾ - (ವೀರಣ್ಣನಿಗೆ) ನಿ, ಸಾ, ನಿ, ಸಾ ....

ಈಶ್ವರ - ಗ - ರಿ - ಸ - ನಿ - ದ - ಶಿ - ಸ - ನಿಸಾ ....

ವೀರಣ್ಣ - ಪ, ಸಾ, ಪ.... ಸಾ .... (ಹೋಗುವನು)

ನೀಲಾ - ನಡಿಸಿಕೊಡತೀಯಾ ಮಾವ ?

ಈಶ್ವರ - ನೀಲಾ ನೀವಾಡಿದ ಎಲ್ಲ ಮಾತುಗಳನ್ನು ಮರೆಯಲ್ಲಿ ನಿಂತು ನಾ ಕೇಳಿದೆ, ನಿನ್ನ ಮನಸ್ಸಿನಂತೆ ನಿಮ್ಮ ಮದುವೆ ಮಾಡುವ ಭಾರ ನನಗಿರಲಿ

ನೀಲಾ - ಮಾವ ನೀವು ತುಂಬಾ ಒಳ್ಳೆಯವರು, ಏನಂತಾರೋ ಅಂತ ನಾನು ಬಾಳ ಅಂಜಿದ್ದೆ. ಆದರ ದೇವರೇ ಈ ನನ್ನ ಮಾವನ ನೂರು ವರುಷ ಸುಖವಾಗಿ ಬಾಳಿಸು

ಈಶ್ವರ - ನೀಲಾ ನಾನು ನಿನ್ನ ಸೋದರ ಮಾವ. ಅಂದ ಬಳಿಕ ಬದುಕಿನ ಭವ್ಯಾಕಾಶವನ್ನು ಹಾರಬಯಸಿದ ಜೊತೆ ಹಕ್ಕಿಗಳಂತಿದ್ದ ನಿಮ್ಮನ್ನಗಲಿಸಿ ನಾನೇಕೆ ಪಾಪ ಕಟ್ಟಿಕೊಳ್ಳಲಿ

ರುದ್ರ - (ಒಳಗಿನಿಂದ ಬರುತ್ತ) ಹೂ ಅಕ್ಕ ನಿನ್ನ ಆರತೀ ಸಮಯಕ್ಕ ಸರಿಯಾಗಿ ನಾನು ಸಿದ್ಧನಾಗಿ ಬಂದೆ. (ಹಂಪವ್ವ, ಸುವರ್ಣ, ಮಹದೇವಪ್ಪ ಹೊಸ ಬಟ್ಟೆ ಧರಿಸಿ ಹೊರ ಬರುವರು)

**॥ ಆರತಿಯ ಪದ ॥**

ಬೆಳಗುವ ಆರತಿ । ಬಳಿಸಾರಿ ನಾವು ಮುದದಿ ॥
ತಮ್ಮನ ತವರಿಗೆ ಬಂದಿಹನೆಂದು । ಅಮ್ಮನ ನೆನಪು ತಂದಿಹನೆಂದು ।
ಮಂಗಳಾರತಿ ಬೆಳಗುವೆನೆಂದು । ದೀಪಾವಳಿ ಶುಭ ಸಂಭ್ರಮದಿ ॥
ತವರಿನ ಕೀರ್ತಿ ನೀನಾಗೆಂದು ತಾಯಿಯ ಆಸೆಯ ನೀಸಲಿಸೆಂದು ।
ಭಗಿನಿ ಬೆಳಗುವ ಮಂಗಳಾರತಿ । ದೀಪಾವಳಿ ಶುಭ ಸಂಭ್ರಮದಿ ॥

(ಆರತಿ ತಾಟಿನಲ್ಲಿ ಈಶ್ವರ ಹಣ ಹಾಕುವನು. ನೀಲಾ, ರುದ್ರ, ಸುವರ್ಣ ಆರತಿ ತಾಟು ತೆಗೆದುಕೊಂಡು ಒಳಗೆ ಹೋಗುವರು)

ಮಹದೇವಪ್ಪ - ಹಂಪಿ, ಆರತಿ ತಾಟಿನಲ್ಲಿ ನಿನ್ನ ತಮ್ಮ ಅದೇನು ಹಾಕಿದನೆ ?

ಹಂಪವ್ವ - ಆರತಿ ತಾಟಿನಲ್ಲಿ ಹಾಕಿದ ಹಣ ಕೇವಲ ನೆಪಮಾತ್ರಕ್ಕೆ. ನೋಡು ಈಶ್ವರ ಈ ಹಣದಿಂದ ಈ ನಿನ್ನ ಅಕ್ಕನಿಗೆ ಸಂತೋಷ ದೊರೆಯಲಾರದು

ಈಶ್ವರ - ಅದೇನು ಬೇಕು ಕೇಳಕ್ಕ. ನಿನ್ನ ಆಸೆ ಅಭಿಲಾಷೆಗಳನ್ನು ಮನಮುಟ್ಟಿ ನಡೆಸಿಕೊಡುತ್ತೇನೆ.

ಮಹದೇವಪ್ಪ - ನಿನ್ನಕ್ಕನ ಮನೋಭೂಮಿಕೆಯಲ್ಲಿ ಬಹುದಿನಗಳಿಂದಲೂ ಬೇರು ಬಿಟ್ಟ ಆಸೆಗೆ ನೀನು ಒಪ್ಪಿದರೆ ಮಾತ್ರ ಅದು ಫಲಿಸುತ್ತದೆ

ಈಶ್ವರ - ಹೇಳಕ್ಕ ನನ್ನಿಂದಾದರೆ ಖಂಡಿತ ನಡೆಯಿಸಿ ಕೊಡುತ್ತೇನೆ

ಮಹದೇವಪ್ಪ - ಹೇಳು ಹಂಪಿ ಈ ಶುಭ ದಿನದಲ್ಲಿ ಆ ಸಮಾಚಾರ ತಿಳಿಸಲು ಆತಂಕವೇಕೆ?

ಹಂಪವ್ವ - ಮತ್ತೂ ಅದೇ ಮಾತು ? ಅದು ನಿಮ್ಮ ಬಾಯಲ್ಲಿ ಬರಬೇಕೆ ವಿನಃ ನನ್ನ ಬಾಯಲ್ಲಿ ಬರಲಾರದು. ನೀವುಂಟು ನಿಮ್ಮ ಅಳಿಯನುಂಟು

ಈಶ್ವರ - ಹೇಳಿ ಮಾವ ನೀವಿಷ್ಟು ಸಂಕೋಚಪಡಲಿಕ್ಕೆ ನಾನೇನು ಹೊರಗಿನವನ ? ಹೇಳಿ ಅದೇನು ?

ಮಹದೇವಪ್ಪ - ಅದೇ ? ತನ್ನ ಮಗಳಿಂದ ತನ್ನ ತವರಿನ ಬಳ್ಳಿ ಹಬ್ಬಲಿ ಅಂತ ಈ ಅಕ್ಕನ ಆಸೆ. ಅಂದರೆ ಅರ್ಥವಾಯಿತಲ್ಲ ? ನೀಲಕ್ಕನ್ನ ನಿನಗೆ ಕೊಟ್ಟು ಮದುವೆ ಮಾಡಬೇಕು ಅಂತ ನಮ್ಮ ಆಸೆ

ಈಶ್ವರ - ಅಹುದೇನಕ್ಕ ?

ಹಂಪವ್ವ - ಅಹುದಪ್ಪ ಈ ಆಸೆ ಅವ್ವನ ಮನಸ್ಸಿನಲ್ಲಿಯೂ ಇತ್ತು. ನೀನು ದೊಡ್ಡ ಮನಸ್ಸು ಮಾಡಿ ನೀಲಾಳ ಕೈ ಹಿಡಿದು .....

ಮಹದೇವಪ್ಪ - ನಮ್ಮನ್ನು ಕನ್ಯಾ ಸೆರೆಯಿಂದ ಪಾರು ಮಾಡಬೇಕು ..... (ಈಶ್ವರ ಮೌನ)

ಹಂಪವ್ವ - ಯಾಕಪ್ಪ ಸುಮ್ಮನಾದಿ ?

ಮಹದೇವಪ್ಪ - ಹೇಳು ಈಶ್ವರ ಇದು ಒಲವಿನ ಮಾತೆ ಹೊರತು ಒತ್ತಾಯದ್ದೇನೂ ಅಲ್ಲ

ಈಶ್ವರ - ನೋಡಕ್ಕ ನಿಜ ಹೇಳಿದರ ... ನೀ...ವು...ನೊಂದು.... ಕೊಳ್ಳಬಾರದು

ಮಹದೇವಪ್ಪ - ಛೇ... ಛೇ... ನೀನೇನೂ ಯೋಚಿಸಬೇಡ. ನಿನ್ನ ಮನಸ್ಸಿನಲ್ಲಿದ್ದುದನ್ನು ಹೇಳಿಬಿಡು...

ಈಶ್ವರ - ನೋಡಕ್ಕ .... ಮಾವ ? ನಿಮ್ಮ ಮಗಳನ್ನು ಮದುವೆಯಾಗುವ ಇಷ್ಟ ನನಗಿಲ್ಲ ....

ಮಹದೇವಪ್ಪ - ಆ.... ? (ಕೆಮ್ಮುವನು)

ಹಂಪವ್ವ - (ಸಿಟ್ಟು, ದುಃಖದಿಂದ) ಏನಂದೆ ಈಶ್ವರ ? ನನ್ನ ಮಗಳನ್ನು ಮದುವೆಯಾಗುವ ಇಷ್ಟ ನಿನಗಿಲ್ಲವೆಂದು ಹೇಳಿದೆಯಲ್ಲ ? ನನ್ನ ಮಗಳೇನು ಕುರುಡಿಯೆ ? ಕುಂಟಿಯೆ ? ಇಲ್ಲ ಅಂಗವಿಕಲಳೆ ? ನನ್ನ ಮುದ್ದು ಮಗಳಲ್ಲಿ ಯಾವ ದೋಷ ಕಂಡು ನೀನು ಈ ಮಾತು ಹೇಳಿದಿಯಪ್ಪ ಈಶ್ವರ ?

ಈಶ್ವರ - ನಿನ್ನ ಮಗ್ಳಲ್ಲಿ ದೋಷ ಕಂಡು ನಾನೀ ಮಾತು ಹೇಳಲಿಲ್ಲಕ್ಕ ?

ಮಹದೇವಪ್ಪ - ಹಾಗಿದ್ದರೆ ಇಂಥ ಕನ್ಯಾರತ್ನವನ್ನು ನೀನು ನಿರಾಕರಿಸಲು ಕಾರಣ ?

ಹಂಪವ್ವ - ಮೊದಲನೆಯದಾಗಿ ನಮ್ಮ ಮಗಳು ಕಲಿತವಳಲ್ಲ, ಎರಡನೇಯದಾಗಿ ವರದಕ್ಷಿಣೆ ಕೋಡೋ ಶಕ್ತಿ ನಮಗಿಲ್ಲ ಅಲ್ಲವೇನಪ್ಪ ?

ಈಶ್ವರ - ತಪ್ಪು ಭಾವಿಸಬೇಡಕ್ಕ ವರದಕ್ಷಿಣೆಯ ಹಣಕ್ಕ ಆಸೆಪಡುವ ಮನುಷ್ಯ ನಾನಾಗಿದ್ದರೆ ಸಂಬಳದ ಹಣ ತಂದು ನಿಮ್ಮ ಕೈಯಲ್ಲಿ ಕೊಡುತ್ತಿದ್ದೆನೆ ? ಅಕ್ಕ ... ನೀಲಾ ಇಲ್ಲಿಯವರೆಗೂ ನನ್ನ ಕೈಮೇಲೆ ಬೆಳೆದ ಹುಡುಗಿ. ತುಂಬಾ ಮಮತೆಯಿಂದ ಎತ್ತಿ ಆಡಿಸುತ್ತ ಬಂದಿರುವೆ, ಅವಳ ಬಗ್ಗೆ ವಾತ್ಸಲ್ಯ ಭಾವನೆ ಮೊದಲಿನಿಂದಲೂ ನನ್ನಲ್ಲಿ ಮೂಡಿ ಬಂದಿದೆ. ಹೀಗಿದ್ದೂ ನೀಲೆಯನ್ನು ಮದುವೆಯಾಗಿ ಅದು ಹೇಗೆ ಮೋಹಿಸಲಿ ಅಕ್ಕ ?

ಹಂಪವ್ವ - ಇಷ್ಟೇ ತಾನೇ ? ಹುಚ್ಚಾ ನೀನೇನೂ ಯೋಚಿಸಬೇಡ. ಮದುವೆಯಾದ ಬಳಿಕ ಮನದಲ್ಲಿ ಮೋಹ ತಾನಾಗಿ ಹುಟ್ಟುತ್ತದೆ

ಮಹದೇವಪ್ಪ - ಹೌದು ಇವಳು ಸಣ್ಣವಳಿದ್ದಾಗ ನಾನು ಎತ್ತಿ ಆಡಿಸೀನಿ

ಈಶ್ವರ - ದಯವಿಟ್ಟು ಈ ಒಂದು ವಿಷಯದಲ್ಲಿ ನನ್ನ ಕ್ಷಮಿಸಿ ಬಿಡು ಅಕ್ಕ. ಈ ಮಾತು ಯಾವ ಕಾಲಕ್ಕೂ ನನ್ನಿಂದ ಸಾಧ್ಯವಿಲ್ಲ (ಹೋಗ ಹತ್ತುವನು)

ಮಹದೇವಪ್ಪ - ತಡೆ... ಈಶ್ವರ.... ಹೀಗೆ ಕೇಳಿದೆವೆಂದು ನೀನು ಮನಸ್ಸಿಗೆ ಬೇಜಾರು ಮಾಡಿಕೊಳ್ಳಬೇಡ. ಹೆಣ್ಣು ಹಡೆದ ತಂದೆತಾಯಿಗಳ ಕರ್ತವ್ಯ ಮಾತ್ರ ನಾವು ಮಾಡಿದ್ದೇವೆ. ನೋಡು.... ನಮ್ಮ ಮಗಳನ್ನು ಮದುವೆಯಾಗುವ ಮನಸ್ಸಿಲ್ಲದಿದ್ದರೆ ಬಿಡು. ಬೇರೆ ಹುಡುಗಿಯನ್ನಾದರೂ ಮದುವೆಯಾಗುವೆಯಷ್ಟೆ?

ಈಶ್ವರ - ಹೀಗೆ ಕೇಳಿದರೆ ನಾನೇನು ಹೇಳಲಿ ಮಾವ ?

ಮಹದೇವಪ್ಪ - ಹೌದು ನಿನ್ನ ಯೋಗಕ್ಷೇಮ ಕುರಿತು ಯೋಚಿಸಬೇಕಾದವರು ನಾವು. ನೀನು ಎಲ್ಲಿಯಾದರೂ ಹುಡುಗಿಯನ್ನು ನೋಡಿದ್ದರ ಹೇಳು. ಇಲ್ಲ ನಾವಾದರೂ ನೋಡುತ್ತೇವೆ. ಒಟ್ಟಿಗೆ ನಮ್ಮ ಭಾರ ಕಡಿಮೆಯಾಗುತ್ತದೆ ಒಪ್ಪಿಗೆ ತಾನೆ ?

ಈಶ್ವರ - ಆಗಲಿ ಮಾವ ನಿಮ್ಮಿಷ್ಟ.... (ನಗುತ್ತ ಹೋಗುವನು)

ಪಂಪವ್ವ - (ಸಿಟ್ಟಿನಿಂದ) ನೀವು ಸ್ವಲ್ಪ ಸುಮ್ಮನಿರಬೇಕಿತ್ತು.... ನಾನೆಲ್ಲ ಅವನ್ನ ಒಪ್ಪಿಸತಿದ್ದೆ

ಮಹದೇವಪ್ಪ - ಹುಚ್ಚಿ... ಕೆಂಡ ಕಂಡು ದೂರ ಸರಿಯೋದು ಬಿಟ್ಟು ಅದರ ಮೈ ತಂಪಿದೆಯೋ ಬಿಸಿ ಇದೆಯೋ ಅಂತ ಮುಟ್ಟಿ ನೋಡೋ ಅವಿವೇಕ ಮಾಡಬಾರದು. ಗಂಡು ಹೆಣ್ಣಿನ ಸಮ್ಮಿಲನಕ್ಕೆ ಒಲುಮೆ ಮುಖ್ಯ. ಹೂವಿನಲ್ಲಿ ಪರಿಮಳ ಸೃಷ್ಟಿಯಾಗಿರುವದು ಮೆಚ್ಚಿ ಮುಡಿಯುವದಕ್ಕೆ, ಮೂಸುವುದಕ್ಕೆ, ಅದು ಬಿಟ್ಟು ಜಜ್ಜಿ ಕುಡಿಯುವಿದಕ್ಕಲ್ಲ. ಒಲ್ಲೆ ಅಂದವನಿಗೆ ಒತ್ತಾಯ ಮಾಡಬಾರದು

ಪಂಪವ್ವ - ಇಲ್ಲಿಯವರೆಗೂ ನನ್ನ ಮನಸ್ಸಿನಲ್ಲಿ ಮಾಡಿಕೊಂಡ ವಿಚಾರ ಮನಸ್ಸಿನಲ್ಲಿಯೇ ಸತ್ತು ಹೋಯಿತು. ಬಯಕೆ ನಾಶವಾಯಿತು

ಮಹದೇವಪ್ಪ - ಹಂಪಿ ಸೃಷ್ಟಿಕರ್ತನು ಈ ಪ್ರಪಂಚ ಹುಟ್ಟಿಸಿದ್ದು ತನ್ನಿಷ್ಟದಂತೆ ನಲಿಯಲಿ ಎಂದು. ಎಲ್ಲರೂ ತನ್ನವರು ಅನ್ನುವ ವಿಶಾಲ ಭಾವನೆಯಿಟ್ಟುಕೊಂಡವರಿಗೆ ಈ ಪ್ರಪಂಚ ಒಂದು ರಸಭರಿತ ನಾಟಕವಿದ್ದಂತೆ. ಅದನ್ನು ಬಿಟ್ಟು ತನ್ನ ರಕ್ತಕ್ಕೆ ಸಂಬಂಧಪಟ್ಟವರಷ್ಟೇ ತನ್ನವರೆಂಬ ಸಂಕುಚಿತ ಭಾವನೆಯಿಟ್ಟುಕೊಂಡವರಿಗೆ ಸಂಕಟ ಸಮಸ್ಯೆಗಳು ಜೀವನದ ಉದ್ದಕ್ಕೂ ಎದ್ದು ನಿಲ್ಲುತ್ತವೆ

ಪಂಪವ್ವ - ನನ್ನ ಮಗಳಿದ್ದರೂ ಬೇರೆ ಮನೆಯ ಹುಡುಗಿ ಬಂದು ನನ್ನ ತವರು ಮನೆ ಸೇರುವಳಲ್ಲ ಎಂದು ನನಗೆ ಸಂಕಟವಾಗುತ್ತದೆ

ಮಹದೇವಪ್ಪ - ಇದೇ ಹೆಣ್ಣಿನಲ್ಲಿರುವ ಸ್ವಾರ್ಥದ ಪೆಡಂಭೂತ. ಜಗತ್ತು ಹುಟ್ಟಿದಾಗಿನಿಂದಲೂ ಹೆಣ್ಣು ಹೃದಯದ ಈ ಸ್ವಾರ್ಥ ಸರ್ಪ ಅದೆಷ್ಟು ಜನರನ್ನು ಕಚ್ಚಿ

ಬಲಿತೆಗೆದುಕೊಂಡಿಲ್ಲ ? ಅಣ್ಣ ತಮ್ಮರ, ತಂದೆ ಮಕ್ಕಳ, ಮಾವ ಅಳಿಯರ ಭಾವದಲ್ಲಿ ಕಲಹ ಹುಟ್ಟಿಸಿ ಜಗದ ಜೀವ ತಿಂದಿಲ್ಲ ? ಆದರೂ ಇದರ ದಾಹ ಮಾತ್ರ ಇಂಗಿಲ್ಲ. ನೋಡು ಹಂಪಿ ನಿನ್ನ ಮಗಳೇ ನಿನ್ನ ತಮ್ಮನ ಕೈ ಹಿಡಿಯಬೇಕೆಂದು ಬಯಸಿದ ನಿನ್ನ ಬಯಕೆ ಕೈಗೂಡದಿದ್ದರೆ ಬಿಡಲಿ. ನಿನ್ನ ತಮ್ಮನ ಕೈ ಹಿಡಿದು ಬರುವ ಆ ಬೇರೆ ಮನೆಯ ಹುಡುಗಿಯನ್ನೇ ನಿನ್ನ ಮಗಳೆಂದು ನೀನೇಕೆ ಭಾವಿಸಬಾರದು

ಹಂಪವ್ವ - ಅಂದರೆ ? ನನ್ನ ಮಗಳ ಗತಿ ಏನು ?

ಮಹದೇವಪ್ಪ - ಈಶ್ವರನಿಗಿಂತಲೂ ಉತ್ತಮನಾದ ವರನು ಅವಳ ಹಿಡಿಯಬಾರದೇಕೆ ? ಹೊರಿಸು ಈ ಭಾರ ಹುಟ್ಟಿಸಿದ ಹರನ ಮೇಲೆ. ಭೂಭಾರ ಆದಿಶೇಷ ಹೊತ್ತಂತೆ ಸಕಲ ಮಾನವಕೋಟಿಯ ಭಾರವನ್ನು ಪರಮಾತ್ಮ ಹೊತ್ತಿದ್ದಾನೆ, ಬಾ ಹುಡುಗರು ಹಸಿದಿರಬಹುದು.... ಊಟಕ್ಕೆ ಬಡಿಸು

(ಒಳಗೆ ಹೋಗುವರು)

# ಸನ್ನಿವೇಶ ೨

## ಜಂಗಲ್‌ರಸ್ತಾ

(ರುದ್ರ, ನೀಲಾ ಹೊಲದಿಂದ ಮನೆಗೆ ಬರುವ ಸನ್ನಿವೇಶ)

ರುದ್ರ - ಅಲ್ಲಿ ನೋಡಕ್ಕ ವೀರೇಶ ಮಾವ ಸೈಕಲ್ ಹತ್ತಿಕೊಂಡು ಬರತಾನ

ಸುವರ್ಣ - ಓ... ಹೌದಕ್ಕ

ನೀಲಾ - ಸೀನೇಮಾ ನೋಡಕ ಹೊರಟಾನಂತ ಕಾಣತ್ತ

ನೀಲಾ - ಪಂಚೇರಾತಂತ ಕಾಣತ್ತ ಇವನ ಸೈಕಲ್ಲ. ಹೌದು ಮುಂದಿನ ಗಾಲಿ ಹಿಚಕಾಕ ಹತ್ತಿದನಲ್ಲ .... ಬರಲಿ ತಡಿ (ಸೈಕಲಿನೊಂದಿಗೆ ವೀರಣ್ಣನು ಬರುವನು)

ರುದ್ರ - ಯಾಕ ಮಾವ ಪಂಚೇರಾಯಿತೇನು ನಿನ್ನ ಸೈಕಲ್ಲು

ವೀರಣ್ಣ - ಆಗದೇನ ಮಾಡತಪ್ಪ ರುದ್ರ. ಈ ನಿಮ್ಮಕ್ಕ ಕಣ್ಣ ಬಿಟ್ಟಿಂದ ಗಾಲಿ ಪಂಚೇರಾದರೂ ಆಗತ್ತ, ಧಡೆ ಆದರೂ ಆಗತ್ತ

ನೀಲಾ - ಹೂ ಕಣ್ಣ ಬಿಡತೀನಿ, ಬಿಡದೇನ ಮಾಡತೀನಿ, ಅಂದಾಕರ ಕಮ್ಮನ್ನ ಸೈಕಲ್ಲ ನಿಂದು. ಕಂಡು ಕಂಡು ಹಳೇ ಸೈಕಲ್ಲ ಕೊಂಡು ಹೇಳಾಕ ಬಂದಾನಿಲ್ಲೆ

ವೀರಣ್ಣ - ಹಳೇದಾರ ಇರಲಿ, ಹೊಸದಾರ ಇರಲಿ, ಹತ್ತಿಕೊಂಡು ಹೊರಟ್ಟಿದ್ದೇನೋ ಇಲ್ಲೋ ?

ನೀಲಾ - ಇನ್ನಮ್ಯಾಲೆ ಹೊತಗೊಂಡು ಹೋಗು

ವೀರಣ್ಣ - ನಿನ್ನಂಥಾರೆ ಕಣ್ಣ ಬಿಟ್ಟಿಂದ ಹೊತಗೊಂಡಾದ್ರೂ ಹೋಗಬೇಕು, ಇಲ್ಲ ಒತ್ತಿಗೊಂಡಾದ್ರೂ ಹೋಗಬೇಕು, ಮದಲ ವಿಧಿ ನೀನು. ವಿಧಿ ಕಟಗೊಂಡು ಮದುವಿಗೆ ಹೋದ್ರ ಇದ್ದಷ್ಟು ಹೋಳಿಗಿ ತಿಂದು ಎದುರಿಗೆ ಬಂತಂತ. ಹಾಗಾತು ನನ್ನ ಪಾಡು ಕಂಡ ಅಲ್ಲ ಅವು, ಡೇಂಜರ ಲೈಟು

ರುದ್ರ - ಅಲ್ಲಪ ಮಾವ ನಮ್ಮಕ್ಕನ ಕಂಡು ಕಟ್ಟಿ ಅಂತಿಯಾ ?

ವೀರಣ್ಣ - ನಾನ್ಯಾಕ ಅನಲಪ್ಪ ಜನರಂತಾರ

ನೀಲಾ - ಏನಂತ ?

ವೀರಣ್ಣ - ಒಂದೊಂದು ಹೆಂಣಿನ ಕಂಣಿನ ಗುಣ, ಕಾಲಿನಗುಣ ಕೆಟ್ಟ ಇರತಾವು ಅಂತ

ನೀಲಾ - ಯಾರ‍್ಯಾಕ ಅಂತಾರ ತಾ ಅಂತಾನ

ವೀರಣ್ಣ - ಯಾರ‍್ಯಾಕ ಹೆಂಣಿನ ಕಂಣಿನ ಬಗ್ಗೆ ಸರ್ವಜ್ಞ ಕವಿ ಮುತ್ತಿನಂಥ ಮಾತ ಹೇಳಿದಾನ

ನೀಲಾ - ಏನಂತ ?

ವೀರಣ್ಣ - ಕರಕೀಯ ಹೊಲಮಾಡಿ ಕರ‍್ರನ್ನ ಎರಡೆತ್ತು ಕಟ್ಟಿ ಕಾಡಿಗ್ಗಣ್ಣಾಕಿ ಸೊಸೆ ಬಂದ್ರ ಈ ಮನೆಗೆ ಕೇಡು ತಪ್ಪದು ಅಂತ ಇದೂ ಅಲ್ಲದ ಹಳ್ಳದ ಹೊಲಮಾಡಿ ಬೆಳ್ಳನ್ನ ಎರಡೆತ್ತು ಕಟ್ಟಿ ಮೆಳ್ಳಂಗಂಣಾಕಿ ಸೊಸಿ ಬಂದ್ರ ಆ ಮನೆಗೆ ನೆಳ್ಳ ತಪ್ಪದು ಸರ್ವಜ್ಞ

ಸುವರ್ಣ - ಅಲ್ಲವ್ವ ಅಕ್ಕ ನಿನ್ನ ಕಂಣು ಕಪ್ಪೂ ಇಲ್ಲ, ಮೆಳ್ಳೂ ಇಲ್ಲ ಅಂದಮ್ಯಾಲ ನೀ ಯಾಕ ಹಚ್ಚಕೋ ಬೇಕು

ವೀರಣ್ಣ - ಏ ಪುರಾಣ ಇನ್ನೂ ಮುಗಿದಿಲ್ಲ ಕೇಳಿಲ್ಲೆ. ಸೈಕಲ್ಲ ಹತಗೊಂಡು ಸಿನೇಮಾಕ ಹೊರಟಾಗ ಮಂಡು ಮೂಗಿನ ಹೆಂಣು ಎದುರಿಗೆ ಬಂದರೆ ಮುಂದಿನ ಗಾಲಿ...

ರುದ್ರ - ಪಂಚೇರೋss

ನೀಲಾ - ಏ... ಯಾಕೋ ? ಅಲ್ಲ ಮಾವs ನನ್ನ ಮೂಗು ಮಂಡ ಐತೇನು ?

ವೀರಣ್ಣ - ಐತಿಲ್ಲಪ್ಪ ರುದ್ರ ?

ರುದ್ರ - ಸ್ವಲ್ಪ ಇದ್ದಂಗ ಕಾಣತದ ಬಿಡವ

ನೀಲಾ - ಯಾಕೋ ನೀನು ಅವನ ಕಡಿ ಆಗಿ ಮಾತಾಡತಿದಿ

ವೀರಣ್ಣ - ಹೌದು ನನ್ನ ಕಡಿ ಆದರ ಈಗ ನಾನು ಸಿನೇಮಾಕ ಕರಕೊಂಡು ಹೋಗ್ತಿನಿ ಯಾಕಪ ರುದ್ರ ?

ರುದ್ರ - ಹೌದು

ನೀಲಾ - ಯಾಕೋ ಹೋದವರ ಕೂಡ ಹೋದೇನು, ಬಂದವರ ಕೂಡ ಬಂದೇನು ಅಂದುಕೊಂಡು ಹುಡುಗಾಟ ಹಚ್ಚಿದೇನು ? ಅವ್ವನ ಮುಂದ ಹೇಳ್ತೀನಿ ನೋಡು

ರುದ್ರ - ಹೇಳಹೋಗು

ನೀಲಾ - ಬ್ಯಾಡ ಮಾವ ಕರಕೊಂಡ ಹೋಗಬ್ಯಾಡ ನಮ್ಮವ್ವ ಸಿಟ್ಟಿಗೇಳತಾಳ

ವೀರಣ್ಣ - ಯಾಕ ?

ರುದ್ರ - ಸಿನೇಮಾಕ ತನ್ನ ಬಿಟ್ಟು ನನ್ನ ಕರದೆಲ್ಲ ಅಕ್ಕನ್ನ ಸ್ವಲ್ಪ ಕರೆಯೋಪ

ವೀರಣ್ಣ - ಏ ಒಲ್ಲೆ ಬಿಡೋ ....

ರುದ್ರ - ಏ ಕರೀ ಅಂದ್ರ

ವೀರಣ್ಣ - ಹ್ಯಾಂಗ ಕರೀಲೋ ನಾಚಗಿ ಬರತದ

ರುದ್ರ - ನಾಚಬಾರದು ಕರಿ... ಕರಿ... ಕರಿ....

ವೀರಣ್ಣ - ತಡಿಯಲೇ ಕರೀತೀನಿ...... ಬರತೀಯಾ ನೀಲಾ ಸಿನೇಮಾಕ

ನೀಲಾ - ಮನಸ ಇಲ್ಲದ ಮನಸೀಲೆ ಕರದ್ರ ಬರಾಕ ನಾಏನ ಕಳಿಸಿಗಿತ್ತಿ ಅಲ್ಲ ಇವನಂಗ

ವೀರಣ್ಣ - ನಿನ್ನ ಮಾತೇ ನಿಜಾ ಆತಲಪ, ರುದ್ರ. ಕರೀಲಿಲ್ಲ ಅಂತ ಸಿಟ್ಟ ಬಂದದ ನಿಮ್ಮಕ್ಕಗ

ರುದ್ರ - ನಾನು ಯಾವಾಗಲೂ ಸುಳ್ಳಾಡುವದಿಲ್ಲ ನೋಡು, ಈಗಲೆ ನಿನಗೊಂದು ಮಾತು ಹೇಳ್ತೀನಿ. ಈ ನಮ್ಮಕ್ಕನ್ನ ಯಾರೂ ಮದುವಿ ಮಾಡಿ ಕೊಳ್ಳೋದಿಲ್ಲ. ಮಾಡಿಕೊಂಡ್ರ ನೀನ ಮಾಡಿಕೊಳ್ಳಬೇಕು

ವೀರಣ್ಣ - ಯಾಕೆ ?

ರುದ್ರ - ನಿನಗ ಬುದ್ಧಿ ಕಡಮಿ ಅದಕ (ಓಡುವನು)

ವೀರಣ್ಣ - ಲೇ.... ಲೇ.... ಹಿಡಿ ಹಿಡಿ ಸುವರ್ಣ ಅವನ್ನ ....

ಸುವರ್ಣ - ರುದ್ರ ರುದ್ರ ... (ಓಡುವಳು)

ವೀರಣ್ಣ - ಬರತೀಯಾ ಸಿನೇಮಾಕ ಸಂಗಮ ಇದೆ. ತೇರೆ ಮನಕಿ ಗಂಗಾ ಮೇರೆ ಮನಕಿ ಜಮನಾ ಬೋಲ ರಾಧಾ ಬೋಲ ಸಂಗಮ ಹೋಗಾಕಿನಹಿ

ನೀಲಾ ಊ.... ಹೂ .... ಒಲ್ಲೆ

ವೀರಣ್ಣ - ಬಿಡು (ಹೋಗಹತ್ತುವನು)

ನೀಲಾ - ಮಾವಾ

ವೀರಣ್ಣ - ಏನ.....

ನೀಲಾ - (ಸೈಕಲ್ಲ ಹತ್ತಿಸು ಅಂತ ಸನ್ನ ಮಾಡುವಳು)

ವೀರಣ್ಣ - ಓಹೋ ಸೈಕಲ್ಲ ಹತ್ತಬೇಕೂ ಅಂತೀಯಾ ? ಬಾ ಹಾಗಿದ್ರ (ಹತ್ತಿಸುವನು)

- ಪದ -

ನೀಲಾ - ಮಾವಯ್ಯ ನನ್ನ ಚಲುವಾ । ತನ್ನಷ್ಟಕ್ಕ ನಾನೇ ನೋಡಿ
ನಗುವ । ಅಂತಿಂತ ಹೆಂಣಲ್ಲ ನಾನೇನು ಮಳ್ಳಲ್ಲ । ನಿನ್ನ
ಎಲಿದುಬರುವ । ಚಲುವ ॥ ಮಾವಯ್ಯ ॥

॥ ಡ್ಯುಯೇಟ್ ಪದ ॥

ವೀರಣ್ಣ - ನಗೆಯೊಂದು ಬಗೆಯಾಟ ಕಣ್ಣು ಹುಬ್ಬಿನ ಮಾಟ । ಚವತಿ ಚಂದ್ರಮನ್ನೋಲುವ ॥

ನೀಲಾ - ಚವತಿ ಚಂದ್ರಮನಲ್ಲ ಒಲ್ಲೆ ಆಟವನೆಲ್ಲ । ಯಾರಿಗ್ಗೋಳುವಿ ಬಲವ । ಚಲುವ । ಬೆಳ್ಳಿ ಬಂಗಾರವೆಲ್ಲ ।. ರೂಪ ಸಿಂಗಾರವಿಲ್ಲ । ಯಾರೀಗ್ಗೋಳುವಿ ಬಲವಾ । ಚಲುವಾ ।

ವೀರಣ್ಣ - ಒಲಿದಂಥ ಹೆಂಣನ್ನ ಸೋಲಿಸಿ ನನ್ನಲ್ಲಿ । ಹಿಡಿವಂಥ ಎದೆ ಹರವಾ ।

ನೀಲಾ - ಬಿಗುಮಾನ ಬಿಡು ಮಾವಾ ॥

(ಹಾಡು ಮುಕ್ತಾಯಕ್ಕೆ ಚವಡಕ್ಕ ಬಂದು ನೋಡುವಳು. ನೀಲಾ ಅಂಜಿ ಓಡಿ ಹೋಗುವಳು)

ಚವಡಕ್ಕ - ಅಯ್ಯ ಇದೆನ್ರೋ ಎಪ್ಪ ? ದಾರ್‍ಯಾಗ ಒಳ್ಳೇ ಚಂದ ನಡೆಸಿರಲ್ಲ. ಸಿಮ್ಮದ ಕಂಡು ನಂದೂ ನನಗ ನೆನಪಾತ ಹಿಂದಿಂದು

ವೀರಣ್ಣ - (ಗಾಬರಿಯಿಂದ) ಏ ... ಏನಿಲ್ಲ... ಚವಡಕ್ಕ ಈ ನನ್ನ ಸೈಕಲ್ಲು ಪಂಚೇರಾಗಿತ್ತು ಅದಕ್ಕ....

ಚಡವಕ್ಕ - ಅದಕ ದಾರ್‍ಯಾಗ ಸಿಂದ್ರಿಸಿಕೊಂಡು ತಿದ್ದಾಕ ಹತ್ತಿದ್ದೇನಪ

ವೀರಣ್ಣ - ಏ ಇಲ್ಲವ್ವ ತಿದ್ದೋತನಕ ಸ್ವಲ್ಪ ಹಿಡಕೊಂಡು ನಿಲ್ಲು ಅಂತ ಹೇಳಿದ್ದೆ. ಕೆಡಕ ಅಂತಿಯೇನು ಚವಡಕ್ಕ

ಚವಡಕ್ಕ - ಕೆಡಕ ಅಂತ ನಾಯಾಕ ಅನ್ಲೋ ನಮ್ಮಪ್ಪನೇ ? ವಯಸ್ಸಿನಾಗ ನಡಿಯೋದಪ ಇಷ್ಟು ವಯಸ್ಸಿನಾಗ ನಾವು ಸಾಕಷ್ಟು ಮಾಡೀವೇಳು ತಮ್ಮ ಇಂಥಾದ್ದು

ವೀರಣ್ಣ - ಅಂದ್ರ.... ಸಂಪಿಗಿ ಹೂವಪ್ಪನ ಕೂಡ ಸೈಕಲ್ಲು ಹತ್ತಿದ್ದಿ ಅನ್ನು ?

ಚವಡಕ್ಕ - ಸೈಕಲ್ಲು ಎಲ್ಲಿ ಬರಬೇಕಪ್ಪ. ಕುದುರಿ ಕುದುರಿ ಮ್ಯಾಲೆ ಹತ್ತಿಸಿಗೊಂಡು ಬರತಿದ್ದ ಅಂವಾ. ಆದರ ನೋಡಪ ಆ ಸಂಪಿಗಿ ಹೂವ್ಯಾ ನನಗ ಕೆಡಕ ಮಾಡಿದಂಗ ಮಾತ್ರ ನೀನು ಹುಡುಗೀಗೆ ಕೆಡಕ ಮಾಡಬ್ಯಾಡ ?

ವೀರಣ್ಣ - ಅವನೇನು ಕೆಡಕ ಮಾಡ್ಯಾನವ್ವ ನಿನಗ ?

ಚಡವಕ್ಕ - ಅದೇನು ಚಂದೊಳ್ಳಿ ಕಥಿ ಅಂತ ಕೇಳತಿದಿ ಬಿಡು, ನೋಡ ತಮ್ಮ ನಾ ಒಂದ ಹೇಳ್ತೀನಿ, ಕೈ ಹಿಡಿತೀನಿ ಅಂತ ಬಂದಾಗ, ಕುತ್ತಗಿ ಮಾತ್ರ ಕೊಯ್ಯಬ್ಯಾಡ. ಆ ಕೆಲಸಕ್ಕ ಶಿವ ಮೆಚ್ಚೋದಿಲ್ಲ

ಹೂವಪ್ಪ - (ಬರುತ್ತ) ಹೌದು... ಹೌದು... ಶಿವ ಮೆಚ್ಚೋ ಕೆಲಸ ಮಾಡಕೋತ ಹೋದ್ರ ಜನ ಮೆಚ್ಚಬೇಕಲ್ಲ ? ಈಗ ನಾವು ಬದುಕೋದು ಭೂಲೋಕದಾಗ ಕೈಲಾಸದಾಗಲ್ಲಪ

ಚವಡಕ್ಕ - (ವ್ಯಂಗ) ಮತ್ತ ಹೇಳಿಲ್ಲೇನಪ ಬಸಣ್ಣ

ಹೂವಪ್ಪ - ಯಾವ ಬಸಣ್ಣ ?

ವೀರಣ್ಣ - ಕುಂಟೋಜಿ ಬಸಣ್ಣ

ಚವಡಕ್ಕ - ಅಲ್ಲ ಕಲ್ಯಾಣ ಬಸಣ್ಣ

ಹೂವಪ್ಪ - ಏನಂತ ?

ಚವಡಕ್ಕ - ಇಲ್ಲಿ ಸಲ್ಲಿದವರು ಅಲ್ಲೀ ಸಲ್ಲತಾರ ಅಂತ

ಹೂವಪ್ಪ - ನಿನ್ನ ಸಮ್ಮಂದ ಮಾಡಿಂದ ಇಲ್ಲೀ ಸಲ್ಲಬೇಕಾದ್ರ ಸಾಕಾತು, ಇನ್ನ ಅಲ್ಲೇನು ಸಲ್ಲತೀವಿ ? ಎಲ್ಲೀದೂ ಯಾವದೂ... ಏನೂ ....

ಚವಡಕ್ಕ - ಅಂದ್ರೆನೋ ? ನನ್ನರ ಗಂಡನ್ನ ಬಿಡಿಸಿ ಒಗಿತನ ಹರಿಸಿ ಕುಂದರಿಸಿದಿ, ನೀನರ ಈಗ ಮದುವಿ ಮಾಡಿಕೊಂಡು ಮಂದೀ ಕೂಡಿಕೋಬೇಕೂ ಅಂತೀ. ಇದೇನು ಧಂದೇನು ?

ಹೂವಪ್ಪ - ಹಂಗ ಕುಂದರಿಸಿನೇನು ? ಕಿರಾಣಿ ಅಂಗಡಿ ಕಟ್ಟಿಮ್ಯಾಲೆ ಕುಂದಿರಿಸೀಸಿ ಮಾಲೀಕಳನ್ನ ಮಾಡೀನಿ

ಚವಡಕ್ಕ - ಅವ್ವ ನನ ಮಾಲಿಕೀನ ...... ತಿರಗಾ ಮುರಗಾ ಎಣಿಸಿದ್ರೂ ಗಲ್ಲೇದಾಗ ಇಪ್ಪತ್ತ ಪೈಸಾ ಇರೋದಿಲ್ಲ. ಅದಕೂ ಒಂದು ಅಂಗಡಿ ಅಂತಾರೇನು ?

ಹೂವಪ್ಪ - ಅನ್ನಾಕಿಲ್ಲೇನು ? ಅಂಗಡಿ ಅಲ್ಲೇನದು ?

ಚವಡಕ್ಕ - ಅಂಗಡಿ ಅಲ್ಲದು ಗೊಂಗಡಿ

ವೀರಣ್ಣ - ಅಲ್ರೀ ....

ಹೂವಪ್ಪ - ಚವಡಕ್ಕ.....

ಚವಡಕ್ಕ - ನೋಡಿದಿಯಾ ವೀರಂಣ ಹೆಂಗಾದಸಿವ

ಹೂವಪ್ಪ - ಅಯ್ಯೋ ಅದನ್ನೇನ ಕೇಳ್ತಿದಿ ಹುಡುಗ. ಅದು ಇನ್ನೂ ದೀಪಾವಳಿ ಅಂಥ ದೊಡ್ಡ ಹಬ್ಬ ಬಂದಿತ್ತು, ಊರ ತುಂಬ ಹುಡುಕಿದರೂ ಅಕ್ಕಿ ಗೋಧಿ ಸಿಗತಿರಲಿಲ್ಲ, ಬೇಕಾದಂಗ ಸಹಕಾರಿ ಸಂಘದಾಗ ನೌಕರಿ ಮಾಡುತ್ತ ಅಷ್ಟ ಅಕ್ಕಿ, ಗೋಧಿ, ಸಕ್ಕರೆ ತಂದು ಪಂಚಾಕ ಏನು ಧಾಡಿ ಆಗಿತ್ತ ಇವಕ

ಚವಡಕ್ಕ - ಯಾಕ ಅವಸ್ಗ್ಯಾಕ ಕಲೀಬಿದ್ದಿ. ಅಕ್ಕಿ, ಗೋಧಿ, ಸಕ್ರಿ ತರಲಾರದ ನೀ ಮರತ ಕುಂತ್ರ ಅವನೇನ ಮಾಡಬೇಕು. ಅದ ತಂದು ಪಂಚ್ಯಾನ

ಹೂವಪ್ಪ - (ಗಾಬರಿಯಿಂದ) ಪಂಚ್ಯಾನ ? ಹೌದೇನೋ ತಮ್ಮ ?

ವೀರಣ್ಣ - ಹೌದ್ರಿ ಡರೆಕ್ಟರ ಯಾಕ ಒಯ್ದಲ್ಲಿವಲ್ಲ ನೀವು, ನಾಳಿ ಬರ್ರಲ್ಲ ಕೊಡ್ತೀನಿ

ಹೂವಪ್ಪ - ನಾಳೆ ಕೊಡತೀದಿ ಹೌದಲ್ಲೋ ? ಹಾಗಿದ್ರೆ ನಾಳೆ ನಮ್ಮ ಆಳು ಮನುಷ್ಯನ ಕಳಸ್ತೇನಿ. ಎರಡ ಕ್ವಿಂಟಲ್ ಗೋಧಿ, ಎರಡ ಕ್ವಿಂಟಲ್ ಅಕ್ಕಿ, ಒಂದ ಐವತ್ತು ಕಿಲೋ ಸಕ್ರಿ ಕೊಟ್ಟ ಕಳಸಪ

ಚವಡಕ್ಕ - ಅಂದ್ರೇನ ಅಷ್ಟೆಲ್ಲ ತಗೊಂಡು ಬಂದು ಬ್ಲಾಕಿನಾಗ ಮಾರಿಕೋಬೇಕಂತಿಯಾ?

ಹೂವಪ್ಪ - ನಾನು ಮಾರಿಕೊಳ್ಳೀ ತೂರಿಕೊಳ್ಳಿ ಅದೆಲ್ಲ ಅವನ್ಯಾಕಬೇಕು, ನಿನಗ್ಯಾಕಬೇಕು, ಕೇಳಿದಷ್ಟು ಕೊಟ್ಟರಾಯಿತು

ವೀರಣ್ಣ - ಇಷ್ಟೆಲ್ಲ ಕೊಟ್ಟ ಕಳಿಸು ಅಂತ ಆರ್ಡರ ಮಾಡಲಿಕ್ಕೆ ನೀವ್ಯಾರ್ರಿ

ಹೂವಪ್ಪ - ನಾನ್ಯಾರು ? ಏನಲೇ ಹುಡುಗ ಇದು, ನೀನು ದುಡಿಯೋ ಆ ಸಹಕಾರೀ ಸಂಘದ ಮ್ಯಾನೇಜಿಂಗ್ ಡಾಯರೆಕ್ಟರ

ಚಡವಕ್ಕ - ಇರಬಹುದು, ಇದ್ದರ ಅದಕ ಅವನ್ನೇನು ಮಾಡಂದಿ ?

ಹೂವಪ್ಪ - ಅವನೇನೂ ಮಾಡೂದು ಬ್ಯಾಡ ಹೇಳಿದಷ್ಟು ಕೊಟ್ಟರೆ ಸಾಕು

ವೀರಣ್ಣ - ಹೂವಪ್ಪನವರೇ ರೀ ಡೈರೆಕ್ಟರೇ ಸಂಘ ಸಂಸ್ಥೆಗಳ ಮುಖಾಂತರ ಕಾಳು ಹಂಚೋದು ಕೂಳಿಲ್ಲದ ಸಾಯೋ ಬಡವರಿಗೆ. ಮನೆ ತುಂಬಾ ಕಾಳ ಚೀಲಾ ಒಟ್ಟಿಗೊಂಡು ನಾಳಿಗೆ ಮಾರಿದರಾಯಿತೂ ಅನ್ನೋ ನಿಮ್ಮಂಥ ಶ್ರೀಮಂಥ ವ್ಯಾಪಾರಸ್ಥರಿಗಲ್ಲರೀ ಏ ಹೋಗರಿ...

ಚವಡಕ್ಕ - ಆತ... ಈಗರ ಎದರ ಮಾತಾಡಿ ಎದಿಗೆ ಕೇರು ಹಾಕಿಸಿಕೊಂಡು ಎದರ ಗಾಳಿಗೆ ನಿಂದ್ರಾವ ನೀನು

ಹೂವಪ್ಪ - ಹೋಗಲಿ ನಮ್ಮ ಪಾಲಿಗೆ ಒಂದಿಷ್ಟರ ಕೊಡತೀ ಇಲ್ಲಪ್ಪ

ವೀರಣ್ಣ - ಅದನ್ನೂ ಕೊಡೋದಿಲ್ಲ ಯಾಕ್ರೆಪ ?

ಹೂವಪ್ಪ - ಏ ಯಾಕೊ... ?

ವೀರಣ್ಣ - ಅವನ್ನೇ ಬೇರೆ ಯಾರಿಗಾದರೂ ಬಡವರಿಗೆ ಕೊಟ್ರೆ ನಿಮ್ಮ ಹೆಸರ ಹೇಳಿ ಊಟಾ ಮಾಡ್ತಾರ. ಇರದಿದ್ರ ಒಪ್ಪತ್ತು ಉಂಡು ಒಪ್ಪ ನೀರ ಕುಡದ ಮಲಗತಾರೀ, ಬಡವರು ಬದುಕಲೀ ಅನ್ನೋ ಮನಸ ತಗೊಳ್ರಿ ಒಮ್ಮೇರ

ಹೂವಪ್ಪ - ಲೇ ತಮ್ಮ ಸುಮ್ಮ ನಾ ಹೇಳಿದಷ್ಟು ಕೇಳೋ

ವೀರಣ್ಣ - ಬರೀ ನೀವು ಹೇಳಿದಂಗ ಕೇಳಿದರ ನಡೀಯೋದಿಲ್ಲರಿ. ಮ್ಯಾಲೆ ಮತ್ತೊಬ್ಬರದಾರ ಕೇಳೋವರು

ಹೂವಪ್ಪ - ಅವರ್ಯಾರೋ ಸಕ್ರೆಟರಿ ಮ್ಯಾಲೆ ಸಂಘದ ಮ್ಯಾನೇಜಿಂಗ್ ಕಮಿಟಿ ಮೆಂಬರದ ಕಡೀ ಅಧಿಕಾರ

ವೀರಣ್ಣ - ಸರಕಾರ ಒಂದೈತಲ್ಲರಿ

ಹೂವಪ್ಪ - (ಅವಸರದಿಂದ) ಹೌದಲ್ಲ

ಚವಡಕ್ಕ - ಮುಗಿತಿಲ್ಲ ಇನ್ನರ ನಡಿ

ಹೂವಪ್ಪ - ಅವ ಕೊಡತಿದ್ದ. ಕೆಟ್ಟ ಕಾಲಗುಣದಾಕಿ. ನೀ ಬಂದ ನಿಂತೆಲ್ಲ ವಿಧಿಯಾಗಿ, ಯಾರ ಬಾ ಅಂದಿದ್ರಲೆ ನಿನಗಿಲ್ಲಿ

ಚವಡಕ್ಕ - ನಾ ಬಂದ್ರೇನು ಬಿಟ್ರೇನು ? ನನ್ನ ಕಾಲ್ಗುಣ ನಿನಗ್ಯಾಕ ಬಡಕೋಬೇಕು

ಹೂವಪ್ಪ - ಬಡಕೋಂತಲ್ಲ ಈಗ ಹುಟ್ಟೋದ ಸಹಿತ ಹುಟ್ಟದಂಗ ಆತು

ಚವಡಕ್ಕ - ನಿನ್ನ ಮಾರೀನ ಅಂಥಾದ್ದು, ದಾರೀ ಕಟ್ಟ ಮಾಡಿ ಕೊಳ್ಳೋದೇನು

ಹೂವಪ್ಪ - ನನ್ನ ಮಾರೀ ಈ ಮಾರಿಗೆ ಮಳ್ಳ ಆಗೇ ಅಲ್ಲಲೇ ನೀ ಎದಿಮಟ ಕಳ್ಳಿ ಹಾರಿ ಓಡಿಬಂದು ನನ್ನ ಮನಿ ಹೊಕ್ಕದ್ದು

ಚವಡಕ್ಕ - ನಾನಾಗಿ ಓಡಿ ಬಂದೀನಾ ?

ಹೂವಪ್ಪ - ಇಲ್ಲ ಬಾಜಾ ಬಜಂತ್ರಿ ಊದಿಸಿಕೊಂಡು ನಾನು ಓಡಿಸಿಕೊಂಡ ಬಂದಿನಿ. ಅಂದಾಕರ ರತಿ ಆಗಿದ್ದಿ

ಚವಡಕ್ಕ - ಗೊತ್ತ ಐತೇಳ ಕಾಮನಂಥವನ

ಹೂವಪ್ಪ - ಹೊಡಿತೀನಿ ಈಗ ? ಮಾರಿ ಕೆತ್ತುವಂಗ

ವೀರಣ್ಣ - ರೀ, ರೀ, ಹೂವಪ್ಪನವರೇ ಅಲ್ಲಿ ನೋಡ್ರಿ.... (ತೋರಿಸುತ್ತ)

ಹೂವಪ್ಪ - ಎಲ್ಲೆಲ್ಲೂ ನೋಡೋದು ಬ್ಯಾಡಲೆ ನಮಗ, ಇಲ್ಲಿ ನೋಡೇ ಸಾಕ ಸಾಕಾಗಿ ಹೋಗೇತಿ

ವೀರಣ್ಣ - ಯಾರೋ ಹೊಸಬರು ಬರತಾರ ನೋಡ್ರಿ,

ಹೂವಪ್ಪ - ಹೊಸಬರು ಬ್ಯಾಡ, ಹಳಬರು ಬ್ಯಾಡ ಯಾರ್‍ಯಾರೂ ಬ್ಯಾಡಪ

ವೀರಣ್ಣ - ಸ್ಫುರದ್ರೂಪಿಯಾಗಿರೋ ವಯಸ್ಸಿನ ಹುಡುಗಿ ಬರುತ್ತ ನೋಡ್ರಿ

ಹೂವಪ್ಪ - (ಅವಸರದಿಂದ) ಹುಡುಗಿ.... ಎಲ್ಲೋ

ಚವಡಕ್ಕ - ಹುಡುಗಿ ಅಂದ್ರ ಹ್ಯಾಂಗ ನೋಡತಾನಲ್ಲವ್ವ. ಇವರ ಬಾಯ್ಯಾಗ ಬಂಡಿಗಲ್ಲ ಹೇರಲಿ

ಹೂವಪ್ಪ - ಏ ಸುಮ್ಮನ ಇರ ಎಲ್ಲೊ ? (ನೋಡುತ್ತ) ಏ ಹೌದಲ್ಲೋ ಆ ಹುಡುಗಿ ಮಾಡಿರುವ ಡ್ರೆಸ್ ನೋಡೋ, ಇಲ್ಲಿ ಇದು ಮಾಡೇತಿ ನೋಡು ಹ್ಯಾಂಗೈತಿ

ಚವಡಕ್ಕ - ತಂದ ಕೊಡು ನಾನೂ ಮಾಡ್ತೀನಿ ಚೆಲುವ

ಹೂವಪ್ಪ - ಏ ಸಮೀಪಕ್ಕ ಬಂದ್ರು, ಸರಸಲೆ ಆ ನಿನ್ನ ಸೈಕಲ್ಲ ಈ ಕಡೆ

ಚವಡಕ್ಕ - ಏ ಬಿಡ ನಿನ, ಹೆಣ್ಣು ಕಂಡ್ರ ಸಾಕು ನಿನ್ನ ಕಣ್ಣು ಕೆಡತಾವ. ಪರದ ತಿನ್ನೋ

ಹದ್ದಿನಂಗ ನೋಡಬ್ಯಾಡ ಮತ್ತ ನೆದರ ಆದೀತು ಆ ಹುಡಿಗ್ಗೆ

(ಬಸವರಾಜಪ್ಪ, ಶೈಲಜ ಬರುವರು)

ಬಸವರಾಜಪ್ಪ- ಸ್ವಾಮಿ ತಾವು ಇದೇ ಊರಿನವರೇನು ?

ಹೂವಪ್ಪ - ಹೌದು ಏಕೆ ?

ಬಸವರಾಜ - ಊರು ಇಲ್ಲಿಗೆ ಇನ್ನೂ ಎಷ್ಟು ದೂರ

ಹೂವಪ್ಪ - ದೂರವೆಲ್ಲಿ ಬಂತು, ಆ ಗಿಡದ ಗುಂಪೇ ಊರು. ಬಹಳಾಂದ್ರೆ ಒಂದು ಕೂಗಳತೆ

ಶೈಲಜ - ಕೂಗಳತೆ ಅಂದ್ರೇನಪ್ಪ ಅದು ಹತ್ತು ಮೈಲೋ ಹದಿನೈದು ಮೈಲೋ. ಈ ಹಳ್ಳಿ ಜನರಿಗೆ ಹಾದಿಯ ಅಂದಾಜು ಕೂಡ ಹತ್ತುವದಿಲ್ಲವೇನೋ ?

ಹೂವಪ್ಪ - ಕಣ್ಣಿಗೆ ದೂರ ಕಂಡ್ರೂ ಕಾಲಿಗೆ ದೂರವೇನ್ರಿ ? ಎಲಿಗೆ ಸುಣ್ಣ ಹಚ್ಚೋದರೊಳಗೆ ಊರ ಮುಟ್ಟತಾರೆ. ಅದಿರಲಿ ತಾವು ?

ಬಸವರಾಜ - ನಾವು ಬಾಗಲಕೋಟೆಯವರು. ಈ ಊರಲ್ಲಿ ಕಿರಾಣಿ ಅಂಗಡಿ ಇಟ್ಟಿದಾರಂತ ಸಂಪಿಗೆ ಹೂವಪ್ಪ ಅಂತ

ಚವಡಕ್ಕ - ಅಯ್ಯ ತಮ್ಮ... ಇವರೂ ಇವನ್ನ ಕೇಳ್ತಾ ಬಂದರಲ್ಲ ಎಪ್ಪ ?

ಹೂವಪ್ಪ - ನೋಡಲೇ ಚವಡಿ, ಈರ್ಯಾ.... ನನ್ನ ವರ್ಚಸ್ಸು ಬಾಗಿಲಕೋಟಿಯವರೆಗೂ ಹೋಗಿಬಿತ್ತು

ಚವಡಕ್ಕ - ಮ್ಯಾಲೆ ಬಿಳಾಕ ಬರ್ದಂಗ

ಬಸವರಾಜ - ಆ ಸಂಪಿಗೆ ಹೂವಪ್ಪನವರು ತಮಗೇನಾದರೂ ಗೊತ್ತೊ ?

ಹೂವಪ್ಪ - ಅಯ್ಯೋ ಅದೇನ ಯಜಮಾನರೇ, ಆ ಹೆಸರಿನವನೇ ನಾನು. ಕಿರಾಣಿ ಅಂಗಡಿನೂ ನನ್ನದೇ

ಚವಡಕ್ಕ - ಅದರಾಗ ಏನೇನೂ ಇಲ್ಲ

ಹೂವಪ್ಪ - ತುಂಬಸತೀನಿ

ಬಸವರಾಜ - ಸರಿ ಸರಿ ತಿಳಿಯಿತು, ಬಾಗಲಕೋಟೆಯಲ್ಲಿ ನಮಗ ಬಂಗ್ಲೇದ ಬಸವರಾಜಪ್ಪ ಅಂತಾರೆ. ಗದುಗಿನ ತಮ್ಮ ಮಿತ್ರರು ತಮಗೊಂದು ಪತ್ರ ಕೊಟ್ಟಿದ್ದಾರೆ

ಹೂವಪ್ಪ - ಏನಂದ್ರಿ ನನಗ ಪತ್ರ ಕೊಟ್ಟಾರ್ರೆ ಏನಂತಾರಿ

ಬಸವರಾಜ - ಕೊಡಮ್ಮ (ಶೈಲಜ ಕೊಡವಳು)

ಚವಡಕ್ಕ - ಗದಗಿನವರು ಪತ್ರ ಕೋಡೋದು ಇವಗs ಯಾಕs ?

ವೀರಣ್ಣ - ಅವರು ಹಾಗಲಕಾಯಿ. ಇವರು ಬೇವಿನಕಾಯಿ

ಚವಡಕ್ಕ - ಎರಡೂ ವಿಷಾನ

ಹೂವಪ್ಪ - (ಅರ್ಧ ಓದಿ) ಇವರೇ ಏನು ನಿಮ್ಮ ಮಗಳು

ಶೈಲಜ - ಹೌದು ಶೈಲಜಾ ಅಂತ ನನ್ನ ಹೆಸರು

ಹೂವಪ್ಪ - ಆ .... ಏನಂದ್ರಿ

ಶೈಲಜ - ಶೈಲಜಾ

ಹೂವಪ್ಪ - ಸರಿ ಸರಿ ತಿಳಿಯಿತು, ರೂಪಕ್ಕ ತಕ್ಕ ಹೆಸರು (ಪೂರ್ತಿ ಓದಿ) ಅಲ್ಲ ಈ ಊರಲ್ಲಿ ನಿಮ್ಮ ಮಗಳಿಗೆ ನೀವು ನೋಡ ಬಂದ ವರನ ಹೆಸರು ಇದರಲ್ಲಿ ತಪ್ಪು ಬರೆದಿದಾರೆ ಅಂತ....

ವೀರಣ್ಣ - ಇವರಿಗನಸ್ತದ ಯಾಕ ?

ಚವಡಕ್ಕ - ತನ್ನ ಹೆಸರು ಬರದಿಲ್ಲ. ಅದರಾಗ ಅಲ್ಲ ?

ಹೂವಪ್ಪ - ಸುಮ್ಮನಿರ. ಏನ್ರಿ ವರನ ಹೆಸರು ತಪ್ಪು ಬರದಾರ

ಶೈಲಜ - ಯಾಕೆ ? ಈಶ್ವರ ಅಂತ ಬರೆದಿಲ್ಲವೇ ಅವರು ಅದರಲ್ಲಿ

ಹೂವಪ್ಪ - ಆ ? ಹೂ... ಹೂ.... ಅದೇ ಹೆಸರೇ ಬರೆದಿದಾರೆ, ಆದರೆ ನಮ್ಮ ಆ ಮಿತ್ರರಿಗೆ ಈ ಮುಂಚಿತ ನಾನೂ ಕೂಡ ಒಬ್ಬ ವರನ ಹೆಸರನ್ನು ತಿಳಿಸಿದ್ದೆ. ಆ ಹೆಸರು ಬರೆಯೋದು ಮರೆತು ಈ ಹೆಸರು ಬರೆದಿದಾರೇನೋ ಅಂತ ವಿಚಾರಿಸಿದೆ

ಬಸವರಾಜ - ಅಂದ್ರೆ ನೀವು ಬೇರೆ ವರನ ಬಗ್ಗೆ ತಿಳಿಸಿದ್ದಿರೇನು ?

ಹೂವಪ್ಪ - ಹೌದು ಯಜಮಾನರೇ, ಈಗ ನೀವು ನೋಡಬಂದಿದ್ದೀರಲ್ಲ ? ಈ ಈಶ್ವರ ಅನ್ನೋ ಹುಡುಗನ್ನ... ಹೆ... ಅವನೆಂಥ ಹುಡುಗ ಸ್ವಾಮಿ ಹುಡುಗನೇ ಅಲ್ಲ ಅವನು

ವೀರಣ್ಣ - ಮತ್ತೆ ಮುದುಕನೇನು ?

ಹೂವಪ್ಪ - ಸುಮ್ಮನಿರಲೇ ನೀನು.... ಏನ್ರಿ ಈಗ ನಾನು ಹೇಳುವ ವರನಿಗೂ ಆ ಈಶ್ವರನಿಗೂ ಎಲ್ಲಿಯ ಅಂತರ, ಏನು ಕಥೆ ಯಜಮಾನ್ರೆ. ನಾನು ಹೇಳುವ ವರ ಈಶ್ವರನಿಗಿಂತಲೂ ಗುಣದಲ್ಲಿ ಗೌರವದಲ್ಲಿ ಸಂಪತ್ತಿನಲ್ಲಿ ...

ವೀರಣ್ಣ - ವಯಸ್ಸಿನಲ್ಲಿ ಕೂಡ ದೊಡ್ಡವನು

ಹೂವಪ್ಪ - ಹೌದೂ....

ಬಸವರಾಜ - ಅವರೂ ಕಲಿತಿದ್ದಾರೇನು ?

ಹೂವಪ್ಪ - ಅದೊಂದು ಬಾಬಿನಲಿ ಮಾತ ಕೇಳಬೇಡಿ. ಅದೇನಾಯಿತು ? ಈ ಊರಲಿ

ಅವನದೇ ವರ್ಚಸ್ಸು. ಅರವತ್ತು ಎಕರೆ ಭೂಮಿ. ಅದರಲ್ಲಿ ಇಪ್ಪತ್ತು ಎಕರೆ ತೋಟ, ತೋಟದಲ್ಲಿ ಒಂದು ಸಣ್ಣ ಮನೆ

ಚವಡಕ್ಕ - ಇನ್ನೂ ಕಟ್ಟಿಸಿಲ್ಲ

ಹೂವಪ್ಪ - ಕಟ್ಟಸ್ತೀನಿ ಸವತಿ ಮಲಮಕ್ಕಳು ಯಾರ್‍ಯಾರು ಇಲ್ಲ. ಅಲ್ಲಿ ಇರುವವನೂ ಅಂದ್ರೆ

ವೀರಣ್ಣ - ಇವರು... ಮತ್ತ ಇವರು ಇಬ್ಬರೆ

ಶೈಲಜ - ಅಂದ್ರೆ ಅವರಿಗಿದು ಎರಡನೇ ಸಂಬಂಧ ಅಸ್ರಿ

ವೀರಣ್ಣ - ಮದುವೆ ಮಾತಲ್ಲಿ ಹೇಳೋದಾದರೆ ಎರಡನೇಯದು. ಇನ್ನು ಬೇರೆ ಮಾತಿನಲ್ಲಿ ಕೂಡಿಸಿ ಹೇಳಬೇಕು ಅಂದ್ರ ಮೂರನೇದ್ದೋ ಆರನೆದ್ದೋ ಯಾಕ ಚೌಡಕ್ಕ

ಚವಡಕ್ಕ - ಏನಪ ನಂದಷ್ಟು ನನಗ್ಗೊತ್ತು ಹಿಂದಕ....

ವೀರಣ್ಣ - ಎವ್ವಾ ತಗೀಬ್ಯಾಡ ನಿನ್ನ ಪುರಾಣ,

ಶೈಲಜ - ಅಲ್ರಿ ಆ ವರ ನೀವೇಯೇನು ?

ಹೂವಪ್ಪ - ಏ... ಹೌದರಿ ಅದು ತಮಗ ಹ್ಯಾಂಗ ತಿಳೀತಿರಿ,

ಶೈಲಜ - ಇಷ್ಟು ತಿಳಿಯೋದಿಲ್ಲವೇನ್ರಿ

ಹೂವಪ್ಪ - ಹಾಗಿದ್ರೆ ಒಪ್ಪಿದಿರಾ ?

ಶೈಲಜ - ಯಾರನ್ನ ?

ಹೂವಪ್ಪ - ನನ್ನರಿ

ಶೈಲಜ - ನಿಮಗೆ ಸ್ವಲ್ಪಾದ್ರೂ ಇಲ್ಲವಲ್ರಿ

ಹೂವಪ್ಪ - ಏನ್ರಿ ?

ಶೈಲಜ - ನಾಚಿಕೆ

ಚವಡಕ್ಕ - ಅದು ಎಂದೂ ಇವಗ ಬಂದ ಇಲ್ಲರಿ. ನಾಚಿಕ ತೆಗೆದು ನಾಗೊಂದಿಗಿ ಮ್ಯಾಲ ಇಟ್ಟಾನ್ರಿ

ವೀರಣ್ಣ - ಶೈಲಜಾ ಬಾಯಿಯವರೇ, ಇವರು ಹಿಂಗ ಛೀ ಹಾಕಿಸಿಕೊಳ್ಳುತಾ ಇರೋದು ಇದು ಎಷ್ಟನೇ ಬಾರಿನೋ ಏನೋ ? ಕೇಳ್ರಿ ಬೇಕಿದ್ರ ಚವಡಕ್ಕರ್ನ

ಚವಡಕ್ಕ - ಹೌದರಿ ಎದುರಿಗೆ ಬಂದ ಹೆಣ್ಣು ಮಕ್ಕಳ ಕೊಳ್ಳ ನೋಡತಿರತಾವರಿ ಇವನ್ನ ಕಂಣು. ಕೊರಳಾಗ ಕರೀಮಣಿ ಸರ ಕಾಣಲಿಲ್ಲ, ಕೇಳೇ ಬಿಡತಾನ್ರಿ

ಶೈಲಜ - ಏನಂತ ?

ವೀರಣ್ಣ - ತನ್ನ ಮದುವಿ ಮಾಡಿಕೊಳ್ಳುತೀರಾ ಅಂತ

ಶೈಲಜ - ತಲೆ ಕೆಟ್ಟಿದೇನ್ರಿ ಇವರದು

ವೀರಣ್ಣ - ಇನ್ನೂ ಪೂರಾ ಕೆಟ್ಟಿಲ್ರಿ. ಈಗ ಕೆಡತಾ ನಡದೈತ್ರಿ

ಚವಡಕ್ಕ - ಮೈಯನ್ನ ಅರವಿ ಹರಕೊಳ್ಳಾಕೆ, ಮಂದಿಗೆ ಕಲ್ಲ ವಗೀಯಾಕ ಇನ್ನೂ ದಿವ್ಸ ಬೇಕೇಲ್ರಿ

ಹೂವಪ್ಪ - ಹಾಗಿದ್ರೆ ನಾ ಹೋಗ್ತೀನಿ (ಹೋಗ ಹತ್ತುವನು)

ಚವಡಕ್ಕ - ಆ ಪತ್ರ ಅವರಿಗೆ ಕೊಟ್ಟು ಹೋಗು. ತಗೊಂಡು ಹೊರಟೆಲ್ಲಾ ತಾಯಿಲ್ಲಿ ಕೊಡ್ತೀನಿ

ಹೂವಪ್ಪ - ಯಾಕ ನನಗ ಕೊಡಾಕ ಬರಾಕಿಲ್ಲೇನೋ ?

ಶೈಲಜ - ಅದೇನು ಬೇಡ, ನಿಮ್ಮ ಹೆಸರಿಗೆ ಕೊಟ್ಟಿದ್ದಾರೆ. ನಿಮ್ಮ ಹತ್ತರಾನೇ ಇರಲಿ

ಚವಡಕ್ಕ - ನೋಡಿ ವೀರಣ್ಣನಿಗೂ ಈಶ್ವರಗೂ ತುಂಬಾ ಸಲಿಗಿ ಅವನ್ನ ಕರಕೊಂಡು ನಿಮ್ಮ ಕೆಲಸ ಮಾಡಿಸಿಕೊಳ್ರಿ, ನಾವೂ ಇರತೀವಿ ನಿಮ್ಮ ಕೆಲಸ ಮಾಡಿಸಿ ಕೊಡ್ತೀವಿ ಯಾಕ ?

ಹೂವಪ್ಪ - ಮಾಡಿಕೊಡೋನಲ್ಲ, ಅದಕೇನ ಬಂದದ, ರಿಣ ಇದ್ದಲ್ಲೇ ಆಗ್ತದ. ನಮಗ ಆಗಲಿ ಅಂದ್ರ ಹ್ಯಾಂಗ. ಈರ್ಯಾ ಕರಕೊಂಡು ಬಾರೋ ಅವರನ್ನ

ವೀರಣ್ಣ - ಅಲ್ಲ ಯಜಮಾನ್ರೆ ಬಾಗಿಲಕೋಟೆಯಲ್ಲಿ ನೌಕರಿ ಮಾಡ್ತಾಯಿರೋ ನಮ್ಮ ಈಶ್ವರನಿಗೂ ನಿಮಗೂ ಪರಿಚಯವಿದೆಯೋ ?

ಶೈಲಜ - ಹೌದು, ನಮ್ಮ ಮನೆಯ ಒಂದು ಭಾಗವನ್ನೇ ಅವರು ತಮ್ಮ ವಾಸಕ್ಕೆಂದು ಉಪಯೋಗಿಸುತ್ತಾರೆ. ಆದ್ದರಿಂದಲೇ ಅವರಿಗೂ ನಮಗೂ ಪರಿಚಯ

ಬಸವರಾಜ - ಪರಿಚಯವಷ್ಟೇ ಏಕೆ ? ಅವರ ಪರಿಶುದ್ಧ ಸ್ವಭಾವಕ್ಕೆ ಮನಸೋತ ನನ್ನ ಮಗಳು ಶೈಲಾ....

ಶೈಲಜ - ಇರಲಿ ಬಿಡಪ್ಪ ಅದನ್ನೆ ಯಾಕ ಹೇಳ್ತಿಯಾ ?

ಬಸವರಾಜ - ಹೇಳಬೇಕಮ್ಮ... ನೋಡಿ ಈಶ್ವರನನ್ನೇ ಮದುವೆ ಮಾಡಿಕೊಳ್ಳುವ ಹಟುಹಿಡಿದು

ಚವಡಕ್ಕ - ಇಷ್ಟು ದೂರ ಕರಕೊಂಡ ಬಂದಾಳ ಅಲ್ಲರ್ರಾ ?

ಬಸವರಾಜ - ಹೌದಮ್ಮ... ನೋಡಿ ನನಗಾದರೂ ಶೈಲಾ ಒಬ್ಬಳೇ ಮಗಳು. ಮಡದಿ ತೀರಿಕೊಂಡು ಮೂರು ವರುಷ ಕಳೆಯಿತು

ಹೂವಪ್ಪ - ಹಾಂಗಿದ್ರ ಮುಗದ ಹೋಯಿತಲ್ಲರಿ

ವೀರಣ್ಣ - ಒಟ್ಟಾರೆ ನೀವು ಗಳಿಸಿದ ಸಮಸ್ತ ಸಂಪತ್ತು ನಿಮ್ಮ ನಂತರ ಈಶ್ವರನದೇ ಅನ್ನಿ

ಬಸವರಾಜ - ಹೌದು ಹೌದು. ಅಲ್ಲದೇ ಆ ಹುಡುಗನಿಗೂ ಕೂಡಾ ತಂದೆ ತಾಯಿ ಅಣ್ಣ ತಮ್ಮ ಯಾರೂ ಇಲ್ಲವೆಂದು ಕೇಳಿದ್ದೇನೆ

ಚವಡಕ್ಕ - ಹೌದರಿ ಅಕ್ಕ ಒಬ್ಬಾಕಿನ್ನ ಬಿಟ್ರ ಮತ್ಯಾರೂ ಇಲ್ಲರಿ ಹುಡುಗ್ಗ

ಶೈಲಜ - ನೋಡಪ್ಪ ನಾನು ಹೇಳಲಿಲ್ಲವೇ ?

ವೀರಣ್ಣಾ - ಬನ್ನಿ ಬನ್ನಿ ನಿಮ್ಮ ಆಸೆ ಈಡೇರುವದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲರೀ ಹೂವಪ್ಪನವರೇ ಈಗಂತೂ ಇವರು ನನ್ನ ರೂಮಿನಲ್ಲೇ ಉಳೀಲಿ ಬರ್ರಿ. (ಹೋಗುವರು)

## ಸನ್ನಿವೇಶ ೩

(ಮಹದೇವಪ್ಪನ ಮನೆ. ಮಹದೇವಪ್ಪ ಹಂಪವ್ವನಿಗೆ ಹಾಡು ಬರೆದು ಕೊಡುತ್ತಿದ್ದಾರೆ. ಹುಡುಗರೆಲ್ಲ ನೋಡುತ್ತ ಸುತ್ತ ಕುಳಿತಿದ್ದಾರೆ, ಈಶ್ವರ ಬರುತ್ತಾನೆ. ಬರೆಯುವ ಹಾಡು ಪೂರ್ಣವಾಗುತ್ತದೆ.)

ರುದ್ರ - ಮಾವಾ ಇವತ್ತು ಅಪ್ಪ ಹೊಸಹಾಡು ಕಟ್ಟಿದ್ದಾನೆ

ಈಶ್ವರ - ಹೌದೇ ಮಾವಾ.... ರುದ್ರ ಡಪ್ಪು ತಂದುಕೊಂಡೋ ನಿಮ್ಮಪ್ಪನ ಕೈಗೆ (ತಂದುಕೊಟ್ಟ ಮೇಲೆ) ಹಾಡಿ ಮಾವಾ

ಹಂಪವ್ವ - ಇರಲಿ ಬಿಡೋ, ದೊಡ್ಡೂರಲ್ಲಿದ್ರೂ ಹಳ್ಳಿಯ ಹಾಡು ಕೇಳೋ ಹುಚ್ಚು ಬಿಡಲಿಲ್ಲವಪ್ಪ ನಿನಗೆ. ಆದರಲ್ಲಿ ಇವರು ಕಟ್ಟಿದ ಹಾಡು ಕೇಳು ತುಂಬಾ ಬೇಜಾರು

ಮಹದೇವಪ್ಪ - ಈಶ್ವರ ನಾನು ಕಟ್ಟಿದ ಹಾಡುಹೇಳುವ ಹುಚ್ಚು ಎಲ್ಲರಿಗಿಂತಲೂ ಈ ನಿನ್ನಕ್ಕನಿಗೇ ಹೆಚ್ಚು

ಹಂಪವ್ವ - ಹೂ ಹೌದು, ನೀವು ಕಟ್ಟಿದ ಹಾಡು ಮೆಚ್ಚಿಕೊಳ್ಳಲಿಕ್ಕೆ ನೀವೇನು ವರಕವಿಗಳೇನು?

ಮಹದೇವಪ್ಪ - ಮೆಚ್ಚಿದ ನಂತರವೇ ನೀನು ನನ್ನ ಮದುವೆ ಆದದ್ದು... ಪಾಪ ಮಕ್ಕಳಿಗೇನು ಗೊತ್ತು ಆ ವಿಷಯ, ನಾನು ವರಕವಿಯೇ ಆಗಿರಲಿ, ನರಕವಿಯೇ ಆಗಿರಲಿ, ನಿನ್ನ ಗೆದ್ದ ಕಲಿಯಂತೂ ಇರಬಹುದು (ನಗುವನು)

ಈಶ್ವರ - ಹೋಗಲಿ ಬಿಡು ಮಾವಾ, ನಿಮ್ಮ ಸರಸ ಸಂಭಾಷಣೆ. ನೀವಿಬ್ಬರೇ ಇದ್ದಾಗ ಆಡಿಕೊಳ್ಳಿ, ಹೂ ಹಾಡಕ್ಕ.....

ಹಂಪವ್ವ - ಇರಲಿಬಿಡೋ

ಈಶ್ವರ - ಹಾಡಕ್ಕ (ಒತ್ತಾಯಿಸುವನು. ಹಂಪವ್ವ ಹಾಡುವಳು.)

॥ ಪದ ॥

ಹಂಪವ್ವ - ನೋಡಿ ಬಾರೋ ಕಾಶೀಮಥುರ । ನೋಡಿ ಬಾರೋ ಶ್ರೀ ಹರಿದ್ವಾರ ।

ನೋಡಿ ಬಾರೋ ದ್ವಾರಕ ನಗರ । ನೋಡಿ ಬಾ ನೋಡಿ ಬಾ ।
ಸ್ವಾತಂತ್ರ ಭಾರತದ ಸಿರಿಗರ್ಭದಲ್ಲಿ । ಅಡಗಿರುವ ನೂರಾರು ಕ್ಷೇತ್ರಗಳಲ್ಲಿ।
ದಿಲ್ಲಿ ಆಗ್ರಾ ತಾಜಮಹಲು ।। ಹಿಮಾಲಯದ ತುದಿಯಿಂದ ಕನ್ಯಾಕುಮಾರಿ।
ಪುಣ್ಯಮಯ ಕ್ಷೇತ್ರಗಳ ನೋಡೊಂದು ಸಾರಿ ಬದರೀ
ನಾಥ ಕೇದಾರನಾಥ ನೀ ನೋಡಿ ಬಾರೋ ಗೌರೀ ಶಂಕರ ।।
ನೋಡಿ ಬಾ ನೋಡಿ ಬಾ । ಬಾದಾಮಿ ಬೇಲೂರ ಸಿರಿಹಳೆಯ
ಬೀಡು । ಅಜಂತ ವೆಲ್ಲೂರು । ಶಿಲ್ಪಕಲೆ ಗೂಡು ।
ನಾಶಿಕ ಯೋಧ್ಯಾ । ಜಮ್ಮು ಕಾಶ್ಮೀರ । ಶ್ರೀಶೈಲ ಪಂಢರಾ
ಪುರ । ಮೈಸೂರು । ಬೆಂಗಳೂರು । ನೀಲಗಿರಿ ಊಟಿ
ಮಂಗಳೂರು ಕಾರವಾರ ಆಗುಂಬೆ ಘಾಟಿ । ಕುಂಭಕೋಣ
ಧರ್ಮಸ್ಥಳವು । ತಿರುಪತಿ ಶ್ರೀ ವೆಂಕಟೇಶ್ವರ ।।

(ಹಾಡಿನ ಮುಕ್ತಾಯಕ್ಕೆ ವೀರಣ್ಣ, ಹೂವಪ್ಪ ನಗುತ್ತ ಗದ್ದಲ ಮಾಡುತ್ತ ಬರುವರು)

ಹೂವಪ್ಪ - ಮಾವಾ ...... ಮಾದೇವಣ್ಣ ಮನೆಯಲ್ಲಿ ಇದೀಯೇನಪ

ಮಹದೇವಪ್ಪ - ಓಹೋ..... ಬನ್ನಿ .... ಹೂವಂಣ

ಹಂಪವ್ವ - ಇದೇನ್ರಪಾ ಮುಂಜೇನೆದ್ದು ನಗನಗತಾ ಬಂದಿರಿ

ವೀರಣ್ಣ - ಹೌದತ್ತೆ ವಿಷಯ ಅಷ್ಟು ಮಹತ್ವದ್ದು. ಮಾವಾ ಹೋಳಿಗಿ ಉಣ್ಣೊ ಸಮಾಚಾರ ತಂದೀವಿ

ಹಂಪವ್ವ - ಹೋಳಿಗಿ ಉಣ್ಣೋ ಸಮಾಚಾರ ? ಅದೇನ್ರಪಾ ಅಂಥಾದ್ದು ?

ಹೂವಪ್ಪ - ಹೌದವ್ವ ಈ ನಿನ್ನ ತಮ್ಮನಿಗೆ ಕನ್ಯಾ ಕೊಡಬೇಕೂ ಅಂತ ದೂರದಿಂದ ಒಬ್ಬರು ಭಾರೀ ಶ್ರೀಮಂತರು ಬಂದಿದಾರೆ

ಮಹದೇವಪ್ಪ - ಏನಂದೆ ಹೂವಣ್ಣ ನಮ್ಮ ಈಶ್ವರನಿಗೆ ? ನಿಜವೇ ಹೂವಂಣ ಈ ಮಾತು?

ವೀರಣ್ಣ - ಸುಳ್ಳೇಕೆ ಮಾವಾ, ಕನ್ಯಾ ಕೂಡ ಜೊತೆಯಲ್ಲೇ ಕರೆದುಕೊಂಡು ಬಂದಿದ್ದಾರೆ

ಹೂವಪ್ಪ - ಹೌದು ಹೌದು ಹಂಪವ್ವ, ಹುಡುಗಿಯ ರೂಪವನ್ನಂತೂ ನೋಡುವದೇ ಬೇಡ. ಸಾಕ್ಷಾತ್ ಗೌರಿ, ನೀ ಹಡದೀದಿ ನೋಡವ್ವ ಚಂದಿಲ್ಲ ಚಾರಿಲ್ಲ

ಸೀಲಾ - ಯಾಕ ಮಾವಾ

ಮಹದೇವಪ್ಪ - ಯಾವೂರಂತೆ ಎಲ್ಲಿದ್ದಾರೆ ಏನ ಕಥೆ

ಹೂವಪ್ಪ - ಹೇಳ್ತಿನಿ ಹೇಳ್ತಿನಿ ಲೇ, ರುದ್ರ ನೀರು ತಾರಲೇ... ಕುಡದ ಹೇಳ್ತಿನಿ

ವೀರಣ್ಣ - ನೀರ ಯಾಕರಿ ಚಾನ ಮಾಡಿಸೋನಲ್ಲ ಕೂಡರಿ (ಈಶ್ವರ ಹೋಗಪತ್ತುವನು) ಏ ನಿಲ್ಲೋ ನೋಡ್ರಿ ಓಡಬೇಕಂತಾನ

ಹೂವಪ್ಪ - ಏ ನಿಂತುಗೊಳ್ಳೊ ಹೆಂಣು ಬಂದಾಗ ಕಂಣು ತಪ್ಪಿಸೋದೆ ? ಹೇಳು ನೀನು ಬಾಗಿಲುಕೋಟೆಯಲ್ಲಿ ಬಾಡಿಗೆ ಇರೋದು ಯಾರ ಮನೇಲಿ ?

ಈಶ್ವರ - ಬಂಗ್ಲೇದ ಬಸವರಾಜಪ್ಪನವರ ಮನೆಯಲ್ಲಿ

ವೀರಣ್ಣ - ಹ.... ಅದೇ ಬಸವರಾಜಪ್ಪನವರೇ ತಮ್ಮ ಮಗಳು ಶೈಲಜೆಯನ್ನು ನಿನಗೆ ಕೊಡಬೇಕೆಂದಿದ್ದಾರೆ. ಕನ್ಯಾನ ಕೂಡ ಕರಕೊಂಡು ಬಂದಿದ್ದಾರೆ

ಈಶ್ವರ - ಹಾಸ್ಯ ಮಾಡುವಿಯೇನೋ ?

ವೀರಣ್ಣ - ಹಾಸ್ಯವೇಕಪ್ಪ ನಿಜ ನಂಬು

ಈಶ್ವರ - ಏನೋ ಅಪ್ಪ ಅವರೆಲ್ಲಿ ನಾನೆಲ್ಲಿ ವೀರಂಣ ಅವರು ದೊಡ್ಡವರು ಶ್ರೀಮಂತರು ಹೀಗಿದ್ದು ಬಡವನಾದ ನನಗೆ ಮಗಳು ಕೊಡಲು ಬಯಸುತ್ತಾರೆಯೇ ?

ಹೂವಪ್ಪ - ಬಯಸದೇನ ಮಾಡ್ತಾರಯ್ಯ ಬಯಸದೇನು ಮಾಡ್ತಾರೆ

ವೀರಣ್ಣ - ಒಳ್ಳೇ ಬೇಟೆಗಾರನಪ್ಪ ನೀನು. ಹುಲಿಬೇಟೆ ಆಡೋ ಸರದಾರ. ಇಲ್ಲಿ ಮೊದಲ ಬೇಟೆ ಆಡು ಅಂದ್ರೆ ಆಡೀಯಾ ?

ಈಶ್ವರ - ನೀನು ಆಡಿದ್ದೀಯಲ್ಲಪ

ಮಹದೇವಪ್ಪ - ಹೋಗಲಿ ಈಗ ಅವರೆಲ್ಲಿದ್ದಾರೆ ?

ವೀರಣ್ಣ - ನನ್ನ ರೂಮಿನಲ್ಲಿದ್ದಾರೆ ಕರೆತರಲೇ ?

ಹಂಪವ್ವ - ಕರಕೊಂಡ ಬಾರಪ್ಪ (ಹೊರಡಹತ್ತುವನು)

ಹೂವಪ್ಪ - (ತಡೆದು) ಲೇ ಈರ್‍ಯಾ ಮುಂದಿನ ಸಂಗತೀನ ಈಗಲೇ ತಿಳಿಸಿಬಿಡು

ವೀರಣ್ಣ - ಬಂದಮೇಲೆ ಅವರೇ ಹೇಳತಾರಲ್ಲರೀ

ಹೂವಪ್ಪ - ನೀನು ಹುಡುಗ ತಿಳಿಯಾಕಿಲ್ಲ, ಸ್ವಲ್ಪ ತಿಳಿದಿರಲಿ ಹೇಳು

ಹಂಪವ್ವ - ಏನಪ್ಪ ಅದು ?

ವೀರಣ್ಣ - ನೋಡತ್ತೆ... ಮಾವಾ.... ಮದುವೆ ಆದ ಬಳಿಕ ಈಶ್ವರನನ್ನು ಅವರು ತಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುತ್ತಾರಂತೆ

ಹೂವಪ್ಪ - ಯಾಕಂದ್ರೆ ಮಗಳನ್ನು ಬಿಟ್ರೆ ಮತ್ತೆ ಬೇರೆ ಅವರಿಗೆ ಯಾರೂ ಇಲ್ಲ

ಹಂಪವ್ವ - ಅಂದರೆ, ಈಶ್ವರ ಅವರ ಮನೆಯಲ್ಲಿಯೇ ಅಳಿಯತನಕ್ಕೆ ನಿಲ್ಲಬೇಕಂತೇನು ?

ಹೂವಪ್ಪ - ಹೌದಮ್ಮ ಅವರಿಗೂ ವಯಸ್ಸಾಗಿದೆ. ದೊಡ್ಡ ವ್ಯವಹಾರ ಅಂವ ಬಳಿಕ ಅವರ ನಂತರ ಅದನ್ನು ನೋಡಿಕೊಳ್ಳುವವರು ಬೇಡವೆ ?

ಹಂಪಕ್ಕ - ಇದೆಂಥ ಸಂಬಂಧ ಹುಡುಕಿ ತಂದ್ರೆಪ. ಚಿಕ್ಕಂದಿನಿಂದಲೂ ಸಾಕಿ ಸಲುಹಿದ ತಮ್ಮನನ್ನು ಈಗ ಪರವರ ಮನೆಗೆ ಅದು ಹೇಗಪ್ಪ ನಾನು ಕಳಿಸಿಕೊಡಲಿ

ವೀರಣ್ಣ - ಅತ್ತೆ ತಮ್ಮನನ್ನು ಕಳಿಸಬೇಕಾದ್ರ ಇಷ್ಟು ಯೋಚಿಸುವ ನೀವು ನಾಳೆ ಅದು ಹೇಗೆ ಮಗಳನ್ನು ಕಳಿಸಿ ಕೊಡುತ್ತೀರೋ ? ಅತ್ತೆ ನಿನ್ನ ತಮ್ಮ ಹೋಗೋದು ಮಾವನ ಮನೆಗೆ, ಮಿಲ್ಟ್ರಿಗಲ್ಲ. ಬಸವರಾಜಪ್ಪ ಇರೋವರೆಗೂ ಸ್ವಲ್ಪ ತೊಂದರೆಯಾಗಬಹುದು. ಆ ಬಳಿಕ ಅವರ ಸಂಪತ್ತೆಲ್ಲ ಇವನದೇ. ಅಲ್ಲರೀ... ಈಗ ಇವನಿಗಾದರೂ ಏನಿದೆ ?

ಹೂವಪ್ಪ - ಏನದಪ ಏನದ ಅದ ಏನು ? ಅದೇ ನೀವು ಕೊಡಿಸಿದ ಶಿಕ್ಷಣ. ಸರಕಾರೀ ನೌಕರಿಯಿಂದ ಬರೋ ಸಂಬಳ. ಇದಿಷ್ಟೆ ಇವನ ಸಂಪತ್ತು. ಅಂದ ಬಳಿಕ ಅದೃಷ್ಟ ಬಲದಿಂದ ನಿನ್ನ ತಮ್ಮ ದೊಡ್ಡವರ ಮಗಳ ಕೈ ಹಿಡಿದು ಶ್ರೀಮಂತನಾದರೆ ಹಂಪವ್ವ ನಿನಗೆ ಸಮಾಧಾನವಿಲ್ಲವೇ ?

ಹಂಪವ್ವ - ಏನಾದರೇನಪ್ಪ ದೂರದ ಗುಡ್ಡ ಕಣ್ಣಿಗೆ ಚಂದ ಕಾಣುವದೇನು ದೊಡ್ಡ ಮಾತಲ್ಲ. ಹತ್ತಿರ ಇರುವಾಗ ಮಾತ್ರ ಅದರ ಅಂತರಾಳದ ಅರಿವಾದೀತು. ಬಡತನದಲ್ಲಿದ್ದರೂ ನನ್ನ ತಮ್ಮ ನಮ್ಮ ಬದುಕಿನಲ್ಲಿ ಬೆರೆತು ಹೋಗಿದ್ದಾನೆ. ನಾಳೆ ಶ್ರೀಮಂತರ ಸಂಬಂಧ ಮಾಡಿ ಪರಾಧೀನದಲ್ಲಿ ಬಿದ್ದು ಪಡಬಾರದ ಕಷ್ಟ ಬಂದರೆ ಆಗ ಅದನ್ನು ಕಂಡು ನೀರು ಬರುವದು ನಮ್ಮ ಕಂಣಲ್ಲಿ

ಮಹದೇವಪ್ಪ - ಅಹುದು ಈಶ್ವರ, ನೀಲ ಗಗನದಲ್ಲಿ ಹಾರುವ ರೆಕ್ಕೆ ಬಲಿತ ಹಕ್ಕಿ ಪಂಜರದ ಪಕ್ಷಿಯಾಗಬಾರದು. ಹೀಗೆ ಮಾಡಿದರು ಎಂಬ ಅಪವಾದ ನಾಳೆ ನಮ್ಮ ತಲೆಗೆ ಬಂದೀತು

ಹೂವಪ್ಪ - ಎಂಥ ಹುಚ್ಚರಪ್ಪ ನೀವು. ನೌಕರಿಯಿಂದ ಇವನಿಗೆ ಬರುವ ಸಂಬಳ ಹಣ ಇವನೊಬ್ಬನ ಖರ್ಚಿಗೂ ಸರಿಯಾಗಿ ಸಾಲುವದಿಲ್ಲ. ಇಷ್ಟಿದ್ದೂ ಭಾಗ್ಯ ಲಕ್ಷ್ಮಿ ಬಂದು ಬಾಗಿಲಲ್ಲಿ ಕಾದು ನಿಂತಾಗ ಬಾಎಂದು ಕರೆಯುವ ಧೈರ್ಯ ನಿಮಗಿಲ್ಲವಲ್ಲ. ಅದಕ್ಕೇ ಅನ್ನೋದು ಬಡವರಿಗೆ ಬುದ್ಧಿ ಬಲು ಕಡಿಮೆ ಎಂದು. ಹುಚ್ಚರು ಬಾಳ ಬಾಳ ಹುಚ್ಚರು ನೀವು

ವೀರಣ್ಣ - ಅತ್ತೆ ಅನಾಯಾಸ ಬಂದಿದಾರೆ, ಕರಕೊಂಡಂತೂ ಬರತೀನಿ. ಪಾಪ ಹುಡುಗಿನಾದ್ರು ಒಂದು ಸರ ನೋಡರಿ.

ಹೂವಪ್ಪ ಹಂಪವ್ವ ಹುಡುಗಿ ನಿನ್ನ ತಮ್ಮನಿಗೆ ಸಂಪೂರ್ಣ ಮನಸೋತಿದ್ದಾಳೆ. ಅಂತೆಯೇ ತನ್ನ ತಂದೆಯನ್ನು ಇಷ್ಟು ದೂರ ಕರ ತಂದಿದ್ದಾಳೆ

ವೀರಣ್ಣ - ಅತ್ತೆ ಕೊನೆಯದಾಗಿ ಹೇಳ್ತೀನಿ. ಎಲ್ಲಕೂ ನಾನಿದ್ದೇನೆ ಹೆದರಬೇಡಿ

ಹೂವಪ್ಪ - ಹ-ಮತ್ತೆ ನಾನಿಲ್ಲೇನು ? ತಾ ಅದಾನಂತ ಹೋಗೋ ಕರಕೊಂಡ ಬಾ. (ವೀರಣ್ಣ ಹೋಗವನು) ಭಾವೀ ಮಡದಿಯ ಮನಸ್ಸನ್ನು ಮದುವೆಗೆ ಮೊದಲೇ ಕದ್ದುಬಿಟ್ಟಿದ್ದಾನೆ ಕಳ್ಳ. ಹಂಪವ್ವ ಈ ನಿನ್ನ ತಮ್ಮ ಕಣ್ಣು ಮುಚ್ಚಿ ಹಾಲ ಕುಡಿಯೋ

ಬೆಕ್ಕಿನ ಕುಲದವನವ್ವ

ಹಂಪವ್ವ - ಹೌದಪ್ಪ ಹೂವಣ್ಣ. ಹಾಲು ಕುಡಿದು ಹೊಟ್ಟೆ ತುಂಬಿದ ಇವನ ಮುಂದೆ ಇಲ್ಲಿ ನಾವು ಹುಳಿ ಮಜ್ಜಿಗೆ ಇಟ್ಟರೆ ಕುಡೀತಾನೇನು ?

ಮಹದೇವಪ್ಪ - ನಿಜವೇ ಈಶ್ವರ ಈ ಮೊದಲು ಅವರೊಂದಿಗೆ ಮಾತಾಡಿರುವಿಯಾ ?

ಈಶ್ವರ - ಇಲ್ಲ ಮಾಮಾ, ಈ ವಿಷಯಕ್ಕೆ ಅವರೊಂದಿಗೆ ನಾನಾವ ಮಾತನ್ನೂ ಆಡಿಲ್ಲ

ಮಹದೇವಪ್ಪ - ಇರಲಿ ಬಿಡು. ಕನ್ಯೆ ನಿನ್ನ ಮನಸ್ಸಿಗೆ ಬಂದರಾಯಿತಲ್ಲ. ಮುಖ್ಯ ನೀನು ಸುಖವಾಗಿದ್ದರೆ ಅದೇ ನನಗೆ ಸಂತೋಷ

ಹೂವಪ್ಪ - ಏ ಹಾಗ ನಿಂತ್ರಿ ಹೌದಲ್ಲೋ ? ಇದನ್ನೆಲ್ಲ ಸ್ವಚ್ಛ ಮಾಡಿ ಏನಾರ ಹಾಸ್ರಿ. ಅವರ ಬಂದಮ್ಯಾಲ ನೆಲದ ಮ್ಯಾಲ ಕುಂದರಸ್ತಿರೇನು ? (ಹಂಪವ್ವ, ನೀಲಾ ಹುಡುಗರು ವ್ಯವಸ್ಥೆಗೆ ತೊಡಗುವರು. ಮಹದೇವಪ್ಪ, ಹೂವಪ್ಪ ಮುಂದ ಕೂಡ್ರುತ್ತ) ನೋಡ್ದೇನಪ ಮಹದೇವಂಣ ಈಗಿನ ಕಾಲದ ಹುಡುಗರು ಒಳಗಿಂದೊಳಗೇ ಮಾತಾಡಿಕೊಂಡಿರತಾವು. ಕಾಲಾ ಕೆಟ್ಟಿತು, ಮಹದೇವಣ್ಣಾ ಕಾಲ ಕೆಟ್ಟಿತು

ಮಹದೇವಪ್ಪ - (ನಗುತ್ತ) ಕಾಲಾ ಕೆಟ್ಟರೂ ನೀ ನೆಟ್ಟಗಿದ್ದೀಯಲ್ಲಪ... ಏ ಬಂದ್ರು (ಬಸವರಾಜ, ಶೈಲಜಾ, ವೀರಣ್ಣಾ, ಚವಡಕ್ಕ ಬರುವರು) ನಮಸ್ಕಾರ ಬರಬೇಕು ..... ಚವಡಕ್ಕ

ವೀರಣ್ಣ - ನೋಡ್ರಿ ಯಜಮಾನ್ರೆ ಇವರು ಈಶ್ವರನ ಮಾವ

ಮಹದೇವಪ್ಪ - ನಮಸ್ಕಾರ

ಬಸವರಾಜ - ನಮಸ್ಕಾರ

ವೀರಣ್ಣ - ಇವರು ಈಶ್ವರನ ಅಕ್ಕ ಹಂಪವ್ವ

ಹಂಪವ್ವ - ನಮಸ್ಕಾರ

ವೀರಣ್ಣ - ಇವೆಲ್ಲ ಕಾಟೀ ಪೀಟಿ..

ಹೂವಪ್ಪ - ಮಕ್ಕಳು

ಬಸವರಾಜ - ಮಗು ಶೈಲಜಾ ... (ಶೈಲಜಾ ಎಲ್ಲರಿಗೂ ನಮಸ್ಕರಿಸುವಳು, ಮಹದೇವಪ್ಪ ಬಸವರಾಜಪ್ಪ ಕುಳಿತುಕೊಳ್ಳುವಂತೆ ಸನ್ನೆ ಮಾಡುವನು. ಬಸವರಾಜಪ್ಪ, ಹೂವಪ್ಪ, ಮಹದೇವಪ್ಪ ಕುಳಿತುಕೊಳ್ಳುವರು)

ಹಂಪವ್ವ - ಇರಲಿ ಬಿಡಮ್ಮ (ಎಬ್ಬಿಸುತ್ತ) ಎಷ್ಟು ಸುಂದರವಾಗಿದ್ದೀಯೇ ತಾಯಿ, ನಿನ್ನ ಕಂಡು ನನ್ನ ಬಾಯಲ್ಲೇ ನೀರೂರಿತು. ಅಂದ ಬಳಿಕ ನನ್ನ ತಮ್ಮ ಮರುಳಾದದ್ದು ದೊಡ್ಡ ಮಾತಲ್ಲ. ಕಣ್ಣು, ಹುಬ್ಬು, ಮೂಗು, ಮುಖದ ಮಾಟಾ ಎಲ್ಲ ತಿದ್ದಿ ಬರೆದಂತೆ ಸುಂದರವಾಗಿದೆ (ಶೈಲಜ ಮುಗುಳು ನಗುವಳು) ನಕ್ಕರೆ

ಮುಖವೆಲ್ಲ ನಕ್ಕ ಹಾಗೆ ಕಾಣುತ್ತದೆ. ಮುತ್ತೈದೆಯಾಗಿ ನೂರು ವರುಷ ಬಾಳು ತಾಯಿ

ಶೈಲಜಾ - ಎಲ್ಲ ತಮ್ಮ ಆಶೀರ್ವಾದ. ನನಗಾದರೂ ತಮ್ಮನ್ನು ಕಂಡ ತಕ್ಷಣ ಗತಿಸಿದ ನನ್ನ ತಾಯಿಯ ನೆನಪು ಮನದಲ್ಲಿ ಮರುಕಳಿಸಿದಂತಾಯಿತು

ಹಂಪವ್ವ - ಅಹುದವ್ವ, ತಾಯಿ ಇದ್ದರೇನೆ ತವರಂತೆ. ಹೋಗಲಿ, ಗುಣವಂತಿಯಾದ ನೀನು ನನ್ನ ತಮ್ಮನ ಕೈ ಹಿಡಿದು ನನ್ನ ತವರುಮನೆ ಸೇರಿದರೆ ನನ್ನ ಮಗಳೇ ಸೇರಿದಷ್ಟು ಸಂತೋಷ ನನಗೆ

ಹೂವಪ್ಪ - ಅದಿರಲವ್ವ ಮುಂದಿನ ಮಾತು ಆಡಿರಲ್ಲ

ಹಂಪವ್ವ - ಚವಡಕ್ಕ ಕೇಳವ್ವ

ಚವಡಕ್ಕ - ಯಾರ ಕೇಳಕೇನಾ ಏನವ್ವ ತಂಗಿ ಕೂತಕೋ (ಎಲ್ಲರೂ ಕೂಡ್ರುವರು) ಅಡಗಿ, ನೀರಿನ ಕೆಲಸ ಬರುತ್ತ ?

ಶೈಲಜ - ಹೂ ಕಲಿತೀದೇನಿ

ಮಹದೇವಪ್ಪ - ಹಾಡು-ಗೀಡು ಏನಾದರೂ ಬಂದ್ರೆ ಹಾಡಮ್ಮ

ಚವಡಕ್ಕ - ಹೌದವ್ವ ನಮ್ಮ ಮಹದೇವಣ್ಣ ಹಾಡಿನ ಮ್ಯಾಲೆ ಬಾಳ ಪ್ರೀತಿ, ಹಾಡವ್ವ ನಾಚಬಾರದು, ಹಾಡು. (ಶೈಲಜ ಕದ್ದು ಈಶ್ವರನನ್ನು ನೋಡುವಳು. ಈಶ್ವರನೂ ಕದ್ದು ಹಾಡುವಂತೆ ಸನ್ನೆ ಮಾಡುವನು)

॥ ಪದ ॥

ಬಯಸಿ ಬಂದ ಹೂವನು । ನಿಮ್ಮ ಮುಡಿಗೆ ಧರಿಸಿರಿ ಅರಳಿ ನಿಂತ
ಬಳ್ಳಿಯಿಂದ । ನನ್ನ ಸೆರೆಯ ಬಿಡಿಸಿರಿ ॥ ಬಿಸಿಲಿನಲ್ಲಿ ಬಾಡದಂತೆ ।
ಬಾಳ ಗುಡಿಯೊಳಿರಿಸಿರಿ । ಹಾಡಿನಲ್ಲಿ ರಾಗಬೆರೆಸಿ । ನೇವರಿಸಿರಿ ॥

(ಹಾಡಿನ ಮಧ್ಯೆ ಮಹದೇವಪ್ಪ ವೀರಣ್ಣನನ್ನು ಕರೆದು ಅವನಿಗೆ ಹಂಪಕ್ಕನನ್ನು ಕರೆಯುವಂತೆ ಸನ್ನೆ ಮಾಡುವನು. ಅವನು ಕರೆಯುವನು. ಆಗ ಚವಡಕ್ಕ, ಹಂಪಕ್ಕ ಎದ್ದು ಬರುವರು. ಈಶ್ವರ ಶೈಲಜೆಯ ಸಮೀಪ ಸರಿದು ಕೂಡ್ರುವನು. ಮಹದೇವಪ್ಪ ವೀರಂಣನಿಗೆ ಚಹ ತರುವಂತೆ ಸನ್ನೆ ಮಾಡುವನು. ಅವನು ತರಲು ರುದ್ರನನ್ನು ಕರೆದುಕೊಂಡು ಹೊರಗೆ ಹೋಗವನು. ಆ ಮೇಲೆ ಮಹದೇವಪ್ಪ ಚವಡಕ್ಕ ಹಂಪವ್ವನೊಂದಿಗೆ ಕನ್ನೆಯ ಬಗ್ಗೆ ಮಾತನಾಡ್ತಾ ನಿಲ್ಲುವರು. ಆಗ ಹಂಪವ್ವ ತಾಳೀ ಕೆಲಸ ಇಲ್ಲಿಯೇ ಆಗಬೇಕಂದು ಹೇಳುವಳು. ಇದೆಲ್ಲ ಮೂಕ ಭಾಷೆಯಲ್ಲಿಯೇ ಆಗುವದು. ಪದ ಮುಗಿದ ನಂತರ ಈಶ್ವರನನ್ನು ಬೆದರಿಸಿ ಎಬ್ಬಿಸುವನು. ಆಗ ವೀರಂಣ ಚಹಾ ತೆಗೆದುಕೊಂಡು ಬರುವನು)

ಹೂವಪ್ಪ - ಕನ್ಯಾರತ್ನವನ್ನಂತೂ ಎಲ್ಲರೂ ಒಪ್ಪಿದ ಹಾಗಾಯಿತಲ್ಲ. ಇನ್ನುಳಿದ ಮಾತು

ಆಡಿಬಿಟ್ಟರೆ ದಿನ ನಿಶ್ಚಯಿಸುವದೊಂದೇ ಬಾಕಿ

ಬಸವರಾಜ - ಹ.... ನಾನಷ್ಟು ಮಾತಾಡಬಹುದಲ್ಲ ? (ಮುಂದೆ ಬರುತ್ತ) ನೋಡ್ರಿ ಯಜಮಾನ್ರೆ ಅಳಿಯ ನಮ್ಮಲ್ಲಿಯೇ ಇರಬೇಕು. ನನ್ನ ನಂತರ ನನ್ನ ಸಮಸ್ತ ಸಂಪತ್ತೂ ಅವನದೇ. ಮಹದೇವಪ್ಪನವರು ತಮ್ಮ ಪರಿವಾರದೊಂದಿಗೆ ನಮ್ಮಲ್ಲಿಗೆ ಬಂದು ಮದುವೆ ಮಾಡಿಕೊಟ್ಟರೆ ಸಾಕು

ಹಂಪವ್ವ - ಹಾ.... ಆ ಒಂದು ಮಾತು ಮಾತ್ರ ಆಗದು. ನಮ್ಮ ಮನೆಯ ಮುಂದೆ ಹಂದರ ಹಾಕಿ ನನ್ನ ತಮ್ಮನ ಮದುವೆ ನಾವೇ ಮಾಡಿ ಕೊಡುತ್ತೇವೆ

ಬಸವರಾಜ - ಆ.... ಏನಂದ್ರೀ ?

ಹೂವಪ್ಪ - ತಡಿರಿ ಸ್ವಲ್ಪ... ಅಲ್ಲವ್ವ ಮತ್ತೆ ಖರ್ಚು ವೆಚ್ಚದ ವಿಷಯ ?

ಹಂಪವ್ವ - ಆ ಭಾರ ನಮಗಿರಲಿ ಅಂದ್ರ ನನ್ನ ಒಪ್ಪಿಗೆ

ಬಸವರಾಜ - ನೋಡಿ ನಮ್ಮ ಮನದ ಆಸೆ ಅಭಿಲಾಷೆಗಳನ್ನು ಸ್ವಲ್ಪ ಕೇಳಿ. ನನಗಿರುವ ಮಗಳು ಈಕೆ ಒಬ್ಬಳೇ. ಇವಳ ಮದುವೆಯ ಮಂಗಲ ಕಾರ್ಯ ಒಂದನ್ನು ಬಿಟ್ಟರೆ ಮತ್ತೇನಿದೆ ನನ್ನ ಮನೆಯಲ್ಲಿ. ಕಾರಣ ಮಗಳ ಮದುವೆಯನ್ನು ವೈಭವದಿಂದ ಮಾಡಿ ಬಂಧು ಬಾಂಧವರನ್ನೆಲ್ಲ ಕರೆತಂದು ಸತ್ಕರಿಸುವ ಬಯಕೆ ಇಟ್ಟುಕೊಂಡಿದ್ದೇನೆ

ಹಂಪವ್ವ - ನಿಮ್ಮ ಬಂಧು ಬಾಧವರನ್ನೆಲ್ಲ ಕರೆತಂದು ಸತ್ಕರಿಸಲು ನಮ್ಮ ಅಭ್ಯಂತರವೇನೂ ಇಲ್ಲ, ಮದುವೆಯನ್ನು ನಿಮ್ಮಲ್ಲಿ ಮಾಡಿ ಸತ್ಕರಿಸುವ ಬದಲು ಇಲ್ಲಿಯೇ ಕರೆತಂದು ಸತ್ಕರಿಸಬಹುದಲ್ಲ ?

ಬಸವರಾಜ - ಅದಕ್ಕೆಲ್ಲ ನಿಮಗ ವಿಪರೀತ ಖರ್ಚು ಬರುತ್ತದಲ್ಲ. ನಮ್ಮ ಜನರ ಭಾರ ನಿಮ್ಮ ಮೇಲೆ ಹೊರಿಸುವದೇಕೆ ?

ಮಹದೇವಪ್ಪ - ಕಳಸ ಹೊತ್ತ ಬಳಿಕ ಅದರ ಕೆಳಗಿನ ಕಂಬಳಿ ಭಾರವಲ್ಲ ಯಜಮಾನ್ರೆ

ಬಸವರಾಜ - ಆದರೂ..... ತಾವು

ಹಂಪವ್ವ - ಶ್ರೀಮಂತರಲ್ಲದಿದ್ದರೂ ಬಡವರಲ್ಲ. ನಿಮ್ಮವರಾಗಿ ಬಂದವರ ಆದರೋಪಚಾರದ ಭಾರ ನಮಗಿರಲಿ

ಹೂವಪ್ಪ - ಇರಲಿ ಅಂತೀಯಾ.... ಇರಲಿ.... ಹೂ ಅನ್ನರಿ ಏ ನೀವು.....

ಮಹದೇವಪ್ಪ - ಯಜಮಾನ್ರೆ ನಮ್ಮತ್ತೆ ತನ್ನ ಕೊನೆಗಾಲದಲ್ಲಿ ಈಶ್ವರನನ್ನು ನಮ್ಮ ಕೈಗಿರಿಸಿ ವಿದ್ಯೆ ಬುದ್ಧಿ ಕಲಿಸಿ ಮದುವೆ ಮಾಡಬೇಕು ಅಂತ ನಮ್ಮಿಂದ ವಚನ ಪಡೆದು ದೇಹಬಿಟ್ಟಳು. ಯಾಕ ಹೂವಣ್ಣಾ ?

ಚವಡಕ್ಕ - ಹೌದರಿ ಮುದುಕಿ ವಚನ ಪಡದೇ ಪ್ರಾಣಬಿಟ್ಟಳು

ಮಹದೇವಪ್ಪ - ಆದ್ದರಿಂದ ಮದುವೆಯನ್ನು ನಾವೇ ಮಾಡಿಕೊಡಬೇಕಾಗಿದೆ

ಶೈಲಜ - ಒಪ್ಪಿಕೊಂಡು ಬಿಡಪ್ಪ

ಬಸವರಾಜ - ಹೂ. ಆಗಲಿ ನಿಮ್ಮ ಮನಸ್ಸಿನಂತೆ ಮದುವೆ ನಿಮ್ಮಲ್ಲಿಯೇ ನಡೆಯಲಿ. ಆದರೊಂದು ಮಾತು. ಮದುವೆಗೆಂದು ಬಂದ ನಮ್ಮವರ ಮನಸ್ಸು ಯಾವ ಕಾರಣಕ್ಕೂ ನೊಂದುಕೊಳ್ಳಬಾರದು

ಹೂವಪ್ಪ - ಹೌದು ಅಂತಸ್ತಿಗೆ ತಕ್ಕಂತೆ ಆದರೋಪಚಾರದ ವ್ಯವಸ್ಥೆ ನಡೀಬೇಕಾಗತದ. ಯಾಕ ದೊಡ್ಡವರು ಶ್ರೀಮಂತರು

ಮಹದೇವಪ್ಪ - ಆಗಲಿ ಆ ಭಾರ ನಮಗಿರಲಿ

ಹೂವಪ್ಪ - ಇದೂ ಇರಲಿ ಅಂತೀರಾ ಇರಲಿ

ಮಹದೇವಪ್ಪ - ಮದುವೆ ದಿನ ನಿಶ್ಚಿಯಿಸಿ ನಿಮಗೆ ತಿಳಸ್ತೇವೆ

ಬಸವರಾಜ - ಆಗಲಿ ಸಂತೋಷ ನಾವಿನ್ನು ಬರತೀವಿ ವೀರಂಣ

ವೀರಣ್ಣ - ಅಡಗಿ ವ್ಯವಸ್ಥಾ ನಡದದ. ಈಗ ಸ್ವಲ್ಪ ಚಹಾ ತಗೊಂಡು ಹೋಗೂನು (ಚಹ ಕುಡಿದ ನಂತರ) ಯಜಮಾನ್ರೆ ಊಟದ ವೇಳೆಯವರೆಗೂ ತಾವು ನನ್ನ ರೂಮಿನಲ್ಲಿಯೇ ಇರಬಸ್ನಿ (ಹೋಗುವರು)

ಹಂಪವ್ವ - ಚವಡಕ್ಕ ನೀನುಳಿಯವ್ವಾ ಅಡಿಗಿ ಕೆಲಸಕ್ಕೆ ಒಬ್ಬಳೇ ಆಗತೀನಿ

ಹೂವಪ್ಪ - ಹೌದು ಚವಡೀ ಊಟಾ ಮಾಡಿಕೊಂಡು ಹೋಗೋನಲ್ಲ ?

ಚವಡಕ್ಕ - ಅವರನ್ನ ಕಳಿಸಿದಾಕಿನ್ನ ಬಂದ ಬಿಡ್ತೀನವ್ವ (ಹೋಗುವಳು)

ಹೂವಪ್ಪ - ಅಲ್ಲ...... ಹಂಪಕ್ಕ.ಮದುವೆಯ ಖರ್ಚ ವೆಚ್ಚವನ್ನೆಲ್ಲ ಅವರು ಹೊರುತ್ತಿದ್ದರು. ಪಾಪ ನೀವ್ಯಾಕ ಹೊತಗೊಂಡಿರಿ ಅಂತೀನಿ

ಈಶ್ವರ - ಅಹುದಕ್ಕ ಸುಮ್ಮನೇ ಖರ್ಚಿನ ಭಾರ ನೀವು ಹೊತ್ತು ಕೊಂಡಿರಿ. ನಿಮ್ಮ ಪ್ರಪಂಚವೇ ನಿಮಗೆ ಭಾರವಾಗಿರುವಾಗ ಈ ಮದುವೆಯ ಖರ್ಚಿಗೆ ಎಲ್ಲಿಂದ ತರುವಿರಿ ?

ಹಂಪವ್ವ - ಈಶ್ವರ ಮಾಡಬೇಕು ಅನ್ನೋ ಅಭಿಲಾಷೆ ಮನಸ್ಸಿನಲ್ಲಿದ್ದರೆ ದೇವರು ಏನಾದರೂ ಮಾರ್ಗ ತೋರಿಸುತ್ತಾನ. ನೀನು ನನ್ನ ಮಗಳನ್ನೇ ಮದುವಯಾಗಿದ್ದರೆ ಈ ಭಾರ ನಾವು ಹೊರುತ್ತಿರಲಿಲ್ಲವೇ ? ಮುಖ್ಯ ಅವ್ವನಿಗೆ ಕೊಟ್ಟ ವಚನ ಪಾಲಿಸಬೇಕು ನಾವು. ಇರಲಿ ನೀನು ಒಳಗೆ ಹೋಗಪ್ಪ

ಈಶ್ವರ - ವಚನ ಪಾಲನೆಗಾಗಿ ಸಾಲ ಮಾಡಬೇಕೇನಕ್ಕ. ಸಾಲ ಮಾಡಿದವರೆದೆಗೆ ನಾಟುವ ಶೂಲ

ಹೂವಪ್ಪ - ಅಹುದು ಮಹದೇವಪ್ಪ. ಸಾಲವನು ಕೊಂಬಾಗ ಹಾಲೋಗರುಂಡಂತೆ

ಸಾಲಿಗರು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ

ಮಹದೇವಪ್ಪ - ಇರಬಹುದು. ಆದರೇನು, ಬಡತನದಲ್ಲೇ ದುಡಿದು ಬದುಕುವ ರೈತನಿಗೆ ಈ ಸಾಲದ ಶೂಲ ಅನುಗಾಲವೂ ಎದೆಗೆ ನಾಟಿರುತ್ತದೆ. ನೋವೂ ಕೊಡುತ್ತದೆ. ಕೆಲ ದಿನದ ಮೇಲೆ ತಾನೇ ಮಾಯುತ್ತದೆ. ನನ್ನಪ್ಪ ಭೂಮಿ ತಾಯಿ, ಕರುಣೆಯ ದೃಷ್ಟಿಯಿಂದ ತನ್ನ ಪಕ್ಕಲ ಮಕ್ಕಳನ್ನು ಒಂದು ಸಲ ನೋಡಿದರೆ ಸಾಕು, ದೇಶದ ಜನಕ್ಕೆಲ್ಲ ಅನ್ನ ಹಾಕುವ ಬಲ ಬರುತ್ತದಪ್ಪ ಈ ರೈತನಿಗೆ. ಒಟ್ಟಿಗೇನು ಈಶ್ವರ ನಮಗಿರುವ ಭಯ ಸಾಲದ್ದಲ್ಲ. ನಿನ್ನ ತಾಯಿಗೆ ಕೊಟ್ಟ ಮಾತಿನದು

ಹೂವಪ್ಪ - ಅದಾಯಿತು. ಮದುವೆಯನ್ನಂತೂ ನೀವೇ ಮಾಡಿ ಕೊಡುವುದಾಗಿ ನಿಶ್ಚಯವಾಯಿತಲ್ಲ ? ಹಣಕ್ಕೇನು ಮಾಡ್ತೀರಿ. ಯಾಕಂದರೆ ಸ್ವಲ್ಪ ಖರ್ಚಿನಲ್ಲಿ ಆಗೋ ಮಾತಲ್ಲ ಇದು, ಇರಬಹುದು ನಿಮ್ಮಲ್ಲಿ ಹಜಾರ ಬಾರಾಸೆ ರೂಪಾಯಿ ಇರಬಹುದು, ಆದರೆ ಅಷ್ಟರಲ್ಲಿ ಆಗೋ ಮಾತಲ್ಲ. ಪ್ರತಿಯೊಂದು ತುಟ್ಟಿ ಅಲ್ಲದೇ ಶ್ರೀಮಂತರ ಸಂಬಂಧ ಶಕ್ತಿಮೀರಿ ಖರ್ಚು ಬರುತ್ತೆ. ಏನಿಲ್ಲ ಅಂದ್ರೂ ೫ - ೬ ಸಾವಿರಕ್ಕ ಕಡಿಮೆ ಆದೀತು ಅಂತ ನನಗನಿಸೋದಿಲ್ಲ

ಮಹದೇವಪ್ಪ - ನೋಡು ಹೂವಂಣ ನಿನ್ನ ನಂಬಿಯೇ ನಾನವರಿಗೆ ಆ ಮಾತು ಕೊಟ್ಟದ್ದು. ಹೊಲದ ಪೀಕು ಮನೆಗೆ ಬಂದ ತಕ್ಷಣ ಕೊಟ್ಟು ಬಿಡುತ್ತೇನೆ. ಕಡಿಮೆ ಬಿದ್ದ ಹಣವನ್ನೆಲ್ಲ ನೀನೇ ಕೊಟ್ಟುಬಿಡು

ಈಶ್ವರ - ಹೊಲದಿಂದ ಬಂದ ಪೀಕನ್ನೆಲ್ಲ ಮಾರಿಬಿಟ್ಟರೆ, ಮುಂದಿನ ವರುಷದವರೆಗೂ ನೀವೇನು ಮಾಡುತ್ತೀರಿ ಮಾವಾ

ಪಂಪಪ್ಪ - ನಮ್ಮ ಸುಖದುಃಖ ಕಟ್ಟಿಗೊಂಡು ನೀನೇನು ಮಾಡುತ್ತೀಯಪ್ಪ. ನೀನು ಸುಮ್ಮನಿರು. ನೋಡು ಹೂವಂಣ ನಿನ್ನ ಬಿಟ್ಟರೆ ನಮಗಾದರೂ ಯಾರು ಸಾಲ ಕೊಡ್ತಾರೆ ?

ಹೂವಪ್ಪ - ಅದೆಲ್ಲ ನಿಜ, ಹಂಪಪ್ಪ ಇಷ್ಟು ದಿವ್ಸ ಅದೇನ ಬಂದ್ರೂ ಕೊಡತೊಗೊಳ್ಳೋ ವ್ಯವಹಾರ ನನ್ನಲ್ಲೇ ಮಾಡ್ತಾ ಬಂದೀರಾ. ಕೊಟ್ಟರೆ ನಾನು ಕೊಡಬೇಕು.... ಆದರೆ ಅಷ್ಟು ಹಣ ಸದ್ಯ ನನ್ನಲ್ಲಿರಬೇಕಲ್ಲ ?

ಮಹದೇವಪ್ಪ - ಇಲ್ಲಿಯುವರೆಗೂ ತಂದ ಮದುವೆಯ ಮಾತನ್ನು ಅಕ್ಷತೆಯವರೆಗೂ ಒಯ್ದು ಮುಟ್ಟಿಸಿ ವಚನದ ಸೆರೆಯಿಂದ ನಮ್ಮನ್ನು ಪಾರು ಮಾಡು ಹೂವಣ್ಣಾ

ಹಂಪಪ್ಪ - ಹೌದಣ್ಣಾ

ಹೂವಪ್ಪ - ಏನಾದರೂ ಮಾಡಲಿಕ್ಕೆ, ನೂರಲ್ಲ ಇನ್ನೂರಲ್ಲ. ಕಡಿಮೆ ಕಡಿಮೆ ಅಂದ್ರೂ ಮೂರು ಸಾವಿರ ಬೇಕಾದೀತು. ನಿನ್ನ ಹೊಲದ ಪೀಕು ಬಂದು ಅದನ್ನು

ಮಾರಿದ ನಂತರ ನೀನು ಕೊಡಬೇಕು. ಛೇ ಇದೆಲ್ಲ ಬರೀ ವಿಶ್ವಾಸದ ಮೇಲೆ ಆಗೋ ಮಾತಲ್ಲ. ಹ..... ಏನಾದ್ರೂ ಆಧಾರ ಪತ್ರ ಆಗಬೇಕು, ಅಂದ್ರೆ ಸಾಧ್ಯ

ಹಂಪವ್ವ - ಆಧಾರ ಪತ್ರ ??

ಮಹದೇವಪ್ಪ - ಅಹುದು. ಹೊಲಾನೋ ಇಲ್ಲ ಮನೀನೋ ಬರದ ಕೊಡಬೇಕು

ಹೂವಪ್ಪ - ಹೌದು, ಹೌದು ಒಂದೇ ಅಲ್ಲ ಹೊಲಾ-ಮನೆ ಎರಡನ್ನೂ ಬರೆದುಕೊಡಬೇಕು

ಹಂಪವ್ವ - ಯಾಕೆ ಹೂವಂಣ್ಣ ನಮ್ಮ ಮಾತಿನ ಮೇಲೆ ವಿಶ್ವಾಸ ಸಾಲದೆ ?

ಹೂವಪ್ಪ - ಬರೀ ವಿಶ್ವಾಸಕ್ಕೆ ಕಟ್ಟುಬಿದ್ದೇ ಹಣಕೊಡೋ ಕಾಲಾ ಇದಲ್ಲ ಹಂಪವ್ವ. ಅದೇನಿದ್ರೂ ನೀವು ಹೊಲಾ-ಮನ ಬರದುಕೊಟ್ರೆ ನಾನು ದುಡ್ಡಿನ ವ್ಯವಸ್ಥೆ ಮಾಡ್ತೀನಿ. ಇಲ್ಲ ನೀವು ಬೇರೆ ಕಡೆ ಹುಟ್ಟಿಸಿಕೊಳ್ಳಬಹುದು. (ಹೊರಡಹತ್ತುವನು)

ಮಹದೇವಪ್ಪ - (ತಡೆದು) ಹೂವಂಣ ಹೂವಂಣ ಆಗಲಿ ನಾನು ಬರೆದು ಕೊಡ್ತೀನಿ

ಹಂಪವ್ವ - ಏ.... ನಂದ್ರೀ ?

ಮಹದೇವಪ್ಪ - ನೀನು ಸುಮ್ಮನಿರು ಹಂಪಿ. ಆಗಲಿ ಹೂವಂಣ ಒಪ್ಪಿಗೆ

ಹೂವಪ್ಪ - ನೋಡು ಹಂಪವ್ವನ ಒಪ್ಪಿಗಿ ಇದ್ದಂಗಿಲ್ಲ ಒಪ್ಪಸತೀಯಾ ? ಆಗಲಿ ಹೊಲದ ಪೀಕು ಬಂದ ಕೂಡ್ಲೇ ದುಡ್ಡು ತಂದು ಮುಟ್ಟಿಸಬೇಕು, ಯಾವದೇ ಕಾರಣದಿಂದ ಆಗಲಿಲ್ಲ ಅಂದರ ಹೊಲಾ-ಮನಿ ನನ್ನ ಖಬ್ಜಕ್ಕಾ ತಗೊಳ್ಳವ್ಹಾ-ಒಪ್ಪಿಗೇನಾ?

ಮಹದೇವಪ್ಪ - ಆಗಲಿ ಒಪ್ಪಿಗೆ

ಹೂವಪ್ಪ - ಹಾಗಿದ್ದರೆ ಸಬ್ ರಿಜಿಸ್ಟರ್ ಸಮಕ್ಷಮ ಕಾಗದಪತ್ರ ಕೆಲಸ ಮುಗದ ಕೂಡ್ಲೇ ದುಡ್ಡು ಕೊಡತೀನಿ. ನಾನಿನ್ನ ಬರಲಾ ... (ಜ್ಞಾಪಿಸಿ) ಹ - ಮಹದೇವಪ್ಪ ಕಾಗದ ಖರ್ಚು ನಿಂದಪ್ಪ, ಮತ್ತ ನೆನಪಿರಲಿ ಬರ್ತೀನಿ (ಹೋಗುವನು)

ಹಂಪವ್ವ - ನೀವು ಈ ಕರಾರಿಗೆ ಒಪ್ಪಬಾರದಿತ್ತು

ಮಹದೇವಪ್ಪ - ಒಪ್ಪದಿದ್ದರೆ ಹಣ ಎಲ್ಲಿ ಸಿಗುತ್ತಿತ್ತು, ಹಣ ಇದ್ರೆ ತಾನೇ ಮದುವೆ ಮಾಡೋದು

ಹಂಪವ್ವ - ಮದುವೆ ಆಗದಿದ್ರೆ ಹೋಗಲಿ. ನಮ್ಮ ಹೊಲಾ-ಮನಿ ನಮ್ಮವಾಗಿ ಇರತಿದ್ದವು

ಮಹದೇವಪ್ಪ - ಈಗಲಾದರೂ ಅವೆಲ್ಲಿ ಕೈಬಿಟ್ಟು ಹೋಗ್ತಾವು. ಹಂಪಿ ನನ್ನ ಬೆವರು ಹರಿಸಿ ಗಳಿಸಿ ಭೂಮಿ, ಮೈಹಂಣು ಮಾಡಿ ಕಟ್ಟಿಸಿದ ಮನೆ ಯಂದಾದ್ರೂ ಕೈಬಿಟ್ಟು ಹೋಗ್ತಾವೇನೆ. ನ್ಯಾಯ ಮಾರ್ಗದಲ್ಲಿ ಗಳಿಸಿದ ಆಸ್ತಿ ಎಂದೂ ಕೈಬಿಟ್ಟು ಹೋಗೋದಿಲ್ಲ ಹಂಪೀ ಎಂದೂ ಕೈಬಿಟ್ಟು ಹೋಗೋದಿಲ್ಲ

ಹಂಪವ್ವ - ಅದೇನಿದ್ರೂ ನನಗ್ಯಾಕೋ ಭಯ, ನನ್ನ ತಮ್ಮನಿಗಾಗಿ ನನ್ನ ಸಲುವಾಗಿ ನನ್ನ ತಾಯಿಗೆ ಕೊಟ್ಟ ಮಾತು ನಡೆಸುವುದಕ್ಕಾಗಿ ನೀವಿಷ್ಟು ತ್ಯಾಗಮಾಡಬೇಕೆ ? ಇದರಿಂದ ನಾಳೆ ನಿಮ್ಮ ಮಕ್ಕಳ ಬಾಯಿಗೆ ಮಣ್ಣು ಬಿದ್ರೆ ?

ಮಹದೇವಪ್ಪ - ಹುಚ್ಚೀ ಅನ್ಯಾಯ ಮಾಡಿದ್ದರೆ ಮಾತ್ರ ನನ್ನ ಮಕ್ಕಳ ಬಾಯಲ್ಲಿ ಮಣ್ಣು ಬೀಳತ್ತೆ. ಪುಣ್ಯದ ಅಂಶವಿದ್ದರೆ ಅವರಿಗೆ ಚಿನ್ನ ದೊರೆಯುತ್ತೆ, ನೋಡ ಹಂಪಿ ನನ್ನ ಕೈಹಿಡಿದು ಈ ಮನೆ ಬೆಳಗಿದ ನನ್ನ ಬಾಳ ಸಂಗಾತಿಯಾದ ನಿನ್ನ ಈ ಒಂದು ಸಂಣ ಆಶೆಯನ್ನು ನೆರವೇರಿಸದಿದ್ದರೆ ಗಂಡುತನಕ್ಕೇನು ಬೆಲೆ ಉಳಿಯಿತು. ಇರಲಿ ಬಾರ (ಒಳಗೆ ಹೋಗುವನು)

ಈಶ್ವರ - ಅಕ್ಕ ಬೇಡಕ್ಕ ನನ್ನ ಮದುವೆ ಮಾಡುವ ಹಟಕ್ಕೆ ಬಿದ್ದು ನೀವಿಷ್ಟು ಸಾಲದ ಭಾರ ಹೊರುವದು ಬೇಡ. ಮಾವ ಮೊದಲೇ ಅಶಕ್ತರಾಗಿದ್ದಾರೆ. ನಿಮ್ಮ ಸಂಸಾರವೂ ಸಣ್ಣದಿಲ್ಲ. ನಾನೂ ಕೂಡಾ ಇನ್ನು ಮೇಲೆ ಪರಾಧೀನ. ನಾಳೇನಾದರೂ ನಿಮಗೆ ಕಷ್ಟಬಂದರೆ ಆ ಸಂಕಟ ಸಮಯದಲ್ಲಿ ಆಗುವದು ಯಾರಕ್ಕ

ಹಂಪವ್ವ - ಧರ್ಮದಿಂದ ನಡೆದವರನ್ನು ದೇವರ ಕರುಣೆ ಸದಾ ಕಾಯುತ್ತದೆ. ಈಶ್ವರ ನೀನೇನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಿನ್ನ ಮದುವೆಯೊಂದು ಸುರಕ್ಷಿತ ಮುಗಿದುಬಿಟ್ಟರೆ ನನ್ನ ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ಮುಖ್ಯ ನಿನ್ನ ಕೈಹಿಡಿಯಲಿರುವ ಹುಡುಗಿ ನನ್ನ ಮನಸ್ಸಿಗೆ ಬಂದಿದ್ದಾಳೆ. ನಾಳೆ ಅವಳಿಂದ ನಿನಗಷ್ಟೇ ಅಲ್ಲ ನನ್ನ ಮಕ್ಕಳಿಗೂ ಸುಖ ತಟ್ಟೀತು ಎಂಬ ನಂಬಿಕೆ ನನಗಿದೆ. ಅಂತಹ ಸಾತ್ವಿಕ ತೇಜಸ್ಸಿದೆ ಆ ನನ್ನತಾಯಿ ಮುಖದಲ್ಲಿ. ನಡೆಯಪ್ಪ

## ಸನ್ನಿವೇಶ ೪

### ಬೀದಿ

ವೀರಣ್ಣ - ಈಶ್ವರನ ಮದುವೆ ನಿಶ್ಚಿತ ಪಡಿಸಿ ನಮ್ಮ ಹಣ ನಾವು ಉಳಿಸಿಕೊಳ್ಳಬೇಕಾದರೆ ನಮ್ಮ ಬುದ್ಧಿ ಸಾಕಷ್ಟು ಖರ್ಚಾಯಿತು. ನನ್ನ ಈ ಲೋಕಕ್ಕೆ ತಂದು ಈ ಲೋಕ ಬಿಟ್ಟು ಹೋದ ಓ ನನ್ನಪ್ಪನೇ ? ನೀನು ಈ ನಿನ್ನ ಮಗನಿಗೆ ಏನೊಂದೂ ಆಸ್ತಿಯನ್ನು ಬಿಟ್ಟು ಹೋಗದಿದ್ದರೂ ಬುದ್ಧಿ ಮಾತ್ರ ಸಾಕಷ್ಟು ಕೊಟ್ಟು ಹೋದಿ. ಆ ಬುದ್ಧಿಯ ಬಂಡವಾಳದಿಂದಲೇ ನನ್ನ ಕಾರ್ಯಸಿದ್ಧಿ ನಡೆದೈತಿ. ಇರದಿದ್ದರೆ ಚಿಕ್ಕಂದಿನಲ್ಲಿಯೇ ಪರದೇಶಿಯಾದ ಈ ವೀರಣ ಅವರಿವರ ಮನೆಯಲ್ಲಿ ಉಂಡು ಅವರಿವರಿಂದ ಬುದ್ಧಿ ಕಲಿತು ಸಣ ವಯಸ್ಸಿನಲ್ಲಿಯೇ ಸಹಕಾರಿ ಸಂಘದ ಸೆಕ್ರೆಟರಿಯಾಗಿ ಹತ್ತು ಜನರಿಗೆ ಉಪಕಾರ ಮಾಡಿ ಉತ್ತಮ ಹುಡುಗ ಅನ್ನಿಸಿಕೊಂಡು ಹತ್ತಿರದ ಮನೆ ಹುಡುಗಿಯ ಮನ ಪಲಿಸಿಕೊಳ್ಳುವ ಶಕ್ತಿ ನನಗೆಲ್ಲಿ ಬರತ್ತಿತ್ತು. ಅಂತೂ ಮನುಷ್ಯ ಮಾಡಬಯಸಿದ ಸಾಹಸಕ್ಕೆ ದೇವರ ದಯ ಒಂದು ಬೇಕೇಬೇಕು

|| ಪದ ||

ಯಾವದೇ ಒಂದು ಕೆಲಸ ಮಾಡಲು ದೇವರ ದಯ ಬೇಕು । ಅಂಣ ದೇವರ ದಯಬೇಕು । ದುಷ್ಟರ ಕಂಡರೆ ನಾವು ಸುಮ್ಮನೆ ದೂರ ಇರಬೇಕು || ತುಂಬಿದ ಮನೆಯ । ನಂದಗೋಕುಲ ಎಂಬುದ ತಿಳೀಬೇಕು । ನಂಬಿ ನಡೆದು ಶ್ರೀ ಶಂಭುಲಿಂಗನ ಪಾದವ ನೆನೆಬೇಕು । ಅಂಣ ಪಾದವ ನೆನೆಬೇಕು ತಂದೆ ತಾಯಿ ಗುರು ಬಂಧುಬಳಗ । ಭಕ್ತಿಯ ನೀಡಬೇಕು । ಸತ್ಯ ಧರ್ಮದಿ ನಿತ್ಯ ನಡೆದು ನಾವು ಮುಕ್ತಿಯು ಪಡಿಬೇಕು । ಅಂಣ ಮುಕ್ತಿಯು ಪಡೀಬೇಕು || ಆಗಲೆ ನಾಗಸ್ವರ ಕೇಳಪತ್ತಿತಲ್ಲ ಹೋಗೋನು (ಹೊರಡಪತ್ತುವನು)

ಹೂವಪ್ಪ - ಮದುವೆ ಕೆಲಸ ಕೈಬಿಟ್ಟು ಎದಿ ಏರಿಸಿ ಪದ ಹಾಡತಾ ನಿಂತೀಯಲ್ಲೋ ಏ ಅವಿವೇಕಿ

ವೀರಣ್ಣ - ಅಲ್ರಿ ಬಡವರಿಗೆ ಎದಿ ಉಳದೈತಿ ಅಂತಿರೇನು ? ಬಿಳಿ ಟೋಪಿಯವರ

ರಾಜ್ಯದಲ್ಲಿ ಬಡವರು ಎದಿ ಕಳಕೊಂಡ ಎತ್ತಾಗ್ಯಾರೇ ಅನ್ನೋದು ನಿಮಗೇನ್ರಿ ಗೊತ್ತು

ಹೂವಪ್ಪ - ಯಾಕ ಎದಿಕಳಕೊಳ್ಳಾಕ ಬಡವರಿಗೇನು ಬಂದದೋ ಅಂಥ ಕಷ್ಟ ?

ವೀರಣ್ಣ - ದುಡಿಸಿಕೊಳ್ಳೋ ಸಾವಕಾರ, ನಡಿಸೋಕೊಳ್ಳೋ ಸರಕಾರ ಎರಡೂ ಕೂಡಿ ಕತ್ತ ಹಿಚಕಾಕ ಹತ್ತಿಂದ ಎದಿ ಎಲ್ಲಿ ಉಳಿತೈತ್ರಿ. ಈಗ ಬಡವರ ಪಾಲಿಗೆ ಉಳಿದಿರೋದು ವಿಧಿ ಒಂದೇ

ಹೂವಪ್ಪ - ತಮ್ಮ ಬಡವ ಅನ್ನೋ ಮಾತಿಗೆ ಅರ್ಥ ಏನದೆ ಗೊತ್ತೈನೋ ನಿನಗೆ ?

ವೀರಣ್ಣ - ಪಾಪಿಷ್ಟ ಅಂತ

ಹೂವಪ್ಪ - ಹ ಮತ್ತ ನೀನೇನೋ ಅನ್ನೋದಿದ್ರ ಸರಕಾರ ಒಂದಕ್ಕ ಅನಕೋ, ಸಾವಕಾರಿಗೆ ಮಾತ್ರ ಅನ್ನಬ್ಯಾಡ. ಯಾಕಂದ್ರೆ ಸರಕಾರ ಏರಸ್ತಾ ಬಂದಿರೋ ಟ್ಯಾಕ್ಸ ನೋಡಿದರೆ ಈ ದೇಶದ ಜನ ಬದುಕೋದೆ ಕಷ್ಟ ಅನಿಸುತ್ತ. ಕೂತ್ರೂ ಟ್ಯಾಕ್ಸು ನಿಂತ್ರೂ ಟ್ಯಾಕ್ಸ ಯಾಕಪ್ಪ ಇಷ್ಟೆಲ್ಲ ?

ವೀರಣ್ಣ - ಮಾಡಿದರಲ್ಲ ಯೋಜನಾ ಅಂತ ಯೋಜನೆಗಳ ಒಂದೊಂದು ಹಂತ ಮುಗಿಯುದವರಲ್ಲಿ ಬಡವರ ಅಂತ್ಯವೇ ಆಗಿ ಹೋಗುತ್ತೆ, ಅಲ್ಲ ಯಜಮಾನ್ರೆ ದೇಶದ ಭವಿಷ್ಯ ಆಶಾದಾಯಕ ಐತಿ ಅಂತೀರೇನು ?

ಹೂವಪ್ಪ - ನನಗೇನು ಕಾಣಸೂದಿಲ್ಲಪ. ನೋಡು ತಮ್ಮ ಪ್ರಾಮಾಣಿಕತೆಯಿಂದ ನಡೆಯೋ ಜನಾನೇಯಿಲ್ಲ

ವೀರಣ್ಣ - ಜನದ ಮಾತು ಬಿಡ್ರಿ ಮದಲ ನಿಮ್ಮದು ಹೇಳ್ರಿ

ಹೂವಪ್ಪ - ನಮ್ಮದೇನೋ, ನಾವೇನು ಮಾಡಿವಿ ?

ವೀರಣ್ಣ - ಇನ್ನೂ ಏನ ಮಾಡಬೇಕಂತಿರೀ ? ಸಂಘದ ಕಮಿಟಿಯಲ್ಲಿ ಮೆಂಬರಾಗಿ ಕೆಲಸ ಮಾಡ್ತಾ ಇರೋ ನೀವು ಸಂಘದ ಹಣಾನ ಅದೆಷ್ಟು ದಿವ್ಸದಿಂದ ನಿಮ್ಮ ಸ್ವಂತ ವ್ಯವಹಾರಕ್ಕೆ ಬಳಸಿಕೊಳತಾ ಬಂದೀರಿ. ಸರಕಾರದವರು ಸಂಘದ ಮುಖಾಂತರ ಬಡವರಿಗೆ ಹಂಚರೀ ಅಂತ ಬಿಳಿಜೋಳಾನ ಕೊಟ್ರ ನಿಮ್ಮ ಮನೆಗೆ ಸಾಗಿಸಿ ನಿಮ್ಮಲ್ಲಿ ಕೂಳಿತಾ ಬಿದ್ದಿದ್ದ ಹತ್ತು ವರ್ಷದ ಹಗೇದನ್ನ ಹಳೇಜೋಳ ಹಂಚಾಕ ಹೇಳಿದಿರಿ. ರೈತರಿಗೆ ಮಂಜೂರಾದ ಸಾಲದ ಅರ್ಧ ಹಣಾನ ನೀವೇ ತಿಂದಬಿಡ್ತಿರಾ. ಮೊನ್ನೆ ಅವರಾದಿ ವೀರಪ್ಪಗ ಬಾವಿಗಂತ ಸರಕಾರದವರು ಕೊಟ್ಟ ಹೊಸಾ ಪಂಪಸಟ್ಟಿನ ನಿಮ್ಮ ಬಾವಿಗೆ ಹಚ್ಚಗೊಂಡು ನಿಮ್ಮ ಹಳೇ ಪಂಪಸಟ್ಟಿನ ಅವರಿಗೆ ಕೊಟ್ರಿ. ಅದೂ ಹೋಗಲಿರಿ ಸಂಘದಲ್ಲಿ ಹಾಸಲಿಕ್ಕೆ ಅಂತ ತರಿಸಿದ ಭವಾನಿ ಕಂಪನಿ ಹೊಸಾ ಜಮಖಾನ ನಿಮ್ಮ ಮನೆಗೆ ಒಯ್ದು ನಿಮ್ಮ ಚವಡಕ್ಕನ ಹಳೇ ಗುಡಾರ ತಂದ ಸಂಘದ ಹಾಲಿನಲ್ಲಿ

ಹಾಸಿದಿರೆಪ. ಇದಕ್ಕಿಂತ ಇನ್ನೂ ಏನ ಅನ್ಯಾಯ ಮಾಡಬೇಕಂತೀರಿ. ಇನ್ನು ನಿಮ್ಮ ಖಾಸಗಿ ವ್ಯವಹಾರವನಂತೂ ಹೇಳೋದೆ ಬ್ಯಾಡ. ಬಡ ರೈತರಿಗೆಲ್ಲ ಬಡ್ಡಿ ಸಾಲಕೊಟ್ಟು ಒಂದಕ್ಕ ಹನ್ನೊಂದು ಬರದ ಬಡವರ ಆದೆಷ್ಟು ಭೂಮಿನ ನಿಮ್ಮ ಹೆಸರಿಗೆ ಬರಿಸಿಕೊಂಡೀರಿ... ನೋಡ್ರೆಪ ಇನ್ನಾದರೂ ಪರೋಪಕಾರದ ಕೆಲಸ ಮಾಡಿದಿರಿ... ಉಳಿತಿರಿ. ಇಂದಿಲ್ಲ ನಾಳೆ ನನ್ನ ಕೈಲೇ ಗಳಂ ಅಂತೀರಿ ನಡಿರಿ ಅಕ್ಷತೆ ಟಾಯಂ ಆಯಿತು ಹೋಗೋನು. (ಹೋಗುವರು)

## ಸನ್ನಿವೇಶ ೫

### ಮನೆ

(ಲಗ್ನದ ಸಮಾರಂಭ. ಒಳಗೆ ಜಗಳದ ಸದ್ದು ಕೇಳತಾ ಇದೆ)

ಹೂವಪ್ಪ - ಹೇಳಿದಿನ್ರಿ ನಾನು ಮೊದಲ ಹೇಳಿದೆ

ಮಹದೇವಪ್ಪ - ಯಜಮಾನ್ರೆ ನನ ಮಾತನಾದ್ರೂ ಕೇಳ್ರಿ (ಎಲ್ಲರೂ ಹೊರಗೆ ಬರುವರು)

ವೀರಣ್ಣ - (ಬರುತ್ತ) ಹೀಗೆ ಮಾಡೋದು ಒಳ್ಳೇದಲ್ರಿ..

ಬಸವರಾಜ - ಯಾಕ ಒಳ್ಳೇದಲ್ಲರಿ ಯಾಕ ಒಳ್ಳೇದಲ್ಲ. ನನ್ನ ಮಾತಿಗೆ ಬೆಲೆ ಇದ್ದರಲ್ಲವೇ ನಾನು ಮಾತನಾಡೋದು. ನನ್ನ ಒಬ್ಬಳೇ ಮಗಳ ಮದುವೆಯನ್ನು ನನ್ನ ಮನೆಯಲ್ಲಿ ವೈಭವದಿಂದ ಮಾಡುವೆನೆಂದು ನಾನೆಷ್ಟು ಹೇಳಿದರೂ ಕೇಳದೇ ನೀವು ಮಾಡುವದಾಗಿ ಹಟ ಹಿಡಿದು ನನ್ನ ಮಾನ ಕಳೆದಿರಿ, ಮಕ್ಕಳಾಟವಲ್ಲ ಮದುವೆ ... ಹ.... ಯಾರಿಗಂದು ಏನು ಮಾಡುವದು ಉಳ್ಳವರ ಮಾನ ಹಳ್ಳಿಯಲ್ಲಿ ಹೋಯಿತು ಎನ್ನುವಂತೆ ಈ ಬಡವರ ಸಂಬಂಧ ಬೆಳೆಸಿದ್ದು ನನ್ನದೇ ಅವಿವೇಕ

ವೀರಣ್ಣ - ಈಗ ನಿಮಗೇನ ಅವಮಾನವಾಯಿತು ಅಂತ ನೀವಿಷ್ಟು ಘಟ್ಟಿಸಿ ಮಾತನಾಡತೀರಿ ಬಸವರಾಜಪ್ಪ ?

ಬಸವರಾಜ - ಇನ್ನೆಂಥ ಅವಮಾನವಾಗಬೇಕು, ಬಂದವರಿಗೊಂದು ಉಪಚಾರವೇ ಊಟದ ವ್ಯವಸ್ಥೆಯೇ ? ಸಾರಿಗೆ ಸಂಪರ್ಕದ ಅನುಕೂಲವೇ ? ಏನಿದೆ ಹೇಳ್ರಿ ಇಲ್ಲಿ?

ಹೂವಪ್ಪ - ಏನೈತಿರೆಪ ಎಲ್ಲಾ ಅನಾನೂಕೂಲ. ಒಂದು ಖಾಸಗಿ ಬಸ್ಸು ಬಾಡಿಗಿ ತರೋನೂ ಅಂತ ನಾನು ಕೈಯಾಗ ಕಡ್ಡಿ ಕೊಟ್ಟು ಹೇಳಿದೆ, ಯಾರ ಕೇಳ್ತಾರೀ ನನ್ನ ಮಾತ್ನ

ಮಹದೇವಪ್ಪ - ಸಮಾಧಾನ ತಂದುಕೊಳ್ಳಬೇಕು. ತಾವು ತಿಳಿದವರು ಲೋಕಾನುಭವವುಳ್ಳವರು. ಮೊದಲೇ ತಿಳಿಸಿದಂತೆ ಇದು ಬಡವರ ಮನೆಯ ಮದುವೆ. ಹಳ್ಳಿಯಲ್ಲಿ ನಡೆದದ್ದು ಅಂದ ಬಳಿಕ ಅಲ್ಲೊಂದು ಹೆಚ್ಚು ಇಲ್ಲೊಂದು ಕಡಿಮೆ ಆಗಬಹುದು

ಹಂಪಪ್ಪ - ಅಹುದಣ್ಣ ಪಟ್ಟಣದಲ್ಲಿರುವಂತೆ ಎಲ್ಲ ಬಗೆಯ ಅನುಕೂಲತೆ ಇಲ್ಲಿ ಹೇಗ

ದೊರೆತೀತು. ತಮ್ಮ ದೊಡ್ಡ ಗುಣಕ್ಕೆ ನಾವು ಮಾಡಿದ ಮದುವೆ ಸಣ್ಣದಾಗಿ ಕಾಣಬಾರದಾಗಿತ್ತು ನಮ್ಮ ದುರದೃಷ್ಟ

ವೀರಣ್ಣ - ನಿಮ್ಮ ಅವಸರಕ್ಕಾಗಿ ಅಲ್ಲವೇ ಮದುವೆಯನ್ನು ನಾವಿಷ್ಟು ಗಡಿಬಿಡಿಯಲ್ಲಿ ಮಾಡಿದ್ದು. ಆದರೂ ನೀವಿಷ್ಟು ದುಡುಕಿ ಆಡಲಿಕ್ಕೆ ನಿಮಗೆ ಯಾವದು ಕಡಿಮೆ ಆಗಿದೆ ಹೇಳಿ ?

ಬಸವರಾಜ - ಕಡಿಮೆ ? ಇನ್ನೇನು ಕಡಿಮೆ ಆಗಬೇಕು, ಮದುವೆಗೆಂದು ಬಂದ ಜನ ಮೂರು ಮೈಲು ನಡೆದುಕೊಂಡೇ ಬಂದರು. ಬಾಗಿಲಕೋಟೆಯ ಬಂಗ್ಲೇದ ಬಸವರಾಜಪ್ಪನ ಮಗಳ ಮದುವೆ ಅಂದ್ರೇನು .... ?

ಹೂವಪ್ಪ - ಮದುವೆಗೆಂದು ಬಂದ ಜನ ಮೂರು ಮೈಲು ನಡೆದುಕೊಂಡು ಬರೋದೆಂದರೇನು ?

ಚವಡಕ್ಕ - ಹೆಂಣು ಶ್ರೀಮಂತರದಾದರೂ ಕೊಟ್ಟದ್ದು ಬಡವರ ಮನಿಗೆ ಅನ್ನೋದು ಮರೆತುಬಿಟ್ಟರೇನು ? ನಿಮ್ಮ ಮಗಳು ಈಶ್ವರನ ಕೈ ಹಿಡಿದಿದ್ದು ಮಡದಿಯಾಗಿ ಬಾಳಲಕ್ಕೋ, ಮಹಾರಾಣಿಯಾಗಿ ಆಳಲಿಕ್ಕೋ ?

ಬಸವರಾಜ - ಮಹಾರಾಣಿಯಾಗಿ ಆಳಲಿಕ್ಕೆ

ಹೂವಪ್ಪ - ಅಹುದು ಬಸವರಾಜಪ್ಪನವರ ಮನೆಯಲ್ಲಿ ಕೊಳೆಯುತ್ತ ಬಿದ್ದ ಸಂಪತ್ತು ಯಾವ ರಾಜಮನೆತನಕ್ಕೂ ಕಡಿಮೆಯಲ್ಲ. ಮೂರು ಅಡತಿ ಅಂಗಡಿ, ಎರಡು ಕಿರಾಣಿ ಅಂಗಡಿ, ಪೆಟ್ರೋಲ ಪಂಪು, ಹೊಲವತ್ತಿ ಬ್ಯಾಂಕಿನ ಪ್ರೆಸಿಡೆಂಟರು, ಬಂಗ್ಲೆ ಎಂಥಾದ್ದು... ಮೊನ್ನೆ ಲಗ್ನದ ಅಕ್ಕಿ ಗಂಟು ಒಯ್ದಾಗ ಸ್ವತಹ ನೋಡಿದ್ದು ಕಾಲಿಟ್ಟರ ಜಾಸತದ ಅನ್ನೂವಂಥ ನೆಲಗಟ್ಟು. ಮನೆಯ ಮುಂದೆ ಬೆಳೆಸಿದ ಹೂವಿನ ತೋಟ. ಅದರ ಉಸ್ತುವಾರಿಗೆ ಹತ್ತೆಂಟು ಆಳು. ಇಷ್ಟಲ್ಲದೇ ಒಂದು ಸಿನೇಮಾ ಥೇಟರ ಬೇರೆ ಕಟ್ಟಿಸುವ ವಿಚಾರದಲ್ಲಿದ್ದಾರೆ. ಪ್ಲ್ಯಾನು ಎಸ್ಟಿಮೆಂಟ ಕೂಡಾ ನಾನೋಡಿ ಬಂದೀನಿ. ದೊಡ್ಡ ಶ್ರೀಮಂತರ ದೊಡ್ಡ ವಹಿವಾಟು

ಬಸವರಾಜ - ಅಂದ ಬಳಿಕ ನನ್ನ ಮಗಳು ಮಹಾರಾಣಿ ಅಲ್ಲದೇ ಮತ್ತೇನು ?

ಚವಡಕ್ಕ - ಇಷ್ಟಿದ್ದವರು ಹುಡುಕಿಕೊಂಡು ಹೋಗಬೇಕಿತ್ತು ರಾಜ ಕುಮಾರನಿದ್ದ ಸ್ಥಳವನ್ನು. ನಮ್ಮನ್ನೆಲ್ಲ ಹೀಯಾಳಿಸಿ ಮಾತಾಡೋ ನೀವು ಹಳ್ಳಿಗೆ ಬರಬಾರದಿತ್ತು. ಬಂದು ನಮ್ಮ ಹಂಪವ್ವನ ಕಾಲು ಹಿಡಿದು ಆ ನಿಮ್ಮ ಕೋತಿ ಮುಖದ ಹುಡುಗಿನ ನಮ್ಮ ಈಶ್ವರನ ಕೊರಳಿಗೆ ಕಟ್ಟಬಾರದಿತ್ತು

ಹಂಪವ್ವ - ಚವಡಕ್ಕ ......

ಚವಡಕ್ಕ - ನೀನು ಸುಮ್ಮನಿರವ್ವ. ಬಡವರಾದರೇನು ನೀವು ಮಾನ ಹೀನರಲ್ಲ. ನೀವಾಗಿ ಅವರ ಮನೆಗೆ ಮಗಳ ಕೊಡ್ರಿ ಅಂತ ಹೋಗಿರಲಿಲ್ಲ. ಶ್ರೀಮಂತರು ತಮ್ಮ

ದರ್ಪ ತಮ್ಮ ಮನೆಯಲ್ಲಿ ತೋರಿಸಬೇಕು. ಅದನ್ನು ಬಿಟ್ಟು ನಿಮ್ಮ ಯೋಗ್ಯತೆಗೆ ಮೀರಿ ನಿಮ್ಮ ಹಣ ಖರ್ಚಾದದ್ದೂ ನಿಜ. ಅಂತಸ್ತಿನ ಅಂತರ ಅರಿಯದೇ ಸಂಬಂಧ ಬೆಳೆಸಿ ಇಬ್ಬರದೂ ತಪ್ಪಾಗಿದೆ. ಸಮಾಧಾನವನ್ನು ತಾಳಿ ಮುಂದಿನ ಕೆಲಸವನ್ನು ನೆರವೇರಿಸಿಬಿಡು ಬಸವರಾಜಪ್ಪ

ಹೂವಪ್ಪ - ಅಹುದ್ರಿ ಮಾತು ಮಿಂಚಿ ಹೋಗೇದ ಅಂದಬಳಿಕ ಚಿಂತಿ ಮಾಡಿ ಫಲ ಇಲ್ಲ. ಮದುಮಕ್ಕಳು ಬಂದ್ರು ಆಶೀರ್ವಾದ ಮಾಡ್ರಿ (ಮದುಮಕ್ಕಳಿಗೆ ಆಶೀರ್ವದಿಸಿ ಎಲ್ಲರೂ ಊಟಕ್ಕೆಂದು ಒಳಗೆ ಹೋಗವರು)

ಈಶ್ವರ - ಶೈಲಾ ನಿಮ್ಮ ತಂದೆ ಕೋಪದಲ್ಲಿದ್ದಂತೆ ಕಾಣುತ್ತದೆ

ಶೈಲಜ - ಏಕೆ ?

ಈಶ್ವರ - ಶ್ರೀಮಂತಿಕೆಯ ಠೀವಿಯಲ್ಲಿ ಮೆರೆದಾಡಿದ ಅವರಿಗೆ ಬಡವರ ಮನೆಯ ಈ ಮದುವೆ ಹೇಗೆ ಮನಸ್ಸಿಗೆ ಬಂದೀತು ?

ಶೈಲಜ - ಯಾವಾಗಲೂ ಅಪ್ಪ ಸ್ವಲ್ಪ ಕೋಪದ್ದು. ಅಲ್ಪ ಕಾರಣಕ್ಕೂ ಅಸಮಾಧಾನಪಟ್ಟು ಕೊಳ್ಳುತ್ತಾರೆ, ಸಂಪತ್ತು ಶಾಶ್ವತ ಅಂತ ತಿಳಿದು ದರ್ಪ ತೋರುವದು ಅವರ ಹುಟ್ಟುಗುಣ. ಇದೊಂದೇ ನನ್ನ ತಂದೆಯ ದೊಡ್ಡ ದೋಷ ಕ್ಷಮಿಸಿ

ಈಶ್ವರ - ಕೋಪದ ಭರದಲ್ಲಿ ನಿಮ್ಮ ತಂದೆ ಏನಾದರೂ ಹೀಯಾಳಿಸಿ ಮಾತನಾಡಿದರೆ ನನ್ನಕ್ಕನ ಮನಸ್ಸಿಗೆ ತುಂಬಾ ನೋವಾಗುತ್ತದೆ. ಮಲ್ಲಿಗೆಗಿಂತ ಮೃದು ಶೈಲಾ ನನ್ನಕ್ಕನ ಮನಸ್ಸು

ಶೈಲಜ - ನಾನು ಕಾಣೆನೆ ನಿಮ್ಮ ಅಕ್ಕನವರ ಗುಣವನ್ನು. ಗೌರವಿಸಿ ಹೊಗಳಲು ಸಾಹಿತಿಯ ಶಬ್ದ ಭಂಡಾರ ಕೂಡಾ ಸಾಲದು. ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ನೀವು ಮತ್ತ ಅವರಲ್ಲಿ ಮಾತೃ ವಾತ್ಸಲ್ಯದ ಸವಿಯನ್ನು ಉಂಡಿರಿ ನೂರು ಮಾತಿನಿಂದೇನು ದೊರೆ ನಿಮ್ಮಕ್ಕ ಬದುಕಿನಲ್ಲಿ ಕಾಣಬರುವ ಪ್ರತ್ಯಕ್ಷ ದೇವರು

ಈಶ್ವರ - ಶೈಲಾ ನೀನು ಶ್ರೀಮಂತರ ಹೊಟ್ಟೆಯಲ್ಲಿ ಹುಟ್ಟಿದರೂ ಭಿನ್ನ ಮನೋಧರ್ಮದವಳು. ಅಂತೆಯೇ ಹುಡುಕುತ್ತ ಬಂದು ಈ ಬಡವನ ಕೈ ಹಿಡಿದಿ. ನಿರ್ಮಲ ಮನದ ನಿನ್ನ ಪಡೆದ ನನ್ನ ಬಾಳ ನೌಕ ನಿರಂತರ ತೇಲಲಿ ಪ್ರಶಾಂತ ಸಾಗರದಲ್ಲಿ (ಒಳಗೆ ಹೋಗುವರು)

# ಸನ್ನಿವೇಶ ೬

## ಬೀದಿ

(ಬಸವರಾಜ-ಹೂವಪ್ಪ ಬರುವರು)

ಹೂವಪ್ಪ - ಬೇಗ ಬೇಗ ಬರ್ರಿ ನೀವು ಹೀಗೆ ತಡಮಾಡುತ್ತ ನಿಂತರೆ ಬಸವರಾಜಪ್ಪನವರು ಸಿಟ್ಟಿಗೇಳತಾರೆ. ನೀವು ಬೇಕಾದಷ್ಟು ಅವಸರ ಮಾಡ್ರಿ ಈ ಹೆಣ್ಣುಮಕ್ಕಳು ತಡಮಾಡವರೇ ಹ.... ಸಿಗರೇಟ ಸೇದಿರಿ (ಸಿಗರೇಟ ಹಚ್ಚುವರು)

ಬಸವರಾಜ - ಅಂತೂ ಈ ಹಳ್ಳಿಯಲ್ಲಿ ನೀವು ಒಬ್ಬರಾದರೂ ತಿಳವಳಿಕಸ್ತರು ಇದಿರಿ ಅಂತ ನಮಗೆ ಅನುಕೂಲವಾಯಿತು, ಹೂವಪ್ಪ ನಮಗೋಸ್ಕರ ನಿಜವಾಗಿ ನೀವು ಬಾಳ ಕಷ್ಟಪಟ್ಟಿರಿ

ಹೂವಪ್ಪ - ಪಡಲಿಕ್ಕೇ ಬೇಕಲ್ಲರಿ, ಪ್ರಪಂಚ ಅಂದ ಬಳಿಕ ಒಬ್ಬರಿಗೊಬ್ಬರು ಅನುಕೂಲವಾಗದಿದ್ದರೆ ಹೇಗೆ ? ಹ... ಹ... ಅಂತೂ ದೊಡ್ಡವರಾದ ತಮ್ಮ ಪರಿಚಯುವಾದದ್ದು ನನಗೂ ಕೂಡಾ ಒಂದು ಹೆಮ್ಮೆ. ಬಡವನ್ನ ಮರೀಬಾರದು

ಬಸವರಾಜ - ಛೇ.... ಛೇ... ವುಂಟೇನ್ರಿ ನೀವು ಇನ್ನು ಮೇಲೆ ಯಾವದಾದರೂ ಕೆಲಸದ ನಿಮಿತ್ತ ನಮ್ಮೂರಿಗೆ ಬಂದರೆ ನಮ್ಮಲ್ಲಿಗೇ ಬಂದುಬಿಡ್ರಿ. ಆಗಿಂದ್ದಾಗೆ ಪತ್ರ ಗಿತ್ರ ಬರಿತಾ ಇರ್ರಿ

ಹೂವಪ್ಪ - ಬರೀತಿನ್ರಿ.... ಬರಿತೀನಿ, (ಹಂಪವ್ವ - ಈಶ್ವರ - ಶೈಲಜ -ಮಹದೇವಪ್ಪನವರು ಬರುವರು) ಛೇ ಏನ ಹಂಪವ್ವ ಇದು, ತಮ್ಮನ್ನ ಕಳಿಸಲಿಕ್ಕೆ ಕಣ್ಣೀರ ಹಾಕೋದೆ ಹೆಚ್ಚಿಂದವ ಇದು

ಹಂಪವ್ವ - ಹೂವಣ್ಣ ಇದು ಕರುಳಿನ ಸೆಳೆತ. ತಾಯಿಗೆ ಕೊಟ್ಟ ಮಾತು ಪೂರೈಸಿದ ಸಂತೋಷ ಒಂದು ಕಡೆಗಿದ್ದರೆ ತವರಿನ ಬಳ್ಳಿಯಲ್ಲಿ ಅರಳಿದ ಈ ಒಂದು ಹೂ ನನ್ನಿಂದ ಆಗಲಿ ಬಹುದೂರ ಹೋಗುವದಲ್ಲ ಎಂದು ಕೊರಗು ಬೇರೊಂದು ಕಡೆಗಿದೆ. ಈ ಇಬ್ಬಗೆಯ ಧರ್ಮ ಸಂಕಟದಲ್ಲಿ ನನ್ನದೆಯ ಗರ್ಭ ಬಿಚ್ಚುತ್ತಲಿದೆಯಪ್ಪ.... ಈಶ್ವರ

ಈಶ್ವರ - ಅಕ್ಕ ... ... ಅದೇನು ಹೇಳಕ್ಕ (ಹೂವಣ್ಣ - ಬಸವರಾಜ ಹೋಗುವರು)

ಹಂಪವ್ವ - ನಿನ್ನ ಹೆತ್ತವರ ಹೆಸರಿಗೆ ಕಲಂಕ ಬರದಂತೆ ಮಗಳಿತ್ತವರ ಮನೆಗೆ ಕೀರ್ತಿ ತರುವಂತೆ ನಿನ್ನ ನಡೆ ನುಡಿ ಪರಿಶುದ್ಧವಾಗಿರಲಿ. ಇನ್ನು ಮೇಲೆ ಇವರೇ ನಿನ್ನ ತಂದೆ-ತಾಯಿ ಬಂಧು-ಬಳಗ ಎಂದು ತಿಳಿದುಕೋ. ನೀ ಕುಡಿದ ಜಲ, ನೀ ನಡೆದ ನೆಲ, ಮಡಿಯಾದ ನಿನ್ನ ಬಾಳನ್ನ ಕಂಡು ಸಂತಸ ಪಟ್ಟಿರಬೇಕು. ಬದುಕು ನೀಗಿ ದೇವರ ಮುಂದೆ ನಿಂತಾಗ ನಿನ್ನ ಪಾಪಪುಣ್ಯಗಳ ಬಗ್ಗೆ ಸಾಕ್ಷಿ ನೀಡಬೇಕಾದ ನಿನ್ನ ನೆರಳೇ ನಿನ್ನ ಸದ್ಗುಣಗಳನ್ನು ಹಾಡಿ ಹೊಗಳಿರಬೇಕು. ಅಂತಹ ಪವಿತ್ರ ಬದುಕು ನಿನ್ನದಾಗಲಪ್ಪ

ಈಶ್ವರ - ಅಕ್ಕ ನಿನ್ನ ಮಾತನ್ನು ಅಡಿಗಡಿಗೆ ಪಾಲಿಸತ್ತೇನಮ್ಮ, ತಾಯಿ ತಂದೆಯನ್ನು ಕಳೆದುಕೊಂಡ ತಬ್ಬಲಿಯನ್ನು ಸಲುಹಿದ ನನ್ನನ್ನು. ತಂದೆಯಂತೆ ಕಾಪಾಡಿದ ಮಾವನ್ನ ನಾನೆಂದೂ ಮರೆಯಲಾರೆ. ಇಂದು ನಿಮ್ಮಿಂದ ಆಗಲಿ ಬಹುದೂರ ಹೋಗುವೆನಾದರೂ ನಂದಗೋಕುಲದಂತಿದ್ದ ನಿಮ್ಮ ಮನೆಯ ನೆನಪಿನ ನಂದಾದೀಪ ನನ್ನೆದೆಯಲ್ಲಿ ನಿರಂತರ ಬೆಳಗಿ ನನ್ನ ಬಾಳಿಗೆ ಚಿರಕಾಲ ಬೆಳಕು ನೀಡುತ್ತದೆ. ಮಾವಾ ನೀವು ಎಂದು ಕರೆದರೂ ಅಂದೇ ಬಂದು ನಿಮ್ಮ ಪಾದಸೇವೆಗೆ ಈ ಈಶ್ವರ ಸಿದ್ಧನಿದ್ದಾನೆ. ಆಶೀರ್ವದಿಸಿ ಮಾವ (ನಮಸ್ಕರಿಸುವನು)

ಮಹದೇವಪ್ಪ - ನಿನ್ನ ಪುಣ್ಯ ನಿನ್ನ ಕಾಪಾಡಲಿ ಏಳಪ್ಪ

ಈಶ್ವರ - ಅಕ್ಕ (ನಮಸ್ಕರಿಸುವನು)

ಹಂಪವ್ವ - ಸುಖಿಯಾಗಪ್ಪ .... ಶೈಲಾ ನನ್ನ ತಮ್ಮನ ಸ್ವಭಾವವನ್ನು ನೀನು ಅರಿತವಳು. ಇವನ ಮನಸ್ಸು ಮಕ್ಕಳ ಮನಸ್ಸಿನಂತೆ ಬಲು ಕೋಮಲ. ಅವನ ಆಸೆ ಅಭಿಲಾಷೆಗಳಿಗೆ ಅನುಸರಿಸಿ ನಡೆದರೆ ನಿನ್ನ ಬಾಳು ನಂದಗೋಕುಲವಾಗುತ್ತದೆ

ಶೈಲಜ - ಆ ಯೋಗ್ಯತೆ ನನಗೆ ಬರಲೀ ಅಂತ ಆಶೀರ್ವದಿಸಿ ಅವ್ವ

ಹಂಪವ್ವ - ನನ್ನವ್ವ ನೀನು ಬಲು ಜಾಣೆ. ಆದರೂ ಹತ್ತು ಕಡೆ ಹೆಣ್ಣಿನ ಸೌಂದರ್ಯ ಕಂಡು ಭ್ರಮಿಸುವದು ಗಂಡಿನ ಹುಟ್ಟು ಗುಣ. ಕಾರಣ ನಿನ್ನ ಗಂಡ ಕೆಟ್ಟ ಹಾದಿಗೆ ಬೀಳದಂತೆ ನೋಡಿಕೋ. ತನ್ನೆಲ್ಲ ಅವಯವಗಳನ್ನು ತನ್ನದೆಯಲ್ಲಿ ಹುದುಗಿಸಿಕೊಳ್ಳುವಂತೆ ನಿನ್ನ ಗಂಡನ ಒಲವನ್ನು ಸಂಪೂರ್ಣ ನಿನ್ನಲ್ಲಿ ಸೆಳೆದುಕೋ ಮಗಳೇ

ಶೈಲಜ - ಆಗಲಿ ಅವ್ವಾ

ಮಹದೇವಪ್ಪ - ನಡಿ ಹಂಪಿ, ನಡಿ ಈಶ್ವರ

ಈಶ್ವರ - ಹೋಗಿಬರ್ರೀ ಅಕ್ಕ... ಮಾವಾ.... (ಹೋಗುವರು, ಮಹದೇವಪ್ಪ, ಹಂಪವ್ವ

ಅವರು ಹೋದ ದಿಕ್ಕನ್ನೇ ನೋಡುತ್ತ ನಿಂತಿರುವರು. ಹೂವಪ್ಪ ಬರುವನು)

ಹೂವಪ್ಪ - ಅಂತೂ ಎಲ್ಲ ಕೆಲಸ ಹೂವಿನ ಸರ ಎತ್ತಿದಂಗ ಮುಗಿದ ಹೋಯಿತಲ್ಲ. ಮಹದೇವಪ್ಪ ಇನ್ನುಳಿದ ವಿಷಯ ಅಂದರೆ ನೀನು ಮದುವೆಯ ಖರ್ಚಿಗೆಂದು ಪಡೆದ ಸಾಲ ಎರಡು ಸಾವಿರ ಎಂಟು ನೂರಾ ಚಿಲ್ಲರೆ ಆಗಿದೆ. ಬೇಕಿದ್ದರೆ ಮನೆಗೆ ಬಂದು ಲೆಕ್ಕ ನೋಡಬಹುದು

ಮಹದೇವಪ್ಪ - ಛೇ ಛೇ ನೀನೇನು ಸುಳ್ಳು ಹೇಳ್ತೀಯಾ ಹೂವಂಣ ಲೆಕ್ಕ ನೋಡಲಿಕ್ಕೆ. ನಾನೇನು ಹೊರಗಿನವನೇ ? ಸಮಯಕ್ಕೆ ಸರಿಯಾಗಿ ಸಾಲ ಕೊಟ್ಟು ನನ್ನ ಮಾನ ಉಳಿಸಿದಿ

ಪಂಪಪ್ಪ - ಅಹುದಂಣ ಮದುವೆ ಆದದ್ದೇ ನಿನ್ನ ಪುಣ್ಯದಿಂದ. ಅಂದ ಬಳಿಕ ನಿನ್ನ ಮೇಲೆ ಅಪನಂಬಿಕೆ ಮಾಡಿದರೆ ದೇವರು ಮೆಚ್ಚಬೇಡವೇ ?

ಹೂವಪ್ಪ - ಅದೆಲ್ಲ ಆಯಿತು, ನಿಮ್ಮ ಹೊಲದ ಪೀಕು ಬಂದ ತಕ್ಷಣ ತಂದು ನನ್ನ ಮನೆಗೆ ಹಚ್ಚಿಬಿಡು. ಮತ್ತೆ ನೋಡು ಆಗ ಏನಾದರೂ ನೆವ ಹೇಳಿದರೆ ನಡೆಯದು

ಮಹದೇವಪ್ಪ - ಛೇ ಛೇ ಎಲ್ಲಿ ಮಾತು. ಹೊಲದ ಪೀಕು ಬಂದ ತಕ್ಷಣ ತಂದು ನಿನ್ನ ಮನೆಗೆ ಹಚ್ಚುತ್ತೇನೆ

ಹೂವಪ್ಪ - ಆಗಲಿ ಹೋಗಿರಿ (ಅವರು ಹೋದ ನಂತರ) ಸಾಲ ಮುಟ್ಟಿಸಿ ಮುಕ್ತರಾಗುತ್ತಾರಂತೆ ! ಕೊಟ್ಟ ಹಣ ಕೊಟ್ಟಂತೆ ಮರಳಿ ಬಂದು ನನ್ನ ಕೈ ಸೇರಿದರೆ ನನಗೆ ಬಂದ ಭಾಗ್ಯವೇನು ? ಯಾವ ಆಸೆ ಇಟ್ಟು ಕೊಂಡು ಹಣ ಕೊಟ್ಟೇನೋ ಆ ಆಸೆ ಈಡೇರಿಸಿಕೊಳ್ಳದಿದ್ದರೆ ನನ್ನ ಹೆಸರು ಹೂವಪ್ಪನೇ ಅಲ್ಲ. ಅಂತೂ ಕೊನೆಗೊಮ್ಮೆ ದಕ್ಕಿತಲ್ಲ ಮಹದೇವಪ್ಪನ ಹೊಲಾ ಹ... ಹ... ಹ... (ನಗುತ್ತ ಹೋಗವನು)

## ಸನ್ನಿವೇಶ ೭

### ಹೊಲದ ಸೀನು

(ವೀರಣ್ಣ - ನೀಲಾ ಮತ್ತೆ ಕೆಲವರು ಹಳ್ಳಿಯ ಹಾಡು ಹಾಡುತ್ತ ಕುಣಿಯುತ್ತಿರುವರು)

॥ ಪದ ॥

ವೀರಣ್ಣ - ಓ ಓ-ಆ-ಆ- ಹೊಡೆಹಿರಿದ ಹೊಲದಲ್ಲಿ ಜಡೆ ಹಿಡಿದು ಕೇಳುವೆನು ವಲಿದ ಬಗೆ ಯಾವದೆಂದು ! ನೀನೊಲಿದ ಬಗೆ ಯಾವದೆಂದು ।

ನೀಲಾ - ಈ ನಗೆ ನೋಟ ಚಿನ್ನಾಟ ಮೈಮಾಟ । ನನ್ನ ಮನ ಒಪ್ಪಿದಂದು ।

ವೀರಣ್ಣ - ನಾನಿನ್ನ ಬಳಿಸಾರೆ । ನೀನೊಂದ ನಗೆ ಬೀರಿ । ಬಾಳೆಲ್ಲ ಹಾಲು ನೀನು ।

ನೀಲಾ - ಬಾಳೆಲ್ಲ ಬೆಳಕಾಗಿ । ಬದುಕೆಲ್ಲ ಹಸನಾಗಿ ।

ವೀರಣ್ಣ - ಈ ಚಲುವು ಸಾಲದೇನು

ನೀಲಾ - ನನಗೆ ।

ವೀರಣ್ಣ - ನನಗೆ ॥

(ಪದ ಮುಗಿಯುತ್ತಲೂ ಮಿಡತೆ ಹಾರಿಬರುವ ಸಪ್ಪಳ ಕೇಳುವದು)

ನೀಲಾ - ಮಾವಾ ಅಲ್ಲಿ ನೋಡು ... ಅದೇನು ಮಾವಾ ?

ವೀರಣ್ಣ - ಪರ್ವತಕಾರದಲ್ಲಿ ಹಾರಿಬರುವ ಆ ದಂಡು, ಮಿಡತೆಗಳ ದಂಡೆಂದು ಕಾಣುತ್ತದೆ

ಧ್ವನಿ - (ಒಳಗೆ) ಮಿಡತೆ ದಂಡ ಬಂತರೆಪೋ... ಮಿಡತೆ ದಂಡು

ವೀರಣ್ಣ - ಹೌದು ನೀಲಾ ಅದು ಮಿಡತೆಗಳ ದಂಡು

ನೀಲಾ - ಹಾರಿಬರುವ ಆ ಮಿಡತೆಗಳ ದಂಡು ಹೊಲಕ್ಕೆ ಬಿದ್ದರ ಜೋಳದ ಒಂದು ಕಾಳು ಕೂಡ ಉಳಿಯಲಿಕ್ಕಿಲ್ಲ

ವೀರಣ್ಣ - ಅಹುದು ನೀಲಾ ವರುಷದ ಅನ್ನ, ಮಿಡತೆಗಳ ಬಾಯಿಗೆ ಬಿದ್ದು ಬನ್ನಪಡುವ ಘವಣೆ ಬಂತು. ಬಡವರ ಕೈಗೆ ಬರಲಿದ್ದ ಅನ್ನದ ತುತ್ತನ್ನೇ ಕಸಿದುಕೊಂಡ ಭಗವಂತನೇ ಮಿಡತೆಗಳ ಬಾಯಿಗಿಟ್ಟ ಬಳಿಕ ಇನ್ನೇನು ಉಳಿಯಿತು. ನೀಲಾ ಓಡು, ನಿನ್ನ ತಂದೆ-ತಾಯಿಗಳಿಗೆ ಈ ಸುದ್ದಿಯನ್ನು ತಿಳಿಸು, ಓಡು (ಇಬ್ಬರೂ ಓಡುವರು)

# ಸನ್ನಿವೇಶ ೮

## ಜಂಗಲ್ ರಸ್ತಾ ಪರದೆ

(ಎಲ್ಲರೂ ಮಿಡತೆ ದಂಡು, ಮಿಡತೆ ದಂಡು ಅನ್ನುತ್ತ ಓಡುವರು)

ಹಂಪಕ್ಕ - ಬಡರೈತರ ಬಗ್ಗೆ ದೇವರೇ ನೀನೆಷ್ಟು ಕಲ್ಲೆದೆಯವನಾಗಬೇಕೆ ? ಹಾರಿ ಬಂದಂಥ ಮಿಡತೆಗಳ ಬಾಯಿಗೆ ಬಿದ್ದು ನಂದಗೋಕುಲದಂತಿದ್ದ ಹೊಲ ಅರ್ಧ ಘಳಿಗೆಯಲ್ಲಿ ಹಾಳು ಸುರಿವ ನೆಲವಾಯಿತೇ ? ವರುಷದವರೆಗೂ ಭೂಮಿ ತಾಯಿ ಮಡಿಲಿನಲ್ಲಿ ಮೈ ಬೆವರು ಸುರಿಸಿ ದುಡಿದ ನಮ್ಮ ದುಡಿತದ ಫಲ ಮಿಡತೆಗಳ ಪಾಲಾಗಿಬಿಟ್ಟಿತೆ ? ದೇವರೇ ಮುಂದೆ ನಮ್ಮ ಗತಿ ಏನು ?

ಮಹದೇವಪ್ಪ - ಇದು ದೇವರೇ ನಮಗಿತ್ತ ಕಷ್ಟ ಹಂಪಿ, ಇದು ದೇವರೇ ನಮಗಿತ್ತ ಕಷ್ಟ. ನಮ್ಮ ಬಾಳಿನ ಚಿತ್ರಕ್ಕಿಂತಲೂ ಗೋಳಿನ ಗಾತ್ರ ಹಿರಿದಾಗಿ ಕಾಣುತ್ತದೆ. ಹೂವಪ್ಪನಿಂದ ಪಡೆದ ಸಾಲ ನನ್ನೆದೆಗೆ ಶೂಲ ಪ್ರಾಯವಾಯಿತು. ಹೊಲದ ಪೈರನ್ನೇ ಅವನ ಮನೆಗೆ ಮುಟ್ಟಿಸಿ ಮಾಡಿದ ಸಾಲವನ್ನು ತೀರಿಸುವನೆಂದವನಿಗೆ ಮಾತು ಕೊಟ್ಟಿದ್ದೆ. ಹಂಪಿ ಇನ್ನವನಿಗೆ ಏನು ಹೇಳಲಿ. ಅದೇನು ಕೊಟ್ಟು ಸಾಲ ಮುಟ್ಟಿಸಲಿ. ವಿಧಿ ನನ್ನ ಬಾಳಿನಲಿ ವಿಕಟಹಾಸ ಗೈಯಬಾರದಿತ್ತು ಹಂಪಿ ಗೈಯಬಾರದಿತ್ತು

## ಮಧ್ಯಂತರ

# ಸನ್ನಿವೇಶ ೯

ಮಹದೇವಪ್ಪನ ಮನೆ

(ಧೈರ್ಯಗುಂದಿದ ಮಹದೇವಪ್ಪ ಹಾಸಿಗೆ ಹಿಡಿದು ಕುಳಿತಿದ್ದಾನೆ. ದಮ್ಮು ಕೆಮ್ಮು ಹೆಚ್ಚಾಗಿದೆ. ರುದ್ರ, ಸುವರ್ಣ ಹತ್ತಿರ ಕುಳಿತಿದ್ದಾರೆ)

ಹಂಪವ್ವ - (ನೀಲಿಯೊಂದಿಗೆ ಹೊರಬಂದು) ನೀವು ಸ್ವಲ್ಪ ಊಟಾ ಮಾಡತೀರಾ ?

ಮಹದೇವಪ್ಪ - ನಾನೊಲ್ಲೆ ಹಂಪಿ ಹಸಿವೆ ನನಗೆಷ್ಟೂ ಆಗಿಲ್ಲ, ಎಂದು ನನ್ನ ಹೊಲದೊಳಗಿನ ಪೈರನ್ನು ಮಿಡತೆಗಳು ತಿಂದು ಹಾಕಿದವೋ ಅಂದೇ ನನ್ನ ಹಸಿವೆ ನೀರಡಿಕೆಗಳು ಬತ್ತಿ ಹೋದವು. ಬದುಕಿನ ಬಯಕೆಗಿಂತ ಸಾವಿನ ಆಸೆ ಬಲವಾಗಹತ್ತಿದೆ

ಹಂಪವ್ವ - ಹಾಗೆಲ್ಲ ಹುಚ್ಚರಂತೆ ಆಡಬೇಡಿ, ನಿಮ್ಮ ಕಾಲು ಹಿಡಿತೀನಿ, ಮಕ್ಕಳು ಅಂಜಿಕೊಂಡಾವು. ಈ ಕಷ್ಟ ನಮಗೊಬ್ಬರಿಗೆ ಬಂದಿಲ್ಲ. ಮಿಡತೆಯ ದಂಡು ನಮ್ಮ ಹೊಲ ಒಂದನ್ನೇ ತಿಂದಿಲ್ಲ. ಎಲ್ಲರಿಗೂ ಅದದ್ದು ನಮಗೂ ಆದೀತು ಮನಸ್ಸು ಗಟ್ಟಿಮಾಡಿಕೊಳ್ಳಿ. ಕಷ್ಟವೋ ಸುಖವೋ ಬದುಕಿನ ಭಾರ ಹೊತ್ತು ಬಾಳುವ ನಮಗೆ ಹಸಿವು ನೀರಡಿಕೆಗಳು ಎಂದಾದರೂ ಬತ್ತಿ ಹೋದಾವೇನು ?

ಮಹದೇವಪ್ಪ - ಇಲ್ಲ ಹಂಪಿ ನನ್ನ ಬದುಕಿನ ಆಶಾಗೋಪುರ ಕಳಚಿ ಬಿತ್ತು. ಹಾರಿಬಂದ ಮಿಡತೆಗಳು ನನ್ನ ಹೊಲದೊಳಗಿನ ಪೈರು ಕಡಿದು ಹಾಕುವದಕ್ಕಿಂತ ನನ್ನನ್ನೇ ಕೊಂದು ಹಾಕಿದ್ದರೆ ಎಷ್ಟೋ ವಾಸಿಯಿತ್ತು. ಎಲ್ಲರ ಕಷ್ಟ ಒಂದು ರೀತಿಯಿದ್ದರೆ ನನ್ನ ಕಷ್ಟ ಬೇರೊಂದು ರೀತಿಯಿದೆ. ದಮ್ಮು ಕೆಮ್ಮು ಹತ್ತಿದ ನನ್ನ ಈ ಜೀವನ ದುಡಿದು ತರುವ ನಿಮ್ಮ ಬೆನ್ನಿಗೆ ಭಾರವಾಯಿತು. ಮೇಲೆ ಸಾಲ ಮುಟ್ಟಿಸೆಂದು ನಿತ್ಯ ಬಂದು ಒತ್ತಾಯಪಡಿಸುವ ಪೂವಪ್ಪನಿಂದ ಒದಗುವ ಸಂಕಟವನ್ನು ನಾನೆಂತು ಸಹಿಸಲಿ ? ಶಿವ ಶಿವ ನನ್ನ ಜೀವಕ್ಕೆ .... ಸಾವನ್ನಾದರೂ ತರಬಾರದೇ ಅನ್ನಿಸುತ್ತದ .....

ನೀಲಾ - ಅಪ್ಪ ನೀನು ಹಿಂಗೆಲ್ಲ ಅಮಂಗಳ ಆಡಬೇಡಪ್ಪ. ನಾನು ಅವ್ವ ದುಡಿದು ಸಾಲ ಮುಟ್ಟಿಸತೇವೆ

ರುದ್ರ - ಹೌದಪ್ಪ ನಾನು ದುಡಿತೀನಿ ನೀನು ಅಳಬೇಡ....

ಸುವರ್ಣ - ಹೌದಪ್ಪ ..... ನಾನೂ ದುಡಿತೀನಿ

ಸೀಲಾ - ಅಪ್ಪ ನೀನೀಗ ಸುಮ್ಮನೇ ಮಲಗಿ ಬಿಡಪ್ಪ, ನಾನು ಅವ್ವ ಈಗ ದುಡಿಲಿಕ್ಕೆ ಹೋಗತೀವಿ... ಬಾರವ್ವ.... (ಹೋಗಹತ್ತುವರು. ಹೂವಪ್ಪ ಬರುವನು)

ಹೂವಪ್ಪ - (ಬರುತ್ತ) ಏನು ಹಂಪವ್ವ ದುಡಿಲಿಕ್ಕೆ ಹೊರಟೀರೇನೋ ?

ಹಂಪವ್ವ - ಹೌದಪ್ಪ ಬಾ ಕುಳಿತುಕೋ (ಮಹಾದೇವಪ್ಪನು ಕೆಮ್ಮಹತ್ತುವನು)

ಹೂವಪ್ಪ - ಏನು ಮಹಾದೇವಪ್ಪ ಮನೆಗೆ ಬಂದಾಗಲೆಲ್ಲ ಈ ನಿನ್ನ ದಮ್ಮು ಕೆಮ್ಮು ನೋಡೋದೆ ಆಯಿತಲ್ಲ ನನ್ನ ಪಾಡು. ಸಾಲ ಮುಟ್ಟಿಸುವ ಆಲೋಚನೆ ಏನಾದರೂ ಮಾಡಿರುವಿಯೋ ? ಅಥವಾ ಕೆಮ್ಮಿನ ಪಲ್ಲವಿ ಹಾಡುವದನ್ನೇ ರೂಡಿಸಿಕೊಂಡಿರುವಿಯೋ ?

ಮಹದೇವಪ್ಪ - (ಕೆಮ್ಮುತ್ತ) ಮತ್ತೇನು ಮಾಡಲಿ ಹೂವಣ್ಣ. ಹೊಲದಿಂದ ಒಂದು ಕಾಳು ಕಡಿ ಬರಲಿಲ್ಲ. ಕೈಗೆ ಬಂದ ಪೀಕನ್ನೆಲ್ಲ ಮಿಡತೆ ಕಡಿದು ಹಾಕಿತು

ಹೂವಪ್ಪ - ಅದು ಗೊತ್ತೋ ನನಗೆ ದವಸ ಧಾನ್ಯ ಬರಲಿಲ್ಲ. ಮಿಡತೆ ಕಡೀತು ಮಳೆ ಹೋಯಿತು ಅಂದೆ ? ಅದಕ್ಕೆ ನಾನೇನು ಮಾಡಲಿ ? ಇದೆಲ್ಲ ಕೊಟ್ಟವರ ಗಂಟು ಕೊಡೋ ಮಾತೇನಯ್ಯ ? ಸಾಲ ಒಯ್ಯುವಾಗ ಯಾವ ಮಿತಿಗೆ ತಂದು ಮುಟ್ಟಿಸ್ತೇನೆ ಅಂತ ಮಾತು ಕೊಟ್ಟಿದ್ದಿ. ಆ ಮಿತಿಗೆ ತಂದ ಮುಟ್ಟಿಸಬೇಕು ಇದು ಧರ್ಮ. ಇದನ್ನು ಬಿಟ್ಟು ಸುಮ್ಮನೆ ಕುಳಿತರೆ ? ಬಂತೇನು ?

ಮಹದೇವಪ್ಪ - ಸುಮ್ಮನೆ ಕುಳಿತಿಲ್ಲ ಹೂವಂಣ ನಾನು

ಹೂವಪ್ಪ - ಹೌದು ಸುಮ್ಮನ ಕುಳಿತಿಲ್ಲ ಕೆಮ್ಮುತ್ತಾ ಕುಳಿತಿರುವಿ ಅಲ್ಲವೇ ? ಏ..... ಬಿಟ್ಟು ಬಿಡು ಇದನ್ನೆಲ್ಲ... ನೋಡು ಮಹದೇವಪ್ಪ ನಾನೀಗಲೇ ಹೇಳತೀನಿ, ಕೈಗೆ ಬಂದ ಪೈರನ್ನ ಮಿಡತೆ ಕಡೀತು ಅಂತ ಮುಖಾ ಮುದುರಿಸಿಕೊಂಡು ಕುಳಿತರೆ ಕೇಳುವನಲ್ಲ ನಾನು. ನನ್ನ ಹಣಕ್ಕೆ ಬೇರೆ ಏನಾದರೂ ಮಾಡಬೇಕು ಒಂದು.... ಇಲ್ಲ ಬರೆದ ಕೊಟ್ಟಂತೆ ಹೊಲ-ಮನೆ ನನ್ನ ವಶಕ್ಕೆ ಒಪ್ಪಿಸಬೇಕು ಒಂದು ...

ಮಹದೇವಪ್ಪ - ಹೂವಪ್ಪ ಬೇರೆ ಏನಾದರೂ ಮಾಡಿ ಎಲ್ಲಿಂದಾದರೂ ತಂದು ನಿನ್ನ ಸಾಲ ಮುಟ್ಟಿಸಬೇಕು ಅಂತ ಎಲ್ಲ ಪ್ರಯತ್ನಿಸಿದೆ. ಎಲ್ಲಿಯೂ ಸಾಧ್ಯವಾಗಲಿಲ್ಲ

ಹೂವಪ್ಪ - ಸಾಧ್ಯವಾಗಲಿಲ್ಲ ಅಂದ್ರ ? ಅದಕ್ಕ ನಾನೇನು ಮಾಡಲಿ ? ನೀನು ಹೇಳಿದ ಸಮಯ ಮುಗಿದು ಮೇಲೆ ಮೂರು ತಿಂಗಳ ದಿನ ಕಳೆದು ಹೋಯಿತು. ಇವತ್ತು ನಾಳೆ ಅಂದ್ರೇನಿದು ? ನೋಡು ನಾನಿವತ್ತು ನಿಷ್ಠುರವಾಗಿ ಹೇಳತೀನಿ....

ಹಂಪವ್ವ - ಸಿಟ್ಟಾಗಬೇಡಣ್ಣ... ಏನು ಮಾಡಿದರೂ ಹಣ ಹುಟ್ಟಲಿಲ್ಲ. ಹಾಗೇನಾದರೂ ಹುಟ್ಟಿದ್ರೆ ನಿನ್ನ ಋಣ ಮುಟ್ಟಿಸದೇ ಇರುತ್ತಿರಲಿಲ್ಲ. ಕಾಳಿನ ಅಭಾವದೊಂದಿಗೆ ನೀನೂ ಬಂದೂ ಸಾಲಕ್ಕೆ ಅವಾಂತರ ಹೂಡಿದರೆ ಮೊದಲೇ ಚಿಂತೆಗೆ ಕಂಗಾಲಾದ ಇವರು ಇನ್ನಷ್ಟು ಕಂಗಾಲಾಗುತ್ತಾರೆ

ಹೂವಪ್ಪ - ಆಗಲಿ ನನಗೇನು ? ಯಾರ ಅತ್ತರೇನು ? ಯಾರ ಸತ್ತರೇನು ? ನನಗೆ ಬರಬೇಕಾದ ನನ್ನ ಹಣ ಬಂದ್ರೆ ಸಾಕು. ಹಂಪವ್ವ ನಿಷ್ಠುರವಾಗದೇ ಒಬ್ಬರ ಕೈಯಲ್ಲಿದ್ದ ಹಣ ಇನ್ನೊಬ್ಬರ ಕೈಗೆಂದಾದರೂ ಬರತ್ತೇನವ್ವ ? ... ನೋಡು ಮಹದೇವಪ್ಪ ಇನ್ನೆರಡು ದಿನದಲ್ಲಿ ನಿನ್ನ ಹಣ ನನಗೆ ಮುಟ್ಟಿಸದೇ ಹೋದಲ್ಲಿ ನಿನ್ನ ಹೊಲ ಹಸನ ಮಾಡಲಿಕ್ಕೆ ನನ್ನ ಗಳೇವು ಕಳಿಸಿಕೊಡತೀನಿ......

ಮಹದೇವಪ್ಪ - (ತೀರ ದುಃಖದಿಂದ) ಏನಂದೆ... ಹೂವಣ್ಣ .... ?? ನನ್ನ ಹೊಲಕ್ಕೆ .... ನಿನ್ನ ಗಳೇವು ..... ಕಳಸ್ತೀಯಾ ?? ನನ್ನ ಹೊಲಾನ ನನ್ನಿಂದ ಕಸಿದುಕೊಳ್ಳತೀಯಾ? ಬೇಡಪ್ಪ ನಿನ್ನ ಕಾಲಿಗೆ ಬೀಳತೀನಿ .....

ಹಂಪವ್ವ - ಹೂವಣ್ಣ ನಮ್ಮೆಲ್ಲರ ಒಡಲಿಗೆ ಅನ್ನ ಕಾಣಿಸುವ ನನ್ನವ್ವ ಭೂಮಿತಾಯಿಯನ್ನು ಈ ಬಡರೈತರಿಂದ ಅಗಲಿಸುವಿಯೇನಪ್ಪ ? ಇದು ನ್ಯಾಯವೇನಪ್ಪ ? ಧರ್ಮವೇನಪ್ಪ ? (ಹೂವಪ್ಪನ ಕಾಲು ಹಿಡಿಯುವಳು)

ಹೂವಪ್ಪ - ಏ... ಸರೀರಿ... ನ್ಯಾಯ ಧರ್ಮ... ನೋಡತಾ ಕುಳಿತು ಬಿಟ್ಟರೆ ಕೈಬಿಟ್ಟ ಹಣ ಕೈಗೆ ಬರತ್ತೇನು ? ಕೊಡಬೇಕು ಅನ್ನೋ ಕಂತಿಗೆ ಸರಿಯಾಗಿ ಸಾಲದ ಹಣ ಕಟ್ಟದೇ ಹೋದರೆ ತಗಾಯಿ ಸಾಲಾ ಕೊಟ್ಟು ಉದಾರತನ ತೋರಸ್ತೀನಿ ಅಂತ ಹಾರಾಡೋ ಸರಕಾರ ಸಹಿತ ಮನೆ ಜಪ್ತಿ ಮಾಡಿಸಿ ಸಾಲ ಮುಟ್ಟಿಸಿಕೊಳ್ಳತ್ತೆ. ಅಂದಬಳಿಕ ಸಾವುಕಾರ .... ನಾನು ಕೇಳತೀನಾ ?? ನೋಡು ಇನ್ನೆರಡು ದಿನಗಳಲ್ಲಿ ನನ್ನ ಸಾಲದ ಹಣ ಸಂದಾಯವಾಗದಿದ್ದರ ನಿನ್ನ ಹೊಲ ನನ್ನ ವಶಕ್ಕೆ ಬಂತು ... ಅಂತ ತಿಳಿ.... (ಹೋಗುವನು)

ಮಹದೇವಪ್ಪ - (ದುಃಖದಿಂದ) ನನ್ನ ಹೊಲ ನನ್ನ ಕೈ ಬಿಡತ್ತ. ಇನ್ನೆರಡು ದಿವಸಗಳಲ್ಲಿ ಸಾಲ ಮುಟ್ಟಿಸದೇ ಹೋದರೆ ನನ್ನ ಭೂಮಿ ನನ್ನ ಹೇಗೆ ಬಿಟ್ಟು ಕೊಡಲಿ... ಭೂಮಿ ಕಳೆದುಕೊಳ್ಳುವ ಮುಂಚೆ.... ಈ ... ನನ್ನ ಜೀವಾನೇ .... ಕಳಕೊಳ್ಳತೀನಿ....

ಹಂಪವ್ವ - ಅಪ್ಪಯ್ಯ ?? ನೀವು ಹೀಗೆಲ್ಲ ಮಾತಾಡಬೇಡಿ. ನನ್ನ ಕೊರಳಾಣೆ

ಮಹದೇವಪ್ಪ - ಮತ್ತೇನು ಮಾಡ್ಲಿ ಹಂಪಿ...... ನನ್ನ ಭೂಮಿ ನನ್ನ ಕೈಬಿಟ್ಟು ಹೋದ ಮೇಲೆ ನಾನು ಹೇಗೆ ಬದುಕಲಿ ? ಇಲ್ಲ ನನಗ ಬದಕೋ ಆಸೇನ ಉಳಿದಿಲ್ಲ. ನನ್ನ ಬದುಕಿಸಬೇಕು ಅನ್ನುವ ಇಷ್ಟ ಆ ದೇವರಿಗ ಇಲ್ಲ... ಇದ್ದರೆ .... ಕೈಗ ಬಂದ ಅನ್ನದ ತುತ್ತನ್ನ ಮಿಡತೆಯ ಬಾಯಿಗಿಟ್ಟು ಈ ಬನ್ನ ನಮಗ ತರುತ್ತಿರಲಿಲ್ಲ. ಹಂಪಿ ನಾವೇನು ಪಾಪ ಮಾಡೀವಿ ಅಂತ ನಮಗಿಂಥ ಕಷ್ಟ ಬರಬೇಕು ?

ಹಂಪಿ ಮೊದಲಿನ ಹಾಗೆ ಸತ್ಯವಂತರನ್ನು ಕಾಯತೀನಿ ಅನ್ನೋ ಶಕ್ತಿ ಈಗ ಆ ದೇವರಲ್ಲಿ ಉಳಿದಿಲ್ಲ. ನನ್ನ ಹೊಲ ನನ್ನ ಕೈ ಬಿಡುತ್ತೆ .... ನನ್ನ ..... ಹೊ...ಲಾ... ನನ್ನ ಕೈಬಿಡುತ್ತೆ.... (ಕೆಮ್ಮುವನು)

ಹಂಪವ್ವ - ಅದೇನೆ ಇರಲಿ. ಕೈ ಸೋಲುವವರೆಗೂ ಬಾಳಿನ ಸಾಗರವನ್ನು ಈಸೋಣ. ದೇವರ ಇಷ್ಟವಿದ್ದರೆ ಜೈಸೋಣ, ಅವನು ಕೈಬಿಟ್ಟರೆ ಮುಳುಗಿ ಸಾಯೋಣ. ಈಗ ನೀವು ಸುಮ್ಮನೇ ಮಲಗಿಕೊಳ್ಳಿ (ಮಲಗಿಸುತ್ತ) ಆಯಾಸ ಮಾಡಿಕೊಳ್ಳಬೇಡಿ

ನೀಲಾ - ಅಹುದಪ್ಪ ಈಗ ನೀನು ಸುಮ್ಮನೇ ಮಲಗಿಬಿಡು (ಮಲಗಿಸುವರು) ಅವ್ವ ಇವತ್ತು ಕೂಲಿ ದುಡೀಲಿಕ್ಕೆ ನಾನೊಬ್ಬಳೇ ಹೋಗತೀನಿ. ನೀನು ಅಪ್ಪನ ನೋಡತಾ ಇಲ್ಲೆ ಇದ್ದು ಬಿಡವ್ವ

ಹಂಪವ್ವ - ಬೇಡ....

ನೀಲಾ - ಏಕೆ ?

ಹಂಪವ್ವ - ರುದ್ರನ್ನ ಕರೆದುಕೊಂಡು ಇವತ್ತು ನಾನು ನಿಮ್ಮ ಮಾವನ ಊರಿಗೆ ಹೋಗಿ ಬರುತೇನೆ

ಮಹದೇವಪ್ಪ - (ಏಳುತ್ತ) ಆ ?? ಏನಂತೆ ? ಈಶ್ವರನ ಹತ್ತಿರ ಹೋಗತೀಯಾ ?

ಹಂಪವ್ವ - ಹೌದು... ಈಗ ನಮಗೆ ಬಂದ ಕಷ್ಟವನ್ನೆಲ್ಲ ವಿವರಿಸಿ ಅವನಿದ ಹಣ ತರತೇನೆ

ಮಹದೇವಪ್ಪ - ಹುಚ್ಚಿ ಹೋದ ತಕ್ಷಣ ನಿನ್ನ ಕಷ್ಟ ಕಂಡು ಸಹಾಯ ಮಾಡಲಿಕ್ಕೆ ಆ ನಿನ್ನ ತಮ್ಮ ಸ್ವತಂತ್ರನೇನೆ ? ಅದೇನಿದ್ರೂ ನೀನು ಅಲ್ಲಿಗೆ ಹೋಗಿ ಆ ಹುಡುಗನ ಕಣ್ಣಲ್ಲಿ ನೀರು ಬರಿಸಬೇಕು. ನಮಗೆ ಬಂದ ಕಷ್ಟಾನ ನಾವೇ ಹಂಚಿಕೊಂಡು ಬದುಕೋಣ. ಹಂಪಿ ಬಡತನ ಬಂದಾಗ ಬೇರೆಯವರ ಬಾಗಿಲಿಗೆ ನಿಂತು ಯಾಚಿಸಬಾರದು

ಹಂಪವ್ವ - ಛೆ ? ಅವನೇನು ಹೊರಗಿನವನೆ ? ಕಷ್ಟ ಬಂದರೆ ಖಂಡಿತ ಬಂದು ಕೇಳಕ್ಕ ಎಂದು ಹೇಳಿ ಹೋಗಿದ್ದಾನೆ. ಅವನಿಂದ ಸಹಾಯ ದೊರೆತರೆ ನಮ್ಮ ಸಂಕಟವಾದರೂ ತಪ್ಪಿ ನಮ್ಮ ಹೊಲ ಮನೆ ನಮಗುಳಿಯುತ್ತವೆ

ಮಹದೇವಪ್ಪ - ಹೌದು ಅವನು ಸಹಾಯ ಮಾಡಿದರೆ ನಮ್ಮ ಸಂಕಟ ತಪ್ಪುತ್ತದೆ. ಆದರೆ... ಆ ಮನೆಯ ಆಡಳಿತ ಅಧಿಕಾರ ನಿನ್ನ ತಮ್ಮನ ಕೈಯಲ್ಲಿದ್ದರೆ ತಾನೆ... ಅವನು ನಿನಗ ಸಹಾಯ ಮಾಡುವದು. ಮದುವೆಯಲ್ಲಿ ಆ ಬಸವರಾಜಪ್ಪನ ಬಾಯಿ ಬದರಿಕ ನೋಡಿದರೆ ನಾವು ತಪ್ಪು ಮಾಡಿದೆವೆಂದೇ ನನಗನಿಸುತ್ತದೆ. ಹಕ್ಕಿಯಂತೆ ಹಾರುತ್ತಿದ್ದ ನಮ್ಮ ಹುಡುಗನಿಗೆ ಆ ಹುಡುಗಿಯನ್ನು ಕಟ್ಟಿ ಪಂಜರದ ಪಕ್ಷಿಯನ್ನಾಗಿ ಮಾಡಿದೆವಲ್ಲ ? ಹೀಗಿದ್ದೂ ಈಗ ನೀನು ಅವರಲ್ಲಿ ಸಹಾಯ

ಯಾಚಿಸಲು ಹೋಗುವಿಯಾ ಹಂಪಿ

ಹಂಪವ್ವ - ಅದೇನಿದ್ರೂ ನನ್ನ ತಮ್ಮನ ಮೇಲೆ ನನಗೆ ನಂಬಿಕೆಯಿದೆ. ನಾನು ಹೋಗಿ ಬರುತೇನೆ (ಒಳಗೆ ಹೋಗುವಳು)

ಮಹದೇವಪ್ಪ - ರುದ್ರ ನಿನ್ನವ್ವನ ಜೊತೆಗೆ ನೀನೂ ಹೋಗತೀಯಾ ದಾರಿಯಲ್ಲಿ ಕಿಡಿಗೇಡಿತನ ಮಾಡಬೇಡಪ್ಪ ಆ ??

ನೀಲಾ - ಹೌದು ರುದ್ರ ಹಾಗೆಲ್ಲ ಮಾಡಬೇಡ ..... ? ಏನು ?

ರುದ್ರ - ಆಗಲಕ್ಕ

ಹಂಪವ್ವ - (ಸೀರೆಯ ಸಣ್ಣ ಗಂಟಿನೊಂದಿಗೆ ಬರುತ್ತ) ನೋಡು ನಾನು ಬರೋದು ಎರಡು ದಿವಸ ತಡವಾದರೂ ಆಗಬಹುದು. ನೀನು ಕೆಲಸಕ್ಕೆ ಹೋಗೋದು ಬಿಟ್ರೂ ಸರಿ. ಇವರನ್ನು ಬಿಟ್ಟು ನೀನು ಎಲ್ಲಿಗೂ ಹೋಗಬೇಡ ಆ? (ಗಂಡನಿಗೆ) ನಾನು ಹೋಗಿ ಬರತೀನಿ .... ?

ಮಹದೇವಪ್ಪ - ಆಗಲಿ ಹೋಗಿ ಬಾ. ನೋಡು ಹಂಪಿ ಒಬ್ಬರ ಕಷ್ಟಕ್ಕೆ ಒಬ್ಬರು ಈಡಲ್ಲ. ಅವರು ಕೊಟ್ರೂ ಸರಿ ಬಿಟ್ರೂ ಸರಿ. ನೀನು ಮಾತ್ರ ಸಿಟ್ಟಿಗೇಳಬೇಡ. ಈಶ್ವರನ ಮಾವನಾಗಲಿ ಅವನ ಮಡದಿಯಾಗಲಿ ಎದುರಿಗಿದ್ದಾಗ ಹಣ ಕೇಳಬೇಡ. ನಮ್ಮ ಕಷ್ಟ ಹೇಳಬೇಡ. ಒಂದು ಸಮಯ ಆ ಮನೆಯಲ್ಲಿ ನಿನ್ನ ತಮ್ಮನಿಗೆ ಹಣ ಕೊಡುವಷ್ಟು ಅಧಿಕಾರ ಇರದಿದ್ದರೆ ನಮ್ಮ ಸಂಕಟವನ್ನು ನಿನ್ನ ತಮ್ಮನಿಗೂ ಹೇಳದೇ ಹಾಗೇ ಹೊರಟು ಬಂದುಬಿಡು.... (ಹಂಪವ್ವ ಗಂಡನಿಗೆ ನಮಸ್ಕರಿಸಿ ಹೋಗುವಳು)

## ಸನ್ನಿವೇಶ ೧೦

### ಬೀದಿ

ಪೂವಪ್ಪ - (ನಗುಮುಖದಿಂದ ಸಿಗರೇಟು ಸೇದುತ್ತ ಬರುವನು) ಮನುಷ್ಯ ಮಾಡುವ ಠರಾವಿಗೆ ತೀರ್ಪು ಬರೆಯುವ ಅಧಿಕಾರ ದೈವಕ್ಕಿದೆ. ಅಂತೆಯೇ ಜಗದ ಜೀವನಾಡಿಯನ್ನು ತನ್ನಿಚ್ಛೆಯಂತೆ ಮಿಡಿಯ ಹಚ್ಚಿದ ವಿಧಿ ಕೆಲವರ ನಂದನೆಗೂ ಕೆಲವರ ನಿಂದನೆಗೂ ಪಾತ್ರವಾಗಿದೆ. ಬಲಹೀನವಾದುದನ್ನು ಬಲವಂತವಾದದ್ದು ತಿಂದು ಬದುಕುವುದೇ ಈ ಪ್ರಪಂಚದ ಪರಮ ನಿಯಮ. ಅಂತೆಯೇ ಜೀವ ಜೀವಿಯ ತಿಂದು ಜೀವಿಪುದು ಜಗವೆಲ್ಲ ಎಂದು ಹಾಡಿದ್ದಾನೆ ಸರ್ವಜ್ಞ. ತನ್ನ ಸಾಲದ ಜಾಲದಲ್ಲಿ ಸಿಕ್ಕುಬಿದ್ದು ಮಹದೇವಪ್ಪನ ಹೊಲದ ಪೀಕನ್ನು ಮಿಡತೆಗಳು ತಿಂದ ಪ್ರಯುಕ್ತ ಆದರಿಂದ ಅವನಿಗಾದ ಹಾನಿ ಮುಂದೆ ನನಗಾಗಲಿರುವ ಲಾಭ. ಅಂತೂ ದೈವಿಕ ಸಹಾಯದಿಂದ ನನ್ನ ರೊಟ್ಟಿ ಜಾರಿಬಿತ್ತು ಮಣ್ಣಿನಲ್ಲಿ ಅಲ್ಲ ತುಪ್ಪದಲ್ಲಿ (ನಗುತ್ತ ನಿಲ್ಲುವನು ಚವಡಕ್ಕ ಬರುವಳು)

ಏ... ಎ.... ಏನೇ ಇದು ಚೌಡಿ ಸೀರಿ ಹೊಸದುಟ್ಟಿಯಲ್ಲ ಎಲ್ಲಿತ್ತಿದು

ಚವಡಕ್ಕ - ಈಶ್ವರನ ಮದುವ್ಯಾಗ ಪಂಪವ್ವ ಉಡಿಸಿಲ್ಲೇನಿದನ್ನ ಹಂಗs ಕಟ್ಟಿ ಇಟ್ಟಿದ್ದೆ. ಇವತ್ತು ಉಟ್ಟೀನಿ. ನೋಡಿಲ್ಲs ಮದುವ್ಯಾಗ ?

ಪೂವಪ್ಪ - ಅಹುದಲ್ಲ ಮಹದೇವಪ್ಪನ ಮನಿ ಮದುವಿ ಕೆಲಸಕ್ಕಂತ ನೀನು ಉಪ್ಪಿನಕಾಯಿ ಹಾಕೋದರಿಂದ ಹಿಡಿದು ಉಂಡ ಎಲಿ ತಗೆಯೋದರ ತನಕ ದುಡದಿಯಲ್ಲ. ಅದಕ ಈ ಬಹುಮಾನ ಬಂದದ ಏನು ?

ಚವಡಕ್ಕ - ನೀನು ಹೀಗೆಲ್ಲ ಅಣಕದ ಮಾತು ಆಡಬ್ಯಾಡ, ಚಂದಲ್ಲದು. ಬಡವರ ಮನೆ ಮದುವ ಅಂದರೆ ಬಲೆ ಹಗರ ಕಂಡೇತಲ್ಲ ನಿನಗೆ ? ಇನ್ಯಾರಿಗರ ಮಾಡೂದಾದೀತೇನ ಅಷ್ಟ ಖರ್ಚು ಮಾಡಿ ಮದುವೀನ ?

ಪೂವಪ್ಪ - ಯಾಕ ಅಗಾಕಿಲ್ಲೇನು ? ಯಾರದೊ ದುಡ್ಡು ಸಿಕ್ಕರ ಎಲ್ಲವ್ವಗ ಹೋಗಿ ಉಧೋ ಅನ್ನೋದು ಬಲು ಕಷ್ಟೇನ ? ಪ್ರಪಂಚದ ರೀತೀನ ಹೀಂಗ. ಹಾಸಿಗಿದ್ದಷ್ಟು ಕಾಲ ಚಾಚಿದರ ಕೃಷಣ ಅಂತದ, ಅನ್ನರ ಬೆನ್ನ ಮ್ಯಾಲ

ಲಗಾ ವಗುದರ ಹೌದ ಅಂತದ ಈ ಪ್ರಪಂಚ

ಚವಡಕ್ಕ - ಯಾಕ ಬಾಯಿ ಬಾಳ ಉದ್ದ ಬಿಡಿತೀದಿ ಮಹದೇವಪ್ಪ ನಿನ್ನಂಗೇನು ಮಂದಿ ಹೊಂದಲಗೇಡಿ ಅಂತ ಮಾಡಿಯಾ ? ಮಂದಿ ಹೌದ ಅನ್ನುವಂಗ ಮದುವಿ ಮಾಡಿದಾ

ಹೂವಪ್ಪ - ಹೂ ಆದರ ತನ್ನ ಮನಿ ದುಡ್ಡು ಅಲ್ಲ. ಈ ಸಂಪಿಗೆ ಹೂವಪ್ಪನ ಮನೀದು

ಚವಡಕ್ಕ - ನೀ ಏನ ಪುಗುಸಟ್ಟೆ ಕೊಟ್ಟೀ ಏನು ? ಹೊಲಾ-ಮನಿ ಬರಿಸಿಕೊಂಡು ಬಡ್ಡಿಯಂಗ ಕರಾರ ಮಾಡಿ ಕೊಟ್ಟೀದಿ

ಹೂವಪ್ಪ - ಬರೀಸಿಕೊಂಡರೇನು, ಹೊಲ ಮನಿ ರೊಕ್ಕ ತಂದ ಸುರುವತಾವೇನು ನನ್ನ ಮನ್ಯಾಗ. ಹೊಲದೊಳಗಿನ ಪೀಕು ತಂದು ಹಚ್ಚಿ ಸಾಲ ಸಂದಾಯ ಮಾಡತೀನಿ ಅಂತ ಹೇಳಿದ್ದ. ಆದರ ಎಲ್ಲೈತಿ ?

ಚವಡಕ್ಕ - ಮಿಡತೆ ತಿಂದ ಹೋದರ ಪಾಪ ಅದಕ ಅವನೇನು ಮಾಡಬೇಕು ?

ಹೂವಪ್ಪ - ಅವನೇನು ಮಾಡಬೇಕು ? ಮಾತು ಕೊಟ್ಟಾಂಗ ನಡೀಬೇಕು. ಹೆಸರು ಪಡಿಯಾಕಾದ್ರ ಬರತ್ತ. ಬಸರಿನ ಭಾರ ಒಲ್ಲೆ ಅಂದ್ರ ಬಿಡತ್ತಯೇನು ? ನಾನು ಇವತ್ತು ಮನಿತನ ಹೋಗಿ ಜಳಜಳ ಹೇಳಿ ಬಂದೀನಿ

ಚವಡಕ್ಕ - ಏನಂತ ?

ಹೂವಪ್ಪ - ಇನ್ನೇನಂತ ? ಇನ್ನ ನಾಲ್ಕು ದಿವಸದಾಗ ನನ್ನ ದುಡ್ಡು ನನಗೆ ಕೊಟ್ಟುಬಿಡಬೇಕೂ ಅಂತ. ಸುಳ್ಳು ನನ ಮಗ ಕಳ್ಳಗತ್ತ ತಂದು ಹಾಸಿಗಿ ಹಿಡದ ಮಲಗ್ಯಾನ. ಮಲಗಿದರ ಬಿಡತ್ತೇನು ? ಸಾಲ ತಲೀ ದಿಂಬಿಗಿಗೆ ಬಂದ ಕೂಡುತ್ತ

ಚವಡಕ್ಕ - ಎಲವಿಲ್ಲದ ನಾಲಿಗೆ ಅಂತ ನೀ ಬಲ್ಲಂಗ ಮಾತಾಡಬ್ಯಾಡ, ಮಾದೇವಪ್ಪ ಎಂದರ ಕಳ್ಳತನ ಸುಳ್ಳುತನ ಮಾಡಿದ್ದು ಕಂಡೀಯಾ ? ಕೆಮ್ಮು ಹೆಚ್ಚಾಗಿ ತಂದ ತನಗ ತೊಂದ್ರಿ ಆಗಿ ಮಲಗ್ಯಾನ, ಇಂಥಾದರಾಗ ನೀನು ಸಾಲಕ್ಕ ವರಾತ ಹಚ್ಚಾಕ ಹೋಗಿದ್ದಿ ಅಂದಿಂದ ಮನುಷ್ಯನ ನೀನು ?

ಹೂವಪ್ಪ - ಮನುಷ ಅಲ್ಲ ? ಮತ್ತೇನ ನಾನು ?

ಚವಡಕ್ಕ - ರಾಕ್ಷಸ... .... ನೋಡು ಕೊಂಡ ಆಕಳ ಅಂತ ಕೆಚ್ಚಲ ಕೋಯ್ದು ತಿನಬಾರದು, ದೇವರು ಮೆಚ್ಚೋದಿಲ್ಲ. ಈ ಜನ್ಮಕ್ಕ ಹಿಂಗ ಆಗಿ ಕುಂತಿ. ಮತ್ತ ಮುಂದಿನ ಜನ್ಮಕ್ಕೂ ಬುತ್ತಿ ಕಟ್ಟಿದಿ ಅಂದ್ರ ನೋಡು 'ಕಣ್ಣಿಲ್ಲ ದೇವರಿಗ ನೀನೇ ಶಿವ ಕಾಲಿಲ್ಲದವರಿಗ ನೀನೇ ಶಿವ' ಅಂತ ಹೋದಿ ಹೊಟ್ಟಿ ಹೊಟ್ಟಿ ಬಡಕೋಂತ

ಹೂವಪ್ಪ - ಅಬ್ಬಬ್ಬಾ ನನಗ ಬುದ್ಧಿ ಹೇಳಾಕ ಹತ್ತಿದೇಳು ?

ಚವಡಕ್ಕ - ಬುದ್ಧಿ ನಾಯಾಕ ಹೇಳಲಿ ಇದದ್ದು ಇದ್ದಂಗ ಹೇಳಿನಿ ಇವರ ಮ್ಯಾಲ ನಿನ್ನಿಷ್ಟ (ಹೋಗಹತ್ತುವಳು)

ಹೂವಪ್ಪ - ಏ... ನಿಂದ್ರ .... ... ಹೊರಟಬಿಟ್ಟೆಲ್ಲ ? ಅಲ್ಲ ಈ ಸೀರಿಗೆ ಎಷ್ಟು ಮುಟ್ಟಿರಬಹುದು

ಚವಡಕ್ಕ - ಸೀರಿ ಒಪ್ಪಿರೋದು ನೋಡಿ ಕಂಣ ಪ್ರೀತಿ ತೀರಿಸಿಗೊಳ್ಳೋದು ಬಿಟ್ಟು ಈ ಸೀರಿಗೆ ಎಷ್ಟು ಮುಟ್ಟಿರಬಹುದು ಏನಕಥಿ ಅಂತ ಕೇಳತಿಯಲ್ಲ, ತಿಳಿಗೇಡಿ (ಹುಬ್ಬು ಹಾರಿಸಿ ಕಣ್ಣು ಹೊಡೆಯುವಳು)

ಹೂವಪ್ಪ - ಓ... ಹೋ.... ಹೋ ಹೀಂಗ ಅನಬಾರದ ? ನೋಡು ಚವಡಿ ನಿನ್ನ ಮೈಯಾಗ ಹಂಗಾಮ ಉಕ್ಕಿರೋದು. ನನಗ ಹ್ಯಾಂಗ ಅರ್ಥ ಆಗಬೇಕು ಏ ಸೀರಿ ಒಪ್ಪೇತಿ ನಿನಗ

ಚವಡಕ್ಕ - ಹೂ ಅಂತ ಕಂಣ ಬಿಡಬ್ಯಾಡ ದ್ರಿಷ್ಟಿ ಆದೀತು. ದೇವರಿಗೆ ಹೊರಟಿನಿ

ಹೂವಪ್ಪ - ದೇವರಿಗೆ ಹೊರಟೇದಿ ? ಇವತ್ಯಾಕ ?

ಚವಡಕ್ಕ - ಉಡಿ ತುಂಬುದಿಲ್ಲೇನು. ಇವತ್ತು ದುರಗವ್ವನ ಮಿಡತೆ ಕಾಟ ಮುಂದಿನ ವರುಷಕ್ಕೂ ತರಬ್ಯಾಡ ಅಂತ ಊರ ಮಂದೆಲ್ಲ ಎಡಿ ಕೊಡತಾರ. ನಾನೂ ಹೊಂಟೇನಿ

ಹೂವಪ್ಪ - ಅದಕ ಇಷ್ಟೆಲ್ಲ ಶೃಂಗಾರ ಮಾಡಿಕೊಂಡು ಹೊಂಟೇದಿಯಾ ?

ಪಾರಿಜಾತದ ಹಾಡು ಕುಣಿತ

॥ ಪದ ॥

ಕೆಂಪು ಸೀರೆಯನ್ನುಟ್ಟು । ಕೆಂಡ ಸಂಪಿಗೆ ಮುಡಿದು । ಹೊರಟಿದ್ದಿ
ಯನೇ ಜಾತರಿಗೆ । ನನಗೆಳತಿ ಬೆಳಗುವಿಯೇನೇ ಆರತಿ ।
ಹೋತಾಯ ॥

ವೀರಣ್ಣ - (ಬರುತ್ತ) ಯೇಸ್ರಿ ಹೂವಂಣನವರೇ ಇದು ದಾರಿ...

ಹೂವಪ್ಪ - (ವೀರಂಣನಿಗೆ) ಬಾರೆನ್ನ ಭಾಮಾಮಣಿ । ಬಾರೆನ್ನ ಕಂಣ ಚೂಡಾಮಣಿ ಹೋತಾಯ ॥

ವೀರಣ್ಣ - ಹಿಡಕೊಳ್ಳವ್ವ ಚವಡವ್ವ

ಚವಡಕ್ಕ - ಏ ನಿನ ಗುಂಡಿಶೆಲಿ ಹಾಯಲಿ. ಸುಮ್ಮನ ನಿಂತಗೋ (ಹಿಡಿದುಕೊಳ್ಳುವಳು ತೇಕುತ್ತ ನಿಲ್ಲುವನು)

ವೀರಣ್ಣ - ಏಸ್ರಿ ಹೂವಪ್ಪನೋರೆ ದಾರ್‍ಯಾಗ ನಡಿಸಿಬಿಟ್ಟೇರಲ್ಲ ಕೃಷ್ಣ ಪಾರೀಜಾತಾನ ?

ಹೂವಪ್ಪ - ಅಮದು ಈಕೀನೆ ಗೊಲ್ಲತಿ. ನಾನು ಕೃಷ್ಣ. ನೀನೇ ದೂತಿ. ಹಾಲು ಮಾರುತ ಬಂದಳೀಕಿ । ಬರಿಯ ನಾಮದ ಗೊಲ್ಲತಿ । ಇಕಿ ಹರಿಯನಾಮದ ಗೊಲ್ಲತಿ। ಹಾಲೀನ ಸುಂಕ ಬೇಡಿದರ ಕಂಣ ಮೂಗು ತಿರುವುತಿ ॥ ಹೋತಾಯ ॥ (ಹೋಗುವನು)

ಚವಡಕ್ಕ - ನೋಡಿದ್ಯಾ ಈರಂಣ ಮೂರು ಮರತ ನಿಂತೈತಿ. ದಾರೀ ಅಂದ್ರೂ ಗೊತ್ತಿಲ್ಲ, ಊರಂದ್ರೂ ಗೊತ್ತಿಲ್ಲ, ಕೇರಿ ಅಂದ್ರೂ ಗೊತ್ತಿಲ್ಲ

ವೀರಣ್ಣ - ಚವಡಕ್ಕ ಇವು ಏನ ಹೀಂಗ ಮಾಡತಾವಲ್ಲ. ಈ ಜಾತೀವು ಇವು ಹಿಂಗ್ಯಾಕ ಮಾಡಿತಿದ್ದಾವು ?

ಚವಡಕ್ಕ - ಯಾಕ ಮಾಡತಿದ್ದಾವ ತಮ್ಮ ?

ವೀರಣ್ಣ - ಸಾಯಾಕ ಹಿಂಗ ಮಾಡತಾವು ನೋಡವ್ವ. ದೇವರು ಬಲು ಕಾಣೇನವ್ವ ಸಾಯ ಹೊಡಿಬೇಕೂ ಅಂತ ಇಚ್ಚಾ ಬಂದ್ರ ಇರಿವಿಗೆ ರೆಕ್ಕಿ ಕೊಡತಾನ ದಡ್ಡರಿಗೆ ದುಡ್ಡು ಕೊಡತಾನ. ರೆಕ್ಕಿಬಂದ್ರ ಇರಿವಿ ದೀಪಕ್ಕ ಹಾರಿ ಸತ್ತರ ದುಡ್ಡಿರೋ ದಡ್ಡರು ಹೆಂಣಿನ ಚಪಲಕ್ಕಾಗಲಿ ಇಲ್ಲ ಮಂಣಿನ ಚಪಲಕ್ಕಾಗಿಲೀ ಬಿದ್ದು ಕಂಣು ಮುಚ್ಚಿ ಥಂಣಗ ಅಕ್ಕಾರ. ಈಗ ನಿನ್ನ ಹೂವ್ಯಾ ಮನಸ್ಸಿನಾಗ ಏನ ಮಾಡ್ಯಾನ ಗೊತ್ತೇನವ್ವ ?

ಚವಡಕ್ಕ - ಏನ ಮಾಡ್ಯಾನ ತಮ್ಮ

ವೀರಣ್ಣ - ಮಹದೇವಪ್ಪಗ ಸಾಲಾ ಕೊಟ್ಟಾನಲ್ಲ ? ಆ ಸಾಲದಾಗ ಅವನ ಹೊಲ ಮನಿ ಎತ್ತಿ ಹಾಕಿ ಅನುಕೂಲ ಆದರ ನಿನ್ನ ಕೈಬಿಟ್ಟು ಆ ಹುಡುಗಿ ನೀಲಾನ್ನ ಮಾಡಿಕೊಳ್ಳೊ ಹಂಬಲ ಇಟ್ಟು ಕೊಂಡಾನವ್ವ

ಚವಡಕ್ಕ - ಹೌದಾ ?? ಈ ವಯಸ್ಸಿನಾಗ ??

ವೀರಣ್ಣ - ವಯಸ್ಸೇನು ಮಾಡತ್ತವ್ವ ಮೊದಲೇ ಹೇಳತಾರಲ್ಲ ಬಡತನಕ್ಕ ವಯಸ್ಸು ಬರಬಾರದು, ಶ್ರೀಮಂತಗ ಮುದಿತನ ಬರಬಾರದು ಅಂತ

ಚವಡಕ್ಕ - ಇದಕ ಹಂಪಕ್ಕ ಆಗಲಿ ಮಹದೇವಪ್ಪ ಆಗಲಿ ಒಪ್ಪತಾರ ಅಂತೀಯಾ ?

ವೀರಣ್ಣ - ನಾಲ್ಕು ಜನರ ಸಹಾಯ ಸಹಕಾರ ದೊರೀತು ಅಂದ್ರ ಯಾಕ ಒಪ್ಪತಾರ ?

ಚವಡಕ್ಕ - ಜನರ ಮಾತಿರಲಿ... ನೀ ಸುಮ್ಮನಿರತೀಯಾ ? ಆ ಹುಡಿಗ್ಗೆ ನಿನಗ..

ವೀರಣ್ಣ - ನೋಡವ್ವ ನಾನೂ ಪ್ರಯತ್ನ ಮಾಡತೀನಿ ಈಗ ನಾನೂ ನನ್ನ ಸೆಕ್ರೆಟರಿ ಟ್ರೇನಿಂಗಿಗೆ ಹೋಗತೀನಿ. ನಾನು ಮರಳಿ ಬರೂತನಕ ನೀನು ಈ ಹೂವಪ್ಪನ ತಡದರ ಸಾಕು

ಚವಡಕ್ಕ - ಆಗಲಪ್ಪ ತಮ್ಮ. ನನ್ನ ಬಾಳ್ವೆ ಕೆಟ್ಟಂಗ ಇನ್ನೊಬ್ಬರ ಬಾಳ್ವೆ ಕೆಡಬಾರದು ಅಂತೀನಿ. ನಡಿಯಪ್ಪ ದೇವರಿಗೆ ಹೋಗಿಬಂದು ಇವತ್ತು ನಮ್ಮಲ್ಲೇ ಊಟಾ ಮಾಡೀಯಂತ

ವೀರಣ್ಣ - ಆಗಲಿ ನಡಿಯವ್ವ ನಮಗೇನು ಬೇಡಿ ಉಂಡ ಬಾಯಿ ನಾಡೆಲ್ಲ ಕಂಡಿತ್ತಂತ ನಡಿ.... (ಹೋಗುವರು)

## ಸನ್ನಿವೇಶ ೧೧

ಬಸವರಾಜಪ್ಪನ ಮನೆ

(ಶ್ರೀಮಂತ ಠೀವಿಯ ಮನೆ. ರೇಡಿಯೋ ಸೆಟ್, ಫರ್ನಿಚರ್ ಆಧುನಿಕ ಮಾದರಿಯದು. ಈಶ್ವರ ಲೆಕ್ಕ ಬರೆಯುತ್ತ ಕುಳಿತಿರುವನು. ಶೈಲಜ ಚಹ ತಂದುಕೊಡುವಳು)

ಶೈಲಜ - ಇವತ್ತು ಸಾಯಂಕಾಲ ಅಂಗಡಿಯಿಂದ ಬೇಗ ಬರ್ರಿ... ಪಿಕ್ಚರಿಗೆ ಹೋಗಬೇಕು ಅಂತ ಆಸೆ... ಶಕ್ತಿ ಟಾಕೀಜನಲ್ಲಿ..... ಯಾವದು ಗೊತ್ತೇ ?

ಈಶ್ವರ - ಹೂ

ಶೈಲಜ - ಯಾವದು ಹೇಳಿ ?

ಈಶ್ವರ - ಹೂ..... (ಶೈಲಜ ಲೆಕ್ಕದ ಬುಕ್ಕು ಕಸಿದುಕೊಳ್ಳುವಳು) ಏಕೆ ನಿನಗೇನಾಯಿತು?

ಶೈಲಜ - (ಸಿಟ್ಟಿನಿಂದ) ಇದುವರೆಗೂ ನಾನು ನಿಮ್ಮೊಂದಿಗೆ ಮಾತಾಡಿದೆ ?

ಈಶ್ವರ - ಏನು ಮಾತಾಡಿದೆ ?

ಶೈಲಜ - ನನ್ನ ಕರ್ಮ, ಈವರೆಗೂ ಎಲ್ಲಿದ್ದೀರಿ ನೀವು ?

ಈಶ್ವರ - ಲೆಕ್ಕದ ಪುಸ್ತಕದಲ್ಲಿ

ಶೈಲಜ ನಕ್ಕು ಆನಂದಿಸುವ ಸಮಯದಲ್ಲಿ ನೀವು ಲೆಕ್ಕ ನೋಡುತ್ತ ಕುಳಿತರೆ ನಾನೇನು ಮಾಡಬೇಕು. ಲೆಕ್ಕ ನೋಡಲಿಕ್ಕೆ ಇದು ಮನೆ, ಅಂಗಡಿಯಲ್ಲ

ಈಶ್ವರ - ಗೊತ್ತು ನಾನೀಗ ನೋಡತಾ ಇರೋ ಲೆಕ್ಕ ಮನೇದು, ಅಂಗಡೀದಲ್ಲ (ಮತ್ತೆ ಬರೆಯಹತ್ತುವನು ಕಸಿದುಕೊಳ್ಳುವಳು) ತಿಂಗಳ ಲೆಕ್ಕ ತಿಂಗಳಿಗೊಮ್ಮೆ ಸರಿಪಡಿಸದೇ ಬಿಟ್ಟರೆ ನಾಳೆ ನನ್ನ ತಲೆ ತಿಂದೀತು

ಶೈಲಜ - ನೀವು ನನ್ನ ಕೈಹಿಡಿದು ಈ ಮನೆಗೆ ಬಂದಿರೋದು ನನ್ನ ಮನ ಸಂತೋಷಪಡಿಸಲಿಕ್ಕೆ, ಲೆಕ್ಕ ಬರೆಯುವದಕ್ಕಲ್ಲ. ಸಂಬಳ ಕೊಟ್ರೆ ಸಾವಿರ ಜನ ಬರತಾರ ಲೆಕ್ಕ ಬರೆಯೋರು. ... ತೆಗದಿಡಿರಿ ಪುಸ್ತಕಾನ ಆಚೆಗೆ

ಈಶ್ವರ - ಸಂಬಳಕ್ಕೆ ಬಂದವರು ಸರಿಯಾಗಿ ದುಡಿಯುವರೆಂಬ ನಂಬಿಕೆಯಿದ್ದರೆ ಈ ಉಂಬಳದ ಆಳನ್ನೇಕೆ ತಂದಿಡುತ್ತಿದ್ದ ನಿಮ್ಮಪ್ಪ. ನೋಡು ಶೈಲಾ ಮಗಳು

ಕೊಟ್ಟ ಮಾವನ ಋಣ ಅನ್ನದ ಅಗಳಿನವರೆಗೂ ಮುಟ್ಟುವಂತೆ ನಾಸಿಲ್ಲಿ ದುಡಿಯಬೇಕು ತಾನೆ, ಹೆಣ್ಣು ಕೊಟ್ಟ ಮಾವ ಬಾಳಿಗೆ ಕಣ್ಣು ಕೊಟ್ಟ ದೇವರು ತಿಳೀತಾ ?

ಶೈಲಜ - ಎಷ್ಟೆಂದ್ರೂ ನೀವು ಮಾತು ಬಲ್ಲವರು ಮಹಾ ವಿನಯವಂತರು

ಈಶ್ವರ - ಹೌದು. ಮಾತೇ ನನ್ನ ಮನೆಯ ದೇವರು, ವಿನಯವೆ ನನ್ನ ತಂದೆ-ತಾಯಿ ವಿದ್ಯೆಯಿಲ್ಲ ಬುದ್ಧಿಯಿಲ್ಲ. ಹೀಗಿದ್ದು ವಿನಯ ತುಂಬಿದ ಎರಡು ಮಾತು ಮೈ ಹಂಣ್ಣಾಗುವಷ್ಟು ದುಡಿತ, ಇಷ್ಟನ್ನು ಮಾಡಬಾರದೇ ನಾನು ?

ಶೈಲಜ - ಆ... ಹಾ... ಹಾ.. ಈ ನಿಮ್ಮ ಮಾತಿನ ಕಲೆಗೆ ಸೋತ ನಾನು ನಿಮ್ಮ ಕೈಹಿಡಿದದ್ದು

ಈಶ್ವರ - ಸೋತು ಕೈ ಹಿಡಿದವಳೋ ಗೆದ್ದು ಆಳಬಯಸಿದವಳೂ ಯಾರಿಗೆ ಗೊತ್ತು ? ಈ ನಿನ್ನ ಬೆಡಗಿನ ನಡೆಗೆ, ದಿಟ್ಟ ನುಡಿಗೆ ನನ್ನ ಎದೆಯೆ ನಡುಗಿ ಹೋಗುತ್ತದೆ. ಮೊದಲೇ ನೀನು ಶ್ರೀಮಂತರ ಮಗಳು. ಮನಸ್ಸಿಗೆ ಸ್ವಲ್ಪ ನೋವಾದರೆ ಸಾಕು, ನಿಮ್ಮಪ್ಪನ ಕೈಯಿಂದ ಆಕಾಶ ಪಾತಾಳ ಏಕಾಗಿಸಬಲ್ಲವಳು

ಶೈಲಜ - ನಾನಷ್ಟು ಸ್ವಾರ್ಥಿಯೇ ?

ಈಶ್ವರ - ನೀನೊಬ್ಬಳೇ ಏಕೆ ಹೆಣ್ಣು ಕುಲವೇ ಹಾಗೆ. ಮಗುವಿದ್ದಾಗ ತಂದೆಯ ಕೈಯಿಂದ ದುಡಿಸಿಕೊಳ್ಳುವಿರಿ. ನಂತರ ಗಂಡನ ಕೈಯಿಂದ ಇಷ್ಟ ತೀರಿಸಿಕೊಳ್ಳುವಿರಿ. ಆ ಬಳಿಕ ಹೊಟ್ಟೆಯಲ್ಲಿ ಹುಟ್ಟಿದ ಮಗನಿಂದ ಸೇವೆ ಮಾಡಿಸಿಕೊಳ್ಳುವಿರಿ. ಒಟ್ಟಾರೆ ಬದುಕು ಜಟಕಾಬಂಡಿ, ಹೆಂಡತಿ ಅದರ ಸಾಹೇಬ, ಗಂಡನೇ ಕುದುರೆ, ಮಕ್ಕಳೇ ಪಯಣಿಗರು. ಅಂದ ಬಳಿಕ ಹೇಳು ಇದರಲ್ಲಿ ಯಾರು ಸ್ವಾರ್ಥಿಗಳು ? ಯಾರು ಅಧಿಕಾರ ನಡೆಸುವರು ?

ಶೈಲಜ - ಅವ್ವಯ್ಯ ಎಲ್ಲಿಯ ಮಾತು ಒಯ್ದು ಎಲ್ಲಿಗೆ ಮುಟ್ಟಿಸೋದು ಅಂತೀನಿ. ಅಪ್ಪನ್ನ ದುಡಿಸಿಕೊಂಡಂತೆ ನಿಮ್ಮನ್ನ ದುಡಿಸಿ ಕೊಳ್ಳತೇನೆಯೇ

ಈಶ್ವರ - ಅಲ್ಲವೇನೆ ಮತ್ತೆ ? ನಿನ್ನ ಬದುಕಿನ ರಥಕ್ಕೆ ನಿಮ್ಮಪ್ಪನ ಕುದುರೆಯನ್ನಾಗಿ ಹೂಡಿ ನಾನಿದ್ದಲ್ಲಿಗೆ ಬಂದಿ. ಅಲ್ಲಿಂದ ಆ ಮುಪ್ಪಿನ ಕುದುರೆಯ ಹೆಗಲು ತಪ್ಪಿಸಿ ನನ್ನ ಹೂಡಿ ಇಲ್ಲಿಗೆ ತಂದಿ. ಮುಂದೆ ಇದೂ ಮುಗ್ಗರಿಸಿದಾಗ ಹೊಟ್ಟೀಲಿ ಮಗನ್ನ ಹೂಡತೀಯಾ, ನೋಡು ಶೈಲಾ ಹೆಣ್ಣು ಹುಟ್ಟಿದ್ದು ಒಡತಿಯಾಗಿ ಆಳಲಿಕ್ಕೆ. ಗಂಡು ಹುಟ್ಟಿದ್ದು ಆದರ ಸೇವ ಮಾಡಿ ಸಾಯಲಿಕ್ಕೆ. ಅದ್ದರಿಂದಲೇ ಮೃಣ್ಮಯದಲಿ ಚಿನ್ಮಯ ರತಿ ಮನ್ನಿಸೆನ್ನ ಭಾಗವ ಅಂತ ರಾಷ್ಟ್ರಕವಿ ಪುಟ್ಟಪ್ಪನವರು ಬರೆದದ್ದು

ಶೈಲಜಾ - ಇಂತಹ ಸವಿಮಾತಿನಿಂದ ಸತಿಯ ಮನ ಸಂತಸಗೊಳಿಸುವವರು ಬಿಟ್ಟು

ಲೆಕ್ಕ ಬರೀತಾರೆ ಲೆಕ್ಕ

ಪದ

ಮಧುಮಾಸದ ಮಧುರ ಜೇನಾಗುವ । ರಸದೇವ ಗಂಗೆಯಲ್ಲಿ
ಮೀನಾಗುವ । ಸವಿಬಾಳ ಸಾಗರದಿ ತೇಲಾಡುವ । ಫಲಭರಿತ
ಮರದಂತೆ ಓಲಾಡುವ ।। ರಾಗದಲಿ ರತಿಯಲಿ ಜೊತೆಯಾಗುವ
ಭೋಗದಲಿ ಯೋಗ ಸನ್ಮತಿಯಾಗುವ ।।

ಬಸವರಾಜ - (ಬಂದು) ಈಶ್ವರ (ಇಬ್ಬರೂ ನಾಚಿ ನಿಲ್ಲುವರು) ಇಲ್ಲಿಯ ಕೆಲಸ ಮುಗಿದಿದ್ದರೆ ಬೇಗ ಅಂಗಡಿಗೆ ಹೋಗಿ ಅಲ್ಲಿ ಶೇಖರಿಸಿದ ಹಣವನ್ನು ಬ್ಯಾಂಕಿಗೆ ಕಟ್ಟಿ ಬಾ

ಈಶ್ವರ - ಆಗಲಿ ಮಾವ (ಹೋಗಹತ್ತುವನು)

ಶೈಲಜ - ಅಪ್ಪ ಮತ್ತೆ ಅವರು ಮರಳಿ ಬರುವದು ಯಾವಾಗಲೋ ಏನೋ ಊಟ ಮಾಡಿ ಬ್ಯಾಂಕಿಗೆ ಹೋದರಾಗದೇ ?

ಬಸವರಾಜ - ಇಲ್ಲ, ಹಿಂದಿಸಿಂದ ಬಂದು ಊಟ ಮಾಡವಿಯಂತೆ ಹೋಗು (ಹೋಗವನು ಶೈಲಜೆಗೆ ಅಳು ಬರುವದು) ಇಷ್ಟಕ್ಕೆಲ್ಲ ಅಳುತ್ತಾರೇನಮ್ಮ, ಹುಚ್ಚಿ. ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುವ ಮನುಷ್ಯ ಊಟ ಉಡಿಗೆ ಅಂತ ಕುಳಿತುಬಿಟ್ಟರೆ ಆಗುತ್ತದೆಯೇನಮ್ಮ. ಬ್ಯಾಂಕಿಗೆ ಹಣ ಕಟ್ಟಿ ಬಂದು ಊಟ ಮಾಡಿದರೆ ನಿನ್ನ ಗಂಡನ ಗಂಟಲಲ್ಲಿ ಅನ್ನದ ತುತ್ತು ಇಳಿಯುವದಿಲ್ಲವೇನು ?

ಶೈಲಜ - ಹಾಗಲ್ಲಪ್ಪ ಮಾಡಿಟ್ಟ ಅಡಿಗೆ ಆರಿ ತಂಣಗಾಗುತ್ತದಲ್ಲ ಅಂತ

ಬಸವರಾಜ - ಆ ... ... ಹಾ ಹಾ ಆದೀತು. ನೋಡವ್ವ ತಂಗಳಿದ್ದರೇನು ಬಿಸಿಇದ್ದರೇನು ತೃಪ್ತಿಯಿಂದ ತಿಂದದ್ದು ತಾನೇ ರಕ್ತವಾಗೋದು. ಅಂಗಡಿಯ ವ್ಯವಹಾರದ ಅದಿಗುದಿಯಲಿ ತಿಂದರೆ ಅಜೀರ್ಣವಾಗುತ್ತದೆ. ವರ್ತಕನಿಗೆ ವಿಶ್ರಾಂತಿ ಒಂದು ಕೇಡವ್ವ. ನೋಡು ಮಗು ನಾನೇನು ಮಾಡಿದರೂ ಇದು ನಿನ್ನ ಸುಖಕ್ಕೆ

ಶೈಲಜ - ಗೊತ್ತಪ್ಪ ನನಗೆ ನೀನು ಮಾಡುತ್ತಿರುವುದು ಮಗಳ ಸುಖಕ್ಕಲ್ಲ. ಹಣದ ಹಂಬಲಕ್ಕೆ (ಸಿಟ್ಟಿನಿಂದ ಹೋಗವಳು)

ಬಸವರಾಜ - ಹುಚ್ಚು ಹುಡುಗಿ... ಕಷ್ಟಬಂದರೆ ತಾನೇ ಪ್ರಪಂಚದ ಜ್ಞಾನವಾಗುವುದು. ತಾಯಿ ಸತ್ತ ಮಗಳೆಂದು ಮಮತೆಯಿಂದ ಕಂಡರೆ ನನಗೇ ಪ್ರತ್ಯುತ್ತರ ಕೊಡುತ್ತಾಳೆ. ತನ್ನ ಗಂಡನ ಕೈಗೆ ನನ್ನ ಸಮಸ್ತ ಸಂಪತ್ತಿನ ಸರ್ವಾಧಿಕಾರ ಒಪ್ಪಿಸಬೇಕೆಂದು ಒತ್ತಾಯ ಪಡಿಸುತ್ತಿದ್ದಾಳೆ. ಮೊದಲೇ ಈ ಹುಡುಗ ಅಕ್ಕನ ಕೈಯಲ್ಲಿ ಬೆಳೆದು ಅವಳ ಅಕ್ಕರೆಗೆ ಮಾರು ಹೋಗಿದ್ದಾನೆ. ಈಗ ಇವನಕ್ಕನಿಗೆ ಬಂದ ಆಪತ್ತು ವಿವರಿಸಿ ಸಂಪಿಗಿ ಹೂವಪ್ಪ ಬೇರೆ ಪತ್ರ ಬರೆದಿದ್ದಾನೆ.

ಹೀಗಿದ್ದೂ ಈಶ್ವರನ ಕೈಗೆ ಮನೆಯ ಹಣಕಾಸಿನ ವ್ಯವಹಾರ ವಹಿಸಿಕೊಟ್ಟರೆ ನನ್ನ ಬೊಕ್ಕಸವನ್ನೇ ತನ್ನಕ್ಕನ ಮನೆಗೆ ಸಾಗಿಸಿ ಬಿಟ್ಟಾನು

ಹಂಪವ್ವ - (ರುದ್ರನೊಂದಿಗೆ ಬರುತ್ತ) ಈಶ್ವರ

ಬಸವರಾಜ - ಯಾರು ನೀವು ....

ಹಂಪವ್ವ - ನಾನು ಈಶ್ವರನ ಅಕ್ಕ.... ಈಶ್ವರನಿಲ್ಲವೇ ?

ಬಸವರಾಜ - ಓ.... ಹೋ... ನೀನು ಈಶ್ವರನ ಅಕ್ಕನಲ್ಲವೇ ? ಮರೆತು ಹೋಗಿತ್ತು. ಅದಿರಲಿ ಇಲ್ಲಿ ನೀವು ಯಾರ ಮನೆಗೆ ಬಂದಿದ್ದೀರಿ....

ಹಂಪವ್ವ - ಇಲ್ಲ... ಇಲ್ಲಿ... ನಾವು ... ಯಾರ ಮನೆಗೂ ಬಂದಿಲ್ಲ... ನನ್ನ ತಮ್ಮನ್ನ ಒಂದು ಸಲ ನೋಡಿಹೋಗಬೇಕೂ ಅಂತ ಬಂದಿದ್ದೆ

ಶೈಲಜ - (ಹೊರಗೆ ಬರುತ್ತ) ಯಾರಪ್ಪ ಅದು... .... ಇದೇನು ಚಿಕ್ಕಮ್ಮ ಯಾವಾಗ ಬಂದಿರಿ. ಹೊರಗೇ ನಿಂತೀದ್ದೀರಲ್ಲ ಬರ್ರಿ ಒಳಗೆ... ಬಾ ರುದ್ರ ಕೈಕಾಲು ತೊಳೆದುಕೋ ಬರ್ರಿ (ಒಳಗೆ ಕರೆದುಕೊಂಡು ಹೋಗವಳು)

ಬಸವರಾಜ - ಹೂವಪ್ಪನು ಬರೆದ ಪತ್ರದಂತೆ ನನ್ನ ತರ್ಕ ಸತ್ಯವಾಯಿತು. ಈಶ್ವರನಿಗೆ ಸಲಿಗೆ ಕೊಟ್ಟರೆ ನಾಳೆ ನನ್ನ ಮಗಳು ಮಂಣು ತಿಂದು ಬದುಕಬೇಕಾಗಿ ಬಂದೀತು. ಛೇ ಹಾರಾಡಲು ಬಿಡಬಾರದು. ಅಕ್ಕ ತಮ್ಮರ ಮಧ್ಯೆ ಯಾವ ಅಕ್ಕರೆಯೂ ಉಳಿಯದಂತೆ ಈ ಸಂಪರ್ಕವನ್ನು ಮೊದಲು ಕೊಚ್ಚಿ ಹಾಕಬೇಕು

ಶೈಲಜ (ಹೊರಗೆ ಬರುತ್ತ) ಅಪ್ಪ ಪಾಪ ಚಿಕ್ಕಮ್ಮ ಊರಿನಿಂದ ನಡೆದುಕೊಂಡೇ ಬಂದಿರುವರಂತೆ

ಬಸವರಾಜ - ನಡೆದುಕೊಂಡು... ಇಷ್ಟು ದೂರ ಅಬ್ಬಾ

ಶೈಲಜ - ಹೊರಟು ಮೂರು ದಿನ ಆಯಿತಂತೆ ಬೇಗ ಅವರಿಗೆ ಫೋನು ಮಾಡಪ್ಪ ಬಂದ ಬಿಡತಾರೆ

ಬಸವರಾಜ - ಫೋನ ಯಾಕಮ್ಮ ?

ಶೈಲಜ - ಅಯ್ಯೋ ನಾನೇ ಮಾಡ್ತೇನೆ (ಫೋನ ಮಾಡುವಳು) ಹಲೋ ಸ್ಪೀಕಿಂಗ್ ಶೈಲಜ... ಹೌದು ನಿಮ್ಮಕ್ಕ ಬಂದಿದ್ದಾರೆ... ಬೇಗ ಬರ್ತೀರಾ ? ಬರ್ರಿ (ಒಳಗೆ ಹೊರಡುವಾಗ)

ಬಸವರಾಜ - (ಸಿಟ್ಟಿನಿಂದ) ಶೈಲಾ ....

ಶೈಲಜ- ಏಕಪ್ಪ

ಬಸವರಾಜ - ನೀನು ಆ ಹಂಪವ್ವನೊಂದಿಗೆ ಇಷ್ಟು ಸಲಿಗೆಯಿಂದ ಮಾತಾಡುವದು ನನಗ ಸರಿ ಕಾಣುವದಿಲ್ಲ

ಶೈಲಜ - ಏಕಪ್ಪ ....

ಬಸವರಾಜ - ಏಕೆಂದರೆ ? .... ಅವರ ಅಂತಸ್ತೇನು ನಮ್ಮ ಅಂತಸ್ತೇನು, ಇದನ್ನು ಅರಿತು ವರ್ತಿಸಬೇಕಮ್ಮ

ಶೈಲಜ - ಅಂದರೇನಪ್ಪ ಬಂಧು-ಬಳಗದಲ್ಲಿಯೂ ಸಿರಿ-ಬಡತನಗಳ ತಾರತಮ್ಯ ತೋರಬೇಕೆಂದು ಹೇಳುವಿಯಾ ?

ಬಸವರಾಜ - ಅಹುದವ್ವ ಬಂಧುಗಳಿಲ್ಲಿಯೇ ಈ ತಾರತಮ್ಯ ಹೆಚ್ಚು ಪ್ರಕಟಗೊಳ್ಳಬೇಕು. ಏಕೆಂದರೆ ಮುಸುರೆ ಇದ್ದಲ್ಲಿ ನೊಣಗಳು ಹಾರಿಬರುವಂತೆ ಸಂಪತ್ತುಳ್ಳವರ ಹತ್ತಿರ ಬಂಧು ಬಳಗದವರೆಲ್ಲ ಓಡಿ ಬರುತ್ತಾರೆ. ತಮ್ಮ ಸಂಕಟವನ್ನು ಹೇಳಿಕೊಂಡು ಸಹಾಯ ಬೇಡುತ್ತಾರೆ. ಅಪ್ಪಿ-ತಪ್ಪಿ ಒಂದು ಸಲ ನಾವು ಸಹಾಯ ಮಾಡಿದರೆ ಸಾಕು ಕೊಟ್ಟ ಕಾಸಿಗೆ ಕಿಲುವು ಹಿಡಿಯಿತೆಂದೇ ತಿಳಿಯಬೇಕು

ಶೈಲಜ - ಅಪ್ಪ ಅವರೀಗ ನಮ್ಮ ಬಳಿ ಸಹಾಯ ಬೇಡ ಬಂದಿರುವರೆಂದು ತಿಳಿದುಕೊಂಡಿರುವಿಯಾ ?

ಬಸವರಾಜ - ತಿಳಿಯೋದೇನು ಬಂತು. ಮುಖ ನೋಡಿದ ಮಾತ್ರಕ್ಕೆ ಈ ಬರುವು ಸುಖದಲ್ಲಲ್ಲ ಅಂತ ಅರ್ಥ ಮಾಡಿಕೊಂಡೆ. ಮಗು ಯೋಚಿಸು. ಬಂದ ಅವಳ ಮುಖ ಯಾಚನೆಯ ಭಾವ ಸೂಚಿಸುತ್ತದೆ, ನೋಡಿ ಇಲ್ಲೋ. ಆ ಹಂಪವ್ವನ ಮುಖಾನೆ ಕೋಯ್ದು ಹಿಂಡಿದರೂ ಹನಿ ನೆತ್ತರು ಕೂಡ ಹೊರಡ್ಡೋದಿಲ್ಲ. ಉಡಿಗೆ ತೊಡಿಗೆಯ ಅಸ್ತ-ವ್ಯಸ್ತ ನೋಡಿದರೆ ಯಾವದೋ ವಿಪತ್ತಿಗೀಡಾಗಿ ನಮ್ಮ ಬಳಿ ದುಡ್ಡಿನ ಸಹಾಯ ಬೇಡಲು ಬಂದಂತೆ ಕಾಣುತ್ತದೆ. ಕಾರಣ ನೀನು ಅವಳೊಂದಿಗೆ ಸ್ವಲ್ಪ ಬಿಗುವಿನಿಂದಲೇ ವರ್ತಿಸು. ಆಯಿತೇ ?

ಶೈಲಜ - ಹೋಗಪ್ಪ ಸಾಕು ನಿನ್ನ ಮಾತು (ಎಂದು ಒಳಗೆ ಹೋಗುವಳು. ಹಂಪವ್ವ ಬರುವಳು)

ಬಸವರಾಜ - ಹಂಪವ್ವ... ಇಲ್ಲಿ ಸ್ವಲ್ಪ ಕಸಗೂಡಸ್ತೀಯಾ ?

ಹಂಪವ್ವ - ಆಗಲಪ್ಪ (ಕಸಬರಿಗೆ ತೆಗೆದುಕೊಳ್ಳುವಳು. ರುದ್ರ ಕುರ್ಚಿ ಮೇಲೆ ಕೂಡ್ರುವನು)

ಬಸವರಾಜ - ಏ ಇಳಿಯೋ ಕೆಳಗೆ (ರುದ್ರನನ್ನು ನೂಕಿ) ಹೊಲಸ ಬಟ್ಟೆ ಧರಿಸಿ ಖುರ್ಚಿಯ ಮೇಲೆ ಕೂಡ್ರುತ್ತಾನೆ. ಅದು ಕೊಳೆತು ಹೋಗುವದಿಲ್ಲವೇ ?

ಹಂಪವ್ವ - ಇಲ್ಲಿ ಬಾ ರುದ್ರ

ಬಸವರಾಜ - ನೋಡವ್ವ .... ಮನೆಗೆ ಬಂದರೆ ಕೆಲಸ ಹೇಳಿದರೂ ಅಂತ ಬೇಜಾರ ಪಟುಕೋಬ್ಯಾಡ ಆ... (ಹೋಗುವನು)

ರುದ್ರ - ಅವ್ವ ನಾವು ಇವರ ಮನೆಗೆ ಬರಬಾರದಿತ್ತು

ಹಂಪವ್ವ - ಹೌದಪ್ಪ ಬರಬಾರದಿತ್ತು

ರುದ್ರ - ನಡಿಯವ್ವ ಹೋಗಿಬಿಡೋಣ

ಹಂಪವ್ವ - ತಡಿಯಪ್ಪ ನಿನ್ನ ಮಾವ ಬಂದ ಮೇಲೆ ಭೆಟ್ಟಿಯಾಗಿ ಹೋಗೋಣ (ಕಸಗೂಡಿಸಹತ್ತುವಳು)

॥ ಹಿನ್ನೆಲೆ ಹಾಡು ॥

ಅಳಬಾರದು । ಅಳಬಾರದು । ಅಳುವವರ ಕಂಡರೆ ದಯೆದೋರದು ಅದು ಲೋಕ । ದಯದೋರದು ॥ ಅಂತಸ್ತು ಮೀರಿ ಸಂಬಂಧ ಬೆಳೆಸಿ ಅಪಮಾನ ಹೊಂದಿ ಅಳಬಾರದು ॥ ದುರ್ದೈವದಿಂದ ಬಡತನವು ಬಂದರೆ ಬೀಗರ ಬಾಗಿಲಿಗೆ ಬರಬಾರದು । ಜಾಲಿಯ ಗಿಡದಲಿ ಜಾಜಿಯ ಹೂವನು ಪಡೆಯ ಬಯಸಿದರಲ್ಲಿ ಸಿಗಲಾರದು ॥ ಅಕ್ಕನಾದರೆಯೇನು । ತಮ್ಮನಲ್ಲಿಗೆ ರೊಕ್ಕ ಬೇಡಲು ಭಿಕ್ಷೆ ಸಿಗಲಾರದು ॥

ಶೈಲಜ - (ತಾಟಿನಲ್ಲಿ ಅಕ್ಕಿಯೊಂದಿಗೆ ಬಂದು) ಇದೇನು ಚಿಕ್ಕಮ್ಮ ಮಗಳ ಮನೆಗೆ ಬಂದು ನೀನು ಕಸಗೂಡಿಸುವದೇ ? ಇದು ನಿನ್ನ ಮಗಳಿಗೆ ಶ್ರೇಯಸ್ಸಲ್ಲ ಬಿಡು. (ಬಿಡಿಸಿ) ಬೇಗ ಈ ಅಕ್ಕಿಯನ್ನು ಹಸನು ಮಾಡಿ, ನಾನು ಒಲೆಯ ಮೇಲೆ ಎಸರು ಇಟ್ಟುಬರುತ್ತೇನೆ. ನಿಮ್ಮ ತಮ್ಮನವರೂ ಇನ್ನೂ ಊಟ ಮಾಡಿಲ್ಲ. ಅವರು ಅಂಗಡಿಯಿಂದ ಬರುವಷ್ಟರಲ್ಲಿ ಅಡಿಗೆ ರೆಡಿ ಮಾಡ್ತೀನಿ. ತಮ್ಮನೊಂದಿಗೆ ಊಟ ಮಾಡುವಿರಂತೆ

ಹಂಪವ್ವ - ಮತ್ತೇಕಮ್ಮ ಹೊಸ ಅಡಿಗೆ. ಇದ್ದುದರಲ್ಲಿಯೇ ಮುಗಿಸಿದರಾಯಿತು ಬಿಡು ಶೈಲಾ

ಶೈಲಜ - ಹಾಗಂದರೇನಮ್ಮ ನಾಳೆ ನೀನು ಊರಿಗೆ ಹೋದ ಬಳಿಕ ಮಗಳು ಸರಿಯಾಗಿ ಉಪಚಾರ ಮಾಡಲಿಲ್ಲ ಅಂತ ಚಿಕ್ಕಪ್ಪನ ಮುಂದೆ ಹೇಳಿದರೆ ? ರುದ್ರ ಬಾರೋ ಇಲ್ಲಿ... ಕೂಡು (ಖುರ್ಚಿಯ ಮೇಲೆ ಕೂಡ್ರಿಸಿ ಒಳಗೆ ಹೋಗಿ ಬಂದು ತಿನ್ನಲಿಕ್ಕೆ ಕೊಡುವಳು) ತಗೆದುಕೋ (ಮತ್ತೆ ಒಳಗೆ ಹೋಗುವಳು)

ಈಶ್ವರ - ಅಕ್ಕ (ನಮಸ್ಕರಿಸುವನು)

ರುದ್ರ - ಮಾವಾ (ಹೋಗಿ ಅಪ್ಪಿಕೊಳ್ಳುವನು)

ಈಶ್ವರ - ರುದ್ರ ..... ಯಾವಾಗ ಬಂದ ಅಕ್ಕ... ಮಾವನ ಆರೋಗ್ಯ ಚೆನ್ನಾಗಿದೆಯೇ ನೀಲಾ, ಸುವರ್ಣ ಹೇಗಿದ್ದಾರೆ ?

ಹಂಪವ್ವ - ಎಲ್ಲರೂ ಚೆನ್ನಾಗಿದ್ದೇವೆ. ಮೊದಲು ಹೇಳಪ್ಪ ನೀನು ಚೆನ್ನಾಗಿದ್ದೀಯಾ ? ಯಾಕಪ್ಪ ಇಷ್ಟು ಇಳಿದು ಹೋಗಿರುವಿಯಲ್ಲ. ಮೈ ಹುಷಾರಿಲ್ವೇ ?

ಈಶ್ವರ - ಚೆನ್ನಾಗಿದ್ದೀನವ್ವ ನಂದಿರಲಿ ಹೇಳವ್ವ ಮಾವ ಹೇಗಿದ್ದಾರೆ

ರುದ್ರ - ಅಪ್ಪ ಮಲಗಿ ಬಿಟ್ಟಾನ ಮಾವ (ಅಳುವನು)

ಪಂಪವ್ವ - ಹೌದಪ್ಪ ಮದುವೆ ಆದ ಮೇಲೆ ಕೆಲವು ದಿನ ಸರಿಯಾಗೇ ಇದ್ದರು. ಆದರೆ ಮಧ್ಯೆ ಮಿಡತೆಯ ದಂಡು ಬಂದು ಹೊಲದ ಪೈರನ್ನೆಲ್ಲ ತಿಂದು ಹೋದಮೇಲೆ ತುಂಬಾ ಚಿಂತೆ ಹಚ್ಚಿಕೊಂಡು ಮಲಗಿ ಬಿಟ್ಟಿದ್ದಾರಪ್ಪ

ಈಶ್ವರ - ಹೌದು ಪತ್ರಿಕೆಯಲ್ಲಿ ಓದಿದ್ದೆ. ಉತ್ತರ ದಿಕ್ಕಿನಿಂದ ಹಾರಿ ಬಂದ ಮಿಡತೆಯ ದಂಡು ಅಲ್ಲಿಯ ಪೈರನ್ನೆಲ್ಲ ತಿಂದು ಹಾಕಿ ದಕ್ಷಿಣಕ್ಕೆ ಹಾರಿಹೋಯಿತೆಂದು. ಅದು ನಿಜವೆಂದ ಹಾಗಾಯಿತು. ಅದಿರಲಿ ಬೆಳೆ ಬಹಳ ನಾಶವಾಯಿತೇನವ್ವ?

ಪಂಪವ್ವ - ಹೌದಪ್ಪ ಒಂದು ಕಾಳು ಕೂಡ ಉಳಿಸಲಿಲ್ಲ. ಕಾಳಿನ ಮಾತಿರಲಿ ದಂಟಿನಲ್ಲಿದ್ದ ರವದ ಕೂಡ ಉಳಿಯಲಿಲ್ಲ. ಮೇವಿನ ಅಭಾವಕ್ಕೆ ಅಂಜಿ ಎತ್ತುಗಳನ್ನು ಕೈಗೆ ಬಂದಂತೆ ಮಾರಿಬಿಟ್ಟರಪ್ಪ ನಿಮ್ಮ ಮಾವ

ಈಶ್ವರ - ರವದೆ ಕೂಡ ಉಳಿಯಲಿಲ್ಲವೇ ?

ರುದ್ರ - ರವದೆ ಏಕೆ ಮಾವ ಗಿಡದೊಳಗಿನ ತೊಪ್ಪಲು ಕೂಡಾ ಉಳಿದಿಲ್ಲ. ಬಂದು ನೋಡು

ಈಶ್ವರ - ಹಾಗಿದ್ದಾರೆ ತುಂಬಾ ತೊಂದೆಯಾಗಿರಬೇಕು. ಮತ್ತೆ ಹಣಗಿಣ ಏನಾದರೂ ಬೇಕಿತ್ತೆ ?

ಹಂಪವ್ವ - ಹಣ... (ಬಸವರಾಜ ಕೆಮ್ಮುವನು)

ಈಶ್ವರ - ಬೇಕಿದ್ರೆ ಕೇಳವ್ವ ಸಂಕೋಚ ಪಟ್ಟುಕೊಳ್ಳಬೇಡ

ಬಸವರಾಜ - (ಬಂದು) ಈಶ್ವರ ಕೇಳಿದಿಯೇನೋ ಮುಂಬೈಯಲ್ಲಿ ನಮ್ಮ ಆಸಾಮಿ ಜೋತಿಲಾಲ ಬರ್ವೆ ದಿವಾಳಿ ತೆಗೆಯುವ ತಯಾರಿಯಲ್ಲಿ ಇದ್ದಾನಂತೆ

ಈಶ್ವರ - ಜೋತಿಲಾಲ ಬರ್ವೆ ? ಯಾರು ಹೇಳಿದರು ಮಾವ ?

ಬಸವರಾಜ - ಇದೀಗ ಶಿವಯ್ಯನವರು ಫೋನ ಮಾಡಿದ್ದರು. ಬಾಕಿ ವಸೂಲ ಮಾಡಿಕೊಂಡು ಹೋಗದಿದ್ರೆ ಗಂಟೆಲ್ಲ ಮುಳುಗಿ ಹೋಗುವುದು ಖಂಡಿತ ಅಂತ ತಿಳಿಸಿದರು. ಎಷ್ಟಿದೆ ಅವರ ಮೇಲೆ ನಮ್ಮ ಬಾಕಿ ?

ಈಶ್ವರ - ಜೋತಿಲಾಲ ಬರ್ವೆ... .... ಸುಮಾರು ಹತ್ತು ಸಾವಿರವಿರಬಹುದು

ಬಸವರಾಜ - (ಸಿಟ್ಟಿನಿಂದ) ಏನಿದು ನಿನ್ನ ಮಾತು ನಾನು ಕೇಳುವದೇನಿದು. ನೀನು ಹೇಳುವದೇನು. ಇದು ವ್ಯವಹಾರದ ಲಕ್ಷಣವೇ ? ಅಸಾಮಿ ಮುಳುಗಿ ಹೋಗುತ್ತದೆಯೆಂದು ನಾನು ಹೇಳಿದರೆ ಅಂದಾಜಿನ ಲೆಕ್ಕ ನೀನು ಬೊಗಳತಿಯಾ ಬಿಲ್ ಎಲ್ಲಿದೆ ತೆಗೆದುಕೊಡ ನಡಿ (ಇಬ್ಬರೂ ಒಳಗೆ

ಹೋಗುವರು. ಹಂಪವ್ವ ಬೆರಗು ಹೊಡೆದು ನಿಲ್ಲುವಳು)

**(ಹಿನ್ನಲೆ ಮಹದೇವಪ್ಪನ ಮಾತು)**

ನೋಡೆ ಹಂಪಿ ಒಬ್ಬರ ಕಷ್ಟಕ್ಕೆ ಒಬ್ಬರಿರಲ್ಲ, ಅವರು ಕೊಟ್ಟರೂ ಸರಿ, ನೀನು ಮಾತ್ರ ಸಿಟ್ಟಿಗೇಳಬೇಡ, ಈಶ್ವರನ ಮಾವನಾಗಲೀ ಅವನ ಮಡದಿಯಾಗಲೀ ಎದುರಿದ್ದಾಗ ಹಣ ಕೇಳಬೇಡ, ನಮ್ಮ ಕಷ್ಟ ಹೇಳಬೇಡ, ಒಂದು ಸಮಯ ಆ ಮನೇಲಿ ನಿನ್ನ ತಮ್ಮನಿಗೆ ಹಣ ಕೊಡುವಷ್ಟು ಅಧಿಕಾರವಿರದಿದ್ದರೆ ನಮ್ಮ ಸಂಕಟವನ್ನು ನಿನ್ನ ತಮ್ಮನಿಗೂ ತಿಳಿಸದೇ ಹಾಗೇ ಬಂದುಬಿಡು (ಒಳಗಿನಿಂದ ಮಾವ ಅಳಿಯ ಲೆಕ್ಕ ನೋಡುತ್ತ ಬರುವರು)

ಈಶ್ವರ - ಇಲ್ಲಿದೆ ನೋಡಿ ಮಾವಾ ಅವರ ಬಾಕಿ

ಬಸವರಾಜ - (ನೋಡಿ) ಬಿಲ್‌ಬುಕ್ಕಿಗೆ ಸಹಿ ಮಾಡಿಸಿದ್ದಿಯೋ ಇಲ್ಲೋ

ಈಶ್ವರ - ಮಾಡಿಸಿದ್ದೇನೆ (ತೋರಿಸುವನು)

ಬಸವರಾಜ - ಒಳ್ಳೇದಾಯಿತು, ಹ.... ಸದ್ಯ ಒಂದು ಗಾಡಿ ಇದೆ ಹೊರಟುಬಿಡು, ನಾಲ್ಕು ದಿನ ತಡವಾದರೂ ಚಿಂತೆಯಿಲ್ಲ ಬಾಕಿ ಚುಕ್ತಾ ಮಾಡಿಕೊಂಡೇ ಬರಬೇಕು

ಶೈಲಜ - ಇದೇನಪ್ಪ ರಾತ್ರಿ ಗಾಡಿಗೆ ಹೋದರಾಗುವದಿಲ್ಲವೇ ? ಅವರಕ್ಕ ಬಂದಿರುವುದು ಕಣ್ಣಿನಿಂದ ಕಂಡರೂ ಮುಂಬೈಗೆ ಹೊರಡು ಅಂತ ಅವಸರ ಪಡಿಸ್ತೀಯಲ್ಲ ಅವರಕ್ಕನ ಜೊತೆ ನಾಲ್ಕು ಮಾತೂ ಕೂಡ ಆಡಬೇಡವೆ ?

ಬಸವರಾಜ - ಇಲ್ಲಿ ಮಾತನಾಡುತ್ತ ಕುಳಿತರೆ ಅಲ್ಲಿ ಹತ್ತು ಸಾವಿರ ಹಣ ಮುಣುಗಿ ಹೋಗುತ್ತದೆ, ವರ್ತಕನಾದವನು ಹೊತ್ತು ಗೊತ್ತು ಅರಿತು ವರ್ತಿಸದಿದ್ದರೆ ನೆತ್ತಿಯ ಮೇಲೆ ಕತ್ತಿಬಿದ್ದು ಮಸ್ತಕ ಸೀಳಿ ಬೀಳುತ್ತದೆ. ನಿತ್ಯ ತೇಜಿ ಮಂದಿ ನಡಿಯೋ ಈ ಕಾಲದಲ್ಲಿ ಮೊದಲು ಹೊತ್ತಿಗೆ ಬೆಲೆ ಕೊಡಬೇಕಮ್ಮ

ಹಂಪವ್ವ - ಅಹುದು ಈಶ್ವರ ನಿನ್ನ ಮಾವನ ಮಾತು ಸತ್ಯ. ನಾನೇನಪ್ಪ ಮತ್ತೆ ಬಂದರೆ ಭೆಟ್ಟಿಯಾದೇನು ? ಈ ಒಡವಿಯ ಮನೆಯ ಮಾತು ಕೇಳುವದೇನು ಮಹಾ. ಇಲ್ಲಿ ನನಗಾಗಿ ಕಾದು ನಿಲ್ಲುವದಕ್ಕಿಂತ ಮೊದಲು ಮುಂಬೈಯಲ್ಲಿ ಮುಳುಗಿ ಹೋಗಲಿರುವ ನಿನ್ನ ಮಾವನ ಹಣ ಉಳಿಸಿಕೊಡಪ್ಪ

ಶೈಲಜ - ಊ.... ಹೂ.... ಅದೆಲ್ಲ ಆಗದ ಮಾತು ವ್ಯಾಪಾರ ಮಾಡುವ ಇವರಿಗೆ ಹತ್ತು ಸಾವಿರ ಹಣ ದೊಡ್ಡದಲ್ಲ. ಕ್ಷಣದಲ್ಲಿ ಹುಟ್ಟುತ್ತದೆ ಕ್ಷಣದಲ್ಲಿ ಸಾಯುತ್ತದೆ. ಪ್ರಯತ್ನಿಸಿದರೆ ಅದರ ಎರಡರಷ್ಟು ರೊಕ್ಕ ಸಿಕ್ಕಬಹುದು, ಇವರ ಅಕ್ಕರೆಯಿಂದ ಸಲುಹಿದ ಅಕ್ಕನ ಒಲುಮೆ ಸಿಕ್ಕಬಹುದೇ ?

ಬಸವರಾಜ - ಸಾಕು ಸುಮ್ಮನಿರವ್ವ, ವ್ಯಾಪಾರದ ಮಾತು ಮನೆಯಲ್ಲಿ ಮುಸುರೆ ತೊಳೆಯುವ ನಿಮಗೆಂತು ಅರ್ಥವಾದೀತು, ಹತ್ತು ಸಾವಿರ ಹಣ ಸಣ್ಣ ಮೊತ್ತವಲ್ಲ ದಿನಗಳೆದರೆ ಅಕ್ಕ ದೊರೆಯಬಹುದು. ಮುಳುಗಿದರೆ ರೊಕ್ಕ

ದೊರೆಯಬಹುದೇ? ಅಕ್ಕರತೆ ಪ್ರೀತಿ ರೀತಿ ನೀತಿ ಇವೆಲ್ಲ ಹಣದ ಮುಂದೆ ಓಡತಾವೇನಮ್ಮ ? ಅದೆಲ್ಲ ಸುಳ್ಳು ಈಶ್ವರ ಸಿದ್ಧನಾಗು ಖರ್ಚಿಗೆ ಹಣ ಇದೆಯಷ್ಟೇ ... ಹೂ... ನಡಿ

ಶೈಲಜ - (ಅಡ್ಡಗಟ್ಟಿ) ಅಡುಗೆಯಾಗಿದೆ. ಕೊನೆಗೆ ಊಟ ಮಾಡಿಕೊಂಡಾದರೂ ಹೋಗಲಿಬಿಡಪ್ಪ. ಯಾಕಿಷ್ಟು ಅವಸರ ಪಡಿಸ್ತೀಯಾ ?

ಹಂಪವ್ವ - ಇರಲಿ ಬಿಡು ಶೈಲಾ. ವ್ಯಾಪಾರದ ಮಾತು ಅವರಿಗೆ ತಿಳಿದಷ್ಟು ಮನೇಲಿ ಮುಸುರೆ ತಿಕ್ಕುವ ನಮಗೆಂತು ಅರ್ಥವಾದೀತು. ಇದೀಗ ಹೇಳಲಿಲ್ಲವೇ ನಿನ್ನ ತಂದೆ ದಿನಗಳೆದರೆ ಅಕ್ಕ ದೊರೆಯಬಹುದು. ಮುಳುಗಿದ ರೊಕ್ಕ ದೊರೆಯದು ಅಂತ. ಆಗಲಿ ಹೋಗು ಈಶ್ವರ ನೀನು ಎಲ್ಲಿದ್ದರೂ "ನನ್ನ ತಮ್ಮ ಸುಖವಾಗಿರಲಿ" ಅಂತ ಬಯಸತೇನಪ್ಪ ನಾನು

ಈಶ್ವರ - ಆಗಲಕ್ಕ ನಾನು ಬರುವವರೆಗೂ ನೀನಿಲ್ಲೇ ಇದ್ದುಬಿಡು. ಬೇಗ ಬಂದು ಬಿಡ್ತೇನೆ ಬರ್ತೀನಿ ರುದ್ರ (ಹೋಗುವನು)

ಶೈಲಜ - ಒಳಗೆ ಬಾ ಚಿಕ್ಕಮ್ಮ

ಹಂಪವ್ವ - ಶೈಲಜ ಇನ್ನು ಮೇಲೆ ನಾನು ಈ ಮನೆಯಲ್ಲಿ ಒಂದು ಕ್ಷಣ ಕೂಡ ನಿಲ್ಲಲಾರೆ, ರುದ್ರ ನಡೆಯಪ್ಪ ಊರಿಗೆ ಹೋರಡೋಣ

ಶೈಲಜ - ಇದೇನು ಮಾತಮ್ಮ ಹಾಗೇ ಹೊರಡೋದೆ

ಹಂಪವ್ವ - ಶೈಲಾ ನ್ನಾನಿಲ್ಲಿಗೆ ಬರಬಾರದಿತ್ತು, ಬಂದು ದೊಡ್ಡ ತಪ್ಪು ಮಾಡಿದೆ. ಬಡತನ ಬಂದಾಗ ಬೀಗರ ಬಾಗಿಲಿಗೆ ಬಂದು ನಿಲ್ಲಬಾರದೆಂದು ಹಿರಿಯರು ಹೇಳಿದ್ದರು. ಆ ಮಾತು ಮೀರಿ ಬಂದ ನಾನು ಈ ಅವಮಾನ ಸಹಿಸಬೇಕಾಯಿತು

ಬಸವರಾಜ - ಹೂ ಅದು ನಿನಗೀಗ ತಿಳಿಯಿತೇನು ? ಈ ಊರಿನ ಪ್ರಸಿದ್ಧ ಶ್ರೀಮಂತನೆಂದು ಕರೆಯಿಸಿಕೊಳ್ಳುವ ನನ್ನ ಮನೆಗೆ ಸಂಬಂಧಿಕಳೆಂದು ಹೇಳಿಸಿಕೊಳ್ಳುವ ನೀನು ಇಂತಹ ಅಮಂಗಲ ವೇಷದಲ್ಲಿ ಬಂದರೆ ನಮ್ಮ ಮಾನ ಉಳಿಯುತ್ತದೆಯೇನು? ಎಂತಹ ದರಿದ್ರರ ಮನೆಯಿಂದ ತಮ್ಮ ಮಗಳಿಗೆ ಗಂಡು ಕೊಂಡು ತಂದಿದ್ದಾರೆಂದು ಜನ ನಮ್ಮನ್ನು ನಿಂದಿಸಲಿಕ್ಕಿಲ್ಲವೇ ?

ಹಂಪವ್ವ - ಬಸವರಾಜರವರೇ ನಿಮ್ಮ ಮಗಳ ಕೈ ನನ್ನ ತಮ್ಮನ ಕೈಯಲ್ಲಿ ಕೊಡಿಸಬೇಕೆಂದು ಬಯಸಿ ಈ ಬಡವಿಯ ಮನೆಗೆ ಬಂದಿದ್ದೀರಲ್ಲ ಆಗ ತೋರಿಸಬೇಕಿತ್ತು ಈ ನಿಮ್ಮ ಶ್ರೀಮಂತಿಕೆಯ ದರ್ಶನವನ್ನು. ನನ್ನ ತಮ್ಮನ ಚೆಲುವಿಕೆಗೆ ಮನಸೋತ ನಿಮ್ಮ ಮಗಳು ಕೊರಳಲ್ಲಿ ಕರೀಮಣಿ ಧರಿಸುವಾಗ ಎಲ್ಲಿ ಮಾಯವಾಗಿದ್ದವು ? ನಿಮ್ಮ ಕೆಲಸ ತೀರುವವರೆಗೂ ನಮ್ಮ ದಾರಿದ್ರ್ಯ, ಬಡತನ, ಹರಿದ ಬಟ್ಟೆ, ಹಸಿದ ಹೊಟ್ಟೆ ಯಾವದೂ ನಿಮ್ಮ ಕಣ್ಣಿಗೆ ಕಾಣಲಿಲ್ಲ. ಒಟ್ಟಾರೆ

ಶ್ರೀಮಂತಿಕೆಯಂದರೆ ಬಲಿ ಹೆಣೆದು ಕುಳಿತ ಜೇಡನ ಹುಳುವಿದ್ದಂತೆ. ಕಂಣಿಗೆ ಚಂದ ಕಂಡು ಅದರಲ್ಲಿ ಬಂದು ಬಿದ್ದ ಜೀವ ತಿಂದು ಬದುಕುವ ಮೃತ್ಯುಮುಖ

ಬಸವರಾಜ - ಸಾಕು ನಿಲ್ಲಿಸು ನಿನ್ನ ಮಾತನ್ನು. ಇನ್ನೇನಾದರೂ ಬಾಯಿಬಿಟ್ಟರೆ ಮನೆಯ ಆಳಿನ ಕೈಯಿಂದ ಹೊರದಬ್ಬಿಸಬೇಕಾದೀತು

ಹಂಪವ್ವ - ಇಲ್ಲಿ ನಿಲ್ಲಲು ಅಪೇಕ್ಷೆ ಪಟ್ಟರಲ್ಲವೇ ? ನೀನು ನನ್ನನ್ನು ಹೊರ ದಬ್ಬಿಸುವದು. ಉಳ್ಳವರು ಹಣ ಕಾಯ್ದುಕೊಂಡಂತೆ, ಬಡವರ ಮಾನ ಕಾಯ್ದುಕೊಳ್ಳುತ್ತಾರೆ. ಅದರೊಂದು ಮಾತು... ಇಂದು ನೀವು ಯಾವ ಮುಖದಿಂದ ನನ್ನ ಹೊರದಬ್ಬಿಸುವುದಾಗಿ ಹೇಳಿದಿರೋ ಮುಂದೆ ಅದೇ ಮುಖದಿಂದ ನನ್ನ ಮನೆಯ ಬಾಗಿಲಿಗೆ ಬಂದು ದೇಹೀ ಅನ್ನುವ ಹೊತ್ತು ನಿಮಗೆ ಬರದಿದ್ದರೆ ನನ್ನ ಹೆಸರಲ್ಲ. ನಡೆ ರುದ್ರ (ಹೋಗುವಳು)

ಶೈಲಜ - ಚಿಕ್ಕಮ್ಮ ಚಿಕ್ಕಮ್ಮ (ತಡೆಯಹೋಗುವಳು)

ಬಸವರಾಜ - (ಹಿಡಿದುಕೊಂಡು) ಇರಲಿ ಬಿಡಮ್ಮ ಆ ಬಡವಿಯ ಬಗ್ಗೆ ನಿನಗೆಷ್ಟು ಆದರ ಮೈ ಮುಚ್ಚುವಷ್ಟು ಬಟ್ಟೆ, ಹೊಟ್ಟೆ ತುಂಬವಷ್ಟು ಹಿಟ್ಟು ದೇವರು ಇವಳಿಗೆ ಒದಗಿಸಿದ್ದರೆ ಇನ್ನೂ ಎಷ್ಟು ಘಟ್ಟಿಸಿ ಮಾತನಾಡುತ್ತಿದ್ದಳೋ ? ಒಟ್ಟಾರೆ ಬಡವರಿಗೆ ಸೊಕ್ಕು ಬಲುಜೋರು. ನಡೆಯಮ್ಮ ಊಟಕ್ಕೆ (ಶೈಲಜ ಸಿಟ್ಟಿನಿಂದ ಅಪ್ಪನ ಮುಖ ನೋಡಿ ಜೋರಾಗಿ ಒಳಗೆ ಹೋಗುವಳು)

# ಸನ್ನಿವೇಶ ೧೨

## ಬೀದಿ

ರುದ್ರ - ಯಾಕವ್ವಾ ಯಾಕ ಅಳತೀಯಾ ?

ಹಂಪವ್ವ - ನಮ್ಮ ಬಾಳಿನುದ್ದಕ್ಕೂ ಅಳವದೊಂದೆ ಉಳಿಯಿತಪ್ಪ. ತವರು ಮನೆಯ ವ್ಯಾಮೋಹದಿಂದ ತಮ್ಮನ ಮದುವೆ ಮಾಡಿ ನಿಮ್ಮ ಅನ್ನದ ತುತ್ತನ್ನು ಅನ್ಯರ ಬಾಯಿಗಿತ್ತೆ ರುದ್ರ. ನಿಮ್ಮನ್ನ ಗತಿ ಹೀನರನ್ನಾಗಿ ಮಾಡಿದ ಈ ನಿನ್ನ ತಾಯಿ ಬಾಳಿನುದ್ದಕ್ಕೂ ಅಳುವದೊಂದೇ ಉಳಿಯಿತಪ್ಪ. ಯಾವ ಮುಖ ಹೊತ್ತು ನಾನಿನ್ನು ಮನೆಗೆ ಬರಲಿ. ಸಾಲ ಕೊಟ್ಟವರಿಗೇನು ಹೇಳುವದು ? ಈ ಸುದ್ದಿ ಕೇಳಿದರೆ ನಿನ್ನ ತಂದೆ ಅದೆಷ್ಟು ನೊಂದುಕೊಳ್ಳುವರು. ಶಿವ ಶಿವ ಯಾರಿಗೂ ಇಂತಹ ಹೊತ್ತು ತರಬಾರದಪ್ಪ

ರುದ್ರ - ಇರಲಿ ಬಿಡಮ್ಮ ಮೊದಲು ಮನೆಗೆ ನಡೆ

ಹಂಪವ್ವ - ಮನೆಗ ? ನಾನೊಲ್ಲೆ !

ರುದ್ರ - ಅಂದರೇನವ್ವ ?

ಹಂಪವ್ವ - ನಾನು ತಿಳಿದತ್ತ ಹೋಗುತ್ತೇನೆ. ನೀನೊಬ್ಬನೇ ಮನೆಗೆ ಹೋಗು

ರುದ್ರ - ನೀನೂ ಬಾರವ್ವ... ಬಾರವ್ವ (ಕೈ ಹಿಡಿದು ಜಗ್ಗುವನು)

ಹಂಪವ್ವ - ನಾನೊಲ್ಲೆ ಬಿಡು ರುದ್ರ ಕೈಬಿಡು ರುದ್ರ (ಎಂದು ಬಿಡಿಸಿಕೊಳ್ಳುವಾಗ ವೀರಣ್ಣ ಬರುವನು)

ವೀರಣ್ಣ - ಇದೇನತ್ತೆ... ತಮ್ಮನ ಊರಿನಿಂದ ಈಗ ಬಂದಿರಾ ?

ರುದ್ರ - ನೋಡು ಮಾವ ಅವ್ವ ಮನಿಗೆ ಬರಲಿಕ್ಕೆ ಒಲ್ಲೆ ಅಂತಾಳೆ

ವೀರಣ್ಣ - ಹೌದೇನತ್ತೆ ??

ಹಂಪವ್ವ - ವೀರಣ್ಣ ಯಾವ ಮುಖ ಹೊತ್ತು ನಾನೀಗ ಮನೆಗೆ ಹೋಗಲಪ್ಪ

ವೀರಣ್ಣ - ಏಕೆ ? ಈಶ್ವರನಿಂದ ನಿಮಗೇನೂ ಹಣದ ಸಹಾಯ ದೊರೆಯಲಿಲ್ಲವೆ ? ಅಥವಾ ಈಶ್ವರ ಊರಲ್ಲಿರಲಿಲ್ಲವೆ ?

ಹಂಪವ್ವ - ಇದ್ದನಪ್ಪ ! .....

ವೀರಣ್ಣ - ಇದ್ದರೆ ನಿಮ್ಮನ್ನು ಇಷ್ಟು ಬೇಗ ಕಳಿಸಿದನೇಕೆ ? ನಾಲ್ಕು ದಿನ ಇದ್ದು ಹೋಗಿ ಅಂತ ಹೇಳಲಿಲ್ಲವೆ ?

ಹಂಪವ್ವ - ಅವನೇನೋ ಹೇಳಿದ. ಅಕ್ಕರೆಯನ್ನೂ ತೋರಿದ... ... ಆದರೆ ಅವನ ಮಾವ... ಬಸವರಾಜಪ್ಪ ಮಹಾ ಸ್ವಾರ್ಥಿಯಪ್ಪ ವೀರಣ್ಣ ಮಹಾಸ್ವಾರ್ಥಿ... ಹಕ್ಕಿಯಂತೆ ಸಲುಹಿದ ನನ್ನ ತಮ್ಮನನ್ನು ನಾವೇ ಕುಳಿತು ಪಂಜರದ ಪಕ್ಷಿಯನ್ನಾಗಿ ಮಾಡಿದಂತಾಯಿತು. ಆ ಮನೆಯಲ್ಲಿ ಈಶ್ವರನಿಗೆ ಯಾವ ಅಧಿಕಾರವೂ ಇಲ್ಲವಪ್ಪ...

ವೀರಣ್ಣ - ಇಲ್ಲಿಯ ಕಷ್ಟ ನಷ್ಟಗಳನ್ನಾದರೂ ನೀವು ನಿಮ್ಮ ತಮ್ಮನ ಮುಂದೆ ಹೇಳಿದಿರಾ ಅತ್ತೆ ?

ಹಂಪವ್ವ - ಅದಕ್ಕೆ ಅವರ ಮಾವ ಅವಕಾಶ ಕೊಟ್ಟರಲ್ಲವೇ ಹೇಳುವದು ? ರೊಕ್ಕದ ಮಾತಿರಲಿ ಅಕ್ಕರೆಯಿಂದ ಅಕ್ಕ ತಮ್ಮ... ಎರಡು ಮಾತು ಆಡಲಿಕ್ಕೂ ಅವಕಾಶ ಒದಗಲಿಲ್ಲ. ಅವನ ಮಾವ, ವೀರಣ್ಣ... ಅದೇನಿದ್ರೂ ಸರಿ ಬಡತನ ಬಂದಾಗ ಬೀಗರ ಮನೆಯ ಬಾಗಿಲಿಗೆ ಹೋಗಿ ನಿಲ್ಲಬಾರದು, (ದುಃಖಿಸುವಳು)

ವೀರಣ್ಣ - ಹೋಗಲಿ ಬಿಡು ಅತ್ತೆ, ನೀವೇನೂ ಚಿಂತಿಸಬೇಡಿ. ಸಮಯ ಬಂದರೆ ನಾನು ಒಂದು ಸಲ ಬಾಗಲುಕೋಟೆಯವರೆಗೂ ಹೋಗಿ ಬರುತ್ತೇನೆ, ನೀವೀಗ ಮನೆಗೆ ಹೋಗಿರಿ...

ಹಂಪವ್ವ - ಮನೆಗೆ ?? ಯಾವ ಮುಖ ಹೊತ್ತು ಮನೆಗೆ ಹೋಗಲಪ್ಪ ? ಆಸೆಯಿಂದ ಕಾದು ಕುಳಿತ ನಿನ್ನ ಮಾವನಿಗೇನು ಹೇಳಲಿ. ಸಾಲ ಕೊಟ್ಟ ಹೂವಪ್ಪ ಬಂದು ತೊಂದರೆ ಕೊಡುತ್ತಾನೆ. ಅವನಿಗೇನು ಹೇಳಿ ಸಮಾಧಾನಗೊಳಿಸುವದು ?

ವೀರಣ್ಣ - ಸಾಲ ಕೊಟ್ಟ ಹೂವಪ್ಪ ಬಂದು ಕೇಳಿದರೆ ನಾನು ಊರಿನಿಂದ ಬರುವವರೆಗೂ ತಡೆದುಕೊಳ್ಳಿ ಅಂತ ಹೇಳಿ... ಅತ್ತೆ. ನಾನೂ ನನ್ನ ಸೆಕ್ರೆಟರಿ ಟ್ರೇನಿಂಗ್‌ಗೆ ಹೊರಟಿದ್ದೇನೆ

ಹಂಪವ್ವ - ನೀನೂ ಊರಿನಲ್ಲಿರದಿದ್ರೆ ಅವನೇನು ಮಾಡುತ್ತಾನೋ ಕಾಣೆ.....

ವೀರಣ್ಣ - ಅವನೇನು ಮಾಡತಾನ ಹೋಗಿ ಅತ್ತ ... ... ಅಲ್ಲದೇ ಮಾವನಿಗ ದಮ್ಮು ಕೆಮ್ಮು ಹೆಚ್ಚಾಗಿ ಬಿಟ್ಟದ ... ... ಭಯಪಡಬೇಡಿ... ವೈದ್ಯರಿಗ ತೋರಿಸಿದ್ದೇನ

ಹಂಪವ್ವ - ಬರತೀನಪ್ಪ ವೀರಣ್ಣಾ. ನೀನಾದರೂ ಊರಿನಲ್ಲಿರುತ್ತಿದ್ದರ ನನಗ ಧೈರ್ಯವಿರುತ್ತಿತ್ತು. ಈಗ ನೀನೂ ಹೊರಟಿದ್ದೀಯ... ಆಗಲಿ ಬೇಗ ಬಂದುಬಿಡಪ್ಪ. ನಡೆ ರುದ್ರ (ರುದ್ರನೊಂದಿಗೆ ಹೋಗುವಳು)

ವೀರಣ್ಣ - ಬರಬಾರದು.... ಇಂತಹ ಕಷ್ಟ ಯಾರಿಗೂ ಬರಬಾರದು.... (ಹೋಗುವನು)

## ಸನ್ನಿವೇಶ ೧೩

ಮಹದೇವಪ್ಪನ ಮನೆ

(ಮಹದೇವಪ್ಪ ತೀರಾ ನಿತ್ರಾಣನಾಗಿದ್ದಾನೆ. ನೀಲಾ, ಸುವರ್ಣ ಆರೈಕೆ ಮಾಡುತ್ತಿದ್ದಾರೆ)

ಮಹದೇವಪ್ಪ - ಮಗು ನೀಲಾ ನಿನ್ನ ತಾಯಿ ಯಾವಾಗ ಬರತಾಳೋ ನಾ ಕಾಣೆ. ದಮ್ಮು ಕೆಮ್ಮು ಹೆಚ್ಚಾಗಿ ನನ್ನ ಪ್ರಾಣಾನೇ ಕಚ್ಚತಾ ಇದೆ. ಕೆಮ್ಮಿನಿಂದ ಕರಳು ಕತ್ತರಿಸಿ ಬಿದ್ದಷ್ಟು ಯಾತನೆಯಾಗುತ್ತೆ ತಾಯಿ. ನೀಲಕ್ಕ ನನ್ನ ಕಾಲ ಮುಗೀತು ಅಂತ ಕಾಣತ್ತೆ.... (ಕೆಮ್ಮುವನು)

ನೀಲಾ - ಅಪ್ಪ ನೀನು ಹೀಗೆಲ್ಲ ಅನ್ನ ಬೇಡಪ್ಪ. ನನಗೆ ಅಳು ಬರುತ್ತೆ. ಭಯವಾಗುತ್ತಪ್ಪ. ಅವ್ವ ಇವತ್ತು ನಾಳೆ ಇಷ್ಟರಲ್ಲಿಯೇ ಮಾವನ್ನ ಕರಕೊಂಡು ಬರತಾಳೆ. ಮಾವ ಬಂದು ನಿನ್ನ ಡಾಕ್ಟರಿಗೆ ತೋರಿಸಿದರೆ ಈ ನಿನ್ನ ದಮ್ಮು ಗುಣವಾಗುತ್ತಪ್ಪ

ಮಹದೇವಪ್ಪ - ಇನ್ನೇನು ಗುಣವಾಗುತ್ತಮ್ಮ ಇದು. ದಮ್ಮಿನ ಕೆಮ್ಮಿನಿಂದ ಸಾಯಬೇಕೆಂದು ಬ್ರಹ್ಮ ಸಂಕಲ್ಪವಿದ್ದಾಗ ಯಾವ ಡಾಕ್ಟರ ತಾನೆ ಗುಣ ಮಾಡತಾರಮ್ಮ. ನೀಲಕ್ಕ ವೀರಣ್ಣಾ ಊರಿಗೆ ಹೋದನೇನು ?

ನೀಲಾ - ಹೌದಪ್ಪ ... ಹೋದರು

ಮಹದೇವಪ್ಪ - ನನ್ನ ... ಕೊನೆಗಾಲದಲ್ಲಿ ಅವನಾದರೂ ಇದ್ದಿದ್ದರೆ ಒಳ್ಳೇದಿತ್ತು. ದೈವ ಆ ಯೋಗವನ್ನು ಒದಗಿಸಿಕೊಡಲಿಲ್ಲ ... ಎಲ್ಲ ನಮ್ಮ ದುರದೃಷ್ಟ ಅವ್ವ. (ಹಂಪವ್ವ, ರುದ್ರ ಬರುವರು)

ರುದ್ರ - ಅಪ್ಪ... ಅಕ್ಕ...

ನೀಲಾ - ಅವ್ವ ನೀನು ಹೋದ ಮೇಲೆ ..... ಅಪ್ಪನಿಗೆ ದಮ್ಮು ಕೆಮ್ಮು ಹೆಚ್ಚಾಗಿ ಬಿಟ್ಟಿತು. ಒಂದೊಂದು ಸಲ ಭಯ ಬರೋ ಹಾಗೆ ಮಾತಾಡತಾನೆ

ಮಹದೇವಪ್ಪ - ಯಾಕ ಹಂಪಿ... ಯಾಕ ಅಳತೀಯಾ ?

ಹಂಪವ್ವ - ಇಲ್ಲ ...

ನೀಲಾ - ರುದ್ರ, ಸುವರ್ಣ ಬರ್‍ರಿಲ್ಲೆ (ಇಬ್ಬರನ್ನು ಹೊರಗೆ ಕರೆದುಕೊಂಡು ಹೋಗುವಳು ನಂತರ ಹಂಪವ್ವ ಅಳುತ್ತ ಬಂದು ಗಂಡನ ಹತ್ತಿರ ಕೂಡುವಳು)

ಮಹದೇವಪ್ಪ - ಹೇಳು ಹಂಪಿ... ಹೋದ ಕೆಲಸ ಏನಾಯಿತು... ಯಾಕಿಷ್ಟು ಅಳ್ತೀಯಾ ?

ಹಂಪವ್ವ - ನಾನು ಅಲ್ಲಿಗೆ ಹೋಗಬಾರದಿತ್ತು.... ಹೋದ ತಕ್ಷಣ.... ಮುಖಕ್ಕೆ ಬಡಿದ ಹಾಗಿ ಮಾತಾಡಿಸಿದರು

ಮಹದೇವಪ್ಪ - ಯಾರು ???

ಹಂಪವ್ವ - ಅವನೇ ಆ ಬಸವರಾಜಪ್ಪ !!! ಅವನಿಗೆ ತನ್ನ ಶ್ರೀಮಂತಿಕೆಯ ದರ್ಪ ತೋರಿಸಿದಷ್ಟೂ ತೃಪ್ತಿಯಿಲ್ಲ. ಅವನ ಕಣ್ಣಲ್ಲಿ ನಾನಂತೂ ಭಿಕ್ಷೆಗೆ ಹೋದ ಯಾಚಕಳಂತೆ ಕಂಡೆ. ಅಷ್ಟು ಅವನ ಶ್ರೀಮಂತಿಕೆ ! ಅವನ ದರ್ಪ !!

ಮಹದೇವಪ್ಪ - ಹಂಪಿ ಅವರು ಶ್ರೀಮಂತರು. ಅಂದ ಬಳಿಕ ಅವರ ದರ್ಪ ನಮ್ಮಂಥ ಬಡವರ ಮೇಲೆ ತೋರಿಸದೆ ಇನ್ನಾರ ಮೇಲೆ ತೋರಿಸಬೇಕು

ಹಂಪವ್ವ - ಅದಕ್ಕೂ ಒಂದು ಮಿತಿ ಬೇಡವೇ ?

ಮಹದೇವಪ್ಪ - ಅವರ ಶ್ರೀಮಂತಿಕೆ ಅವರ ದರ್ಪ ತೆಗೆದುಕೊಂಡು ನಾನೇನು ಮಾಡೋದು ನಿನ್ನ ತಮ್ಮ ಸರಿಯಾಗಿದ್ದಾನಿಲ್ಲೋ ?

ಹಂಪವ್ವ - ಮಾವನ ದರ್ಪದ ಮುಂದೆ ಇವನ ಆಟವೆಲ್ಲಿ ನಡೆಯಬೇಕು. ನಾನು ಹೋದ ತಕ್ಷಣ ಈಶ್ವರನ್ನ ಅವರ ಮಾವ ಮುಂಬೈಗೆ ಕಳಿಸಿಕೊಟ್ಟ !!! ನಾಲ್ಕು ಮಾತು ಆಡಲಿಕ್ಕೂ ಅವಕಾಶ ಒದಗಿಸಿ ಕೊಡಲಿಲ್ಲ

ಮಹದೇವಪ್ಪ - ಅಂದ್ರೆ ?? ಹೋದ ಕೆಲಸ ಆಗಲಿಲ್ಲವೆ ? ಹಣ ಸಿಕ್ಕಲಿಲ್ಲವೆ ?

ಹಂಪವ್ವ - ಇಲ್ಲ !! ಮುಂದಾದರೂ ಈಶ್ವರನಿಂದ ಹಣದ ಸಹಾಯ ದೊರತೀತು ಅನ್ನೋ ವಿಶ್ವಾಸ ಕೂಡ ನನಗಿಲ್ಲ. ಅವನಿಗೆ ಆ ಮನೆಯಲ್ಲಿ ಯಾವ ಅಧಿಕಾರವೂ ಇಲ್ಲ

ಮಹದೇವಪ್ಪ - ಹೋಗಲಿ ಬಿಡು ಪಾಪ... ಅಧಿಕಾರನೇ ಇರದಿದ್ದರೆ ಅವನಾದರೂ ಎಲ್ಲಿಂದ ತಂದುಕೊಟ್ಟಾನು ?

ಹಂಪವ್ವ - ಅಂದ್ರೆ ? ಈಗ ನಾವು ಸಾಲಕ್ಕೇನು ಹೇಳೋದು ?

ಮಹದೇವಪ್ಪ - ಸಾಲಕ್ಕೆ ? ... ಅದೇ ನನಗೂ ತಿಳಿಯದಾಗಿದೆ...

ಹಂಪವ್ವ - ನಾನು ಊರಿಸಿಂದ ಬಂದ ಸಮಾಚಾರ ತಿಳಿದರ ಸಾಕು ಬಂದು ನಿಲ್ತಾನೆ ಆ ಸಂಪಿಗೆ ಹೂವಪ್ಪ !

ಮಹದೇವಪ್ಪ - ಬರಲಿ ಬಿಡು ಆ ಪ್ರಸಂಗ ಬಂದಾಗ ಅದಕ್ಕೆ ತಕ್ಕ ಪರಿಹಾರವನ್ನು ಆ ಪರಮಾತ್ಮನೇ ಸೂಚಿಸುತ್ತಾನೆ

ಹಂಪವ್ವ - ಪ್ರತಿಯೊಂದಕ್ಕೂ ಪರಮಾತ್ಮನೇ ಬರತಾನೇನು ?

ಮಹದೇವಪ್ಪ - ಹೌದು ! ಮಾನವರಾದ ನಾವು ದೇವರ ಮೇಲಿಟ್ಟ ನಂಬಿಕೆಗೇ ಸುಳ್ಳಾಗಿ ಬಿಟ್ಟರೆ

ಇನ್ನು ಈ ಪ್ರಪಂಚದಲ್ಲಿ ಉಳಿತಾದರೂ ಏನು ? ಯಾವ ಧರ್ಮವನ್ನು ನಂಬಿ ಸಾಲ ಮಾಡಿ ನಾವು ನಮ್ಮ ಮುಂದಿದ್ದ ಕರ್ತವ್ಯ ಪೂರೈಸಿದವೋ ಆ ಧರ್ಮವೇ ಇಂದು ಈ ಸಾಲದ ಕರ್ಮದಿಂದ ನಮ್ಮನ್ನು ಪಾರು ಮಾಡುಬೇಕು ?

ಹಂಪವ್ವ - ಧರ್ಮ ?? ಇದಕ್ಕೆ ಧರ್ಮವೆಂದು ಯಾರು ಕರೆಯುತ್ತಾರೆ ? ಹೊಟ್ಟೆಯ ಮಕ್ಕಳ ಬಾಯಿಗಿಡುವ ತುತ್ತನ್ನು ಅನ್ಯರ ಬಾಯಿಗಿಟ್ಟರೆ ಇದು ಧರ್ಮವೇನು ? ತವರು ಮನೆಯ ವ್ಯಾಮೋಹದಿಂದ ತಮ್ಮನ ಮದುವೆ ಮಾಡಿ ನಿಮಗೆ ಈ ಸಂಕಟ ತಂದಿಟ್ಟೆನಲ್ಲ ? ಇದು ಧರ್ಮವೇನು ?

ಮಹದೇವಪ್ಪ - ಹೋಗಲಿ ಬಿಡು ಅದಕ್ಕೆಲ್ಲ ನೀನು ನೊಂದುಕೊಳ್ಳಬೇಡ ನಾನು ಮಾಡಿದರೇನು ನೀನು ಮಾಡಿದರೇನು. ಒಳ್ಳೇ ಕೆಲಸಕ್ಕೆ ತಾನೇ ನಾವು ಸಾಲ ಮಾಡಿದ್ದು (ಹಂಪವ್ವ ದುಃಖಿಸಹತ್ತುವಳು) ಯಾಕ ಅಳತೀಯಾ ಹಂಪಿ. ಅಯ್ಯೋ ನೀನು ಈ ರೀತಿ ಅತ್ತರೆ ಅದೇನು ಮಾಡಿ ಸಮಾಧಾನ ಪಡಸಲಿ ನಾನು

ಹಂಪವ್ವ - ನನಗೆ ಸಮಾಧಾನವಾಗಬೇಕಿದ್ರೆ ನಾನು ಹೇಳಿದಂತೆ ಮಾಡತೀರಾ ?

ಮಹದೇವಪ್ಪ - ಹೇಳು ಹಂಪಿ ನಿನ್ನ ಸಮಾಧಾನಕ್ಕಾಗಿ ನಾನು ಏನ ಬೇಕಾದರೂ ಮಾಡತೀನಿ ಹೇಳು

ಹಂಪವ್ವ - ನನ್ನಾಣೆ.... ಮಾಡತೀರಾ ?

ಮಹದೇವಪ್ಪ - ಏಕೆ ? ನನ್ನಲ್ಲಿ ನಂಬಿಕೆ ಇಲ್ಲವೇ ?

ಹಂಪವ್ವ - ಹಾಗಿದ್ರೆ ನನ್ನ ಕೆನ್ನೆಗೆ ನಾಲ್ಕು ಬಡೀತೀರಾ ? ಅಂದ್ರೆ ನನಗೆ ಸಮಾಧಾನವಾಗುತ್ತದೆ

ಮಹದೇವಪ್ಪ - ಹಂಪಿ.... ನೂರು ನಿಟ್ಟುಸಿರು ಸೇರಿ ಒಂದು ಸಲ ನಗು ಬರುತ್ತದಂತೆ, ಆ ನಗೆಯಿಂದ ಬರುವ ಶಾಂತಿ ಕೇವಲ ಒಂದು ನಿಮಿಷವಂತೆ. ನೂರು ಜನ್ಮದ ಬೇವು ಒಂದು ಜನ್ಮಕ್ಕೆ ಬೆಲ್ಲವಂತೆ. ಅಂದ ಬಳಿಕ ಸಂತಸ ನೀಡಿದ ಈ ನಿನ್ನ ಕಷ್ಟವೋ ಸುಖವೋ ಇಲ್ಲಿಯವರೆಗೆ ನಮ್ಮ ಬದುಕನ್ನು ತನ್ನಿಷ್ಟದಂತೆ ನಡೆಯಿಸಿಕೊಂಡು ಬಂದ ನಮ್ಮ ಮನೆಯ ದೇವರು ಮುಂದಾದರೂ ಅದೇ ರೀತಿ ಆ ಮನೆಯನ್ನು ನಗುವ ನಂದಗೋಕುಲದಂತಿಟ್ಟಾನು, ಇರದಿದ್ದರೆ ಬಿಟ್ಟಾನು. ಇದಕ್ಕೆಲ್ಲ ನೀನು ಅಳಬೇಡ

ನೀಲಾ - (ಹೊರಗಿನಿಂದ ಅಳುತ್ತ ಬಂದು) ಅಪ್ಪಾ... ಅಪ್ಪಾ...

ಹಂಪವ್ವ - ಯಾಕಮ್ಮ ಅಳತೀಯಾ ?

ನೀಲಾ - ಹೂವಪ್ಪ ಮಾವ ನಮ್ಮ ಹೊಲಕ್ಕ .... ತನ್ನ ಗಳೆ ಕಟ್ಟಿಸಿ ಕೊಟ್ಟಾನ !!

ಮಹದೇವಪ್ಪ - ಆ ?? ... ಹೌದಾ ? ನನ್ನ ಹೊಲ ಹೋಯಿತು... ನನ್ನ ಭೂಮಿ ನನ್ನ ಕೈಬಿಟ್ಟಿತೇ... ಹೂ... ಇಂದು ನಾಳೆ... ಇಷ್ಟರಲ್ಲಿ ಈ ಮನೆಯು ಕೈಬಿಡುತ್ತೆ

ಆ ಬಳಿಕ ನನ್ನ ಸಂಸಾರಕ್ಕೆ ಆಸರೆ ? .... ಮರದ ನೆರಳು, ಕೆರೆಯ ನೀರು... (ಹುಚ್ಚನಂತೆ ಮಾಡುತ್ತ) ಮನೆ ಸುಳ್ಳು.... ಹೊಲ ಸುಳ್ಳು... ಮಡದಿ ಸುಳ್ಳು... ಮಕ್ಕಳು ಸುಳ್ಳು... ಯಾವದೂ ಸತ್ಯವಲ್ಲ. ಯಾವುದರಿಂದಲೂ ಸುಖ ಸಿಕ್ಕೋದಿಲ್ಲ .... ಹೂ ... ಹೌದು.... ನಾನು ಕಟ್ಟಿದ ಹಾಡು ಹಾಡುತ್ತಲಿದ್ದಾಗ ಮಾತ್ರ ನನಗೆ ಆನಂದ. ತಾ ... ಹಂಪಿ... ನನ್ನ ಡಪ್ಪು ತಾ... ಇವತ್ತು ಹಾಡುವ ಆಸೆ ನನಗೆ ಬಲವಾಗಿ ಕಾಡುತ್ತಿದೆ. ಇಂದು ಹಾಡಿದಂತೆ ಮುಂದೆ ನಾನೆಂದೂ ಹಾಡಲಾರೆ... (ಡಪ್ಪು ಕೈಯಲ್ಲಿ ಹಿಡಿದು) ಕರಿ ... ನನ್ನ ಮಕ್ಕಳನ್ನು ಕರಿ... ನೀಲಾ... ರುದ್ರ ... ಸುವರ್ಣ... (ನೀಲಾ, ರುದ್ರ, ಸುವರ್ಣ ಅಪ್ಪಾ ಎಂದು ಅಪ್ಪಿಕೊಳ್ಳುವರು) ಇದು ನನ್ನ ಬಾಳಿನ ಕೊನೆಯ ಹಾಡು... ಕೇಳ್ರಿ (ಹಾಡುವನು)

ನೋಡಿ.... ಬಾ... ರೋ... ಕಾಶೀಮಧುರಾ । ನೋಡಿ ಬಾರೋ... ಶ್ರೀ ಹರಿದ್ವಾರಾ । ನೋಡಿ ... ಬಾ... (ಎಂದು ಹಾಡುವಾಗಲೇ ಪ್ರಾಣ ಹೋಗುವದು)

(ನೀಲಾ, ರುದ್ರ, ಸುವರ್ಣ "ಅಪ್ಪಾ" ಎಂದು ಅಳುತ್ತ ಶವದ ಮೇಲೆ ಬೀಳುವರು.
ಹಂಪವ್ವ "ಸ್ವಾಮಿ" ಎಂದು ಚೀರುವಳು)

# ಸನ್ನಿವೇಶ - ೧೪

ಬೀದಿ

ಹೂವಪ್ಪ - ಮಹದೇವಪ್ಪ ಸತ್ತರೇನಾಯಿತು. ಸಾಲ ಕೊಟ್ಟ ನನ್ನ ಹಣ ಸಾಯುತ್ತದೇನು ? ಅವನು ಸತ್ತದ್ದೂ ಒಂದು ದೃಷ್ಟಿಯಿಂದ ಅನುಕೂಲವೇ ಆಯಿತು, ಮೊದಲೇ ಮಾನಕ್ಕಂಜಿ ಸಾಯುವ ಹೆಣ್ಣು ಮಗಳು ಹಂಪವ್ವನ ಮೇಲೆ ನಾನಷ್ಟು ಮನೆ ಬಿಡಲು ಒತ್ತಾಯ ಪಡಿಸಿದರೆ ಭೂಮಿಗಿಳಿದು ಹೋಗುತ್ತಾಳೆ. ಸಾಲಕ್ಕೆ ಬದಲು ಮದುವೆಯಾಗುತ್ತೇನೆ ನಿನ್ನ ಮಗಳು ಕೊಡು ಅಂದ್ರೆ ಕಾಲಿಗೆ ಬಿದ್ದು ಒಪ್ಪುತ್ತಾಳೆ. ಒಂದು ವೇಳೆ ಅದೇ ಚವಡಿಯ ಸಹವಾಸದಲ್ಲಿದ್ದರೆ ಮಾಸವೂ ಇಲ್ಲ ವಂಶದೀಪಕ್ಕೆ ಗತಿಯೂ ಇಲ್ಲ (ಬೀಡಿ ಹಚ್ಚುವನು)

ಚವಡವ್ವ - (ಬಂದು) ಏ.... ಇಲ್ಯಾಕ ನಿಂತಿದೀ ?

ಹೂವಪ್ಪ - ಇಲ್ಲೇಕೆ ನಿಂತಿದಿ ಅಲ್ಲೇಕೆ ಕುಳಿತೀದಿ ಅಂತ ಕೇಳಲಿಕ್ಕೆ ನೀನು ಯಾರು ??

ಚವಡವ್ವ - ನಾನು ಯಾರು ??

ಹೂವಪ್ಪ - ಹೌದಂದೆ ನನ್ನ ಕೇಳಾಕ ನೀಯಾರು ? ನೀನೇನ ನನ್ನ ಹೆಂಡತಿ ಅಲ್ಲ. ಅದನ್ನ ಕೇಳುವ ಹಕ್ಕು ನಿನಗಿಲ್ಲ

ಚವಡವ್ವ - ನಾ ಹೆಂಡತಿ ಅಲ್ಲ... ನಿನಗ ನಾ ಹೆಂಡತಿ ಅಲ್ಲ ??

ಹೂವಪ್ಪ - ಅಲ್ಲ... ಅಲ್ಲ... ಅಲ್ಲ... ನೂರ ಸಲ ಅಲ್ಲ ಸಾವಿರ ಸಲ ಹೇಳತೀನಿ, ಅಲ್ಲ. ಬಗಲಾಗ ಸೀರಿ ಇಟ್ಟುಕೊಂಡು ಬೆನ್ನ ಹತ್ತಿ ಬಂದ ಹೆಣ್ಣು ಅಂದ್ರ ಹಸಿದಾಗ ಹಾಸಿ ಉಂಡು ಹೊಟ್ಟೆ ತುಂಬಿದ ಬಳಿಕ ಬೀಸಿ ಒಗೆಯೋ ಪತ್ರಾವಳಿ ಇದ್ದಂಗ. ಅಂದ ಬಳಿಕ ನೀ ಹ್ಯಾಂಗ ನನ್ನ ಹೆಂಡತಿ

ಪದದ ಧಾಟಿ

ಚವಡವ್ವ - ಹತ್ತು ವರುಷದ ಹಿಂದೆ । ಹೆತ್ತವರ ನಾ ತೊರೆದು
ಬಂಧುಬಳಗವದ ಮರೆತು । ಬಂದೆ ನಿನ ಸಂಗಾತಿ ।
ನಾನಲ್ಲದೆ ನಿನ್ನ ಪ್ರೀತಿಯ ಹೆಂಡತಿ ॥

ಹೂವಪ್ಪ - ಹೆತ್ತವರ ಮರತಾಕಿ । ಹೊರಬಿದ್ದು ಬಂದಾಕಿ ।
ಬಯಲಿಗೆ ನಿಂತನ್ನ । ಕರೆದಾಕ । ನೀ ಹ್ಯಾಂಗ ನನ್ನ ಹೆಂಡತಿ ॥

ಚವಡವ್ವ - ತವರಿಗೆ ಬಂದಾಗ । ತುಂಬಿದ ಹೊಲದಾಗ ।
ನೀಯನ್ನ ಕೈ ಹಿಡಿದು ಎಳೆದಾಗ । ಯವ್ವನದ ಮೋಡಿ ।
ತಿಳಿಯದೇ ಹೋದಾಗ । ಸಿಲುಕಿದೆ ನಿನ್ನ ಬಲಿಯಾಗ ।

ಹೂವಪ್ಪ - ಹಂದರ ಹಾಕಿಲ್ಲ । ಮಂದ್ಯಾರೂ ಕೂಡಿಲ್ಲ ।
ಹಾಲುಗಂಬ ಹಸೆಯು । ಎಂದೂ ಇಲ್ಲ ।
ಅರಿಷಿಣ ಕುಂಕುಮ । ಆರತಿ ಅಕ್ಷತಿ ।
ಬಂದ್ಯಾರು ನಮಗ ಬೆಳಗಿಲ್ಲ । ನೀ ಹ್ಯಾಂಗ ನನ್ನ ಹೆಂಡತಿ

ಚವಡವ್ವ - ಅಲ್ಲ ನಾನಿನ್ನ ಮಾಡಿಕೊಂಡ ಹೆಂಡತಿ ಆಗದಿದ್ದರೂ ನಿನ್ನ ಸಲುವಾಗಿ ಗಂಡನ್ನ ಬಿಟ್ಟು, ಮನೆ ಕಳೆದುಕೊಂಡು ಮಂದ್ಯಾಗ ಮಾನಾ ಕಳಕೊಂಡಾಕಿರ ಹೌದಲ್ಲ

ಹೂವಪ್ಪ - ನಿನಗ ಬೇಕಾಗಿ ನೀನ ಕಳಕೊಂಡ್ರ ಅದಕ ನಾ ಏನ ಮಾಡ್ಲಿ ?

ಚವಡವ್ವ - ನೀ ಏನೂ ಮಾಡೂದು ಬೇಡ ಮಾರಾಯ. ಈಗ ಮಾಡಿದ್ದ ಸಾಕಷ್ಟು ಐತಿ. ಕಷ್ಟದಾಗ ಅದಾರ ಅನ್ನೂದು ಗುರುತು ಇದ್ರೂ ಸಾಲಕ್ಕೆ ವರಾತ ಹಚ್ಚಿ ಹೊಲ ಕಸಿದುಕೊಂಡು ಆ ಮಹದೇವಪ್ಪನಂತೂ ಕೊಂದೆಲ್ಲ ?

ಹೂವಪ್ಪ - ನಾ ಕೊಂದೀನಾ ?

ಚವಡವ್ವ - ಹೌದು ನೀನ ಕೊಂದಾವ. ಎಲ್ಲಿ ನಿಲ್ಲಿಸಿ ಕೇಳಿದರೂ ಹೇಳತೀನಿ

ಹೂವಪ್ಪ - ಹೂ ಹೀಗ ಹೇಳತ ಹೋಗು ನನ್ನ ಒಯ್ದು ಜೇಲಿಗೆ ಹಾಕತಾರ

ಚವಡವ್ವ - ಹಾಕಲಿ ನನಗೇನು ಏ... ಹೂವಾ... ಈ ಪಾಪ ನಿನ್ನ ಸುಮ್ಮನ ಬಿಡತ್ತ ಅಂತ ಮಾಡೀಯಾ ?

ಹೂವಪ್ಪ - ನನ್ನೇನು ಮಾಡುತ್ತ ?

ಚವಡವ್ವ - ನಿನ್ನ ... ಕೆಟ್ಟ ಸಾಮಾನದ ಸರ ಮಾಡಿಸಿ ಕತ್ತೆ ಮೇಲೆ ಕೂರಿಸಿ ಮೆರಸತ್ತ

ಹೂವಪ್ಪ - ಮೆರಸಲಿ... ಕತ್ತೆ ಮೇಲೆ ಕೂತರೂ ಮೆರೆಯೋದು ಸುಳ್ಳೇನು ?

ಚವಡವ್ವ - ನಾಚಿಕೆ ಬಿಟ್ಟು ನಿಂತಿರೋ ನಿನ್ನಂಥ ನಾಚಿಕೆಗೇಡಿಗೆ ಏನಂದ್ರೇನು ? ಛೀ ಅಂದ್ರ ಬಾ ಅಂತ ತಿಳಿತೀಯಾ ?

ಹೂವಪ್ಪ - ಎಲೆ ಚವಡಿ ಈ ಹೂವಪ್ಪ ಅಂದ್ರ ಏನಂತ ತಿಳಿದೀ ನೀನು ? ಹಣೆಯಾಗ ಬರದದ್ದನ್ನು ಅಳಿಕಿಸಿ ಬರಕೊಳ್ಳೊ ಹುಲಿಯಿದು

ಚವಡವ್ವ - ಬಲಿಯಾಗ ಬಿತ್ತು ಅಂದ್ರ ಹುಲಿ ಇಲಿಯಂಗ ಆಗುತ್ತ ಅನ್ನೂದು ತಿಳಿದಿರಲಿ (ಹೋಗ ಹತ್ತುವಳು)

ಹೂವಪ್ಪ - ಏ .... ನಿಲ್ಲ !! ಹೊರಟೆಲ್ಲ ??

ಚವಡವ್ವ - ಮತ್ತೇನ ಮಾಡ್ಲಿ ? ದಾರ್ಯಾಗ ನಿಂತು ನಿನ್ನ ಮಾರಿ ನೋಡ್ಲೇ (ಹೋಗುವಳು)

ಹೂವಪ್ಪ - ಹ... ಹ... ಹ... ನಂದಗೋಕುಲದಂತಿದ್ದ ಮಹದೇವಪ್ಪನ ಮನೆ ಹದಗೆಟ್ಟು ಹೋಯಿತು. ಹತ್ತಕ್ಕ ಒಂದು ಬಲಿಕೊಡದೇ ಹೆಸ್ರೊಂದಾಗತ್ತೇನು ?

## ಸನ್ನಿವೇಶ - ೧೫

ಮಹದೇವಪ್ಪನ ಮನೆ

(ವೃಧಪ್ಯದಿಂದುಂಟಾದ ನೋವಿನಿಂದ ಹಂಪವ್ವ ನಿತ್ರಾಣವಾಗಿದ್ದಾಳೆ. ಜ್ವರದ ತಾಪದಿಂದ ಹೈರಾಣವಾಗಿದ್ದಾಳೆ, ನೀಲಾ, ರುದ್ರ ಉಪಚರಿಸುತ್ತಿದ್ದಾರೆ.)

**ಹಿನ್ನಲೆ ಮಹದೇವಪ್ಪ ಹಾಡಿದಂತೆ** :

ಬಾಳಿದು ಕನಸಲ್ಲ । ಗೋಳಿನ ತಿನಸಲ್ಲ । ನನ್ನ ಹಿಗ್ಗಿ ನಾ ಹೊಸ ತೋಟ॥

**ಹಿನ್ನಲೆ ಮಹದೇವಪ್ಪ** - ಹ... ಹ ಹ (ನಗು) ನನ್ನ ಒಲವು ನಿಲುವುಗಳನ್ನು ಅರ್ಥ ಮಾಡಿಕೊಂಡ ನನ್ನ ಬಾಳ ಸಂಗಾತಿ ನೀನೂ ಹೀಂಗಾದರ ಇನ್ನಾರ ಮುಂದೆ ಹಾಡಲಿ ? ನೋಡ ಹಂಪಿ ಈಗಾಗಲೆ ಈ ದಮ್ಮು ಕೆಮ್ಮು ನನ್ನ ಅರ್ಧಾ ಜೀವಾನೇ ತಿಂದಿದೆ. ಉಳಿದರ್ಧನ ಯಾವಾಗ ತಿಂದ ತೇಗತಾವೋ ನಾ ಕಾಣೆ. ನಾಳೆ ನಾ ಸತ್ತ ಬಳಿಕ ಹಾಡಿ ನಿನ್ನ ಕಾಡಸ್ತೀನೇನೇ ಹಂಪೀ....

ಹಂಪವ್ವ - (ಹುಚ್ಚಿಯಂತೆ ಒಮ್ಮೆಲೇ ಚೀರಿ) ಇಲ್ಲ ಇಲ್ಲ ಎಂದೂ ನೀವು ಕಾಡಲಿಲ್ಲ. ಇದ್ದಷ್ಟು ದಿವ್ಸ ನಾನೇ ನಿಮ್ಮನ್ನು ಕಾಡಿದೆ. ಯಾವಾಗಲಾದರೂ ಬೇಸತ್ತು ಸಿಟ್ಟಿಗೆದ್ದರೆ ಅದೆಷ್ಟು ಬಾರಿ ನೀವು ನನ್ನ ಸಮಾಧಾನ ಪಡಿಸಿದಿರಿ. ನನ್ನ ಮಾತಿರಲಿ ನನ್ನ ತಾಯಿಗೆ ಕೊಟ್ಟ ಮಾತು ಕೂಡ ನಡಿಸಿದಿರಿ... ಇಂತಹ ಪವಿತ್ರವಾದ ಜೀವಾನ ಈ ಹದಿನೆಂಟು ವರ್ಷದಲ್ಲಿ ನಾನೇ ಸಾಕಷ್ಟು ಬಾರಿ ಕಾಡಿ ನೋಯಿಸಿದೆ. ಆದರೂ ನೀವು ನೀವು ನನ್ನ ಪ್ರೀತಿಯಿಂದ ಹಂಪೀ... ಅಂತ ಕರಿತಿದ್ರಿ (ಅಳುವಳು)

ನೀಲಾ - ಅವ್ವಾ... ಮೇಲಿಂದ ಮೇಲೆ ನೀನು ಹೀಗ್ಯಾಕ ಮಾಡ್ತಿಯವ್ವ ? ನೀನು ಹೀಗೆಲ್ಲ ಮಾಡಿದರ ತಮ್ಮ-ತಂಗಿ ಅಂಜತಾರಮ್ಮ

ಹಂಪವ್ವ - (ಸಿಟ್ಟಿನಿಂದ) ಅಂಜಿಕೊಳ್ಳಿ ಅಂಜಿ ಸತ್ತಾದ್ರೂ ಹೋಗ್ರಿ. ಹೆತ್ತವರ ಹೊಟ್ಟೆ ಉರಿಸೋ ಮಕ್ಕಳು ಇದ್ದರೇನು ಸತ್ತರೇನು (ಹೊಡೆದು ನೂಕಿ ಬಿಡುವಳು)

ಚವಡವ್ವ - (ಬಂದು) ಏ... ಹಂಪವ್ವ (ಬಿಡಿಸಿಕೊಳ್ಳುವಳು) ಏನವ್ವಾ ಇದು ನಿನ್ನ ಆಕಾರ ಯಾಕೆ ? ಹುಡುಗರನ್ನೆಲ್ಲ ಯಾಕ ಬಡೀತಿದಿ ?

ನೀಲಾ - (ಎಲ್ಲರೊಂದಿಗೆ ಚವಡವ್ವನ ಹತ್ತಿರ ಬಂದು) ನೋಡತ್ತೆ ಅವ್ವ ನಮ್ಮನ್ನೆಲ್ಲ ಸುಮ್ಮಸುಮ್ಮನೇ ಹೊಡಿತಾಳೆ. ಕೆರಿ ಭಾವಿ ಹಾರಿ ಸಾಯಿರಿ ಅಂತಾಳೆ (ಅಳು)

ಚವಡವ್ವ - ಹೌದಾ... ಪಾಪ ಮೈಯಾಗ ನೆಟ್ಟಗಿಲ್ಲ ಜ್ವರದ ತಾಪಕ್ಕೆ ಹಾಗೆಲ್ಲ ಮಾಡತಾಳೇಳು

ನೀಲಾ - ಇಲ್ಲತ್ತೆ ಒಂದೊಂದು ಸಲ ಭಯ ಬರೋ ಹಾಗೆ ಮಾತಾಡುತಾಳೆ. ಇದನ್ನು ಕಂಡು ತಂಗಿ ಅಂಜತಾಳೆ

ರುದ್ರ, ಸುವರ್ಣ - ಅತ್ತೆ ಅವ್ವನ ಕಂಡರೆ ನಮಗಂಜಿಕಿ ಬರುತ್ತೆ (ಅಳು)

ಚವಡಕ್ಕ - (ಕಂಣೀರ ವರಿಸಿಕೊಳ್ಳುತ್ತ) ಅಂಜಾಕ ನಿಮಗೇನಾಗೀತ್ರೋ... (ಹಂಪವ್ವನ ಹತ್ತಿರ ಬಂದು) ಹಂಪವ್ವ ... ಏ... ಹಂಪವ್ವ

ಹಂಪವ್ವ - ಆ ? ಏನು ಚವಡಕ್ಕ ?

ಚವಡಕ್ಕ - (ದುಃಖದಿಂದ) ಹೀಗ್ಯಾಕ ಮಾಡತಿ ಹಂಪವ್ವ ನೀನ. ನಿನಗ ಹುಚ್ಚು ಗಿಚ್ಚು ಹಿಡಿತಾ ? ಈಟೊಂದು ಮಕ್ಕಳ ಹೆತ್ತವಳಾಗಿ ನೀನ ಹಾಕ್ಕೊಂಡ ಬಡಿಯೋದ ?

ಹಂಪವ್ವ - (ಗಾಬರಿಯಿಂದ) ಆ ? ಏನಂದಿ ಚವಡಕ್ಕ ? ನನ್ನ ಮಕ್ಕಳನ್ನ ನಾನ ಬಡಿದೆನೆ? ಇದು ನಿಜಾನ ?

ಚವಡಕ್ಕ - ನೀ ಬಡಿಯೋವಾಗ ನಾನು ಬಂದು ಬಿಡಿಸದಿದ್ರೆ ಹುಡುಗರನ್ನೆಲ್ಲ ಹೊಡೆದು ಕೊಲ್ಲುತ್ತಿದ್ದಿ. ನೋಡಿದ್ಯಾ ಪಾಪ ನಿನಗಂಜಿ ಎಷ್ಟು ದೂರ ನಿಂತಾವು

ಹಂಪವ್ವ - ನನ್ನ ಮಕ್ಕಳನ್ನು ನಾನ ಬಡಿದ್ನೆ... ಅಯ್ಯೋ ಅವರು ಏನಂತಾರೋ ಏನೋ... ರುದ್ರ ... ಸುವರ್ಣ... ನೀಲಾ... (ಮೂವರು ಅವ್ವಾಯೆಂದು ಬಂದು ಅಪ್ಪಿಕೊಳ್ಳುವರು)

ಚವಡಕ್ಕ - ನೋಡಿದ್ಯಾ ಬಂಗಾರದಂಥ ಮೂವರು ಮಕ್ಕಳ ಬಾಯಿ ತರೆದು ಅವ್ವಾ ಅಂತ ನಿನ್ನ ಅಪ್ಪಿಗೊಂಡ ಅಳೊದನ್ನ ಕಂಡರ ಯಾರ ಕಂಣಾಗ ನೀರ ಬರಾಕಿಲ್ಲ

ಹಂಪವ್ವ - ಶಿವ ಶಿವ ನನಗಿಂಥ ಕಷ್ಟ ತಂದಿಟ್ಟರ ನಾನ ಹೇಗೆ ಸಹಿಸಲಿ ? ಚವಡಕ್ಕ ಕೈಹಿಡಿದು ಕಾಪಾಡಿದ ಮಹಾರಾಯರು ನನ್ನ ಬಿಟ್ಟು ತಾವು ಪಾರಾದ್ರವ್ವಾ ಪಾರಾದ್ರು

ಚವಡಕ್ಕ - ಮಹದೇವಂಣ ದೇವರಂಥ ಮನುಷನವ್ವ. ಅಂದಲ್ಲೇ ಸಾಯೋವಾಗ ಸಾವಿರ ಮಂದಿ ಕಂಣಾಗ ನೀರ ತರಿಸಿ ಸ್ವರ್ಗ ಸೇರಿದ. ಅಂಥ ಪುಣ್ಯಾತ್ಮನ ಕೈಹಿಡಿದು ಇಷ್ಟು ದಿವಸ ಬಂದಂಗ ಬದುಕು ಮಾಡಿ ಮುತ್ತಿನಂಥ ಮೂರು ಮಕ್ಕಳ ಹಡದೀಯಾ ? ನಾಳೆ ದೇವರು ರುದ್ರನ ರಟ್ಟಿಗೆ ಶಕ್ತಿ ಕೊಟ್ಟರ ಈ ಕಷ್ಟ ಉಳಿದೀತಾ (ಸಮೀಪ ಬಂದು ಮುಟ್ಟಿ) ನೋಡಿದಾ ಜ್ವರ ಎಷ್ಟು ಬಂದಾವು ಔಷಧಿ ಕುಡಿದೀಯೋ ಇಲ್ಲೋ ?

ನೀಲಾ - ಇಲ್ಲತ್ತೆ ಕುಡಿಸಲಿಕ್ಕೆ ಹೋದರ ನೆಲಕ್ಕ ಚೆಲ್ಲತಾಳೆ

ಚವಡಕ್ಕ - ಕುಡೀಬೇಕವ್ವ ಕುಡಿಬೇಕು. ಎದ್ದ ಕೂಡಬೇಡ. ವೈದ್ಯರು ಹೇಳಿದರೂ ಸುಮ್ಮನ ಎದ್ದು ಅಡ್ಡಾಡ್ತಿಯವ್ವಾ ? ಮಲಗು (ಮಲಗಿಸಿ) ರುದ್ರ, ಸುವರ್ಣ ಊಟ ಮಾಡಿರಿಲ್ಲೊ ?

ನೀಲಾ - ಇಲ್ಲತ್ತಿ ಮನ್ಯಾಗ ಏನೂ ಇಲ್ಲ

ಚವಡಕ್ಕ - ಹಾಗಿದ್ರೆ ಮುಂಜಾನೇ ಯಾಕ ಬರಲಿಲ್ಲ ನಮ್ಮನಿಗೆ ಅಕ್ಕಿ ಕೊಡ್ತಿದ್ದೆ

ರುದ್ರ - ಹೂವಪ್ಪ ಮಾವಾ ಬೈತಾನತ್ತಿ

ಚವಡಕ್ಕ - ಅವಾ ಯಾಕ ಬೈತಾನ, ಏ ಸುವರ್ಣ ಬಾ ನನ್ನ ಕೂಡ ಅಕ್ಕಿ ಕೊಡ್ತಿನಿ. ಅನ್ನ ಮಾಡಿಕೊಂಡು ಊಟಾಮಾಡ್ರಿ. ಮತ್ತ ಸಂಜಿಕ ಬರ್ತೀನಿ (ಸುವರ್ಣೆಯನ್ನು ಕರೆದುಕೊಂಡು ಹೋಗುವಳು)

ರುದ್ರ - ಅಕ್ಕ... ಈಶ್ವರ ಮಾವ ಇನ್ನು ಮೇಲೆ ನಮ್ಮನಿಗೆ ಬರೋದಿಲ್ಲೇನು ?

ನೀಲಾ - ಇಲ್ಲಪ್ಪ ಅವನೇಕೆ ಬಂದಾನು ? ಅವನೀಗ ಚಿನ್ನದ ಪಂಜರದ ಪಕ್ಷಿಯಾಗಿ ಮರಿತಿದಾನೆ. ಅಂದಬಳಿಕ ಬಡವರಾದ ನಾವು ಕಾಣತೇವೇನಪ್ಪ ಈಗ ಅವನ ಕಂಣಿಗೆ

ರುದ್ರ - ಮತ್ತೆ ವೀರೇಶ ಮಾವಾನು ಬರಲಿಲ್ಲ

ನೀಲಾ - ಅವರು ಊರಿನಲ್ಲಿದ್ರೆ ಬರದೇ ಇರತಿದ್ರೇನು ಅವರು. ಊರಲ್ಲಿದ್ರೆ ನಮಗ್ಯಾಕ ಬರುತ್ತಿತ್ತು ಈ ಕಷ್ಟ

ರುದ್ರ - ಹೌದು ನೋಡಕ್ಕ ವೀರೇಶ ಮಾವಾ ಬಾಳ ಒಳ್ಳೇಯವನು. ನಿನ್ನ ಮೇಲೆ ಬಾಳ ಪ್ರೀತಿ

ನೀಲಾ - ಸುಮ್ಮನಿರಪ್ಪ ಹಾಗೆಲ್ಲ ನೆನಸಬಾರದು (ಅಪ್ಪಿಕೊಳ್ಳುವಳು)

ಸುವರ್ಣ - (ಬರುತ್ತ) ಅತ್ತಿ ಅಕ್ಕಿ ಕೊಟ್ಟಾಳ ನೋಡಕ್ಕ. ಹೂವಪ್ಪ ಮಾವಾ ಇರಲಿಲ್ಲ

ರುದ್ರ - ಹೌದಾ .... ?

ನೀಲಾ - (ಒಳಗಿನಿಂದ ಮರತಂದು ಹಾಕಿಸಿಕೊಂಡು) ರುದ್ರ ಹೊರಗೆ ಹೋಗಿ ಒಲಿ ಹಚ್ಚಲಿಕ್ಕೆ ಸ್ವಲ್ಪ ದಂಟು ಕಟಿಗಿ ಆರಿಸಿಕೊಂಡು ಬಾರಪ್ಪ (ಅಕ್ಕಿ ಹಸ ಮಾಡ್ತಾ ಕೂಡ್ರುವಳು, ಅಷ್ಟರಲ್ಲಿ ರುದ್ರ ದಂಟು, ಕಟ್ಟಿಗೆ ತರುವನು) ಸುವರ್ಣ ಸ್ವಲ್ಪ ಒಲಿ ಹೊತ್ತಿಸವ್ವ

ಸುವರ್ಣ - ಆಗಲಕ್ಕ (ಒಳಗೆ ಹೋಗಿ ಬರಿಯ ಕಡ್ಡಿಪೆಟ್ಟಿಗೆ ಚಿಮಣೀ ಸಹಿತ ಬಂದು) ಅಕ್ಕ ಕಡ್ಡಿ ಅಲ್ಲ ಆಗ್ಯೇದ

ನೀಲಾ - ರುದ್ರ ಪಕ್ಕದ ಮನೇಲಿ ಚಿಮಣಿ ಹಚ್ಚಿಕೊಂಡು ಬರ್ತೀಯಾ (ಹೋಗುವನು)

ಹೂವಪ್ಪ - (ಬಂದು ಅಕ್ಕಿ ನೋಡಿ) ಅಕ್ಕಿ... ಎಲಾ ಇವನ ಅಕ್ಕಿ... ಎಲಾ ಇವನ ಅಕ್ಕಿ...

ಏ ... ಎಲ್ಲಿಂದ ತಂದಿರಿ ಈ ಅಕ್ಕೀನ ನಿಜ ಹೇಳ್ರಿ... ಆ..

ಸುವರ್ಣ - (ಅಂಜುತ್ತಾ....) ಅತ್ತಿ ಕೊಟ್ಟಾಳ ಮಾವ

ಹೂವಪ್ಪ - ಹೂ ಕೊಟ್ಟಿದ್ದಾಳು ಅವರಪ್ಪನ ಮನೆಯಿಂದ ತಂದಿಟ್ಟಾಳು... ಯಾರ ಮನೆ ಹಾಳು ಮಾಡಬೇಕಂತ ಮಾಡೀರಿ. ಸರೀರಿ (ಎಂದು ಬೆದರಿಸಿ ತನ್ನ ಉತ್ತರಿಯಲ್ಲಿ ಅಕ್ಕಿಯನ್ನು ಕಟ್ಟಿಕೊಂಡು ಏಳುವದಕ್ಕೂ ರುದ್ರ ದೀಪದೊಂದಿಗೆ ಬರುವನು, ಅದನ್ನು ಊದಿ ಆರಿಸುವನು) ಹಂಪವ್ವ ಏ ಹಂಪವ್ವ ....

ನೀಲಾ - ಎಬ್ಬಿಸಬೇಡ ಹೂವಪ್ಪ ಮಾವ ನಮ್ಮವ್ವಗ ಈಗ ಸ್ವಲ್ಪ ನಿದ್ದಿ ಹತ್ತೈತಿ

ಹೂವಪ್ಪ - ಮಲಗಿ ನಿದ್ರಿಸಲಿಕ್ಕೆ ಮಹಾರಾಣಿಯೇನೇ ನಿಮ್ಮವ್ವ ಯಾರ ಮನೆ ಅಂತ ಬಿದ್ದು ಕೊಂಡಿದ್ದಾಳೆ ಇಲ್ಲಿ, ಮನಿ ಖಾಲಿ ಮಾಡ ಅಂತ ಎಷ್ಟು ಸಲ ಹೇಳಬೇಕು ನಾನು... ಏ ... ಹಂಪವ್ವ

ನೀಲಾ - ಹೂವಪ್ಪ ಮಾವ ನಿನ್ನ ಕಾಲ ಹಿಡಿತೀನಿ ಎಬ್ಬಿಸಬೇಡ ಮೈ ಸರಿಯಿಲ್ಲ

ಹೂವಪ್ಪ - ಏ ಸರಿ ಆಚೆ ನಿಮ್ಮವ್ವ ಸತ್ತರೆ ನನಗೇನೆ ನಾ ಎಬ್ಬಿಸುವನೇ, ಏ ಹಂಪ....

ರುದ್ರ - ಹೂವಪ್ಪ ಮಾವ ನಮ್ಮವ್ವನ ಸಮೀಪ ಹೋಗಿ ಎಬ್ಬಿಸಿದಿ ಅಂದ್ರೆ ಈ ಕುಡಗೋಲಿನಿಂದ ನಿನ್ನ ಸೀಳಿ ಬಿಡ್ತೀನಿ, ಬಾ ಮಗನೇ

ಹೂವಪ್ಪ - (ಅಂಜಿ ಜೋರಾಗಿ) ಹಂಪವ್ವ... ಹಂಪವ್ವ ...

ಹಂಪವ್ವ - ಯಾಕಪ್ಪ... ಬಾ ಹೂವಣ್ಣ ಕೂತುಕೋ ಬಾ

ಹೂವಪ್ಪ - ಏನ ಕೂಡಸ್ತೀಯವ್ವಾ ಸಾಲ ಕೇಳಲಿಕ್ಕೆ ಬಂದ್ರೆ ನನ್ನ ಕುಡಗೋಲಿನಿಂದ ಕಡೀಯಲಿಕ್ಕೆ ಬಂದಿದ್ದ... ನೋಡಲ್ಲೇ

ಹಂಪವ್ವ - (ಸಿಟ್ಟಿನಿಂದ ರುದ್ರನಿಗೆ) ಆ ... ಹೌದೇನೋ (ರುದ್ರ ಅಂಜಿ ನಿಲ್ಲುವನು)

ಹೂವಪ್ಪ - ನೋಡಲ್ಲೆ ಕುಡಗೋಲ ಕೈಬಿಟ್ಟ

ಹಂಪವ್ವ - ಬಾ ಇಲ್ಲಿ (ರುದ್ರ ಅಂಜಿ ಅಲ್ಲೇ ನಿಲ್ಲುವನು) ಬಾರೋ ಇಲ್ಲಿ (ರಮಿಸಿ) ಬಾರಪ್ಪ... ಬಾರಪ್ಪ ಇಲ್ಲಿ (ರುದ್ರ ಸಮೀಪ ಬರುವನು. ಆಗ ಅವನನ್ನು ಎಳೆದುಕೊಂಡು ಬಡಿಯಹತ್ತುವಳು. ಆಗ ನೀಲಾ ಬಿಡಿಸಿಕೊಳ್ಳುವಳು) ಚಂಡಾಲ ಸಾಲ ಕೊಟ್ಟವರು ಬಂದು ಕೇಳಿದರ ಸೀಳತೀನ ಅಂತ ಹೋಗಿದ್ದೀಯಾ ... ? ಇಂಥಾ ಮೊಟ್ಟಿ ನನ್ನ ಹೊಟ್ಟೀಲಿ ಅದು ಹೇಗ ಬಂತು ? ಹೆತ್ತವರ ಮುಖಕ್ಕ ಮಸಿ ಹಚ್ಚಬೇಕಂತೀಯಾ ? ಚಂಡಾಲ ಹೂಂ ತಪ್ಪಂತ ಅಂತ ಅವರ ಕಾಲು ಹಿಡಿ ಹೂ...

(ರುದ್ರನು ನಮಸ್ಕರಿಸುವನು) ನನ್ನ ಮಗನ ಅಪರಾಧವನ್ನು ಕ್ಷಮಿಸಿ ಬಿಡು ಅಂಣಾ

ಹೂವಪ್ಪ - ಏನು ಕ್ಷಮಿಸೋದು ಬಿಡವ್ವ, ಎಷ್ಟು ಸಲ ಅಡ್ಡಾಡಬೇಕು ನಾನು, ಮನುಷ್ಯಾಳು ಅಂದ ಬಳಿಕ ಮತ್ತೊಬ್ಬರಿಗೆ ಇಷ್ಟು ತೊಂದರಿ ಕೊಡಬಾರದವ್ವ

ಹಂಪವ್ವ - ನನ್ನ ತೊಂದರೆ ತಾಪತ್ರಯಗಳನ್ನು ಇನ್ನೊಬ್ಬರಿಗೆ ಕೊಟ್ಟು ಸುಖವಾಗಿ ಬದಕೋ ಹೆಣ್ಣುಮಗಳಲ್ಲಪ್ಪ ನಾನು

ಹೂವಪ್ಪ - ಏ ತೊಂದ್ರಿ ನೀಎಲ್ಲಿ ಕೊಡ್ತೀಯವ್ವ ಅದನ್ನ ನಾನು ತಗೋತೀನಿ ಅಲ್ಲ ? ಗಂಡ ಸತ್ತ ದುಃಖಾನೇ ದೊಡ್ಡದು ಮಾಡಿದರೆ, ಮನೆ ಖಾಲಿ ಮಾಡಿ ನನ್ನ ವಶಕ್ಕೆ ಒಪ್ಪಿಸಿದಂಗಾಯಿತೇನು ?

ಹಂಪವ್ವ - ಈಗಾಗಲೇ ಹೊಲ ನಿನ್ನ ವಶಕ್ಕೆ ಒಪ್ಪಿಸಿಕೊಂಡು ನೀನೇ ಬಿತ್ತಿಕೊಂಡಿದ್ದಿಯಲ್ಲ ಹೂವಂಣ... ಮಕ್ಕಳು ಮರಿ ಇದ್ದವಳು ಬಡವಿ ಅನ್ನೋ ಅಂತಃಕರಣದಿಂದ ಇರಲಿಕ್ಕೆ ಇದಿಷ್ಟು ನೆರಳಾದರೂ ನನಗೆ ಬಿಟ್ಟು ಕೊಡಪ್ಪ ನಿನ್ನ ಹೆಸರ ಹೇಳಿ ಬದಕತೀನಿ

ಹೂವಪ್ಪ - ಛೇ ಅದು ಹ್ಯಾಂಗ ಆದೀತವ್ವ. ಸಬ್‌ರಜಿಸ್ಟರ ಸಮಕ್ಷಮ ನಿನ್ನ ಗಂಡ ಹೊಲ-ಮನಿ ಎರಡನ್ನೂ ನನ್ನ ಹೆಸರಿಗೆ ನೊಂದಾಯಿಸಿಕೊಟ್ಟ ಮೇಲಿ ನಾನವನ ಕೈಗೆ ದುಡ್ಡೆಣಿಸಿದ್ದು. ಅಂದ ಬಳಿಕ ಬಿಟ್ಟು ಕೊಡತಾರೇನವ್ವ ಹೂ-ಏನೋ ಕಂತಿಗೆ ಸರಿಯಾಗಿ ಮಾತಾಡಿದ ಪ್ರಕಾರ ನನ್ನ ದುಡ್ಡು ನನಗ ಮರಳಿ ಕೊಡಬೇಕು ಅಂತ ಬಾಯಿ ಕರಾರಿತ್ತು. ನೀವು ಕೊಡಲಿಲ್ಲ ನಾನು ಬಿಡಲಿಲ್ಲ ಹೂ ಹೋಗಲಿ ಈಗಲಾದರೂ ನನ್ನ ದುಡ್ಡು ನನಗೆ ಕೊಡತಿಯೇನವ್ವ ?

ಹಂಪವ್ವ - ಎಲ್ಲಿಂದ ಕೊಡಲಪ್ಪ. ಆ ಹಣ ನನ್ನ ಹತ್ತಿರ ಇದ್ರೆ ಮೂರು ದಿವಸದಿಂದ ನನ್ನ ಮಕ್ಕಳನ್ನು ನಾನು ಉಪವಾಸ ಕೆಡವುತ್ತಿದ್ದೆನೆ... ?

ಹೂವಪ್ಪ - ಪಾಪ ನಿನ್ನ ಕಷ್ಟ ಕಂಡು ಉಪಕಾರ ಮಾಡಬೇಕು ಅಂತ ನನಗೂ ಅನಸ್ತೈತಿ. ನೋಡವ್ವ ನಾನೊಂದು ಮಾತು ಹೇಳ್ತೀನಿ, ಆ ಮಾತಿಗೇ ಒಪ್ಪಿಕೊಂಡೀ ಅಂದ್ರೆ ಈ ವನವಾಸ ತಪ್ಪಿ ನಿನ್ನ ಹೊಲ ಮನಿ ನಿನಗುಳಿತಾವು ಹೇಳ್ಳೇನವ್ವಾ ?

ಹಂಪವ್ವ - ಹೇಳಪ್ಪ

ಹೂವಪ್ಪ - (ಬೀಡಿ ಹಚ್ಚಿ) ನೋಡವ್ವ ಇನ್ನ ಮೇಲೆ ನಾನು ಆ ಚವಡಿ ಸಹವಾಸ ಕಡಕೊಂಡು ಮತ್ತ ಮದುವಿ ಮಾಡಿಕೊಂಡು ನನ್ನ ಮಂದಿ ಕೂಡಿಕೊಳ್ಳೊ ಹಂಬಲ ಇಟ್ಟುಕೊಂಡೀನಿ. ಅದಕ್ಕ ಈ ನಿನ್ನ ಮಗಳನ್ನ ನನಗ ಕೊಡು ಸಾಲ ಮುಟ್ಟಸಿಕೊಳ್ತೀನಿ. ನೋಡವ್ವ ಹ್ಯಾಂಗ ಮಾಡ್ತಿ... ?

ಹಂಪವ್ವ - ಹೂವಂಣ ನಿನ್ನ ಮಾತು ನಿನಗಾದರೂ ಸರಿ ಕಾಣುತ್ತೇನಪ್ಪ. ನಿನ್ನ ವಯಸ್ಸೇನು ನನ್ನ ಮಗಳ ವಯಸ್ಸೇನು ?

ಹೂವಪ್ಪ - ವಯಸ್ಸೇನ ಮಾಡತ್ತವ್ವ ಹಣ ಒಂದು ಹತ್ರ ಇದ್ರೆ ಮುದುಕನಿದ್ರೂ

ಹುಡುಗನಾಗುತಾನೆ, ಅದೇ ಹಣ ಇರದಿದ್ರೆ ಹುಡುಗ ಸಹಿತ ಮುದುಕನಾಗುತಾನೆ. ಸುಮ್ಮನೇ ನನ್ನ ಮಾತು ಕೇಳಿ ಒಪ್ಪಿಕೊಂಡು ಬಿಡವ್ವ

ಹಂಪವ್ವ - ಈ ಮಾತು ನನಗಿಷ್ಟ ಇಲ್ಲ ಹೂವಂಣ. ನೋಡಪ್ಪ ನನಗೇನಾದ್ರೂ ಉಪಕಾರ ಮಾಡೋ ಮನಸಿದ್ರೆ ವೀರಂಣ ಊರಿಗೆ ಬರೋವರೆಗೂ ಈ ಮನೇಲಿ ಬಿದ್ದುಕೊಳ್ಳೋಕೆ ಅವಕಾಶ ಕೊಡು ಅಷ್ಟೇ ಸಾಕು

ಹೂವಪ್ಪ - ಓ... ಹೋ... ಆ ಈರ್‍ಯಾನ ದಾರೀ ಕಾಯಿತೀರೋ ನೀವೀಗ. ಏನವ್ವ ಆ ನಿಮ್ಮ ಈಶ್ವರನ ಪುರಾಣ ಮುಗಿದು ಈ ಈರ್‍ಯಾನ ಕಥಿ ಪ್ರಾರಂಭ ಆಗೇತೇನು ? ಹಂಪವ್ವ ಈರ ಹತ್ತು ಹೂವಿನ ಮ್ಯಾಲ ಹಾರೋ ಹುಳಾ ಇದ್ದಂಗವ್ವ ಅವನು. ಮದುವಿ ಆಗೋನಲ್ಲ ಆ ಹುಡುಗ ಬರೀ ಮೂಸಿ ನೋಡುವನು... ಹೂ... ಯಾರು ಬಲ್ಲರು ಈಗಾಗಲೇ ನಿನ್ನ ಮಗಳು ಮುಡಿದ ಹೂ ಆಗಿದ್ರೂ ಆಗಿರಬಾರದ್ದ್ಯಾಕ

ನೀಲಾ - (ಕಿವಿ ಮುಚ್ಚಿಕೊಂಡು) ಅವ್ವಾ... (ಅಳು)

ಹಂಪವ್ವ - (ಸಿಟ್ಟಿನಿಂದ) ಹೂವಪ್ಪ ... ಮುಚ್ಚು ನಿನ್ನ ಬಾಯಿನ. ಏನೋ ನಮ್ಮ ಕಷ್ಟದಲ್ಲಿ ಸಾಲ ಕೊಟ್ಟವನು ಅಂತ ಸುಮ್ಮನಿದ್ರೆ ನನ್ನ ಮಗಳ ಶೀಲಾ ಎತ್ತಿ ಮಾತಾಡಲಿಕ್ಕೂ ಸುರು ಮಾಡಿದಿಯಾ ? ಇನ್ನೊಂದು ಸಲ ಆಡಿದರೆ ನಿನ್ನ ಹಲ್ಲುದುರಿಸಿ ಬಿಟ್ಟೇನು. ಕೊಟ್ಟ ಸಾಲಕ್ಕೆ ಒತ್ತಾಯಪಡಿಸಿ ಇದ್ದ ಹೊಲ ಮನಿ ಕಸಿದುಕೊಳ್ಳೋ ದುಷ್ಟಾ ಅಂತ ನನ್ನವರಿಗೆ ಮೊದಲೇ ತಿಳಿದಿದ್ದರೆ ನಿನ್ನ ಹತ್ತಿರ ಸಾಲಾನೇ ಮಾಡ್ತಿರಲಿಲ್ಲ. ಹಳ್ಳೀಲಿ ಬಾಳೋದು ಬಾಳ ಒಳ್ಳೇದು ಅಂತ ಹೇಳ್ತಾರ ಪಟ್ಟಣದಾಗ ಕೂತವರು. ಆದರೆ ಅವರಿಗೇನು ಗೊತ್ತು ನಿನ್ನಂಥ ಹಸಿರು ಹಾವು ಇಲ್ಲಿ ವಾಸ ಮಾಡಿಕೊಂಡಿರತಾವು ಅನ್ನೋದು

ಹೂವಪ್ಪ - ಹಾವು ?... ನಾನು ಹಾವು ?

ಹಂಪವ್ವ - ಅಲ್ಲವೇನಪ್ಪ ಅಂಗೈಲಿ ಕೈಲಾಸ ತೋರಿಸಿ ಗಂಡನ್ನ ಬಿಡಿಸಿ ಅಂದು ಆ ಚವಡಕ್ಕನ ಬದಕ ಬಲಿ ತಗೊಂಡಿ. ನಂತರ ಸಾಲಕ್ಕ ಒತ್ತಾಯ ಪಡಿಸಿ ನನ್ನ ಗಂಡನ ಪ್ರಾಣಾ ನುಂಗಿ ನೀರು ಕುಡಿದಿ. ಈಗ ನನ್ನ ಮಗಳ ಶೀಲಕ್ಕ ಸಹಿತ ಬಾಯಿ ಹಾಕಲಿಕ್ಕೆ ಹತ್ತಿದಿಯಾ ? ನಿಮ್ಮಪ್ಪ ನಿನ್ನ ಹೂವಪ್ಪ ಅಂತ ಯಾಕ ಹೆಸರಿಟ್ಟನೋ ಹಾವಪ್ಪ ಅಂತ ಇಟ್ಟಿದ್ರ ನೆಟ್ಟಗಿತ್ತು (ಆಯಾಸಗೊಳ್ಳುವಳು)

ಹೂವಪ್ಪ - ಆಗಲಿ ಅದಕ್ಕೇನು ಮಾಡೋದು... ಏನೋ ಬಡವಿ... ಮಕ್ಕಳೂ ಮರಿ ಇದ್ದವಳು ಅನ್ನೋ ಭಾವನೆಯಿಂದ ಉಪಕಾರ ಮಾಡಬೇಕು ಅನ್ನಿಸಿತು ಆ ಮಾತು ಹೇಳಿದೆ. ಆಗಲಿ ನೋಡ ಹಂಪವ್ವ ನಾಳೆ ಮನೆ ಖಾಲಿ ಮಾಡಲಿಕ್ಕೇ ಬೇಕು (ಹೋಗುವನು)

ಹಂಪವ್ವ - ನಾಳೆ (ನಕ್ಕು) ಹುಚ್ಚಪ್ಪ ಅಲ್ಲಿತನಕ ನನ್ನ ಇಲ್ಲೇ ಇರೂ ಅಂತ ಬಿಡಲಿಕ್ಕೆ ದೇವರು ನಿನ್ನಷ್ಟು ಕಲ್ಲೆದೆಯವನಲ್ಲ ಹೋಗಪ್ಪ ಹೋಗು

ನೀಲಾ - ಅವ್ವಾ ಅವನು ಹೇಳಿದ ಹಾಗೆ ಮಾಡಿಬಿಡವ್ವ. ಸುಮ್ಮನೇ ನಿನ್ಯಾಕ ಕಷ್ಟದಲ್ಲಿ ಬೀಳ್ತಿಯಾ ? ನಾನವನ್ನ ಮಾಡಿಕೊಳ್ತಿನಿ ಬಿಟ್ಟು ಬಿಡವ್ವ

ಹಂಪವ್ವ - (ಸಿಟ್ಟಿನಿಂದ) ಆ ... ಏನಂದಿ ? ಅವನಿಗೆ ನಿನ್ನನ್ನು ಕೊಡಲಾ ನಾನು ?

ನೀಲಾ - ಹೌದವ್ವ ಕಷ್ಟ ಬರೋದಿದ್ರೆ ನನ್ಗೊಬ್ಬಳಿಗೇ ಬರಲಿ. ನೀನು ತಮ್ಮ-ತಂಗಿ ಸುಖವಾಗಿದ್ರೆ ಸಾಕು. ನನ್ನ ಸಲುವಾಗಿ ಹೊಲ ಮನಿ ಯಾಕವ್ವ ಕಳಕೊಳ್ತಿಯಾ ?

ಹಂಪವ್ವ - ನೀಲಾ ನನ್ನ ಹೊಲ ಮನೆ ಹೋದ್ರೆ ಹೋಗಲಿ, ಅದರಿಂದ ನನಗೇನೂ ಕಷ್ಟವಿಲ್ಲ. ಇಂದಿಲ್ಲ ನಾಳೆ ರುದ್ರನ ರಟ್ಟೆಗ ಶಕ್ತಿ ಕೊಟ್ರೆ ದುಡಿದು ಅವನ ಸಾಲ ಮುಟ್ಟಿಸಿ ಮರಳಿ ತಮ್ಮಪ್ಪನ ಆಸ್ತಿ ಮರಳಿ ಪಡಕೊಂಡಾನು. ಹೊಲ ಮನಿ ಉಳಿಸಿಕೊಳ್ಳಲಿಕ್ಕೆ ಹೋಗಿ ಹೂವಿನಂಥ ನಿನ್ನ ಜೀವಾನ ಹುಡಿಯಲ್ಲಿ ಹಾಕಿ ನಾ ಸಾಯಲಾರೆ. ಮಗಳ ಮಾರಿಕೊಂಡು ಸತ್ತರೆ ನಾಳೆ ಸ್ವರ್ಗದಲ್ಲಿ ನಿಮ್ಮಪ್ಪ ಸಮೀಪ ಬರಗೊಟ್ಟಾರೇನವ್ವ ನನ್ನ. ರುದ್ರ ಬಾರಪ್ಪ ಇಲ್ಲಿ... ನನ್ನ ಕಂದ ಈ ನಿನ್ನ ಅಕ್ಕ ತಂಗಿಯರನ್ನು ಸರಿಯಾಗಿ ನೋಡಿಕೊಂಡು ಹೋಗ್ತಿಯೇನಪ್ಪ ? ಮತ್ತೆ ನನ್ನ ತಮ್ಮ ನನಗೆ ಮಾಡಿದನಲ್ಲ ಹಾಗೆ ಮಾತ್ರ ಮಾಡಬೇಡಪ್ಪ ನೀನಿವರಿಗೆ

ನೀಲಾ - ಹೀಗ್ಯಾಕೆ ಮಾತಾಡ್ತಿಯವ್ವಾ ನೀನು ? (ತುಂಬಾ ದುಃಖದಿಂದ)

ಹಂಪವ್ವ - ಅಂಜಿಕೊಬೇಡ. ನೀಲಕ್ಕ ನನ್ನ ಕಾಲ ಮುಗೀತು. ಅವರನ್ನು ಬಿಟ್ಟು ನಾನು ಇಷ್ಟು ದಿವಸ ಬದುಕಿದ್ದೇ ದೊಡ್ಡದು. ಇನ್ನಮೇಲೆ ಈ ನಿನ್ನ ತಮ್ಮ ತಂಗಿಯುವರಿಗೆ ನೀನೇ ತಾಯಿಯಾಗಿ ಜೋಪಾನ ಮಾಡಿಕೊಂಡು ಹೋಗಬೇಕವ್ವ. ಅದೋ ಅಲ್ಲಿ ನೋಡು ... ಅವರು ನನ್ನ... ಕರೀತಾರೆ

ನೀಲಾ - ಅಪ್ಪನೂ ನಮ್ಮನ್ನು ಬಿಟ್ಟು ಹೋದ. ಈಗ ನೀನೂ ಹೋಗ್ತೀನಿ ಅಂತೀಯಾ ಹೀಗ್ಯಾರೆ ಯಾರವ್ವ ನಮಗ ದಿಕ್ಕು (ಹುಡುಗರೆಲ್ಲರೂ ಅಳುತ್ತಾರೆ)

ಹಂಪವ್ವ - ದೇವರು ದಿಕ್ಕಿಲ್ಲದವರಿಗೆ ಅವನೇ ದಿಕ್ಕು (ನಿತ್ರಾಣ ಹೊಂದಿ ಕಂಣು ತುಂಬ ನೀರು ತಂದು) ಪರದೇಶಿ ಮಕ್ಕಳಾದ ನಮ್ಮನ್ನು ಅವನೇ ಕಾಪಾಡುತ್ತಾನೆ (ಡಪ್ಪು ತೆಗದು ರುದ್ರನಿಗೆ ಕೊಡುತ್ತ) ರುದ್ರ ತೆಗೆದುಕೊಳ್ಳಪ್ಪ ಇದನ್ನು ಬಡವಿಯಾದ ನಿನ್ನ ತಾಯಿಗೆ ಸಾಯುವ ಗಳಿಗೆಯಲಿ ಏನ... ಕೊಡಲಾಗಲಿಲ್ಲ. ನಿನ ತಂದೆ ಕಂಠದಲ್ಲಿದ್ದ ಕವಿತಾ ಶಕ್ತಿಯ ಪ್ರತಿಭಾ ಸರಸ್ವತಿ ನರ್ತಿಸಲಿ ನಿನ್ನ ನಾಲಿಗೆಯ ಮೇಲೆ (ಸುವರ್ಣಳಿಗೆ ಬಟ್ಟಲು, ನೀಲಾಳಿಗೆ ತಲೆದಿಂಬಿಗಿದ್ದ ಹರಿದ ಬಟ್ಟೆಯ ಗಂಟನ್ನು ಕೊಟ್ಟು) ದಯವಂತರಿಂದ ತಿರಿದುಣ್ಣಲು

ದುರ್ದೈವಿಗಳಾದ ನಿಮಗುಳಿದ ಇದೊಂದು ಬಟ್ಟಲು ನೋಡಿರಿ. ಮಕ್ಕಳೇ ತಿರಿದುಂಡು ಬದುಕಿರಿ (ಸ್ವಲ್ಪ ಮುಂದೆ ನೂಕವಳು. ಈಗ ಹಿನ್ನಲೆಯಲ್ಲಿ ಕಂದ ಪದ್ಯ)

ಹಿನ್ನಲೆ

ಕರದಿ ಕಪ್ಪರ ಉಂಟು । ಹಿರಿದೊಂದು ನಾಡುಂಟು ।
ಸಿರಿವಂತರಿಂತಿವರೇ ಮೇಲು ॥

(ಹಿನ್ನಲೆ ಆದ ಮೇಲೆ) ಹೂ.. ಹೊರಡಿ ಮಕ್ಕಳೇ ! ಈ ಮನೆಯಿಂದ, ಈ ಊರಿನಿಂದ, ಊರವರ ಮನದಿಂದ ಮರೆಯಾಗಿ ವಿಶಾಲ ಪ್ರಪಂಚದಲಿ ಬೆರೆತು ಹೋಗಿರಿ...

ಸ್ವಾಮಿ...... (ಸಾಯುವಳು. ಹುಡುಗರೆಲ್ಲರೂ "ಅವ್ವಾ" ಎಂದಳುತ್ತ ತಾಯಿಯ ಮೇಲೆ ಬೀಳುವರು)

## ಸನ್ನಿವೇಶ ೧೬

### ಬೀದಿ

(ನೀಲಾ, ರುದ್ರ, ಸುವರ್ಣ ತಿರುಕರಾಗಿ ಹೊರಟಿದ್ದಾರೆ)

ರುದ್ರ - ಅಕ್ಕಾ ಈಗ ನಾವೆಲ್ಲಿಗೆ ಹೋಗೋದು ?

ನೀಲಾ - ಎಲ್ಲಿಗಂದ್ರೇನಪ್ಪ ಹೇಳೋದು. ಗಾಳಿಗೆ ತೂರಿದ ಗರಿಯಂತೆ ಗೊತ್ತು ಗುರಿ ಇಲ್ಲದೇ ಅಲಿಯೋದು. ನಮಗೀಗ ಹರಿದದ್ದೇ ಹಳ್ಳ, ನಿಂತದ್ದೇ ತೀರ್ಥ. ಕರೆದು ಅನ್ನ ಕೊಟ್ಟವರೇ ಈಗ ನಮಗೆ ತಂದೆ ತಾಯಿ (ದುಃಖ ಉಮ್ಮಳಿಸುವದು ಸ್ವಲ್ಪ ಚೇತರಿಸಿ)... ನೋಡಪ್ಪ ಅಪ್ಪ ಬಿಟ್ಟು ಹೋದ ಈ ಡಪ್ಪನ ಅವ್ವ ನಿನ್ನ ಕೈಗೆ ಕೊಟ್ಟಿದ್ದಾಳೆ. ಅವನು ಕಲಿಸಿದ ಹಾಡು ಅನಲಿಕ್ಕೆ ನಿನಗೂ ಬರುತ್ತೆ, ನನಗೂ ಬರುತ್ತೆ, ನೀನು ಅದನ್ನು ಬಾರಿಸು, ನಾನು ತಂಗಿ ಕುಣಿತೀವಿ. ಇಂಥ ಸ್ಥಳದಲ್ಲಿ ಒಂದು ಸಲ ನಾವು ಹಾಡಿ ಕುಣಿದರೆ ದಯವಂತರು ದುಡ್ಡು ಕೊಡ್ತಾರೆ

ರುದ್ರ - ಅದೆಲ್ಲ ನಿಜ ಅಕ್ಕ, ಆದರೆ ನಿಮ್ಮನ್ನ ಯಾಕ ಕುಣಿಸಬೇಕು ಅಂತೀನಿ

ನೀಲಾ - ದುಡಿದು ತಿನ್ನಲಿಕ್ಕೆ ಯಾವದಾದರೂ ಸರಿ. ನಾಲ್ಕು ದಿವಸ ತೊಂದರೆಯಾಗಿ ಆಮೇಲೆ ಇದೇ ರೂಡಿಯಾಗಿ ಬಿಡುತ್ತೆ. ನೀನದನ್ನ ಬಾರಿಸಿ ಹಾಡ್ತೀಯಪ್ಪ ರುದ್ರ

ರುದ್ರ - ಓ ಹೋ

ನೀಲಾ - ಇಲ್ಲಿ ಕೇಳಿರಂಣಾ ಇಲ್ಲಿ ಕೇಳಿರಪ್ಪಾ... ಈ ನಮ್ಮ ಕುಣಿದಾಟ ಕಂಡು ಈ ಪರದೇಶಿ ಮಕ್ಕಳ ಮೇಲೆ ಕರುಣೆ ಹುಟ್ಟಿ (ಎಲ್ಲರೂ) ಕೊಟ್ಟವರೂ ನಮ್ಮ ತಂದೆ ಕೊಡದವರೂ ನಮ್ಮ ತಂದೆ ತಾಯಿ, ದಿಕ್ಕಿಲ್ಲದ ಈ ಪರದೇಶಿ ಮಕ್ಕಳಿಗೆ ನೀವೇ ದಿಕ್ಕು ಹೂ (ಹಾಡು, ಕುಣಿತ)

ನೋಡಿ ಬಾರೋ ಕಾಶೀ ಮಧುರ । ನೋಡಿ ಬಾರೋ ಶ್ರೀ ಹರಿದ್ವಾರ

(ಮೇಲಿನ ಪದ ಪೂರ್ಣ ಅನ್ನಬೇಕು. ಹಾಡಿನ ಮುಕ್ತಾಯಕ್ಕೆ ಈಶ್ವರ, ಶೈಲಜ ಬರುವರು)

ರುದ್ರ - ಮಾವಾ (ಎಂದು ಈಶ್ವರನನ್ನು ಅಪ್ಪಿಕೊಳ್ಳುವನು. ನೀಲಾ ಸಿಟ್ಟಿನಿಂದ ಎಳೆದುಕೊಂಡು)

ನೀಲಾ - ಯಾರೋ ನಿನ್ನ ಮಾವಾ... ಸುಮ್ಮನೇ ನಡೀ ಇಲ್ಲಿಂದ

ಈಶ್ವರ - ನೀಲಾ ... ನಾನು ನಿಶ್ನ ಸೋದರ ಮಾವ. ಏಕೆ ನನ್ನ ಗುರ್ತು ಹತ್ತಲಾರದೇ?

ನೀಲಾ - ಗುರ್ತು ಹತ್ತದೇ ಇರಲಿಕ್ಕೆ ನಾನೇನು ಇನ್ನೊಬ್ಬರ ದುಡ್ಡಿಗೆ ಆಸೆಪಟ್ಟು ಅವರ ಮನೆಯ ಆಳಾಗಿ ಅಳುಕಿನ ಕೂಸಿನಂತೆ ಅಳುತ್ತ ಕುಳಿತಿಲ್ಲ. ಮೈ ಹಣ್ಣು ಮಾಡಿ ದುಡಿದು ತಿನ್ನುತ್ತೇವೆ

ಈಶ್ವರ - ನೀಲಾ ಯಾರಿಗೆ ನೀನೀ ಮಾತು ಅಂದದ್ದು ?

ನೀಲಾ - ನಿಮಗೇ. ಯಾರದೋ ದುಡ್ಡಿನಲ್ಲಿ ವಿದ್ಯೆ ಕಲಿತಿರಿ. ಯಾರದೋ ಆಸ್ತಿ ಮಾರಿಸಿ ಮದುವೆ ಆದಿರಿ. ಈಗ ಮಾವನ ದುಡ್ಡಿನಲ್ಲಿ ಮೆರೆದಾಡತಾ ಇದ್ದೀರಲ್ಲ? ನಿಮಗೆ ನಾನಂದದ್ದು. ನಿಮ್ಮನ್ನ ಸುಖದ ಸುಪ್ಪತ್ತಿಗೆಯಲ್ಲಿ ಕೂಡಿಸುವ ಹಂಬಲದಿಂದ ನಮ್ಮಪ್ಪ ನಮ್ಮವ್ವ ದುಃಖದಿಂದ (ಅಳು)

ಈಶ್ವರ - ಏನಂದೆ ..... ? ನನ್ನಕ್ಕ ನನ್ನ ಮಾವ ಸತ್ತು ಹೋದರೆ ...

ನೀಲಾ - ಸಾಲ ಕೊಟ್ಟವರು ಬಂದು ಸಂಕಟ ಕೊಟ್ರೆ ಇನ್ಯಾಕ ಉಳೀತಾರೆ. ಕೊಟ್ಟ ಸಾಲದಲ್ಲಿ ಹೊಲಮನೆ ಕಸಿದುಕೊಂಡು ನಮ್ಮನ್ನೆಲ್ಲ ಹೊರಗೆ ಹಾಕಿದರು

ಈಶ್ವರ - ನನ್ನಕ್ಕ ನನ್ನ ಮಾವ ನನ್ನ ಹಿತಕ್ಕಾಗಿ ಸಾಲಮಾಡಿ ಸತ್ತು ಹೋದರು... ನೀಲಾ ಆಗ ಅವರು ಹೀಗೆ ಅಂತ ನನಗೊಂದು ಪತ್ರ ಕೂಡಾ ಹಾಕಬಾರದಿತ್ತೆ ?

ನೀಲಾ - ಪತ್ರ ಬರೀದೆ ಇರತಾರೇನ್ರಿ... ಬರೆಸಿದ್ರು...

ಈಶ್ವರ - ನಿಜವೇ ? ಪತ್ರ ಬರೆಸಿದ್ದರೆ ? ನನಗೆ ?

ನೀಲಾ - ಹೌದರೀ ನಿಮಗೇ ಬರಿಸಿದ್ದರು. ಪತ್ರವಷ್ಟೇ ಅಲ್ಲ, ಸಾಲದ ಸಂಕಟದಲ್ಲಿ ನಮ್ಮ ತಂದೆ ಹಾಸಿಗೆ ಹಿಡಿದು ಮಲಗಿದಾಗ ನಿಮ್ಮಿಂದ ಹಣದ ಸಹಾಯ ದೊರತೀತೆಂದು ನಮ್ಮ ತಾಯಿ ನೀವಿದ್ದಲ್ಲಿಗೆ ಬಂದ್ರೆ, ಆಗ ನೀವು ಮುಖ ತಪ್ಪಿಸಿ ಮುಂಬೈಗೆ ಹೋದಿರಂತೆ. ನಂತರ ನಿಮ್ಮ ಮಾವ ಮುಖಕ್ಕೆ ಬಡಿದಂತೆ ಮಾತನಾಡಿದರಂತೆ

ಈಶ್ವರ - ಅಕ್ಕ ಆಗ ನೀನೆಷ್ಟು ನೊಂದುಕೊಂಡಿದ್ದಿ, ಹಣದ ಹವ್ಯಾಸದಿಂದ ನನ್ನನ್ನು ಮುಂಬೈಗೆ ದೊತ್ತು ಹಾಕಿದಾಗ ದೊರೆತ ನನ್ನಕ್ಕನ ಮುಖ ದರ್ಶನದ ಭಾಗ್ಯ ಮುಂದೆ ನನ್ನ ಬದುಕಿನಲ್ಲಿ ದೊರೆಯದೇ ಹೋಯಿತೇ ? ಎಂಥವಳು ನನ್ನಕ್ಕ ನನ್ನಕ್ಕನ ತೂಕ ಭೂಮಿ ತೂಕ. ಗುಣದಲ್ಲಿ ನನ್ನಕ್ಕನಿಗೂ ಮಿಕ್ಕಿದವರು ನನ್ನ ಮಾವ, ಆ ಮಹಾನುಭಾವ. ಅವರು ನನಗೆ ಹಾಲು ಕುಡಿಸಿದರು, ಮರಳಿ ನಾನವರಿಗೆ ವಿಷ ಕುಡಿಸಿದೆ. ಹೇಳು ನೀಲಾ ಸಾಯುವಾಗ ನನ್ನಕ್ಕ

ನನ್ನ ಜ್ಞಾಪಿಸಿದಳೇ ?

ಸೀಲಾ - ಹೌದು ಜ್ಞಾಪಿಸಿದಳು. ಅಲ್ಲದೇ ರುದ್ರನ್ನ ಸಮೀಪ ಕರೆದು ಈ ನಿನ್ನಕ್ಕ ತಂಗಿಯವರನ್ನು ಸರಿಯಾಗಿ ನೋಡಿಕೊಳ್ಳಪ್ಪ ಅಂತ ಹೇಳಿ ಮತ್ತೆ ನನ್ನ ತಮ್ಮ ನನಗೆ ಮಾಡಿದನಲ್ಲ ಹಾಗೆ ನೀನು ಮಾತ್ರ ಮಾಡಬೇಡವೆಂದು ರುದ್ರನ ಕೈಲಿ ವಚನ ಪಡೆದು ಸತ್ತಳು

ಈಶ್ವರ - ಸತ್ತಳು ನನ್ನಕ್ಕ ಸತ್ತಳು. ಹಣವಂತ ಹೆಣ್ಣಿನ ಹೊಲಸುಮೈಯ್ಯ ಚಲುವಿನಾಸೆ ಗುಣವಂತ ಗೃಹಿಣಿಯೊಬ್ಬಳ ಬದುಕನ್ನೇ ನುಂಗಿ ನೀರು ಕುಡಿಯಿತು ! ಅಂತಃಕರಣಿಯಾದ ಅಕ್ಕನ ಅಭಿಲಾಷೆ ತಮ್ಮನ ಅದೃಷ್ಟ ರೇಖೆಯನ್ನೇ ಬದಲಿಸಿ ಸಂಪತ್ತಿನ ಚಿನ್ನದ ಪಂಜರದ ಪಕ್ಷಿಯನ್ನಾಗಿಸಿ ಕೈಗೆ ಕೊಡಿಸಿತು ಅಕ್ಷಯ ಪಾತ್ರ. ಆದರ ದುರ್ದೈವಿ ಸುಮ್ಮನಿರದೇ ಅಕ್ಕನ ಮನೆ ಸೇರಿ ಅವಳ ಮಕ್ಕಳ ಕೈಗೆ ಕೊಡಿಸಿತು ಭಿಕ್ಷಾಪಾತ್ರೆ

ಶೈಲಜ - ಸ್ವಾಮಿ

ಈಶ್ವರ - ಸರಿ ಆಚೆ ಮುಟ್ಟದಿರು ನೀ ನನ್ನ. ಶೈಲ ಎಷ್ಟು ಜನ್ಮದ ಶನಿಯಾಗಿ ಬಂದು ನನ್ನ ಕೈಹಿಡಿದು ನನ್ನಕ್ಕನ ಮುಖ ನನಗೆ ಸಿಕ್ಕದಂತೆ ಮಾಡಿದಿ. ಸಂಪತ್ತುಳ್ಳವರ ಸಂಬಂಧ ಬೆಳೆಸಿ ನಾ ನನ್ನ ಬಳಗಕ್ಕೇ ವಿಪತ್ತು ಬರಮಾಡಿದೆ, ರೊಕ್ಕ ಸಿಕ್ಕಬಹುದು. ಆದರೆ ಅಕ್ಕರತೆಯ ನನ್ನಕ್ಕ ಸಿಕ್ಕುವಳೇ ? ಅಯ್ಯೋ ಏನಾಗಿ ಹೋಯಿತಿದು ಹೂವೆಂದು ಮೆಚ್ಚಿ ಮುಡಿದರೆ ಹಾವಾಗಿ ಕೊಂದಿ ಶೈಲಾ ನೀ ನನ್ನ ಕೊಂದಿ

ಶೈಲಜ - ಕ್ಷಮಿಸಿ... ನನಗೆ ಗೊತ್ತಿಲ್ಲ ... ಏನೂ ತಿಳಿಯದ ನನಗೆ ...

ಈಶ್ವರ - ಮಾಡಿದ ಅನ್ಯಾಯವನ್ನು ದುಡ್ಡಿನ ದರ್ಪದಲ್ಲಿ ಮರೆತು ಬಿಡಲಿಕ್ಕೆ ನಿಮ್ಮಂತೆ ದುಷ್ಟ ರಕ್ತ ಹರಿದಾಡುತ್ತಿಲ್ಲ ನನ್ನ ಮೈಯಲ್ಲಿ. ಪುಣ್ಯವಂತರ ಮನೆಯ ಅನ್ನ ರಕ್ತವಾಗಿ ಹರಿದಾಡುತ್ತಿಲಿದೆ ಈ ನನ್ನ ದೇಹದಲ್ಲಿ. ನಾ ನಿನ್ನ ಮದುವೆ ಆದದ್ದು ನಿಮ್ಮ ಶ್ರೀಮಂತಿಕೆಗೆ ಮೋಸಹೋಗಿ ಅಲ್ಲ, ನಿನ್ನ ಗುಣಕ್ಕೆ ಮಾರುಹೋಗಿ. ಸಾಲದ ಸಂಕಟದಲ್ಲಿ ನನ್ನ ಮಾವ ಸತ್ತ ವಿಷಯ ನನ್ನಕ್ಕ ಪತ್ರ ಬರೆದು ತಿಳಿಸಿದರೂ ಅದನ್ನು ನನ್ನಿಂದ ಬಚ್ಚಿಟ್ಟು ಮೋಸ ಮಾಡಲಿಕ್ಕೆ ನಾನೇನು ಅಪರಾಧ ಮಾಡಿದ್ದ. ನಿನ್ನ ಕೊರಳಿಗೆ ನಿಮ್ಮಪ್ಪ ನನ್ನಿಂದ ಮಾಂಗಲ್ಯ ಕಟ್ಟಿಸಿದ್ದು ನಿನ್ನ ಸುಖದುಃಖದಲ್ಲಿ ಪಾಲುಗಾರನಾಗಲೆಂದಲ್ಲ... ನಿನ್ನ ಮನೆಯ ಕಾವಲುಗಾರನಾಗಲೆಂಬ ಕಾರಣಕ್ಕೆ. ಬಡವರ ಬದುಕನ್ನು ದುರಂತಕ್ಕೀಡು ಮಾಡಿದ ಆ ನಿಮ್ಮಪ್ಪನ ಸಂಪತ್ತಿನ ಸುಖದ ಸುಪ್ಪತ್ತಿಗೆಯ ಮೇಲೆ ಬಿದ್ದುಕೋ ಗಂಡಸಿಲ್ಲದ ರಂಡೆಯಂತೆ. ಅದನ್ನು ಕಂಡು ಕಂಣುರಿಯಲಿ ನಿನ್ನ ಕಟುಕ ಹೃದಯಕ್ಕೆ ನಡೆ ಸೀಲಾ (ಹೋಗಹತ್ತುವನು)

ಶೈಲಜ - ಸ್ವಾಮೀ ನನ್ನ ಕೈಬಿಟ್ಟು ಹೋಗಲು ನಾನು ಮಾಡಿದ ಅಪರಾಧವೇನು ? ತಂದೆ ಮಾಡಿದ ದ್ರೋಹವನ್ನು ಮಗಳ ಮೇಲೆ ತೀರಿಸಿಕೊಳ್ಳವದು ನ್ಯಾಯವೇ? ಯಾವ ದೋಷವನ್ನೂ ಕಂಡರಿಯದೇ ನೆರಳಿನಂತೆ ನಿಮ್ಮನ್ನು ಅನುಸರಿಸಿದ ಮಡದಿಯನ್ನು ತೊರೆದು ಹೋಗುವದು ನ್ಯಾಯವೇ ? ಧರ್ಮವೇ ? (ಕಾಲು ಹಿಡಿಯುವಳು)

ಹಂಪವ್ವ - (ಹಿನ್ನೆಲೆಯಲ್ಲಿ) ಈಶ್ವರ ಮುಖ್ಯ ನಿನ್ನ ಕೈ ಹಿಡಿಯಲಿರುವ ಹುಡುಗಿ ನನ್ನ ಮನಸ್ಸಿಗೆ ಬಂದಿದ್ದಾಳೆ. ಅವಳಿಂದ ನಿನಗಷ್ಟೇ ಅಲ್ಲ ನಾಳೆ ನನ್ನ ಮಕ್ಕಳಿಗೂ ಸುಖ ತಟ್ಟೀತು ಎಂಬ ನಂಬಿಕೆ ನನಗಿದೆ

ಈಶ್ವರ - ಅಕ್ಕ.... ಆಗಲಿ ನಡೆಯಿರಿ ಮೊದಲು ಊರಿಗೆ ಹೋಗಿ ಅಲ್ಲಿ ನನ್ನಕ್ಕ ಮಾವಂದಿರ ಆತ್ಮಕ್ಕೆ ಶಾಂತಿ ಕೋರುವ (ಹೋಗುವರು)

## ಉಪ ಸಂಹಾರ

(ಮಹದೇವಪ್ಪನ ಮನೆ. ಗಡ್ಡ ಬೆಳೆಸಿದ ವೀರಣ್ಣ ಸೈಕಲ್ ಮುಂದಿಟ್ಟುಕೊಂಡು ಕುಳಿತಿದ್ದಾನೆ) ಹಿನ್ನಲೆಯಲ್ಲಿ ನೀಲಾನ ಧ್ವನಿ

॥ ಪದ ॥

ಮಾವಯ್ಯ ನನ ಚಲುವಾ । ತನ್ನಷ್ಟಕ್ಕ ತಾನೇ ನೋಡಿ ನಲಿವಾ (ಹುಚ್ಚನಂತೆ ನಗುವನು)

ವೀರಣ್ಣ - ನೀಲಾ... ನೀಲಾ... (ಹುಚ್ಚನಂತೆ ನಗುವನು) ನೀಲಾ ಎಲ್ಲಿ ಹೋದಿ ನೀಲಾ

ಚವಡವ್ವ - (ಬಂದು) ವೀರಂಣ ನನ್ನಪ್ಪ ಇಲ್ಲಿ ಬರಬ್ಯಾಡ ಅಂತ ಎಷ್ಟು ಸಲ ಹೇಳಬೇಕು ನಿನಗ. ಆ ಹೂವಪ್ಪನ ಕಡದ ಹಾವು ಇಲ್ಲೇ ಸೇರಿಕೊಂಡೈತಿ

ವೀರಣ್ಣ - ಹೂವಪ್ಪನ ಕಡದ ಸಾಯ ಹೊಡೇದಕ್ಕಿಂತ ನನಗೇ ಕಡಿದಿದ್ರ ಒಳ್ಳೇದಿತ್ತು ಚವಡಕ್ಕ. ನೀಲಾ ಇರಲಾರದೆ ನಾನು ಬದುಕಿರಲಾರೆ....

ಚವಡವ್ವ - ಏನಪ್ಪ ತಿಳಿದವ ಓದಿಕೊಂಡಾವ ನೀನೂ ಹೀಂಗ ಅಳೋದಾ... ಹುಚ್ಚರಂಗ ಮಾಡೋದಾ... ನಡಿಯಪ್ಪ ನಡಿ ಆ ಹುಡುಗಿ ಸಲುವಾಗಿ ಊಟಾ ಬಿಟ್ಟು ಹೊಟ್ಟೆ ಸುಟ್ಟಗೋಬಾರದು ನಡಿ ಊಟಾ ಮಾಡ ನಡಿ

ವೀರಣ್ಣ - ಇಲ್ಲಕ್ಕ ನನಗೆ ಹಸಿವೆಯೇ ಇಲ್ಲ ನೀಲಾ... ನೀಲಾ... ನನ್ನ ನೀಲಾ...

ಚವಡವ್ವ - ನೀಲಾ ನೀಲಾ ನೀಲಾ ನೀಲಾ ಅಂತ ನೀ ಹಲಬೋದು ನೋಡಿ ಕಂಣಾಗೂ ನೀರು ಬರುತ್ತ. ಏನ ಮಾಡೂದಪ್ಪ ಎಲ್ಲಿ ಹೋದಳೋ ಏನೋ. (ಎಲ್ಲರೂ ಬರುವರು)

ಈಶ್ವರ - ವೀರಣ್ಣಾ... ಚವಡಕ್ಕ

ವೀರಣ್ಣ - ಈಶ್ವರ, ನೀಲಾ... ನೀಲಾ

ರುದ್ರ - ನಾವೂ ಬಂದ್ವೀ ಮಾವಾ

ಈಶ್ವರ - ವೀರಣ್ಣ ಇದೇನೋ ದಡ್ಡ, ಗಡ್ಡ ಬೆಳೆಸಿದ್ದಿಯಲ್ಲ ಯಾಕೆ ?

ಚವಡವ್ವ - ನೋಡ ತಮ್ಮ ಹುಡುಗಿ ಸಿಕ್ಕದಿದ್ರ ಸನ್ಯಾಸಿ ಆಗ್ತಾನ ಇವ.

ಈಶ್ವರ - ಹೌದಾ ಆಗಲಿ ವೀರಣ್ಣ ಈ ಹುಡುಗಿ ಹುಡುಕಿ ತಂದೀನಿ. ನಾನು ನನ್ನ ಮಾತು ಉಳಿಸಿಕೊಂಡ್ತಿ

ಚವಡವ್ವ - ತಗೋಳಪ್ಪ ನಿಮ್ಮಕ್ಕನ ಮನೆ ಕೀಲಿನ

ಬಸವರಾಜ - ಮತ್ತೆ ಸಂಪಿಗೆ ಹೂವಪ್ಪ ?

ಚವಡವ್ವ - ಇದ ಜಾಗಾದಾಗ ಹಾವು ಕಡೆದ ಶಟದ ಹೋದ

ಬಸವರಾಜ - ಹಾವು ಕಡೀತು, ಇಲ್ಲೇ ಕಡೀತಾ, ಮತ್ತೆ ಸಾಯ ಹೊಡಿದಿಲ್ಲೋ ಅದನ್ನ

ಚವಡವ್ವ - ಇಲ್ಲ ಇನ್ನೂ ಒಬ್ಬನ್ನ ಕಡೀಬೇಕಂತ ಇದ ಮನ್ಯಾಗ ಐತಿ

ಈಶ್ವರ - ಆಗಲಿ ಈ ನನ್ನ ಅಕ್ಕನ ಮನೆ ಮೊದಲಿನಂತೆ ನಂದಗೋಕುಲವಾಗಲೆಂದೂ ನನ್ನ ಅಕ್ಕಮಾವಂದಿರ ಆತ್ಮಕ್ಕೆ ಶಾಂತಿ ಆಗಲೆಂದೂ ಆ ಪತಿತ ಪಾವನ ಪರಮಾತ್ಮನಲ್ಲಿ ಪ್ರಾರ್ಥಿಸುವಾ

ಓಂ ಶಾಂತಿ ಶಾಂತಿ ಶಾಂತಿ

# ಚಿಕ್ಕ ಸೊಸೆ

## ಅರ್ಥಾತ್

# ಸೊಸೆ ತಂದ ಸೌಭಾಗ್ಯ

## ಪಾತ್ರ ಪರಿಚಯ

| | | |
|---|---|---|
| ೧. | ರಾಮಣ್ಣ | ಮನೆಯ ಯಜಮಾನ |
| ೨. | ಗೋಪಿ | ಸಂಘದ ಪ್ರೆಸಿಡೆಂಟ್ |
| ೩. | ರವಿ | ರಾಮಣ್ಣನ ಹಿರಿಯ ಮಗ |
| ೪. | ಶೇಖರ | ರಾಮಣ್ಣನ ಕಿರಿಯ ಮಗ, ರವಿಯ ತಮ್ಮ |
| ೫. | ಶ್ಯಾಮಣ್ಣ | ರವಿಯ ಮಾವ, ರಾಮಣ್ಣನ ಬೀಗ |
| ೬. | ಬಸವಂತ | ತಾರಕ್ಕನ ಗಂಡನ ಮನೆಯ ಆಳು |
| ೭. | ಗಾಡಿಯವ | |

## ಸ್ತ್ರೀ ಪಾತ್ರ

| | | |
|---|---|---|
| ೧. | ತಾರಕ್ಕ | ರಾಮಣ್ಣನ ಹಿರಿಯ ಮಗಳು |
| ೨. | ನಾಗಮ್ಮ | ಶ್ಯಾಮಣ್ಣನ ಹಿರಿಯ ಮಗಳು<br>ರಾಮಣ್ಣನವರ ಹಿರಿಯ ಸೊಸೆ |
| ೩. | ಸುನಂದಾ | ಶ್ಯಾಮಣ್ಣನವರ ಕಿರಿಯ ಮಗಳು<br>ರಾಮಣ್ಣನವರ ಚಿಕ್ಕ ಸೊಸೆ |

## ದೃಶ್ಯ - ೧

ರಾಮಣ್ಣನವರ ಮನೆ. ಬೆಳಗಿನ ಎಂಟುಗಂಟೆ ಸಮಯ, ರಾಮಣ್ಣನವರ ಮಗಳು ತಾರಕ್ಕ ಹಿತ್ತಲಲ್ಲಿ ತುಳಸೀಪೂಜೆ ಮಾಡುತ್ತಾಳೆ

- ಹಾಡು -

ಒಂದಿಸಿ ಪೂಜಿಪೆ ವೃಂದಾ । ಪಾವನೆ ನೀನಾನಂದಾ ।
ನಿನಗೊಲಿದನು । ಆ ದೇವಕಿ ಕಂದಾ ॥
ಧರೆ ಪಾವನವಾಯಿತು । ನಿನ್ನಿಂದ ॥
ಮಂಗಲದಾತೇ । ನೀಪುನೀತೆ । ನಿನ್ನಯ ಚರಿತೆ । ಪಾಡುತೆ ಮಾತೆ ॥

ಗೋಪಿ - (ಬಂದು) ತಾರಕ್ಕನವರ ತುಳಸೀಪೂಜೆ ಅತ್ಯಂತ ಸಂಭ್ರಮದಿಂದ ಸಾಗಿದೆಯಲ್ಲ

ತಾರಕ್ಕ - ಬಾರಪ್ಪಾ ಗೋಪಿ, ಒಳ್ಳೇ ಸಮಯಕ್ಕೆ ಬಂದಿ, ಬಾ ಪ್ರಸಾದ ತೆಗೆದುಕೋ (ಕೊಡುವಳು)

ಗೋಪಿ - ನೀವು ಇಲ್ಲಿಗೆ ಯಾವಾಗ ಬಂದಿರಿ ತಾರಕ್ಕ ?

ತಾರಕ್ಕ - ನಾನು ಇಲ್ಲಿಗೆ ಬಂದು ಆರು ದಿನಗಳು ಕಳೆಯಿತು. ಆದಿರಲಿ ನಾನು ಬಂದ ವಿಷಯ ನಿನಗೆ ಯಾರೂ ಹೇಳಲಿಲ್ಲವೇನೋ ಗೋಪಿ ?

ಗೋಪಿ - ಹೌದು, ನಿಮ್ಮ ತಮ್ಮ ರವಿ, ಒಂದು ಸಲ ತಿಳಿಸಿದಂತಿತ್ತು ಆದರೂ....

ತಾರಕ್ಕ - ಜ್ಞಾಪಕದಲ್ಲಿ ಉಳಿದಿರಲಿಕ್ಕಿಲ್ಲ ಅಲ್ಲವೆ ? ಯಾಕಂದರ ಇಂದು ನೀನು ಅಂದಿನ ಗೋಪಿಯಲ್ಲ. ಲಕ್ಷಾಂತರ ರೂಪಾಯಿ ವ್ಯಾಪಾರ ಮಾಡುವ ದೊಡ್ಡ ಸಂಘದ ಪ್ರೆಸಿಡೆಂಟ್. ಊರಿನಲ್ಲಿ ಗಣ್ಯ ಮನುಷ್ಯ. ಅಂದ ಬಳಿಕ ನಿನಗೆ ಈ ಬಡ ಅಕ್ಕಳ ಅಕ್ಕರೆಯ ನೆನಪಿನ ನಿಧಿಗೆ ತುಕ್ಕು ಹಿಡಿಯುವದೇನು ಮಹಾ !

ಗೋಪಿ - ಅವಹೇಳನ ಮಾಡಬೇಡ ಅಕ್ಕ. ಸಕ್ಕರೆಗೆ ಸಮಾನವಾದ ನಿನ್ನ ಅಕ್ಕರೆಯ ನೆನಪು ನನ್ನ ಎದೆಬಟ್ಟಲಲ್ಲಿ ಹಾಲಿನಂತೆ ಉಕ್ಕುತ್ತಿದೆ (ಶೇಖರ ಬಂದು ನಿಲ್ಲುವನು)

ತಾರಕ್ಕ - ಅಕ್ಕನ ಬಗ್ಗೆ ಇಷ್ಟೊಂದು ಅಕ್ಕರತೆಯಿದ್ದರೆ ಆರು ದಿನ ಕಳೆದರೂ ಮಾತನಾಡಿಸಿಕೊಂಡು ಹೋಗಲು ಏಕೆ ಬರಲಿಲ್ಲ ?

ಶೇಖರ - ಬರಲಿಕ್ಕೆ ಸಮಯ ಬೇಕಲ್ಲ, ಅವನೇನು ನಮ್ಮಂತೆ ಹೊಲಮನೆಯ ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳುವ ಸಾಮಾನ್ಯ ಮನುಷ್ಯನೇನು ? ದೊಡ್ಡ ಸಂಘದ ಪ್ರೆಸಿಡೆಂಟು. ಗೋಪಣ್ಣನವರು ಊರ ಹಿರಿಯರಲ್ಲಿ ಒಬ್ಬರು, ಅಕ್ಕ ಈಗ ನಮ್ಮೂರು ಇವರು ತೋರಿಸಿದ ದಾರಿಯಲ್ಲಿ ನಡೆದು ಹೋಗುತ್ತದೆ

ಗೋಪಿ - ಏ, ಏನೋ ಶೇಖರಾ, ನಿಮ್ಮಣ್ಣ ರವಿ ಮನೆಯಲ್ಲಿಲ್ಲವೇನೋ ?

ಶೇಖರ - ಇವತ್ತು ಮನೆಬಿಟ್ಟು ಅವನೆಲ್ಲಿ ಹೋಗುತ್ತಾನೆ ! ಇವತ್ತಷ್ಟೆ ಏಕೆ ಇನ್ನು ಮೇಲೆ ಅವನು ಮನೆಬಿಟ್ಟು ಹೋಗುವದೇ ಇಲ್ಲ

ಗೋಪಿ - ಅಂದರೇನೋ

ಶೇಖರ - ಅಂದರೆ ಈಗ ಆರು ತಿಂಗಳ ಹಿಂದೆ ಅಣ್ಣ ಒಂದು ದೊಡ್ಡ ತಪ್ಪು ಮಾಡಿ ಅಪರಾಧದಲ್ಲಿ ಸಿಕ್ಕುಬಿದ್ದಿದ್ದಾನ. ಅಂದಮೇಲೆ ವಾರೆಂಟು ಹುಟ್ಟಿಕೊಂಡಿದೆ. ಆದ್ದರಿಂದ ಅಣ್ಣನನ್ನು ಹಿಡಿದು ಬೇಡಿ ಹಾಕಿ ಕತ್ತಲ ಮನೆಯಲ್ಲಿ ಕೊಳೆಹಾಕಬಲ್ಲ ಗೃಹಶಾಖೆಯ ಮೇಲಿನ ಬಲಿಷ್ಠವಾದ ಪೋಲೀಸ್ ಡಿಪಾರ್ಟಮೆಂಟ್ ಇವತ್ತು ನಮ್ಮ ಮನೆಗೆ ಬರುತ್ತದೆ (ಮ್ಯಾಜಿಕ್ ಭಯಾನಕ ರಿಕಾರ್ಡು)

ಗೋಪಿ - ನಿನ್ನ ಮಾತು ಅರ್ಥವಾಗಲಿಲ್ಲ

ತಾರಕ್ಕ - ಅವನು ನಿನ್ನೊಂದಿಗೆ ಹಾಸ್ಯ ಮಾಡುತ್ತಿದ್ದಾನೆ ಗೋಪಿ, ಇವತ್ತು ರವಿಯ ಮಡದಿಯನ್ನು ಮನೆ ತುಂಬಿಸಿಕೊಳ್ಳುವ ಸಂಭ್ರಮವಿದೆ. ಅದಕ್ಕೆ ಅವನು ಹೀಗೆಲ್ಲ ಹೇಳುತ್ತಾನೆ

ಗೋಪಿ - ಏನಕ್ಕ ? ಇವತ್ತು ರವಿಯ ಮಡದಿಯು ಬರುತ್ತಾಳೆಯೇ ? ಅದಕ್ಕಾಗಿಯೇ ಇಷ್ಟೆಲ್ಲ ಸಂಭ್ರಮ ?

ಶೇಖರ - ನಾನೇನು ತಪ್ಪಿಹೇಳಿದೆನೇ ಗೋಪಣ್ಣ, ಮದುವೆ ಒಂದು ಅಪರಾಧ, ಆ ಅಪರಾಧಗೈದ ತಪ್ಪಿಗೆ ಶಿಕ್ಷೆ ಕೊಡಲು ಮನೆಗೆ ಬರುತ್ತಾಳೆ ಅತ್ತಿಗೆ. ನಾಳಿನಿಂದ ಅಣ್ಣನ ಮೇಲೆ ತಪ್ಪದೇ ಅಧಿಕಾರ ನಡಿಸುತ್ತಾಳೆ. ಇದೇನು ಸುಳ್ಳೇನಪ್ಪಾ ಗೋಪಣ್ಣ ?

ಗೋಪಿ - ಒಂದು ದೃಷ್ಟಿಯಿಂದ ಸತ್ಯವೆಂದೇ ಹೇಳಬಹುದಪ್ಪ ಶೇಖರಾ ನಿನ್ನ ಮಾತು. ಮದುವೆಯಾಗಿ ಮನೆತುಂಬಲು ಬರುವ ನಾರಿ ಹಿತಕಾರಿಯಾದರ ಬಾಳು ಕಬ್ಬಿನ ಮೇಲಿಟ್ಟ ಜೇನಾಗುತ್ತದ. ಇಲ್ಲವಾದರೆ

ಶೇಖರ - ಅವಳೇ ಪ್ರತಿಕೂಲಿನಿಯಾದರೆ ತಲೆಯಲ್ಲಿ ಬಿದ್ದು ಕೆರೆದುಕೊಳ್ಳಹಚ್ಚುವ ಹೇನಾಗುತ್ತಾಳೆ

ಗೋಪಿ - ಹೋಗಲಿಬಿಡೋ ಎಲ್ಲಿದ್ದಾನೆ ರವಿ !

ಶೇಖರ - ಇನ್ನಲ್ಲಿರುತ್ತಾನ ಅಲಂಕಾರ ಕೋಣೆಯಲ್ಲಿ

ಗೋಪಿ - ಅಲಂಕಾರ ಕೋಣೆಯಲ್ಲಿ ?

ಶೇಖರ - ಹೌದು, ಮೊದಲಗಿತ್ತಿಯಾಗಿ ಮನೆ ತುಂಬಲಿರುವ ಮಡದಿಗಾಗಿ ಗಂಡ ಎನ್ನಿಸಿಕೊಳ್ಳುವ ಈ ಪ್ರಾಣಿ ಪಡುವ ಕಷ್ಟ ಕಂಡು ನನಗಂತೂ ಅಯ್ಯೋ ಪಾಪ ಎನಿಸುತ್ತದೆ. ಗೋಪಣ್ಣ ಈ ದಿನ ಬೆಳಗಿನ ಐದು ಗಂಟೆಗೇನೇ ನನ್ನಣ್ಣ ಕನ್ನಡಿ ಮುಂದೆ ಕುಳಿತವನು ಈಗ ಎಂಟು ಗಂಟೆಯಾಗಿದ್ದರೂ ಇನ್ನೂ ಕನ್ನಡಿಯನ್ನೇ ಬಿಟ್ಟಿಲ್ಲ. ಭೂಪತಿ ಅತ್ತಿಗೆ ಬರುವ ಮುನ್ನ ಅವಳ ಸವತಿಯಾಗಿ ಕುಳಿತಿದೆ ಈ ಕನ್ನಡಿ

ಗೋಪಿ - ಕನ್ನಡಿ ಮುಂದೆ ಕುಳಿತು ಏನು ಮಾಡುತ್ತಿದ್ದಾನೆ

ಶೇಖರ - ತನ್ನ ಮುದ್ದು ಮುಖವನ್ನು ಮತ್ತೆ ಮತ್ತೆ ತಿದ್ದಿಕೊಳ್ಳುತ್ತಲಿದ್ದಾನೆ. ಕನ್ನಡಿಯಲ್ಲಿ ನೋಡುತ್ತ ಹುಚ್ಚನ ಹಾಗೆ ನಕ್ಕು ತನ್ನನ್ನು ತಾನೆ ಮೆಚ್ಚಿಕೊಳ್ಳುತ್ತಾನೆ. ಗೋಪಣ್ಣ ಹೆಂಡತಿ ಬರುವ ಮುನ್ನ ಎಲ್ಲ ಗಂಡಸರೂ ಹೀಗೆ ಹೆಂಡ ಕುಡಿದ ಕಪಿಯಂತೆ ಮಾಡುತ್ತಾರೇನು ? ಮತ್ತೆ ನೀನೂ ಮಾಡಿದ್ದಿಯೇನು ?

ಗೋಪಿ - ಹುಚ್ಚ ತಲೆಯಲ್ಲಾ ಹರಟಬೇಡ, ಹೋಗು. ನಾನೇ ಬಂದಿದ್ದೇನೆ ಅಂತ ಹೇಳು ರವಿಗೆ (ಶೇಖರ ಒಳಗೆ ಹೋಗುವನು) ಅಕ್ಕಾ ಅಂದ ಹಾಗೆ ರಾಮಣ್ಣ ಚಿಕ್ಕಪ್ಪ ಸೊಸೆಯನ್ನು ಕರೆಯಲಿಕ್ಕೆ ಹೋಗಿರಬಹುದೆಂದು ಕಾಣುತ್ತದೆ ಅಲ್ಲವೇ ?

ತಾರಕ್ಕ - ಅಹುದಪ್ಪ ಇವತ್ತು ಬೆಳಗಿನ ಐದು ಗಂಟೆಗೆ ಹೋಗಿದ್ದಾನೆ

ಗೋಪಿ - ಅಲ್ಲಕ್ಕಾ, ಈ ಮೊದಲಗಿತ್ತಿ ಮನೆ ತುಂಬಿಸಿಕೊಳ್ಳುವ ಸಂಭ್ರಮಕ್ಕೆ ಮತ್ತೆ ಮಾವನನ್ನು ಬಿಟ್ಟು ನೀನೊಬ್ಬಳೇ ಬಂದಿಯೇನು ? ಅಥವಾ ಅಳಿಯನನ್ನು ನಮ್ಮ ಚಿಕ್ಕಪ್ಪ ಕರಿಯಲಿಲ್ಲವೋ ?

ತಾರಕ್ಕ - ಕರೆದರಪ್ಪ... ಆದರೆ ವ್ಯಾಪಾರದ ಗದ್ದಲದಲ್ಲಿ ಅವರಿಗೆ ಸಮಯವೆಲ್ಲಿದೆ ಹೇಳು ? ಕಾರಣ ನನ್ನೊಬ್ಬಳನ್ನೇ ಕಳಿಸಿಕೊಟ್ಟರು

ಗೋಪಿ - ಏನೇ ಅನ್ನು ಅಕ್ಕಾ ಮಾವ ಮಾಡುತ್ತಲಿರುವ ಈ ಸಟ್ಟಾ ವ್ಯಾಪಾರ ಎಂದಿದ್ದರೂ ಒಳ್ಳೆಯದಲ್ಲ. ಒಂದಲ್ಲ ಒಂದು ದಿನ ದೈವ ಪ್ರತಿಕೂಲ ದಾರಿಯಲ್ಲಿ ಕಾಲಿಟ್ಟರೆ ಈ ಸಟ್ಟಾ ವ್ಯಾಪಾರ ಬಹು ನಷ್ಟಕ್ಕೆ ಕಾರಣವಾಗಿ ಕಷ್ಟದಲ್ಲಿ ನಿಮ್ಮ ಬಾಳು ಕನಿಷ್ಟವಾಗಿ ಹೋಗುತ್ತದೆ. ಆದ ನಷ್ಟವನ್ನು ತುಂಬಿಕೊಳ್ಳುವಷ್ಟು ಹಣದ ಮೊತ್ತ ಮಾವನಲ್ಲಿಲ್ಲ. ಕಾರಣ ಈ ವ್ಯಾಪಾರ ನಿಮ್ಮ ! ತುತ್ತಲ್ಲ

ತಾರಕ್ಕ - ಯಾರೆಷ್ಟು ಹೇಳಿದರೂ ಅವರದನ್ನು ಬಿಡಲಿಲ್ಲ. ನನಗಂತೂ ಜೀವವಲ್ಲಿ ಜೀವವಿಲ್ಲ. ಯಾವ ಗಳಿಗೆಯಲ್ಲಿ ಏನಾಗುವದೋ ಎಂದು ಮಂಗಳ ಸೂತ್ರವನ್ನು ಮುಟ್ಟಿಕೊಳ್ಳುವದೇ ಆಗಿದೆಯಪ್ಪ ನನ್ನ ಪಾಡು. ಗೋಪಿ ನೀನಾದರೂ ಒಂದು ಸಲ ನಮ್ಮೂರಿಗೆ ಬಂದು ನಿನ್ನ ಮಾವನಿಗೆ ಹೇಳಬಾರದೇನಪ್ಪ

ಗೋಪಿ - ಆಗಲಕ್ಕ ನೋಡೋಣ. ಅದಿರಲಿ ಅಕ್ಕಾ ಇಲ್ಲಿ ಇನ್ನೂ ಎಷ್ಟು ದಿನ ಇರುತ್ತೀರಿ

ತಾರಕ್ಕ - ನೋಡಬೇಕು ಇವತ್ತು ನಾಗವೇಣಿಯನ್ನು ಮನೆ ತುಂಬಿಸಿಕೊಂಡು ಅವಳಿಗೆ ಮನೆಯ ಎಲ್ಲ ಭಾರ ಹೊರಿಸಿ ತಿಳಿಸಿಕೊಟ್ಟು ಹೋಗಬೇಕಲ್ಲ

ಗೋಪಿ - ಅಕ್ಕಾ ಈ ಸಂಭ್ರಮವನ್ನು ಕಾಣಲು ಪಾಪ ಚಿಕ್ಕಮ್ಮ ಇರಬೇಕಾಗಿತ್ತು. ಮನೆಗೆ ಸೊಸೆ ಬರುವುದನ್ನು ಕಂಡು ಎಷ್ಟು ಸಂತೋಷ ಪಡುತ್ತಿತ್ತೋ ಆ ಜೀವ

ತಾರಕ್ಕ - ಅಹುದಪ್ಪ, ಪುಣ್ಯಜೀವಿಗಳು ಈ ಭೂಮಿಯಲ್ಲಿ ಬಹಳ ಕಾಲ ಬದುಕುವದು ಬಲು ವಿರಳ. ಸೊಸೆಯನ್ನು ಮನೆ ತುಂಬಿಸಿಕೊಳ್ಳುವಾಗ ಅವ್ವ ಪಡಬಹುದಾದಷ್ಟು ಆನಂದವನ್ನು ಇನ್ನಾರು ಪಟ್ಟಾರು. ಮುಖ್ಯ ಅಂತಹ ಅತ್ತೆಯೊಂದಿಗೆ ಬಾಳುವ ಯೋಗವು ಪಾಪ ಹೊಸದಾಗಿ ನಡೆಯಲು ಬರುವ ಈ ನಾಗವೇಣಿಗಿಲ್ಲ. ಇರಲಿ ರವಿ ಎಲ್ಲಿದ್ದಾನೆ ನೋಡು

ಶೇಖರ - (ರವಿಯೊಡನೆ ಬಂದು) ಬಂದ ನೋಡಪ್ಪ ಗೋಪಣ್ಣಾ. ನೀನು ಸಂಘದ ಪ್ರೆಸಿಡೆಂಟ್, ನಮ್ಮಣ್ಣ ಅಲ್ಲಿ ನಿನ್ನ ಸರ್ವೆಂಟ್, ನಾನಂತೂ ನಿಮ್ಮಿಬ್ಬರ ಕೈಯಲ್ಲಿ ಸ್ಟೂಡಂಟ್

ರವಿ - ಏ ಸುಮ್ಮನೇ ಇರೋ ಅವಿವೇಕಿ, ಎದೆ ಸೀಳಿದರೆ ಎರಡು ಅಕ್ಷರ ಇಲ್ಲ ಮಾತೆಷ್ಟು ಕಲಿತಿದ್ದಾನೆ ನೋಡು. ವಿದ್ಯಾಹೀನ ಪಶುವಿಗೆ ಸಮಾನ

ಶೇಖರ - ಅಹುದಪ್ಪ ಅಕ್ಷರ ಕಲಿತು ಅನ್ಯರಿಗೆ ಚಕ್ಕರ ಕೊಡುವದಕ್ಕಿಂತ ವಿದ್ಯಾಹೀನನಾದರೂ ಎಲ್ಲರ ಮನೆಯ ಸಕ್ಕರೆಯಂತೆ ಬಾಳ ಬಯಸುತ್ತೇನೆ

ರವಿ - ಇರಲಿ ಸಾಕು ಸುಮ್ಮನೇ ನಿಲ್ಲೋ ಬೃಹಸ್ಪತಿ. ನಾಲ್ಕು ವರ್ಷ ಕಲಿಸಿದರೂ ನಾಲ್ಕನೇ ಕ್ಲಾಸು ಮುಗಿಯಲಿಲ್ಲ. ಹೊತ್ತು ಮೂಡುವ ಮುನ್ನ ಹೊಲಕ್ಕೆ ಹೋಗಿ ಕತ್ತೆಯಂತೆ ದುಡಿಯುವದಷ್ಟು ಬಿಟ್ಟರೆ ಮತ್ತೇನಿದೆ ನಿನ್ನ ಹತ್ತಿರ ?

ಶೇಖರ - ಅದೇ ನನ್ನ ದುಡಿತದಿಂದಲೇ ಅಲ್ಲವೇನಪ್ಪ ನೀನಿಗ ಒಡೆತನ ನಡೆಸುತ್ತಿರುವದು. ಇಲ್ಲದಿದ್ದರೆ ಸಂಘದಲ್ಲಿ ನೌಕರಿ ಮಾಡಿ ನೀನು ತರುವ ಸಂಬಳದ ಹಣ ನಿನ್ನ ತಲೆಗೆ ಹಚ್ಚುವ ಆ ಹೊಲಸು ನಾರುವ ಎಣ್ಣೆಗೂ ಸಾಲುತ್ತಿರಲಿಲ್ಲ. ಅಣ್ಣಾ ಇಷ್ಟು ಕಟ್ಟುತನದಿಂದ ವೆಚ್ಚ ಮಾಡಿ ನಿನ್ನ ತಲೆಯಲ್ಲಿ ಬೆಳೆಸಿರುವಿಯಲ್ಲ ಈ ನಿನ್ನ ಕೂದಲು ಕತ್ತರಿಸಿ ಹಾಕಿದ ಬಳಿಕ ಹತ್ತು ನಯಾಪೈಸೆಗಾದರೂ ಮಾರ್ತೀಯೇನೋ ಇವನ್ನ (ಮ್ಯಾಜಿಕ್)

ರವಿ - ಏ ಮುಚ್ಚೋ ಬಾಯಿ, (ಹೊಡೆಯ ಹತ್ತುವನು)

ಗೋಪಿ - (ತಡೆದು) ರವೀ ಏನೋ ಇದು ಒಡಹುಟ್ಟಿದ ತಮ್ಮ ಸ್ವಲ್ಪ ದುಡುಕಿ ಹಾಸ್ಯ ಮಾಡಿದರೆ ತಡೆದುಕೊಳ್ಳಬೇಕಲ್ಲದೆ, ಹೊಡೆಯಲು ಕೈ ಎತ್ತುತ್ತಾರೇನೊ ? ಎಷ್ಟಾದರೂ ನೀನು ಹಿರಿಯವ

ರವಿ - ತಮ್ಮ ಅಲ್ಲ ಇವನು ನನ್ನ ಪಾಲಿನ ಕರ್ಮ

ಗೋಪಿ - ರವಿ, ಹಾಗೆಲ್ಲ ಶೇಖರನ ಮೇಲೆ ಕೋಪಿಸಿಕೊಳ್ಳಬೇಡ. ಒಂದೇ ರಕ್ತವನ್ನು ಪಾಲು ಮಾಡಿಕೊಂಡು ಈ ಭೂಮಿಗೆ ಬಂದವರು ನೀವು. ಅಂದ ಬಳಿಕ ನಿಮ್ಮಿಬ್ಬರ ಭಾವನೆ ಒಂದಾಗಿ ನಡೆದು ಪಾವನವಾಗಬೇಕು. ನಿಮಿಷಕ್ಕೊಮ್ಮೆ ತೂರಿಬರುವ ಈ ಸಿಡುಕುತನಕ್ಕೆ ನಿನ್ನ ಮನದಲ್ಲಿ ಆಶ್ರಯ ಕೊಡಬೇಡ. ಈ ಸ್ವಭಾವ ನಾಳೆ ನಿನಗೆ ಮಿಡುಕುವ ಪ್ರಸಂಗ ತಂದರೂ ತರಬಹುದು

ರವಿ - ಕಿರಿಯನಾದ ಇವನಿಗೆ ಹಿರಿಯನಾದ ನನ್ನ ಬಗ್ಗೆ ಸ್ವಲ್ಪಾದರೂ ಗೌರವ ಇರಬೇಡವೆ ? ಅಲ್ಲದೆ ಹೊಲದಲ್ಲಿ ದುಡಿಯುವ ಇವನ ಯೋಗ್ಯತೆಯೇನು ? ಕಲಿತು ನೌಕರಿ ಮಾಡುವ ನನ್ನ ಯೋಗ್ಯತೆಯೇನು ?

ಶೇಖರ - ಅಂದರೇನಣ್ಣ ನೌಕರಿ ದೊಡ್ಡದು, ಹೊಲಮನೆ ದುಡಿಮೆ ಸಣ್ಣದು. ಎಂದು ಹೇಳುವಿಯಾ ? ಅಳತೆ ಮಾಡಿಟ್ಟ ಅಂಕೆಯ ಸಂಬಳದ ಹಣಕ್ಕಾಗಿ ಅನ್ಯರ ಕೈಯಲ್ಲಿ ಅಳುಕಿನ ಕೂಸಿನಂತೆ ದುಡಿಯುವ ನಿನ್ನ ಯೋಗ್ಯತೆ ಯೇನು ಅಂಕೆ ಸಂಖಿಯನ್ನರಿಯದ ಅಸಂಖ್ಯಾತ ಜನತೆಗೆ ಅನ್ನ ಹಾಕಬಲ್ಲ ಭೂಮಿತಾಯಿಯ ಬಲಿಷ್ಠ ಮಗನಾದ ನನ್ನ ಯೋಗ್ಯತೆಯೆಲ್ಲಿ ! ಅಣ್ಣಾ ನನ್ನ ಕೈ ಕೆಸರಾದ್ದರಿಂದಲೇ ನಿನ್ನ ಬಾಯಿ ಮೊಸರು ಕಾಣುತ್ತದೆ

ರವಿ - ಶೇಖರ (ಹೊಡೆಯಲು ಹೋಗುವನು)

ಶೇಖರ - ಅಣ್ಣಾ, ನಾನು ದುಡುಕಿ ನಿನಗೆ ಹಾಸ್ಯ ಮಾಡಿದ್ದು ನಿನ್ನ ದೃಷ್ಟಿಯಲ್ಲಿ ತಪ್ಪಾಗಿದ್ದರೆ ಸಿಟ್ಟು ತೀರುವವರೆಗೆ ಒಡೆದುಬಿಡು ಮತ್ತೇನು

ರವಿ - ಮೊದಲು ಮಾತನಾಡುವದು ಆ ಬಳಿಕ ಕ್ಷಮೆ ಕೇಳುವದು, ಒಳ್ಳೇ ಸ್ವಭಾವ ನಿನ್ನದು (ನಗುವನು)

ಶೇಖರ - ಹೌದಣ್ಣ, ನನ್ನ ಸ್ವಬಾವವೇ ಹಾಗಿದೆ. ನಾನೇನು ಮಾಡಲಿ ಪ್ರತಿದಿನ ಒಂದು ಸಲವಾದರೂ ನಿನ್ನ ಸಿಟ್ಟಗೆಬ್ಬಿಸದೆ ನನಗೆ ಸಂತೋಷವೇ ಆಗುವದಿಲ್ಲ

ರವಿ - ಹುಚ್ಚ ಹೋಗು

ಶೇಖರ - ಆ ನಾನು ಹುಚ್ಚನೇ ಶೇಖರಣ್ಣ. ನಮ್ಮಿಬರಲ್ಲಿ ಯಾರು ಹುಚ್ಚರು ನೀನೇ ಹೇಳು. ಅಲ್ಲಾ ಇವತ್ತು ಅತ್ತಿಗೆ ಬರುತ್ತಾಳೆಂಬ ಕಾರಣದಿಂದ ಕನ್ನಡಿಬಿಟ್ಟು ಒಂದು ಕ್ಷಣ ಕೂಡಾ ಇತ್ತ ಸರಿದಿಲ್ಲ. ಇಸ್ತ್ರೀ ಬಟ್ಟೆಗಂತ ಅಗಸರ ಮನೆಗ ಹತ್ತು ಸಲ ಅಡ್ಡಾಡಿಬಿಟ್ಟೆ. ನನ್ನ ಅತ್ತಿಗೆಯನ್ನು ಈಗ ಮೆಚ್ಚಿಕೊಳ್ಳಬೇಕಾಗಿಲ್ಲ. ಅಣ್ಣಾ ನಿನ್ನ ಮದುವೆಗ ಮುನ್ನ ಮೆಚ್ಚಿ ಹಾಕಿಸಿಕೊಂಡಿದ್ದಾಳೆ ಮಂಗಲಾಕ್ಷತೆಯನ್ನು

ರವಿ - ಸಾಕು ಮುಚ್ಚೀಯೇನಪ ನಿನ್ನ ಬಾಯ್ನು

ಶೇಖರ - ನೀನು ಮುಚ್ಚು ಅಂದರ ಮುಚ್ಚತೇನಿ. ತೆರ ಅಂದರ ತೆರಿತೇನಿ. ಅಲ,

ಚಕ್ಕಡಿ ಬಂದಾಂಗಾಯ್ತು (ನೋಡಿ) ಹೌದು ಅತ್ತಿಗೆ ಬಂದೇಬಿಟ್ಟಳು. ಅಣ್ಣಾ ನನ್ನದೊಂದು ಮಾತು ಕೇಳ್ತಿಯೇನಪ ?

ರವಿ - ಹೇಳು ಏನಪ ಅದು

ಶೇಖರ - ಕೆಟ್ಟಗಣ್ಣಿನವರ ದೃಷ್ಟಿಗೆ ಕಲ್ಲುಕೂಡಾ ಸಿಡಿದು ಬೀಳುತ್ತದಂತೆ. ನಿನ್ನ ಕಣ್ಣು ಬಲು ಕೆಟ್ಟದ್ದು ಅಂತ ಅವ್ವ ಹೇಳ್ತಿದ್ದಿಲ್ಲವೇ ? ನೋಡು ನನ್ನ ಮುದ್ದು ಅತ್ತಿಗೆಯ ಮೇಲೆ ಈ ನಿನ್ನ ಹದ್ದಿನ ಕಣ್ಣು ನಟ್ಟಿ ಬಿಟ್ಟರೆ ಹಸಿರೆಲೆಯಂತಹ ಅತ್ತಿಗೆ ಒಣಗಿ ಹಣ್ಣೆಲೆ ಆದಾಳು. ಕಾರಣ ಅಕ್ಕ ಅವಳಿಗೆ ದೃಷ್ಟಿ ತಗೆಯಲಿ. ಆ ಮೇಲೆ ನೋಡುವಿಯಂತೆ. (ಒಳಗೆ ಹೋಗುವರು)

(ರಾಮಣ್ಣ, ಶ್ಯಾಮಣ್ಣ, ನಾಗವೇಣಿ, ಸುನಂದ, ತಾರಕ್ಕ, ಗಾಡಿಯವ, ಗೋಪಣ್ಣ ಬರುವರು) (ಆರತಿ ಮಾಡುವರು)

॥ ಸುವಾಸಿನಿಯರ ಪದ ॥

ಮೊದಲ ಮುತ್ತೈದೆಯರು । ಮಂಗಲವತಿಯ । ಮನೆಯ
ತುಂಬಿಸಿಕೊಳ್ಳಿ । ಬೆಳಗಿ ಆರುತಿಯ ॥ ಪಿತನ ಮನೆಯನು
ತೊರೆದು । ಸ್ಥಿರವೆಂದು ನಂಬಿರುವ । ಪತಿಯ ಗೃಹದಲಿ ।
ತನ್ನಗತಿಯ ಕಾಣಲು ಬರುವ । ನವಜೀವಕಾಧಾರ
ತಾನಾಗುತಿರುವ ॥ ೧ ॥

ಸತಿಯ ಮಲ್ಲಿಗೆಬಳ್ಳಿ । ಪತಿಯ ಮಾಮರವು
ಒಲುವೆ ಹರಡ್ಡಿದರಲ್ಲಿ । ಬಾಳಿನ ಚೆಲವು । ಮುಂದೆ
ಜನಿಸುವ ಕುವರ । ಆ ಬನದ್ಹೂವು ॥ ೨ ॥

ರಾಮಣ್ಣ - ಮಗು ನಾಗಮ್ಮ ಪ್ರಥಮ ಸಲ ಪತಿಗೃಹ ಪ್ರವೇಶ ಮಾಡಲಿರುವ ನೀನಿಗ ಪಂಚ ಮಹಾಪತಿವ್ರತೆಯರನ್ನು ಸ್ಮರಿಸಿ ತಲೆಬಾಗಿಲ ಮೇಲಿಟ್ಟ ಅಕ್ಕಿಯ ಬಟ್ಟಲನ್ನು ನಿನ್ನ ಬಲಗಾಲಿನಿಂದ ಚಿಮ್ಮಿ ಒಳಗೆ ಬಾರಮ್ಮ

ನಾಗಮ್ಮ - ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿಯರೇ ನಿಮ್ಮ ಪರಮಪಾವನ ಚರಣ ಸ್ಮರಿಸಿ ಪತಿಗೃಹ ಪ್ರವೇಶಿಸಲಿರುವ ನನಗೆ ಅಖಂಡ ಸೌಭಾಗ್ಯವನ್ನು ಕರುಣಿಸಿ ಸಂಪದವ ನೀಡಿರಮ್ಮ (ಅಕ್ಕಿಯ ಬಟ್ಟಲನ್ನು ಒದೆದು ಸುನಂದೆಯೊಡನೆ ಒಳಗೆ ಬರುವಳು. ನಂತರ ಗಾಡಿಯವನು ಸಾಮಾನು ತಂದಿಡುವನು.)

ತಾರಕ್ಕ - ನಾಗಮ್ಮ ಒಳಗೆ ನಡೆಯಮ್ಮ ದೇವರಿಗೆ ನಮಸ್ಕಾರ ಮಾಡುವಿಯಂತೆ (ನಮಸ್ಕಾರ ಮಾಡಿ ಬರುವಳು) (ತಾರಕ್ಕ ಒಳಗೆ ಉಳಿಯುತ್ತಾಳೆ)

ರಾಮಣ್ಣ - ಮಗೂ ಶೇಖರ, ಇಗೋ ಈ ಹಣವನ್ನು ಗಾಡಿಯವನಿಗ ಭಕ್ಷೀಸ ಕೊಟ್ಟು

ನಿನ್ನಣ್ಣನ ಪತ್ನಿ ನಿನ್ನ ಅತ್ತಿಗೆಯ ಕಾಲಿಗೆ ನಮಸ್ಕಾರ ಮಾಡು. (ಶೇಖರ ಹಣ ತಕ್ಕೊಂಡು ನಾಗವೇಣಿಗೆ ಕೊಟ್ಟು ಗಾಡಿಯವನಿಗೆ ನಮಸ್ಕರಿಸುವನು)

ಗೋಪಿ - ಏನಪಾ ಶೇಖರ. ಹೆತ್ತಾಯಿಗೆ ಸರಿ ಎನಿಸುವ ನಿನ್ನತ್ತಿಗೆಗೆ ನಮಸ್ಕರಿಸಲು ಹೇಳಿದರೆ ಭಕ್ಷೀಸ ಹಣ ಅವಳಿಗಿತ್ತು ಗಾಡಿಯವನ ಕಾಲಿಗೆ ನಮಸ್ಕರಿಸಿದಿಯಲ್ಲ

ರವಿ - ಗೋಪಿ ಇವನಿಗೆ ರೀತಿಯೂ ಇಲ್ಲ ನೀತಿಯೂ ಇಲ್ಲ. ಲೇ ಶೇಖರ ನಿನಗೆ ಸ್ವಲ್ಪಾದರೂ ತಿಳುವಳಿಕೆಯಿರಬಾರದೇನೋ. ಅವಿವೇಕಿತನದಿಂದ ಅಸಹ್ಯತನ ಮಾಡಿ, ಬಂದವರೆಲ್ಲ ನಿನ್ನ ಕಂಡು ನಗುವಂತೆ ಮಾಡಿಬಿಟ್ಟೆ. ಅಪ್ಪ ಹೇಳಿದ್ದೇನು, ನೀನು ಮಾಡಿದ್ದೇನು ಇಲ್ಲಿ ನೋಡು (ನಾಗಮ್ಮನಿಂದ ಹಣ ತಕ್ಕೊಂಡು) ಹಣ ಕೊಡಬೇಕಾದದ್ದು ಇಲ್ಲಿ ಇವನಿಗೆ (ಗಾಡಿಯವನಿಗ ಕೊಡುವನು) ಇನ್ನು ನಮಸ್ಕರಿಸಬೇಕಾದದ್ದು ಇವಳಿಗೆ ಹೀಗೆ (ನಮಸ್ಕರಿಸುವನು. ಈಗ ಉಳಿದವರು ನಗುವರು) ಏಕೆ ಏನಾಯಿತೀಗ ನಗಲಿಕ್ಕೆ

ಸುನಂದ - ಮಾಮಾ ಹೊ...... (ನಗುವಳು)

ಗೋಪಿ - ಅಲ್ಲೋ ರವಿ. ನಿನ್ನ ತಮ್ಮ ಮಾಡಿದ ತಪ್ಪನ್ನು ಸರಿಪಡಿಸಲು ಹೋಗಿ ನೀನೆಂತಹ ತಪ್ಪು ಮಾಡಿದಿಯಲ್ಲ. ಹುಚ್ಚಾ ಹೆಂಡತಿಯ ಕಾಲಿಗೆ ನಮಸ್ಕಾರ ಮಾಡಿದಿಯಲ್ಲೋ

ರವಿ - ಏನು ನಾನು ಇವಳಿಗೆ ನಮಸ್ಕಾರ ಮಾಡಿದೆನೇ ?

ಸುನಂದ - ಇದೀಗ ಮಾಡಲಿಲ್ಲವೇನು ಮಾಮಾ ? ಮತ್ತೆ ಅದೇನು ಆಶೀರ್ವಾದ ಅಂತಾ ಭಾವಿಸಿದೆ ಏನು ?

ತಾರಕ್ಕ - ಕೊನೆಗೂ ಬುದ್ಧಿ ಬರಲಿಲ್ಲವಪ್ಪ ನಿಮ್ಮಿಬ್ಬರಿಗೂ, ಇಷ್ಟು ಬೆಳೆದರೂ. ನಾಗಮ್ಮಾ ಒಳಗ ನಡೆಯಮ್ಮ ದೇವರಿಗೆ ನಮಸ್ಕಾರ ಮಾಡುವಿಯಂತೆ (ನಾಗು, ಸುನಂದ ಒಳಗೆ ಹೋಗುವರು)

ಗೋಪಿ - ಅಕ್ಕಾ ಇವರಿಬ್ಬರ ದೇಹಗಳು ಬೆಳೆದವೇ ವಿನಃ ತಲೆ ಬೆಳೆಯಲಿಲ್ಲ. ಆದರೂ ಇಂದಿನ ನಡೆ ಮುಂದಿನ ಭವಿಷ್ಯತ್ತನ್ನು ಸೂಚಿಸಬಾರದು ಅಂತ

ತಾರಕ್ಕ - ಅಂದರೆ ?

ಗೋಪಿ - ಅಂದರೆ ಮದಲಗಿತ್ತಿಯಾಗಿ ಮನೆ ತುಂಬಿದ ನಾಗಮ್ಮನಿಗೆ ಅಂಜಿ ನಡೆಯಬೇಕಾದದ್ದು ಮೈದುನನಾದ ಶೇಖರನ ಧರ್ಮ. ಆದರೆ ಅವನು ಅಂಜುವದಿಲ್ಲ. ಇನ್ನು ಯಾರು ನಾಗಮ್ಮಳನ್ನು ಅಂಜಿಸಿಕೊಂಡು ಆಳಬೇಕಾಗಿದೆಯೋ ? ಅವಳ ಗಂಡನಾದ ನಮ್ಮ ರವಿ, ಅವಳಿಗೇನೇ ಮುಂದೆ ಅಂಜಿ ಆಳುತ್ತಾನೆ. ಮುಂಬರುವ ನಾಟಕದ ಮುನ್ನುಡಿಗೆ ಇಂದಿನ ನಡೆ ಕನ್ನಡಿಯಾದರೆ ಕಷ್ಟ (ನಾಗು, ಸುನಂದ ಬರುವರು)

(ನಾಗು ಮಾವನಿಗೆ ನಮಸ್ಕರಿಸುವಳು)

ರಾಮಣ್ಣ - ಇರಲಿ ಇರಲಿ ! ಮೊದಲು ನಿನ್ನ ಅತ್ತೆಯ ಭಾವಚಿತ್ರಕ್ಕೆ ನಮಸ್ಕಾರ ಮಾಡಮ್ಮ. (ನಾಗಮ್ಮ ನಮಸ್ಕರಿಸಿ ಬರುವಳು) ಮಗು, ನಾಗಮ್ಮ, ನನ್ನ ಮನೆಗೆ ಸೊಸೆಯಾಗಿ ಬಂದ ಮೊದಲ ದಿನವೇ ನಿನಗೊಂದು ಮಾತು ಹೇಳಬಯಸುವೆ

ನಾಗಮ್ಮ - ಹೇಳಿ ಮಾಮಾ !

ರಾಮಣ್ಣ - ನನ್ನ ಮಕ್ಕಳಿಬ್ಬರೂ ದುಡಿಯುವದರಲ್ಲಿ ಮುಂದಾಗಿರುವಂತೆ ಇನ್ನುಳಿದ ವ್ಯವಹಾರ ಕುಶಲತೆಯಲ್ಲಿ ಅಷ್ಟೇ ಹಿಂದಾಗಿದ್ದಾರೆ. ವ್ಯವಹಾರ ನಿಪುಣೆಯಾದ ನಿನ್ನಲ್ಲಿ ಮನೆ ತೂಗಿಸಿಕೊಂಡು ಹೋಗುವ ಯೋಗ್ಯತೆ ಇದೆ ಎಂಬುದನ್ನು ನಾನು ಬಲ್ಲೆ. ಅದು ನಿನ್ನ ತಂದೆಯಿಂದ ನಿನಗೆ ದೈವ ದತ್ತವಾಗಿ ಬಂದ ವರ ನನ್ನವ್ವ. ನಿನ್ನ ಗಂಡ ಸಂಘದಲ್ಲಿ ದುಡಿದು ಸಂಬಳ ತಂದು ನಿನ್ನ ಕೈಯಲ್ಲಿ ಕೊಡುತ್ತಾನೆ. ನಿನ್ನ ಮೈದುನ, ಭೂಮಿಯಲ್ಲಿ ದುಡಿದು ಧಾನ್ಯ ತಂದು ಮನೆಗೆ ಹಾಕುತ್ತಾನೆ. ಇನ್ನು ಮುಂದೆ ಮನೆ ನಡೆಸಿಕೊಂಡು ಹೋಗಬೇಕಾದವಳು ನೀನು

ನಾಗಮ್ಮ - ಮಾಮಾ, ಹಿರಿಯರಾದ ನೀವಿರುವಾಗ ಈ ಭಾರ ನನಗೇಕೆ ?

ರಾಮಣ್ಣ - ನಾನು ನಾನು ಎನ್ನುವ ಈ ದೇಹ ಇನ್ನೆಷ್ಟು ಕಾಲ ಬದುಕೀತಮ್ಮ. ಈ ಭೂಮಿಯ ಮೇಲೆ. ಇಂದೋ ನಾಳೆಯೋ ಉದುರಿ ಬೀಳುವ ಹೆಣ್ಣಲೆ ನಾನು. ಒಂದು ಕಾಲು ಮನೆಯಲ್ಲಿ ಇನ್ನೊಂದು ಸ್ಮಶಾನದಲ್ಲಿ. ಈ ಮನೆ ಸೊಸೆ ನೀನು. ಇನ್ನು ಮೇಲೆ ವ್ಯವಹಾರದ ರೀತಿಯನ್ನರಿಯದ ನಿನ್ನ ಗಂಡನ ಕೈಯಲ್ಲಿಯಾಗಲಿ ಇಲ್ಲವೆ ನಿನ್ನ ಮೈದುನನ ಕೈಯಲ್ಲಿಯಾಗಲಿ ಮನೆಯ ಹಣಕಾಸಿನ ಅಧಿಕಾರ ಉಳಿದರೆ ಮನೆ ಹಾಳಾಗಿ ಹೋಗುತ್ತದೆ. ಅದೇ ನಿನ್ನ ಕೈಯಲ್ಲಿಟ್ಟುಕೊಂಡು ಸಂಸಾರವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗಬೇಕಮ್ಮ

ನಾಗಮ್ಮ - ಇದೇನು ಮಾಮಾ ಪತಿಯು ಪರದೈವ, ಮಾವ ಹಿರಿದೈವ-ಎಂದು ಹೇಳಿರುವಾಗ ಈ ಭಾರ ನನಗೇಕೆ ಹೊರಿಸುತ್ತೀರಿ. ನಿಮ್ಮೆಲ್ಲರ ಸೇವೆ ಮಾಡಲು ನಿಮ್ಮ ಮನೆಗೆ ಬಂದ ದಾಸಿಯು ನಾನು. ಅಂದ ಬಳಿಕ ಎಂಜಲ ಎಲೆ ಎತ್ತುವಳಿಗೆ ಉಂಡವರ ಲೆಕ್ಕವೇಕೆ ಮಾಮಾ

ರಾಮಣ್ಣ - ನನಗೆ ಗೊತ್ತಮ್ಮ ನಿನ್ನ ಬಾಯಿಂದ ಇಂಥ ಮಾತುಗಳೇ ಬರುತ್ತವೆಂಬುದು. ಅದು ಸರಿ. ಆದರೆ, ಕಾಂಚನ ಸಂಚಲಿತವಾದ ಈ ಜಗತ್ತಿನಲ್ಲಿ ಅದಿಲ್ಲದ ಬದುಕು ಬರಡಾಗುತ್ತದೆ. ಈ ನಿನ್ನ ಗಂಡ ಹಾಗೂ ಮೈದುನರಲ್ಲಿ ಪ್ರಪಂಚ ಭಾವಿಸುವ ಯಾವ ದೋಷವೂ ಇಲ್ಲ. ನನ್ನ ಮಗನ ಸಮಭಾಗಿನಿಯಾಗಿ

ಬಂದ ನೀನು ಕೊರತೆಯಾದ ಆ ಭಾಗವನ್ನು ತುಂಬಿ ನಿನ್ನತ್ತೆ ಕಟ್ಟಿದ ಈ ಮನೆಗೆ ಮಂಗಲದ ಬಳ್ಳಿಯಾಗಿ ಹಬ್ಬು. ಹಾಗೂ ನಿನ್ನತ್ತೆ ಇಹದಿಂದ ಪರಕ್ಕೆ ಹೊರಟಾಗ ನನ್ನ ಕೈಗಿತ್ತು ಹೋದ ಈ ಮನೆಯ ಸರ್ವಾಧಿಕಾರ ಸೂತ್ರವಾದ ಈ ಬೀಗದ ಕೈ ನಿನ್ನ ವಶಕ್ಕೆ ತೆಗೆದುಕೋ (ಕೊಡಲು ಹೋಗುವನು)

ಶ್ಯಾಮಣ್ಣ - (ತಡೆದು) ರಾಮಣ್ಣನವರೆ ತಡೆಯಿರಿ, ಹಾಗೆಲ್ಲ ದುಡುಕಬಾರದು. ಹೆಣ್ಣುಮಕ್ಕಳಿಗೆ ಇನ್ನಾವ ವಿಷಯದಲ್ಲಿ ಸಲುಗೆ ಕೊಟ್ಟರೂ ಈ ಹಣಕಾಸಿನ ವಿಷಯದಲ್ಲಿ ಮಾತ್ರ ಕೊಡಬಾರದು

ರಾಮಣ್ಣ - ಅಂದರೆ ಮನೆಯ ಬದುಕಿನ ಅಧಿಕಾರ ಮನೆಯ ಸೊಸೆಯ ಕೈಗೆ ಕೊಡದೆ ಬೇರೆಯವರ ಕೈಗೆ ಕೊಡಬೇಕೇ ?

ಶ್ಯಾಮಣ್ಣ - ಮನೆಯ ಒಡೆತನವನ್ನು ಹಡೆದ ಮಕ್ಕಳ ಕೈಗೆ ಕೊಡದೆ, ನಡೆಯಲು ಬಂದ ಸೊಸೆಗೆ ಒಪ್ಪಿಸುವದು ಯಾವ ಧರ್ಮ? ಬೇಡ ನಾಗು ತೆಗೆದುಕೊಳ್ಳಬೇಡ ಮಕ್ಕಳ ಮೇಲಿಲ್ಲದ ವಿಶ್ವಾಸ ಸೊಸೆಯ ಮೇಲೆ ಹುಟ್ಟಿದ್ದು ಕಂಡು ನಾಳೆ ಹೊಟ್ಟೆಯ ಮಕ್ಕಳಲ್ಲಿ ಅಸೂಯೆ ಹುಟ್ಟಿದರೆ.

ಶೇಖರ - ಛೇ ಹಾಗೆ ಭಾವಿಸಬೇಡಿ ಮಾಮಾ, ನನಗಂತೂ ರೂಪಾಯಿಗೆ ಆಣೆಗಳೂ ಸರಿಯಾಗಿ ತಿಳಿಯವು. ಇನ್ನು ಅಣ್ಣನು ಲೆಕ್ಕ ತಿಳಿದರೂ ಮನೆಯ ಆಡಳಿತ ಅರಿತವನಲ್ಲ. ಒಟ್ಟಾರೆ ನಾವಿಬ್ಬರೂ ಹೊರಗೆ ದುಡಿಯುವದನ್ನು ಕಲಿತೆವೇ ಹೊರತು ಮನೆ ನಡೆಸುವದನ್ನು ಕಲಿಯಲಿಲ್ಲ. ಅಂದ ಬಳಿಕ ಅಸೂಯೆ ಪಡುವ ಕಾರಣವಿಲ್ಲ

ರವಿ - ಅಹುದು ಮಾಮಾ, ಇಷ್ಟು ದಿನ ಈ ಮನೆಯ ವ್ಯವಹಾರ ಅವ್ವ ನಡೆಸಿದಳು ಇನ್ನು ಮೇಲೆ ಇವಳು ನಡೆಸಲಿ

ರಾಮಣ್ಣ - ಆಯಿತಲ್ಲಮ್ಮ ಅವರು ಕೂಡಾ ನಿನ್ನ ಒಡೆತನವನ್ನೇ ಒಪ್ಪಿದರು. ಅಂದ ಬಳಿಕ ಇನ್ನೇನು ಅನುಮಾನ, ಮನೆಯ ಬದುಕಿನ ಮೇಲೆ ಮೋಹವುಳ್ಳವಳಾಗಿ ನಿನ್ನ ಮನೆ ನೀ ನಡೆಸಿಕೊಂಡು ಹೋಗಮ್ಮ, ತೆಗೆದುಕೋ ಈ ಹಣದ ಪೆಟ್ಟಿಗೆಯ ಬೀಗದಕೈ. (ಬೀಗದಕೈ ಕೊಡುವನು. ನಾಗಮ್ಮ ತೆಗೆದುಕೊಳ್ಳುವಳು.)

ಶ್ಯಾಮಣ್ಣ - (ತಡೆದು) ಬೇಡ ನಾಗು

ನಾಗಮ್ಮ - ಏಕಪ್ಪ

ಶ್ಯಾಮಣ್ಣ - ಇದು ನಿನ್ನ ಯೋಗ್ಯತೆಗೆ ಮೀರಿದ ಭಾರ

ನಾಗಮ್ಮ - ನನ್ನ ಮನೆಯ ಭಾರ ನಾನು ಹೊರದೆ ಇನ್ನಾರು ಹೊರಬೇಕಪ್ಪ, ಮಾವನವರ ಮಾತನ್ನು ಮೀರಿ ನಡೆಯುವ ಅಧಿಕಾರ ನನಗಿಲ್ಲ. ಅವರ ಆಜ್ಞೆ ನನಗೆ ಶಿರಸಾಮಾನ್ಯ,

ಶ್ಯಾಮಣ್ಣ - ನಿನಗಿರುವಷ್ಟು ಧೈರ್ಯ ನನಗಿಲ್ಲ. ನೋಡು ತಾಮ್ರದ ದುಡ್ಡು ತಾಯಿ ಮಕ್ಕಳಲ್ಲಿ ಕೂಡಾ ಕೆಡಕು ತರುತ್ತದಂತೆ. ಅಂದಬಳಿಕ ಹೊಸದಾಗಿ ನಡೆಯಲು ಬಂದ ನಿನ್ನ ಪಾಡೇನು ! ಅವರೆಷ್ಟು ವಿಶ್ವಾಸದಿಂದ ಅಧಿಕಾರ ನಿನ್ನ ಕೈಗಿಟ್ಟರೋ ಮುಂದೆ ಅಷ್ಟೇ ಅಭಿಮಾನದಿಂದ ದುಡಿದು ಅವರ ಮನಸ್ಸಿಗೆ ಹರ್ಷ ನೀಡಬೇಕು. ಕೆಡಕು ಮಾಡಿದಿಯಾದರೆ ನಿನಗೆ ಕೇಡು ಬಿಟ್ಟಿದ್ದಲ್ಲ

ನಾಗಮ್ಮ - ಆಗಲಪ್ಪ ಪ್ರಯತ್ನಿಸುತ್ತೇನೆ

ತಾರಕ್ಕ - ನಡೆಯಿರಿ ಒಳಗೆ ಎಲ್ಲರೂ, ಉಪಹಾರ ಸಿದ್ಧವಾಗಿದೆ. (ಎಲ್ಲರೂ ಒಳಗೆ ಹೋಗಿ ನಾಗವೇಣಿ, ಸುನಂದ ಹೊರಗೆ ಉಳಿಯುವರು)

ಸುನಂದ - ಇದೇನೇ ಅಕ್ಕ ಗಂಡನ ಮನಗೆ ಬಂದ ಕ್ಷಣದಲ್ಲಿ ಈ ಮನೆಯ ಸರ್ವಾಧಿಕಾರ ನಿನ್ನ ಸ್ವಾಧೀನವಾಯಿತಲ್ಲ. ಇದೊಳ್ಳೇ ವಿಚಿತ್ರ

ನಾಗಮ್ಮ - ಇದರಲ್ಲಿ ವಿಚಿತ್ರವಿದೆಯೇ ! ಮನೆ ನಡೆಸುವಷ್ಟು ಬುದ್ಧಿ ಅವರಿಗಿಲ್ಲವೆಂದೇ ಮಾವ ನನಗೊಪ್ಪಿಸಿರುವದು. ನೋಡಿಯಲ್ಲ ಆಗಲೇ ನಡೆದ ಘಟನೆಯನ್ನು

ಸುನಂದ - ಅಹುದಕ್ಕ ನಿನ್ನ ಮೈದುನ ನಿನಗೆ ನಮಸ್ಕರಿಸುವುದನ್ನು ಮರೆತು ಆ ಗಾಡಿಯವನ ಕಾಲಿಗೆ ಬೀಳುವದೇ ಅಕ್ಕ. ನಿನ್ನ ಗಂಡ ನಿನ್ನ ಕಾಲಿಗೆ ಬೀಳುವದೇ ? ಅಕ್ಕ ಇಂತಹ ಹುಚ್ಚ ಗಂಡನ ಜತೆ ಹೇಗೆ ಬಾಳುವೆ ಮಾಡುವಿಯಮ್ಮ

ನಾಗಮ್ಮ - ಗಂಡ ಹುಚ್ಚನಿದ್ದರೇನಾಯಿತೇ ಮೆಚ್ಚಿಕೆಯಿಂದ ಅಚ್ಚು ಕಟ್ಟಾಗಿ ಬಾಳಬಹುದು. ಸುನಂದಾ ನಾನು ಎಂತಹ ಗಂಡನ ಮನೆ ಬಯಸುತ್ತಿದ್ದನೋ ದೇವರು ನನಗೆ ಅಂತಹ ಬಗೆತನವನ್ನೇ ದಯಪಾಲಿಸಿದ. ಗಂಡನ ಬುದ್ಧಿ ಮಂದವಾಗಿದ್ದರೆ ಹೆಂಡತಿಗೆ ಕಟ್ಟಳೆಯ ನಿರ್ಬಂಧ ಕಡಿಮೆಯಾಗುತ್ತದೆ. ತಂಗೀ ಇನ್ನು ಮೇಲೆ ಈ ಮನೆಯ ಸರ್ವಾಧಿಕಾರದ ಸೂತ್ರ ನನ್ನ ಕೈಯಲ್ಲಿ (ಬೀಗದಕೈ ತೋರಿಸುವಳು)

ಸುನಂದ - ಅದೇ ನನಗೆ ವಿಚಿತ್ರವೆನಿಸುತ್ತದೆ. ಹೊಸದಾಗಿ ನಡೆಯಲು ಬಂದ ನಿನ್ನ ಕೈಗೆ ಬೀಗದ ಕೈಯಿತ್ತರಲ್ಲ ನಿಮ್ಮ ಮಾವ.... ಇಲ್ಲಿಯವರೆಗೂ ಇವರ ಮನೆಯಲ್ಲಿ.

ನಾಗಮ್ಮ - ನಮ್ಮತ್ತೆಯದೇ ಸರ್ವಾಧಿಕಾರವಿತ್ತು, ಹೊತ್ತಿಗೆ ಸರಿಯಾಗಿ ದುಡಿಸಿ ಹೊಟ್ಟೆಗೆ ಅನ್ನವಿತ್ತರೆ ಸಾಕು. ಮತ್ತೇನೂ ಬೇಕಿಲ್ಲ, ಈ ಮನೆಯ ಗಂಡಸರಿಗೆ. ಹಣಕಾಸಿನ ವಿಚಾರವಂತೂ ಬೇಡವೇಬೇಡ ಇವರಿಗೆ. ಇದನ್ನೆಲ್ಲ ಅರಿತುಕೊಂಡ ಅತ್ತೆ ಈ ಮನೆಯ ಸರ್ವಾಧಿಕಾರ ತನ್ನ ವಶಕ್ಕೆ ತೆಗೆದುಕೊಂಡು ಇಷ್ಟೆಲ್ಲ ಸಂಪತ್ತು ಸಂಗ್ರಹಿಸಿದಳು. ಅವಳ ಪುಣ್ಯ ಇವರನ್ನು ಕಾಯುತ್ತದೆ. ಈಗ ಅವಳು ಕಾಲವಾದ್ದರಿಂದ ಇವರ ಕಣ್ಣಿಗೆ ಕತ್ತಲು ತುಂಬಿದೆ. ಅಂತೇ ಮಾವಾ ಆ ಬೆಳಕನ್ನು ನನ್ನ ಮೂಲಕ ಬಯಸಿದರು

ಸುನಂದ - ಅವರಿತ್ತ ಅಧಿಕಾರ ಸ್ವೀಕರಿಸಿದ ನಿನಗೆ ಈ ಮನೆ ತೂಗಿಸಿಕೊಂಡು ಹೋಗುವ ಯೋಗ್ಯತೆ ಇದೆಯೇ ?

ನಾಗಮ್ಮ - ಇರದಿದ್ದರೆ ನಾನು ಈ ಬೀಗದ ಕೈಯನ್ನು ಅಪ್ಪ ಬೇಡವೆಂದರೂ ಸ್ವೀಕರಿಸುತ್ತಿದ್ದೆನೇ ? ನೋಡು ಸುನಂದಾ ಈ ಮನೆ ಕಟ್ಟಿದವಳು ನಮ್ಮ ಅತ್ತೆಯಾದರೆ ಇದರ ಮೇಲೆ ಮರ್ಯಾದೆಯ ಕಳಸವಿಟ್ಟವಳು ನಾನಾಗುತ್ತೇನೆ

ಸುನಂದ - ನೋಡಕ್ಕ ನಿನ್ನದು ಮೊದಲೇ ದುಡುಕು ಸ್ವಭಾವ. ನಡೆಯಲು ಬಂದ ಸೊಸೆ ನೀನು. ಅಡಿಭದ್ರ ನೋಡಿ ಇಡೋದು ಒಳ್ಳೇದು. ಅತ್ತೆ ನಡೆಸಿದ ಅಧಿಕಾರ ಸೂತ್ರ ನಿನ್ನ ಬುದ್ಧಿಗೆ ಅದರ ಗಾತ್ರ ಹಿರಿದೆಂದು ಕಂಡರೆ, ಈಗಲೂ ಅದನ್ನು ಹಿಂದಿರುಗಿಸುವದೇ ನಿನಗೆ ಹೆಚ್ಚು ಹಿತಕಾರಿ. ಏಕೆಂದರೆ ಹುಲಿ ಸರಸವಾಡಿ ಕಾಡಿನಲ್ಲಿ ಹುಲ್ಲೆ ಆಟವಾಡುವದು ಅಪಾಯಕಾರಿ (ತಾರಕ್ಕ ಬರುವಳು)

ತಾರಕ್ಕ - ಏನು ಮಾಡುತ್ತಿದ್ದಿರಮ್ಮ ಒಳಗೆ ಬರಲಿಲ್ಲ ?

ನಾಗಮ್ಮ - ಏನೂ ಇಲ್ಲವಮ್ಮ ಸುಮ್ಮನೇ ಮಾತನಾಡುತ್ತಲಿದ್ದೆವು. ಗುಂಡಸರ ಉಪಹಾರ

ತಾರಕ್ಕ - ಆಯಿತು ಮುಗಿಯಲು ಬಂದಿದೆ. ಈ ಮನಗೆ ಹಿರಿಯ ಸೊಸೆಯಾಗಿ ಬಂದ ನೀನು ಈ ಮನೆ ತೂಗಿಸಿಕೊಂಡು ಹೋಗಬೇಕಮ್ಮ. ಇನ್ನೊಂದು ಮಾತು, ನನ್ನ ತಮ್ಮಂದಿರ ಮನಸ್ಸು ಮಕ್ಕಳ ಮನಸ್ಸಿನಂತೆ ಬಲು ಕೋಮಲ, ಕಾರಣ ಅವರ ಆಸೆ ಅಭಿಲಾಷೆಗಳಿಗೆ ಅನುಸರಿಸಿ ನಡೆದರೆ ನಿನ್ನ ಬಾಳು ನಂದಗೋಕುಲವಾಗುತ್ತದೆ

ನಾಗಮ್ಮ - ಯಾಕೆ ಈಗ ನನ್ನಿಂದ ಏನಾದರೂ ತಪ್ಪಾಯಿತೇ ತಾರಕ್ಕ ?

ತಾರಕ್ಕ - ತಪ್ಪೇನೂ ಆಗಿಲ್ಲವಮ್ಮ ... ಆದರೆ..

ಸುನಂದಾ - ಹೇಳಿ ತಾರಕ್ಕ ಸಂಕೋಚ ಪಟ್ಟುಕೊಳ್ಳಬೇಡಿ. ಭಾವನವರ ಸ್ವಭಾವ ಹೊಸದಾಗಿ ನಡೆಯಲು ಬಂದ ನಮ್ಮಕ್ಕನಿಗೆ ತಿಳಿಯೋದೇ ಒಳ್ಳೇದು ಹೇಳಿ

ತಾರಕ್ಕ - ನೋಡಮ್ಮ ನೀವು ಮನೆಯಲ್ಲಿ ಬಂದ ತಕ್ಷಣ ಅವಸರದಿಂದ ನನ್ನ ತಮ್ಮಂದಿರು ನಿಮ್ಮೊಂದಿಗೆ ತಪ್ಪಿ ನಡೆದುಕೊಂಡರು. ಅದನ್ನು ಕಂಡು ನೀವಿಬ್ಬರೂ ನಕ್ಕದ್ದು ಅವರಿಗೆ ಅವಮಾನವಾದ ಹಾಗಾಗಿದೆ. ಮುಖ ಸಣ್ಣದು ಮಾಡಿಕೊಂಡಿದ್ದಾರೆ

ನಾಗಮ್ಮ - ಆ ರೀತಿ ನಡೆದು ಅಪಹಾಸ್ಯಕ್ಕೆ ಆಸ್ಪದಕೊಟ್ಟು ತಾವು ಅಪಮಾನಕ್ಕೆ ಗುರಿಯಾದರೆ ಪಾಪ ನಕ್ಕವರ ಮೇಲೆ ಕೋಪಿಸಿಕೊಳ್ಳುವದು ಯಾವ ನ್ಯಾಯ ತಾರಕ್ಕ. ಕಂಡವರ ಸಮ್ಮುಖದಲ್ಲಿ ಗಂಡುಂದಿರಾದ ತಾವು ಹೆಂಡತಿಯ ಕಾಲಿಗೆ ನಮಸ್ಕರಿಸಬೇಕೆ ?

ತಾರಕ್ಕ - ಅರಿಯದೇ ಅವಸರದಲ್ಲಿ ನಮಸ್ಕರಿಸಿದರೆ ನಕ್ಕು ಮನ ನೋಯಿಸುವುದು

ಕಂಡವರ ಸಮ್ಮುಖದಲ್ಲಿ ಇದು ಗಂಡಸಿಗೆ ಅನುಮಾನವಲ್ಲವೇ ?

ನಾಗಮ್ಮ - ನಾನು ನಕ್ಕ ಅಪರಾಧಕ್ಕಿಂತ ಅವರು ನನಗೆ ನಮಸ್ಕರಿಸಿದ್ದೇ ಹೆಚ್ಚು ಅವಮಾನ

ತಾರಕ್ಕ - ಗಂಡನ ತಪ್ಪನ್ನು ಖಂಡಿಸುವ ಅಧಿಕಾರ ಹೆಂಡತಿಗಿಲ್ಲ. ನಾಗಮ್ಮ ಪತಿ ಕಾಲಿನಿಂದ ತೋರಿಸಿದರೂ ಅದನ್ನು ಸತಿ ಕೈಯಿಂದ ಮಾಡಬೇಕು. ಅಂದಾಗಲೇ ಅವಳಿಗೆ ಸದ್ಗತಿ

ನಾಗಮ್ಮ - ನನಗೆ ಮತಿ ಕಡಿಮೆಯೆಂದು ಕಂಡು ಬಂದಾಗ ನಿಮ್ಮ ಅನುಮತಿಗೆ ಆಮಂತ್ರಣ ವೀಯುತ್ತೇನೆ. ಕಾರಣ ಸದ್ಯಕ್ಕೆ ತಮ್ಮ ಬುದ್ಧಿವಾದವನ್ನು ಕಡಿಮೆ ಮಾಡಬೇಕೆಂದು ವಿನಂತಿಸುತ್ತೇನೆ. (ತಾರಕ್ಕ ಹೋಗುವಳು)

ಸುನಂದ - ಇದೇನೇ ಅಕ್ಕ ಮನೆಯವರ ಸ್ವಭಾವ ಪರಿಚಯ ಮಾಡಿಕೊಡಲು ಬಂದ ನಿನ್ನ ಮನೆ ಹೆಣ್ಣು ಮಗಳನ್ನು ಅವಹೇಳನ ಮಾಡಬಯಸುವಿಯಾ ?

ನಾಗಮ್ಮ - ಇರಲಿ ಸುಮ್ಮನಿರೇ. ನನ್ನ ಮನೆಯ ವಿಷಯದಲ್ಲಿ ಅನ್ಯರ ಅಭಿಪ್ರಾಯ ಬೇಕಿಲ್ಲ. ನನಗೆ ಅಂತಹ ಯೋಗ್ಯತೆಯಿದೆಯೆಂದೇ ಮಾವನವರು ನನ್ನ ಕೈಗೆ ಈ ಬೀಗದಕ್ಕೆ ಕೊಟ್ಟಿದ್ದು. (ಶೇಖರ ಬರುವನು)

ಶೇಖರ - ಏನು ಅತ್ತಿಗೆ ಇನ್ನು ಇಲ್ಲೇ ನಿಂತಿದ್ದೀರಲ್ಲ. ಉಪಹಾರ ಮಾಡೊದಿಲ್ವೆ ?

ನಾಗಮ್ಮ - ನಿಮ್ಮದಾಯಿತೇನಪ್ಪ ಶೇಖರ

ಶೇಖರ - ಓ ಹೋ... ಆಯಿತಲ್ಲ (ನಾಗಮ್ಮ ಒಳಗೆ ಹೋಗುವಳು)

ಗೋಪಿ - ನಾನು ಬರ್‍ತೇನಪ್ಪ ಶೇಖರ (ಹೋಗುವನು)

ಸುನಂದ - ಮಾಮಾ ನೀವು ಹೊಲದ ಕೆಲಸ ಮಾಡ್ತೀರೇನು ?

ಶೇಖರ - ಹೌದು ಏಕೆ ?

ಸುನಂದ - ಕೇಳಿದೆ. ಅಲ್ಲ ಮಾಮಾ ನೀವು ನಿಮ್ಮಣ್ಣನವರಂತೆ ಏಕೆ ಕಲಿಯಲಿಲ್ಲ

ಶೇಖರ - ಹಾಗೇ ಅಂತ ದೇವರು ನನ್ನ ಹಣೆಯಲ್ಲಿ ಬರೆಯಲಿಲ್ಲ. ಇರ್‍ಲಿ ನೀವೇನಾದರೂ ಕಲಿತಿದ್ದೀರಾ ?

ಸುನಂದ - ಇಲ್ಲ ಇನ್ನ ಮೇಲೆ ಕಲೀಬಾರ್‍ದು ಅಂತ ಅಪ್ಪ ಬಿಡಿಸಿಬಿಟ್ರು

ಶೇಖರ - ಈಗ ಎಲ್ಲೀವರೆಗೆ ಕಲ್ತಿದ್ದೀರಿ

ಸುನಂದಾ - ಎಸ್.ಎಸ್.ಎಲ್.ಸಿ.

ಶೇಖರ - ಅಬ್ಬಬ್ಬಾ ಇಂಗ್ಲೀಷ್ ಕಲ್ತಿದ್ದೀರಾ ?

ಸುನಂದ - ಏಕ ಕಲಿಯಬಾರದೇನು ?

ಶೇಖರ - ಛೇ ಹೆಣ್ಣು ಮಕ್ಕಳಿಗೆ ಒಲಿದ ವಿದ್ಯಾದೇವತೆ ನನಗೇಕೆ ಒಲಿಯಲಿಲ್ಲಾಂತ...

ಸುನಂದ - ಹೊಟ್ಟೇಕಿಚ್ಚು ಪಟ್ಟೀರೇನೋ

ಶೇಖರ - ಇಲ್ಲ ಗಾಬರಿಯಾದೆ

ಸುನಂದ - ಗಾಬರಿಯಾಗಲಿಕ್ಕೆ ನಾನೇನು ಹುಲಿ ಏನ್ರಿ

ಶೇಖರ - ಹುಲಿಯಾಗದಿದ್ದರೂ ಮಾಡಿಕೊಂಡ ಗಂಡನನ್ನು ಬಲಿ ಹಾಕಿ ಹಿಡಿದು ಇಲಿಯಂತೆ ಇಡಬಲ್ಲಿರಿ. ಕಲಿತ ಹೆಣ್ಣು ಕಳಿತ ಹಣ್ಣಾದರೇ ಒಳಿತು, ಕೊಳೆತ ಹಣ್ಣಾದರೆ ಬಲಿತ ಹುಣ್ಣಿನ ಮೇಲೆ ಬರೆಯಳೆದಂತೆ

ಸುನಂದ - ಓ ಕಲಿಯದಿದ್ದರೂ ಇನ್ನೊಬ್ಬರಿಗೆ ಅವಹೇಳನಮಾಡಿ ಮಾತನಾಡುವ ಕಲೆ ಅರಿತಿದ್ದೀರಿ !

ಶೇಖರ - ಅರಿಯದೇ ಮಾಡಿದ ಅಪರಾಧ ಕಂಡು ನಕ್ಕು ಅಪಮಾನ ಮಾಡುವ ಬುದ್ಧಿ ಕಲಿತವರಾದ ನಿಮಗೆ ಇದ್ದ ಮೇಲೆ ನಮಗೆ ಇರಬಾರದೇನ್ರಿ ?

ಸುನಂದ - ಸಾಕು ಸರಸ ವಿರಸಕ್ಕೆ ಮುಟ್ಟಿತು

ಶೇಖರ - ಹೌದು ಮನೆಗೆ ಬಂದ ನಿಮ್ಮೊಂದಿಗೆ ವಿರಸ ಕಟ್ಟಿಕೊಳ್ಳುವ ಇಷ್ಟ ನಮಗೂ ಇಲ್ಲ. ಹೋಗ್ರಿ ಒಳಗೆ ಹೋಗಿ ಉಪ್ಪಿಟ್ಟು ತಿಂದು ಚಹಾ ಕುಡಿತೀರೇನು

ಸುನಂದ - ಉಪಚಾರದ ಅವಶ್ಯಕತೆ ಇಲ್ಲರೀ. ಹಸಿದ ಹೊಟ್ಟೆ ತನ್ನ ಗುಟ್ಟು ಸಾಧಿಸಿಕೊಳ್ಳುತ್ತದೆ

ಶೇಖರ - ಅಂತೂ ನಿಮ್ಮದು ನಾಚಿಕೆಯ ಸ್ವಬಾವವಲ್ಲ

ಸುನಂದ - ನಾಚಲಿಕ್ಕೆ ನಾನೇನು ನಿಮ್ಮ ಕೈ ಹಿಡಿಯಲು ಬಂದ ಹೆಣ್ಣಲ್ಲ

ಶೇಖರ - ಆ

ಸುನಂದ - ಹೂ (ಒಳಗೆ ಹೋಗುತ್ತಿರುವಳು. ಹಾವು ಬರುವದು)

ಶೇಖರ - ಹಾವು ಹಾವು

ಸುನಂದ - ಎಲ್ಲಿ (ನೋಡಿ) ಅಮ್ಮಾ (ಎಂದು ಚೀರಿ ಶೇಖರನ ಕೈಯಲ್ಲಿ ಬೀಳುವಳು)

ಶೇಖರ - ಸುನಂದಾಬಾಯಿಯವರ... ಸುನಂದಾಬಾಯಿಯವರ..

ಸುನಂದ - (ಕಣ್ಣು ಬಿಟ್ಟು) ಹಾವು ಹಾವು

ಶೇಖರ - ಹಾವು ಹೋಯಿತ್ರಿ, ಇಷ್ಟೊತ್ತ ಇರತ್ತದೇನು ?

ಸುನಂದ - ಮಾಮಾ ಇದೆಂತಹ ಅನಿರೀಕ್ಷಿತ ಘಟನೆ

ಶೇಖರ - ಯಾವದು ? ಹಾವು ಕಂಡದ್ದೋ ಅಥವಾ ನೀವು ಬಂದು ನನ್ನ ಅಪ್ಪಿಕೊಂಡದ್ದೋ

ಸುನಂದ - ಎರಡೂ ಅಲ್ಲ ಸಾವಿನಿಂದ ನಾನುಳಿದಿದ್ದು. ಕಾಲು ಕಿತ್ತು ಹಾವಿನ ಮೇಲೆ ಇಟ್ಟಿದ್ರೆ ಸತ್ತು ಹೋಗುತ್ತಿದೆ. ಪುಣ್ಯಕ್ಕೆ ನೀವಿದ್ರಿ ಅಂತಾ ಬದುಕಿಕೊಂಡೆ

ಶೇಖರ - ಅಂದರೆ ಬದುಕಿಸೋದು ಸಾಯಿಸೋದು ನನ್ನ ಕೈಯಲ್ಲಿ ಅಥವಾ ಆ ಹಾವಿನ

ಕೈಯಲ್ಲಿ ಇದೆ ಅಂತೀರಾ ?

ಸುನಂದ - ಹೌದರೀ, ಹಾವಿಗೆ ಹರನೂ ನಡುಗಿದನಂತೆ. ಹಾವು ಅಂತಾ ನೀವು ಕೂಗದಿದ್ರೆ ನಾನದನ್ನ ತುಳಿತಿದ್ದೆ ಅದು ನನ್ನ ಕಚ್ಚುತಿತ್ತು. ಆ ಮೇಲೆ ನಾನು ಉಳಿತಿದ್ನೇ ?

ಶೇಖರ - ಕಂಡವರನ್ನು ಕಂಡಲ್ಲಿ ಕಡಿಲಿಕ್ಕೆ ಹಾವಿಗೆ ಎಲ್ಲಿದೇರಿ ಅಧಿಕಾರ. ಆಯುಷ್ಯ ಮುಗಿಯಲಾರದೆ ಸಾಯಲಿಕ್ಕೆ ನೀವೇನು ಇಚ್ಛಾಮರಣೀ ಭೀಷ್ಮ ಅಂತ ತಿಳಿದೀರಾ ? ಸುನಂದಾಬಾಯಿಯವರೇ ಈ ಪ್ರಪಂಚ ಚಲಿಸತಾ ಇರೋದು ಒಬ್ಬ ವಿಧಾತನ ಅಪ್ಪಣೆಯಂತೆ. ನಿಮಗೆ ಈ ಭೂಮಿಯ ಅನ್ನ ನೀರಿನ ಋಣಮುಗಿದು ಅವನ ಅಪ್ಪಣೆಯಾಗಬೇಕು. ಆ ಸರ್ಪ ನಿಮಗೆ ಕಚ್ಚಬೇಕು. ಅಂದಾಗ ನಿಮಗೆ ಸಾವು ಬರಬೇಕು

ಸುನಂದ - ಅಂದರ ಸರ್ಪ ಕಚ್ಚಬೇಕಾದ್ರು ದೇವರ ಅಪ್ಪಣೆ ಬೇಕೇ ?

ಶೇಖರ - ಹೌದ್ರಿ, ಆಯುಷ್ಯ ಗಟ್ಟಿಯಿದ್ದವರು ಸರ್ಪವ ಬಾಯಿಯಲ್ಲಿ ಕೈ ಇಟ್ಟರೂ ಅದು ಕಚ್ಚೋದಿಲ್ಲ. ಹಾವಿನ ಕೈಯ್ಯಲ್ಲಿ ಮುಗಿಯಬೇಕಂತಾಯಿದ್ರೆ ಸ್ವರ್ಗದೊಳಗೆ ಇದ್ದರೂ ಸಾವು ಬಿಡೋದಿಲ್ಲ. ಆ ಅಲ್ಲ ನೀವು ವಿದ್ಯಾ ಕಲಿತಿರೋ ಸುಬ್ಬುದ್ದಿವಂತರಿರಬೇಕು ಅಂತ ತಿಳಿದಿದ್ದೆ. ಸಾವಿಗೆ ಅಂಜಲಿಕ್ಕೆ ಅಷ್ಟೇ ಕಲಿತಿದ್ದೀರಿ

ಸುನಂದ - ನೀವೇನೇ ಅನ್ರಿ ಇವೊತ್ತು ನನ್ನ ಪ್ರಾಣ ಉಳಿದದ್ದು ನಿಮ್ಮಿಂದ ಥ್ಯಾಂಕ್ಸ್

ಶೇಕರ - ಹಾಂ ಏಸಂದ್ರಿ ಬೈದ್ರೇನ್ರಿ ಮತ್ತೆ

ಸುನಂದ - ಅಯ್ಯೋ ಅಲ್ಲರಿ. ಹರ್ಷವಾಯಿತು ಅಂದೆ ಬರ್‍ತೇನೆ. (ನಗುತ್ತ ಹೋಗುವಳು)

ಶೇಖರ - ಥ್ಯಾಂಕ್ಸ್ ಆ ಹಾಹಾ ಅದನ್ನ ಅನ್ನೋದರಲ್ಲಿ ಕೂಡಾ ಎಷ್ಟು ನಯ ಎಷ್ಟು ವಿನಯ, ಮುಟ್ಟಿದರೆ ಮಾಸುವ ಮಲ್ಲಿಗೆಯ ಬಳ್ಳಿಯಾಗಿದ್ದಾಳೆ. ಹಾವು ಅಂದ ತಕ್ಷಣ ಸಾವಿಗೆ ಹೆದರಿ ಈ ಕಲಿತ ಹುಡುಗಿ ಓಡಿ ಬಂದು ನನ್ನ ಮೈಮೇಲೆ ಬಿದ್ದಾಗ ಮೈಯಲ್ಲಾ ಝುಮ್ ಎಂತು. ಏನು ರೂಪ ಆಹಾ ಉಪ್ಪಿಲ್ಲದ ಅನ್ನ ತಿಂದ ಮುಪ್ಪಿನ ಸನ್ಯಾಸಿಯು ಮನಸ್ಸು ಕೂಡಾ ಕಸವಿಸಿಗೊಳ್ಳಬೇಕು. ನಮ್ಮ ಮನೆಯಲ್ಲಿ ಬಂದ ನಾಗಪ್ಪ, ನನಗೆ ಎಂತಹ ಉಪಕಾರ ಮಾಡಿತಪ್ಪ. ಅವಳು ಬಂದು ನನ್ನ ಕೈ ಮೇಲೆ ಮೈಚಲ್ಲಿದಾಗ ಅಪ್ಪಿ ಮುದ್ದಾಡಬಹುದಿತ್ತು. ಥೂ ಥೂ ಎಂತಹ ಹೊಲಸು ವಿಚಾರ ಮಾಡಲಿಕ್ಕೆ ಹತ್ತಿತಪ ಈ ನನ್ನ ಖೋಡಿ ಮನಸ್ಸು. ಈ ಹುಡುಗಿಯ ಮೈ ಕಂಡು ಮೋಹಗೊಳ್ಳಬೇಕೆ ?

ತಾರಕ್ಕ - (ಬರುತ್ತ) ಶೇಖರ ಏನಪ್ಪಾ ಅದು ಹಾವು ಬಂತೇ ?

ಶೇಖರ - ಹೌದಕ್ಕ ಹೊರ ಬಾಗಿಲಿನಿಂದ ಹರಿದು ಬಂದು ಅದೋ ಆ ಗೋಡೆಯ

ಬಿರುಕಿನಲ್ಲಿ ಸೇರಿಕೊಂಡಿತು

ತಾರಕ್ಕ - ಅದನ್ನು ಸುಮ್ಮನೇ ಬಿಡತಾರೇನಪ್ಪ ಮನೆ ಸ್ವಲ್ಪ ಬಿರುಕು ಆಗಿದ್ದು ನೋಡಬಾರದೇ ? ವಿಷಜಂತು ಕಂಡ ತಕ್ಷಣ ತುಂಡು ಮಾಡಿ ಚಲ್ಲಬೇಕು

ಶೇಖರ - ಕಲ್ಲ ನಾಗರನಿಗೆ ಕೈ ಮುಗಿಯುವ ನಾವು ಜೀವಂತ ನಾಗನನ್ನು ಕೊಲ್ಲಬೇಕೇ? ಅಕ್ಕ ಹಾವು ಬರದ ಮನೆಯಿಲ್ಲ. ಸಾವು ಬರದ ಮನುಷ್ಯನಿಲ್ಲ. ಕಂಡ ಹಾವನ್ನು ಕಡಿದು ಹಾಕಬಹುದು. ಆದರೆ ಕಾಣದ್ದು ಬಂದು ಕಚ್ಚಿದರೆ·

ತಾರಕ್ಕ - ಈಗ ಅದೇ ಕಡಿಯುತ್ತಿತ್ತಂತೆ, ಕಾಲು ಅದರ ಮೇಲಿಟ್ಟಿದ್ದರೆ ಸುನಂದ ಇಷ್ಟು ಹೊತ್ತಿಗೆ ಸತ್ತು ಹೋಗುತ್ತಿದ್ದಳು

ರಾಮಣ್ಣ - (ಬರುತ್ತ) ಏನಾಯಿತು ಮಗು. ಸುನಂದೆಗೆ ಹಾವು ಕಚ್ಚುತ್ತಿತ್ತೆ ?

ಶೇಖರಪ್ಪ - ಎಷ್ಟು ಗದ್ದಲ ಮಾಡಿದಳಪ್ಪ, ಈ ಕಲಿತ ಹುಡಿಗಿ ಅಪ್ಪ, ಹೊರಗಿನಿಂದ ಹಾವು ಹರಿದುಬಂತು. ಸುನಂದೆಗೆ ಸರಿದು ನಿಲ್ಲಲು ಹೇಳಿದೆ ಅದು ಈ ಬಿರುಕನ್ನು ಸೇರಿಕೊಂಡಿತು

ತಾರಕ್ಕ - ಇದೇನಪ್ಪ ನಿನ್ನ ಸೊಸೆ ಮೊದಲಗಿತ್ತಿಯಾಗಿ ನಿನ್ನ ಮನೆ ತುಂಬಿದ ಈ ಮಂಗಲ ಸಮಯದಲ್ಲಿ (ನಾಗವೇಣಿಯು ಮರೆಯಲ್ಲಿ ನಿಂತು ಈ ಮಾತು ಕೇಳುವಳು) ವಿಷಪೂರಿತ ಘಟಸರ್ಪ ಹೊರಗಿನಿಂದ ಹರಿದು ಬಂದು ನಿನ್ನ ಮನೆಯಲ್ಲಿ ವಾಸಮಾಡಿಕೊಂಡಿತಲ್ಲ. ಇದರಲ್ಲಿ ಏನೋ ಅನುಭವವಿದೆ ಎಂದು ಕಾಣುತ್ತದೆ

ಶೇಖರ - ಅಹುದೇನಕ್ಕ ಅಶುಭವಿರುವದು ಮನೆ ಸೇರಿದ ಹಾವಿನಿಂದಲೋ ಅಥವಾ ಮೊದಲಗಿತ್ತಿಯಾಗಿ ನಮ್ಮ ಮನೆ ತುಂಬಿದ ಅತ್ತಿಗೆಯ ಕಾಲ್ಗುಣದಿಂದಲೋ ?

ರಾಮಣ್ಣ - ಶೇಖರ ಗಟ್ಟಿಯಾಗಿ ಮಾತನಾಡಬೇಡ. ಥಟ್ಟನೆ ಯಾರ ಕಿವಿಗಾದರೂ ಬಿದ್ದರೆ ಒಂದ್ಹೋಗಿ ಹನ್ನೊಂದು ಆದೀತು

ತಾರಕ್ಕ - ಆದರೇನಾಯ್ತು ಬಿಡಪ್ಪ, ನಿನ್ನ ಸೊಸೆಯ ಗುಣ ಒಂದೂ ಚನ್ನಾಗಿಲ್ಲ. ಇದೀಗ ಮನೆಯ ವಿಷಯಕ್ಕೆ ಎರಡು ಮಾತು ತಿಳಿಸಿ ಹೇಳೋಣಾಂತ ಹೋದೆ. ಅಷ್ಟಕ್ಕೇ ಮುಖಭಂಗ ಮಾಡಿಬಿಟ್ಟಳು. ಅಪ್ಪ ನಿನ್ನ ಸೊಸೆ ಅಹಂಕಾರದ ಮೊಟ್ಟೆ

ನಾಗಮ್ಮ - (ಬರುತ್ತ) ಏನ್ರಿ ತಾರಕ್ಕ ಅನ್ನ ನೀರು ಕೊಟ್ಟು ಬೆಳೆಸಿದಿರೇನ್ರಿ ನನ್ನ ನೀವು, ಅಹಂಕಾರದ ಮಟ್ಟೆ ಅಂತಾ ಕರಯಲಿಕ್ಕೆ. ನನ್ನ ಕಾಲ್ಗುಣ ಕೆಟ್ಟದ್ದೋ ಒಳ್ಳೆಯದೋ ಅದು ನಿಮಗೇತಕ್ಕೆ ಬೇಕು ? ದಯವಿಟ್ಟು ಚಾಡಿ ನುಡಿದು ಗಂಡಸರ ತಲೆ ಕೆಡಿಸಬೇಡಿ

ತಾರಕ್ಕ - ಚಾಡಿ ನುಡಿಯುವಷ್ಟು ಹೋಡಿ ಹೆಂಗಸು ನಾನಲ್ಲ ನಾಗಮ್ಮ. ಈ ಮನೆಗ

ಸೊಸೆಯಾಗಿ ಬಂದ ನೀನು ತಪ್ಪಿ ನಡೆಯಬೇಡ ತಿದ್ದಿಕೋ

ನಾಗಮ್ಮ - ನನ್ನ ನುಡಿಗಳ ಬಗ್ಗೆ ಅಪ್ಪಣೆ ಕೊಡಿಸಲಿಕ್ಕೆ ನಿಮಗೇನು ಅಧಿಕಾರ ? ನನಗೆ ಸಂಬಂಧಪಟ್ಟವರು ಮಾತ್ರ ಹೇಳಲಿ. ನನಗೆ ಆಜ್ಞೆ ಮಾಡಲು ನೀವು ಯಾರು ?

ತಾರಕ್ಕ - ನಾನು ಯಾರು ? ನಾಗು, ಯಾರು ನಿನ್ನ ಕೊರಳಿಗೆ ಮಾಂಗಲ್ಯ ಕಟ್ಟಿ ನಿನ್ನ ಕೈ ಹಿಡಿದು ಈ ಮನೆಗೆ ಕರೆತಂದನೋ ಆ ನಿನ್ನ ಗಂಡನಿಗೂ ಮೊದಲು ಈ ಮನೆಯಲ್ಲಿ ಹುಟ್ಟಿದವಳು ನಾನು

ನಾಗಮ್ಮ - ಹುಟ್ಟಿದಮನೆ ಹೆಣ್ಣಿಗೇನ್ರಿ ಸಂಬಂಧ, ಕೊಟ್ಟಮನೆ ಸೇರಿದ ಹೆಣ್ಣಿಗೆ ಹುಟ್ಟಿದ ಮನೆಯಲ್ಲೇನಿದೆ ಅಧಿಕಾರ ?

ರಾಮಣ್ಣ - ಇರಲಿ ಬಿಡು ತಾರಕ್ಕ. ಈ ವಿಷಯಕ್ಕ ಮನಸ್ಸು ಸಣ್ಣದು ಮಾಡಿಕೊಳ್ಳಬಾರದು. ನೀನು ನನ್ನ ಮಗಳು, ಅವಳು ಸೊಸೆ. ಇಬ್ಬರೂ ಈ ರೀತಿ ಕಚ್ಚಾಡ ಹತ್ತಿದರೆ ಮನೆಯಲ್ಲಿ ಶಾಂತಿ ಉಳಿಯುವದೇ ? ಮನೆಯ ಶಾಂತಿ ಅಳಿದ ಬಳಿಕ ಮನಸ್ಸಿನ ನೆಮ್ಮದಿಯೂ ಅಳಿಯುತ್ತದೆ. ನೀವಿಬ್ಬರೂ ಅನ್ಯೋನ್ಯ ಪ್ರೀತಿಯಿಂದಿದ್ದರೆ ಮಾತ್ರ ಎಲ್ಲರಿಗೂ ಸಂತೋಷ

ತಾರಕ್ಕ - ಸಂತೋಷ ! ಸಂತೋಷದ ಕಾಲ ಮುಗಿದು ಹೋಯಿತಪ್ಪ, ಎಂದು ಈ ಮನೆ ಕಟ್ಟಿದ ಅವ್ವ, ಮುತ್ತೈದೆ ಸಾವು ಪಡೆದು ಸ್ವರ್ಗದಲ್ಲಿ ಸಂಪಿಗೆಯ ಮರವಾದಳೋ ಅಂದೇ ನಿನ್ನ ಮನೆ ಬೆಳಗುವ ನಗುವಿನ ದೀಪ ನಂದಿ ಹೋಯಿತು. ಅಂದು ನಂದಿ ಹೋದ ಆ ದೀಪವನ್ನು ಮನಗೆ ಬಂದ ಈ ನಿನ್ನ ಸೊಸೆ ಮತ್ತೆ ಬೆಳಗಿಸುತ್ತಾಳೆ ಎಂದು ಭಾವಿಸಿದಿ. ಆದರೆ ಅಪ್ಪ ಈ ನಿನ್ನ ಸೊಸೆ ನಗುವನ್ನು ಪಸರಿಸುವವಳಲ್ಲ, ವೈಷಮ್ಯದ ಹೊಗೆ ಹುಟ್ಟಿಸುವವಳು. ಅವ್ವ ಕಟ್ಟಿದ ಈ ಮನೆಯ ಗೋಡೆ ನಿನ್ನ ಸೊಸೆಯ ಕಾಲ್ಗುಣದಿಂದ ಬಿರುಕು ಬಿಟ್ಟಿತಪ್ಪ. ಆ ಬಿರುಕಿನಲ್ಲಿ ಹೊರಗಿಂದ ಹರಿದುಬಂದ ವಿಷಜಂತು ವಾಸಮಾಡಿಕೊಂಡಿತಪ್ಪ

ನಾಗಮ್ಮ - ನಾಲ್ಕು ದಿನ ಇದ್ದು ಹೋಗಲು ನನ್ನ ಮನೆಗೆ ಬಂದು ನೀವು ವಿರಸದ ವಿಷ ಬೀಜ ಬಿತ್ತಿ ಹೋಗಲು ಬಂದಂತೆ ಕಾಣುತ್ತದೆ. ಆಗಲಿ ತಾರಕ್ಕ ನನ್ನ ಕಾಲ್ಗುಣದ ಮಹಿಮೆಯನ್ನು ಕಾಲವೇ ನಿರ್ಧರಿಸಲಿ

ತಾರಕ್ಕ - ಕಾಲವೇಕೆ ನಿರ್ಧರಿಸಬೇಕು. ಇಂದು ನಿನ್ನ ನಾಲಿಗೆಯೇ ಹೇಳುತ್ತಿದೆಯಲ್ಲ. ಮನೆಯ ಯಜಮಾನ ಮಾವನ ಸಮ್ಮುಖದಲ್ಲಿ ಈ ರೀತಿ ನಾಲಿಗೆ ಹರಿಬಿಡುವ ಸೊಸೆ, ಮುಂದೆ ಈ ಮನೆಯನ್ನು ಒಳ್ಳೇ ರೀತಿಯಿಂದ ನಡೆಸುವಳೋ ಅಥವಾ ಎರಡು ಬಗೆದು ಕೆಡಿಸುವಳೋ ಎಂಬುದನ್ನು

ನಾಗಮ್ಮ - ತಾರಕ್ಕ ಇದು ತವರು ಮನೆ. ನಾನು ಈ ಮನೆಗೆ ಯಜಮಾನಿ, ತಾಪತ್ರಯ

ಬಂದಾಗ ತವರು ಮನೆಯ ಸಹಾಯ ಬಯಸುವದು ಹೆಣ್ಣು ಜನ್ಮದ ಹುಟ್ಟು ಗುಣ. ಹೀಗಿದ್ದು ನೀವು ನನ್ನೊಂದಿಗೆ ವಿರಸ ಕಟ್ಟಿಕೊಂಡು ತವರಿನ ಬೇರು ಬುಡಸಹಿತ ಕಡಿದುಕೊಳ್ಳಬಯಸುವುದು ಆಶ್ಚರ್ಯಕರವೆನಿಸುತ್ತದೆ

ತಾರಕ್ಕ - ಎಂದು ನನ್ನ ತಾಯಿ ಸತ್ತಳೋ ಅಂದೇ ನನ್ನ ತವರಿನ ಬೇರು ಕಡಿದು ಹೋಯಿತು ಎಂದು ಭಾವಿಸಿದ್ದೇನೆ. ಅದರಲ್ಲಿಯೂ ನಿನ್ನಂತಹ ಪುಣ್ಯಾತ್ಮಗಿತ್ತಿ ಈ ಮನೆಯಲ್ಲಿ ಕಾಲಿಕ್ಕಿದ ಬಳಿಕ ಈ ಮನೆಯ ಸಹಾಯ ಬಯಸುವವದೆಂದರೆ ಜಾಲಿಯ ಗಿಡದಲ್ಲಿ ಜಾಜಿಯ ಹೂವು ಬಯಸಿದಂತೆ. ಬಾರಪ್ಪ ಊಟಕ್ಕೆ, ನಾನಿವತ್ತೇ ನಮ್ಮೂರಿಗೆ ಹೊರಟು ಬಿಡುತ್ತೇನೆ. (ಒಳಗೆ ಹೋಗುವಳು)

ನಾಗಮ್ಮ - ಅಷ್ಟು ಹಟ ನಿಮಗಿದ್ದರೆ ಅದಕ್ಕೆ ನಾನೇನು ಮಾಡಲಿ ನಿಮ್ಮಿಷ್ಟ

ಶೇಖರ - ಅತ್ತಿಗೆ, ಬಾರಮ್ಮ ಇಲ್ಲಿ, ಅಲ್ಲ ಅನಿಷ್ಟಕಾರಕವಾದ ಅಷ್ಟ ಗ್ರಹಗಳ ಯೋಗ ಇಷ್ಟು ಬೇಗನೇ ನಮ್ಮ ಮನೆಯ ಮೇಲೆ ಯಾಕೆ ಬಿತ್ತು ಅಂತ

ನಾಗಮ್ಮ - ನನಗೇನು ಗೊತ್ತಪ್ಪ. ಮೊದಲೇ ಕೆಟ್ಟ ಕಾಲ್ಗುಣದ ಹೆಣ್ಣು ನಾನು, ನಿಮ್ಮ ಮನೆಗೆ ಕೇಡು ಬಗೆಯಲು ಬಂದವಳು. ನಿಮ್ಮ ಅಕ್ಕನನ್ನು ಕೇಳು ಹೇಳ್ತಾಳೆ

ರಾಮಣ್ಣ - ಮಗು ನಾಗಮ್ಮ ತಾರಕ್ಕನ ಸ್ವಭಾವ ಸ್ವಲ್ಪ ನಿಷ್ಠುರ, ಮಾತು ಒರಟಾಗಿ ಆಡಿದರೂ ಮನಸ್ಸು ಮಾತ್ರ ಬಲು ನಿರ್ಮಲ. ಅವಳ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಮ್ಮ. ಬಾ ಒಳಗೆ ಶೇಖರ, ಊಟ ಮಾಡಿಕೊಂಡು ತೋಟಕ್ಕೆ ಹೋಗುವದಿಲ್ಲವೇ ?

ಶೇಖರ - ಇಲ್ಲಪ್ಪ, ತೋಟಕ್ಕೆ ಹೋಗಿ ಬಂದನಂತರ ಊಟ ಮಾಡುತ್ತೇನೆ. ಹೋಗು ಅತ್ತಿಗೆ

ನಾಗಮ್ಮ - ಆಗಲಪ್ಪ, ನೀನು ಬೇಗ ಬಂದುಬಿಡು, ನಡೀರಿ ಮಾವಾ (ರಾಮಣ್ಣ ಒಳಗೆ ಹೋಗುವನು. ಶೇಖರ ಹೊರಗೆ ಹೋಗುವನು) ಅಂದ ಹಾಗೆ ಈತಾರಕ್ಕ ನನ್ನ ಪಾಲಿಗೆ ಮಾರಕ್ಕನೇ ಆದಳು. ಆಗಲಿ ಮನೆತನದ ವಿಷಯದಲ್ಲಿ ಮಾತು ಬಂದಾಗ ಅವಳ ಅಧಿಕಾರವೇನೂ ನಡೆಯದಂತೆ ಮಾಡಬೇಕು. ಪ್ರೀತಿಯಿದ ಮಾತನಾಡಿ ಪತಿಯ ಮನ ಒಲಿಸಿಕೊಂಡು ಮನೆಯವರೆಲ್ಲರ ಮೇಲೆ ನನ್ನ ಪ್ರಭಾವ ಬೀರಬೇಕು. ಅಧಿಕಾರಯುಕ್ತಳಾಗಿ ಅತ್ತ ಆಳಿಹೋದ ಈ ಮನೆಯನ್ನು ನಾನು ಆಳಿಸಿಕೊಳ್ಳಲೇಬೇಕು

ರವಿ - (ಬಂದು) ನಾಗು (ಮುಖ ತಿರುವಿ ನಿಲ್ಲುವಳು) ನಾಗು ಇದೇನು ನಾಟಿಕೆಯೋ ಅಥವಾ ಶೆಡವಿನ ನಾಟಕವೋ

ನಾಗಮ್ಮ - ಎರಡೂ ಅಲ್ಲ ಅಪಮಾನ

ರವಿ - ಯಾರಿಂದ ?

ನಾಗಮ್ಮ - ಇನ್ನಾರಿಂದ ನಿಮ್ಮ ಒಡಹುಟ್ಟಿದ ಅಕ್ಕನಿಂದ. ನಾನೇನೊ ಕಟ್ಟ ಕಾಲ್ಗುಣದವಳಂತೆ, ನಿಮ್ಮ ಮನೆ ಒಡೆಯಲು ಬಂದವಳಂತೆ. ಅತ್ತೆ ಕಟ್ಟಿದ ಈ ಮನೆ ನನ್ನಿಂದ ಬಿರುಕು ಬಿಟ್ಟಿತಂತೆ. ಇನ್ನೂ ಏನೇನೋ ಅಂದಳು, ಅದು ನಿಮ್ಮ ತಂದೆಯವರ ಸಮ್ಮುಖದಲ್ಲಿ

ರವಿ - ಅವಳು ಹೀಗೆಲ್ಲಾ ನಿಂದಿಸಿದಳೇ ? ಆಗ ತಂದೆಯವರು ಸುಮ್ಮನಿದ್ದರೇ?

ನಾಗು - ಇರದೆ ಇನ್ನೇನು ಮಾಡುತ್ತಾರೆ. ಹಡೆದ ಮಗಳ ಮುಂದೆ ನಡೆಯಲು ಬಂದ ನಾನು ಯಾರು. ನೋಡಿ ಮೊದಲಗಿತ್ತಿಯಾಗಿ ನಾನು ನಿಮ್ಮ ಮನೆ ತುಂಬಿದ ದಿನವೇ ಹಣಕಾಸಿನ ಅಧಿಕಾರ ಸೂತ್ರವನ್ನು ನನ್ನ ಕೈಗೆ ಒಪ್ಪಿಸಿದರಲ್ಲ ಮಾವನವರು... ಅದನ್ನು ಕಂಡು ಆ ನಿಮ್ಮಕ್ಕನಿಗೆ ಹೊಟ್ಟೆ ಉರಿ

ರವಿ - ಅದೇನಿದ್ದರೂ ಅಕ್ಕ ನಾಲ್ಕು ದಿನ ಇದ್ದು ಹೋಗತಕ್ಕವಳು. ಅಂದ ಬಳಿಕ ಅವಳ ವಿಷಯಕ್ಕೆ ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳುವ ಕಾರಣವಿಲ್ಲ. ಒಂದು ವೇಳೆ ನಾವು ಮನೆಯವರು ಯಾರಾದರೂ ತಪ್ಪಿ ನಡೆದಿದ್ದರೆ ಹೇಳು ತಿದ್ದಿಕೊಳ್ಳುತ್ತೇವೆ

ನಾಗಮ್ಮ - ಛೇ ಛೇ ಎಂತಹ ಮಾತು ಆಡುವಿರಿ. ಕೈಹಿಡಿದ ಪತಿಯಲ್ಲಾಗಲೀ ಇಲ್ಲವೇ ಮಾವ ಮೈದುನರಲ್ಲಾಗಲಿ ತಪ್ಪು ಹುಡುಕಿದರೆ ನನಗೆ ರವರವ ನರಕವಾದೀತು. ಎಷ್ಟಾದರೂ ನಿಮ್ಮೆಲ್ಲರ ಸೇವೆ ಮಾಡಲು ಬಂದ ದಾಸಿ ನಾನು. ನಿಮ್ಮ ಅಡಿಯ ಮೇಲಿನ ಹುಡಿಯ ಬೆಲೆಯೂ ನಾನಾಗಲಾರೆ

ರವಿ - ನಾಗು, ನೀನು ತುಂಬಾ ಗುಣವಂತೆ, ಇಲ್ಲಿಯವರೆಗೂ ನೀನು ಬರಿಯ ರೂಪವತಿಯೆಂದು ಮಾತ್ರ ತಿಳಿದಿದ್ದೆ. ಆದರೆ ಈ ನಿನ್ನ ಸದ್ಗುಣವನ್ನು ಕಂಡ ನಾನು ನಿನ್ನಂತಹ ರೂಪ ಗುಣ ಸಂಪನ್ನೆಯಾದ ಹೆಣ್ಣಿಗೆ ಗಂಡನಾದದ್ದು ನನ್ನ ಭಾಗ್ಯವೆಂದೇ ಭಾವಿಸುವೆ. ಈ ನಿನ್ನ ಹಿರಿಗುಣವರಿತೇ ತಂದೆಯವರು ಕೊಟ್ಟಿರಬೇಕು ಮನೆಯ ಹಣಕಾಸಿನ ಅಧಿಕಾರ ಸೂತ್ರವನ್ನು. ನಾಗು, ನಿಜ ಹೇಳಬೇಕು ಅಂದರೆ ಈ ನಿನ್ನ ರೂಪಕ್ಕೆ ಈ ಗುಣ ಬಂಗಾರಕ್ಕೆ ಇಟ್ಟ ಕುಂದಣ

ನಾಗಮ್ಮ - ನಾನಷ್ಟು ರೂಪವತಿಯೇ ?

ರವಿ - ಅದನ್ನು ವರ್ಣಿಸಲು ನಾನೇನು ಕವಿಯೇ ?

ನಾಗಮ್ಮ - ಕಲ್ಪನೆಯಿಂದ ಕವನ ನಿರ್ಮಿಸುವ ಕವಿಯಾಗದಿದ್ದರೂ ನನ್ನ ಬಾಳಮಂದಿರಕ್ಕೆ ಸಾತ್ವಿಕ ಪ್ರೇಮದ ಬೆಳಕು ನೀಡಬಲ್ಲ ರವಿ. (ನಾಲಿಗೆ ಕಚ್ಚಿಕೊಳ್ಳುವಳು)

ರವಿ - ಆಡಾಡುತ್ತ ನನ್ನ ಹೆಸರು ಹೇಳಿಬಿಟ್ಟೆಯಲ್ಲ

ನಾಗಮ್ಮ - ಹೃದಯದ ತುಂಬೆಲ್ಲ ಪಸರಿಸಿದ ತಮ್ಮ ಹೆಸರನ್ನು ಅರಿಯದೆ ನುಡಿದುಬಿಟ್ಟಿತು

ನನ್ನ ನಾಲಿಗೆ. (ರವಿ ಕೈಹಿಡಿದು ಜಗ್ಗುವನು) ಒಲ್ಲೆ ಹೋಗಿ ನನಗೆ ನಾಚಿಕೆಯಾಗುತ್ತದೆ

ರವಿ - ನಾಚಲಿಕ್ಕೆ ಇಲ್ಲಿ ಯಾರಿದ್ದಾರೆ

ನಾಗಮ್ಮ - ನೀವಿದ್ದೀರಲ್ಲ ನೋಡಿ

ರವಿ - ನನ್ನನ್ನು ನಾನು ಹೇಗೆ ನೋಡಿಕೊಳ್ಳಬೇಕು. ಇನ್ನು ಕನ್ನಡಿಯಾದ್ದರೂ ಇದ್ದಿದ್ದರೆ

ನಾಗಮ್ಮ - ನನ್ನ ಈ ಕಣ್ಣೆಂಬ ಕನ್ನಡಿಯಲ್ಲಿ ಕಂಡುಕೊಳ್ಳಿ, ಕಂಡಿತೇ ಅಲ್ಲಿ ನಿಮ್ಮ ಪ್ರತಿಬಿಂಬ

॥ ಹಾಡು ॥

ನಾಗಮ್ಮ - ಈ ಮಧುರಭಾವ । ಆವರಿಸಿ ಮನವ । ಸಂತಸದಿ ಕುಣಿಸುವದು ! ನನ್ನ ತನುವ !!

ರವಿ - ಕಂಗಳಲಿ ಚೆಲುವ ತುಂಬಿರುವ ಬಲವ !!

ನಾಗಮ್ಮ - ಅರ್ಪಿಸುವೆ ಚರಣಕೆ ! ಸ್ವೀಕರಿಸು ದೇವಾsss

ರವಿ - ಈ ನಮ್ಮ ಮಿಲನಾ ! ಅನುರಾಗಸದನಾ ! ಇದಕಾಗಿ ನಡೆಯಿತು ಆ ಶರದಿಮಥನಾ ॥ ೧ ॥ ಮಧುರಭಾವ (ಮುಗಿದು ಅಪ್ಪಿಕೊಳ್ಳುವಾಗ ಸುನಂದ ಬರುವಳು)

ಸುನಂದ - ಅಕ್ಕಾ ಅಕ್ಕಾ (ನಾಚಿ ನಿಲ್ಲುವಳು) ಇದೇನೇ ಅಕ್ಕಾ ಭಾವ ಹೀಗೆ ಮಾಡಬೇಕೆ?

ನಾಗಮ್ಮ - ಇವರೇನು ಮಾಡಿದರೇ ?

ಸುನಂದ - ಇವರಲ್ಲ ಇವರಿಗಿಂತ ಚಿಕ್ಕವರು. ಇವರು ನನಗೇನು ಮಾಡುತ್ತಾರೆ

ರವಿ - ಹಾಗಾದರೆ ನಿನಗೇನಾದರೂ ಹಾಸ್ಯ ಮಾಡಿದರೆ ಆ ನಿನ್ನ ಚಿಕ್ಕವರೇ ಮಾಡುತ್ತಾರೇನು ?

ಸುನಂದ - (ಹುಸಿ ಕೋಪದಿಂದ) ಕೇಳಿದೇನೇ ಅಕ್ಕಾ ಇವರ ವ್ಯಂಗೋಕ್ತೀನ

ನಾಗಮ್ಮ - ನನ್ನ ತಂಗಿ ಅಂತ ಹಾಸ್ಯ ಮಾಡುತ್ತಾರೆ. ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡಮ್ಮ ಸುನಂದ

ರವಿ - ಮನಸ್ಸಿಗೆ ಹಚ್ಚಿಕೊಂಡರೂ ಮೈಗೆ ಮಾತ್ರ ಖಂಡಿತ ಹಚ್ಚಿಕೊಳ್ಳಬೇಡ. ಯಾಕಂದರ ಮನಸು ಬಯಸಿದ್ದನ್ನು ಮೈ ಬೇಡ ಅನ್ನುವದಿಲ್ಲ. ಮನಸ್ಸಿನ ಸ್ವಾಧೀನ ಮೈ, ಮೈ ಸ್ವಾಧೀನಕ್ಕೆ ಕೈ ಅಂತ ಹೇಳತಾರ ತಿಳಿದವರು. ಒಂದು ಸೋತ ಮೇಲಿ, ಇನ್ನೊಂದು ಸೋಲೋದು ಕಷ್ಟವಲ್ಲ ನಡ ನಾಗು. (ರವಿ ನಾಗಮ್ಮ ಒಳಗೆ ಹೋಗುವರು)

## ಜಂಗಲ್ ರಸ್ತಾ

ಸುನಂದ - ಏನೋ ಅಂದ್ರಲ್ಲಾ ಭಾವಾ ಹಾ ಅದೇನೋ ಮನಸ್ಸಿನ ಸ್ವಾಧೀನ ಮೈ, ಮೈ

ಸ್ವಾಧೀನ ಕೈ. ಒಂದು ಸೋತರೆ ಇನ್ನೊಂದು ಸೋಲೋದು ಕಷ್ಟವಲ್ಲ. (ವಿಚಾರಿಸಿ) ಎಷ್ಟು ಅರ್ಥಗರ್ಭಿತಾಗಿ ಮಾತನಾಡಿದರು ಈ ಮಾತು ಅಷ್ಟೇ ಸತ್ಯವಿದೆ. ಹಾವು ಕಂಡು ಹೆದರಿ ಚಿಕ್ಕ ಭಾವನವರ ಕೈ ಮೇಲೆ ನನ್ನ ಮೈ ಚೆಲ್ಲಿದಾಗ ಎಂತಹದೋ ಒಂದು ಆನಂದ ಮನಸ್ಸಿಗಾಯಿತು. ಆ ಹಸ್ತಗಳು ನನ್ನ ಮೈ ತಬ್ಬಿಕೊಂಡಾಗ ಅವರು ಹಾಗೆ ನನ್ನ (ನಾಚಿ) ಆಗ್ಗ ಆದ ಅನುಭವ ನನ್ನೊಬ್ಬಳಿಗೇ ಅಲ್ಲ ಭಾವನಿಗೂ ಆಗಿತ್ತು. ಯಾಕೆಂದರೆ ಅವರ ಕಣ್ಣಲ್ಲಿ ಯಾಚನೆ ಮೂಡಿತ್ತು. ನನ್ನ ಮನದಲ್ಲಿ ಭಾವನ ತೋಚಿತ್ತು. ಅದೇ ಇರಬೇಕು, ಕವಿಗಳು ಕರೆಯುತ್ತಿರುವ ಪ್ರೇಮ

॥ ಪದ ॥

ಸುನಂದ - ಒಲಿದ ಪುರುಷನ ಮಿಲನ । ಬಯಸುವದು ತರುಣ
ಮನ । ಈ ಬಯಕೆ ಗಾನಿಪುದು । ಅರಳಿನಯನ ।
ಮಾವ ಎದುರಿಗೆ ಬರಲು । ತನುವು ಅರಳುವದು ।
ಇರದಿರಲು ಈ ಮನದಿ ವಿರಹ ಕೆರಳುವದು ।
ಸರಸವಿರಸಗಳೆರಡು ಹೊಸದು ರಚಿಸಿದ ಮದನ ।
ಯೌವ್ವನದ ಸ್ತ್ರೀ ಪುರುಷರೆದೆಯಲ್ಲಿ ಸದನ ॥ ೧ ॥

(ಶೇಖರ ಬರುವನು) ಇದೇನು ಮಾಮಾ, ತೋಟಕ್ಕೆ ಹೋಗಿದ್ದಿರೇನು?

ಶೇಖರ - ಹೌದು

ಸುನಂದ - ತೋಟದಿಂದಾ ಬರೀಕೈ ಬೀಸತಾ ಬಂದಿರಲ್ಲ, ಏನಾದರೂ ಹಣ್ಣು - ಹಂಪಲ ತಂದು ಕೊಡಬಾರದೇನು ಈ ನಿಮ್ಮ ಸೊಸೆಗೆ. ಒಳ್ಳೇ ಮಾವ ನೀವು

ಶೇಖರ - ಹಣ್ಣು ತಿನ್ನುವ ಬಯಕೆಯಿದ್ದರ ಮಣ್ಣು ತುಳಿಯುತ್ತ ನನ್ನ ಜೊತೆ ತೋಟಕ್ಕೆ ಬರಬೇಕಾಗಿತ್ತು. ಅಂದ್ರೆ ನಿಮ್ಮ ಕಣ್ಣು ಬಯಸಿದ ಹಣ್ಣು ಹರಿದು ಕೊಡುತ್ತಿದ್ದೆ. ತಿನ್ನತಿದ್ರಿ

ಸುನಂದ - ಯಾಕೆ ಮನೆಯಲ್ಲಿದ್ರೆ ಹಣ್ಣು ಸಿಕ್ಕಲಿಕ್ಕಿಲ್ಲೇನ್ರಿ ಮಾವ ? ಹೆಣ್ಣು ಬಯಸಿದರೆ ಹಣ್ಣಿಗೇನ್ರಿ ಬರ ?

ಶೇಖರ - ಅಂದ್ರ ಏನ್ರಿ ! ಆಕಳು ಅಟ್ಟದ ಮೇಲೆ ಕರು ಬೆಟ್ಟದ ಮೇಲೆ ಇದ್ದುಬಿಟ್ಟರೆ ಹೊಟ್ಟೆಗೆ ಸಿಕ್ಕುತ್ತೇನ್ರಿ ! ಕಲ್ತವರ ಬುದ್ಧಿ ಕಡಿವರೆಗೂ ಇಷ್ಟೇ ಅಂದಾಂಗ ಅಯಿತಲ್ಲ

ಸುನಂದ - ನೀವು ಕಲೀದಿದ್ರು ಕಲಿತವಳಾದ ನನ್ನ ಬಾಯಿ ಮುಚ್ಚಿಸಬೇಕು ಅಂತ ಬಯಸತೀರಿ. ಆಗಲ್ರಿ ನಾನೂ ಒಂದು ಕೈ ನೋಡತೇನಿ

ಶೇಖರ - ನಿಮ್ಮ ಕೈ ಒಂದೇ ಯಾಕರಿ ಮೈ ಮನಸ್ಸು ಕೂಡೇ ನೋಡಿ ಬಿಟ್ಟೇನಲ್ಲ.

ದೇವರ ಇಷ್ಟಕ್ಕೆ ಬಂದರೆ ಯಾವದೂ ಕಷ್ಟವಿಲ್ಲ ಸುನಂದಾ ಬಾಯಿಯವರ

ಸುನಂದ - ಏನ್ರಿ ಅದು ಗುಟ್ಟಿನ ಮಾತು

ಶೇಖರ - ಗುಟ್ಟಿನ ಮಾತು ಯಾಕ್ರಿ ಸ್ಪಷ್ಟವಾಗಿಯೇ ಆಡಿದೆನಲ್ಲ, ಮಾಡಿಕೊಳ್ರಿ ತಲೆ ಇದ್ರೆ ಈ ಮಾತಿಗೆ ಅರ್ಥಾನ (ಹೋಗುವನು)

ಸುನಂದ - ಕಲೀದಿದ್ರೂ ಮಾವ ಒಳ್ಳೇ ತೂಕದಾಗೇ ಮಾತಾಡ್ತಾರೆ. ಇಂತಹ ಮಾತು ಬಲ್ಲವರ ಜೊತೆ ಕಾಲ ಹಾಕುವದು ನನಗಂತೂ ಬಲು ಇಷ್ಟ. ಪಾಪ ಇವರೂ ಕಲಿಯಬಾರದಾಗಿತ್ತೇ. ಕಲಿತವರಾಗಿದ್ದರೆ ಇವರನ್ನೇ ನಾನು ಛೀ ಹಾಳು ಮನಸ್ಸು ಬಲು ಬೇಗನೇ ಮೋಸ ಹೋಯಿತು. ಯಾರನ್ನು ಕಂಡರೂ ಬಾರದ ಒಂದು ಬಗೆಯ ಮಾತು. ಈ ದಿಟ್ಟತನ, ವಿಶಾಲ ಹೃದಯ ಕಲಿತವರಾಗಿದ್ರೆ ಇವೆಲ್ಲ ನನ್ನವಾಗುತ್ತಿದ್ದವಲ್ಲ ಅಂತ... ಇಲ್ಲ ನಾನ್ನೇ ಅವರವಳು ಆಗುತ್ತಿದ್ದೆ. ಆದರೆ ಈಗೇನಾಯಿತು ? ಈಗಲಾದರೂ ಸಾಧ್ಯವಿದೆಯಲ್ಲ. ಛೀ ಒಲ್ಲೆನಮ್ಮ (ಹೋಗುವಳು)

## - ಮನೆ ಸೀನು -

ರಾಮಣ್ಣ - ಶ್ಯಾಮಣ್ಣನವರೇ ಇನ್ನು ನಾಲ್ಕು ದಿನ ಇದ್ದು ಹೋಗಬಾರದೇ ಈಗಲೇ ಏನವಸರ !

ಶ್ಯಾಮಣ್ಣ - ರಾಮಣ್ಣವರೆ, ನನ್ನ ಮನೆಯ ಸ್ಥಿತಿಗತಿ ನಿಮಗೇನೂ ಹೊಸತಲ್ಲ. ಇದ್ದವರು ಮೂವರೂ ಬಂದಿದ್ದೇವೆ. ಮುಚ್ಚಿದ ಅಂಗಡಿಯನ್ನು ಪುನಃ ನಾನು ಹೋದ ನಂತರವೇ ತೆರೆಯಬೇಕು. ನಾಲ್ಕು ದಿನ ತಡೆದು ಹೋದರೆ ಬರುವ ನಾಲ್ಕು ಗಿರಾಕಿಗಳು ಬೇರೆ ಕಡೆಗೆ ಹೋಗಿ ಬಿಡುತ್ತವೆ. ಅಲ್ಲದೆ ಮಗಳು ನಿಮ್ಮ ಮನೆಯಲ್ಲಿ ಸುಖವಾಗಿರುತ್ತಾಳಂತ ನಂಬಿಗೆ ನಮಗಿದೆ. ರಾಮಣ್ಣನವರೆ, ತಾಯಿಯನ್ನು ಕಳೆದುಕೊಂಡ ಬಳಿಕ ನನ್ನ ಪೋಷಣೆಯಲ್ಲಿ ಮುದ್ದಾಗಿ ಬೆಳೆದ ನನ್ನ ಮಗಳನ್ನು ನಿಮ್ಮ ಕೈಗಿಟ್ಟು ಹೊರಟಿದ್ದೇನೆ. ತಪ್ಪಿ ನಡೆದಲ್ಲಿ ತಿಳಿಹೇಳಿ ತಿದ್ದಿಕೊಳ್ಳಿರಿ

ರಾಮಣ್ಣ - ಶ್ಯಾಮಣ್ಣನವರೇ, ಆ ಬಗ್ಗೆ ನೀವೇನೂ ಯೋಚಿಸಬೇಡಿ, ಮನೆ ತುಂಬಿದ ನಾಗಮ್ಮಳನ್ನು ಮಗಳೆಂದು ತಿಳಿದು ಕಾಪಾಡುತ್ತೇನೆ

ಶ್ಯಾಮಣ್ಣ - ಅದನ್ನು ಬಂದಾಗಲೇ ಅರಿತುಕೊಂಡಿದ್ದೇನೆ. ನೋಡಮ್ಮ ! ನಾಗು, ಈ ಮನೆಗೆ ನೀನು ಸೊಸೆಯಾಗಿ ಬಂದ ದಿನವೇ ನಿನ್ನ ಮಾವ ಮನೆಯ ಸರ್ವಾಧಿಕಾರ ನಿನ್ನ ಕೈಗೆ ಕೊಟ್ಟಿದ್ದಾರೆ. ಅವರ ವಿಶ್ವಾಸಕ್ಕೆ ಪಾತ್ರಳಾಗಿ, ಈ ಮನೆ ಬೆಳಗು ತಾಯೀ, ನಮ್ಮ ಮನೆಯಲ್ಲಿ ಹೆಣ್ಣಾಗಿ ಹುಟ್ಟಿದ ನೀನು ಈ ಮನೆಯ ಕಣ್ಣಾಗಿ ಬಾಳು. ಮೈದುನನ್ನು ಮಗನಂತೆ ಕಾಣು. ಗಂಡನನ್ನು

ಗೌರವದಿಂದ ನೋಡು, ಮಾವನನ್ನು ದೇವರೆಂದೇ ಭಾವಿಸು. ಅದು ನಿನ್ನ ಜೀವನದ ಸಾರ್ಥಕತೆಯೆಂದರಿತುಕೋ. ಗಂಡನ ಮನೆಯವರಿಗಂಜಿ ಬಾಳುತ್ತ ಮುತ್ತೈದಿತನದ ಮಹತ್ವ ತಿಳಿದು ಅದನ್ನು ಚಿರಕಾಲ ಉಳಿಸಿಕೊಳ್ಳಮ್ಮ

ನಾಗಮ್ಮ - ಅಪ್ಪಾ (ದುಃಖಿಸುವಳು)

ಶ್ಯಾಮಣ್ಣ - ದೇವರು ನಿನಗೆ ಒಳ್ಳೇಯದು ಮಾಡಲಮ್ಮ. ಬೇಗನೇ ಒಂದು ಮಗುವಿನ ತಾಯಿಯಾಗು. ಹೋಗಿ ಬರುತ್ತೇನಮ್ಮ, ಮಗೂ ಸುನಂದಾ

ರಾಮಣ್ಣ - ಶೇಖರಾ, ಗಾಡಿ ಸಿದ್ದವಾಗಿದೆಯೇನೋ ?

ಶೇಖರ - ಸಿದ್ಧವಾಗಿದೆಯೆಪ್ಪ

ರಾಮಣ್ಣ - ಹಾಗಿದ್ದರೆ ಇವರನ್ನು ಕಳಿಸಿ ಬರಲಿಕ್ಕೆ ಸ್ಟೇಶನ್ನಿನವರೆಗೂ ನೀನೇ ಹೋಗಿ ಬಾ

ಶೇಖರ - ಆಗಲೆಪ್ಪ ಹೋಗುತ್ತೇನೆ. (ಸುನಂದ, ಶ್ಯಾಮಣ್ಣ ಹೋಗುವರು. ಉಳಿದವರು ಅವರನ್ನು ಕಳಿಸಿ ಬರುವರು)

ತಾರಕ್ಕ - ಅಪ್ಪಾ ನಾನು ಇವತ್ತೇ ಊರಿಗೆ ಹೊರಡುತ್ತೇನಪ್ಪ?

ರಾಮಣ್ಣ - ಇದೇನಮ್ಮಾ ನಿನ್ನ ಮಾತು

ತಾರಕ್ಕ - ಯಾವ ಕಾರಣಕ್ಕಾಗಿ ತವರು ಮನೆಗೆ ಬಂದಿದ್ದೇನೋ ಆ ಕಾರ್ಯ ಮುಗಿಯಿತಲ್ಲ. ನಾಗವೇಣಿಯನ್ನು ಮನೆ ತುಂಬಿಸಿಕೊಂಡ ಬಳಿಕ ಮತ್ತೇನಪ್ಪ ನಿಮ್ಮ ಮನೆಯಲ್ಲಿ ನನ್ನ ಕೆಲಸ

ರಾಮಣ್ಣ - ಹೀಗಂದ್ರೇನಮ್ಮಾ, ಹೊಸದಾಗಿ ಮನೆ ತುಂಬಿದ ನಾಗಮ್ಮಳಿಗೆ ಈ ಮನೆಯ ಪರಿಚಯ ಮಾಡಿಕೊಡುವುದಿಲ್ಲವೇ

ತಾರಕ್ಕ - ನಿನ್ನ ಸೊಸೆಗೆ ನನ್ನ ಅವಶ್ಯಕತೆಯಿಲ್ಲವಪ್ಪ, ದಯವಿಟ್ಟು ನನ್ನ ಕಳಿಸಿಕೊಡು. (ಎಲ್ಲರೂ ತಿರುಗಿ ಬರುವರು)

ರಾಮಣ್ಣ - ನೋಡೋ ರವಿ, ನಿಮ್ಮಕ್ಕ ಇವತ್ತೇ ಊರಿಗೆ ಹೊರಡುತ್ತಾಳಂತೆ

ರವಿ - ಅದಕ್ಕೆ ನಾನೇನು ಮಾಡಲಪ್ಪ ಹೋಗುವದಾಗಿ ಹಟ ಹಿಡಿದ ಅಕ್ಕನನ್ನು ಹಗ್ಗದಿಂದ ಬಂಧಿಸಲಾಗುತ್ತದೆಯೇ ? ಹೋದರೆ ಹೋಗಲಿ ಬಿಡಪ್ಪ

ರಾಮಣ್ಣ - ಏ ಹುಚ್ಚಾ ಮನೆಯ ಹೆಣ್ಣು ಮಗಳು ಮನಸ್ಸು ನೊಂದುಕೊಂಡು ಹೋದರೆ ನಿನಗೆ ಶ್ರೇಯಸ್ಸಲ್ಲ. ನಾಲ್ಕು ದಿನ ತಡೆದು ಹೋಗೆಂದು ನಿನ್ನಕ್ಕನ ಪಾದಕ್ಕೆ ಬಿದ್ದು ಬೇಡಿಕೋ

ರವಿ - ಛೇ, ಇದು ನನ್ನಿಂದ ಸಾಧ್ಯವಿಲ್ಲಪ್ಪ

ತಾರಕ್ಕ - ಮಡದಿ ಮನೆಗೆ ಬಂದಬಳಿಕ, ಅಕ್ಕನ ಅಡಿಗೆ ಎರಗಲು ಮನಸ್ಸು ಹೇಗೆ ಒಪ್ಪೀತಪ್ಪಾ. ಮಡದಿಯ ಮುದ್ದಾದ ಮುಖ ಮುಂದೆ ಬಂದಾಗ ಹಡೆದವರ

ಮುಖ ಹಳಿಯದಾಗಿ ಹಿಂದೆ ಸರಿಯುತ್ತದೆ. ಅಂದಬಳಿಕ ಇನ್ನು ಒಡಹುಟ್ಟಿದ ಅಕ್ಕ ಇವನಿಗಾವ ಲೆಕ್ಕ

ನಾಗಮ್ಮ - ಕೇಳದಿರೇನ್ರಿ ನಿಮ್ಮಕ್ಕನ ಮಾತ್ನ, ಗಂಡ ಹೆಂಡರಾದ ನಾವು ಅಕ್ಕರತೆಯಿಂದ ಬಾಳಿದರೆ ಇವರಿಗೇನು ವಕ್ಕರಿಸಿತೋ ಹೇಳ್ರಿ ಅವರಿಗೆ. ಇನ್ನು ಮೇಲಿಂದ ಈ ಮನೆಯಲ್ಲಿ ಸಿಕ್ಕಂತೆ ಮಾತನಾಡಿ ದಕ್ಕಿಸಿಕೊಳ್ಳುವ ದರ್ಪ ಹೊರಟುಹೋಯಿತು ಅಂತಾ ತಿಳಿಯಿರಿ. ತಾರಕ್ಕನವರೇ ಹೆಣ್ಣು ತನ್ನ ಅಧಿಕಾರ ಸ್ಥಾಪಿಸುವದು ಹುಟ್ಟಿದ ಮನೆಯಲ್ಲಿ ಅಲ್ರಿ ತಾಳಿ ಕಟ್ಟಿದ ಮನೆಯಲ್ಲಿ

ತಾರಕ್ಕೆ - ಕೇಳಿದಿಯೇನಪ್ಪ, ರವಿ ನಿನ್ನ ಮಡದಿಯ ಮಾತನ್ನು ಹೊಸದಾಗಿ ನಡೆಯಲು ಬಂದ ಇವಳು ಈಗಲೇ ನಿಷ್ಠುರವಾಗಿ ಆಡಿದ ಮೇಲೆ ಮುಂದೆ ನಿನ್ನ ಜೊತೆ ಹೇಗೆ ನಡೆದುಕೊಂಡಾಳು ಅನ್ನೋದನ್ನ ಸ್ವಲ್ಪ ವಿಚಾರ ಮಾಡು. ಅಪ್ಪಾ ನಿನ್ನ ಮಗನಿಗೆ ಇವಳನ್ನು ಬಿಟ್ಟರೆ ಬೇರೆ ಎಲ್ಲಿಯೂ ಕನ್ಯೆ ಸಿಕ್ಕುತ್ತಿರಲಿಲ್ಲವೇ? ನೋಡಪ್ಪ ನನ್ನ ಸೊಸೆ ಕಲಿತ ಸೊಸೆ ಅಂತ ಕುಣಿದಾಡುತ್ತಿದ್ದಿಯಲ್ಲ. ಕಂಡು ಸಂತೋಷಪಡು

ರಾಮಣ್ಣ - ತಾರಕ್ಕ ಏನಮ್ಮಾ ಇದು. ತಿಳಿಯಲಾರದ ಹುಡುಗಿ ಬುದ್ಧಿಯಿಲ್ಲದೆ ಸಿಟ್ಟಿನ ಭರದಲ್ಲಿ ಎರಡು ಮಾತು ಅಂದರೆ ತಿಳಿದವಳಾದ ನೀನು ಮನಸ್ಸಿಗೆ ಹಚ್ಚಿಕೊಳ್ಳುವದೇ ? ಪಾಪ ಇನ್ನೂ ಸಣ್ಣವಳು

ತಾರಕ್ಕ - ಸಣ್ಣವಳು ಅಂತ ನಿನ್ನ ಸೊಸೇನ ಕಣ್ಣಲ್ಲಿಟ್ಟುಕೊಂಡು ಜೋಪಾನ ಮಾಡಪ್ಪ, ನಾನೇಕೆ ಬೇಡವೆನ್ನಲಿ. (ಒಳಗೆ ಹೋಗುವಾಗ ಬಸವಂತ ಬರುವನು)

ಬಸವಂತ - (ಅಳುತ್ತ ಬರುವನು) ಯವ್ವಾ ತಾರಮ್ಮನವರ... ಏನಾಗಿ ಹೋಯಿತರಿ ಯವ್ವಾ ! ಎಲ್ಲಾ ನಿಮ್ಮ ಮನಿ ಮುಳುಗಿತರಿ ಯವ್ವಾ. ಪೂರಾ ಮುಳುಗೇ ಹೋಯಿತ್ರಿ ಯವ್ವಾ

ತಾರಕ್ಕೆ - ಯಾರು ಬಸವಂತಪ್ಪ ಏನಾಯಿತು ಹೇಳಪ್ಪ ?

ಬಸಂತ - ಯಾವ ಮುಖದಿಂದ ಹೇಳಲಿ ಯವ್ವಾ ಆ ಸುದ್ದೀನ. ಸಟ್ಟಾ ವ್ಯಾಪಾರದಾಗ ಎಲ್ಲಾ ನಷ್ಟವಾಗಿ ನಮ್ಮಂಗಡಿ ಬೀಗ ಹಾಕಿ ಶೀಲ್ ಮಾಡಿ ಅಪ್ಪಾರನ್ನ ಕಚೇರ್ಯಾಗ ಕುಂದರಸ್ಯಾರ್ರಿ ಯವ್ವಾ ತಗೊಳ್ರಿ ಈ ಪತ್ರಾನ

ರಾಮಣ್ಣ - ನೋಡು ರವಿ, ಏನು ಬರೆದಿದ್ದಾನ ಓದು

ರವಿ - (ಓದುವನು) ಸೌ. ತಾರಾದೇವಿಗೆ, ನಿನ್ನ ಪತಿ ತಿಳಿಸುವದೇನಂದರೆ ಸಟ್ಟಾ ವ್ಯಾಪಾರದಲ್ಲಿ ನಷ್ಟವಾಗಿ ನನ್ನ ಆಸ್ತಿಯೆಲ್ಲ ಹರಾಜ ಆಗಿ ಹೋಯ್ತು. ಅಲ್ಲದೆ ಸದ್ಯ ಮೂರು ಸಾವಿರ ರೂಪಾಯಿ ತುಂಬಿದರೆ ಮಾತ್ರ ನನ್ನ ಮಾನ ಉಳಿಯುತ್ತದೆ. ಇಲ್ಲದಿದ್ದರೆ ಮಾನಹಾನಿಯಾಗುವದು ಖಂಡಿತ. ಮಾನ

ಅಳಿದ ಬಳಿಕ ಪ್ರಾಣವನ್ನಿಡಲು ನಾನು ಸಿದ್ದನಿಲ್ಲ. ಕಾರಣ ನೀನು ನಿನ್ನ ತಂದೆಯವರಿಂದ ಮೂರು ಸಾವಿರ ರೂಪಾಯಿ ತೆಗೆದುಕೊಂಡು ಬರಬೇಕು. ತಡೆದು ಬಂದರೆ ಕೆಲಸ ಕೆಡುವದಲ್ಲದೆ ನನ್ನ ದರ್ಶನ ದುರ್ಲಭವಾಗುವದು. ಇದರ ಮೇಲೆ ನಿನ್ನ ಇಷ್ಟ. ಇತಿ ನಿನ್ನ ನಿರ್ಭಾಗ್ಯ ಪತಿ

ತಾರಕ್ಕ - ಅಪ್ಪ ಏನಾಯಿತಪ್ಪ ನನ್ನ ಬಾಳು. (ಅಳುವಳು)

ರಾಮಣ್ಣ - ಮಗೂ ತಾಳಮ್ಮ ಧೈರ್ಯ ತಾಳು

ನಾಗಮ್ಮ - (ರವಿಗೆ) ಬನ್ನಿ ನಿಮಗೆ ಕುಡಿಯಲೆಂದು ಕಾಯಿಸಿಟ್ಟ ಹಾಲು ಆರಿ ತಣ್ಣಗಾಗುತ್ತದೆ

ರವಿ - ಆಗಲಿ ನಡೆ. (ಒಳಗೆ ಹೋಗುವನು)

ಬಸವಂತ - ಯವ್ವಾ ಏನಾದರೂ ಮಾಡಿ ದುಡ್ಡು ಕೂಡಿಸಿಕೊಂಡು ಸದ್ಯ ನನ್ನ ಕೂಡ ಬರ್ರಿ. ಇಲದಿದ್ರ ಕೆಲಸ ಕೆಟ್ಟು ಹೋಗತೈತೆ. ಯವ್ವಾ ಇನ್ನ ಕಡಿಮೇ ಬಿದ್ದಿರೋದು ಬರೇ ಮೂರೇ ಸಾವಿರ ರೂಪಾಯಿ

ತಾರಕ್ಕ - ಮೂರು ಕಾಸು ಕೈಯಲ್ಲಿಲ್ಲದಾಗ ಮೂರು ಸಾವಿರ ಬಹಳವಲ್ಲವೇ ಅಪ್ಪ. ಮಗಳ ಕೊಟ್ಟ ತಪ್ಪಿಗೆ ಹಣಕೊಟ್ಟು ನನ್ನ ಬಾಳು ಭದ್ರಗೊಳಿಸುವಿಯೇನಪ್ಪ. ನಾಳೇನಾದರೂ ದೇವರು ಅನುಕೂಲಿಸಿದರೆ ನಿನ್ನ ಹಣ ಮರಳಿ ಕೊಡದಷ್ಟು ದುರುಳರಲ್ಲಪ್ಪ ನನ್ನ ಕೈಹಿಡಿದವರು. ಕೊಡುತ್ತೀಯಾ ಅಪ್ಪ

ರಾಮಣ್ಣ - ಮಗೂ ತಾರಾ, ಕೊಡಬಾರದೆಂದಲ್ಲವಮ್ಮಾ... ಮಗಳಿಗೆ ಬಂದ ಸಂಕಟ ತಂದೆಯಾದ ನನ್ನ ಗಂಟಲಿಗೆ ಕಾಲಕೂಟ ಮಗೂ, ಈಗ ನಿನ್ನ ತಂದೆಯ ಕೈಯಲ್ಲಿ ಹಣಕಾಸಿನ ಯಾವ ಅಧಿಕಾರವೂ ಉಳಿದಿಲ್ಲ. ನಾನೀಗ ನಿರುಪಾಯ ನಮ್ಮ ನಿರುಪಾಯ. ನಿನ್ನ ಒಡಹುಟ್ಟಿದ ತಮ್ಮಂದಿರಿದ್ದಾರೆ. ಮನೆ ಸೊಸೆ ನಾಗಮ್ಮ ಇದ್ದಾಳೆ. ಕೇಳಮ್ಮ ಅವರನ್ನು

ತಾರಕ್ಕ - ಆಪತ್ತಿನಲ್ಲಿ ಅಕ್ಕನಿಗೆ ನೆರವು ನೀಡುವ ಉದಾರ ಗುಣ ತಮ್ಮನಲ್ಲಿದ್ದರೆ ನನ್ನ ಈ ಸಂಕಟ ಸಮಯದಲ್ಲಿ ಹಾಲು ಕುಡಿಯಲು ಮಡದಿಯ ಬೆನು ಹತ್ತಿ ಹೋಗುತ್ತಿದ್ದನೇ ? ಇನ್ನು ನಾಗಸರ್ಪದಂತಹ ನಾಗಮ್ಮ ನನ್ನ ಬಾಳಿಗೆ ಸಹಾಯ ದೊರೆಯುವದಿರಲಿ, ಸಮಾಧಾನದ ಎರಡು ಮಾತು ಕೂಡಾ ಆಕೆ ಬಾಯಿಂದ ಬರಲಾರವು ನಾ ಕೇಳಲಾರೆನಪ್ಪ ಅವರಲ್ಲಿ ನಾ ಕೇಳಲಾರೆ

ರಾಮಣ್ಣ - ನೀನು ಬೇಡಮ್ಮ ನಾನೇ ಕೇಳುತ್ತೇನೆ. ಪಾಪ ಬಸವಂತ ಹಸಿದು ಬಂದಿದ್ದಾನೆ. ಕಾಫಿನಾದ್ರು ಮಾಡಿಕೊಡು. ಹೋಗು ನಾನಿದ್ದೇನೆ ಹೋಗಮ್ಮ. (ತಾರಕ್ಕ, ಬಸವಂತ ಒಳಗೆ ಹೋಗುವರು) ರವೀ... ರವೀ...

ರವಿ - (ಬಂದು) ಯಾಕಪ್ಪ ಕೂಗಿದೆ. (ನಾಗಮ್ಮನೂ ಬಂದು ನಿಲ್ಲುವಳು)

ರಾಮಣ್ಣ - ಅಹುದಪ್ಪ ನೋಡು ರವಿ, ನಿಮ್ಮಕ್ಕನಿಗೆ ಬಂದ ಸಂಕಟ ನಿನಗೂ ತಿಳದೇ ಇದೆ. ಈಗ ನಾವು ಧೈರ್ಯ ಮಾಡಿ ಅವಳಿಗೆ ನೆರವು ನೀಡದೆ ಹೋದರೆ ಅವಳ ಬಾಳು ಹಾಳಾಗಿ ಹೋಗುವದರಲ್ಲಿ ಸಂದೇಹವಿಲ್ಲ

ನಾಗಮ್ಮ - ಅಷ್ಟು ಹಣ ಅವರಿಗೆ ಹುಟ್ಟುವ ಬಗೆಯಂತು ಮಾಮಾ

ರಾಮಣ್ಣ - ಮನೆಯಲ್ಲಿದ್ದ ಹಣ ಅರ್ಧದಷ್ಟಾದರೂ ಆಗಬಹುದು. ಉಳಿದದ್ದನ್ನು...

ನಾಗಮ್ಮ - ಒಳಗೆ ಹೋಗಿ ನಾನು ಪೆಟ್ಟಿಗೆ ತೆಗೆದು ಎಣಿಸಿದೆ. ಸಾವಿರಕ್ಕೆ ಇನ್ನೂ ಸ್ವಲ್ಪ ಕಡಿಮೆಯಿದೆ. ಸಂಸಾರವೆಂದ ಬಳಿಕ ಇಷ್ಟೂ ಇರಬೇಡವೇ ? ನಾಳೆ ಹೊತ್ತು ಹೇಳಿಕೇಳಿ ಬರುತ್ತದೇನು ?

ರವಿ - ಅಂದರೆ ಈಗ ನಾನು ಮೂರುಸಾವಿರ ರೂಪಾಯಿ ಹೊರಗೆ ಸಾಲ ಮಾಡಿ ತಂದುಕೊಡಬೇಕೇನು ?

ನಾಗಮ್ಮ - ಹೌದು ಅಕ್ಕನ ಬಗ್ಗೆ ಅಭಿಮಾನ ವ್ಯಕ್ತಪಡಿಸಬೇಕಿದ್ದರೆ ತಂದುಕೊಡಬೇಕು

ರವಿ - ಅಷ್ಟು ಹಣ ನನಗೆಲ್ಲಿ ಹುಟ್ಟಬೇಕು

ರಾಮಣ್ಣ - ಸಂಘದಲ್ಲಿ ನೀನು ಕೇಳಿದರೆ ಮೂರು ಸಾವಿರ ಸಾಲ ಹುಟ್ಟಲಾರದೇನು?

ನಾಗಮ್ಮ - ನೌಕರಿ ಮಾಡುವ ಇವರಿಗೆ ಸಾಲ ಬೇರೆ ಕೊಡುತ್ತಾರೇನು ಸಂಘದವರು ?

ರವಿ - ನಾನು ಜಾಮೀನು ಕೊಡುವದಾದರೆ ಕೊಡಬಹುದು

ನಾಗಮ್ಮ - ಯಾವದಕ್ಕೂ ನಾಲ್ಕು ದಿನ ತಡೆಯಿರಿ. ದುಡುಕಿ ಕೆಡಕು ತಂದುಕೊಳ್ಳುವದು ಬೇಡ

ರಾಮಣ್ಣ - ಅಂದರೆ ನಾವು ತಡೆದಂತೆ ತಾರಕ್ಕನ ಗಂಡನಿಗೆ ಸಾಲ ಕೊಟ್ಟವರಾಗಲಿ ಸರಕಾರದವರಾಗಲೀ ತಡೆದುಕೊಳ್ಳುವರೇನಮ್ಮ ?

ನಾಗಮ್ಮ - ಸಾಲ ಕೊಟ್ಟ ಮಾತ್ರಕ್ಕೆ ಶೂಲವಿಟ್ಟು ಹಣ ಪಡೆದುಕೊಳ್ಳಲು ಬರುವದೇನು ? ನೀವೇನು ಅಷ್ಟು ಗಾಬರಿಯಾಗಬೇಕಿಲ್ಲ. ಸದ್ಯ ತಾರಕ್ಕ ತಮ್ಮ ಊರಿಗೆ ಹೋಗಲಿ. ಬಳಿಕ ನಾವೆಲ್ಲ ನಿಧಾನವಾಗಿ ವಿಚಾರ ಮಾಡೋಣಂತೆ

ರವಿ - ಅಹುದಪ್ಪ ಸದ್ಯ ಅಕ್ಕ ತನ್ನೂರಿಗೆ ಹೋಗಲಿ, ಆ ಮೇಲೆ ನೋಡೋಣವಂತೆ

ರಾಮಣ್ಣ - ರವಿ, ಈಗ ನೀನು ನಿನ್ನಕ್ಕನನ್ನು ಬರಿಗೈಯಿಂದ ಕಳಿಸಿದರೆ ಮರಳಿ ನಾನು ಅವಳ ಹೆಣವನ್ನೇ ಕಾಣಬೇಕಾದೀತೋ. ಈಗ ನಾವು ಸಹಾಯ ಮಾಡಿದರ ಮುಂದೆ ಅವರೂ ನಮಗೆ ಸಹಾಯ ಮಾಡುತ್ತಾರೆ

ರವಿ - ಅಪ್ಪ ಯಾವುದಕ್ಕೂ ನಾನೆಲ್ಲ ವಿಚಾರ ಮಾಡುತ್ತೇನೆ. ಸದ್ಯ ಅಕ್ಕನಿಗೆ ಊಟ ಮಾಡಲಿಕ್ಕೆ ಹೇಳು. (ರಾಮಣ್ಣ ಒಳಗೆ ಹೋಗುವನು) ನೋಡೇ ನಾನು ಸಂಘದಲ್ಲಿ ಸ್ವಲ್ಪ ಪ್ರಯತ್ನ ಮಾಡಿದರೆ ಅಕ್ಕನಿಗೆ ಬಂದ ಆಪತ್ತು ದೂರಾಗುತ್ತದೆ

ನಾಗಮ್ಮ - ದುಡುಕು ಸ್ವಭಾವವನ್ನು ದಯವಿಟ್ಟು ಸ್ವಲ್ಪ ಕಡಿಮೆ ಮಾಡಿ. ಇದು ಸಂಸಾರ, ಎಷ್ಟು ನಿಧಾನಿಸಿ ತಿಳಿದು ಹೆಜ್ಜೆಯಿಟ್ಟರೂ ಕಾಲಿಗೆ ಕೆಸರು ಹತ್ತದೇ ಇರಲಾರದು. ನಿಮಗೆ ಸಂಘದಲ್ಲಿ ಮೂರುಸಾವಿರ ಸಾಲ ಹುಟ್ಟುವದು ದೊಡ್ಡ ಮಾತಲ್ಲ. ಆದರೆ ಹುಟ್ಟಿಸಿ ಕೊಟ್ಟ ಹಣ ನಾಳೆ ನಿಮ್ಮ ಕೈಸೇರಿ ನೀವು ಮಾಡಿದ ಸಾಲದಿಂದ ಮುಕ್ತರಾಗುವಿರೆಂಬ ನಂಬಿಗೆ ಇದೆಯೇನು ?

ರವಿ - ಯಾಕೆ ತಾರಕ್ಕನ ಗಂಡ ವಂಚಿಸುವರೆಂಬ ಭಯವೇ ?

ನಾಗಮ್ಮ - ಕಾಂಚನದ ವಿಷಯಕ್ಕೆ ವಂಚನೆಯ ಮಾತೇನೂ ಈ ಪ್ರಪಂಚಕ್ಕೆ ಹೊಸದಲ್ಲ. ಕೊಟ್ಟು ಮುಂದೆ ಕೆಟ್ಟವರಾಗುವದಕ್ಕಿಂತ ಇಲ್ಲವೆಂದು ಈಗ ನಿಷ್ಠುರವಾಗುವದೇ ಒಳ್ಳೇದು. ಇದರ ಮೇಲೆ ನಿಮ್ಮಿಷ್ಟ

ರವಿ - ಒಟ್ಟಾರೆ ಕೊಡುವದು ಬೇಡವೆಂದು ನಿನ್ನ ಅಭಿಪ್ರಾಯವೇನು ?

ನಾಗಮ್ಮ - ಹಾಗಲ್ಲ, ತಾರಕ್ಕನಿಗೆ ಒಡಹುಟ್ಟಿದವರು ನೀವು ಒಬ್ಬರೆ ಅಲ್ಲ. ಇನ್ನೊಬ್ಬ ತಮ್ಮನಿದ್ದಾನೆ. ಸಾಲಮಾಡಿ ಸಹಾಯ ಮಾಡುವುದೇ ಆದಲ್ಲಿ ಶೇಖರನ ಹೆಸರಿನಲ್ಲೇಕೆ ಸಾಲ ಮಾಡಬಾರದು. ಸಾಲ ಶೇಖರನ ಹೆಸರಿನಲ್ಲಾಗಲಿ, ಸಹಾಯ ನಿಮ್ಮ ಹೆಸರಿನಲ್ಲಾಗಲಿ

ರವಿ - ಹಿರಿಯಣ್ಣ ನಾನಿದ್ದು ತಮ್ಮನ ಹೆಸರಿನಲ್ಲಿ ಸಾಲ ಮಾಡಿದರೆ ನಾಳೆ ಜನ ನನಗೇನಂದಾರು ?

ನಾಗಮ್ಮ - ಜನರೇನು ನೂರು ಅನ್ನುತ್ತಾರೆ. ಆದರೆ ಕಡಿಮೆ ಬಿದ್ದಾಗ ಕೊಡುವ ಉದಾರಿಗಳಿದ್ದಾರೇನು ? ನೋಡಿ ಗೋಪಣ್ಣನಿಗೆ ಹೇಳಿ ಸಾಲ ತೆಗೆದುಕೊಟ್ಟು ಕಳಿಸಿರಿ. ಸಂಘದಲ್ಲಿ ನಿಮ್ಮ ಹೆಸರಿನಲ್ಲಿ ಸಾಲ ತೆಗೆದುಕೊಂಡರೆ ನೌಕರಿ ಮಾಡುವ ನೀವು ನಾಳೆ ಕಮಿಟಿ ಜನರ ಕಣ್ಣಲ್ಲಿ ಎಷ್ಟು ಸಣ್ಣಾಗುತ್ತೀರಿ ಗೊತ್ತೇ ! ಆಳಿನ ಬಾಳಿನಂತೆ ನಿಮ್ಮ ಯೋಗ್ಯತೆ ಕೀಳಾಗಿ ಹೋಗುತ್ತದೆ. ಅದೇ ಸಾಲ ಶೇಖರನ ಹೆಸರಿನಲ್ಲಾದರೆ ನಿಮಗೆ ತೊಂದರೆ ತಪ್ಪಿ, ಹಣಕ್ಕೆ ಒಂದು ಭದ್ರತೆಯಾಗುತ್ತದೆ. ತಿಳಿಯಿತೇನು ? (ಒಳಗೆ ಹೋಗುವಳು)

ರವಿ - ಹೌದು ಹಣಕ್ಕೆ ಭದ್ರತೆ ಬೇಕು, ಭದ್ರತೆಯಿಲ್ಲದೆ ಹಣವನ್ನು ಯಾರೂ ಯಾರಿಗೂ ಕೊಟ್ಟಿಲ್ಲ. ಕೊಡುವಂತೆಯೂ ಇಲ್ಲ. ಅಂದ ಬಳಿಕ ಆಧಾರ ಪತ್ರ ಬರೆದುಕೊಟ್ಟು ಮೂರುಸಾವಿರ ಹಣ ಸಂಘದಲ್ಲಿ ಸಾಲತಂದು ಆಪತ್ತಿನಲ್ಲಿದ್ದ ಅಕ್ಕನಿಗೆ ಕೊಟ್ಟರೆ ಆ ರೊಕ್ಕ ಮರಳಿ ಬರದಿದ್ದರೆ ಸಾಲ ಕೊಟ್ಟ ಸಂಘವು ನನ್ನನ್ನು ಸುಮ್ಮನೇ ಬಿಟ್ಟೀತೇ ? ಶೂಲವಿಟ್ಟಾದರೂ ಅದನ್ನು ಮುಟ್ಟಿಸಿಕೊಳ್ಳುತ್ತದೆ. ನಿಜ ನಾಗವೇಣಿಯ ಮಾತಿನಲ್ಲಿ ತತ್ತ್ವಾರ್ಥವಿದೆ. ಅಕ್ಕನಿಗೆ ಸಾಲ ಮಾಡಿ ಸಹಾಯ ಮಾಡುವದೇ ಆದಲ್ಲಿ ಸಾಲ ಶೇಖರನ ಹೆಸರಿನಲ್ಲಾಗಲಿ, ಸಹಾಯ ನನ್ನ ಹೆಸರಿನಲ್ಲಾಗಲಿ ಎಂದು ಆಕೆ ಹೇಳಿದ್ದು

ಯೋಗ್ಯವಿದೆ. ನನ್ನ ಹೆಂಡತಿಗೆ ಹೊಳೆದ ಈ ವ್ಯವಹಾರ ಜಾಣ್ಮೆ ನನಗೇಕೆ ಹೊಳೆಯಲಿಲ್ಲ. ಅದಕ್ಕೆ ಇರಬೇಕು ಹಣಕಾಸಿನ ಬಗ್ಗೆ ಮಾತು ಬಂದಾಗ ಹೆಂಡತಿಯ ಅಭಿಪ್ರಾಯ ಪಡೆದುಕೋ ಎಂದು ಅಪ್ಪ ಹೇಳಿದ್ರು. ಹೆಣ್ಣು ಹೇಳಿದ ಮಾತು ಅಂತ ಸಣ್ಣದು ಮಾಡಿದರೆ ನಾಳೆ ಮಣ್ಣು ತಿನ್ನಬೇಕಾದೀತು

ಶೇಖರ - (ಬಂದು) ಇದೇನಣ್ಣಾ ಹೀಗೇಕೆ ನಿಂತಿರುವಿ ?

ರವಿ - ಏನೆಂದು ಹೇಳಲಿ ಶೇಖರ, ಅಕ್ಕನ ಬಾಳು ಮಣ್ಣು ಪಾಲಾಗುವ ಪ್ರಸಂಗ ಬಂದಿದೆ

ಶೇಖರ - ಏನು ತಾರಕ್ಕನದೇ ಏನಾಯಿತಣ್ಣ ?

ರವಿ - ಆಗುವದೆಲ್ಲ ಆಗಿಯೇ ಹೋಯಿತು, ಭಾವ ಮಾಡುತ್ತಲಿದ್ದ ಸಟ್ಟಾ ವ್ಯಾಪಾರ ನಿನಗೆ ಗೊತ್ತಷ್ಟೇ ? ದುರ್ದೈವದಿಂದ ನಷ್ಟಕ್ಕೆ ತುತ್ತಾಗಿ ಮನೆಮಾರು ಎಲ್ಲವನ್ನು ಕಳೆದುಕೊಂಡು ಪರದೇಸಿಯಾಗಿದ್ದಾರೆ. ಅಲ್ಲದೆ ಕಡಿಮೆ ಬಿದ್ದ ನಷ್ಟದ ಮೂರು ಸಾವಿರ ಹಣ ಶೀಘ್ರದಲ್ಲಿ ತುಂಬದಿದ್ದರೆ ಮಾವನಿಗೆ ಜೇಲಾಗುತ್ತದಂತೆ. ಏನು ಮಾಡಬೇಕೆಂದು ತಿಳಿಯದಾಗಿದೆ

ಶೇಖರ - ಆ ಯಾರೆಷ್ಟು ಬೇಡವಂದರೂ ಬಿಡದೇ ಮಾಡುತ್ತ ಬಂದ ಸಟ್ಟಾ ವ್ಯಾಪಾರದಿಂದಲೇ ಮಾವ ಹಾಳಾದರು. ಅಣ್ಣಾ ಮುಂದೆ ಅವರ ಗತಿ ?

ರವಿ - ಆದ್ದರಿಂದಲೇ ಬಸವಂತಪ್ಪನ ಕೈಯಲ್ಲಿ ಪತ್ರಕೊಟ್ಟು ಕಳಿಸಿದ್ದಾರೆ. ಮೂರು ಸಾವಿರ ಹಣ ಅರ್ಜಂಟಾಗಿ ಕೊಟ್ಟು ಕಳಿಸಿರಿ ಅಂತ

ಶೇಖರ - ಹೌದು ಎಷ್ಟು ಬೇಗ ಕಳಿಸಿಕೊಟ್ಟರೆ ಅಷ್ಟು ಒಳ್ಳೇದು. ಮಾನಕ್ಕಿಂತ ಮಹತ್ವ ಮತ್ತೊಂದಿಲ್ಲ. ಪಾಪ ಸಿಡಿಲಿನಂತಹ ಈ ಸುದ್ದಿಯನ್ನು ಕೇಳಿ ಅಕ್ಕ ಭೂಮಿಗಿಳಿದಿರಬಹುದೇ ? ಬೇಗನೆ ಮೂರು ಸಾವಿರ ರೂಪಾಯಿ ಕೊಟ್ಟು ಕಳಿಸಿ ಬಿಡಣ್ಣಾ. ಆಪತ್ತು ಅಕ್ಕನಿಗೆ ಬಂದದ್ದು ಬೇರೆಯಲ್ಲ, ನಮಗೆ ಬಂದದ್ದು ಬೇರೆಯಲ್ಲ

ರವಿ - ಅಕ್ಕನ ಬಗ್ಗೆ ನನಗೂ ಅಕ್ಕರತೆಯಿದೆ ಶೇಖರ, ಆದರೆ ರೊಕ್ಕದ ವಿಷಯ ಅಷ್ಟೇ ಕಷ್ಟವಿದೆ. ನೂರೋ ಇನ್ನೂರೋ ಆಗಿದ್ದರೆ ಯಾರೂ ಲೆಕ್ಕ ಹಾಕಬೇಕಾಗಿರಲಿಲ್ಲ. ಮೂಲ ಮೊತ್ತ ಮೂರುಸಾವಿರ ಹಣ ಕೊಡಿಸುವದು ಸಣ್ಣ ಮಾತಲ್ಲ

ಶೇಖರ - ಏಕೆ ಅಷ್ಟು ಹಣ ಮನೆಯಲ್ಲಿ ಇಲ್ಲವೇ ?

ರವಿ - ಮೂರು ಸಾವಿರ ಹಣ ನಗದು ಇಡಲಿಕ್ಕೆ ನಾನೇನು ಶ್ರೀಮಂತರೆಂದು ತಿಳಿದಿರುವಿಯೇನೋ !

ಶೇಖರ - ಹಾಗಾದರೆ ಇದಕ್ಕೆ ಏನು ಮಾಡಬೇಕಣ್ಣಾ

ರವಿ - ಅದೇ ನನಗೂ ತಿಳಿಯದಾಗಿದೆ ಶೇಖರ

ಶೇಖರ - ಹೋಗಲಿ, ಅಷ್ಟು ಹಣ ಈ ಊರಲ್ಲಿ ನಮಗೆ ಸಾಲವಾಗಿ ಸಿಗಲಾರದೇ?

ರವಿ - ಸಿಗುತ್ತದೆ. ಆದರೆ..

ಶೇಖರ - ಆದರೆ ಗೀದರೆ ಹಿಂದಿನಿಂದ. ಮೊದಲು ಸಾಲ ಮಾಡಿ ಅಕ್ಕನ ಸಂಕಟ ನೀಗಿಸಬೇಕು. (ನಾಗಮ್ಮ ಬರುವಳು)

ರವಿ - ನೋಡು ಶೇಖರ, ಆಧಾರ ಪತ್ರ ಬರೆದುಕೊಟ್ಟರೆ ನಮ್ಮ ಸಂಘದಲ್ಲಿ ಸಾಲ ಹುಟ್ಟುತ್ತದೆ. ಆದರೆ ಸಂಘದಲ್ಲಿ ನಾನು ನೌಕರಿ ಮಾಡುತ್ತಿರುವದರಿಂದ ನನಗಂತೂ ಸಾಲ ಮಾಡಲು ಬರುವಂತಿಲ್ಲ. ನೌಕರನು ಸಾಲಗಾರನಿರಬಾರದೆಂದು ಸಂಘದ ನೇಮದಲ್ಲಿದೆ. ಆದರೆ ಅದಕ್ಕೆ ಏನು ಮಾಡಬೇಕು ತಿಳಿಯದಾಗಿದೆ

ಶೇಖರ - ಹಾಗಿದ್ದರೆ ಅಪ್ಪನ ಹೆಸರಿನಲ್ಲಿ ಕೊಡುತ್ತಾರೇನು ?

ನಾಗಮ್ಮ - ಕೊಡಬಹುದು. ಆದರೆ ಅವರು ಈ ವರೆಗೂ ಇನ್ನೊಬ್ಬರಿಗೆ ದೇಹೀಯೆಂದು ಕೈಯೊಡ್ಡಿದವರಲ್ಲ. ಅಂದ ಬಳಿಕ ಆಯುಷ್ಯದ ಅಂಚಿನಲ್ಲಿರುವ ನಿಮ್ಮ ತಂದೆಯವರಿಂದ ನೀವಿಬ್ಬರೂ ಕೂಡಿ ಸಾಲದ ಪತ್ರ ಬರೆಯಿಸುವದು ನ್ಯಾಯವಲ್ಲ. ಅದೇನಿದ್ದರೂ ಈ ಸುದ್ದಿ ಮಾವನವರ ಕಿವಿಗೆ ಬೀಳದಂತೆ ನಿಮ್ಮಿಬ್ಬರಲ್ಲಿಯೇ

ಶೇಖರ - ಅಪ್ಪನಿಂದ ಬರೆಸುವದಂತೂ ಒಳಿತಲ್ಲ. ಇನ್ನು ಅಣ್ಣನಿಗೆ ಸಾಲ ಹುಟ್ಟುವಂತಿಲ್ಲ. ಹಾಗಿದ್ದರೆ ನಾನೇನಾದರೂ ಬರೆದುಕೊಟ್ಟರೆ ಸಾಲ ಹುಟ್ಟಬಹುದೇನಣ್ಣಾ

ರವಿ - ಹೌದು ನೀನು ಬರೆದು ಕೊಟ್ಟರೆ ಕೊಡುತ್ತಾರೆ

ನಾಗಮ್ಮ - ಪುನಃ ಶೇಖರನಿಂದ ಬರೆಯಿಸಿಕೊಡುವದೂ ಬೇಡ, ಸಾಲ ಮಾಡುವದೂ ಬೇಡ

ಶೇಖರ - ಇದೇನತ್ತಿಗೆ ಹೀಗೆ ಮಾತಾಡುತ್ತೀರಿ ?

ನಾಗಮ್ಮ - ಛೇ ಮನೆಯಲ್ಲಿ ಹಿರಿಯಣ್ಣನಿದ್ದು ನಿನ್ನ ಕೈಯಲ್ಲಿ ಸಾಲ ಮಾಡಿಸುವದು ನ್ಯಾಯವೇನು ? ಇಂತಹ ಸಾವಿರ ತಾಪತ್ರಯ ಸಾಲಾಗಿ ನಿಂತರೂ ತಮ್ಮನ ಕೈಯಿಂದ ಸಾಲ ಮಾಡಿಸುವದು ಧರ್ಮವಲ್ಲ

ರವಿ - ನಿಜ ಶೇಖರ, ಬೆಟ್ಟದೋಪಾದಿಯಲ್ಲಿ ಕಷ್ಟಗಳು ಸಾಲುಗಟ್ಟಿ ನಿಂತರೂ ಒಡಹುಟ್ಟಿದ ತಮ್ಮನಾದ ನಿನ್ನ ಕ್ಷೇಮದ ಬಗ್ಗೆ ವಿಚಾರ ಮಾಡಬೇಕಾದದ್ದು ನನ್ನ ಮೊದಲ ಕರ್ತವ್ಯ

ಶೇಖರ - ಅಣ್ಣಾ ನನ್ನ ಮೇಲಿದ್ದ ಅಭಿಮಾನವನ್ನು ನೀನು ಅತ್ತಿಗೆ ಬಾಯಿಬಿಟ್ಟು ಹೇಳಬೇಕಾಗಿಲ್ಲ. ಆದರೆ ನನ್ನಂತೆ ಅಕ್ಕನೂ ನಿನಗೆ ಒಡಹುಟ್ಟಿದವಳು. ಮುಖ್ಯ ಅವಳ ಸಂಕಟ ನಿವಾರಣೆಯಾದರೆ ಸಾಕು. ಸಂಘದಲ್ಲಿ ನನ್ನ ಹೆಸರಿಲೆ ಮೂರು ಸಾವಿರ ಸಾಲ ಮಾಡಿದರೆ ನಾನೇನು ಸತ್ತು ಹೋಗುವದಿಲ್ಲ. ಅಕ್ಕನ ಅಕ್ಕರತೆಗಿಂತ ಈ ರೊಕ್ಕ ದೊಡ್ಡದಲ್ಲ

ರವಿ - ಹೊನ್ನಿಗಿಂತಲೂ ಹಿರಿದಾದ ನಿನ್ನ ಗುಣ ನಾ ಬಲ್ಲೆ ಶೇಖರ. ಆದರೆ ಬಂಧುಬಳಗದವರಿಗೆ ಕೊಟ್ಟ ಹಣ ಮರಳಿ ಬಂದೇ ತೀರುವದೆಂಬ ನಂಬಿಕೆ ಕಡಿಮೆ. ನಾನೋ ಅರವತ್ತು ರೂಪಾಯಿ ಸಂಬಳಕ್ಕೆ ೧೦ ಗಂಟೆಗಳವರೆಗೂ ದುಡಿಯುವ ಬಡ ಗುಮಾಸ್ತ. ಇನ್ನು ಭೂಮಿಯಲ್ಲಿ ದುಡಿದು ಬದುಕಬೇಕಾದವನು ನೀನು. ಹೀಗಿದ್ದೂ ಈಗ ನಿನ್ನ ಹೆಸರಿನಲ್ಲಿ ಸಾಲ ಮಾಡಿದರೆ ನಾಳೆ ನಿನಗೇನಾದರು ತೊಂದರೆಯಾದರೆ..

ನಾಗಮ್ಮ - ಅಹುದು ಶೇಖರ, ನಾಳೆ ನೀನು ಮದುವೆಯಾಗಬೇಕಾದವನು. ಮಡದಿ ಮನೆಗೆ ಬಂದ ಬಳಿಕ ಮಕ್ಕಳು ಆಗುತ್ತವೆ. ಆಗ ಕಷ್ಟದಲ್ಲಿ ಆಗುವವರು ಯಾರು ?

ಶೇಖರ - ಕಷ್ಟ ಬಂದರೆ ಕೊಟ್ಟು ಕಾಪಾಡುವ ದೇವರಿದ್ದಾನೆ. ಒಡಹುಟ್ಟಿದ ಅಣ್ಣನಿದ್ದಾನೆ. ಗತಿಸಿದ ತಾಯಿಯ ಸ್ಥಾನ ತುಂಬಿದ ಅತ್ತಿಗೆ ನೀವಿದ್ದೀರಿ. ಇಷ್ಟಿದ್ದಾಗ ನಾನೇಕೆ ಅಂಜಲಿ ? ನೀನೇನೂ ಯೋಚಿಸಬೇಡಣ್ಣಾ, ಈಗಲೇ ಕಾಗದ ಬರೆದುಬಿಡು. ನಾನದಕ್ಕೆ ಸಹಿ ಹಾಕುತ್ತೇನೆ. ಪಾಪ ಭಾವನು ಸಾಲದ ಸಂಕಟದಿಂದ ಪಾರಾದರೆ ಸಾಕು ಬರೆಯಣ್ಣಾ. (ಪತ್ರ ಬರೆಯಹತ್ತುವರು. ನಾಗಮ್ಮ ಐದು ಸಾವಿರ ಬರೆಯುವಂತೆ ಸನ್ನೆ ಮಾಡುವಳು)

॥ ಹಿನ್ನೆಲೆಯ ಹಾಡು ॥

ಕಲಿಯದವರನು ಮೋಸಗೊಳಿಸಿದರೆ । ಕಲಿತವರು ।
ಕುಳಿತಿಹುದು ನಾಳೇ । ದೈವ ನಿರ್ಣಯ ಕಾದು ॥
ಹೆಣ್ಣು ದೇಹದ ಮೋಹ । ಮಣ್ಣು ಹೆಣ್ಣಿನ ದಾಹ । ಹಿರಿದಾಗಿ
ಕೊಂದಿತೇ । ತಮ್ಮನ ಬದುಕು ॥ ೧ ॥

## - ಜಂಗಲ್ ರಸ್ತಾ -

ಶೇಖರ - ಅತ್ತಿಗೆ ಇತ್ತಿತ್ತಲಾಗಿ ಹೀಗೇಕೆ ಮಾಡುತ್ತಿರುವಳೋ ನಾಕಾಣೆ. ಅವಳ ವಿಘಾತಕ ಕೃತಿಗಳಿಂದ ಮನೆಯವರ ಮನವಡೆದು ಅಣ್ಣ ತಮ್ಮಂದಿರ ಬಂಧುತ್ವದ ಗೋಡೆ ಬಿರುಕು ಬಿಟ್ಟು ತಂದೆಯ ಕಣ್ಣಲ್ಲಿ ನೀರು ಹರಿಯುವಂತಾಯಿತು. ತಾಯಿ ಗತಿಸಿದ ನಂತರ ನಾನೇ ಮಾಡುತ್ತ ಬಂದ ಅಡಿಗೆ ನೀರಿನ ಕೆಲಸ ಇಂದಿಗೂ ನನ್ನ ಕೈಬಿಡದಾಯಿತು. ಹೊತ್ತಿಗೆ ಸರಿಯಾಗಿ ಹೊಲದಲ್ಲಿ ದುಡಿಯಬೇಕು. ತುತ್ತಿನ ಚೀಲ ತುಂಬಲೆಂದು ಮನೆಗೆ ಹೋಗಿ ಅಡಿಗೆ ಮಾಡಬೇಕು. ಸ್ವಲ್ಪ ತಡವಾದರೆ ಅಪ್ಪನೇ ಈ ತೊಂದರೆ ತಕ್ಕೊಳ್ಳುತ್ತಾರೆ. ಒಂದು ಸಮಯ ತಾಯಿ ಇದ್ದಿದ್ದರೆ ನಮಗೆ ಈ ಗತಿ ಬರುತ್ತಿತ್ತೇ. ಅವ್ವಾ, ನೀನು ತೀರಿಹೋದ ಮೇಲೆ ನಾವು ಹಸಿವ ಹೊಟ್ಟೆಗೆ ತುಣುಕು ರೊಟ್ಟಿ ಕಾಣುವದು ಕೂಡಾ ಕಷ್ಟವಾಯಿತಲ್ಲ

ರಾಮಣ್ಣ - (ಬರುತ್ತ) ಶೇಖರಾ

ಶೇಖರ - ಯಾಕಪ್ಪ ನೀನು ಬಂದೆ

ರಾಮಣ್ಣ - ಸುಮ್ಮನೇ ಬಂದೆ ನಿನ್ನ ನೋಡಬೇಕೆಂದಿನಿಸಿತು

ಶೇಖರ - ನಿನ್ನ ಮುಖವು ಸಪ್ಪೆಯಾಗಿದೆಯಲ್ಲ. ಮನಸ್ಸಿಗೆ ಸಮಾಧಾನವಿಲ್ಲವೇ ? ಅಥವಾ ಮೈಯಲ್ಲಿ ಸರಿಯಿಲ್ಲವೋ ?

ರಾಮಣ್ಣ - ಇಲ್ಲ ಶೇಖರ, ನನಗೇನೂ ಆಗಿಲ್ಲ. ಚೆನ್ನಾಗಿದ್ದೇನಲ್ಲ

ಶೇಖರ - ಇಲ್ಲ ಇಂದು ನಿನ್ನ ಮುಖದಲ್ಲಿ ಮನದ ಸುಖ ಕಳೆದುಕೊಂಡ ಕಳೆ ಎದ್ದು ಕಾಣುತ್ತದೆ. ನಿಜ ಹೇಳಪ್ಪ ನೀನು ಹೇಳದಿದ್ದರೆ ನಿನಗೆ ಅವ್ವನ ಆಣೆ

ರಾಮಣ್ಣ - ಏನು ಹೇಳಲಿ ಶೇಖರ, ಹೇಳುವಂತ ಮನಕ್ಕೆ ಮತ್ತಿಷ್ಟು ಸಂಕಟವಾಗುವದೇ ವಿನಹ ಆನಂದ ದೊರೆಯದು. ಬದುಕಬಾರದು ಶೇಖರಾ ದುಡಿಯಲಾಗದ ನಮ್ಮಂತಹ ದಿನ ಹೋದ ಮುದುಕರು, ಹೊತ್ತಿಗೆ ಸರಿಯಾಗಿ ಹೊಟ್ಟೆ ಬಟ್ಟೆ ನೋಡಿಕೊಳ್ಳುವ ಹೆಂಡತಿ ಸತ್ತ ನಮ್ಮಂಥ ಪರದೇಶಿಗಳು ಬದುಕಬಾರದು

ಶೇಖರ - ನೀನೇಕೆ ಪರದೇಸಿಯಪ್ಪಾ, ನಾನಿಲ್ಲವೇ ನಿನ್ನ ಯೋಗಕ್ಷೇಮ ನೋಡಿಕೊಳ್ಳಲು!

ರಾಮಣ್ಣ - ಹೂ ಈಗ ನೀನೇನೋ ಇದ್ದೀಯಾ. ಆದರೆ ನಾಳೆ ಮಡದಿ ಬಂದಬಳಿಕ ನೀನೂ ನಿಮ್ಮಣ್ಣನಂತಾದರೆ ? ಹೂ ಅವನದಾದರೂ ಯಾವ ತಪ್ಪು. ಮನೆಗೆ ಬಂದ ನಾಗಮ್ಮ ಹೊಂದಿಕೊಂಡು ಹೋಗಿದ್ದರೆ ಯಾವ ತೊಂದರೆಯೂ ಆಗುತ್ತಿದ್ದಿಲ್ಲ. ಶೇಖರ ಇಷ್ಟು ಹೊತ್ತಾಗಿದ್ದರೂ ಒಂದು ಗುಟುಕು ಕಾಫಿ ಕೂಡಾ ಮಾಡಿಕೊಡಲಿಲ್ಲವಪ್ಪ ನಿನ್ನ ಅತ್ತಿಗೆ

ಶೇಖರ - ಇದನ್ನೇನು ಹೇಳಿದಿಯಪ್ಪ ಕೇಳ್ತೇನಿ. (ಹೋಗಹತ್ತುವನು)

ರಾಮಣ್ಣ - ಶೇಖರಾ, ಬೇಡ ಮಗೂ ಹಾಗೆಲ್ಲ ಕೇಳಬಾರದು ಮಗೂ. (ಎಂದು ಹೋಗವರು)

## - ಮನೆ ಸೀನು -

ಶೇಖರ - (ಬಂದು) ಅತ್ತಿಗೆ ಅತ್ತಿಗೆ

ನಾಗಮ್ಮ - (ಗರ್ಭವತಿಯಾಗಿ ನರಳುತ್ತ ಬರುವಳು) ಏಕೆ ಒಂದು ಕ್ಷಣ ಮಲಗಿದರೂ ಸಮಾಧಾನವಿಲ್ಲವೇನೋ

ಶೇಖರ - ಇದೇನತ್ತಿಗೆ ಅಪ್ಪನಿಗೆ ಕಾಫೀ ಮಾಡಿಕೊಟ್ಟಿಲ್ಲವಂತೆ. ಈಗ ಗಂಟೆ ಎಷ್ಟಾಗಿದೆ ಗೊತ್ತೇ ? ಒಂಭತ್ತೂವರೆ. ಇಷ್ಟು ಹೊತ್ತಾದರೂ ರೊಟ್ಟಿ ಬೇಡ ಒಂದು ಕಪ್ಪು ಕಾಫಿ ಕೂಡಾ ಮಾಡಿ ಕೊಡಬಾರದೇ ?

ನಾಗಮ್ಮ - ನನ್ನ ಕೈಯಿಂದ ಆಗುತ್ತಿದ್ದರೆ ಬರಿ ಕಾಫೀ ಮಾಡಿಕೊಡುವದೇಕೆ ಹೊತ್ತಿಗೆ ಸರಿಯಾಗಿ ಕೂಳು ಸಹಿತ ಕುಚ್ಚಿ ಹಾಕುತ್ತಿದ್ದೆ. ಆದರೇನು ಮಾಡುವದಪ್ಪ, ನನ್ನ ಕೈಯಿಂದ ಆಗದಿದ್ದಾಗ. ಏಕೆ ಅಷ್ಟು ಕುಡಿಯುವ ಹಂಬಲವಿದ್ದರೆ ಮಾಡಿಕೊಂಡು ಕುಡಿಯಬೇಕಿತ್ತು. ನಿಮ್ಮಪ್ಪನ ಕೈಗಳು ಸವೆದು ಹೋಗುತ್ತಿದ್ದಿಲ್ಲ

ಶೇಖರ - ಅಂದರೇನತ್ತಿಗೆ, ಕಾಫಿ ಬೇಕಾದರೆ ನನ್ನಂತೆ ಅಪ್ಪ ಸಹಿತ ತಾನೇ ಮಾಡಿಕೊಂಡು ಕುಡಿಯಬೇಕೇನು ?

ನಾಗಮ್ಮ - ಮಾಡಿ ಹಾಕುವವರು ಮನೆಯಲ್ಲಿಲ್ಲದಾಗ ಮತ್ತೇನು ಮಾಡಬೇಕು. ನಿಮ್ಮಣ್ಣನಿಗೆ ಸಂಘದ ನೌಕರಿ, ನಿನಗೆ ತೋಟದ ದಿವಾನಗಿರಿ. ಅಂದಮೇಲೆ ನನ್ನ ಹೊರತು ದುಡಿದು ಸಾಯುವವರು ಇನ್ಯಾರು, ನೋಡು ಶೇಖರ, ಇಷ್ಟು ದಿನ ನನ್ನ ಕೈಯಿಂದ ಆಗುತ್ತಿತ್ತು. ಆದರೇನು ಮಾಡೋದು ಈಗ ಮೂರು ತಿಂಗಳಾಯಿತು. ನೀರು ನಿಂತು ಬಯಕೆ ಬೆನ್ನು ಹತ್ತಿ ಕಾಡತಾಯಿದೆ ಮೈಯಲ್ಲಿ ಭಾರವಾಗಿ ತಲೆ ಸುತ್ತುತ್ತಿದೆ ಅಂತ ಸ್ವಲ್ಪ ಮಲಗಿದ್ದೆ. ಕಡಿಮೆಯಾದ ಬಳಿಕ ಮಾಡಿಕೊಡಬೇಕು ಎಂದಿದ್ದೆ. ಅಷ್ಟರಲ್ಲಿ ನೀನು ಬಂದಿ. ಅದು ಸರಿ. ಅಪ್ಪನ ಬಗ್ಗೆ ಇಷ್ಟೊಂದು ಅಕ್ಕರತೆಯಿದ್ದರೆ ಕಾಫಿ ಮಾಡಿಕೊಟ್ಟು ತೋಟಕ್ಕೆ ಹೋಗಬೇಕಿತ್ತು

ಶೇಖರ - ಹಸಿ ಆರುವ ಮುನ್ನ ಸಸಿ ಹಚ್ಚಬೇಕಿತ್ತು. ಆಳು ಮಕ್ಕಳಿಗೆ ಹೇಳಿ ಬಂದಿದ್ದ ನಾನು ಎದುರಿಗಿರದಿದ್ದರೆ ಆಳು ಮಾಡಿದ್ದು ಹಾಳು ಅಂತಾ ಅವಸರದಲ್ಲಿ ಎದ್ದು ಹೋದೆ. ಕೆಲಸ ತಪ್ಪಿಸಿಕೊಂಡು ಮೈಗಳ್ಳತನ ಮಾಡೋ ಮನುಷ್ಯ ನಾನಲ್ಲ ಅತ್ತಿಗೆ

ನಾಗಮ್ಮ - ಹಾಗಿದ್ದರೆ, ಮೈಗಳ್ಳತನ ಮಾಡುವವಳು ನಾನೇ ಅಂದ ಹಾಗಾಯಿತಲ್ಲ

ಶೇಖರ - ಛೇ ಛೇ ನಾನೇಕೆ ಹಾಗನ್ನಲಿ ಅತ್ತಿಗೆ, ಆದರೆ ಒಂದೊಂದು ದಿನ ನನಗೆ ಕೆಲಸವಿದ್ದಾಗ ಸ್ವಲ್ಪ ಕಾಫಿ ಮಾಡಿಕೊಟ್ಟರೆ ನಿನ್ನ ಕೈಯೇನು ಕತ್ತರಿಸಿ ಬೀಳುತಿದ್ದವೇ ?

ನಾಗಮ್ಮ - ಹಲ್ಲು ಹಿಡಿದು ಮಾತಾಡು ಶೇಖರ, ನಾಲಿಗೆ ಹರಿಬಿಟ್ಟರೆ ಒಳಿತಾಗಲಿಕ್ಕಿಲ್ಲ. ಸಣ್ಣ ಬಾಯಿಗೆ ದೊಡ್ಡ ತುತ್ತು ಒಳ್ಳೇದಲ್ಲ, ಸ್ವಲ್ಪ ಸಹನೆ ಇರಲಿ

ಶೇಖರ - ಸಹನೆಗೂ ಒಂದು ಮಿತಿಯಿರುತ್ತದೆ ಅತ್ತಿಗೆ. ನೀನೇನು ಇಲ್ಲಿ ಮಹಾರಾಣಿಯಾಗಲಿಕ್ಕೆ ಬಂದಿಲ್ಲ. ನನ್ನ ಮಾತಂತಿರಲಿ ಅಪ್ಪನೂ ನಿನ್ನ ದೃಷ್ಟಿಯಲ್ಲಿ ಹಗುರಾಗಬೇಕೆ ? ಅವರು ಈ ಮನೆಗೆ ದೇವರಿದ್ದಂತೆ ದೊಡ್ಡವರು

ನಾಗಮ್ಮ - ಅಹುದಪ್ಪ, ನನ್ನ ಬಿಟ್ಟು ಈ ಮನೆಯಲ್ಲಿ ಎಲ್ಲರೂ ದೊಡ್ಡವರೇ. ನಾನೊಬ್ಬಳೇ ನಿಮ್ಮೆಲ್ಲರ ಸೇವೆ ಮಾಡಿ ಸಾಯಲಿಕ್ಕೆ ಬಂದವಳು. ಸಂಘದಲ್ಲಿ ದುಡಿದು ತಂದು ಹಾಕಲಿಕ್ಕೆ ನಿಮ್ಮಣ್ಣ, ಕೂಳು ಕುಚ್ಚಿ ಹಾಕಲಿಕ್ಕೆ ನಾನು, ಉಳಿದವರೆಲ್ಲ ನೀವು ಮಹಾರಾಜರ ಮಕ್ಕಳು. ಮೈಯಲ್ಲಿ ಸುಖವಿಲ್ಲದಾಗ ಕೂಡಾ ಒಂದು ಗಂಟೆ ಮಲಗಿದ್ದರೆ ಅದು ನನ್ನ ತಪ್ಪು ಅಪರಾಧ. ನಿಮ್ಮಿಂದ ಹೀನ ಮಾತು ಆಡಿಸಿಕೊಳ್ಳಬೇಕು. (ರಾಮಣ್ಣ ಬರುವದನ್ನು ನೋಡಿ) ಹಿಂದೆ ಮಾಡಿದ ಕರ್ಮ ಅನುಭವಿಸಿಯೇ ತೀರಬೇಕಲ್ಲ. ಯಾರಿಗೆ ಅಂದು ಏನು ಮಾಡುವದು, ಇಷ್ಟೆಲ್ಲ ಯಾಕ ಬೇಕು. ಅವರು ಬರಲಿ ಬಂದ ತಕ್ಷಣ ಹೇಳಿಬಿಡತೇನಿ. ನನ್ನ ಹೊಟ್ಟೆಲಿರೋ ಕೂಸು ಸುಸೂತ್ರ ಭೂಮಿಗೆ ಬಂದು ಜೀವಂತ ಉಳಿಯಬೇಕು ಅಂತ ಅವರ ಮನಸ್ಸಿನಲ್ಲಿದ್ರೆ ಎರಡು ಹೊತ್ತು ಕೂಳು ಕುಚ್ಚಿಟ್ಟು ಆ ಮೇಲೆ ಸಂಘಕ್ಕಾದರೂ ಹೋಗಲಿ, ಇಲ್ಲವಾದರೆ ಸ್ಮಶಾನಕ್ಕಾದರೂ ಹೋಗಲಿ

ರಾಮಣ್ಣ - ಛೇ ಛೇ, ಏನಮ್ಮ ಇದು. ಮುಂಜಾನೆ ಎದ್ದು ಇದೆಂಥಾ ಅವಲಕ್ಷಣ ಮಾತನಾಡುತ್ತೀಯಮ್ಮ, ಶೇಖರ ಅಪ್ಪಿ ತಪ್ಪಿ ನಾನು ಇವತ್ತೊಂದು ದಿನ ಸ್ವಲ್ಪ ತಡವಾಗಿ ಕಾಫಿ ಕುಡಿದರೆ ಮಹಾನಷ್ಟವಾಗುವದೂ ಅಷ್ಟರಲ್ಲಿಯೇ ಇದೆ. ಮಗೂ ನಾಗಮ್ಮ ನೋಡು ಇದು ನಿನ್ನ ಮನೆ, ನೀನು ಈ ಮನೆಯ ಲಕ್ಷ್ಮಿ. ಹೀಗಿದ್ದು ನಿನ್ನ ಬಾಯಲ್ಲಿ ಇಂತಹ ಅಮಂಗಲ ಮಾತು ಬರಬಾರದಮ್ಮ. ಹೇಗಾದರೂ ಮಾಡಿ ನೀನು ಮೈ ಕಳೆದು ಏಳುವವರೆಗೂ ಕಷ್ಟಪಟ್ಟು ಹೊಂದಿಕೊಂಡು ಹೋಗೋಣ. ಆದರೆ ಈ ರೀತಿ ಹೃದಯ ಸೀಳಿ ಹೋಗೋ ಮಾತು ಆಡಬಾರದಮ್ಮ

ನಾಗಮ್ಮ - ಇದೆಲ್ಲಾ ಕೂಡಿಕೊಂಡು ಹೋಗಬೇಕು ಅನ್ನೋರು ಆಡಿಕೊಳ್ಳೋ ಮಾತು ಮಾಮಾ. ಶೇಖರ ನನ್ನನ್ನು ನೀವು ಕ್ರಯಕ್ಕೆ ಕೊಂಡಿಲ್ಲವಪ್ಪ. ನನ್ನನ್ನೇನು ನಿಮ್ಮಣ್ಣನ ಹಂಡತಿ ಅಂತಾ ತಿಳಕೊಂಡಿದ್ದೀರೋ ಅಥವಾ ಅವರ ಬೆನ್ನು ಹತ್ತಿ ಓಡಿಬಂದವಳು ಅಂತಾ ಮಾಡಿದ್ದಿಯೋ

ಶೇಖರ - ಅತ್ತಿಗೆ ಗತಿಸಿದ ಆ ನಮ್ಮವ್ವನ ಮೇಲೆ ಆಣೆಯಿಟ್ಟು ಹೇಳತೇನಿ. ಇವತ್ತೇ ಮೊದಲು ಇವತ್ತೇ ಕಡೆ. ಇನ್ನೆಂದಿಗೂ ನಿನ್ನ ಸುದ್ದಿಗೆ ಬರೋದಿಲ್ಲ. ಹಾಗೇನಾದರೂ ಬಂದರೆ ಅವತ್ತೇ ನನ್ನ ನಾಲಿಗೆ ಕತ್ತರಿಸಿ ಬಿಡು. ನನ್ನಿಂದ ತಪ್ಪಾಯಿತು

ನಾಗಮ್ಮ - ತಪ್ಪೇಕಪ್ಪಾ ಬಪ್ಪಾಯಿತು ಅಂತಾಹೇಳು. ಮನಸ್ಸಿನಲ್ಲಿ ಮಾಡಿಕೊಂಡ ಕಾರ್ಯ ಮನಸ್ಸಿನಂತೆ ಆಯಿತಲ್ಲ. ಮಾವನವರ ಎದುರಿನಲ್ಲಿ ನನ್ನ ದುಷ್ಟೆಯನ್ನಾಗಿ ಮಾಡಬೇಕಿತ್ತು ಮಾಡಿದಿ. ಇನ್ನಾದರೂ ತಣ್ಣಗಿದ್ದರೆ ಸರಿ. (ಒಳಗೆ ಹೋಗುವಳು)

ಶೇಖರ - (ದುಃಖಿಸುತ್ತ) ಅಪ್ಪಾ

ರಾಮಣ್ಣ - ಮಗೂ, (ಅಪ್ಪಿಕೊಳ್ಳುವನು) ಶೇಖರಾ ಈಗ ನಡೆದು ಈ ದುರ್ಘಟನೆಯನ್ನು ಹೇಗಾದರೂ ಮಾಡಿ ಮರೆತು ಬಿಡಪ್ಪ ಮರೆತು ಬಿಡು

ಶೇಖರ - ಮನ ಮುರಿದ ಘರ್ಷಣೆಯನ್ನು ಮರೆತುಬಿಡಲು ಯಾರಿಂದಲೂ ಸಾಧ್ಯವಿಲ್ಲ. ಹೇಳಪ್ಪಾ, ಯಾವ ನನ್ನ ಅತ್ತಿಗೆಯನ್ನು ಹೆತ್ತ ತಾಯಿಯೆಂದು ಭಾವಿಸಿದ್ದೇನೋ ಅಂತಹ ನನ್ನ ಅತ್ತಿಗೆಯ ಮುಖದಿಂದ ಹೊರಬಂದ ಮಾತುಗಳು ನನ್ನ ಮನವನ್ನಷ್ಟೇ ಅಲ್ಲ ಅಪ್ಪ ನಿನ್ನ ಮನೆಯನ್ನು ಕೂಡಾ ಮುರಿದವು. (ದುಃಖಿಸುತ್ತ ಹೋಗುವನು)

ರಾಮಣ್ಣ - (ಹೌಹಾರಿ) ಆ ಮನೆ ಮುರಿಯುತ್ತದೆ ! ಹೌದು ಮನೆ ಮುರಿಯುತ್ತದೆ ಸಾವಿತ್ರಿ, ನಿನ್ನ ಕೈಯ್ಯಾರೆ ಕಟ್ಟಿಹೋದ ಈ ನಿನ್ನ ಮನೆ ನನ್ನ ಕಣ್ಣೆದುರು ಮುರಿಯುತ್ತದೆ. ಸಾವಿತ್ರಿ ನಾನಿದನ್ನು ಹೇಗೆ ನೋಡಲಿ, ನನ್ನ ಮನೆ ಮುರಿಯುತ್ತದೆ. ಕರುಳು ಹರಿಯುತ್ತದೆ ಸಾವಿತ್ರಿ (ಹೋಗುವನು)

## - ಜಂಗಲ್ ರಸ್ತಾ -

ಶೇಖರ - ಹೆತ್ತ ತಾಯಿಗೆ ಸರಿಯೆನಿಸುವ ಅತ್ತಿಗೆ ಅಮೃತವನುಣಿಸುವ ಬದಲು ವಿಷವನುಣಿಸುವ ನಾಗಸರ್ಪವಾದಳೇ

ರವಿ - ಶೇಖರಾ, ಇದೇನು ಶೇಖರ, ಕಣ್ಣಲ್ಲಿ ನೀರು ಏನಾಯಿತು ?

ಶೇಖರ - ಏನೂ ಇಲ್ಲಣ್ಣ ನಿನ್ನೊಂದಿಗೆ ಸ್ವಲ್ಪ ಮಾತನಾಡಬೇಕಾಗಿದೆ ಅದಕ್ಕಾಗಿ

ರವಿ - ನನ್ನೊಡನೆ ಅದೇನಪ್ಪ ಅಂತಹ ಮಾತು

ಶೇಖರ - ನಾನೀಗ ಆಡುವ ಮಾತು ತಪ್ಪೋ ನಾಕಾಣೆ. ಆದರೆ ನೀನು ಏನು ತಿಳಿದುಕೊಳ್ಳುವುದಿಲ್ಲ ಅಂತಾ ವಚನಕೊಡು ಅಂದರೆ ಹೇಳತೀನಿ. ಆ ಮಾತನ್ನು

ರವಿ - ಇಲ್ಲ ನಾನೇಕೆ ತಪ್ಪು ಭಾವಿಸಲಿ ಹೇಳು ಶೇಖರ ಏನಿದರೂ

ಶೇಖರ - ನಾನು... ನಾನು... ಈ ಮನೆಯಲ್ಲಿ ನಿಮ್ಮೊಂದಿಗೆ ಕೂಡಿ ಇರಬೇಕೂ ಅಂತ ನಿಮ್ಮಿಷ್ಟವೋ ಇಲ್ಲಾ ಕಡಿದುಕೊಂಡು ಬೇರೆ ಹೋಗಲಿ ಅಂತಾ ಬಯಸ್ತೀಯೋ ಅಣ್ಣಾ

ರವಿ - ಹಾ ಹೀಗುಂದರೇನೋ ಈ ನಿನ್ನ ಮಾತಿನರ್ಥ. ನಾನೆಂದಾದರೂ ಹಾಗೆಂದನೇ

ಶೇಖರ - ಇಲ್ಲ ಅಂದಿಲ್ಲ

ರವಿ - ಹಾಗಿದ್ದರೆ ಒಮ್ಮಿಂದೊಮ್ಮೆಲೇ ಈ ಮನೆ ಮುರಿಯುವ ಮಾತೇಕೆ ಬಂತೋ ನಿನ್ನ ಮುಖದಿಂದ

ಶೇಖರ - ಮನಸ್ಸು ನೊಂದು ಬಂತಣ್ಣಾ

ರವಿ - ಆಂ ಏನು ಅವಳಿಂದ ?

ಶೇಖರ - ಅಹುದಣ್ಣಾ, ನಿನ್ನ ಮನಸ್ಸನಲ್ಲಿ ನನ್ನ ಬಗ್ಗೆ ಏನಿದೆಯೋ ನಾಕಾಣೆ. ಆದರೆ ನಿನ್ನ ಹೆಂಡತಿಗೆ ನಾನು ಮಾತ್ರ ಈ ಮನೆಯಲ್ಲಿ ನಿನ್ನೊಂದಿಗೆ ಕೂಡಿ ಇರುವದು ಬೇಕಿಲ್ಲ

ರವಿ - ಅದಿರಲಿ ಈಗ ನಿನ್ನ ಮನಸ್ಸಿಗೆ ಇಷ್ಟೊಂದು ನೋವಾಗುವಂತಹ ಘಟನೆಯಾದರೂ ಯಾವದು ಘಟಿಸಿತು ಹೇಳು ಶೇಖರ

ಶೇಖರ - ಅಣ್ಣಾ ಅದನ್ನು ನೀನು ಕೇಳಬಾರದು ನಾನು ಹೇಳಬಾರದು. ಒಟ್ಟಿನಲ್ಲಿ ನಿನ್ನ ಮಡದಿಯ ದೃಷ್ಟಿಯಲ್ಲಿ ನಾನು ಮೈದುನನಾಗಿ ಕಾಣುವದಿರಲಿ ಮನುಷ್ಯನಾಗಿ ಸಹಾ ಕಾಣಿಸುತ್ತಲಿಲ್ಲ. ಮಾಡಿದ ಅಡಿಗೆಯನ್ನು ನಮಗೆ ಬಡಿಸುವದು ಕೂಡಾ ಅವಳ ಯೋಗ್ಯತೆಗೆ ಕೀಳಾಗಿ ಕಾಣುತ್ತದೆ

ರವಿ - ಏನು ಅವಳು ನಿನಗೆ ಊಟಕ್ಕೆ ಬಡಿಸುವದನ್ನು ಬಿಟ್ಟಿದ್ದಾಳೆಯೇ ?

ಶೇಖರ - ಅಣ್ಣಾ ಊಟಕ್ಕೆ ಬಡಿಸುವದಿರಲಿ, ಹೊಟ್ಟೆ ತುಂಬುವಷ್ಟು ಅಡಿಗೆಯಿದ್ದರಷ್ಟೆ ಅದು ನನ್ನ ಪುಣ್ಯ. ಎಲ್ಲರಿಗೂ ಏಕಾದಶಿ ತಿಂಗಳಲ್ಲಿ ಎರಡು ಸಾರೆ ಬಂದರೆ ನನಗೆ ವಾರದಲ್ಲಿ ಮೂರು ಸಾರೆ ಬರುತ್ತದೆ. ಮೊನ್ನೆ ತೋಟದಿಂದ ಹಸಿದು ಬಂದು ನೋಡಿದರೆ ಮನೆಯಲ್ಲಿ ಅಡಿಗೆ ಎಷ್ಟೂ ಇರಲಿಲ್ಲ. ಅನ್ನ ಬೇಯಿಸಲು ಹೇಳಿದರೆ ಬೇಕಿದ್ದರೆ ಬೇಯಿಸಿಕೊಂಡು ತಿನ್ನು ಎಂದಳು. ಅಣ್ಣಾ ಅತ್ತಿಗೆಗೆ ಮನೆಯಲ್ಲಿ ನನಗಿಂತಲೂ ಹಿರಿಯ ಸ್ಥಾನವುಂಟು. ಅದನ್ನು ನಾಬಲ್ಲೆ. ಏನಿದ್ದರೂ ಅವಳ ವಿಷಯಕ್ಕೆ ನಿನ್ನೆದುರು ದೂರು ಹೇಳುವ ಇಷ್ಟ ನನಗಿರಲಿಲ್ಲ. ಇಲ್ಲಿಯವರೆಗೆ ನನ್ನ ಮಟ್ಟಿಗೆ ಮಾಡುತ್ತ ಬಂದ, ಅವಳ ಈ ಹೇಯ ಭಾವನೆಯನ್ನು ನಾ ಸಹಿಸಿಕೊಂಡು ಬಂದೆ, ಆದರಿಂದು

ರವಿ - ಇಂದೇನಾಯ್ತು ?

ಶೇಖರ - ಅಪ್ಪನಿಗೂ ಹೀಯಾಳಿಸಿ ಮಾತನಾಡಿದಳಣ್ಣಾ ನಿನ್ನ ಮಡದಿ (ಅಳುವನು) ಮುಂಜಾನೆ ಒಂದು ಕಪ್ಪು ಕಾಫಿ ಮಾಡಿಕೊಡಲು ಕೇಳಿದರೆ ಬೇಕಿದ್ದರೆ ಮಾಡಿಕೊಂಡು ಕುಡಿ ಎನ್ನಬೇಕೆ ?

ರವಿ - ಏನು ? ಅಪ್ಪನಿಗೆ ಹೀಗಂದಳೆ ?

ಶೇಖರ - ಅಹುದಣ್ಣ ನಿನ್ನೆದುರು ನಾನೇಕೆ ಸುಳ್ಳು ಹೇಳಲಿ ! ಅವಳ ಕಣ್ಣಲ್ಲಿ ನಾನಿರಲಿ ಅಪ್ಪನೂ ಸಣ್ಣವನಾಗಬೇಕೇ. ನೀ ಕೊಟ್ಟ ಸಲುಗೆ ಸೊಕ್ಕು ತಂದಿತಣ್ಣ ನಿನ್ನ ಮಡದಿಯ ತಲೆಗೆ

ರವಿ - ಅದೇನೇ ಇರಲಿ, ಇನ್ನೆರಡು ದಿನ ತಡೆದುಕೋ, ನಾನೆಲ್ಲ ಹೇಳಿ ಸರಿಪಡಿಸುತ್ತೇನೆ

ಶೇಖರ - ನೋಡಣ್ಣ. ಎಳೆತನದಲ್ಲಿಯೇ ಬಾಗದ್ದು ಬಲಿತಮೇಲೆ ಬಾಗುತ್ತದೆಯೇ ? ಮನ ಮುರಿದ ಬಳಿಕ ಮನೆ ಮುರಿಯದಿರದು. ಈ ವಿಷಯ ಕೆದರುತ್ತ ಹೋದಂತೆ ಮನಸ್ಸು ತಿಳಿಯಾಗುವ ಬದಲು ಮತ್ತಷ್ಟು ಹುಳಿಯಾಗುವ ಸಂಭವವೇ ಹೆಚ್ಚು. ಕಾರಣ ನಾಳೇನಾದರೂ ಹಾಗಾದಲ್ಲಿ ಒಬ್ಬರ ಕಣ್ಣಲ್ಲಿ ನೀರು, ಒಬ್ಬರ ಕಣ್ಣಲ್ಲಿ ನೆತ್ತರು ಹರಿದು ನನ್ನ ಮುಖ ನೀನು, ನಿನ್ನ ಮುಖ ನಾನು ನೋಡಬಾರದಂತಾಗಬಾರದು. ಹೆಂಗಸರ ಮಾತನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ ಈಗಲೇ ಹಿತರಾಗಿ ದೂರಿದ್ದು ಬಿಡೋಣ. ಆದರೆ ಹೆಣ್ಣಿನ ಸಲುವಾಗಿ ಕರುಳಿಗೆ ದೂರಾಗಿ ಮಾತ್ರ ಇರುವದು ಬೇಡ

ರವಿ - ಆಗಲಿ, ಈ ವಿಷಯ ಇಷ್ಟು ದೂರ ಹೋಗಬಹುದೆಂದು ನಾ ತಿಳಿದಿರಲಿಲ್ಲ. ಈಗಲೇ ಅವಳೊಂದಿಗೆ ಮಾತನಾಡುತ್ತೇನೆ. ಕೂಡಿ ಇರಲು ಸಾಧ್ಯವೇನೋ ನೋಡುತ್ತೇನೆ. ಇಲ್ಲದಿದ್ದರೆ ಕಡಿದುಕೊಳ್ಳುವದಂತೂ ಇದ್ದೇ ಇದೆ. ನೋಡು ಶೇಖರ, ನನಗೆ ನೀನೂ ಬೇಕು. ಅವಳೂ ಬೇಕು. ಮನೆಯಲ್ಲಿ ಮಡದಿ ಚೊಚ್ಚಿಲ ಬಸಿರು, ಹೀಗಿರುವಾಗ ಅವಳ ಮನಸ್ಸು ನೋಯುವಂತೆ ಏನಾದರೂ ಆಡಿದರೆ ಅದು ಮುಂದೆ ಗರ್ಭಸ್ತ ಶಿಶುವಿನ ಮೇಲೆ ಪರಿಣಾಮ ಮಾಡುವ ಸಂಭವ ಉಂಟು. ಅಲ್ಲದೇ ಅವಳು ಮಹಾ ಹಟಮಾರಿ. ಕಾರಣ ನಾನು ಅವಳ ಇಷ್ಟದಂತೆಯೇ ನಡೆಯಬೇಕಾಗುವದು

ಶೇಖರ - ಅಣ್ಣಾ, ಅಣ್ಣಾ, ನಾಗಮ್ಮ ನಿನ್ನ ಮಡದಿ ನಿಜ. ಆದರೆ ಒಂದೇ ರಕ್ತವನ್ನು ಪಾಲು ಮಾಡಿಕೊಂಡು ನಾವಿಬ್ಬರೂ ಈ ಭೂಮಿಗೆ ಬಂದವರಲ್ಲವೇನಣ್ಣ. ನಿನ್ನೆ ಮೊನ್ನೆ ನಿನ್ನ ಕೈ ಹಿಡಿದ ಮಡದಿಯೇ ನಿನ್ನ ದೃಷ್ಟಿಯಲ್ಲಿ ಹೆಚ್ಚಾಗಿ ನಿನ್ನ ಬೆನ್ನು ಹಿಂದೆ ಹುಟ್ಟಿಬಂದ ನಾನು ಕೀಳಾಗಿ ಹೋದೆನೇ ? ನೋಡಣ್ಣ ಸತಿಗೆ ಪತಿಯಾಗಿ ಇಷ್ಟೇ ವಿಚಾರ ಮಾಡಬೇಕು ತಮ್ಮನಿಗೆ ಅಣ್ಣನಾಗಿ ಈ ಮಾತು ವಿಚಾರ ಮಾಡಬಾರದ. (ಪಾದ ಹಿಡಿದು) ಅಣ್ಣಾ. ಈ ನಿನ್ನ ಮನೆಯಲ್ಲಿಯೇ

ಈ ನಿನ್ನ ತಮ್ಮ ಪರದೇಶಿಯಾಗಿ ಬಾಳಬೇಕೇ?

ರವಿ - ಸಾಕು ಶೇಖರ, ಈ ಮಾತು ಇಷ್ಟಕ್ಕೆ ನಿಲ್ಲಿಸಿಬಿಡು. ನೀನೀಗ ಸುಮ್ಮನೇ ಹೋಗು. ನಾನೆಲ್ಲ ವಿಚಾರ ಮಾಡುತ್ತೇನೆ

ಶೇಖರ - ಆಗಲಣ್ಣ, ಎಷ್ಟೆಂದರೂ ನಾನು ಸಣ್ಣವನು ನೀನು ಹೇಳಿದಂತೆ ನಡೆಯುತ್ತೇನೆ (ಎಂದು ತತ್ತರಿಸುತ್ತ ಹೋಗುವನು)

ರವಿ - ದುಡುಕು ಸ್ವಭಾವದ ನನ್ನ ಮಡದಿ ನಾಗವೇಣಿಯ ಕೆಡಕುತನವನ್ನು ಬಲಿಯಗೊಟ್ಟರೆ ಖಂಡಿತವಾಗಿಯೂ ಮನೆ ಒಡೆದು ಹೋಗುತ್ತದೆ. ಆಗಲಿ ಬಾಂಧವ್ಯ ಕಡಿದುಕೊಂಡು ತಮ್ಮ ಶೇಖರನು ಬೇರೆ ಮನೆ ಮಾಡಿದರೆ ಜನರೆದುರು ತಲೆಯತ್ತಿ ತಿರುಗುವದೂ ಕಠಿಣವಾಗುತ್ತದೆ. ಮನೆಯವಳಿಗೆ ನಾಲ್ಕು ಮಾತು ಹೇಳಿ, ಮನೆಯೆರಡಾಗದಂತೆ ನೋಡಿಕೊಳ್ಳಬೇಕು

## - ಮನೆ ಸೀನು -

ರವಿ - ನಾಗು... ನಾಗು..

ನಾಗಮ್ಮ - (ಬರುತ್ತ) ಏಕೆ ಕೂಗಿದಿರೇನು ?

ರವಿ - ಅಹುದು ಅಲ್ಲೇ ನೀನಿವತ್ತು ಶೇಖರನೊಂದಿಗೆ ಜಗಳವಾಡಿದಿಯಾ ?

ನಾಗಮ್ಮ - ಯಾರು ನಿಮಗೆ ಹೀಗೆ ಹೇಳಿದರು

ರವಿ - ಅವನೇ ಹೇಳಿದ, ಹೇಳಿದನಷ್ಟೇ ಅಲ್ಲ. ಇನ್ನು ಮೇಲಿಂದ ನಿನಗೂ ಅವನಿಗೂ ಕೂಡಿ ನಡಿಯಲು ಸಾದ್ಯವಿಲ್ಲೆಂದು ತಿಳಿಸಿದ

ನಾಗಮ್ಮ - ನಾನು ಕುಚ್ಚಿ ಹಾಕಿದ ಕೂಳನ್ನು ತಿಂದು ಬೆಳೆದ ಆ ನಿಮ್ಮ ತಮ್ಮ ಇಂತಹ ಹುಚ್ಚು ವಿಚಾರ ಮಾಡಿದನೇನು ? ಆಗಲಿ ಬಿಡಿ ಅಮೃತವಿಟ್ಟವರಿಗೆ ವಿಷ ಕೊಡುವದು ಈ ಪ್ರಪಂಚದಲ್ಲೇನೂ ಹೊಸದಲ್ಲ. ನನ್ನ ಮೇಲೆ ಚಾಡಿ. ನುಡಿಯುವಷ್ಟು ಅವನ ನಾಲಿಗೆ ಉದ್ದವಾಗುತ್ತದೆಂದು ನಾ ಭಾವಿಸಿರಲಿಲ್ಲ. ಮನೆಬಿಟ್ಟು ಹೋಗುವ ಬೆದರಿಗೆ ಹಾಕಿದರೆ ಬೆದರುವವರಾರು ? ಹೋದರೆ ಪೀಡೆ ಕಡಿದುಹೋಯಿತು

ರವಿ - ಅಲ್ಲೇ ಒಡಹುಟ್ಟಿದ ತಮ್ಮನಿಗೆ ಮನೆಯಿಂದ ಹೋಗು ಅಂತಾ ಅದು ಹೇಗೆ ಹೇಳುವದು

ನಾಗಮ್ಮ - ನಿಮ್ಮಿಂದ ಹೇಳುವದಾಗದಿದ್ದರೆ ನಾನು ಹೇಳುತ್ತೇನೆ

ರವಿ - ಏನು ನೀನು ಹೇಳುತ್ತಿಯಾ ?

ನಾಗಮ್ಮ - ಏಕೆ ನನಗೇನು ಭಯ. ಮುಖಕ್ಕೆ ಹೊಡೆದಂತೆ ಹೇಳುತ್ತೇನೆ

ರವಿ - ಅಷ್ಟಾದರೆ ನನ್ನ ಕಥೆ ಮುಗಿದಹಾಗೆ, ಈಗಾಗಲೇ ಅವನು ನನಗೆ ಹೆಂಡತಿಗೆ

ಅಂಜುವ ಗಂಡನೆಂದು ಹಂಗಿಸಿದ್ದಾನೆ. ಇನ್ನು ನೀನಷ್ಟು ಅನುಕೂಲ ಮಾಡಿಕೊಟ್ಟರೆ ಮುಗಿದೇಹೋಯಿತು. ಆ ಮೇಲೆ ನಾನು ಊರಲ್ಲಿ ಮುಖವೆತ್ತಿ ಅಡ್ಡಾಡದ ಹಾಗಾಗಿ ಬಿಡುತ್ತದೆ. ದಯವಿಟ್ಟು ಹಾಗೆ ಮಾತ್ರ ಮಾಡಬೇಡ ಮಹಾರಾಯಳೇ

ನಾಗಮ್ಮ - ಅಂದರೆ ಅವನನ್ನ ಕಂಡರೆ ನಿಮಗಷ್ಟು ಭಯವೇ ?

ರವಿ - ಭಯದ ಮಾತಲ್ಲವೇ ಇದು ಮನೆತನದ ಮರ್ಯಾದೆಗೆ ಸಂಬಂಧಪಟ್ಟ ಮಾತು. ನಾವು ಹೀಗೆ ಮಾಡುವದರಿಂದ ಅಪ್ಪ ನೊಂದುಕೊಳ್ಳುವದಿಲ್ಲವೇ? ಜನ ಅಂದುಕೊಳ್ಳುವದಿಲ್ಲವೆ ?

ನಾಗಮ್ಮ - ಯಾರೇ ಅಂದುಕೊಳ್ಳಲಿ, ನೊಂದುಕೊಳ್ಳಲಿ, ನನಗೇನು ಅಂದವರೇನಾದರೂ ನಮಗಿಲ್ಲದಾಗ ತಂದುಕೊಡುತ್ತಾರೇನು ? ಊಹಂ ಅದೆಲ್ಲ ನನ್ನೆದುರು ನಡೆಯುವಂತಿಲ್ಲ. ಜನ ಅನ್ನುತ್ತಾರೆ ಅಂತ ಈಗ ನೀವು ಅವನಿಗೆ ಅಂಜಿದರೆ ಇವತ್ತು ಹೆಗಲೇರಿದ ಆ ನಿಮ್ಮ ತಮ್ಮ ನಾಳೆ ತಲೆಗೇರುತ್ತಾನೆ. ನಿಮ್ಮ ಸ್ಥಳದಲ್ಲಿ ಬೇರೆ ಇನ್ನಾದರೂ ಇದ್ದಿದ್ದರೆ ಹೆಂಡತಿಯ ಮೇಲೆತ್ತಿದವನು ಅಣ್ಣನಿರಲಿ ತಮ್ಮನಿರಲಿ ಯಾರಾದರೇನು ಎತ್ತಿದವನ ಕತ್ತು ಕೊಯಿಸಿ ಹಳ್ಳದಲ್ಲಿ ಹುಗಿಸಿ ಬಿಡುತ್ತಿದ್ದರು. ಪಾಪ ಆ ಧೈರ್ಯ ನಿಮಗೆಲ್ಲಿ ಬರಬೇಕು

ರವಿ - ಧೈರ್ಯದ ಮಾತಲ್ಲ, ನಾಗು ಇದು, ನೋಡು ಜನಾಪವಾದ ಸಾಮಾನ್ಯವಲ್ಲ. ಜನ ಬಲವಿಲ್ಲದ ಯಾರೂ ಬಾಳಿಲ್ಲ. ಅಲ್ಲದೆ ಜನ ಬಲದ ಅವಲಂಬನೆಯಿಂದಲೇ ಬಾಳಬೇಕಾದ ಸಂಘದ ನೌಕರ ನಾನು, ಈಗ ಇದ್ದಕ್ಕಿದ್ದಂತೆ ಒಡಹುಟ್ಟಿದ ತಮ್ಮನಿಗೆ ಮನೆಯಿಂದ ಹೋಗು ಅಂತ ಅದು ಹೇಗೆ ಹೇಳಲಿ ?

ನಾಗಮ್ಮ - ಒಡಹುಟ್ಟಿದ ತಮ್ಮನಿಗೆ ಹೇಳದಿದ್ದರ ಬಿಡಿ. ತಾಳಿಕಟ್ಟಿ ಕರೆತಂದಿದ್ದೀರಲ್ಲ ನನಗೆ ಹೇಳಿ. ಆ ಮೇಲೆ ಅಣ್ಣ ತಮ್ಮ ಸುಖವಾಗಿ ಬಾಳಿ, ಎಷ್ಟೆ ಆದರೂ ನಾನೇ ಹೊರಗಿನವಳು ತಾನೇ ? ಅದರಲ್ಲಿಯೂ ಹೆಣ್ಣು, ಮೇಲೆ ಗರ್ಬಿಣಿ, ಕಣ್ಣಿನ ಕಾವು ತೀರಿದ ಬಳಿಕ ಹೆಣ್ಣಿಗೆಲ್ಲಿದೆ ಬೆಲೆ ? ಹಸಿದಾಗ ಹಾಸಿ ಉಂಡು ಹೊಟ್ಟೆ ತುಂಬಿದ ಬಳಿಕ ಬೀಸಿ ಬಗೆಯುವ ಪತ್ರಾವಳಿ. ಎಲ್ಲರ ಮನಸ್ಸಿಗೂ ಬೇಸರವಾದ ಬಳಿಕ ಮತ್ತೇನಿದೆ. ಅಟ್ಟಿಬಿಡಿ ನನ್ನನ್ನೇ ಈ ಮನೆಯಿಂದ ಅಂದರ ಭಿಕ್ಷೆ ಎತ್ತುತ್ತ ಹೋಗುತ್ತೇನ ಬೀದಿ ಬೀದಿ

ರವಿ - ಸಾಕು ಸಾಕು ಮಹಾರಾಯಳೇ ದಯವಿಟ್ಟು ಅಷ್ಟಕ್ಕೇ ಮುಗಿಸು ನಿನ್ನ ಮಾತನ್ನು, ನನ್ನ ತಲೆ ಸಿಡಿದು ಹೋದೀತು. ಇಲ್ಲಿ ಕೇಳು ಇನ್ನೆರಡು ದಿನ ಅವಕಾಶ ಕೊಡು ಅಷ್ಟರಲ್ಲಿ ಅಪ್ಪನೊಂದಿಗೆ ಮಾತನಾಡಿ ಎಲ್ಲಾ ಇತ್ಯರ್ಥ ಮಾಡಿಬಿಡುತ್ತೇನೆ

ನಾಗಮ್ಮ - ನೋಡಿ, ಅದೇನು ಮಾಡುತ್ತಿರೋ ಮಾಡಿ, ಆದರಿನ್ನೊಂದು ಮಾತು, ಈಗಲೇ ಹೇಳಿಬಿಡುತ್ತೇನೆ. ಇನ್ನು ಮೇಲೆ ಈ ಮನೆಯಲ್ಲಿ ಕಂಡವರ ಚಾಕರಿ ಮಾಡುವದು ಮಾತ್ರ ಖಂಡಿತವಾಗಿಯೂ ನನ್ನಿಂದ ಆಗದು. ಇನ್ನು ಮುಂದೆ ಈ ಮನೆಯಲ್ಲಿ ನಾನಿರಬೇಕು ಒಂದು, ಇಲ್ಲಾ ನಿಮ್ಮ ತಮ್ಮನಿರಬೇಕು ಒಂದು. (ಒಳಗೆ ಹೋಗಲು ನಿಂತು) ನೋಡ್ರಿ ಇವತ್ತೇ ಈ ತಲೆ ನೋವು ನಿವಾರಣೆಯಾಗಲಿ. (ಹೋಗುವಳು)

ರವಿ - ಇಷ್ಟು ಕಟ್ಟುನಿಟ್ಟಾಗಿ ಹೇಳಿದ ಬಳಿಕ ಇನ್ನೇನು ಕೂಡಿ ನಡೆಯುತ್ತದೆ ಮಣ್ಣು. ಈ ವಿಚಾರವನ್ನಷ್ಟು ತಂದೆಯವರ ಕಿವಿಯ ಮೇಲೆ ಹಾಕಿ ಮುಂದಿನ ವಿಚಾರ ಮಾಡಿದರಾಯಿತು. (ರಾಮಣ್ಣ ಬರುವನು) ಅಪ್ಪಾ ಬಾ ಇಲ್ಲಿ. ನಿನ್ನೊಂದಿಗೆ ಮಾತನಾಡುವದಿದೆ

ರಾಮಣ್ಣ - ಏನಪ್ಪ ಅದು ಮಾತು

ರವಿ - ಈ ಮಾತು ಕೇಳಿ ನೀನೆಷ್ಟು ನೊಂದುಕೊಳ್ಳುವಿಯೋ ಏನೋ. ಆದರೆ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡೇ ನಾನೀಗ ಈ ಮಾತು ಆಡುತ್ತಿದ್ದೇನೆ

ರಾಮಣ್ಣ - ಆಗಲಿ ಹೇಳು ಅದೇನು

ರವಿ - ಶೇಖರನಿಗೆ ಈ ಮನೆಯಲ್ಲಿ ಕೂಡಿ ಇರಲು ಮನಸ್ಸಿಲ್ಲವಂತೆ. ಬಾಂಧವ್ಯ ಕಡಿದುಕೊಂಡು ಬೇರೆ ಹೋಗುತ್ತಾನಂತೆ. (ಮ್ಯೂಜಿಕ್)

ರಾಮಣ್ಣ - ಬಾಂಧವ್ಯ ಕಡಿದುಕೊಳ್ಳುವ ಈ ಕೆಟ್ಟು ಮಾತು ಅವನ ಬಾಯಲ್ಲಿ ಬಂತೋ ಅಥವಾ ನೀವೇನಾದರೂ ಅಂದಿರೋ

ರವಿ - ನಾವೇನೂ ಅಂದಿಲ್ಲ. ಆದರೆ ಈಗ ಕೆಲವು ದಿನಗಳಿಂದ ಅವನಿಗೂ ಅವನ ಅತ್ತಿಗೆಗೂ ಮನಸ್ಸು ಮುರಿದು ಹೋಗಿದೆಯಂತೆ. ಕಾರಣ ದೂರಿದ್ದು ಬಿಡುವದೇ ವಿಹಿತವೆಂದು ಅವನ ಅಭಿಪ್ರಾಯ

ರಾಮಣ್ಣ - ಇದಕ್ಕೆ ನಿನ್ನ ಹೆಂಡತಿ ಏನಂದಳು ?

ರವಿ - ಮನಸ್ಸು ಕೆಟ್ಟ ಬಳಿಕ ಬಾಂಧವ್ಯ ಕಡಿದುಕೊಳ್ಳುವವೇ ಉತ್ತಮವೆಂದು ಹೇಳಿದಳು

ರಾಮಣ್ಣ - ಅಂದರೆ ಶೇಖರ ಮನೆಬಿಟ್ಟು ಹೋಗುವದೇ ಅವಳಿಗೂ ಬೇಕಾದಲ್ಲಿ ಅದಕ್ಕೆ ಯಾರೇನು ಮಾಡಲು ಸಾಧ್ಯ. ಮನೆಯಲ್ಲಿರುವದು ಶೇಖರನಿಗೂ ಬೇಕಿಲ್ಲ ಮೈದುನ ಮನೆಯಿಂದ ಹೊರಗೆ ಹೋಗಬಾರದೆಂಬ ಮಮತೆ ಮನೆಯೊಡತಿಯಾದ ನಿನ್ನ ಮಡದಿಗೂ ಇಲ್ಲ. ಇನ್ನು ಇವರಲ್ಲಿ ಕೇಳುವದೇನಿದೆ ? ನನ್ನ ಕಣ್ಣು ಮುಚ್ಚುವವರೆಗೂ ಈ ಮನೆ ಕೂಡಿ ನಡೆದಿದ್ದರೆ ನನಗೆ ಸಂತೋಷವಿತ್ತು. ಒಟ್ಟಿಗೆ ಆ ಭಾಗ್ಯವನ್ನೇ ನಾ ಬೇಡಿ ಬಂದಿಲ್ಲ.

ನಿಮ್ಮವ್ವ ಇದ್ದಿದ್ದರೆ ಹೇಗೂ ಇದನ್ನು ಬಗೆಹರಿಸುತ್ತಿದ್ದಳು. ಆದರೀಗ ಅವಳಿಲ್ಲ ಈ ಕರ್ಮ ನೋಡಲಿಕ್ಕೆ. ಇಲ್ಲಿ ನನ್ನ ಬಿಟ್ಟು ಆ ಪುಣ್ಯಾತ್ಮಳು ತಾನು ಮುತ್ತೈದೆ ಸಾವು ಪಡೆದು ಸ್ವರ್ಗದಲ್ಲಿ ಸಂಪಿಗೆ ಮರವಾದಳು

ರವಿ - ಹೋಗಲಿ ಬಿಡಪ್ಪ. ನೀನೆಷ್ಟು ನೆನೆದರೆ ತಾನೆ ಅವ್ವ ಮತ್ತೆ ಬರುತ್ತಾಳೇನು ?

ರಾಮಣ್ಣಾ - ನೆನೆಯದಿದ್ದರೆ ಹೇಗಪ್ಪ, ಅವಳಿದ್ದಾಗ ಎಲ್ಲಾ ಇದ್ದ ಹಾಗಿತ್ತು. ಅವಳು ಹೋದ ಗಳಿಗೆಯಲ್ಲಿ ಎಲ್ಲಾ ಹೋದಹಾಗೆ ಆಯಿತು

ರವಿ - ಹೋಗಲಿ ಬಿಡಪ್ಪ ಅವ್ವನ ವಿಷಯ, ಹೇಳು ಈಗ ನಾನೇನು ಮಾಡಬೇಕು

ರಾಮಣ್ಣಾ - ನನ್ನ ಕೇಳಿದರೆ ನಾನೇನು ಹೇಳಲಪ್ಪ ರವಿ. ನನಗೆ ಗೊತ್ತಿರೋದು ಅದೊಂದೇ ಮಾತು. ಅದು ನನ್ನಪ್ಪ ಹೇಳಿದ್ದು. ಹೆಂಡತಿ ಹೇಳಿದ ಹಾಗೆ ಕೇಳಿಕೊಂಡು ಹೋಗು ಸುಖವಾಗುತ್ತದೆ. ನಾನು ಅವಳ ಮಾತಿನಂತೆ ನಡೆದು ಒಳ್ಳೇದೇ ಆಯಿತು, ಏನೊಂದು ಇಲ್ಲದ ನನಗೆ ಅವಳು ಕೈಹಿಡಿದ ಬಳಿಕ ಈ ಮನೆ ಎರಡು ತೋಟ ಆಯಿತು. ಮುತ್ತಿನಂತಹ ನೀವು ಮೂರು ಜನ ಮಕ್ಕಳು ಹುಟ್ಟಿದಿರಿ. ಇನ್ನೇನಾಗಬೇಕು ? ಈಗ ನಾನು ನಿನಗೆ ಹೇಳುವದಿಷ್ಟೇ ನಿನ್ನ ಹೆಂಡತಿ ಹೇಳಿದ ಹಾಗೆ ಕೇಳಿಕೊಂಡು ಹೋಗು. ಮನೆತನದ ವಿಷಯಕ್ಕೆ ಮಡದಿಯ ಮಾತೇ ಶ್ರೇಷ್ಠ, ಉಳಿದವರ ಮಾತು ಕನಿಷ್ಠ

ರವಿ - ಅವಳಿಗೂ ಕೇಳಿದೆ... ಕೂಡಿರುವ ಮನಸ್ಸಿಲ್ಲ.... ಅವಳು ಕೂಡಾ ಬೇರೆಯಾಗುವದೇ ವಿಹಿತವೆಂದು ಹೇಳುತ್ತಾಳೆ

ರಾಮಣ್ಣಾ - ರವಿ ನನ್ನ ಕಣ್ಣು ಮುಚ್ಚುವವರೆಗೂ ನೀವಿಬ್ಬರೂ ಕೂಡಿ ಇದ್ದಿದ್ದರೆ ನನಗೆ ಸಂತೋಷವಿತ್ತು. ಆಗಲಿ ಸರಿ ಹಾಗೇ ಮಾಡು ಕೂಡಿಯಿದ್ದರೇನು, ಬೇರೆಯಿದ್ದರೇನು, ಮುಖ್ಯ ಸುಖವಾಗಿದ್ದರೆ ಸಾಕು. ನೋಡು ರವಿ ನನಗೆ ನೀವಿಬ್ಬರೂ ಎರಡು ಕಣ್ಣುಗಳಂತೆ ಇದ್ದೀರಿ. ನೆನಪಿರಲಿ ರವಿ ಯಾವ ಕಣ್ಣಿಗೆ ಪೆಟ್ಟು ತಾಗಿದರೂ ನೋವಾಗುವದು ನನಗೆ. ಆದರೆ ಒಂದು ಮಾತು ಶೇಖರನು ಇನ್ನೂ ಮದುವೆಯಾಗದ ಹುಡುಗ. ಹೀಗೆ ಹೊರಗೆ ಹಾಕುವದು ಒಳಿತಲ್ಲ. ಕಾರಣ ನೀನೂ ನಿನ್ನ ಮಡದಿ ಕೂಡಿ ಅವನಿಗೊಂದು ಒಳ್ಳೇ ಮನೆತನದ ಕನ್ಯೆ ನೋಡಿ ಮದುವೆ ಮಾಡಿಬಿಟ್ಟರೆ ಅವನ ಬಾಳು ಸುಗಮವಾಗಿ ನನ್ನ ಮನಕ್ಕೂ ಒಂದು ನೆಮ್ಮದಿ ಸಿಗುತ್ತದೆ

ರವಿ - ಆಗಲಪ್ಪ ಹಾಗೇ ಮಾಡ್ತೇನಿ. ನಡೆಯಪ್ಪ ಊಟ ಮಾಡೋಣ

ರಾಮಣ್ಣಾ - ನನಗೀಗ ಹಸಿವೆಯಿಲ್ಲ, ಹೋಗು ನೀನು ಊಟಮಾಡು. (ರವಿ ಹೋದ ಬಳಿಕ) ಖಂಡಿತವಾಗಿಯೂ ಈ ಮನೆ ಒಡೆಯುವದು ನಿಶ್ಚಿತ ! ಒಂದು ಹೆಣ್ಣು ತನ್ನೆಲ್ಲ ಬಯಕೆಗಳನ್ನು ಬಲಿಕೊಟ್ಟು ತ್ಯಾಗದಿಂದ ಒಂದು ಮನೆ ಕಟ್ಟುತ್ತದೆ. ಬೇರೊಂದು ಹೆಣ್ಣು ಬಂದು ತನ್ನ ಸ್ವಾರ್ಥಕ್ಕಾಗಿ ಕಟ್ಟಿದ ಆ

ಮನೆಯನ್ನು ಒಡೆಯುತ್ತದೆ. ಜೀವ ಹುಟ್ಟುವದು ಹೇಗೆ ಸಾಯುವುದಕ್ಕೋ ಹಾಗೆ. ಮನೆ ಕಟ್ಟುವದು ಅದನ್ನು ಒಡೆಯುವದಕ್ಕೆ. ಸಾವಿತ್ರಿ, ನೀನೇ ಪುಣ್ಯಾತ್ಮಳು. ಒಂದು ವೇಳೆ ನಾನು ಸತ್ತು ನೀನೇ ಉಳಿದಿದ್ದರೆ ನೀನು ಕಟ್ಟಿದ ಈ ಮನೆ ಒಡೆಯುತ್ತಿರಲಿಲ್ಲವೇನೋ (ಶ್ಯಾಮಣ್ಣ - ಸುನಂದ ಬರುವರು) ಓ ಬನ್ನಿ ಶ್ಯಾಮಣ್ಣನವರೇ, ಬಾ ಸುನಂದ, ನಾಗಮ್ಮ ಬಾರಮ್ಮಾ ಇಲ್ಲಿ ನಿನ್ನ ತಂದೆ ಸುನಂದ ಬಂದಿದ್ದಾರೆ. (ನಾಗಮ್ಮ, ರವಿ ಬರುವರು)

ನಾಗಮ್ಮ - ಬಂದಿಯಾ ಅಪ್ಪಾ ಬಾ ಸುನಂದ (ಅಪ್ಪಿಕೊಳ್ಳುವಳು)

ರವಿ - ಕುಳಿತು ಕೊಳ್ಳಿ ಮಾಮಾ ಪತ್ರ ಯಾವಾಗ ಮುಟ್ಟಿತು ?

ಶ್ಯಾಮಣ್ಣ - ನಿನ್ನೆ ತಾನೇ ಬಂದು ಮುಟ್ಟಿತು. ನಾಗೂ ಗರ್ಭಿಣಿಯಾದ ವಿಷಯ ಓದಿದೆ. ತಕ್ಷಣ ಯಾವಾಗ ಅಕ್ಕನ ಮುಖ ಕಂಡೇನು ಅಂತ ಸುನಂದ ಅವಸರಪಡಿಸಿ ಕರೆತಂದಳು. ಬಂದೇ ಬಿಟ್ಟೆವು

ರವಿ - ಒಳ್ಳೇದಾಯಿತು ಮಾಮಾ. ಇನ್ನೇನು ಊಟಕ್ಕೆ ಕೂಡ್ರುವದರಲ್ಲಿದ್ದೆವು, ಅಷ್ಟರಲ್ಲಿ ತಾವು ಬಂದಿರಿ. ಬನ್ನಿ ಊಟ ಮುಗಿಸಿ ಮಾತನಾಡೋಣವಂತೆ ಬಾ ಅಪ್ಪ. (ಎಲ್ಲರೂ ಒಳಗೆ ಹೋಗುವರು. ಸುನಂದ, ನಾಗಮ್ಮ ಇಬ್ಬರೇ ಉಳಿಯುವರು)

ನಾಗಮ್ಮ - ಸುನಂದ, ಆರು ತಿಂಗಳಲ್ಲಿ ಬದಲಾಯಿಸಿ ಬಿಟ್ಟಿದ್ದೀಯೇ ಥಟ್ಟನೇ ನಿನ್ನ ಗುರ್ತು ಸಿಕ್ಕಲಿಲ್ಲ

ಸುನಂದ - ಇದೊಳ್ಳೇ ಮಾತು, (ಹೊಟ್ಟೆ ತೋರಿಸಿ) ಗುರ್ತು ಸಿಕ್ಕದಾದವಳು ನಾನೋ ಅಥವಾ ನೀನೋ. ಅಕ್ಕಾ ಮೊದಲೇ ಸುಂದರಿಯಾದ ನೀನು ಗರ್ಭ ಧರಿಸಿದ ಪ್ರಯುಕ್ತ ಮತ್ತಿಷ್ಟು ಸುಂದರಿಯಾಗಿ ಕಾಣುವಿ. ಸುರಲೋಕದ ಅಪ್ಸರೆ ಧರೆಗಿಳಿದು ಬಂದಿರುವಳೇನೋ ಎಂದು ಸಂದೇಹವಾಗುತ್ತದೆ

ನಾಗಮ್ಮ - ಸಾಕು ಸುಮ್ಮನಾಗೇ ಕಳ್ಳಿ. (ಕೆನ್ನೆಗೆ ಹೊಡೆಯುವಳು)

ಸುನಂದ - ಅಕ್ಕಾ ನೀ ಮುಡಿದ ಹೂವು ಎಲ್ಲಿ ಸಿಕ್ಕವು ?

ನಾಗಮ್ಮ - ಇನ್ನೆಲ್ಲಿ ನಮ್ಮ ತೋಟದಲ್ಲಿ ಇದರ ಬಳ್ಳಿ ಹಾಕಿಸಿದ್ದೇನೆ

ರವಿ - ನಾಗೂ (ಎಂದು ಕೂಗುವನು)

ನಾಗಮ್ಮ - ಬರತೇನಿ... ಸುನಂದಾ ಅವರಿಗಿಷ್ಟು ಊಟಕ್ಕೆ ಬಡಿಸಿ ಬರತೇನ, ಕೂಡ್ರು (ಹೋಗುವಳು)

ಸುನಂದ - ಎಲ್ಲಿ ಹೋಗಿದ್ದಾನೋ ಈ ನಮ್ಮ ರೈತ ಚಕ್ರವರ್ತಿ, ಹಾಸ್ಯಪಟು ಶೇಖರ ಮಾಮಾ. ಮೊದಲು ನಾನವರನ್ನು ನೋಡಬೇಕಿತ್ತು (ಶೇಖರ ಬರುವನು) ಓ ನಮಸ್ತೆ

ಶೇಖರ - ನಮಸ್ಕಾರ್ರಿ ಸುನಂದಾಬಾಯಿಯವರ ಯಾವಾಗ ಬಂದದ್ದು

ಸುನಂದ - ಇದೀಗ ಬಂದೆವು. ಅದಿರಲಿ ಸಧ್ಯ ನೀವು ಊಟ ಮಾಡುತ್ತಿರೇನು ?

ಶೇಖರ - ಏಕೆ ಏನಾದರೂ ಕೆಲಸವಿತ್ತೇನು ?

ಸುನಂದ - ಹೌದು ನೀವು ನಡೆಸುವದಾಗಿ ಮಾತುಕೊಟ್ಟರೆ ಮಾತ್ರ ಹೇಳುತ್ತೇನೆ. ಕೇಳತೀರಾ ನನ್ನ ಮಾತ್ನ

ಶೇಖರ - ಆಗಲಿ ಹೇಳಿ

ಸುನಂದ - ನೋಡಿ ನಿಮ್ಮ ತೋಟದಲ್ಲಿ ಹೂ ಬೆಳೆಸಿದ್ದು ನನಗೆ ತಿಳಧ್ದಿರಲಿಲ್ಲ. ಇವತ್ತು ಅಕ್ಕ ಮುಡಿದ ಹೂ ಕಂಡು ನನಗೂ ಈ ಹೂವಿನ ಮೇಲೆ ಆಸೆಯಾಗಿದೆ ಆದ್ದರಿಂದ ..

ಶೇಖರ - ಆ ಬಳ್ಳಿ ಕಿತ್ತು ತಂದುಕೊಡು ಅಂತಿರಾ ? ಮುಡೀಲಿಕ್ಕೆ

ಸುನಂದ - ಛೀ. ಜಡೆಗೆ ಬಳ್ಳೀ ಮುಡೀತಾರೇನ್ರಿ. ಹೂ ಮುಡಿಬೇಕೋ ಅಂತಾ ಆಸೆ

ಶೇಖರ - ಸ್ಪಷ್ಟ ಹೇಳ್ರಿ ಹೂ ಬೇಕು ತಂದುಕೊಡ್ರಿ ಅಂತಾ, ಎಷ್ಟು ಅಂಜತೀರಿ ಕಣ್ಣಿಗೆ ನೋಡೂದಕ ಇರುಕಳ ದನ ಕಂಡಾಂಗ ಕಾಣೆತೀರಿ, ಅಂಜಿತೀರೋ ಏನು ಅಂಜಿದಂಗ ಮಾಡತೀರೋ ?

ಸುನಂದ - ಹಿಂದೊಮ್ಮೆ ಹಣ್ಣು ತಂದುಕೊಡ್ರಿ ಅಂತಾ ಅಂದ್ರೆ ಮಣ್ಣ ತುಳೀತಾ ಬೆನ್ನು ಹತ್ತಿ ತೋಟಕ್ಕೆ ಬಾ ಅಂತಾ ಹಂಗಿಸಿದ್ದಿರೀ

ಶೇಖರ - ಹಣ್ಣಿಗೂ ಹೂವಿಗೂ ಬಹಳ ವ್ಯತ್ಯಾಸ ಅದರಿ. ನಿಮ್ಮ ಮುಡಿಗೆ ಮಲ್ಲಿಗೆ ಹೂ ತರಲಿಕ್ಕೆ ಒಲ್ಲೆ ಅಂದೇನೇನ್ರಿ ? ಮನಸು ನಿಲ್ಲಬೇಕಲ್ಲ ತರತೇನ್ರಿ

ಸುನಂದ - ನೋಡ್ರಿ ನಿಮ್ಮಿಷ್ಟ. (ಶೇಖರ ನಗುತ್ತ ಹೋಗುವನು)

ನಾಗಮ್ಮ - (ಬರುತ್ತ) ಯಾರು ಸುನಂದ... ನಿನ್ನ ಕೂಡ ಮಾತನಾಡಿದವರು ಶೇಖರನಲ್ಲವೆ?

ಸುನಂದ - ಹೌದು ಹೂ ತರಲಿಕ್ಕೆ ತೋಟಕ್ಕೆ ಕಳಿಸಿದೆ ಯಾಕೆ ? ಕೆಲಸವಿತ್ತೇನು

ನಾಗಮ್ಮ - ಊಟಕ್ಕೆ ಬರತಾನೇನೋ ಅಂತ ನೋಡಿದೆ. ಏನೇ ಉರಿ ಬಿಸಿಲಿನಲ್ಲಿ ಹೂ ತರಲಿಕ್ಕೆ ತೋಟಕ್ಕೆ ಅಟ್ಟಿದಿಯಲ್ಲ, ನೀನೂ ಒಲೆ ಘಾಟಿ ಹೆಣ್ಣು. ಅದು ಹೇಗೆ ಬರಿ ಹೊಟ್ಟೆಯಲ್ಲಿ ಅಟ್ಟಿದಿಯೇ ಆಯಪ್ಪಂಕನ್ನಾ

ಸುನಂದ - ಹೀಗೇಕೆ ಮಾತನಾಡುತೀಯೇ ಅಕ್ಕ ಅವರಿಗೆ

ನಾಗಮ್ಮ - ನಾನೇನಂದೆನೆ ಅವನಿಗೆ ಅನಬಾರದ್ದು, ನೀನಷ್ಟು ನಗನಗತಾ ಹೂ ತಂದುಕೊಡು ಅಂತಾ ಹೇಳಿರಬೇಕು ಅಷ್ಟೇ ಸಾಕು ಅಂತಾ ಈ ಊರಿಬಿಸಿನಲ್ಲಿ ಮುಖ ಇಷ್ಟಗಲ ಮಾಡಿಕೊಂಡು ಓಡತಾ ಹೋಗಿರಬೇಕು. ಇಷ್ಟೇ

ಹೌದಲ್ಲೋ ! ಹೀಗೆ, ಮೂರಿದ್ದರೆ ಮೂರೂ ಶುದ್ಧ ಮಂಕುಮುಂಡೆವು. ಎರಡು ಒಳ್ಳೇ ಮಾತಾಡಿದರೆ ಸಾಕು ಮುಖ ಕಮಲದ ಹಾಗೆ ಅರಳಿ ಬಿಡುತ್ತೆ. ಬಂದ ದಿನವೇ ಇದನ್ನು ಅರಿತುಕೊಂಡ ನಾನು ಬಲ್ಲಂತೆ ಕುಣಿಸುತ್ತ ಬಂದಿದ್ದೇನೆ. ತಡೆ ಇನ್ನು ನಾಲ್ಕು ದಿನ. ನಾನು ಕಟ್ಟಿದ ನಾಟಕ ಏನು ಅನ್ನವುದು ನಿನಗೇ ಅರ್ಥವಾಗ್ತದೆ

ಸುನಂದ - ಅದೇನಕ್ಕ ನೀನು ಕಟ್ಟಿದ ನಾಟಕ

ನಾಗಮ್ಮ - ಕೇಳು ಹಾಗಿದ್ದರೆ (ಸುತ್ತು ನೋಡಿ) ನೀನು ಹೋದ ದಿನವೇ ಇವರಕ್ಕನಿಗೆ ನಷ್ಟವಾಗಿ ಮೂರುಸಾವಿರ ಹಣ ತೆಗೆದುಕೊಂಡು ಬರಬೇಕು ಅಂತ ತಾರಕ್ಕನಿಗೆ ಪತ್ರಕೊಟ್ಟು ಕಳಿಸಿದ್ದರು ಇವರು. ಇವರಿದ್ದಾರಲ್ಲ ನಿನ್ನ ಭಾವ, ಅಂದರ ಈ ನನ್ನ ಕತ್ತಿಗ ತಾಳೀ ಕಟ್ಟಿದವರು ಗಾಂಧೀ ಅಜ್ಜನ ಅಪರಾವತರ. ತಮ್ಮ ಹೆಸರಿನಲ್ಲಿ ಸಂಘದಲ್ಲಿ ಸಾಲ ತಂದು ಅಕ್ಕನ ಗಂಡನಿಗೆ ಕೊಟ್ಟು ಕಳಿಸಬೇಕೆಂದು ಮಾಡಿದ್ದರು. ಆಗ ನಾನೇನು ಮಾಡಿದೆ ಗೊತ್ತೇ

ಸುನಂದ - ಏನು ಮಾಡಿದಿ ?

ನಾಗಮ್ಮ - ಸಾಲದ ಪತ್ರ ಶೇಖರನ ಹೆಸರಿನಲ್ಲಿ ಬರೆಯಿಸಿ ಅವನಿಂದ ಸಹಿ ಹಾಕಿಸಿಕೊಟ್ಟೆ. ಮೂರು ಸಾವಿರದ್ದಲ್ಲ ನಮ್ಮ ಲಗ್ನದಲ್ಲಿ ಮಾಡಿದ್ದ ಎರಡು ಸಾವಿರ ಸಾಲ ಸಹಿತ, ಒಟ್ಟು ಐದು ಸಾವಿರಕ್ಕೇನೇ ಬರೆಯಿಸಿಬಿಟ್ಟ ನನ್ನ ಒಂದೇ ಮಾತಿಗೇನೇ. ಈ ಕುರಿ ಹಳ್ಳಕ್ಕೆ ಬಿತ್ತು

ಸುನಂದ - ಕುರಿ ಯಾರು ?

ನಾಗಮ್ಮ - ಇನ್ನಾರು ಅವನೇ ಆ ಶೇಖರ. ತಲೆಯಲ್ಲಿ ಬುದ್ಧಿಯಿಲ್ಲದೆ ಇರೋ ಮನುಷ್ಯನ ಕುರಿ ಅನ್ನದೇ ನರಿ ಅನ್ನಬೇಕೇನು. ಈಗೀಗ ಕೂಡಿ ನಡಿಯೋದಿಲ್ಲ. ಬೇರೆ ಹೋಗುತ್ತೇನೆ ಅಂತ ಹಾರಾಡುತ್ತಿದ್ದಾನೆ. ನಮಗೂ ಅಷ್ಟೇ ಬೇಕಿತ್ತು. ಇನ್ನೆರಡು ದಿನದಲ್ಲಿ ಮಾಡಿದ ಐದು ಸಾವಿರ ರೂಪಾಯಿ ಸಾಲ ಅವನ ತಲೆಯ ಮೇಲಿಟ್ಟು ಮನೆಯಿಂದ ಹೊರದಬ್ಬಿ ಬಿಡುತ್ತೇನೆ. (ಮ್ಯೂಜಿಕ್)

ಸುನಂದ - ಅಕ್ಕಾ ಇದು ಶುದ್ಧ ಅನ್ಯಾಯ. ಅತ್ತಿಗೆಯಾದ ನಿನ್ನನ್ನು ಹೆತ್ತತಾಯಿಗಿಂತ ಹೆಚ್ಚು ಮಮತೆಯಿಂದ ಕಾಣುವ ಮಗುವಿನಂತಹ ಮೈದುನನ ಕತ್ತನ್ನು ಮೋಸದಿಂದ ಕತ್ತರಿಸುವುದು ಅತಿಹೀನಕಾರ್ಯ. ಧರ್ಮ ನ್ಯಾಯ, ನೀತಿ, ಒಂದೂ ಬೇಡವೇ ?

ನಾಗಮ್ಮ - ನೀನೊಂದು ಹುಚ್ಚು ಹುಡುಗಿ, ನ್ಯಾಯವಂತೆ, ಧರ್ಮವಂತೆ. ಅವರೂ ಮೊದಮೊದಲು ಹೀಗೆ ಹಾರಾಡಿದರು. ದುಡ್ಡಿನ ಬೆಲೆ ಎಷ್ಟು ಅಂತ ತಿಳಿಸಿಕೊಟ್ಟೆ. ಆಗ ತಾವೇ ಒಪ್ಪಿಕೊಂಡು ಬಿಟ್ಟರು

ಸುನಂದ - ಅಂತೂ ನೀನು ಮಹಾ ಬುದ್ದಿವಂತೆ ನೋಡೇ ಅಕ್ಕಾ

ನಾಗಮ್ಮ - ಆದ್ದರಿಂದಲೇ ನನ್ನದು ಒಂದು ಮನೆ ಸಂಸಾರ ಅಂತ ಆಗತಾಯಿದೆ. ಇರದಿದ್ದರೆ ತಾಳೀ ಕಟ್ಟಿದ ಈ ನನ್ನ ಗಂಡ ಅನ್ನೋ ಪ್ರಾಣಿ ಸಡಿಲು ಬಿಟ್ಟಿದ್ದರೆ ಈ ಹೊತ್ತಿಗೆ ಮನೆ ಸುಟ್ಟು ಅವರ ಬೂದೀನ ಹಣೆಗಿಟ್ಟುಕೊಂಡು ದೇಶಾಂತರ ಅಲೀತಿದ್ರು. ಅಹುದೋ ಅಲ್ಲವೋ ನೀನೆ ಹೇಳು. ಸಾಲ ಹೊರಿಸಿ ಶೇಖರನ್ನ ಹೊರಗೆ ಹಾಕಿ ಮನೆ ಉಳಿಸಿಕೊಂಡು ಮಾನವಂತರಾಗಿ ಬಾಳಲಿಕ್ಕೆ ಹಾದಿಯಾಯಿತು

ಸುನಂದ - ನಿನ್ನ ಮನೆಯ ಕತ್ತಲು ಕಳೆಯಬೇಕಾಗಿದ್ದರೆ ಎಣ್ಣೆ ತಂದು ದೀಪ ಉರಿಸಿ ಬೆಳಕು ಮಾಡಿಕೊಳ್ಳಬೇಕು. ಅದನ್ನು ಬಿಟ್ಟು ಇನ್ನೊಬ್ಬರ ಮನೆಗೆ ಬೆಂಕಿಯನ್ನಿಟ್ಟು ನಿನ್ನ ಮನೆ ಬೆಳಗಿಸಬೇಕು ಅನ್ನೋದು ಮಾತ್ರ ಒಳ್ಳೇದಲ್ಲ. ಅಣ್ಣ ತಮ್ಮಂದಿರಲ್ಲಿ ಒಡಕು ಹುಟ್ಟಿಸುವ ಈ ಹೊಲಸು ಕೆಲಸವನ್ನು ದೇವರು ಮೆಚ್ಚುವದಿಲ್ಲ

ನಾಗಮ್ಮ - ದೇವರು ಮೆಚ್ಚುವ ಕೆಲಸ ಮಾಡುತ್ತ ಹೋದರೆ ಮನೆ ಉಳಿಯಬೇಕಲ್ಲ. ಹತ್ತರ ಜತೆಗೆ ಹತ್ತು ಕೂಡಿದರೆ ತಾನೇ ಇಪ್ಪತ್ತಾಗೋದು. ಅದನ್ನು ಬಿಟ್ಟು ಹತ್ತರಲ್ಲಿ ಹತ್ತು ಕಳಿದರೆ ಕಡೆಗೆ ಉಳಿಯೋದು ಬರಿ ಸೊನ್ನೆ. ಇದೆಲ್ಲಾ ಸತ್ಯಯುಗದ ಮಾತು. ಕಲಿಕಾಲದಲ್ಲಿ ಕಾಲು ಕೆಟ್ಟು ಹೋದಬಳಿಕ ಮನುಷ್ಯ ನೆಟ್ಟಗಿದ್ದರೇನು ಬಂತು

ಸುನಂದ - ಅಕ್ಕಾ ನಿನ್ನದು ಬರಿ ಬುದ್ಧಿವಂತಿಕೆಯಲ್ಲ, ಮನೆಮುರುಕ ಬುದ್ಧಿವಂತಿಕೆ. ಹಾವು ಕೊಯ್ದು ಹದ್ದಿಗೆ ಹಾಕೋ ಜಾಣ್ಮೆ. (ನಾಗೂ ಎಂದು ರವಿ ಒಳಗಿನಿಂದ ಮತ್ತೆ ಕೂಗುವನು)

ರವಿ - ನಾಗೂ ...

ನಾಗಮ್ಮ - ಹೂ ಬಂದೆ, ಸುನಂದ ಉಟಕ್ಕೆ ಬಡಿಸುವದನ್ನು ಅರ್ಧಕ್ಕೇ ಬಿಟ್ಟು ಬಂದಿದ್ದೇನೆ. ಬರತೇನಿ. (ಹೋಗುವಳು)

ಸುನಂದ - ಅಕ್ಕನ ದುಷ್ಟತನ ಕಂಡು ನನ್ನ ಮೈ ನಡುಗಿತು. ಇವಳಿಗಿಂತ ದುರ್ಬುದ್ಧಿ ಏಕೆ ಹುಟ್ಟಿತೋ ? ನಾನೇಕೆ ಇಲ್ಲಿಗೆ ಬಂದೆನೋ ಈ ಅನ್ಯಾಯ ನೋಡಲು. (ರಾಮಣ್ಣಾ, ಶ್ಯಾಮಣ್ಣಾ ಊಟ ಮುಗಿಸಿ ಬರುವರು. ನಂತರ ನಾಗಮ್ಮ ಎಲೆ-ಅಡಿಕೆ ತಾಟು ತಂದಿಟ್ಟು ಹೋಗುವಳು)

ರಾಮಣ್ಣ - ನಾನು ಮನೆಯ ಒಂದು ಕೆಲಸದ ಸಲುವಾಗಿ ನಿಮ್ಮನ್ನು ಕರೆಯಿಸಿಕೊಳ್ಳುವವನಿದ್ದೆ. ಅನಾಯಾಸವಾಗಿ ನೀವು ಬಂದುಬಿಟ್ಟಿರಿ. ಇದು ಒಂದು ದೃಷ್ಟಿಯಿಂದ ಅನುಕೂಲವಾಯಿತು. ಸೋದ್ರಿ ರವೀಂದ್ರನಿಗೆ ನಿಮ್ಮ ಮಗಳನ್ನು ತೆಗೆದುಕೊಂಡೆವು. ಇಷ್ಟರಲ್ಲಿ ದೊಡ್ಡಮಕ್ಕಳ ಮುಖ

ಕಾಣುವಂತಾಯಿತು. ಅವನ ಬಗ್ಗೆ ಚಿಂತೆ ದೂರಾಯಿತು. ಇನ್ನುಳಿದದ್ದು ಶೇಖರನ ವಿಚಾರ. ಅವನಿಗೂ ಒಂದು ಒಳ್ಳೇ ಮನೆಯ ಕನ್ಯೆ ಹುಡುಕಿ ಮದುವೆ ಮುಗಿಸಬೇಕು. ನೀವು ಈ ಮನೆಗೆ ಬೇಕಾದವರು. ಶೇಖರನಿಗೆ ಹೆಣ್ಣು ಹುಡುಕುವ ಭಾರ ನಿಮಗೆ ಸೇರಿದ್ದು

ಶ್ಯಾಮಣ್ಣ - ನೀವು ಹೇಳಿದ ಮಾತು ಕೇಳಿ ನನ್ನ ತಲೆಯಲ್ಲಿ ಒಂದು ವಿಚಾರ ಬಂದಿದೆ. ಈ ವಿಚಾರ ಒಳ್ಳೇಯದೋ ಕೆಟ್ಟದ್ದೋ ನಾ ಕಾಣೆ. ಹೇಳು ಅಂದರೆ ಹೇಳುತ್ತೇನೆ. ಏನಪಾ ರವಿ

ರವಿ - ಹೇಳಿ ಮಾಮಾ ಅದೇನು ಮಾತು ?

ಶ್ಯಾಮಣ್ಣ - ನನ್ನ ಮಗಳು ಸುನಂದೆಯನ್ನೇ ನಿಮ್ಮ ಶೇಖರನಿಗೆ ಏಕೆ ತೆಗೆದುಕೊಳ್ಳಬಾರದು. ಅಣ್ಣ - ತಮ್ಮಂದಿರನ್ನು ಅಕ್ಕ-ತಂಗಿಯರು ಮದುವೆಯಾದರೆ ನಾಲ್ಕೂ ಜನರು ಒಂದೇ ಕುಟುಂಬದಲ್ಲಿ ಸುಖವಾಗಿರಬಹುದು. ಏಕೆ ರಾಮಣ್ಣನವರೇ

ರಾಮಣ್ಣ - ಎಲ್ಲರೂ ಒಪ್ಪಿದರೆ ಸಂತೋಷವಾಗಿ ನಡೆದುಹೋಗಲಿ ಏಕೋ ರವಿ

ರವಿ - ನನಗೂ ಇದು ಒಳ್ಳೇ ಆಲೋಚನೆಯಂದೇ ಕಾಣುತ್ತದೆ. ಅಕ್ಕ ತಂಗಿ ಒಂದೇ ಕಡೆಗೆ ಸೇರಿದರೆ ಒಡೆದು ಹೋಗುವ ಮನೆ ಉಳಿಯುತ್ತದೆ (ಶೇಖರ ಬರುವನು) ಬಾ ಶೇಖರ ನಿನ್ನ ಮದುವೆಯ ವಿಷಯ ಮಾತನಾಡುತ್ತಲಿದ್ದೇವೆ ಬಾ

ಶೇಖರ - ಏನಣ್ಣ ನನಗೆ ಮದುವೆಯೇ ?

ರವಿ - ಅಹುದು ನಿನಗೆ ಮದುವೆ ಮಾಡದೆ ಇನ್ನಾರಿಗೆ ಮದುವೆ ಮಾಡುವದು ?

ಶೇಖರ - ಇದೇನು ಅಣ್ಣಾ ಇದ್ದಕ್ಕಿದ್ದಂತೆಯೇ ನನ್ನ ಮದುವೆಯ ಆಲೋಚನೆ ?

ರಾಮಣ್ಣ - ಅಹುದೋ ನಿನ್ನ ಅತ್ತಿಗೆಯ ತಂಗಿ ಬಂದಿದ್ದಾಳಲ್ಲ ಸುನಂದ... ಅವಳನ್ನು ನಿನಗೆ ಕೊಟ್ಟು ಮದುವೆ ಮಾಡಬೇಕೆಂದು ಈ ನಿಮ್ಮ ಮಾವ ಬಯಸುತ್ತಾರೆ. ನನಗೂ ಇದು ಒಳ್ಳೇದೇ ಅನಿಸುತ್ತದೆ. ಇದಕ್ಕೆ ನಿನ್ನ ಅಭಿಪ್ರಾಯ ತಿಳಿಸು

ಶೇಖರ - ಅಪ್ಪ ಈ ಸಂಬಂಧ ನಿನಗೂ ಅಣ್ಣನಿಗೂ ಒಪ್ಪಿಗೆ ಇದೆಯೇ ?

ಶ್ಯಾಮಣ್ಣ - ಇಲ್ಲಿ ನಿನ್ನ ಒಪ್ಪಿಗೇನೇ ಮುಖ್ಯ. ಹುಂ ಹೇಳು ಸುನಂದೆಯನ್ನು ಒಪ್ಪುವಿಯಾ ?

ಶೇಖರ - ಅಂದರ ನನ್ನ ಮದುವೆ ಮಾಡಿಕೊಳ್ಳಲಿಕ್ಕೆ ನಿಮ್ಮ ಮಗಳು ಒಪ್ಪುತ್ತಾಳೇನು ?

ರವಿ - ಮೊದಲು ನಿನ್ನ ಅಭಿಪ್ರಾಯ ತಿಳಿಸೋ ಆ ಮೇಲೆ ಅವಳ..

ಶೇಖರ - ಅಣ್ಣಾ ಸುನಂದ ಒಪ್ಪಿದರ ನಾನು ಅವಳನ್ನು ಮದುವೆಯಾಗುತ್ತೇನೆ. ಅದು ನನ್ನ ಭಾಗ್ಯ ಅಂತ ಭಾವಿಸುತ್ತೇನೆ. (ನಾಚಿ ಓಡುವನು)

ರಾಮಣ್ಣ - ಹೂ ಇನ್ನು ಮುಂದಿನ ಯೋಚನೆ ಮಾಡಿ

ಶ್ಯಾಮಣ್ಣ - ಮುಂದಿನ ವಿಚಾರವೇನು ನೀವೇ ಹೇಳಿ ವರನಿಗೆ ಏನೇನು ಕೊಡಬೇಕು

ರಾಮಣ್ಣ - ಅದಲ್ಲ ಶ್ಯಾಮಣ್ಣನವರೇ ಮೊದಲು ನಿಮ್ಮ ಹಿರಿಯ ಮಗಳಾದ ನಾಗಮ್ಮಳಿಗೂ ಈ ವಿಷಯ ತಿಳಿಸಬೇಕಲ್ಲ

ರವಿ - ಅವಳೇನು ಈ ಮನೆಗೆ ತನ್ನ ತಂಗೀನೇ ಬರುತ್ತಾಳೆಂದರೆ ನಗುನಗುತ್ತಾ ಒಪ್ಪುತ್ತಾಳೆ. ನೋಡಿ ಬೇಕಾದರೆ ಏ ನಾಗೂ

ನಾಗಮ್ಮ - (ಬರುತ್ತ) ಏನು ?

ರವಿ - ಬಾಯಿಲ್ಲಿ ನೋಡು. ನನ್ನ ತಮ್ಮ ಶೇಖರನಿಗೆ ನಿನ್ನ ತಂಗಿ ಸುನಂದೆಯನ್ನೇ ತೆಗೆದುಕೊಳ್ಳುವ ನಿರ್ಧಾರವಾಯಿತು

ನಾಗಮ್ಮ - ಬೆಂಕಿ ಹಚ್ಚಿತು ನಿಮ್ಮ ನಿರ್ಧಾರಕ್ಕೆ. ಯಾರನ್ನು ಕೇಳಿ ಮಾಡಿದಿರಿ ನೀವು ಈ ನಿರ್ಧಾರ ?

ರವಿ - ಅಲ್ಲೇ ನಾಗು, ಬೇರೆ ಮನೆಯ ಹುಡುಗಿ ಶೇಖರನ ಕೈ ಹಿಡಿದು ಬರುವದಕ್ಕಿಂತ ನಿನ್ನ ತಂಗಿಯೇ ನಿನ್ನ ಮನೆಗೆ ಬಂದರೆ ನಿನಗೆ ಸಂತೋಷವಿಲ್ಲವೇ ?

ನಾಗಮ್ಮ - ಸಂತೋಷ ಆಗದೇನು ಮಾಡೀತು, ಸಂತೋಷವಂತೆ ಸಂತೋಷ. ಈ ಮಾತು ಕೇಳಿ ನನ್ನ ಹೊಟ್ಟೆಯಲ್ಲಿ ಹಾಲಾಹಲ ಸುರುವಿದಂತಾಯಿತು. ಯಾರು ಮನೆ ಹಾಳಾ ನಿಮಗೆ ಈ ಮಾತು ಹೇಳಿಕೊಟ್ಟವನು...

ರವಿ - ನೋಡೇ ಇದು ಸಣ್ಣ ಮಾತಲ್ಲ. ಮೂರುದಿನ ವಿಚಾರಮಾಡಿ ಹೇಳು

ನಾಗಮ್ಮ - ಮೂರು ದಿನ ವಿಚಾರ ಮಾಡಿದರೂ ಅಷ್ಟೇ, ನೂರು ದಿನ ವಿಚಾರ ಮಾಡಿದರೂ ಅಷ್ಟೇ. ಈ ಮಾತು ಸಾಧ್ಯವಿಲ್ಲ ಅಂದರೆ ಸಾಧ್ಯವಿಲ್ಲ. ಇನ್ನೊಂದು ಸಲ ಈ ಮಾತನ್ನು ನನ್ನೆದುರು ಎತ್ತಬೇಡಿ. ಯಾವನವನು ಮನೆಹಾಳ ನಿಮಗೀ ಮಾತು ಹೇಳಿಕೊಟ್ಟವನು

ರವಿ - ಹಾಳಾದವಳೆ ಹಾಗೆಲ್ಲಾ ಕೂಗಾಡಬೇಡ. ಇಲ್ಲಿ ಕುಳಿತಿದ್ದಾನಲ್ಲ ಈ ನಿಮ್ಮಪ್ಪ ಇವನೇ ಈ ಮಾತು ತಿಳಿಸಿದವನು. ಅವನ ಮಾತು ಮೀರಬಾರದು ಅಂತ ನಾನೂ ನಮ್ಮಪ್ಪ ಒಪ್ಪಿದೆವು

ನಾಗಮ್ಮ - ನಮ್ಮಪ್ಪ ಹೇಳಿದರೂ ಅಷ್ಟೇ, ನಿಮ್ಮಪ್ಪ ಹೇಳಿದರೂ ಅಷ್ಟೇ. ಯಾರಪ್ಪ ಹೇಳಿದರೂ ಈ ಮಾತು ಮಾತ್ರ ನಡೆಯಕೂಡದು. ಇದಕ್ಕೂ ಮೀರಿ ನೀವು ಈ ಮಾತು ನಡಿಸುವುದಾದರೆ ನಾನು ಹೊರಟೆ ಇಲ್ಲಿಂದ

ರವಿ - ಕೇಳದಿಯೇನಪ್ಪ.... ಈ ಮಾತು ನಡೆಯುವದಾದಲ್ಲಿ ನಮ್ಮ ಗೃಹಮಂತ್ರಿಗಳು ತಮ್ಮ ಅದಿಕಾರಕ್ಕೆ ರಾಜಿನಾಮೆ ಬರೆದಿಟ್ಟು ಹೊರಡುತ್ತಾರಂತೆ. ಹೇಗೆ ಮಾಡತೀಯಪ್ಪಾ ಮಾವ, ಹೆಣ್ಣು ಹಡೆದು ಪಾಪ ಕಟ್ಟಿಕೊಂಡ ಜೀವ

ಶ್ಯಾಮಣ್ಣ - ಇದೇನೇ ನಾಗೂ ನಿನ್ನ ತಲೆ ಕೆಟ್ಟಿದೆಯೇನು, ನೀನಾಡುವ ಮಾತಿಗೆ ಅರ್ಥವೇನು ? ವಿಚಾರ ಮಾಡು... ರಾಮಣ್ಣನವರ ಈ ಮನೆಗೆ ನಿನ್ನ

ತಂಗಿ ಸುನಂದ, ಚಿಕ್ಕ ಸೊಸೆಯಾಗಿ ಬರುವದು ನಿನಗೆ ಬೇಡವಾಯಿತೇ ?

ನಾಗಮ್ಮ - ಅಹುದು ಅವಳು ಈ ಮನೆಗೆ ಚಿಕ್ಕ ಸೊಸೆಯಾಗಿ ಬರುವದು ನನಗೆ ಬೇಡ

ಶ್ಯಾಮಣ್ಣ - ನಮ್ಮೆಲ್ಲರಿಗೂ ಬೇಕಾದ ವಿಚಾರವನ್ನು ಖಂಡಿಸಿ ಆಡಲಿಕ್ಕೆ ನಿನಗೇನು ಅಧಿಕಾರ ?

ನಾಗಮ್ಮ - ಅದನ್ನೆಲ್ಲ ಕೇಳಲಿಕ್ಕೆ ನಿನಗೇನು ಅಧಿಕಾರ ?

ಶ್ಯಾಮಣ್ಣ - ಮುಚ್ಚು ಬಾಯಿ ಹಾಳಾದವಳೇ... ಇನ್ನೊಂದು ಸಲ ನಾಲಿಗೆ ಬಿಚ್ಚಿದರೆ ಹಲ್ಲು ಉದರಿಸಿ ಬಿಟ್ಟೇನು ಎಚ್ಚರ

ನಾಗಮ್ಮ - ನನ್ನ ಮನೆಗೆ ಬಂದು ನನಗೇ ಎಚ್ಚರಿಕೆ ಕೊಡಲಿಕ್ಕೆ ನೀನಾರು ?

ಶ್ಯಾಮಣ್ಣ - ನಾನು ನಿನ್ನ ತಂದೆ

ನಾಗಮ್ಮ - ತಂದೆಯಾದರ ನಿನ್ನ ಗಂಡಸು ಮಗನ ಮೇಲೆ, ಅದೂ ನಿನ್ನ ಮನೆಯ ಸರ್ವಾಧಿಕಾರ ನಡಿಸು. ನಾನು ಹೆಣ್ಣು ಮಗಳು ಈ ಮನೆಯ ಸರ್ವಾಧಿಕಾರ ಇರುವದೇ ನನ್ನ ಕೈಯಲ್ಲಿ ? ನಾನು ಮನಸ್ಸು ಮಾಡಿದರೆ ಬಿಚ್ಚಿದ ಈ ನಿನ್ನ ಗಂಟು ಕಟ್ಟಿಸಿ ನಿನ್ನ ತಲೆಯಮೇಲೆ ಹೊರಿಸಿ ಮನೆಯಿಂದ ಹೊರದಬ್ಬಿಸಿ ಬಿಟ್ಟೇನು. ಎಚ್ಚರ ಈ ಮನೆಯಲ್ಲಿ ನನ್ನದೇ ಸರ್ವಾಧಿಕಾರ

ಶ್ಯಾಮಣ್ಣ - ನಾಗೂ ಹೀಗೆ ಸಿಕ್ಕಂತೆ ಸೊಕ್ಕಿನ ಮಾತು ಕಕ್ಕಿದರೆ ನಿನ್ನ ಸೀಳಿ ಹಾಕಿ ಸ್ನಾನ ಮಾಡಿ ಊರ ಹಾದೀ ಹಿಡೀತೇನಿ. ಇಬ್ಬರು ಹೆಣ್ಣು ಮಕ್ಕಳಲ್ಲಿ ಒಬ್ಬಳು ಸತ್ತಳು ಅಂತಾ ಸುಖವಾಗಿದ್ದು ಬಿಡತೇನಿ. ಹೂ ಬೊಗಳು... ಯಾಕೀ ಮದುವೆಗೆ ಅಡ್ಡಿ ಮಾಡಿದಿ, ಬೊಗಳ... ಬೊಗತೀಯೋ ನಿನ್ನ ನಾಲಿಗೆ ಸೀಳಿಬಿಡಲ್ಯೋ (ಹೊಡೆಯುವನು) ಒಪ್ಪಿದಿಯಾ ?

ನಾಗಮ್ಮ - (ಅಂಜಿ ಅಳುತ್ತ) ನಾನೇನು ಹೇಳಲಪ್ಪ, ನಿನಗಿಷ್ಟು ಹಟ ಇದ್ರೆ ನಿನ್ನ ಇಷ್ಟಕ್ಕೆ ಬಂದಂತೆ ಮಾಡು

ಶ್ಯಾಮಣ್ಣ - ನನ್ನ ಮನಸ್ಸಿಗೆ ಬಂದಿದೆಯೆಂದೇ ಇಷ್ಟು ಆಗ್ರಹಪಟ್ಟದ್ದು. ಹೋಗಲಿ ನೀನು ಎರಡೂ ಮನೆಗೂ ಅಷ್ಟೇ. ಹೇಳು ನಿನ್ನ ತಂಗಿಯಲ್ಲಾಗಲೀ, ನಿನ್ನ ಮೈದುನನಲ್ಲಾಗಲೀ ಯಾವದಾದರೂ ದೋಷವಿದೆಯೇ ಬೊಗಳು

ನಾಗಮ್ಮ - ಇಲ್ಲ ಇಲ್ಲ ಇಬ್ಬರಲ್ಲಿಯೂ ನಾನು ಯಾವ ದೋಷವನ್ನೂ ಕಂಡಿಲ್ಲ

ಶ್ಯಾಮಣ್ಣ - ಅಂದ ಬಳಿಕ ಆಗುವ ಮದುವೆಗೆ ಅಡ್ಡಿಯೇಕೆ ಬಂದ ? ಹಾಳಾದವಳೇ ಹೆಣ್ಣು ಹೆತ್ತ ಸಂಕಟ ನಿನಗೇನು ಗೊತ್ತು. ಒಪ್ಪಿದೆಯಷ್ಟೇ ನೀನು ಈ ಮದುವೆಗೆ

ನಾಗಮ್ಮ - ನಾನು ಒಪ್ಪಿದರೇನು ಬಂತು. ಶೇಖರನನ್ನು ಮದುವೆ ಆಗೋಳು ಸುನಂದ. ಅವಳನ್ನು ಕೇಳು, ಕಲಿತ ಮಗಳನ್ನು ಹಿಂದಕ್ಕಿಕ್ಕಿ ಮಾತನಾಡೋದು ನ್ಯಾಯವಲ್ಲ

ಶ್ಯಾಮಣ್ಣ - ಅವಳ ಅಭಿಪ್ರಾಯವನ್ನೇನು ಕೇಳುವದು. ಬೆಳೆಯುವ ಸಸಿ ಎಂದಾದರೂ

ಸನಾಯಿ ಸಪ್ಪಳ ಕೇಳುತ್ತೇನು ?

ನಾಗಮ್ಮ - ಹಾಗಂದರೆ ನಾಳೆ ಈ ಮನೆಗೆ ಚಿಕ್ಕಸೊಸೆ ಆಗೋಳು ಸುನಂದ. ಕೇಳಿದರೆ ಕೇಳು ಬಿಟ್ಟರೆ ಬಿಡು ನಿನ್ನಿಷ್ಟ. (ಹೋಗುವಳು)

ರವಿ - ಅಹುದು ಮಾಮಾ ಅವಳನ್ನು ಒಂದು ಮಾತು ಕೇಳು. ಯಾಕಂದ್ರೆ ಕಲಿತ ಹುಡುಗಿ

ಶ್ಯಾಮಣ್ಣ - ಏ ಇರಲಿ ಸಾಕು ಸುಮ್ಮನಾಗೋ. ಈಗಿನ ಕಾಲದ ಹುಡುಗರು ನೀವು ಬರಿ ಹೆಂಡಂದಿರಿಗೆ ಅಂಜಲಿಕಷ್ಟೇ ಕಲಿತೀರಿ

ರವಿ - ಆಗಲಿ ಮಾಮಾ ನೀವಷ್ಟು ಸುನಂದೆಯನ್ನು ಒಪ್ಪಿಸಿ ಬಿಡಿ. ನಾನು ಹೋಗಿ ಗೋಪಿನ್ನ ಕರೆತರತೇನಿ. ಮಾತಕತೆ ಮುಗಿಸಿಬಿಡೋಣ. ಯಾಕಂದ್ರೆ ಇವತ್ತು ದಿನ ಚೆನ್ನಾಗಿದೆ. (ಹೋಗುವನು)

ಶ್ಯಾಮಣ್ಣ - ಆಗಲಿ ಹೋಗು. (ರವಿ ಹೋದ ಬಳಿಕ) ಸುನಂದ ಸುನಂದಾ

ಸುನಂದ - (ಬಂದು) ಯಾಕಪ್ಪಾ ಕೂಗಿದಿಯೇನು ?

ಶ್ಯಾಮಣ್ಣ - ಅಹುದಮ್ಮ ಎಲ್ಲಿದ್ದೆ ಈವರೆಗೂ ?

ಸುನಂದ - ಹಿತ್ತಲದಲ್ಲಿದ್ದೆ. ಪೇರಲ ಮರದ ಕೆಳಗೆ ಕಾದಂಬರಿ ಓದುತ್ತಿದ್ದೆ

ಶ್ಯಾಮಣ್ಣ - ಹಾಗಿದ್ದರೆ ಕೇಳು ನಿನ್ನಕ್ಕನ ಮೈದುನ ಇದ್ದಾನಲ್ಲ ಶೇಖರ ಅವನು ಹೇಗೆ ?

ಸುನಂದ - ಇದೇನಪ್ಪಾ ಅವರು ಹೇಗೆ ಅಂತ ಕೇಳಿದರೆ ನಾನೇನು ಹೇಳಲಿ ? ಅವರು ತುಂಬಾ ಒಳ್ಳೇ ಗುಣದವರು

ಶ್ಯಾಮಣ್ಣ - ಗುಣ ಆಯಿತು ಇನ್ನು ರೂಪ ?

ಸುನಂದ - (ನಾಚಿ) ಹೋಗಪ್ಪ ಇದೊಳ್ಳೇ ಮಾತು. ಅವರ ರೂಪ ಗೀಪ ನಾನೇಕೆ ನೋಡಲಿ. ನನಗೇನು ಸಂಬಂಧ

ರಾಮಣ್ಣ - ಸಂಬಂಧ ಬೆಳಸಬೇಕಾಗಿ ಬಂದರೆ, ಈಗ ನೋಡಿದ್ದೇ ಸಾಕೋ ಅಥವಾ ಇನ್ನೊಮ್ಮೆ ನೋಡಬೇಕೋ

ಸುನಂದ - ಇದೇನಪ್ಪ ನಿನ್ನ ಮಾತು

ಶ್ಯಾಮಣ್ಣ - ಹೌದಮ್ಮ ಶೇಖರನಿಗೆ ನಿನ್ನ ಕೊಟ್ಟು ಮದುವೆ ಮಾಡಬೇಕು ಅಂತ ಮಾಡಿದ್ದೇನೆ. ಅಂತೆಯೇ ನಿನ್ನ ಒಪ್ಪಿಗೆ ಕೇಳತಾ ಇದ್ದೇನೆ. ಹೇಳು ನಿನ್ನ ಅಭಿಪ್ರಾಯ

ಸುನಂದ - ಅಪ್ಪಾ ಅವರು ನನ್ನ ಮದುವೆಯಾಗಲಿಕ್ಕೆ ಒಪ್ಪಿದ್ದಾರೇನಪ್ಪ ?

ಶ್ಯಾಮಣ್ಣ - ಅವನ ಪುರಾಣ ಮುಗಿಸಿದ ಮೇಲೆಯೇ ಈಗ ನಿನ್ನ ಹತ್ತಿರ ಈ ಮಂಗಳಾ ಹಾಡತಾ ಇರೋದು. ಅವನು ಆದರೆ ನಿನ್ನನ್ನೇ ಮದುವೆ ಆಗತಾನಂತೆ

ಸುನಂದ - ಆ ನಾನೂ ಅವರನ್ನೇ ಮದುವೆ ಆಗತೇನಪ್ಪ

ಶ್ಯಾಮಣ್ಣ - ಅಷ್ಟು ಮಾಡಿ ಪುಣ್ಯಾ ಕಟ್ಟಿಕೋ, ನಮ್ಮವ್ವ (ಹೋಗುವರು)

## - ಜಂಗಲ್ ರಸ್ತಾ -

ಸುನಂದ - ನಾನು ಇನ್ನು ಮೇಲೆ ಶೇಖರ ಭಾವನ ಭಾವೀ ಪತ್ನಿ. ಅಂದು ಹಾವಿನಿಂದ ಬರಲಿದ್ದ ಸಾವಿಸಿಂದ ನನ್ನನ್ನು ಉಳಿಸಿದಾಗಲೇ ನಾನವರಿಗೆ ಒಲಿದು ಹೃದಯ ಒಪ್ಪಿಸಿದೆ. ಈ ನನ್ನಕ್ಕ ತನಗೆ ದೊರೆತ ಅಧಿಕಾರ ಬಲದಿಂದ ಯಾರನ್ನು ವಂಚಿಸಿ ಸಾಲ ಹೊರಿಸಿ ಆಸ್ತಿಯನ್ನೆಲ್ಲ ಕಸಿದುಕೊಂಡ ಭಿಕಾರಿಯನ್ನಾಗಿ ಮಾಡಬಯಸಿದ್ದಳೋ ಅಂಥವಳ ಮೈದುನನಿಗೆ ನಾನು ಮಡದಿಯಾಗಬೇಕು. ಆಗಲಿ ಮುಗಿಲು ಹರಿದು ಬೀಳುವ ಮೊದಲೇ ಹಗಲು ಕೊಟ್ಟು ನಿಲ್ಲಲು ನಾ ಸಿದ್ಧಳಾಗಬೇಕು. ಆ ನನ್ನ ಅಕ್ಕನಿಗೆ ತಕ್ಕ ತಂಗಿ ನಾನಾಗಿ ಈ ಮಡುವಿನಲ್ಲಿ ಧುಮುಕಿ ನನ್ನ ಪತಿ ಹಾಗೂ ಬದುಕನ್ನು ಉಳಿಸಿಕೊಳ್ಳಬೇಕು. ಯಾಕಂದರೆ ನನ್ನಕ್ಕ ಈ ಮನೆಗೆ ಹಿರಿಯ ಸೊಸೆಯಾಗಿ ಬಂದು ಅವಳಿಂದ ನಡೆದು ಬಂದ ನಾಟಕ ಇಲ್ಲಿಗೆ ಅರ್ಧ ಕೊನೆಗೊಂಡಿತು. ಇನ್ನುಳಿದ ಅರ್ಧಭಾಗ ಚಿಕ್ಕ ಸೊಸೆಯಾಗಲಿರುವ ನನ್ನಿಂದ ಮುಂದುವರೆಯಲಿ. ಆಗಲಕ್ಕ ನಿನ್ನ ಪುಣ್ಯಮಯ ಪುರಾಣ ಬಯಲಿಗಿಟ್ಟು ಅದಕ್ಕೆ ಮಂಗಳಾರತಿ ಹಾಡದಿದ್ದರೆ ಅಕ್ಕಾ ನಿನಗೆ ತಕ್ಕ ತಂಗಿ ನಾನಲ್ಲ (ಕುಣಿದಾಡುತ್ತಿರುವಳು, ಶೇಖರ ಬರುವನು. ಇಬ್ಬರೂ ನಾಚುವರು)

ಶೇಖರ - ಏನ್ರಿ ಹುಡುಕತಾ ಇಲ್ಲಿಗೆ ಬಂದಿರಾ ?

ಸುನಂದ - ಹೌದು ನಿಮ್ಮನ್ನು ಬಿಟ್ರೆ ಬೇರೆ ಯಾರನ್ನು ಹುಡುಕಲಿ ?

ಶೇಖರ - ಆಗಲಿ ಮತ್ತೇನಾದ್ರೂ ಕೆಲಸ ಹೇಳೂದಿದೆಯೇ ? ಏನ್ರಿ ನೀವು ಹೇಳಿದ ಮಲ್ಲಿಗೆ ಹೂ ತಂದಿದ್ದೇನೆ ತಗೊಳ್ರಿ

ಸುನಂದ - ಸ್ವಲ್ಪ ಅವನ್ನು ನಿಮ್ಮ ಹತ್ರನೇ ಇಟ್ಟಗೊಳ್ಳಿ ಆ ಮೇಲೆ ಕೊಡುವಿರಂತೆ. ನಿಮಗೆ ಹೇಳೋ ಮಾತಲ್ಲ. ನಿಮ್ಮನ್ನು ಕೇಳೋ ಮಾತೊಂದಿದೆ ಕೇಳಂದ್ರಾ ?

ಶೇಖರ - ಕೇಳ್ರಿ ಅದಕ್ಕೇನು

ಸುನಂದ - ನಿಮ್ಮ ಮನೆಯಲ್ಲಿ ನಿಮ್ಮ ಮದುವೆಯ ಮಾತು ನಡೆದಿದೆಯಲ್ಲ. ಅದು ನಿಮಗೆ ತಿಳಿದಿದೆ ತಾನೆ

ಶೇಖರ - ಏನೋ ಸ್ವಲ್ಪ ಮಟ್ಟಿಗೆ ತಿಳಿದಿದೆ

ಸುನಂದ - ಸ್ವಲ್ಪ ಮಟ್ಟಿಗೆ ತಿಳಿದಿದೆಯೋ ಅಥವಾ ಪುಟ್ಟಾಪೂರಾ ತಿಳಿದಿದೆಯೋ?

ಶೇಖರ - ಎಷ್ಟಾದರೂ ತಿಳೀಲಿ ನನ್ನ ಮದುವೆಯ ವಿಷಯ ನಿಮಗೇನು ಸಂಬಂಧ?

ಸುನಂದ - ಸಂಬಂಧ ಇದೆ ಅಂತೆಯೇ ಕೇಳೋದು. ನನ್ನ ನಿಮಗ ಕೊಡಬೇಕು ಅಂತ ಮಾಡಿಧ್ದಾರೆ. ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೋ ಇಲ್ಲವೋ ಅಂತ...

ಶೇಖರ - ಹೀಂಗ ಕೇಳಿದರೆ ಹ್ಯಾಂಗ ಹೇಳಬೇಕರಿ ನಾನು

ಸುನಂದ - ಮತ್ತೆ ಹೇಗೆ ಕೇಳಬೇಕು. ಸ್ಪಷ್ಟವಾಗಿ ನಾಲಿಗೆ ಬಿಟ್ಟು ಬಾಯಿತೆರೆದು ಕೇಳತಾಯಿದ್ದೇನರಿ, ನನ್ನ ಮದುವೆ ಆಗಲಿಕ್ಕೆ ನಿಮ್ಮ ಒಪ್ಪಿಗೆ ಇದೆ ಏನ್ರಿ

ಶೇಖರ - ನಿಮ್ಮದು ಐತೇನ್ರಿ

ಸುನಂದ - ಅಯ್ಯೋ ! ನಂದಿರಲಿ ಮೊದಲು ನಿಮ್ಮದು ಹೇಳ್ರಿ

ಶೇಖರ - ಕೇಳ್ರಿ ಹಾಂಗಿದ್ರ, ನೀವು ಒಪ್ಪಿದರ ನಾನು ನಿಮ್ಮ ಮದುವೀ ಆಗತೇನಿ

ಸುನಂದ - ಅಂತೂ ನನ್ನ ಮದುವೆ ಆಗಲಿಕ್ಕೆ ಒಪ್ಪಿದಿರಿ

ಶೇಖರ - ಹೌದು ಯಾಕೆ ಒಪ್ಪಬಾರದೇನ್ರಿ ?

ಸುನಂದ - ಹಾಗಲ್ಲ ನಾನು ಕಲಿತವಳು. ನೀವು ಕಲಿಯದವರು. ಅಂದ ಬಳಿಕ ವಿದ್ಯಾ ಬುದ್ದಿಯಲ್ಲಿ ಮುಂದಿದ್ದವಳನ್ನ ಮದುವೆ ಆದ್ರೆ ನಿಮಗೆ ಹೆದರಬಹುದೇನ್ರಿ, ನಿಮ್ಮ ಸಂಸಾರ ಸುಖವಾಗಿ ಸಾಗಬಹುದೇನ್ರಿ. ಹೇಳಿ ಕೇಳಿ ನಾ ಕಲಿತವಳು

ಶೇಖರ - ಒಪ್ಪತೇನ್ರಿ. ನೀವು ಕಲಿತವರು ಹೌದು. ಆದರೆ ಹೆಣ್ಣು ಹೌದಲ್ರೊ, ಹೇಳ್ರಿ ಸುನಂದಾಬಾಯಿಯವರೇ, ಆನೆ ದೊಡ್ಡದಿರಬಹುದು ಆದರೆ ಅದನ್ನು ಅಂಜಿಸಿ ಆಳೋ ಅಂಕುಶ ಮಾತ್ರ ಬಹಳ ಸಣ್ಣದ ಇರತದರಿ. ಸಂಸಾರದೊಳಗಿನ ಸುಖ ಇರತ್ತ ಅಂತ ಯಾರ ಹೇಳ್ತಾರ. ಅದನ್ನು ಸುಖ ರೂಪವಾಗಿ ಮಾಡಿಕೋಬೇಕಷ್ಟೆ. ಅದೇ ಬುದ್ಧಿವಂತರ ಕೆಲಸ

ಸುನಂದ - ನಿಜವಾಗಿಯೂ ನನ್ನ ಮೇಲೆ ನಿಮ್ಮ ಪ್ರೀತಿ ಇದೆಯೋ ಅಥವಾ ಯಾರ ಒತ್ತಾಯಕ್ಕಾದರೂ ಒಪ್ಪಿದಿರೋ

ಶೇಖರ - ನನ್ನ ಹೆತ್ತತಾಯಿಯ ಪಾದಸಾಕ್ಷಿಯಾಗಿಯೂ ನಾನು ನಿಮ್ಮನ್ನೇ ಮದುವೆಯಾಗುವ ಮನಸ್ಸಿದೆ. ಆದರೆ ನನ್ನ ಮೇಲೆ ತಮ್ಮ ಪ್ರೀತಿ...

ಸುನಂದ - ಇದೇರೀ ನನ್ನ ರಾಜಾ... (ಹಾ ಎಂದು ಹಾರಿ ಅವಳನ್ನು ಹಿಡಿದತ್ತಿ ಮುದ್ದಿಸ ಹೋಗುವನು ಸುನಂದಾ ಚೀರಿ ಬಿಡಿಸಿಕೊಂಡು) ಹಾ ಹಾ ಈಗಾಗಲೇ ನಿಮ್ಮ ಗಂಡುತನದ ಗುಂಡಾ ಅ್ಯಕ್ಟು ಜಾರಿಯಾಯಿತೇನು. ನನ್ನ ಮೇಲೆ ಈಗ ನಾನು ನಿಮಗೆ ಮನಸ್ಸನ್ನಷ್ಟೇ ಒಪ್ಪಿಸಿದ್ದು ದೇಹವನಲ್ಲ. ಮದುವೆ ಆದಮೇಲೆ ನನ್ನ ಮೇಲೆ ನಿಮಗೆ ಅಧಿಕಾರ. ಈಗಲ್ಲ. ನನ್ನ ನೀವು ಮದುವೆ ಆಗಬೇಕಿದ್ರೆ, ನೀವು ನನ್ನ ಒಂದು ಮಾತು ನಡಸಬೇಕು

ಶೇಖರ - ಅದೇನು ನಿಮ್ಮ ಮಾತು ಹೇಳಿ

ಸುನಂದ - ಮದುವೆಗೆ ಮುಂಚೆ ನಿಮ್ಮ ಅಣ್ಣ ಅತ್ತಿಗೆಯವರಿಂದ ದೂರಾಗಬೇಕು. ನಿಮ್ಮ ಪಾಲಿನ ಸ್ವತ್ತು ಹಸ್ತಗತವಾಗಬೇಕು. (ಮ್ಯೂಜಿಕ್)

ಶೇಖರ - ಏನು ಏನಂದೆ ... ನಾನಿನ್ನ ಮದವೆಯಾಗಬೇಕಾದರೆ ಅಣ್ಣ ಅತ್ತಿಗೆಯವರಿಂದ ದೂರಾಗಬೇಕೆ ಅವರಿಂದ ನಿನಗೇನು ಕೆಡಕಾಗಿದೆ ?

ಸುನಂದ - ಅವರಿಂದ ನನಗೇನು ಕೆಡಕಾಗಬೇಕಾಗಿದೆ. ಕೇಡಾಗುತ್ತಿರುವದು ನಿಮಗೆ, ನೀವು ನಿಮ್ಮ ಅಣ್ಣನಿಂದ ದೂರಾಗುವುದಕ್ಕಿಂತ ಆ ನಿಮ್ಮ ಅತ್ತಿಗೆಯಿಂದ ಅಂದರೆ ಒಡಹುಟ್ಟಿದ ನಮ್ಮಕ್ಕನಿಂದ ದೂರಾಗಬೇಕು. ಕೇಳಿ ನಾವು ಸುಖವಾಗಿರಬೇಕಾದರೆ ಮೊದಲು ಈ ಮನೆ ಎರಡಾಗಬೇಕು. ಅದೂ ಮದುವೆಗೆ ಮುಂಚೇನೇ

ಶೇಖರ - ಮನೆ ಎರಡಾಗಬೇಕು. ! ಅದು ಮದುವೆಗ ಮೊದಲೆ. ಸುನಂದಾ, ಈ ಮಾತು ನೀನೇ ಹೇಳುತ್ತೀಯಾ ?

ಸುನಂದ - ಹೌದು ನಾನೇ ಹೇಳುತ್ತೇನೆ, ಮನೆ ಎರಡಾಗಲಿ ಅಂತ ನಾನೀಗ ಹೇಳತಾ ಇರೋದು. ನನ್ನ ಹಿತಕ್ಕಲ್ಲ, ನಿಮ್ಮ ಹಿತಕ್ಕಾಗಿ. ನೀವೀಗ ಪಾಲು ವಿಭಾಗ ಮಾಡಿಕೊಳ್ಳದೇ ಮದುವೆಯಾದರೆ ನಿಮ್ಮ ಪಾಲಿಗ ಅಂತ ಉಳಿಯೋದು ಬರೀ ಮೂರು ಹಿಡಿ ಮಣ್ಣು, ಅಷ್ಟು ಭದ್ರವಾಗಿ ಸಿದ್ಧಮಾಡಿಕೊಂಡಿದ್ದಾರೆ. ಆ ನಿಮ್ಮಣ್ಣ ನನ್ನಕ್ಕನನ್ನು ಮುಂದೆ ಬೆಳೆಯಗೊಟ್ರೆ ಮದುವೆ ಆದ ಬಳಿಕ ನಾವು ನೀವು ಕಟ್ಟಿಗೇ ಮಾರಿ ಹೊಟ್ಟೆ ತುಂಬಿಕೊಳ್ಳಬೇಕಾದಿತು, ತಿಳೀತೇನು ?

ಶೇಖರ - ನನ್ನಣ್ಣ ಅತ್ತಿಗೆ ನನ್ನ ವಂಚಿಸಿದ್ದಾರೆಯೇ ?

ಸುನಂದ - ವಂಚಿಸುವದೇನು ಬಂತು... ಈಗಾಗಲೇ ಮುಕ್ಕಾಲು ಭಾಗ ಮುಗಿಸಿಬಿಟ್ಟಿದ್ದಾರೆ

ಶೇಖರ - ಮುಗಿಸಿಬಿಟ್ಟಿದ್ದಾರೆ. ಅಂದ್ರೇನು ಈ ಮಾತಿನ ಅರ್ಥ ?

ಸುನಂದ - ಅರ್ಥವಿಲದೆ ವ್ಯರ್ಥ ಮಾತಾಡೋಳಲ್ಲ ನಾನು. ನಿಮ್ಮಕ್ಕ ತಾರಕ್ಕನಿಗೆ ಬಂದ ವಿಪತ್ತಿನಲ್ಲಿ ಮಾಡಿದ ಸಾಲದ ಕ್ರಯಪತ್ರಕ್ಕೆ ನೀವೇನೋ ಸಹಿ ಹಾಕಿದ್ದೀರಂತಲ್ಲ

ಶೇಖರ - ಅಹುದು ಮೂರು ಸಾವಿರವಿರದ್ದು

ಸುನಂದ - ಮೂರು ಸಾವಿರ ಆಗ ಪಡೆದದ್ದು. ಮೊದಲೇ ನಿಮ್ಮಣ್ಣನವರ ಮದುವೇ ಕಾಲಕ್ಕೆ ಮಾಡಿದ ಎರಡು ಸಾವಿರ ಅದರಲ್ಲಿ ಕೂಡಿಸಿ ಐದು ಸಾವಿರ ಕಾಗದಕ್ಕೆ ನಿಮ್ಮ ಸಹಿ ಬಿದ್ದಿದೆಯಂತೆ. ಅದೇನೋ ಪಾಲು ವಿಭಾಗದಲ್ಲಿ ನಿಮ್ಮೊಬ್ಬರಿಗೆ ಸಂಬಂಧ ಪಡುವದಂತೆ ತಿಳಿತೇನು. (ಭಯಾನಕ ರಿಕಾರ್ಡ್)

ಶೇಖರ - ಇದನ್ನು ನಿನಗಾರು ಹೇಳಿದರು ?

ಸುನಂದ - ಇನ್ನಾರು ನಮ್ಮಕ್ಕನೇ ಹೇಳಿದಳು, ಈ ತನ್ನ ಮನೆ ಮುರುಕ ವಿಚಾರವನ್ನು. ಈಗಲಾದರೂ ತಿಳಿಯಿತೇ ನಿಮ್ಮಣ್ಣ ಅತ್ತಿಗೆಯವರು ನಿಮ್ಮ ಮೇಲೆ

ಮಾಡಿರುವ ದ್ರೋಹ

ಶೇಖರ - ದ್ರೋಹ, ಮೋಸ, ವಂಚನೆ, ಒಟ್ಟು ಐದು ಸಾವಿರ ಸಾಲ ನನ್ನೊಬ್ಬನ ತಲೆಯಮೇಲೆ ಹೇರಿ ಮನೆ ಬಿಡಿಸಿ ನನ್ನನ್ನು ಬೀದಿಯ ಭಿಕಾರಿಯನ್ನಾಗಿ ಮಾಡಬಯಸಿದರೆ ನನ್ನಣ್ಣ ಅತ್ತಿಗೆಯರು. ಜನ್ಮಕೊಟ್ಟ ತಂದೆಗಿಂತ ಹೆಚ್ಚಾದ ಅಣ್ಣ, ಹೆತ್ತ ತಾಯಿಯಂತೆ ಪ್ರೀತಿಸಬೇಕಾದ ಅತ್ತಿಗೆ ಇವರಿಂದಲೇ ನನಗಿಂತಹ ಮೋಸ. ಇಲ್ಲಿಯವರೆಗೂ ಇವರಿಗೆ ನಾನಾವ ಕೇಡನ್ನೂ ಮಾಡಿರಲಿಲ್ಲ. ಮನದಲ್ಲಿ ಎರಡು ಬಗೆದಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿ ಭಕ್ತಿ ಇರಿಸಿದ್ದೆ. ಭಕ್ತಿಗೂ ಮಿಗಿಲಾಗಿ ನಂಬಿದ್ದೆ. ಹೀಗಿದ್ದು ವಂಚಿಸಿದರೆ ? ಸುನಂದಾ ನೀಸಿತ್ತ ಘೋರ ಅನುಭವದಿಂದ ನನ್ನ ಬದುಕಿನ ಆಧಾರ ಸ್ತಂಭವಾದ ನಂಬಿಗೆಯ ಅಡಿಗಲ್ಲೇ ಸಡಿಲಾಯಿತು. ಬಾಳು ದುರ್ಧರವಾಯಿತು. ಬೇಲಿಯೇ ಕುಳಿತು ಹೊಲ ಮೇದರೆ ನಾರಿ ತನ್ನ ಮನೆಯಲ್ಲಿ ತಾ ಕಳುವು ಮಾಡಿದರೆ, ಇನ್ನಾರಿಗೆ ನಾ ದೂರವದು ? ಇನ್ನಾರನ್ನು ಈ ಪ್ರಪಂಚದಲ್ಲಿ ನಂಬುವದು ? ಇಲ್ಲ ನನ್ನ ಹಿತ ಬಯಸುವವರಾರಿಲ್ಲ, ಅಂದಬಳಿಕ ಸುನಂದ ನಿನ್ನನ್ನಾದರೂ ನಾನೆಂತು ನಂಬಲಿ ?

ಸುನಂದ - (ಗಾಬರಿ) ಮಾಮಾ ಸ್ಥೈರಿಸಿರಿ. ನಿಮ್ಮ ಜತೆ ನಾನೂ ಇದ್ದೇನೆ. ನಾನು ನಿಮ್ಮವಳಲ್ಲವೇ ?

ಶೇಖರ - ನನ್ನವಳು, ಸುನಂದ ಸತ್ಯಹೇಳು... ಎಲ್ಲರೂ ನನ್ನನ್ನು ವಂಚಿಸಲಿ, ದ್ರೋಹಬಗೆಯಲಿ. ಆದರೆ ನೀನು ಮಾತ್ರ ಮೋಸಗೊಳಿಸುವವಿಲ್ಲವಷ್ಟೇ?

ಸುನಂದ - ಇದೇನು ಮಾಮಾ, ನಿಮಗೆ ಮೋಸಮಾಡಲೇ ? ನಾನು ನಿಮ್ಮನ್ನು ವಂಚಿಸಬೇಕಾಗಿದ್ದರೆ ಮದುವೆಗೆ ಮೊದಲೇ ಇದನ್ನೆಲ್ಲ ಹೇಳುತ್ತಿದ್ದೆನೇ? ನೀವು ಅನುಮಾನಪಟ್ಟುಕೊಳ್ಳದೇ ನನ್ನನ್ನು ನಂಬಿ. ಆ ಮೇಲೆ ನೋಡಿ ನಮ್ಮಕ್ಕನ ನಾಟಕ ಹೇಗೆ ಮುಗಿಸಿಬಿಡತೇನಿ. ನೀವು ಮಾತ್ರ ನನ್ನ ಮಾತಿನಂತೆ ನಡೀತಿರಾ?

ಶೇಖರ - ಆಗಲಿ ಸುನಂದ, ದೇವರ ಸಮನಾಗಿ ನಾ ನಿನ್ನ ನಂಬಿದ್ದೇನೆ. ಹಾಲಿನಲ್ಲಾದರೂ ಹಾಕು, ನೀರಿನಲ್ಲಾದರೂ ಹಾಕು

ಸುನಂದ - ಅದು ನನಗೂಪ್ಪಿತು ರಾಜಾ, ಏನೇನೋ ಹೇಳುತ್ತಾರಲ್ಲ... ಹೆಣ್ಣು ಮದುವೆಯಾಗುವ ಮುನ್ನ ಮಾತೆಯಾಗಲಿಕ್ಕ ಕಲಿಯಬೇಕಂತ. ಹಾಗಾಯಿತೀಗ ನೋಡಿ

ಶೇಖರ - ಹೌದಲ್ಲರಿ

ಸುನಂದ - ಏನಂದರಿ ಇನ್ನಾಕರಿ ನನಗೆ ನಿವು ರೀ ಅನ್ನೋದು ಇನ್ನು ಮೇಲೆ ನೀವು ನನ್ನ ಕರಿಯೋದು ಬರಿ ಏ ಅಂತ. ಹೂ ಮುಡಿಸಿರಿ

ಶೇಖರ - ಮುಡಸ್ತೇಸಿ ನೋಡ್ರಿ ಬರಿ ಏ

॥ ಪದ ॥

ಸುನಂದ - ಕಾಡಿನ ಕುಸುಮಾ । ಕಾಣಲು ನಯನಾ । ಮುಡಿಯಲು ಜಡೆಗೆ ಬಯಸಿತೀ ಮನ ।

ಶೇಖರ - ಹೊಲಮನೆ ದುಡಿಮೆ । ಮಾಡುವ ರೈತನ । ಕಲಿತ ಕುವರಿ ಬಯಸಿ । ಜೇನಹನಿ ಪ್ರಮುಖಣೆ । ನಿನಗೆ ಎಣಿಕಾಣೆ ॥ (ಒಳಗ ಹೋಗುವರು)

## - ಮನೆ ಸೀನು -

ರವಿ - ಅಪ್ಪಾ ಅಪ್ಪಾ, (ರಾಮಣ್ಣ ಬರುವನು) ಗೋಪಣ್ಣ ಬಂದ ನೋಡು

ಗೋಪಿ - ನಮಸ್ಕಾರ ಶ್ಯಾಮಣ್ಣನವರೇ, ರವಿ ಒಂದು ಹೊಸ ಸಮಾಚಾರ ಹೇಳಿ ಕರೆದುಕೊಂಡು ಬಂದಿದ್ದಾನಲ್ಲ ಹೌದೇನು ?

ಶ್ಯಾಮಣ್ಣ - ಹೌದು ನನ್ನ ಸಣ್ಣ ಮಗಳು ಸುನಂದೆಯನ್ನು ಶೇಖರನಿಗೆ ಕೊಡಬೇಕೆಂದು ಮಾಡಿದ್ದೇನೆ. ತೆಗೆದುಕೊಳ್ಳಲು ಅವರೂ ಒಪ್ಪಿದ್ದಾರೆ. ಕಾರಣ ಮಾಡಿಕೊಳ್ಳುವ ವಿಷಯ ಮಾತನಾಡಬೇಕೆಂದು. (ಶೇಖರ ಬರುವನು)

ಶೇಖರ - ಆ ನನ್ನ ಮದುವೆಯ ಮಾತಿರಲಿ ಗೋಪಣ್ಣ. ಮೊದಲ ನಾನು ಹೇಳಬೇಕಾದ ಮಾತೊಂದಿದೆ ಕೇಳು. ಅದೇನಂದರೆ ಈ ಮನೆಯಲ್ಲಿ ನನ್ನ ಪಾಲಿಗೆ ಬರೋದೆಷ್ಟು ? ಅಣ್ಣನ ಪಾಲಿಗೆ ಉಳಿಯುವದೆಷ್ಟು ಅನ್ನುವ ಪಾಲು ವಿಭಾಗದ ವಿಷಯ ಮೊದಲು ಇತ್ಯರ್ಥವಾಗಲಿ. ಆ ಮೇಲೆ ನನ್ನ ಮದುವೆಯ ಮಾತಾಗಲಿ

ರವಿ - ಏನೋ ಹಾಗಂದರೆ, ಎಲ್ಲರಿಗೂ ಇಷ್ಟವಾದ ನಿನ್ನ ಮದುವೆಯ ವಿಷಯ ಮಾತನಾಡುವಾಗ ಈ ಅನಿಷ್ಟಕಾರಕ ಮಾತೇಕೆ ಬಂತೋ ? ಆ ಮಾತು ಆಡುವ ಹೊತ್ತು ಇದಲ್ಲ. ಅದು ಏನಿದ್ದರೂ ನಮ್ಮಲ್ಲೇ ಮುಗಿಯಬೇಕಾದ ಮಾತು. ಹೊತ್ತು ನೋಡಿ ಆ ಮಾತು ಆಡೋಣಂತೆ, ಸುಮ್ಮನಿರು

ಶೇಖರ - ಹೊತ್ತುಗೊತ್ತು ನನಗೀಗ ಬೇಕಾಗಿಲ್ಲ ಅಣ್ಣಾ. ಈಗ ಮನೆಯ ಹಿರಿಯರಿದ್ದಾರೆ. ಮೇಲೆ ಹಿತೈಷಿ ಗೋಪಣ್ಣನಿದ್ದಾನೆ. ಮೊದಲು ಈ ಪಾಲಿನ ವಿಷಯ ಇತ್ಯರ್ಥ ಮಾಡು

ಶ್ಯಾಮಣ್ಣ - ನಿಮ್ಮಣ್ಣ ಹೇಳಿದಂತೆ ನಿಮ್ಮ ಮನೆಯ ವಿಷಯ ನಿಮ್ಮಲ್ಲೇ ಮುಗಿಸಿಕೊಳ್ಳಿ. ನಿನ್ನ ಮದುವೆಯ ಬಗ್ಗೆ ಮಾತನಾಡುತ್ತಿರುವಾಗ ಮನೆ ಒಡೆಯುವ ವಿಷಯ ಮಾತನಾಡಬಾರದು ಶೇಖರ

ಶೇಖರ - ಅದೇನೇ ಇರಲಿ ಮೊದಲು ಮನೆ ಎರಡಾಗಬೇಕು. ಆ ಮೇಲೆ ನನ್ನ

ಮದುವೆಯಾಗಬೇಕು

ರಾಮಣ್ಣ - ಹೀಗೆಲ್ಲ ದೊಡ್ಡವರ ಮಾತು ಅಲ್ಲಗಳೆದು ಆಡಬೇಡ ಶೇಖರಾ. ಇದು ನಿನಗೆ ಒಳ್ಳೇದಲ್ಲ

ಶೇಖರ - ಒಳ್ಳೇದೋ ಕೆಟ್ಟದೋ ನೀನು ಸುಮ್ಮನಿರಪ್ಪ. ದೊಡ್ಡವರ ಸಣ್ಣತನ ಅರ್ಥವಾದ ಮೇಲೆ ಈ ಮಾತು ಆಡುವ ಹೊತ್ತು ಬಂದಿದೆ

ರವಿ - ಇರಲಿ ಸಾಕು ಬಾಯಿಮುಚ್ಚು. ಇನ್ನೊಂದು ಸಲ ಈ ಮಾತು ಆಡಿದರೆ ನಿನ್ನ ಹಲ್ಲು ಉದರಿಸಿಬಿಟ್ಟೇನು. (ಒಂದು ಬಾಗಿಲಿಂದ ಸುನಂದ, ಬೇರೊಂದು ಬಾಗಿಲಿಂದ ನಾಗಮ್ಮ ಬಂದು ನಿಲ್ಲುವರು) ಇವತ್ತು ನಿನಗೆ ಹುಚ್ಚು ಹಿಡಿದಿದೆಯೇನು ?

ಶೇಖರ - ಇಷ್ಟು ದಿನ ಹಿಡಿದಿತ್ತು. ಅಣ್ಣ ಅಂದರೆ ತಂದೆಗೆ ಸರಿ. ಅತ್ತಿಗೆ ಅಂದರೆ ತಾಯಿಗೆ ಸರಿ ಎಂದು ನಂಬುವ ಒಂದು ಬಗೆಯ ಹುಚ್ಚು. ಆದರೆ ಹಾಲು ಕುಡಿಸಬೇಕಾದ ಕೈಯ್ಯೇ ಹಾಲಾಹಲ ಕುಡಿಸಲು ಸಿದ್ಧವಾದ ಮೇಲೆ ನನ್ನಲ್ಲಿದ್ದ ಹುಚ್ಚು ಕೊಚ್ಚಿಕೊಂಡು ಹೋಗಿ ಹಿಡಿದ ಹುಚ್ಚಿನಿಂದ ನಿಚ್ಚಳವಾಗಿದ್ದೇನೆ

ನಾಗಮ್ಮ - ಈಗ ನಿನಗೇನು ಅಂತಹ ವಿಷ ಹಾಕಲಿಕ್ಕೆ ನಾನು ನನ್ನ ಗಂಡ ಸಿದ್ಧವಾಗಿದ್ದೇವೆ ಅಂತಾ ಈ ಮಾತು ಆಡತೀಯಪ್ಪ ಶೇಖರಾ

ಶೇಖರ - ವಿಷ ಹಾಕಿದರೆ ಒಂದೇಟಿಗೆ ಸುಖವಾಗಿ ಸತ್ತು ಹೋಗಬಹುದು. ಆದರೆ ನೀವು ಮಾಡುತ್ತಿರುವ ಮೋಸ ಅದಕ್ಕಿಂತಲೂ ಭೀಕರವಾಗಿದೆ

ನಾಗಮ್ಮ - ಅಂದರೆ ಹೊಟ್ಟೆಯ ಮಗನಿಗಿಂತಲೂ ಹೆಚ್ಚಾಗಿ ಜೋಪಾನ ಮಾಡಿದ ನಮ್ಮ ಮೇಲೆ ಇಂಥ ತಪ್ಪು ಹೊರಸ್ತೀಯಾ ? ಪ್ರಾಚೀನ ಕರ್ಮ ಯಾರೇನು ಮಾಡುವದು ?

ರಾಮಣ್ಣ - ಸಾಕು ಬಾಯಿಮುಚ್ಚು (ಶೇಖರನಿಗೆ ಹೊಡೆದು) ಅಣ್ಣನ ಪತ್ನಿ ನಿನಗೆ ಹೆತ್ತತಾಯಿಗಿಂತ ಹೆಚ್ಚು

ಶೇಖರ - ಅಪ್ಪಾ ಹೆತ್ತ ತಾಯಿಗೆ ಸರಿಯೆನಿಸುವ ಅತ್ತಿಗೆ, ಮಗನಿಗೆ ಸರಿ ಎನಿಸುವ ನನಗೆ ಮಾಡಿದ ಅನ್ಯಾಯ ಬಯಲಿಗಿಡದೇ ನಾ ಬಿಡಲಾರ. ಅಪ್ಪ ನೀನೇನು ಬಲ್ಲಿ, ಇವರ ಮನೆ ಮುರುಕತನವನ್ನು. ಹಸುವಿನ ಮುಖಧರಿಸಿದ ಅತ್ತಿಗೆಯ ಅಂತರಾಳದಲ್ಲಿ ಹುಲಿಯ ಹೇಸಿ ಗುಣ ಅಡಕವಾಗಿದೆಯಪ್ಪ

ನಾಗಮ್ಮ - ಆಹುದಪ್ಪಾ, ನಾವು ಮೋಸಗಾರರು, ವಂಚಕರು. ಇನ್ನೇನಾದ್ರೂ ಅನ್ನೋದಿದ್ರೆ ಅಂದುಕೋ. ನೀನಾದರೂ ಏನು ಮಾಡಿಯಾ ಹಿಂದ ನಿಂತು ಕಲಿಸಿ ಕೊಡುವವರು ಇರುವಾಗ ಅನ್ನದೇ ಬಿಡತೀಯಾ ? ನೋಡ್ರಿ ಅವನ ಪಾಲಿಗೆ ಆದೇನು ಬರುತ್ತದೋ ಕೊಟ್ಟು ಕಳಿಸಿಬಿಡ್ರಿ. ಶನಿ ಎಷ್ಟು ಬೇಗ ತೊಲಗಿದರೆ

ಅಷ್ಟು ಒಳ್ಳೇದು

ರವಿ - ಆಗಲಿ ನೀನು ಸುಮ್ಮನಿರೆ, ನಾನೆಲ್ಲ ಮುಗಸ್ತೇನೆ. ಅಪ್ಪಾ ಮುಗೀತಪ್ಪ ಇಲ್ಲಿಗೆ ನಿನ್ನ ಮನೆಯ ಪುಣ್ಯ

ರಾಮಣ್ಣ - ಆಗಲಪ್ಪ ಮುಗೀಲಿ. ಅನಾಯಾಸವಾಗಿ ಗೋಪಣ್ಣ ಬಂದಿದ್ದಾನೆ. ಇದ್ದ ವಿಷಯ ಹೇಳಿಬಿಡ್ತೇನೆ ಕೇಳು. ನೋಡು ಗೋಪಣ್ಣ ಇರೋದು ಅವರಡು ತೋಟ, ಇದಷ್ಟು ಮನೆ, ಇನ್ನುಳಿದ ವಸ್ತು ಒಡವೆಗಳಲ್ಲಿ ಇವನಿಗರ್ಧ ಅವನಿಗರ್ಧ ಕೊಟ್ಟು ಇವತ್ತೇ ಇತ್ಯರ್ಥ ಮಾಡಿಬಿಡು

ಶೇಖರ - ಮನೆ ತೋಟದ ವಿಷಯ ಇರಲಿ ಮೊದಲು ರೋಖ ಹಣ ಎಷ್ಟಿದೆ ಮನೆಯಲ್ಲಿ ?

ನಾಗಮ್ಮ - ರೋಖ ಹಣ ನಿಮ್ಮಪ್ಪ ಅಮ್ಮ ಗಳಿಸಿಕೊಟ್ಟಿಲ್ಲ ನನ್ನ ಕೈಯಲ್ಲಿ

ಶೇಖರ - ಹೋಗಲಿ, ಸಾಲದ ವಿಷಯ ?

ನಾಗಮ್ಮ - ಯಾವ ಸಾಲ ? ನಾವಂತೂ ಸಾಲ ಮಾಡಿಲ್ಲ. ಇನ್ನು ನೀನೇನಾದರೂ ಮಾಡಿದ್ರೆ ಅದು ನಿನಗೇ ಸಂಬಂಧ

ಶೇಖರ - ಹೌದೇನಪ್ಪ ತಾರಕ್ಕನಿಗೆ ಕೊಟ್ಟು ಕಳಿಸಿದ ಮೂರು ಸಾವಿರ ನಾನೊಬ್ಬೊಬ್ಬನೇ ಹೊತ್ತುಕೊಳ್ಳಬೇಕೇ ?

ನಾಗಮ್ಮ - ನಾವೇನು ತಂದುಕೊಡು ಅಂತ ಹೇಳಿಲ್ಲ. ಅದನ್ನೀಗ ಭಾಗಕ್ಕೆ ಹಾಕಬೇಕಾಗಿಲ್ಲ

ರಾಮಣ್ಣ - ಅಂದರ ಆ ಸಾಲವನ್ನು ನಿನ್ನ ಹೆಸರಿನಲ್ಲಿ ಮಾಡಿರುವೆಯೇನೋ ಶೇಖರಾ ?

ಶೇಖರಪ್ಪ - ನಾನು ಮಾಡಿಲ್ಲವಪ್ಪ. ಇವರಿಬ್ಬರೂ ಕೂಡಿ ಮಾಡಿಸಿದ್ದಾರೆ. ಅಪ್ಪಾ, ತಾರಕ್ಕನಿಗೆ ಕೊಡಿಸಿದ್ದು ಮೂರುಸಾವಿರ. ಮನೆಗೆ ಅಂತಾ ಬಳಿಸಿದ ಎರಡು ಸಾವಿರವನ್ನು ಕೂಡಿಸಿ ಒಟ್ಟು ಐದು ಸಾವಿರಕ್ಕೇನೇ ನನ್ನಿಂದ ಸಾಲ ಪತ್ರಕ್ಕೆ ಸಹಿ ಹಾಕಿಸಿದ್ದಾರೆ. ಕೇಳು ಬೇಕಿದ್ದರೆ ಸಂಘದ ಪ್ರೆಸಿಡೆಂಟ್ ಗೋಪಣ್ಣನನ್ನು

ರಾಮಣ್ಣ - ಹೌದೇನೋ ಗೋಪಣ್ಣ ?

ಗೋಪಿ - ಹೌದು ! ಯಜಮಾನ್ರೆ, ಆದರೇನಾಯ್ತು. ಯಾವ ಸಾಲವಾದರೂ ಮನೆಯ ಹಿತಕ್ಕಾಗಿ ಮಾಡಿದ್ದು ತಾನೆ. ಅಂದ ಬಳಿಕ ಅರ್ಧ ಸಾಲ ಇವನು, ಅರ್ಧ ಸಾಲ ಅವನು ಹೊತ್ತುಕೊಳ್ಳಲಿ

ನಾಗಮ್ಮ - ಪೂ ಪೂ, ಅದೆಲ್ಲ ಆಗಲಾರದ ಮಾತು. ಸಾಲಮಾಡಿದವರೇ ಅದನ್ನ ಹೊತ್ತುಕೊಳ್ಳಬೇಕು. ಹೇಳ್ರಿ ನೀವು. ಎಲ್ಲಾ ನಾನೇ ಮಾತಾಡಬೇಕೇನು ?

ರವಿ - ಹೇಳತೇನಿ ತಡಿಯೇ. ನೋಡಪ್ಪಾ ಈ ಸಾಲದ ಸುದ್ದಿನೇ ನನಗರಿಯದು. ಮೂರು ಸಾವಿರ ಅಕ್ಕನಿಗೆ ಕೊಟ್ಟು ಇನ್ನುಳಿದ ಎರಡು ಸಾವಿರ ತಾನು ಏನು

ಮಾಡಿದ್ದಾನೋ ನಾಳೆ ಅಕ್ಕನಿಂದ ಹಣ ಬಂದರೂ ಅದನ್ನು ನಾ ಕೇಳೋದಿಲ್ಲ. ಅವನುಂಟು ಅವರಕ್ಕನುಂಟು. ಒಟ್ಟಿಗೆ ಈ ಸಾಲದ ವಿಷಯವೇ ನನಗೆ ಗೊತ್ತಿಲ್ಲ

ಶೇಖರ - ಇದೇನಣ್ಣಾ ಎಷ್ಟು ಸುಲಭವಾಗಿ ಜಾರಿಕೊಳ್ಳ ಹತ್ತಿರುವಿಯಲ್ಲ. ಆ ಕಾಗದಕ್ಕೆ ಸಹಿ ಹಾಕಿದವನಷ್ಟೇ ನಾನು. ಉಳಿದದ್ದೆಲ್ಲ ಬರೆದವನು ನೀನೇ ಅಲ್ಲವೇ ?

ಗೋಪಿ - ಯಾಕೋ ರವಿ, ಮಡದಿಯ ಮಾತು ಕೇಳಿ ಒಡಹುಟ್ಟಿದ ತಮ್ಮನನ್ನೇ ವಂಚಿಸಲು ಸಿದ್ಧನಾದಿಯಾ ?

ರಾಮಣ್ಣ - ಮನೆಗೆ ಯಜಮಾನನಾದ ನನ್ನನ್ನು ಕೇಳದೇ ಆ ಸಾಲದ ಪತ್ರಕ್ಕೆ ಶೇಖರನಿಂದ ಹೇಗೆ ಸಹಿ ಹಾಕಿಸಿದಿಯೊ ? ಯಾರು ಕಲಿಸಿಕೊಟ್ಟರು ನಿನಗೆ ಈ ಮನೆಮುರುಕ ಬುದ್ಧಿಯನ್ನು

ಶೇಖರ - ಇನ್ನಾರು ಅಣ್ಣನ ಕೈಹಿಡಿದು ನಿನ್ನ ಮನೆ ತುಂಬಿದ್ದಾಳಲ್ಲ ಈ ಮಹಾತಾಯಿ. ಇವಳ ಪ್ರಸಾದವಪ್ಪ ಇದು. ದಿನಹೋದ ತಂದೆ ನೀನು ಅಕಸ್ಮಾತ್ ಕಣ್ಮುಚ್ಚಿದ್ದರೆ ನನ್ನ ಕೈಯಲ್ಲಿ ಮೂರು ಹಿಡಿ ಮಣ್ಣುಕೊಟ್ಟು ಹೊರಗಟ್ಟಬೇಕೆಂದು ಮಾಡಿದ ಪುಣ್ಯ ಕಾರ್ಯವಪ್ಪ. ಹೋಗಲಿ ಅವಳು ಹೊರಗಿನವಳೆಂದು ಸಹಿಸೋಣ. ಸಾಕಷ್ಟು ಕಲಿಯದ ನನ್ನ ಕೈಯಿಂದ ಮೂರು ಸಾವಿರದ್ದೆಂದು ಹೇಳಿ ಐದು ಸಾವಿರದ ಕಾಗದಕ್ಕೆ ಸಹಿ ಹಾಕಿಸಿದನಲ್ಲ ಈ ಅಣ್ಣ, ಇವನಿಗೂ ತಿಳಿಯಬಾರದೇ ? ನಾಳೆ ನಾನು ಈ ಪರಿಯ ಸಾಲಕ್ಕೇನೆ ಅಂಜಿ ಹೊಲಮನೆ ಇವರಿಗೆ ಬಿಟ್ಟುಹೋಗಲಿ ಅಂತ ಹೂಡಿದ ಆಟವಪ್ಪಾ ಇದು

ಶ್ಯಾಮಣ್ಣ - ನಾಗು ನಿನ್ನಂಥವಳನ್ನು ಹಡಿಯುವದಕ್ಕಿಂತ ನಿನ್ನ ತಾಯಿ ಬಂಜೆಯಾಗಿದ್ದರೆ ನೆಟ್ಟಗಿತ್ತು. ಮಗನಂತೆ ಕಾಣಬೇಕಾದ ಮೈದುನನನ್ನು ವಂಚಿಸಿ ಕೊಟ್ಟ ಮನೆ ಒಡೆಯುವ ದುಷ್ಟ ಪ್ರವೃತ್ತಿ ನಿನ್ನದಾಯಿತೆ ? ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿ ನನ್ನ ಮಾನವನ್ನು ಮೂರು ಕಾಸಿಗೆ ಮಾರಿಬಿಟ್ಟೆ. ಒಟ್ಟಾರೆ ಹೆಣ್ಣು ಜಾತಿಯೇ ಹೀಗೆಯೋ ಏನೋ ? ಅಣ್ಣ ತಮ್ಮಂದಿರ ಎದೆಗೆ ಹುಣ್ಣಾಗಬಲ್ಲ ಮಹಾಮನೆ ಮುರುಕ ಜಾತಿ ಹೆಣ್ಣಿನದು

ಶೇಖರ - ಛೇ ಛೆ ಹೆಣ್ಣು ಜಾತಿಯನ್ನೇಕೆ ಹಳಿಯುತ್ತೀರಿ ಮಾಮಾ. ಕೆಟ್ಟವರೂ ಇದ್ದಾರ, ಒಳ್ಳೆಯವರೂ ಇದ್ದಾರೆ. ಮನೆ ಮುರಿಯುವವರಷ್ಟೇ ಏಕೆ ? ಮುರಿಯಲಿರುವ ಮನೆ ಉಳಿಸುವವರೂ ಇದ್ದಾರೆ

ರಾಮಣ್ಣ - ಆಯಿತಲ್ಲ ಗೋಪಣ್ಣಾ, ಆ ಐದು ಸಾವಿರ ಸಾಲದಲ್ಲಿ ಮೂರು ಸಾವಿರ ಶೇಖರನಿಗೆ ಇನ್ನುಳಿದ ಎರಡು ಸಾವಿರ ರವಿಗೆ. ಇಬ್ಬರಿಗೂ ಒಂದೊಂದು ತೋಟ, ಮನೆಯ ಅರ್ಧಭಾಗ ಇವನಿಗೆ ಉಳಿದ ಅರ್ಧಭಾಗ ಅವನಿಗೆ ಮಾಡಿ ಇದ್ದ ಸಾಮಾನು ಹಂಚಿ ಬಿಡಲಿ. ಸಾಕು ನಾ ನೋಡಲಾರೆ ಈ

ಕರ್ಮ

ರವಿ - ಅಪ್ಪಾ, ಅವನ ಸಾಲಕ್ಕೆ ನಾನು ಮಾತ್ರ ಬಾಧ್ಯಸ್ಥನಲ್ಲ

ಗೋಪಿ - ಅಂದರೆ ಏಕತ್ರ ಕುಟುಂಬದಲ್ಲಿದ್ದು ಮಾಡಿದ ಸಾಲವನ್ನು ಅಣ್ಣ ತಮ್ಮಂದಿರಿಬ್ಬರೂ ಹಂಚಿಕೊಳ್ಳಬೇಕಾದದ್ದು ನ್ಯಾಯ

ರವಿ - ನ್ಯಾಯವೋ ಅನ್ಯಾಯವೋ, ನಾನು ಮಾತ್ರ ಆ ಸಾಲ ಹೊತ್ತುಕೊಳ್ಳಲು ಸಿದ್ಧನಿಲ್ಲ

ರಾಮಣ್ಣ - ಹಾಗಿದ್ದರೆ ನಾನು ನಿನಗೆ ಪಾಲು ಕೊಡಲು ಸಿದ್ಧನಿಲ್ಲ. ರವಿ ನಾನಾಗಿ ನಿನಗೆ ಆಸ್ತಿಯ ಅರ್ಧಭಾಗ ಕೊಟ್ಟರೆ ಮಾತ್ರ ಉಂಟು. ಇಲ್ಲದಿದ್ರೆ ನಿನ್ನ ಕೈಗೆ ಬರಿ ಕೊಳೆತ ದಂಟು

ರವಿ - ಅಪ್ಪ ಈ ನಿನ್ನ ಬೆದರಿಕೆಯನ್ನು ಆ ನಿನ್ನ ಕಿರಿಯ ಮಗನಿಗೆ ಹೇಳು. ನೀನು ಕೊಡದಿದ್ದರೆ ನನ್ನ ಪಾಲನ್ನು ಕೋರ್ಟಿನ ಮುಖಾಂತರ ತೆಗೆದುಕೊಳ್ಳುತ್ತೇನೆ

ರಾಮಣ್ಣ - ಕೋರ್ಟಿನ ಮುಖಾಂತರ ತೆಗೆದುಕೊಳ್ಳಲು ಈ ನನ್ನ ಸಂಪತ್ತು ಪಿತ್ರಾರ್ಜಿತವಾಗಿ ಬಂದದ್ದಲ್ಲ. ಇದೆಲ್ಲವೂ ಸ್ವಯಾರ್ಜಿತ

ರವಿ - ಅದೆಲ್ಲ ಇರಲಿ, ಈಗ ನೀನು ನನಗೆ ಪಾಲು ಕೊಡುವಿಯೋ ಇಲ್ಲವೋ ಹೇಳಿಬಿಡು

ರಾಮಣ್ಣ - ನನ್ನ ಕರಾರಿಗೆ ಒಪ್ಪಿ ಅರ್ಧ ಸಾಲ ನೀನು ಹೊತ್ತರೆ ಮಾತ್ರ ಈ ಮನೆಯಲ್ಲಿ ನಿನಗೆ ಪಾಲು

ರವಿ - ಇಲ್ಲ ಸಾಲ ಹೊತ್ತುಕೊಳ್ಳಲು ನಾನು ಸಿದ್ಧನಿಲ್ಲ

ರಾಮಣ್ಣ - ಹಾಗಿದ್ದರ ನಿನಗೆ ಪಾಲು ಕೊಡಲು ಸಾಧ್ಯವಿಲ್ಲ

ರವಿ - ಅಂದರೆ ನಾನು ನಿನ್ನ ಮಗನಲ್ಲವೇ ?

ರಾಮಣ್ಣ - ವಂಚಕನಾದ ನಿನ್ನನ್ನು ಮಗನೆಂದು ಯಾವ ಮುಖದಿಂದ ಹೇಳಲಿ ?

ರವಿ - ಅಪ್ಪಾ ಅಷ್ಟಕ್ಕೆ ಮುಚ್ಚು ನಿನ್ನ ಬಾಯಿ ?

ರಾಮಣ್ಣ - ನನಗೆ ಬಾಯಿ ಮುಚ್ಚಲು ಹೇಳುವಿಯೇನೋ ಅಯೋಗ್ಯ (ಹೊಡೆಯುವನು)

ರವಿ - ಮುದಿ ಹದ್ದೇ (ಕೆನ್ನೆಗೆ ಹೊಡೆಯುವನು)

ಶೇಖರ - ಕರ್ಮಚಾಂಡಾಲ. ಜನ್ಮ ಕೊಟ್ಟ ತಂದೆಯ ಮೇಲೆ ಕೈ ಮಾಡಿದಿಯಾ? (ಏರಿ ಹೋಗುವನು)

ಗೋಪಿ - ಶೇಖರಾ (ಅಡ್ಡೈಸುವನು)

ಶೇಖರ - ಬಿಡು ಗೋಪಣ್ಣ... ಮಡದಿಯ ಮಾತುಕೇಳಿ ಮನೆಯನ್ನು ಮಸಣವನ್ನಾಗಿ

ಮಾಡಿದ ಈ ಮೋಸಗಾರನನ್ನು ಕೊಂದು ಸುಟ್ಟು ಬೂದಿಯನ್ನು ನನ್ನ ಕಣ್ಣಿಗಿಟ್ಟುಕೊಳ್ಳುವೆ

ಗೋಪಿ - ಶೇಖರ, ನಿಮ್ಮಣ್ಣನ ಮೇಲೆ ಕೈಮಾಡಿದರೆ ನಿನ್ನ ತಾಯಿಯ ಆಣೆಯಾಗಿದೆ. ಎಷ್ಟಾದರೂ ನಿನ್ನ ಅಣ್ಣ ತಂದೆಗೆ ಸಮ

ಶೇಖರ - ಅಣ್ಣನಾದರೇನಾಯಿತಪ್ಪ. ಅಪ್ಪನ ಮೇಲೆ ಕೈ ಮಾಡಬೇಕೇ ?

ಗೋಪಿ - ಹಾಗಿದ್ದರೆ ಸಿಟ್ಟು ಬಂದಿದೆಯೆಂದು ನೀನು ನಿನ್ನ ಅಣ್ಣನ ಮೇಲೆ ಕೈ ಮಾಡಬೇಕೇ ? ಅವನು ಮಾಡಿದ ದ್ರೋಹ ನಿಮ್ಮ ಕೈಯಿಂದಲೂ ಜರುಗಬೇಕೆ ? ಆ ಬಳಿಕ ಅವನಿಗೂ ನಿನಗೂ ಅಂತರವೆಲ್ಲಿ ಉಳಿಯಿತೊ?

ರಾಮಣ್ಣ - ಗೋಪಿ ಅವನು ಮಾಡಿದ ಕರ್ಮವನ್ನು ವಿಧಿ ಅವರಿಗೆ ಉಣಿಸುತ್ತದೆ. ಸಾಕು ಗೋಪಿ ಮುಗಿಸಿಬಿಡಪ್ಪ ಈ ಪಾಲು ವಿಭಾಗದ ವಿಷಯವನ್ನು

ಗೋಪಿ - ಏನು ರವಿ ಸರಿ ಅರ್ಧ ಸಾಲ ಹೊತ್ತುಕೊಂಡು ಪಾಲು ತೆಗೆದುಕೊಳ್ಳುವೆಯೋ ಅಥವಾ ನಿನಗೇನೂ ಈ ಮನೆಯಲ್ಲಿ ಅಧಿಕಾರವಿಲ್ಲವೆಂದು ಬಿಟ್ಟು ಇಲ್ಲಿಂದ ಹೊರಬೀಳುವಿಯೋ ?

ರವಿ - ನಮ್ಮ ಮನೆಯ ಜಗಳದಲ್ಲಿ ಭಾಗವಹಿಸಲು ನೀನು ಯಾರೋ ?

ಗೋಪಿ - ನಾನು ಯಾರು ! ಕೇಳಿ ನೋಡು ನಿನ್ನ ಹೃದಯವನ್ನು ಕತ್ತೇ. ಈಗಾಗಲೇ ಕಣ್ಣು ನೆತ್ತಿಯ ಮೇಲೆ ಹೋದವೇನು ? ಯಾರು ನಿನಗೆ ಸಂಘದಲ್ಲಿ ನೌಕರಿಯಿತ್ತು ನಿನ್ನ ಜೀವಕ್ಕೊಂದು ಮಾರ್ಗ ಕಟ್ಟಿಸಿಕೊಟ್ಟನೋ ಅವನೇ ನಾನು. ರವಿ ! ನಿನ್ನ ವಂಚಕತನ ಬದಿಗಿಟ್ಟು ತಂದೆಯ ಮಾತಿಗೆ ಒಪ್ಪಿಕೋ ಇಲ್ಲದಿದ್ದರೆ ..

ರವಿ - ಏನು ಮಾಡುವಿ ? ಸುತ್ತಲೂ ಹತ್ತು ಹರದಾರಿಯಲ್ಲಿ ನಿನಗೆ ತುತ್ತು ಅನ್ನ ಹುಟ್ಟದಂತೆ ಮಾಡಬಲ್ಲೆ. ನಾನು ಯಾರು ಗೊತ್ತೋ ? ಕರ್ತವ್ಯಕ್ಕೆ ಚ್ಯುತಿ ಬರುವದಾದಲ್ಲಿ ಕರುಣೆಯನ್ನು ಕತ್ತರಿಸಿ ಹಾಕಬಲ್ಲೆ. ಕಲ್ಲೆದೆಯ ಮನುಷ್ಯ ಕರುಳಿನಿಂದ ಕಣ್ಣೀರು ಕರೆಯುತ್ತ ನಿಂತ ನಿನ್ನ ತಂದೆಯಲ್ಲ. ಅಣ್ಣನೆಂಬ ಅಕ್ಕರತೆಗೆ ಸುಮ್ಮನಾಗಲು ನಿನ್ನ ತಮ್ಮನಲ್ಲ. ಬುದ್ಧಿ ಬಲದಿಂದ ಸರಕಾರ ಹಾಗೂ ಸಮಾಜಗಳೆಡರ ಮೇಲೆ ಪ್ರಭಾವವಿಟ್ಟುಕೊಂಡ ವ್ಯಕ್ತಿ ನಾನು. ಮನಸ್ಸು ಮಾಡಿದರ ಬಲಿತು ಮಲೆತ ಈ ನಿನ್ನ ಹೀನಗುಣ, ಅರ ನಿಮಿಷದಲ್ಲಿ ಇಲ್ಲವಾದೀತು. ಹೂ ಹೇಳು ಏನನ್ನುವಿ ?

ನಾಗಮ್ಮ - ಇರಲಿ ಬಿಡು ಅಣ್ಣಾ, ವಿಷ ಗಳಿಗೆಗೆ ಸಿಟ್ಟಿನ ಕೈಗೆ ಬುದ್ಧಿಯಿಟ್ಟು ತಪ್ಪಿ ನಡೆದರು. ನೋಡಣ್ಣಾ ಅವರ ಮೇಲೆ ಕೋಪಿಸಿಕೊಳ್ಳಬೇಡ. ನಿನ್ನ ಮನಸ್ಸಿಗೆ ಬಂದಂತೆ ಮುಗಿಸಿಬಿಡು. ಒಪ್ಪುತ್ತಾರೆ, ಒಪ್ಪಿಕೊಳ್ಳಿ

ರವಿ - ಆಗಲಿ ಒಪ್ಪಿಕೊಳ್ಳುತ್ತೇನೆ

ಗೋಪಿ - ಹಾಗಿದ್ದರೆ ಸರಿ ನೋಡು ಶೇಖರ, ಮನೆಯಲ್ಲಿ ಈ ಅರ್ಧಭಾಗ ಒಬ್ಬರಿಗೆ, ಉಳಿದರ್ಧ ಭಾಗ ಒಬ್ಬರಿಗೆ. ಇದರಲ್ಲಿ ನಿನಗೆ ಯಾವದು ಇಷ್ಟವೋ ಅದನ್ನು ಆರಿಸಿಕೋ. ಯಾಕಂದರೆ ಸಣ್ಣವರು ಬಿಟ್ಟದ್ದು ಹಿರಿಯರಿಗೆ

ಶೇಖರ - (ಸುನಂದೆಗೆ) ಯಾವದು ತೆಗೆದುಕೊಳ್ಳೋಣ ಸುನಂದಾ ?

ನಾಗಮ್ಮ - ಹೇಳಿಕೊಡವ್ವಾ ಪುಣ್ಯಾತ್ಮಗಿತ್ತಿ. ಮದುವೆಯ ಮುಂಚೆ ಮನೆಯ ಒಡತಿಯಾಗಿ ಅಕ್ಕನ ಮನೆ ಒಡೆದು ದಕ್ಕಿಸಿಕೊಂಡಿದ್ದೀಯಲ್ಲ, ಚಾಡಿಬುರಿಕಿ ಆರಿಸಿ ಹೇಳು, ನಿನಗೆ ಬೇಕಾದ ಭಾಗವನ್ನು ಮನಮುರುಕಳೇ

ಸುನಂದ - ಇಲ್ಲ. ನೀನು ಮಹಾಸಂಪನ್ನೆಯಲ್ಲವೇ ? ನೀನು ಬೇರೆಯವರ ಅದರಲ್ಲಿಯೂ ನನ್ನದಾಗಲಿರುವ ಮನೆ ಮುರಿಯುವ ದುಸ್ಸಂಚನ್ನು, ಅದೂ ನನ್ನ ಮುಂದೆ ಹೇಳಿದ ಬಳಿಕ ನಾನು ಸುಮ್ಮನಿರಬೇಕಾಗಿತ್ತಲ್ಲವೇ ? ಇನ್ನು ಮೇಲಾದರು ನೀನು ಬಾಯಿಮುಚ್ಚಿಕೊಂಡು ಸುಮ್ಮನಿದ್ದರೆ ಒಳ್ಳೇದು. ಇಲ್ಲದಿದ್ದರೆ ನಿನಗೆ ಕೇಡು. ಕೊನೆಯದಾಗಿ ಹೇಳ್ತೇನಿ. ಈ ವಿಷಯದಲ್ಲಿ ನೀನು ಅಕ್ಕ, ನಾನು ತಂಗಿ

ನಾಗಮ್ಮ - ಆದ್ದರಿಂದಲೇ ನೀರು ಕುಡಿದಿಯೇನೇ ನನ್ನ ಮನೆ ನುಂಗಿ. ಹೋಗಲಿಬಿಡು. ನನ್ನ ಮನೆ ಹಾಳುಮಾಡಿ ನಿನ್ನ ಇಷ್ಟ ತೀರಿಸಿಕೊಂಡಿಯಲ್ಲ. ಇನ್ನೇಕೆ ಬೇಕು ನಿನಗೆ ಮದುವೆ ? ಮಕ್ಕಳನ್ನಷ್ಟು ಹಡೆದುಕೊಡು, ಆಡಿಸಿ ಸಂತೋಷಪಡಲಿ ಈ ನಿನ್ನ ಘಡೆದ ತಂದೆ

ಶ್ಯಾಮಣ್ಣ - ನಿನ್ನ ತಂಗಿಯ ಶೀಲದ ಬಗ್ಗೆ ಆಡಲಿಕ್ಕೆ ನಿನಗೆ ನಾಚಿಕೆಯಾಬೇಕು ನಾಗು

ನಾಗಮ್ಮ - ಇವಳು ಇನ್ನು ಮೇಲೆ ನನಗೆ ತಂಗಿಯಲ್ಲ. ನಾನು ಇವಳ ಅಕ್ಕನಲ್ಲ. ಕಡಿದುಹೋಯಿತು ಇಲ್ಲಿಗೆ ಈ ಅಕ್ಕ ತಂಗಿಯ ಸಂಬಂಧ

ಸುನಂದ - ಕಡಿದು ಹೋದರೆ ಒಳ್ಳೆಯದೇ ಆಯಿತು. ನನ್ನಕ್ಕ ನನ್ನ ಭಾಗಕ್ಕೆ ಸತ್ತುಹೋದಳು ಅಂತ ಸ್ನಾನ ಮಾಡುತ್ತೇನೆ. ಇನ್ನಾದರೂ ಬಾಯಿ ಮುಚ್ಚಿಕೋ. ಇಲ್ಲದಿದ್ದರೆ ಪೂಜೆ ಮಾಡಿಸೇನು ಎಚ್ಚರಿಕೆ

ನಾಗಮ್ಮ - ಏನಂದೇ ಹಾಳಾದವಳೆ, ನನ್ನ ಮನೆಗೆ ಬಂದು ನನ್ನನ್ನೇ ಹೊಡೆಯಿಸುತ್ತೀಯಾ ? (ಏರಿ ಹೋಗುವಳು. ಗೋಪಿ ಬಿಡಿಸುವನು)

ರವಿ - ಏ ನಾಗೂ. ನಿನ್ನ ಕಟ್ಟಿಕೊಂಡೇ ನಾನಿಷ್ಟ ಸಣ್ಣಾದದ್ದು ಬಿಡೇ

ಶ್ಯಾಮಣ್ಣ - ಸಾಕು ನನ್ನ ಹೊಟ್ಟೆಯಲ್ಲಿ ಹುಟ್ಟಿ ಕೊಟ್ಟ ಮನೆಗೆ ಕಣ್ಣಾಗಲ್ಲಿ. ಅವರ ಹೊಟ್ಟೆಯ ಹುಣ್ಣಾದಿರಿ. ನನ್ನ ಕರ್ಮ. ಈ ಮದುವೆಯ ಮಾತು ತೆಗೆದದ್ದೇ ನನ್ನ ತಪ್ಪು.

ಸುನಂದ ಇನ್ನು ಈ ಮನೆಯ ಸಹವಾಸವೇ ಬೇಡ. ನಿನ್ನ ಈ ಮನೆಗೆ ಕೊಡುವದೂ ಬೇಡ

ಶೇಖರ - (ಗಾಬರಿಯಾಗಿ) ಸುನಂದ. ಅಂದರೆ.... ನೀನು ನನ್ನ ಬಿಟ್ಟು ಹೋಗ್ತೀಯಾ?

ಸುನಂದ - (ಸೆರಗು ಹಿಡಿದ ಶೇಖರನಿಗೆ) ಅಯ್ಯೋ ತಡೆಯಿರಿ ಸ್ವಲ್ಪ. ಇಷ್ಟೇಕೆ ಗಾಬರಿಯಾಗ್ತೀರಿ ? ಅಪ್ಪ ಮೊದಲೇ ನಾನಿವರಿಗೆ ಮನಸ್ಸು ಒಪ್ಪಿಸಿದ್ದೇನೆ. ಈಗ ಮತ್ತೆ ನಿನ್ನ ಮಾತು ಕೇಳಿ ಬೇರೆಯವರಿಗೆ ಮೈ ಒಪ್ಪಿಸಲಿಕ್ಕೆ ಅಪ್ಪ ಈ ನಿನ್ನ ಮಗಳು ಹುಟ್ಟಿದ್ದು ಸೂಳೆಯ ಹೊಟ್ಟೆಯಲ್ಲಲ್ಲ. ಉತ್ತಮಳಾದ ಗೃಹಿಣಿಯ ಹೊಟ್ಟೆಯಲ್ಲಿ

ಶ್ಯಾಮಣ್ಣ - ಏನಾದರೂ ನಾನು ನಿನ್ನ ತಂದೆ. ಶಾಶ್ವತವಾಗಿವುಂಟು ಮಗಳ ಮೇಲೆ ತಂದೆಯ ಅಧಿಕಾರ

ಸುನಂದ - ಅಪ್ಪಾ ಎಂದು ನನ್ನನ್ನು ಇವರಿಗೆ ಧಾರೆಯೆರೆದು ಕೊಡುವದಾಗಿ ಹೇಳಿದಿಯೋ ಅಂದೇ ಹೋಯಿತಪ್ಪ ನನ್ನ ಮೇಲಿದ್ದ ನಿನ್ನ ಅಧಿಕಾರ. ಈಗ ನನ್ನ ಮೇಲೆ ಅಧಿಕಾರ ಅಂತ ಇರುವದಾದರೆ ನನ್ನ ಕೈಹಿಡಿಯಲಿರುವ ಇವರದು. ನೋಡಪ್ಪಾ ಕಡೆಯದಾಗಿ ಹೇಳಿಬಿಡ್ತೀನಿ. ನಿನಗೆ ಈ ನಿನ್ನ ಮಗಳ ಮೇಲೆ ಪ್ರೀತಿಯಿದ್ದರೆ ನನ್ನ ತಲೆಯಮೇಲೆ ನಾಲ್ಕು ಅಕ್ಷತೆ ಹಾಕಿ ಹೋಗು ಇಲ್ಲದಿದ್ದರೆ..

ರಾಮಣ್ಣ - ಶ್ಯಾಮಣ್ಣನವರೇ ಇಲ್ಲಿಗೆ ನೀವು ಮಾತನಾಡಬೇಕಾದ ಮಾತು ಮುಗಿದುಬಿಟ್ಟವು

ಗೋಪಿ - ಬನ್ನಿ ಪಾಲು ಮಾಡಿಕೊಡುತ್ತೇನೆ

ಶೇಖರ - ಸುನಂದಾ ನಿನಗೆ ಯಾವುದು ಬೇಕು ಅವನ್ನು ಆರಿಸಿಕೋ ಹೋಗು, (ಸುನಂದಾ ಹೋಗುವಾಗ)

ನಾಗಮ್ಮ - (ತಡೆದು) ನನ್ನ ಮನೆಯೊಳಗೆ ಕಾಲಿಡಲಿಕ್ಕೆ ನೀನಾರೇ ಗೈಯಾಳಿ ? ಈ ಮನೆಗೆ ಸಂಬಂಧಪಟ್ಟವರು ಮಾತ್ರ ಬರಲಿ ಒಳಗೆ

ಸುನಂದ - ಬರ್ರಿ ನಾನಿಲ್ಲಿಯೇ ನಿಂತು ಹೇಳ್ತೇನಿ. ಆರಿಸಿ ತಗೋಳ್ರಿ. (ಶೇಖರ ಸುನಂದ ಒಪ್ಪಿದ್ದನ್ನು ಒಂದೊಂದೇ ಆರಿಸಿ ತರುವನು)

॥ ಹಿನ್ನಲೆ ಗೀತೆ ॥

ಹೆಣ್ಣೇಬಾಳಿನ । ಕಣ್ಣಾಗುವಳು । ಹೆಣ್ಣೇ ಕಣ್ಣಿಗೆ
ಹುಣ್ಣಾಗುವಳು । ಕೊಟ್ಟಮನೆಯನು ಬೆಳಗಿಸುವಳು ।
ಶಿಷ್ಟೆಯಲಿ ತಾ ನಡೆಸುವವಳು । ಹುಟ್ಟಿದಾಮನೆಯ
ಹೆಸರುನುಳಿಸುವಳು ॥

ಗೋಪಿ - (ಒಸಿಕೆ ತಂದು) ಏನ್ರಪಾ ಇದೊಂದೇ ಇದೆಯಲ್ಲ ಹೇಗೆ ಮಾಡೂದು ?

ಶೇಖರ - ಮಾಡುವದೇನು.... ಮಾಡು ಅದರಲ್ಲಿ ಎರಡು ತುಂಡು

ನಾಗಮ್ಮ - ನೋಡ್ರಿ ಅಡ್ಡ ಎರಡು ತುಂಡು ಹಾಕಿದರೆ ಅವನು ಸಣ್ಣವನೆಂದಮೇಲೆ ಮೊದಲು ಬೇಡ್ತಾನೆ ಆ ಅಣಸು ಇದ್ದ ಭಾಗಾನೇ

ರವಿ - ಹೌದು ಗೋಪಣ್ಣಾ ಅಡ್ಡ ತುಂಡು ಹಾಕಿದರೆ ನನ್ನ ಒಪ್ಪಿಗೆಯಿಲ್ಲ. ಅದನ್ನು ಉದ್ದ ಸೀಳಬೇಕು

– ವಿಶ್ರಾಂತಿ –

ಮನೆಸೀನು

## (ಒಂದೇ ದೃಶ್ಯದಲ್ಲಿ ಪಾಲಾದ ಎರಡು ಮನೆ ಇರಬೇಕು)

(ಬೆಳಕು ಹರಿದಾಗ ಎರಡು ಸಂಸಾರ ಪ್ರಾರಂಭ. ರವಿ ತನ್ನ ಮನೆಯ ಕಟ್ಟೆಯ ಮೇಲೆ ಕುಳಿತಿದ್ದಾನೆ. ಅದರಂತೆ ಶೇಖರನೂ ಕುಳಿತಿದ್ದಾನೆ. ಆ ಇಬ್ಬರ ಹೆಂಡಂದಿರೂ ಏಕಕಾಲಕ್ಕೆ ಚಹಾ ತಂದುಕೊಡುವರು)

ರವಿ - ಏನೇ ಇದು ಚಹಾ ಎಷ್ಟು ಸಿಹಿಯಾಗಿದೆಯಲ್ಲ. ಸಕ್ಕರೆ ಧಾರಣೆ ಏರುತ್ತ ಹೋದ ಹಾಗೆಲ್ಲಾ ಚಹಾಕ್ಕೆ ಸಕ್ಕರೆ ಹೆಚ್ಚು ಹಾಕುವ ಹವ್ಯಾಸ ಅಂಟಿಕೊಂಡಿದೆಯಲ್ಲ. ಯಾರಮನೆ ಹಾಳು ಮಾಡಬೇಕೆಂದಿರುವಿ ?

ನಾಗಮ್ಮ - ನಿಮಗೊಂದು ಹುಚ್ಚು. ಮುಂಜಾನೆ ಎದ್ದು ಕುಡಿಯುವ ಚಹಾ ಸಿಹಿ ಇದ್ದರೇನೇ ಒಳ್ಳೇದು. ಇಷ್ಟು ತಿಳಿಯಬಾರದೇನು ನಿಮಗೆ, ನೀವೇನು ಶಾಲೆ ಕಲಿಯಲಾರದ ಅನಾಗರಿಕರೇನು ?

ಶೇಖರ - ಏನೇಯಿದು ಚಹಾ ಬರಿ ಕಹಿ ಇದೆ. ಹಾಕಲಿಕ್ಕೆ ಸಕ್ಕರೆ ಇರಲಿಲ್ಲವೇನೇ ಮನೆಯಲ್ಲಿ

ಸುನಂದ - ಅಯ್ಯ ಸಕ್ಕರೇಗೇನು ಬರ ನಮ್ಮ ಮನೆಯಲ್ಲಿ. ಆದರೆ ಚಹಾಕ್ಕೆ ಸಕ್ಕರೆ ಹೆಚ್ಚಾಗಿ ಹಾಕಿ ಕುಡಿಯುವದರಿಂದ ಮಧುಮೇಹ ರೋಗವಾಗುತ್ತದೆ. ಅಲ್ಲದೆ ಸಿಹಿ ಹೆಚ್ಚು ಬೇಡಲಿಕ್ಕೆ ನೀವೇನು ನಾಲಿಗೆ ಸವಿ ಕಳೆದುಕೊಂಡ ಕಲಿತು ನೌಕರಿ ಮಾಡುವ ಕೂಲೀ ಆಳಲ್ಲ

ನಾಗಮ್ಮ - (ಒಳಗಿನಿಂದ ಕೋಟು, ಟೋಪಿ ತಂದು ತೊಡಿಸುವಳು) ನೋಡಿ ಈ ರೀತಿ ವೇಷಭೂಷಣ ಮಾಡಿಕೊಂಡು ಆಫೀಸಿಗೆ ನೌಕರಿ ಮಾಡಲಿಕ್ಕೆ ಹೋಗಬೇಕಾದರೂ ಒಂದು ಪುಣ್ಯಬೇಕು. ಏನೇ ಆದರೂ ಕಲಿತವರ ಯೋಗ್ಯತೆ ಕಲಿಯದವರಿಗೆ ಹೇಗೆ ಬಂದೀತು. (ತೊಡಿಸುವಳು)

ಸುನಂದ - (ತಲೆವಸ್ತ್ರ ತಂದು ಕೊಡುತ್ತ) ದಿನಬೆಳಗಿದರೆ ಹತ್ತಾರು ಜನ ಕೂಲಿ ಆಳುಗಳನ್ನು ತೋಟದಲ್ಲಿ ದುಡಿಸಿಕೊಳ್ಳುವ ನನ್ನ ರಾಜ ನೀವು. ಸ್ವತಂತ್ರ ಭಾರತದ ರೈತರಾಜ. ಸಂಬಳಕ್ಕಾಗಿ ಒಬ್ಬರ ಕೈಯಲ್ಲಿ ದುಡಿಯುವವರು ನೀವಲ್ಲ. ಸಂಬಳಕೊಟ್ಟು ಇನ್ನೊಬ್ಬರನ್ನು ದುಡಿಸಿಕೊಳ್ಳುವ ಈ ನನ್ನ ಅರಸ ಯಾವ ವೇಷದಲ್ಲಿದ್ದರೂ ಯೋಗ್ಯತಗೆ ಕುಂದಿಲ್ಲ

ರವಿ - ಆಗಲಿ, ನಾನಿನ್ನು ಆಫೀಸಿಗೆ ಹೊರಟೆ. ಮಗು ಏನು ಮಾಡುತ್ತಿದೆ ?

ನಾಗಮ್ಮ - ಒಳಗೆ ಆಡುತ್ತಲಿದ್ದಾನೆ. (ಟಾಟಾ ಹೇಳಿ ಹೋಗುವನು)

ಶೇಖರ - ಸುನಂದ, ಬಾಳೆಗೊನೆ ಕೊಯ್ಯಲು ಆಳಿಗೆ ಹಚ್ಚಿ ಬರುತ್ತೇನೆ. ಅಪ್ಪ ಏನು ಮಾಡುತ್ತಲಿದ್ದಾನೆ

ಸುನಂದ - ಒಳಗೆ ಚಹಾ ಕುಡಿಯುತ್ತಿದ್ದಾರೆ. (ಶೇಖರ ಟಾಟಾ ಎಂದು ನಕ್ಕು ಹೋಗುವನು) (ನಾಗಮ್ಮ ಮಗುವಿನೊಂದಿಗೆ ಹೊರಬರುವಳು. ರಾಮಣ್ಣ ಈ ಬದಿಯಿಂದ ಹೊರಗೆ ಬಂದು)

ನಾಗಮ್ಮ - ಮಾಮಾ ನಾನು ಸೀ ನೀರಿಗೆ ಹೋಗತೇನಿ. (ಮಗುವನ್ನು ಕೊಟ್ಟು ಕೊಡ ತೆಗೆದುಕೊಂಡು ಹೋಗುವಳು)

ಸುನಂದ - ಮಾಮಾ ನಾನೂ ನೀ ನೀರಿಗೆ ಹೋಗತೇನಿ. ಲೇ ಕಳ್ಳಾ ಬಾರೋ ಇಲ್ಲಿ

ರಾಮಣ್ಣ - ನೋಡಮ್ಮ ಈ ನಿನ್ನ ಅಕ್ಕನ ಮಗ ನಾರಾಯಣ ಹೇಗಿದ್ದಾನೆ, ಗರ್ಭದಲ್ಲಿ ಮೂಡಿದಾಗಲೇ ಅಣ್ಣ ತಮ್ಮಂದಿರಲ್ಲಿ ಅಕ್ಕತಂಗಿಯರಲ್ಲಿ ಕಲಹ ಹುಟ್ಟಿಸಿ ನನ್ನ ಮನೆ ಎರಡ ಮಾಡಿಬಿಟ್ಟ. ಇವನು ಎಲ್ಲಿ ಇರುವನೋ ಆ ಮನೆಯೇ ಮಹಾಭಾರತ, ನೋಡು ನಾರಾಯಣ ನಿನ್ನ ಚಿಕ್ಕಮ್ಮ ಕರೀತಾಳ

ಸುನಂದ - ನಾರಾಯಣ ಬಾ ಅಪ್ಪಾ ಇಲ್ಲಿ (ಮುದ್ದು ಕೊಡುವಳು) ನನ್ನ ಚಿನ್ನ, ನನ್ನ ಬಂಗಾರ, ನಮ್ಮವ್ವನ ಗಂಡ. (ಮುದ್ದುಕೊಟ್ಟು ಮತ್ತೆ ಮಾವನ ಕೈಯಲ್ಲಿ ಕೊಟ್ಟು) ನಾನು ನೀರಿಗೆ ಹೋಗತೇನಿ ಮಾಮಾ

ರಾಮಣ್ಣ - ಆಗಲಿ ಹೋಗಿ ಬಾರಮ್ಮ

ಸುನಂದ - (ಕೊಡ ತೆಗೆದುಕೊಂಡು ಹೋಗುತ್ತ) ನೋಡಿ ಮಾಮಾ ಮಗುವನ್ನು ನಮ್ಮ ಕಟ್ಟೆಯ ಮೇಲೆ ತಂದರೆ ಏನಾದರೂ ಅಂದಾರು. (ಎಂದು ಹೋಗುವಳು)

ರವಿ - (ಬಂದು) ಅಪ್ಪಾ ಅವಳು ನೀರಿಗೆ ಹೋದಳೇನು ?

ರಾಮಣ್ಣ - ಹೌದು ಯಾಕೋ ಮತ್ತೆ ಬಂದಿ ?

ರವಿ - ಒಂದು ಆಫೀಸಿನ ಕಾಗದ ಮರೆತುಹೋಗಿದ್ದೆ. (ಒಳಗೆ ಹೋಗಿ ಬಂದು) ನೋಡಪ್ಪ ಮಗುವನ್ನೇಕೆ ಅವರ ಮನೆಯ ಹತ್ತಿರ ಒಯ್ದಿ. ಮತ್ತೇನಾದರೂ ಅಂದಾರು. (ಎಂದು ಹೇಳಿ ಹೋಗುವನು)

ಶೇಖರ - (ಬಂದು) ಅಪ್ಪಾ ಸುನಂದ ನೀರಿಗೆ ಹೋದಳೇನು ? ಬಂದ ಕೂಡಲೇ ಬುತ್ತೀ ತೆಗೆದುಕೊಂಡು ತೋಟಕ್ಕೆ ಬರಲಿಕ್ಕೆ ಹೇಳು. ಆ ಅಲ್ಲಪ್ಪ ಅವರ ಮಗುವನ್ನು ನಮ್ಮ ಕಟ್ಟೆಯ ಮೇಲೆ ಯಾಕೆ ತಂದಿ. ಮತ್ತೇನಾದರೂ ಅಂದಾರು. (ಮಗುವಿಗೆ ಮುದ್ದಿಕ್ಕಿ) ನಾಣೀ ನನ್ನ ಜೊತೆಯಲ್ಲಿ ತೋಟಕ್ಕೆ ಬರತೀಯೇನೋ. ಥೂ ಕಳ್ಳಾ ನಗತಾನೆ (ಹೋಗುವನು)

ರಾಮಣ್ಣ - ರಕ್ತಗುಣ ರಹಸ್ಯಮಯವಾದುದೆಂದು ಬಲ್ಲವರು ಹೇಳಿದ ಮಾತು ಸುಳ್ಳಲ್ಲ. ಅಣ್ಣನನ್ನು ಅತ್ಯಂತ ವೈರಭಾವದಿಂದ ಕಾಣುವ ತಮ್ಮ ಅಣ್ಣನ ಮಗುವನ್ನು ಅಕ್ಕರತೆಯಿಂದ ಅಪ್ಪಿ ಮುದ್ದಾಡುತ್ತಾನೆ. ಅಣ್ಣ ತಮ್ಮಂದಿರ ನಾಡಿಯಲ್ಲಿ ಮಿಡಿಯುವ ರಕ್ತ ಒಂದು. ಆ ರಕ್ತವೇ ಪರಿದಾಡುತ್ತಿದೆ ಈ ಮಗುವಿನಲ್ಲಿಂದು.

ಆದ್ದರಿಂದ ಆ ಮಮತೆಯೇ ಚಿಕ್ಕಪ್ಪನನ್ನು ಜಗ್ಗುತ್ತಿದೆ ವೈರವನೆಕೊಂದು. ಅಕ್ಕತಂಗಿಯರ ರಕ್ತ ಒಂದು. ಸ್ವಾರ್ಥ ಇಬ್ಬರನ್ನು ತಿನ್ನುತ್ತಿದೆ ಕೊಂದು. ಆ ಇಬ್ಬರಲ್ಲಿ ಹುಟ್ಟಿಸಿತು ತಾಯಿತನವ ನೀ ಕಂದ. ಈ ಕೂಸು ಕಂಡಾಗಲೇ ಅಕ್ಕತಂಗಿಯರಿಗಾನಂದ. ಮಕ್ಕಳ ಮುಖದಲ್ಲಿರುವ ಮುಗ್ಧತೆಯೇ ಆ ಭಗವಂತನ ಸ್ವರೂಪ. ಮಗುವಿನ ನಗೆಯೇ ಪ್ರತಿ ಮನೆ ಬೆಳಗಬಲ್ಲ ನಂದಾದೀಪ. (ಎತ್ತಿ ಹಾಡುತ್ತ ಆಡಿಸುವನು)

ನಾಗಮ್ಮ - (ಬಂದು ಕೊಡ ಇಳಿಸಿ) ಮಾಮಾ ನಾರಾಯಣ ಅತ್ತನೇನು ?

ರಾಮಣ್ಣ - ಇಲ್ಲವಮ್ಮ ತೆಗೆದುಕೋ ಮಗುವನ್ನು (ಕೊಟ್ಟು ಹೊರಗೆ ಹೋಗುವನು)

ನಾಗಮ್ಮ - ಮಗೂ ನಾಣೀ, ಥೂ ಕಳ್ಳಾ ನಗತಾನೆ. ನನ್ನಪ್ಪ ನೀನು ಅತ್ತರೊಂದು ರುಚಿ, ನೀನಕ್ಕರೊಂದು ರುಚಿ, ಮಗು ನಿನ್ನ ತುಟಿ ಅವರಂತೆ ನಿನ್ನ ನಗೆ ನನ್ನಂತೆ. ಕಣ್ಣು ನನ್ನಂತೆ, ಕಣ್ಣಿನ ಕಾಂತಿ ಅವರಂತೆ

॥ ಪದ ॥

ಬಾರೆನ್ನಕಂದಾ ಬಾಳಿಗಾನಂದಾ ! ನನ್ನವರಿಗೆ ನೀಡಿ ।
ನನ್ನ ಪಡೆದೇ ಕಂದಾ । ಅವರಿಂದಾ ॥ ನಿನ್ನ ಕಣ್ಣಿನಿಲಿರುವ ನೋಟ
ಅವರಂತೆ । ಅವರಂತೆ । ಅದರ ಕಾಂತಿಯದೆಲ್ಲ ಮಾಟ ನನ್ನಂತೆ ॥ ೧ ॥
ನೀನು ನಕ್ಕರೆ ನನಗೆ ಅವರೇ ನಕ್ಕಂತೆ । ಅವರೇ ನಕ್ಕಂತೆ ।
ಕಂಡು ಮರುಳಾಗುವೆ ತುಟಿಯು ನನ್ನಂತೆ ॥ ೨ ॥
ಹೆಣ್ಣು ಕರುಳಿಗೆ ಮಗುವು । ದೈವದುಡುಗರೆಯಂತೆ । ಉಡು
ಗರೆಯಂತೆ । ಗಂಡಹಂಡರ ಒಲುಮೆ ಫಲವು ತಾನಂತೆ ॥ ೩॥
(ಮುದ್ದಿಕ್ಕಿ ಹಾಡುತ್ತಾ ಒಳಗೆ ಹೋಗುವಳು)

ಗೋಪಿ - (ಬಂದು ನೋಡಿ) ಯಾರಿದ್ದೀರಮ್ಮಾ ಮನೆಯಲ್ಲಿ ? (ಇಬ್ಬರೂ ಬರುವರು)

ನಾಗಮ್ಮ - ಬಾ ಅಣ್ಣಾ ಬಾ ಇಲ್ಲಿ ಕೂಡ್ರು. ಚಹಾ ತಂದುಕೊಡುತ್ತೇನೆ. (ಇಬ್ಬರೂ ಒಳಗೆ ಹೋಗುವರು)

ಸುನಂದ - ಬಾ ಅಣ್ಣಾ ಬಾಯಿಲ್ಲಿ ಕೂಡ್ರು ಚಹಾ ತಂದುಕೊಡುತ್ತೇನೆ (ಒಳಗೆ ಹೋಗುವಳು)

ಗೋಪಿ - ಈ ತಂಗಿಯ ಕಟ್ಟೆಯ ಮೇಲೆ ಕುಳಿತರೆ ಆ ತಂಗಿ ಕೋಪಿಸುತ್ತಾಳೆ. ಆ ತಂಗಿಯ ಕಟ್ಟೆಯ ಮೇಲೆ ಕುಳಿತರೆ ಈ ತಂಗಿ ಕೋಪಿಸುತ್ತಾಳೆ. ಈಗ ನಾನೆಲ್ಲಿ ಕೂಡ್ರಬೇಕು. ಛೇ ಕೂಡ್ರುವದೇ ಬೇಡ. ಆಂಧ್ರ ಹಾಗೂ ಕನ್ನಡ ರಾಜ್ಯಗಳ ವಿಭಜನೆಯ ಕಾಲಕ್ಕೆ ಗಡಿ ರೇಖೆಯೆಂದು ನಿರ್ಧರಿಸಿದ ತುಂಗಭದ್ರೆಯಂತಿರುವ ಮಧ್ಯಂತರದಲ್ಲಿ ನಿಂತುಕೊಳ್ಳುವುದೇ ಯೋಗ್ಯ

(ಇಬ್ಬರೂ ಒಂದೊಂದು ಗ್ಲಾಸಿನಲ್ಲಿ ಚಹಾ ತಂದುಕೊಡುವರು. ಇಬ್ಬರ ಗ್ಲಾಸನ್ನು ಎರಡೂ ಕೈಯಲ್ಲಿ ಹಿಡಿದು) ನೋಡಮ್ಮ ನಾನಿಲ್ಲಿಯೇ ನಿಂತು ಕುಡಿಯುತ್ತೇನೆ. ಅಖಂಡ ಭಾರತದ ನಾಯಕ ನೆಹರೂಜಿಯಂತೆ ನಾನು ನಿಮ್ಮಿಬ್ಬರಿಗೂ ಹಿತೈಷಿ. ಇಬ್ಬರೂ ಕೊಟ್ಟ ಚಹಾ ಕುಡಿಯಬೇಕಲ್ಲ. ಕಹಿ ಇದ್ದರೂ ಸರಿ, ಸಿಹಿ ಇದ್ದರೂ ಸರಿ. (ಕುಡಿದು ಕೊಡುವನು)

ನಾಗಮ್ಮ - ಅಣ್ಣಾ ನಾನಷ್ಟು ಮಗುವಿಗೆ ಸ್ನಾನ ಮಾಡಿಸಬೇಕಾಗಿದೆ ಹೋಗಲೇ ? (ಹೋಗುವಳು)

ಸುನಂದ - ಅಣ್ಣಾ ಗ್ಲಾಸು ಒಳಗಿಟ್ಟು ಬರತೇನಿ ಕೂಡ್ರು ಸ್ವಲ್ಪ ಕೆಲಸವಿದೆ. (ಹೋಗುವಳು)

ಗೋಪಿ - ಹಣಕೊಟ್ಟರೂ ಒಳ್ಳೇ ಚಹ ಸಿಕ್ಕಲಾರದ ಈ ಕಾಲದಲ್ಲಿ ಮನೆಗೆ ಬಂದರೆ ಎರಡರಡು ಕಪ್ಪು ಚಹಾ ಫುಕ್ಕಟೆಯಾಗಿ ಸಿಕ್ಕುವದೆಂದರೆ ಅದೃಷ್ಟ ಅನ್ನಬೇಕು. ನಾಗಮ್ಮಳಿಗೆ ಮಗುವಿಗೆ ಕೆಲಸಬಿದ್ದ ಪ್ರಯುಕ್ತ ಅವಳಿಂದಂತೂ ನಮಗೆ ರಜೆ ಮಂಜೂರಾಯಿತು. ಇನ್ನು ಈ ಚಿಕ್ಕ ತಂಗಿಯ ಆಶ್ರಯದಲ್ಲಿರಲು ಅಡ್ಡಿ ಏನು. (ಕೂಡ್ರುವನು)

ಸುನಂದ - (ಬಂದು) ನೋಡಣ್ಣ ನನ್ನದೊಂದು ಮಾತು ನಡೆಯಿಸಿ ಕೊಡಬೇಕಲ್ಲ

ಗೋಪಿ - ಅದೇನು ಮಾತಮ್ಮ ಸುನಂದ ?

ಸುನಂದ - ನೀನು ನಡೆಯಿಸಿಕೊಡುವದಾಗಿ ಮಾತು ಕೊಟ್ಟರೆ ಮಾತ್ರ ಹೇಳತೀನಿ

ಗೋಪಿ - ನನ್ನಿಂದ ನಡೆಯಿಸಿಕೊಡುವದು ಸಾಧ್ಯವಿದ್ದ ಪಕ್ಷಕ್ಕೆ ಖಂಡಿತ ನಡೆಯಿಸಿ ಕೊಡುತ್ತೇನೆ

ಸುನಂದ - ಅಕ್ಕನ ಉಪಟಳ ಅತಿಯಾಗಿದೆ. ಅವಳ ಕೊಂಕು ಮಾತು ಕೇಳಿಕೇಳಿ ನನಗಂತೂ ಸಾಕಾಗಿ ಹೋಗಿದೆ. ನಿತ್ಯವೂ ನನಗೆ ಹಂಗಿಸುತ್ತಾಳೆ

ಗೋಪಿ - ಏನಂದು ಹಂಗಿಸುತ್ತಾಳೆ ?

ಸುನಂದ - ನಾನು ಕಲಿತವಳಿದ್ದು ಕಲಿಯಲಾರದವರನ್ನು ಮದುವೆ ಮಾಡಿಕೊಂಡ ಕೋತಿಯಂತೆ, ಕೋಗಿಲೆ ಕಾಗೆಯ ಸಹವಾಸ ಮಾಡಿದಂತಾಗಿದೆಯಂತೆ ನಮ್ಮ ದಾಂಪತ್ಯ. ನೋಡಣ್ಣ ನನ್ನ ಗಂಡ ಕಲಿಯದಿದ್ದರೂ ಯಾವುದರಲ್ಲಿ ಕಡಿಮೆ ಇದ್ದಾರ ಹೇಳು. ದುಡಿಯುವದರಲ್ಲಿಯಂತೂ ನಿಸ್ಸಿಮರು, ತಾನು ಕಲಿತವಳಿಂತೆ, ತನ್ನ ಗಂಡನೂ ಕಲಿತವರಂತೆ, ತಮ್ಮದು ಒಳ್ಳೇ ಜೋಡಿಯಂತೆ ನಮ್ಮದು ಇಜ್ಜೋಡಿಯಂತೆ

ಗೋಪಿ - ಮನಸ್ಸಿನ ಸಮಾಧಾನಕ್ಕಾಗಿ ಬುದ್ಧಿಯಿಲ್ಲದೆ ಮಾತಾಡುತ್ತಾರ. ಆಡಿಕೊಳ್ಳಲಿ ಬಿಡಮ್ಮ. ಅವಳ ಸ್ವಭಾವ ನಿನಗೇನು ಹೊಸದಲ್ಲ. ನೀವು ಗಂಡ ಹೆಣ್ತಿ

ಅನ್ಯೋನ್ಯವಾಗಿದ್ದರೆ ಆಯಿತು ಅವಳ ಮಾತೇನು ?

ಸುನಂದ - ಇಲ್ಲಣ್ಣಾ ಈ ನನ್ನಕ್ಕನ ಸೊಕ್ಕು ಮುರಿಯಲಿಕ್ಕೆ ಬೇಕು. ಅದಕ್ಕೆ .... ನೆರವು ಸಿಕ್ಕರೆ ಸಾಕು. ಆ ಮೇಲೆ ನೋಡು ಬೇಕಿದ್ದರೆ, ನಾಲ್ಕು ದಿನದಲ್ಲಿ ಇವಳ ಸೊಕ್ಕು ಮಣ್ಣುಮುಕ್ಕಿ ಹೋಗುತ್ತದೆ

ಗೋಪಿ - ಈ ಸೇಡಿನ ಭಾವನೆ ಒಳ್ಳೇಯದಲ್ಲ ತಂಗೀ

ಸುನಂದ - ನೀನು ಏನಂದರೂ ಸರಿ. ಸದ್ಯ ನೀನು ನನ್ನ ಮಾತು ನಡಿಸಬೇಕು. ಅದೇನಂದರೆ ಇವಳ ಗಂಡ ನೌಕರಿ ಮಾಡುವ ಸಂಘಕ್ಕೆ ನೀನು ಪ್ರೆಸಿಡೆಂಟ್. ಕಾರಣ ನಿನ್ನ ಮಾತು ಮೀರಿ ನಡೆಯುವವರು ಊರಲ್ಲಿ ಯಾರೂ ಇಲ್ಲ. ನೀನು ಆ ನಿನ್ನ ಸ್ಥಾನಕ್ಕೆ ರಾಜೀನಾಮೆಯಿತ್ತು ನಮ್ಮವರನ್ನು ಪ್ರೆಸಿಡೆಂಟ್ ಮಾಡು ?

ಗೋಪಿ - (ನಗುವನು) ಏನಮ್ಮ ಇದೇನು ನಿನ್ನ ಮಾತು. ಶೇಖರನನ್ನ ಪ್ರೆಸಿಡೆಂಟನನ್ನಾಗಿ ಮಾಡುವದೇ ?

ಸುನಂದ - ಯಾಕಣ್ಣ ನಗತಿಯಲ್ಲ. ಯಾಕೆ ಅವರು ಪ್ರೆಸಿಡೆಂಟ್ ಆಗಬಾರದೇನು ? ಈ ನಿನ್ನ ತಂಗಿಯ ಮೇಲೆ ನಿನ್ನ ಅಭಿಮಾನವಿದ್ದರೆ ನನ್ನ ಈ ಮಾತು ನಡೆಯಲಿಕ್ಕೇ ಬೇಕು

ಗೋಪಿ - ನೋಡಮ್ಮ ಇನ್ನಾವ ಮಾತಾದರೂ ಆಗಿದ್ದರೆ ಸಂತೋಷವಾಗಿ ನಡಸ್ತಾಯಿದ್ದೆ. ಆದರೆ ಈ ಮಾತು ಅದೇಕೋ ನನಗಷ್ಟು ಹಿತವಾಗಿ ಕಾಣತಾ ಇಲ್ಲ

ಸುನಂದ - ಅದೇಕೆ ಹಿತವಾಗಿ ಕಾಣ್ತಾಯಿಲ್ಲ. ಇದರಲ್ಲೇನು ಮಹಾಕಾರಣ ಅಡಕವಾಗಿದೆ

ಗೋಪಿ - ಬರಿ ಕಾರಣವಲ್ಲವಮ್ಮ ಇದು ರಾಜಕಾರಣ. ಆದ್ದರಿಂದಲೇ ನಾನಿಷ್ಟು ಆಲೋಚಿಸಬೇಕಾಗಿದೆ. ಈ ಅಧಿಕಾರದ ಮದ ಬಹಳ ಕೆಟ್ಟದ್ದು. ಆಳುವ ಬುದ್ಧಿಯಿಲ್ಲದವರ ಕೈಗೆ ಅಧಿಕಾರವನ್ನೆಂದೂ ಕೊಡಬಾರದು. ಅದರಲ್ಲಿಯೂ ಇಂದಿನ ರಾಜಕೀಯವನ್ನು ನೆನೆದರೆ ಮೈನಡುಗುತ್ತದೆ

ಸುನಂದ - ಅಂದರೇನಣ್ಣ ನಿನ್ನ ಮಾತು. ಕೇವಲ ಒಂದು ಸಂಘಕ್ಕೆ ನಾಲ್ಕು ದಿನದ ಮಟ್ಟಿಗೆ ಪ್ರೆಸೆಡೆಂಟರಾದರೆ ನನ್ನವರು ಬುದ್ಧಿಗೇಡಿಗಳಾಗುತ್ತಾರೆಯೇ ?

ಗೋಪಿ - ಅಹುದಮ್ಮ ನಾಲ್ಕು ದಿನದ ಆಳಿಕೆಯೇ ಮನುಷ್ಯನನ್ನು ಬುದ್ಧಿಗೇಡಿಯನ್ನಾಗಿ ಮಾಡುತ್ತದೆ. ಅದರಲ್ಲಿಯೂ ನಿನ್ನ ಗಂಡನಂಥವರು ಬಲು ಬೇಗ ಬುದ್ಧಿಯನ್ನು ಕಳೆದುಕೊಳ್ಳುತ್ತಾರೆ. ತನ್ನ ಯೋಗ್ಯತೆಯನ್ನೇ ಅರಿಯಲಾರದ ನಿನ್ನ ಗಂಡನಂಥವರಿಗೆ ಮತ ಕೊಟ್ಟು ಉನ್ನತ ಪೀಠದಲ್ಲಿ ಕೂಡ್ರಿಸಿ ಅಧಿಕಾರ ಕೊಟ್ಟ ಮಾತ್ರಕ್ಕೆ ಅನ್ಯರ ಕಷ್ಟ ಸುಖಗಳನ್ನು ಅಳೆದು ನೋಡುವ ಸಾಮರ್ಥ್ಯ ದೊರೆಯಬಹುದೇನಮ್ಮ ?

ಸುನಂದ - ಅದೇನಿದ್ದರೂ ಸದ್ಯಕ್ಕೆ ನೀನು ನಿನ್ನ ಸ್ಥಾನವನ್ನು ನನ್ನವರಿಗೆ ಬಿಟ್ಟುಕೊಡಲಿಕ್ಕೆ

ಬೇಕು. ಅಣ್ಣಾ ಇದುವರೆಗೂ ಮಾಡಿದ ನಿನ್ನ ರಾಜಕೀಯ ಭಾಷಣ ಅರಣ್ಯರೋದನ. ಕೊನೆಯದಾಗಿ ಸೆರಗೊಡ್ಡಿ ಕೇಳಿಕೊಳ್ಳುತ್ತೇನೆ. ನಾಲ್ಕು ದಿನ ಮಟ್ಟಿಗಾದರೂ ನನ್ನ ಅಕ್ಕನ ಗಂಡ ದುಡಿಯುವ ಸಂಘಕ್ಕೆ ನನ್ನ ಗಂಡ ಪ್ರೆಸಿಡೆಂಟ್‌ರಾಗಬೇಕು. ನೋಡಣ್ಣಾ ಈ ನಿನ್ನ ತಂಗಿಗೆ ಕೊಟ್ಟ ಮಾತು ನಡಿಸುವ ಇಷ್ಟ ನಿನಗಿದ್ದರೆ ನಡಿಸು, ಇಲ್ಲದಿದ್ದರೆ ಬಿಟ್ಟುಬಿಡು. ನಾನು ನಿನ್ನ ಕೇಳಿದ್ದೇ ತಪ್ಪು

ಗೋಪಿ - ತಂಗೀ ಕೊಟ್ಟ ಮಾತು ನಡೆಸದವನಲ್ಲ ಈ ನಿನ್ನ ಅಣ್ಣ ಗೋಪಿ, ಆದರೆ ಬುದ್ದಿಗೇಡಿಯಾದ ನಿನ್ನ ಗಂಡನ ಕೈಗೆ ಸಂಘದ ಅಧಿಕಾರ ಸೂತ್ರ ವಹಿಸಿಕೊಟ್ಟ ತಕ್ಷಣ ಹೆಂಡ ಕುಡಿಸಿ ಮೇಲೆ ಚೇಳು ಕಡಿಸಿ ಕೈಬಿಟ್ಟ ಕಪಿಯಂತೆ ಕುಣಿದಾಡುತ್ತಾನೆ. ಆ ಬಳಿಕ ನೋಡು ನಗೆಗೀಡಾದೀತು. ಅವನ ಸಹವಾಸವೇ ನಿನಗೆ ಬೇಡವಾದೀತು

ಸುನಂದ - ಒಂದು ವೇಳೆ ಹಾಗೇನಾದರೂ ಆದಲ್ಲಿ ಎಲ್ಲ ಸರಿಪಡಿಸಬಲ್ಲ ನನ್ನಣ್ಣ ನೀನಿರುವಾಗ ಆ ಭಯ ನನಗಿಲ್ಲ. ಆದರೆ ಮೊದಲು ತನ್ನವರು ಕಲಿತವರು ಅಂತ ಕುಣಿದಾಡುತ್ತಾಳಲ್ಲ ನನ್ನಕ್ಕ ಹಾಗೂ ಅವಳ ಗಂಡಾ ! ನನ್ನ ಗಂಡನ ಅಡಿಯಾಳಾಗಿ ದುಡಿಯುವುದನ್ನು ನನ್ನ ಪವಿತ್ರ ಕಣ್ಣುಗಳು ಕಾಣಬೇಕಾಗಿದೆ

ಗೋಪಿ - ಅಗಲಮ್ಮಾ - ನಿನ್ನಷ್ಟದಂತಾಗಲಿ ಇನ್ನೆರಡು ದಿನ ಅವಕಾಶಕೊಡು. ಅಂದರೆ ಎಲ್ಲರ ಮನ ಒಲಿಸಿ ನಿನ್ನ ಗಂಡನನ್ನು ಸಂಘಕ್ಕೆ ಪ್ರೆಸಿಡೆಂಟನನ್ನಾಗಿ ಮಾಡುತ್ತೇನೆ

ಸುನಂದ - ಕೂಡಣ್ಣ ಇನ್ನಷ್ಟು ಚಹಾ ಮಾಡಿಕೊಡುತ್ತೇನೆ

ಗೋಪಿ - ಬೇಡಮ್ಮ ಈ ವರೆಗೂ ನೀ ಕುಡಿಸಿದ ಕಹಿಯೇ ಸಾಕಾಗಿದೆ. ಇನ್ನೇಕೆ ಚಹಾ ಬರತೇನಮ್ಮಾ ಬರತೇನಿ. (ಹೋಗುವನು)

ಸುನಂದ - ಇನ್ನೇನು ನನ್ನ ಗಂಡ ಪ್ರೆಸಿಡೆಂಟ್, ಇನ್ನುಮೇಲೆ ನಾನು ಹಿತ್ತಲಮನೆ ಕೆಲಸಮಾಡಿ ಹೊಟ್ಟೆ ಹೊರೆದುಕೊಳ್ಳುವ ಸಾಮಾನ್ಯ ರೈತನ ಹೆಂಡತಿ ಅಲ್ಲ. ಲಕ್ಷಾಂತರ ರೂಪಾಯಿಗಳ ವ್ಯಾಪಾರ ನಡೆಯಿಸಬಲ್ಲ ದೊಡ್ಡ ಸಂಘದ ಪ್ರೆಸಿಡೆಂಟ್‌ನ ಮಡದಿ. ನನ್ನ ಯೋಗ್ಯತೆ ಎಷ್ಟು ದೊಡ್ಡದಾಯಿತು. ಯೋಗ್ಯತೆಗೆ ಸಲ್ಲುವಂತೆ ಮನೆಬೇಕು. ಪ್ರೆಸಿಡೆಂಟರನ್ನು ಭೇಟಿಯಾಗಲೆಂದು ಟಿ.ಡಿ.ಬಿ. ಮೆಂಬರರು, ರಾಷ್ಟ್ರೀಯ ವಿಸ್ತರಣ ಯೋಜನೆಯ ಅಧಿಕಾರಿಗಳು, ಎಮ್.ಎಲ್.ಎ.ಗಳು ಅಲ್ಲದೇ ಕೇಂದ್ರದ ಮಂತ್ರಿಗಳು ಕೂಡಾ ಇತ್ತ ಪ್ರವಾಸ ಕೈಕೊಂಡರೆ ನಮ್ಮವರನ್ನು ಭೇಟಿಯಾಗದೇ ಹೋಗುತ್ತಾರೇನು ? ಅಂಥವರೆಲ್ಲಾ ಬಂದರೆ ಈ ಮನೆಯಲ್ಲಿ ಎಲ್ಲಿ ಇಳಿಸಬೇಕು. ಹೌದು ಮನೆಬಿಚ್ಚಿ ಕಟ್ಟಿಸಬೇಕು. ಅವರಿಗೊಂದು ಆಫೀಸ್ ರೂಮು ಬೇಕು. ಅಡುಗೆ ಮನೆ, ನೀರಮನೆ, ವರಾಂಗಣ ಎಲ್ಲಾ ಆಧುನಿಕ ರೀತಿಯಲ್ಲಿ ಆಗಬೇಕು. ಇಷ್ಟೆಲ್ಲ

ಆದಬಳಿಕ ಒಂದು ಕಾರು ಬೇಕೇಬೇಕು. ನಮ್ಮವರು ಯಾವದಾದರೂ ಸಭೆಗೆ ಹೋಗುವಾಗ ಅವರನ್ನು ಸಿಂಗರಿಸಿ ಕಳಿಸುವವರಾರು ನಾನೇ

ಶೇಖರ - (ಬಂದು ಸಿಟ್ಟಿನಿಂದ) ಏನೇ ಇದು ನಿನಗೇನು ಬುದ್ಧಿಯಿದೆಯೋ ಇಲ್ಲವೋ! ಮುಂಜಾನೆ ಎದ್ದು, ಬರಿ ಒಂದು ಕಪ್ಪು ಚಹಾ ಕುಡಿದು ತೋಟಕ್ಕೆ ಹೋದ ನಾನು ಈ ವರೆಗೂ ಬಾಯಲ್ಲಿ ಗುಟುಕು ನೀರು ಸಹ ಹಾಕಿಲ್ಲ. ಹೊತ್ತಿಗೆ ಸರಿಯಾಗಿ ನೀನು ಬುತ್ತೀ ತಂದು ಕೊಡದಿದ್ದರೆ ನಾನು ತೋಟದಲ್ಲಿ ಕುಳಿತು ತೊಪ್ಪಲಾ ತಿನ್ನಬೇಕೇನು ?

ಸುನಂದ - ಬುತ್ತಿ ತರೋದಾಗಲಿ, ತಪ್ಪಲಾ ತಿನ್ನೋದಾಗಲಿ ಇನ್ನು ಮುಗಿದೇಹೋಯಿತು. ಇನ್ನು ಮೇಲೆ ನೀವು ತೋಟದಲ್ಲಿ ದುಡಿಯುವ ರೈತರಲ್ಲ. ಮೋಟಾರ್ ಕಾರಿನಲ್ಲಿ ಕುಳಿತು ತಿರುಗಾಡುವ ಸಂಘದ ಪ್ರೆಸಿಡೆಂಟರು

ಶೇಖರ - ಆಂ ಏನಂದೆ ನನ್ನ ಪ್ರಸಿಡೆಂಟನನ್ನಾಗಿ ಮಾಡಿ, ಆ ಮೇಲೆ ನೀನು ಪರ್ಸ್ನಲ್ ಸೆಕ್ರೆಟರಿ ಆಗಬೇಕಂತಾ ಮಾಡಿದಿಯೇನೇ ?

ಸುನಂದ - ನೀವು ಪ್ರೆಸಿಡೆಂಟರು, ಆ ನಿಮ್ಮಣ್ಣ ನಿಮ್ಮ ಕೈ ಕೆಳಗೆ ಸರ್ವೆಂಟು ತಿಳಿತೇನು

ಶೇಖರ - ಕನಸಿನಲ್ಲಿದ್ದಿಯೇನೇ ಸುನಂದಾ ನೀನೀಗ ?

ಸುನಂದ - ಕನಸಲ್ಲ ಇದು ನನಸು. ಇದೀಗ ಗೋಪಣ್ಣ ಬಂದಿದ್ದ ಅವನ್ನ ಕಾಡಿ ಬೇಡಿ ಹೂ ಅನಿಸಿದ್ದೇನೆ

ಶೇಖರ - ಯಾವುದಕ್ಕೆ ?

ಸುನಂದ - ನಿಮ್ಮನ್ನು ಪ್ರೆಸಿಡೆಂಟರನ್ನಾಗಿ ಮಾಡಲಿಕ್ಕೆ. ನೋಡ್ರಿ ಕಲಿಯಲಾರದ ಗಂಡನ ಹೆಂಡತಿ ಅಂತಾ ನನ್ನ ಅವಹೇಳನ ಮಾಡಿದ ನಮ್ಮಕ್ಕನ ಸೊಕ್ಕು ಮುರಿಯುವದಕ್ಕಾಗಿ ನಿಮ್ಮಣ್ಣ ನೌಕರಿ ಮಾಡುವ ಸಂಘಕ್ಕೆ ನೀವು ಅಧಿಕಾರಿಗಳಾಗಬೇಕು. ಅವನು ನಿಮ್ಮ ಕೈ ಕೆಳಗೆ ದುಡಿಯಬೇಕು. ಹೇಗಿದೆ ನನ್ನ ವಿಚಾರ ನಿಮ್ಮ ಮನಸ್ಸಿಗೆ ಬಂತಷ್ಟೇ ?

ಶೇಖರ - ನಿನ್ನ ವಿಚಾರವೇನೋ ಒಳ್ಳೇಯದು. ನನ್ನ ಮನಸ್ಸಿಗೂ ಬಂತು. ಆದರೆ ನಾವು ಪ್ರೆಸಿಡೆಂಟ್ ಆದರೆ ಭೂಮಿತಾಯಿಯ ಸೇವೆ ಬಿಡಬೇಕಾಗುವದು. ಸುನಂದ ಇಷ್ಟು ದಿನಗಳವರೆಗೂ, ಮಾಡುತ್ತ ಬಂದ ನನ್ನಪ್ಪ ಭೂಮಿತಾಯಿಯ ಸೇವೆಯನ್ನು ಬಿಡಬೇಕಾಯಿತಲ್ಲ ಅಂತ

ಸುನಂದ - ನೋಡ್ರಿ ಹೊಲದ ಕೆಲಸ ಭೂಮಿತಾಯಿಯ ಸೇವೆ. ಇನ್ನು ಸಮಾಜದ ಕೆಲಸ ಅಂದರೆ ಸರ್ವೇಶ್ವರನ ಸೇವೆ. ಎರಡೂ ಒಂದೇ ಅಲ್ಲವೇನು ?

ಶೇಖರ - ಆದರೆ ಸುನಂದ, ಇಂದಿನವರೆಗೂ ನಾನು ಭೂಮಿತಾಯಿಯ ತೊಡೆಯಲ್ಲಿ ಆಡಿ ಬೆಳೆದವನು. ಹೀಗಿದ್ದು ಈಗ ಸತ್ತ ಬಳಿಕ ಸ್ಮಶಾನಕ್ಕೆ ಒಯ್ಯುವ

ಆಸನದಂತಹ ಸ್ವಾರ್ಥವಿಲೋಭದ ಕೇಂದ್ರದಂತಿದ್ದ ಅಧಿಕಾರ ಪೀಠ ಎಂಬ ಕಟ್ಟೆಯ ಮೇಲೆಂತು ಕುಳಿತು ಕಾಲಕಳೆಯಲಿ. ಈ ವರೆಗೂ ಅನ್ನ ಕೊಟ್ಟು ಕಾಪಾಡಿದ ಭೂಮಿತಾಯಿಯನ್ನೆಂತು ದೂರ ಮಾಡಲಿ (ಅಳುವನು)

ಸುನಂದ - ನೀವು ಹೀಗೆ ಅಳುಮುಖ ಮಾಡಿತ್ತೀರಿ ಅಂತ ನನಗನಿಸಿತ್ತು. ಕರೆದು ಹೆಣ್ಣು ಕೊಟ್ಟರೆ ಅಳಿಯನಿಗೆ ಮಲರೋಗ ಬಂತಂತೆ. ತಾನಾಗಿ ಬರುವ ಅಧ್ಯಕ್ಷ ಸ್ಥಾನದ ಘನತೆ ಗೌರವಗಳನ್ನು ಯಾರಾದರೂ ಕಳೆದುಕೊಳ್ಳಬಹುದೇ ? ಈ ಒಂದು ಸ್ಥಾನಕ್ಕಾಗಿ ನಡೆಯುತ್ತಿರುವ ಕಲಹಗಳನ್ನು ಕಂಡರೆ ಬಾಯಲ್ಲಿ ಬೆರಳಿಟ್ಟುಕೊಳ್ಳಬೇಕು. ಈ ರೀತಿ ಅಂಜುಬುರುಕ ಸ್ವಭಾವದವರಾದ ನೀವು ಗಂಡಸರಾಗಿ ಹುಟ್ಟಿದ್ದೇ ವ್ಯರ್ಥ

ಶೇಖರ - ಏನೇ ಏನು ಬೊಗೊಳತ್ತಿರುವಿ ಗಂಡ ಹೆಂಡರಾಡುವ ಮಾತಿಗೂ ಒಂದು ಅರ್ಥವಿರಬೇಕು. ನನ್ನ ಗಂಡುತನದ ಗೌರವಕ್ಕೆ ಚ್ಯುತಿ ತರುವ ಮಾತು ಇನ್ನೊಮ್ಮೆ ಆಡಿದರೆ, ನಿನ್ನ ಹಲ್ಲು ಮುರಿದುಬಿಟ್ಟೇನು. ಹೇಳು ಈಗ ನಾನು ಪ್ರೆಸಿಡೆಂಟ್‌ನಾಗಬೇಕಷ್ಟೆ ?

ಸುನಂದ - ಹೌದು ಹೌದು ಹೌದು ನೀವು ಪ್ರೆಸಿಡೆಂಟರಾಗಬೇಕು. ಆಗಲಿಕ್ಕೇಬೇಕು. (ಕೆಮ್ಮಿನ ದನಿ ಕೇಳಿ)

ಶೇಖರ - ಅದೋ ಅಪ್ಪ ಬಂದರು. (ಬಂದು ಒಳಗೆ ಹೋಗುವಾಗ) ಅಪ್ಪ ಬಾಯಿಲ್ಲಿ ನೋಡಪ್ಪ. ನಾನು ಇನ್ನುಮೇಲೆ ಸಂಘದ ಪ್ರೆಸಿಡೆಂಟ್‌ನಾಗಬೇಕಂತೆ

ರಾಮಣ್ಣ - ಅದು ಬುದ್ಧಿವಂತರ ಕೆಲಸ ಅಂಥ ಬುದ್ಧಿವಂತಿಕೆ ನಿನಗೆಲ್ಲಿದೆಯೋ ?

ಶೇಖರ - ಅದಕ್ಕೆ ನಾನೆಷ್ಟು ಬೇಡವೆಂದರೂ ಸುನಂದ ಆಗಲೇಬೇಕೆಂದು ಹಟ ಒಡಿದಿದ್ದಾಳೆ. ಈಗಾಗಲೇ ಸ್ಥಾನವನ್ನು ಬಿಟ್ಟುಕೊಡುವಂತೆ ಗೋಪಿನ್ನ ಒಪ್ಪಿಸಿದ್ದಾಳಂತೆ, ನೋಡಪ್ಪ ಇದಕ್ಕೆ ನೀನೇನು ಹೇಳುವಿ ?

ರಾಮಣ್ಣ - ನಾನೇನು ಹೇಳಲಿ. ಇಂತಹ ಅಧಿಕಾರ ಸ್ಥಾನವೆಂದರೆ ಆಸೆ ಆಮಿಷಗಳಿಂದ ಕೂಡಿದ ವಿಷಚಕ್ರದ ಮಡುವು ಇದ್ದಂತೆ ಎಂದು ಕೇಳಿದ್ದೇನೆ. ಅಸಾಧ್ಯವಾದ ಆಸೆಗೆ ಬಲಿಬಿದ್ದು ಈಗಿದ್ದ ಒಳ್ಳೆಯ ಗುಣವನ್ನೇ ಕಳೆದುಕೊಂಡಿ, ವಿಚಾರ ಮಾಡು. ಹೋಗಲಿ ಸುನಂದ, ನೀನುಅಧ್ಯಕ್ಷ ನಾಗಲೇಬೇಕೆಂದು ಹಟ ಹಿಡಿದಿದ್ದಾಳೇನು ?

ಸುನಂದಾ - ಅಹುದು ಮಾಮಾ, ಆಗಲಿ ಅಂತಾ ನನ್ನಾಸೆ. ನೀವಾದರೂ ನಿಮ್ಮ ಮಗನನ್ನು ಆಶೀರ್ವದಿಸಬೇಕು

ರಾಮಣ್ಣ - ಆಗಲಮ್ಮ ಮುಂದುವರಿಯುವ ಮಗನನ್ನು ಯಾವ ತಂದೆ ಆಶೀರ್ವದಿಸಲಾರ. ನೋಡು ಶೇಖರ, ಇದು ನಿನ್ನ ಹೆಂಡತಿಯ ಇಷ್ಟ ಅಂದ ಬಳಿಕ ನೆರವೇರಿಸು.

ನಿನ್ನ ಸುಖ-ದುಃಖದಲ್ಲಿ ಸಮಭಾಗಿನಿಯಾಗಿ ಬಂದ ನಿನ್ನ ಸತಿ ನಿನ್ನ ಒಳಿತನ್ನೇ ಹಾರೈಸುತ್ತಾಳೆ. ಹೆಂಡತಿಯ ಮಾತಿನಂತೆ ನಡೆಯುವವನ ಬಾಳು ಖಂಡಿತವಾಗಿಯೂ ಆನಂದಮಯವಾಗುತ್ತದೆ

ಸುನಂದ - ಮಾಮಾ ಅಡುಗೆ ಆರಿ ತಣ್ಣಗಾದೀತು ಬನ್ನಿ ಊಟಕ್ಕೆ ?

ರಾಮಣ್ಣ - ನಡೆಯಮ್ಮ ! ಬಾ ಶೇಖರ. (ಒಳಗೆ ಹೋಗುವನು)

ಸುನಂದ - ನಡೀರಿ ನೀವು ಮತ್ತೆ ಕುಳಿತಿರಲ್ಲ

ಶೇಖರ - ಹೀಗೆಂದರೆ ನಾನೇಕೆ ಬರಲಿ ?

ಸುನಂದ - ಮತ್ತೆ ಹೇಗೆ ಕರೆಯಬೇಕು ?

ಶೇಖರ - ಊಟಕ್ಕೆ ಬನ್ನಿ ಪ್ರೆಸಿಡೆಂಟ್ ಸಾಹೇಬರೇ ಎಂದು ಕರೆಯಬಾರದೇನು ?

ಸುನಂದ - ಓ ಆಗಲಿ ! ಊಟಕ್ಕೆ ಬನ್ನಿ ಪ್ರೆಸಿಡೆಂಟ್ ಸಾಹೇಬರೇ

ಶೇಖರ - ಆಗಲಿ ನಡೆಯಿರಿ ನಡೆಯಿರಿ. ನಮ್ಮ ಪರ್ಸನಲ್ ಸೆಕ್ರೆಟರಿಯವರೇ. (ಒಳಗೆ ಹೋಗುವರು)

(ಸಾವುಕಾಶ ಕತ್ತಲಾವರಿಸಿ ಮತ್ತೆ ಬೆಳಕು ಹರಿದಾಗ ರವಿ ಹೊರಗೆ ಬಂದು ಕೂಡುವನು. ನಾಗಮ್ಮ ಚಹಾ ತಂದುಕೊಡುವಳು)

ನಾಗಮ್ಮ - ಏಕೆ ನಿನ್ನೆ ರಾತ್ರಿ ಏನೇನೋ ಕನವರಿಸುತ್ತಿದ್ದಿರಲ್ಲ. ರಾತ್ರಿ ಸರಿಯಾಗಿ ನಿದ್ರೆ ಬೀಳಲಿಲ್ಲವೇ ?

ರವಿ - ರಾತ್ರಿ ಕನವರಿಸಿದೆನೇ ಏನೆಂದು ?

ನಾಗಮ್ಮ - ಎಲ್ಲ ಅಸ್ಪಷ್ಟ ಒಂದೂ ಅರ್ಥವಾಗಲಿಲ್ಲ. ಅದೇನೋ ಅನ್ನುತ್ತಿದ್ದಿರಲ್ಲ ನಿನ್ನ ಒಡೆತನದಲ್ಲಿ ದುಡಿಯುವಷ್ಟು ಬಡತನ ನನಗಿಲ್ಲ. ಈಗಲೇ ಬರೆದುಕೊಡುವೆ. ತೆಗೆದುಕೋ ರಾಜೀನಾಮೆ ಅಂತ ಇನ್ನೂ ಏನೇನೋ ಆಡಿದಿರಿ ಏನದು ಕನಸು ?

ರವಿ - ನಿನ್ನೆ ಕನವರಿಕೆಯಲ್ಲಿ ಅಂದ ಮಾತನ್ನೇ ಈಗ ಕಾರ್ಯರೂಪಕ್ಕಿಳಿಸಬೇಕಾಗಿದೆ

ನಾಗಮ್ಮ - ಅಂದರೆ ?

ರವಿ - ಸಂಘದಲ್ಲಿದ್ದ ನನ್ನ ನೌಕರಿಗೆ ಶರಣು ಹೊಡೆಯಬೇಕಾಗಿದೆ, ನಾಗು. ಇಷ್ಟು ದಿನಗಳವರೆಗೆ ಸಂಘದ ಪ್ರೆಸಿಡೆಂಟನಾಗಿದ್ದ ಗೋಪಿ ಈಗ ರಾಜೀನಾಮೆಯಿತ್ತ. ತನ್ನ ಆ ಸ್ಥಳಕ್ಕೆ ನಮ್ಮ ಶೇಖರನನ್ನು ಆರಿಸುವಂತೆ ಮಾಡಿದ್ದಾನೆ

ನಾಗಮ್ಮ - ಅಂದರೆ ಈಗ ಶೇಖರನೇ ಸಂಘದ ಪ್ರೆಸಿಡೆಂಟ್‌ನೇನು ?

ರವಿ - ಇವತ್ತು ಮೀಟಿಂಗಿನಲ್ಲಿ ಅವನನ್ನೇ ಪ್ರೆಸಿಡೆಂಟ್‌ನನ್ನಾಗಿ ಆರಿಸಿರುತ್ತಾರೆ

ನಾಗಮ್ಮ - ಇದೊಳ್ಳೆ ವಿಚಿತ್ರ. ಹದ್ದು ನವಿಲಾಗಬಹುದೇ, ಕಪ್ಪೆ ಸರ್ಪವಾದೀತೇ ?

ಓದುಬರಹ ಕೂಡಾ ಸರಿಯಾಗಿ ತಿಳಿಯದ ಈ ನಮ್ಮ ಬುದ್ಧಿಗೇಡಿ ಶೇಖರ ಅದೆಂತು ಸಂಘದ ಅಧ್ಯಕ್ಷನಾದ ?

ರವಿ - ನಾಗು. ಈ ಪ್ರಜಾಪ್ರಭುತ್ವದ ಕಾಲದಲ್ಲಿ ಮತಕೊಟ್ಟು ಆರಿಸಿದರೆ ಮಂಗ ಕೂಡಾ ಮಂತ್ರಿಯಾಗಬಹುದು. ಬಹುಜನರ ಹಿತಬಯಸುವವನಿಗೆ ಮತನೀಡಿ ಆರಿಸುವ ಅಧಿಕಾರ ಪ್ರಜೆಗಳ ಕೈಗೆ ಕೊಟ್ಟಿದ್ದಾದರೆ ತಮಗೆ ಬಂದ ಆ ಮತದ ಬೆಲೆ ಅರಿಯದ ಮತಿಹೀನ ಮತದಾರರು ಅಹಿತಕರ ವಿಸ್ಮೃತಿಗಳನ್ನು ಆರಿಸಿಕೊಳ್ಳುವದೇನು ಹೊಸದಲ್ಲ. ಇರಲಿಬಿಡು, ನಾಗು, ಈಗ ನಡೆದ ಈ ನಾಟಕ ಯಾರದೆಂದು ತಿಳಿದಿ. ಇದು ನಿನ್ನ ತಂಗಿಯದು, ಈ ಮನೆಯ ಚಿಕ್ಕ ಸೊಸೆಯದು

ನಾಗಮ್ಮ - ಹಾಳಾದವಳು ಯಾವ ವಿಷ ಘಳಿಗೆಯಲ್ಲಿ ಈ ಮನೆಗೆ ಕಾಲಿಟ್ಟಿಳೋ ! ಇವಳು ಕಾಲಿಟ್ಟಾಗಿನಿಂದ ಹಾವು ಹೊಕ್ಕ ಮನೆಯಾಯಿತು

ರವಿ - ಯಾರನ್ನು ಅಂದು ಏನು ಮಾಡುವದು. ದೇವರು ಮಾಡಿಸಿದ ಹಾಗಾಗುತ್ತದೆ ನಡೆ. (ಹೋಗುವನು)

ನಾಗಮ್ಮ - ತಂಗಿ ನನ್ನ ಮನೆಗೆ ಬಂದು ನನ್ನ ಬದುಕನ್ನೇ ನುಂಗಿ ನಿಂತಳು. ನಾನೊಂದು ಮಾಡಹೋದರೆ ದೈವ ತಾ ಬೇರೊಂದು ಬಗೆಯಿತು. ಈಗ ಇವಳ ಗಂಡನ ಕೈಯಲ್ಲಿ ನನ್ನ ಗಂಡ ದುಡಿಯಬೇಕು ಒಂದು, ಇಲ್ಲವೇ ನೌಕರಿಯನ್ನೇ ಬಿಡಬೇಕು. ಒಟ್ಟಾರೆ ನನಗಿನ್ನು ಗ್ರಹಬಲ ಚನ್ನಾಗಿಲ್ಲವೆಂದೇ ಕಾಣುತ್ತದೆ. ಮನೆ ಮಹಾಭಾರತವಾಯಿತು. ನನ್ನ ಬಯಕೆ ಸಾಧಿಸದಂತಾಯಿತು. ದೇವಾ ಏನೇ ಆದರೂ ನಮ್ಮವರಿಗೆ ಅವಮಾನವಾಗದಂತೆ ಕಾಯುವ ಭಾರ ನಿನ್ನದು. (ಒಳಗೆ ಹೋಗುವಳು)

(ನಂತರ ಪ್ಯಾಂಟು ಧರಿಸಿದ ಶೇಖರನನ್ನು ಸುನಂದ ಬರ್ರಿ ಎಂದು ಕೈ ಹಿಡಿದು ಕರೆತರುವಳು)

ಶೇಖರ - ಬರ್ತೀನಿ ತಡಿಯೆ ಸ್ವಲ್ಪ ನೋಡು ಸುನಂದ ಇಷ್ಟು ದಿನ ಪಂಜೆ ಉಟ್ಟುಕೊಳ್ಳುತ್ತಲಿದ್ದ ನನಗೆ ಪ್ಯಾಂಟು ತೊಡಿಸಿದ್ದರಿಂದ ನಾಚಿಕೆ ಬರುತ್ತದೆ

ಸುನಂದ - ನಾಚಿಕೆ ಏಕೆ ಬರಬೇಕು. ಪ್ರೆಸಿಡೆಂಟ್‌ರಾಗುವ ನೀವು ಪ್ಯಾಂಟು ತೊಟ್ಟರೇನೇ ಚಂದ. ಹೂ ಹಾಕಿಕೊಳ್ಳಿರಿ. ಈ ಕೋಟನ್ನು (ತೊಡಿಸುವಳು ಟಾಯ್ ಕಟ್ಟವತ್ತುವಳು)

ಶೇಖರ - ಇದೇನೇ ಹರಿದ ಸೀರೆಯ ಸೆರಗು ಸುತ್ತಹತ್ತಿದಿಯಲ್ಲ. ನನ್ನ ಕುತ್ತಿಗೆಗೆ, ಅಯ್ಯಯ್ಯೋ ಉರ್ಲು ಹಾಕುವಿಯೇನೇ ? ಹಾಳಾದವಳೇ

ಸುನಂದ - ಇದು ಸೀರಯ ಸೆರಗಲ್ಲ ನೆಕ್‌ಟಾಯ್

ಶೇಖರ - ನೆಟ್ಟಕಾಯಿ

ಸುನಂದ - ನೆಟ್ಟಕಾಯಿ ಅಲ್ಲ. ನೆಕ್ಟಾಯ್ ಟಾಯ್ ಅಂದು ಬಿಡ್ರಿ ಸಾಕು

ಶೇಖರ - ಏನು ಸುಡುಗಾಡಾದ್ರ ಅನ್ನು. ಒಮ್ಮೆ ನಿನ್ನ ಕೈಗೆ ಸಿಕ್ಕುಬಿದ್ದಿದ್ದೇನೆ ಅದೇನ್ನೇನು ಮಾಡ್ತಿಯೋ ಮಾಡು. (ಒಳಗೆ ಹೋಗಿ ಬೂಟು ಒರಿಸುತ್ತ ಬರುವಳು ಅವನ್ನು ಮೆಟ್ಟಿಸಿ) ಹೂ ಸ್ವಲ್ಪ ಅಡ್ಡಾಡಿರಿ ನನ್ನಂತೆ ? (ಅಡ್ಡಾಡಿ ತೋರಿಸುವಳು)

ಶೇಖರ - (ಅಡ್ಡಾಡಿ ಠೀವಿಯಲ್ಲಿ ನಿಂತು) ಸುನಂದ ಏನು ಚಂದಾನೇ ಇದು. ಈ ವೇಷಾನೇ ಒಂದು ಠೀವೀ ನೋಡು

ಸುನಂದ - (ಸಿಗರೇಟು ಬಾಯಲ್ಲಿಡುತ್ತ) ಹೂ ಇದನ್ನು ಬಾಯಲ್ಲಿ ಹಿಡೀರಿ. (ಕಡ್ಡಿ ಹಚ್ಚುವಳು)

ಶೇಖರ - (ಹೊಗೆ ಸುನಂದಳಿಗೆ ಬಿಡುತ್ತ) ಆಹಹಾ ಶಿಸ್ತು ಅಂತಾರೆ ಇದಕ್ಕೆ. ಪಂಜೆ ಬದಲು ಪ್ಯಾಂಟ್. ಕಪನಿ ಬದಲು ಈ ಕಪ್ಪಿನ ಶರಟು. ಮೇಲೆ ಉಲನ್ ಕೋಟು, ಆ ಮೇಲೆ ಕಾಲಲ್ಲಿ ಹ್ಯಾಟು, ತಲೆಯಮೇಲೆ ಬೂಟು

ಸುನಂದ - ಆ ಏನಂದರಿ ?

ಶೇಖರ - ಅಲ್ಲಲ್ಲ ಕಾಲಲ್ಲಿ ಬೂಟು, ತಲೆಯಮೇಲೆ ಹ್ಯಾಟ, ಬಾಯಲ್ಲಿ ಸಿಕ್ರೇಟು ಒಟ್ಟಾರೆ..

ಸುನಂದ - ನನ್ನ ಗಂಡಾ ಅಪ್ಟುಡೇಟ್. (ಲಟಗಿ ಮುರಿಯುವಳು)

ಶೇಖರ - ರೈಟೂ....

ಸುನಂದ - ಆ ಎಲ್ಲಿ ಕಲಿತಿರಿ ನೀವು ?

ಶೇಖರ - ಎಸ್.ಟಿ.ಬಸ್ಸಿನಲ್ಲಿ ಕುಳಿತಾಗ ಕಂಡಕ್ಟರ ಕೂಗತ್ತಿದ್ದ ಊರಿಗೊಮ್ಮೆ ರಾಯಿಟ್ ಅಂತ

ಸುನಂದ - ಹೂ ಸ್ವಲ್ಪ ಸರಿಯಾಗಿ ನಿಂತುಕೊಳ್ರಿ. ಕಣ್ ಪ್ರೀತಿ ತೀರುವವರೆಗೂ ಒಂದು ಸಲ ನೋಡ್ತೇನೆ

ಶೇಖರ - ಬಹಳ ನೋಡಬೇಡವೇ ದೃಷ್ಟಿಯಾದೀತು ?

ಸುನಂದ - ನಿಜವಾಗಿಯೂ ದೃಷ್ಟಿಯಾಗುವಂತಹದೇ ನಿಮ್ಮ ರೂಪ

ಶೇಖರ - ಹೂ ನಾನಿನ್ನು ಹೊಗ್ತೇನೆ ?

ಸುನಂದ - ತಡೆಯಿರಿ ! ಇವತ್ತು ಪ್ರೆಸಿಡೆಂಟ್ ಜಾಗ ತೆಗೆದುಕೊಳ್ಳಲೆಂದು ಹೊರಟ ನಿಮಗೆ ಆರತಿ ಮಾಡಿ ದೃಷ್ಟಿ ತೆಗೆಯುತ್ತೇನೆ

ಶೇಖರ - ಏನೇ ನಿನಗೇನು ಹುಚ್ಚು ಗಿಚ್ಚು ಹಿಡಿಯಿತೇನೇ ?

ಸುನಂದ - ಹುಚ್ಚೇಕೆ ! ಇದು ನಿಮ್ಮ ಹೆಂಡತಿಯ ನಚ್ಚು. ಮತ್ತ ಯಾವದಾದರೂ ಕೆಟ್ಟ ಹೆಂಗಸಿನ ದೃಷ್ಟಿ ತಾಗಿದರ ನಾನೇನು ಮಾಡಲಿ. (ಆರತಿ ಮಾಡುವಾಗ

ತಾರಕ್ಕ, ಬಸವಂತ ಬರುವರು)

ತಾರಕ್ಕ - ಇದೇನೇ ಸುನಂದ ಈ ನಮ್ಮ ಶೇಖರನ ಅವತಾರ ?

ಶೇಖರ - ಗುಡ್‌ಮಾರ್ನಿಂಗ್ ಮಿಸ್ಟರ್ ಅಕ್ಕ

ಸುನಂದ - ಮಿಸ್ಟರ್ ಅಲ್ಲಾ ಸಿಸ್ಟರ್ ಅನ್ನಿ. ಬಾ ತಾರಕ್ಕ

ತಾರಕ್ಕ - ಏನೋ ಶೇಖರ ಇದೆಲ್ಲಾ ಅಸಹ್ಯತನ. ಅವನಿಗೆ ಬುದ್ಧಿಯಿಲ್ಲ ಅಂದ್ರೆ ನೀನಾದರೂ ಹೇಳಬಾರದೇನೇ ಸುನಂದ. ಏನಿದೆಲ್ಲ ಹುಚ್ಚುಚ್ಚಾರ

ಸುನಂದ - ತಾರಕ್ಕ ಈಗ ನಿಮ್ಮ ತಮ್ಮ ಮೊದಲಿನಂತೆ ಹೊಲದ ಕೆಲಸ ಮಾಡುವ ತಮ್ಮನಲ್ಲ. ನಮ್ಮೂರ ಸಂಘದ ಪ್ರೆಸಿಡೆಂಟ್

ತಾರಕ್ಕ - ಪ್ರೆಸಿಡೆಂಟು ?

ಶೇಖರ - ಹೌದಕ್ಕ ಗೋಪಿ ಬಿಟ್ಟು ಬಿಟ್ಟ. ಇವತ್ತಿನಿಂದ ನಾನೇ ಪ್ರೆಸಿಡೆಂಟು

ಬಸವಂತ - ಕರದಂಟು ಹೋಗಿ ಪ್ರೆಸಿಡೆಂಟು ಆತು ಡುಂಡುಂ ಅಂದಲ್ಲೆ ಹೀಂಗ ಸಾಬರಮರಿ ಆಗಿಯಾ

ಶೇಖರ - ಸಾಬರ ಮರಿನರೆ ಆಗಲಿ, ಜಾಡರ ಪರಿನೆರೆ ಆಗಲಿ, ನಾನೂತೂ ಪ್ರೆಸಿಡೆಂಟ್

ತಾರಕ್ಕ - ಆಗಪ್ಪಾ ಆಗು ಒಳ್ಳೇ ಸುದ್ದಿಯನ್ನು ಹೇಳಿದ ನಿನ್ನ ಬಾಯಿಗೆ ಹಾಲು ಸಕ್ಕರೆನೇ ಬೀಳಲಿ. ಶೇಖರ ನಿನಗೇ ಅಂತಾ ಒಳ್ಳೇ ಸುದ್ದಿನೇ ತಂದೀನಪ್ಪ

ಶೇಖರ - ಅದೇನಕ್ಕಾ ?

ತಾರಕ್ಕ - ನನಗ ಬಂದ ಕಷ್ಟ ಕಾಲದಲ್ಲಿ ನೀನು ಸಾಲಮಾಡಿ ಮೂರು ಸಾವಿರ ರೂಪಾಯಿ ಕೊಟ್ಟು ನನ್ನ ಸಂಸಾರ ಉಳಿಸಿದ್ದಿ, ಈಗ ದೇವರು ನಮಗೆ ಅನುಕೂಲ ಮಾಡಿದನಪ್ಪ, ಆಗ ನೀನು ಕೊಟ್ಟ ಮೂರುಸಾವಿರಕ್ಕೆ ಆರು ಸಾವಿರ ಚೆಕ್ಕು ಕೊಟ್ಟಿದ್ದಾರೆ ನಿಮ್ಮ ಮಾವ ತಗೊಳ್ಳಪ್ಪ

ಶೇಖರ - (ಚಕ್ಕು ನೋಡಿ) ಇದೇನೇ ಅಕ್ಕಾ ಇದು ನೋಟರ ಅಲ್ಲಾ ಪೂರ್ತಿ ರೂಪಾಯಿನರ ಅಲ್ಲ. ಆರು ಸಾವಿರ ಅಂದರೇನು ? ಅಂತೂ ಮಾಮಾ ಈ ಚಕ್ ಕಳಿಸಿ ನನ್ನ ರೊಕ್ಕಕ್ಕೆ ಚಕ್ಕರ್ ಕೊಟ್ಟಾ ಅನ್ನು

ಸುನಂದ - ಅಯ್ಯೋ ನಿಮ್ಮ ಬುದ್ಧಿಗೆ ಬೆಂಕಿ ಹಚ್ಚಿತು. ಇದು ಬ್ಯಾಂಕಿನ ಚಕ್ಕು. ಇದನ್ನು ಕೊಟ್ಟರ ಹಣ ಕೊಡತಾರೆ, ತಿಳಿತೇನು ? ಇದೇನು ತಾರಕ್ಕ ನಮ್ಮವರು ಕೊಟ್ಟಿದ್ದು ಮೂರುಸಾವಿರ ಆದರೆ ನೀವು ಕೊಟ್ಟದ್ದು ಆರು ಸಾವಿರ ಏಕೆ ?

ನಾಗಮ್ಮ - ತಾರಕ್ಕ (ಎಂದು ಬರುವಳು. ಯಾರೂ ಅವಳನ್ನು ಮಾತನಾಡಿಸುವದಿಲ್ಲ)

ತಾರಕ್ಕ - ನೋಡಮ್ಮ ಮನುಷ್ಯ ಅಂದಬಳಿಕ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕಲ್ಲ. ನಿಮ್ಮಕ್ಕನಂತೆ ಅಪಕಾರ ಬಗೆಯುವ ಬುದ್ಧಿ ನನಗಿಲ್ಲ. ತಗೊಳ್ಳಮ್ಮ. (ಕೊಟ್ಟು)

ಬಾ ಶೇಖರ ಎಳ್ಳು ಹಚ್ಚಿದ ಸಜ್ಜೀ ರೊಟ್ಟಿ, ಸುರಳೀಹೋಳಿಗಿ, ಕರಚೀಕಾಯಿ ತಂದೇನಿ ತಿನಬಾರಪ್ಪ

ಶೇಖರ - ಆಫೀಸಿನಿಂದ ಬಂದ ಮೇಲೆ ತಿನ್ನತೇನಿ. ಮತ್ತೆ ಅಣ್ಣನಿಗೆ ಕೊಟ್ಟರೆ ನಾ ಮುಟ್ಟೋದಿಲ್ಲ ನೋಡಕ್ಕ

ತಾರಕ್ಕ - ಅವನಿಗೆ ಇನ್ನು ಮೇಲೆ ಅನ್ನವೇಕೆ ಮಣ್ಣು ಸಹಿತ ಕೊಡಲಾರೆ

ಶೇಖರ - ಹಾಗಿದ್ದರೆ ಅಡ್ಡಿಯಿಲ್ಲ. ನಾನಿನ್ನು ಹೋಗಿಬರತೇನಿ ಅಕ್ಕಾ

ಸುನಂದ - ನಿಮ್ಮಕ್ಕನಿಗೆ ನಮಸ್ಕಾರ ಮಾಡಿ ಹೋಗಿರಿ. (ನಮಸ್ಕರಿಸುವನು)

ತಾರಕ್ಕ - ನಿನಗೆ ದೇವರು ಒಳ್ಳೇಯದು ಮಾಡಲಿ ಹೋಗಿಬಾರಪ್ಪ (ಹೋಗುವನು)

ಸುನಂದ - ಏನು ತಾರಕ್ಕ ಈ ಒಡವೇನೆಲ್ಲ ಯಾವಾಗ ಮಾಡಿಸಿಕೊಂಡಿರಿ ?

ತಾರಕ್ಕ - ಎರಡು ತಿಂಗಳಾಯಿತು. ನೋಡು ಮಾಟ ಚೆನ್ನಾಗಿಲ್ಲವೆ ?

ನಾಗಮ್ಮ - (ಸ್ವಲ್ಪ ಮುಂದೆ ಬಂದು) ಹೌದಲ್ಲರಿ ತಾರಕ್ಕ ಬಳೆ ಬಹಳ ಚೆನ್ನಾಗಿವೆ

ತಾರಕ್ಕ - ಚೆನ್ನಾಗಿರಲಿ ಇರದೇ ಇರಲಿ, ನಮ್ಮ ಗೊಡವೆಗೆ ಬರಬೇಡ ಮಹಾತಾಯಿ ನಿನ್ನ ಮನೆಯಲ್ಲಿ ನೀ ಇರು. (ನಾಗಮ್ಮ ಸಣ್ಣ ಮುಖಮಾಡಿ ಸರಿದು ನಿಲ್ಲುವಳು) ನೋಡೇ ಸುನಂದ ನಿಮಗೆ ಅಂತ ಒಂದು ಜೊತೆ ಬಳೆ ಮಾಡಿಸಿ ತಂದೇನಿ. (ಕೈಯಲ್ಲಿ ಇಡುವಳು, ಗಂಟು ತೋರಿಸಿ) ನಡೆಯಮ್ಮ ಇದನ್ನೆಲ್ಲಾ ಒಳಗೆ ಇಡು

ಸುನಂದ - ನೀವೂ ಬನ್ನಿ. (ಎಂದು ಒಳಗೆ ಒಯ್ಯ ಹತ್ತುವಳು)

ತಾರಕ್ಕ - ಅಪ್ಪ ಎಲ್ಲಿದ್ದಾನೆ ಸುನಂದ ?

ಸುನಂದ - ತೋಟದ ಕಡೆಗೆ ಹೋಗಿರಬೇಕು. ಬರೋ ಹೊತ್ತಾಗಿದೆ ಕೂಡ್ರಿ

ತಾರಕ್ಕ - ಬಸವಂತಪ್ಪ ತೋಟದವರೆಗೆ ಹೋಗಿ ನಮ್ಮ ತಂದೆಯವರನ್ನು ಕರೆದುಕೊಂಡು ಬಾ (ಅವನು ಹೋದ ಬಳಿಕ) ಅಂತೂ ಸುನಂದಳ ಪುಣ್ಯದಿಂದ ನನ್ನ ತಮ್ಮನೂ ಒಬ್ಬ ಗಣ್ಯ ಮನುಷ್ಯನಾದ. ನನ್ನ ತಮ್ಮನ ಸಂಸಾರ ನಂದಗೋಕುಲವಾಗಿ ನನ್ನ ತಮ್ಮನ ಬಳ್ಳಿ ಹಬ್ಬಿ ಹೂ ಬಿಡಲಿ

ರವಿ - (ಬರುತ್ತ) ಯಾವಾಗ್ಗ ಬಂದಿ ತಾರಕ್ಕ ?

ತಾರಕ್ಕ - ನಾನು ಯಾವಾಗ ಬಂದ್ರ ನಿನಗೇನಪ್ಪ, ಆಪತ್ತಿಗಾಗದ ತಮ್ಮ ಇದ್ದರಷ್ಟು ಬಿಟ್ಟರಷ್ಟು ? ಇಷ್ಟಾದರೂ ಮತ್ತೆ ಮುಖ ಎತ್ತಿ ಮಾತನಾಡಿಸಲಿಕ್ಕ ಬಂದಿದ್ದೀಯಲ್ಲ ನಾಚಿಕೆಯಾಗುವುದಿಲ್ಲವೇ ?

ರವಿ - ಇದೇನಕ್ಕ ಮನೆಗೆ ಬಂದವರನ್ನು ಮಾತನಾಡಿಸಬಾರದೇನು ?

ತಾರಕ್ಕ - ನಾನೀಗ ಬಂದದ್ದು ನಿನ್ನ ಮನೆಗಲ್ಲ ಶೇಖರನ ಮನೆಗೆ. ನಿನ್ನ ಮನೆಗೆ

ಬರೋದಕ್ಕಿಂತ ಮಸಣಕ್ಕೆ ಹೋಗುವದು ಸಾವಿರ ಪಾಲು ಮೇಲು, ತಮ್ಮನಂತೆ ತಮ್ಮ !

ನಾಗಮ್ಮ - ತಾರಕ್ಕ ಎಷ್ಟಾದರೂ ಅವರು ನಿಮಗೆ ತಮ್ಮ ಒಡಹುಟ್ಟಿದವರು

ತಾರಕ್ಕ - ಅಹುದಮ್ಮ ಈಗ ನನ್ನ ತಮ್ಮ. ಆದರೆ ಹಿಂದೊಮ್ಮೆ ನನಗೆ ಆಪತ್ತು ಬಂದು ನನ್ನ ಸಂಸಾರವೇ ಮುಳುಗಿ ಹೋಗಲಿದ್ದಾಗ, ನಿನ್ನ ಮಾತು ಕೇಳಿ ಹಾಲು ಕುಡಿಯಲು ಹೋದನಲ್ಲ. ಆಗ ಈ ಭಾವನೆಯೇಕೆ ಬರಲಿಲ್ಲ. ತಮ್ಮನಂತೆ ತಮ್ಮ ನಡೆ ಸುನಂದ. (ಹೋಗುವರು) (ಮೂವರೂ ಒಳಗೆ ಹೋದಬಳಿಕ)

ರವಿ - ಬಲಬಿದ್ದು ಹೋದಾಗ ನೆಲವೆದ್ದು ಬಡೆಯಿತೆಂಬಂತೆ ಇಂದು ಪ್ರಪಂಚವೇ ನನ್ನ ಮೇಲೆ ವಿಷಕಾರತೊಡಗಿತು. ಬೆನ್ನ ಹಿಂದೆ ಹುಟ್ಟಿದ ನನ್ನ ತಮ್ಮನೇ ನನಗೆ ವೈರಿಯಾಗಿ ನಿಂತು ನೌಕರಿಯಿಂದ ನನ್ನನ್ನು ಕಡಿಮೆ ಮಾಡಿದ. ನಂಬಿದ ಗೋಪಿಯೇ ಈ ಮಾತಿಗೆ ಪ್ರೋತ್ಸಾಹಿಸಿದ. ಒಡಹುಟ್ಟಿದ ಅಕ್ಕ ಮುಖಮುರಿದ ಹಾಗೆ ಮಾತನಾಡಿದಳು. ನನಗಿಂದು ನಿಂತ ನೆಲವೇ ಬಿರಿಯುವಂತಾಗಿದೆ

ನಾಗಮ್ಮ - ಸಮಾಧಾನ ತಾಳಿರಿ ?

ರವಿ - ಈಗಲೇ ಹೋಗಿ ಗೋಪಿಯನ್ನು ಕೇಳುತ್ತೇನೆ. ಇದು ನ್ಯಾಯವೇನು ಎಂದು

ನಾಗಮ್ಮ - ಈಗ ನೀವು ಯಾರನ್ನು ಕೇಳುವದೂ ಬೇಡ, ಸುಮ್ಮನೇ ಮನೆಯಲ್ಲಿದ್ದುಬಿಡಿ

ರವಿ - ಇಲ್ಲ ನಾಗೂ ನನಗಿಲ್ಲಿ ಈಗ ನಿಲ್ಲಲು ಮನಸ್ಸಿಲ್ಲ. ನಾನೀಗಲೇ ಗೋಪಿಯನ್ನು ಭೇಟಿಯಾಗುತ್ತೇನೆ. (ಓಡುವನು)

ನಾಗಮ್ಮ - ಸ್ವಾರ್ಥ ಲಾಲಸೆಯಿಂದ ಅಣ್ಣಾ-ತಮ್ಮಂದಿರ ಮಧ್ಯ ನಾನು ಹೊತ್ತಿಸಿದ ಈ ಕಲಹದ ಬೆಂಕಿ ಕೊನೆಗೆ ನನ್ನ ಮನೆಯನ್ನೇ ದಹಿಸತೊಡಗಿತೇ ? ದೇವಾ ಆಗ ನನಗೇಕೆ ಆ ಹೀನ ಬುದ್ಧಿಯನ್ನು ದಯಪಾಲಿಸಿದಿ. (ಹೋಗುವಳು)

ಶೇಖರ - (ಬಂದು) ಲೇ... ಲೇ.... ಲೇ...

ಸುನಂದ - (ಬಂದು ನಗುತ್ತ) ಯಾಕರೀ ಯಾವಾಗಿನಿಂದ ಬಂತು ಲೇ ಎಂದು ಕರೆಯುವ ಬುದ್ಧಿ .... ?

ಶೇಖರ - ಯಾವಾಗ ನಾನು ಪ್ರೋಸಿಡಿಂಗನ ಮೇಲೆ ಪ್ರೆಸಿಡೆಂಟ್ ಅಂತಾ ಸಹಿ ಹಾಕಿದೆನೋ ಆಗಲೇ ಬಂತು. ಕಂಡವರಿಗೆಲ್ಲಾ ಲೇ ಅಂತಾ ಕರಿಯೋ ಅಧಿಕಾರ

ಸುನಂದ - ಕಂಡವರಿಗೆ ಹಾಗೆ ಕರೆದೆ ಅಂತಾ ಮನೀ ಹೆಂಡತಿನ್ನೂ ಕರೀಬೇಕೇ ?

ಶೇಖರ - ಕಂಡವರನ್ನೇ ಕರೆದಬಳಿಕ ಮನೆ ಹೆಂಡತಿ ಎಷ್ಟರವಳು ? ಇನ್ನು ಮೇಲೆ ನಾನು ಯಾರನ್ನು ಕೂಗಬೇಕಾದ್ರು ಹೀಗೆ ಲೇ ಸುನಂದ ಇವತ್ತು ನಾನು

ಏನು ಪರಾಕ್ರಮ ಮಾಡಿದೆ ಗೊತ್ತೇನು ?

ಸುನಂದ - ಏನೇನು ಮಾಡಿದಿರ ?

ಶೇಖರ - ಸಂಘದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ತಕ್ಷಣ ಹತ್ತು ವರ್ಷಗಳಿಂದ ಸಂಘದಲ್ಲಿ ನೌಕರಿ ಮಾಡುತ್ತ ಬಂದ ನಮ್ಮ ಅಣ್ಣನನ್ನು ನೌಕರಿಯಿಂದ ಕಿತ್ತು ಹಾಕಿದೆ

ಸುನಂದ - ಕಾರಣ

ಶೇಖರ - ವಿನಾಕರಣ

ಸುನಂದ - ಛೇ ಹೀಗೆ ಮಾಡುವದು ಸಂಘದ ಹಿತದೃಷ್ಟಿಯಿಂದ ಅನ್ಯಾಯವಲ್ಲವೇ ?

ಶೇಖರ - ಸಂಘದ ಹಿತಾಹಿತಗಳನ್ನು ಗಮನಿಸುತ್ತ ಹೋದರೆ ಪಾಪ ನನ್ನ ಅಧಿಕಾರದ ದರ್ಪವನ್ನು ಇನ್ನಾರ ಮೇಲೆ ತೋರಿಸಬೇಕು ?

ಸುನಂದ - ಏನಂದರೂ ! ಇದು ತಪ್ಪು. (ತಾರಕ್ಕ ಬರುವಳು)

ಶೇಖರ - ತಪ್ಪು ಅಂತಿಯಾ ? ಲೇ ಸುನಂದಾ ತಪ್ಪು ಒಪ್ಪುಗಳನ್ನು ಅಳೆದು ನೋಡಲು ನೀನು ಯಾರು ?

ಸುನಂದ - ನಾನು ಯಾರು ? ನಿಮ್ಮ ಕೈಹಿಡಿದ ಮಡದಿ. ಈಗಲೇ ನನ್ನ ಮಾನ ನಿಮ್ಮ ಕೈಯಲ್ಲಿ ಇಷ್ಟು ಕೀಳಾಗಿ ಹೋಯಿತೇ

ಶೇಖರ - ನನ್ನ ಸ್ಥಾನದ ಮುಂದೆ ಇನ್ನುಳಿದವರ ಮಾನ ಕಾಲುಕಸ. ಅಂದಬಳಿಕ ನೀವೆಲ್ಲರೂ ನನಗೆ ಮಣೇಲಕ್ಕೇ ಬೇಕು (ರಾಮಣ್ಣಾ ಬರುವನು) ಏಕಪ್ಪಾ ರಾಮಣ್ಣಾ ಸುಮ್ಮನೇ ಹೋಗ್ತಿಯಲ್ಲೋ ಸೊಕ್ಕು ಬಂದಿದೆಯೇನೋ ನಮಸ್ಕಾರ ಮಾಡು ನನಗೆ

ಸುನಂದ - ಅವರು ನಿಮ್ಮಪ್ಪ ನಿಮಗೇನು ಹುಚ್ಚು ಹಿಡಿಯಿತೇನು ?

ಶೇಖರ - ಯಾರಿಗೆ ಹಿಡಿದಿದೆಯೇ ಹುಚ್ಚು. ಸಂಘದ ಪ್ರೆಸಿಡೆಂಟನಾದ ನನಗೆ ?

ಸುನಂದ - ಸಂಘಕ್ಕೆ ಪ್ರೆಸಿಡೆಂಟನಾದರೂ ತಂದೆ ಮಗ ಸುಳ್ಳೇನು ?

ಶೇಖರ - ಅಧಿಕಾರದ ಮುಂದೆ ಅಪ್ಪನೂ ಅಷ್ಟೇ ಅವ್ವನೂ ಅಷ್ಟೇ ಎಲ್ಲರೂ ನನಗೆ ಮಣಿಯಲಿಕ್ಕೇ ಬೇಕು

ರಾಮಣ್ಣ - ಹೌದಪ್ಪ ಶೇಖರ, ನಿನ್ನ ದೃಷ್ಟಿಯಲ್ಲಿ ನಿನ್ನ ಮಾತೇ ಸತ್ಯವಾಗಿದೆ. ಯಾಕಂದರೆ ಅನ್ನದ ದಾಹಕ್ಕಿಂತಲೂ ಚಿನ್ನದ ದಾಹ ಕೆಟ್ಟದ್ದು. ಚಿನ್ನದ ದಾಹಕ್ಕಿಂತಲೂ ಹೆಣ್ಣು ಮಣ್ಣಿನ ದಾಹ ಕೆಟ್ಟದ್ದು. ಈ ಎಲ್ಲ ದಾಹಕ್ಕಿಂತಲೂ ಮನ್ನಣೆಯ ದಾಹ ಬಲು ಸೂಕ್ಷ್ಮವಾದದ್ದು ಎಂದು ಬಲ್ಲವರು ಹೇಳಿದ್ದಾರೆ. ಅವರಂತೆ ಮನ್ನಣೆಯ ದಾಹದಿಂದ ಅಂತರಂಗದ ಕಣ್ಣೇ ಮುಚ್ಚಿ ಹೋದ ನಿನ್ನ ದೃಷ್ಟಿಯಲ್ಲಿ

ಜನ್ಮದಾತನಾದ ನಾನು ಕೂಡಾ ಕೀಳಾಗಿ ಕಾಣುವದು ಸ್ವಾಭಾವಿಕವಾಗಿದೆ. ಅಲ್ಪನಿಗೆ ಅಧಿಕಾರ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡನೆಂಬಂತೆ ಪ್ರಜಾಪ್ರಭುತ್ವದ ಕೊಲೆಗೆ ನೀನೊಂದು ಜೀವಂತ ನಿದರ್ಶನ. ಮೂರ್ಖನಾದ ನಿನ್ನಿಂದ ಸಂಕಟವನ್ನುಂಡು ಬುದ್ಧಿ ಕಲಿಯಲಿ, ನಿನಗೆ ಮತಕೊಟ್ಟು ಆರಿಸಿ ತಂದ ಆ ಸಂಘದ ಜನ

ಶೇಖರ - ಹೌದು ಮತ ಕೊಟ್ಟು ಆರಿಸಿ ತಂದ ಜನ ಅಂದಕೂಡಲೇ ನನಗೆ ಜ್ಞಾಪಕಕ್ಕೆ ಬಂದಿತು. ಪ್ರೆಸಿಡೆಂಟನಾದ ಬಳಿಕ ನನ್ನ ಕೊರಳಿಗೆ ಹೂ ಮಾಲೆ ಹಾಕಿ ಈ ವರೆಗೂ ಯಾರೂ ನನ್ನ ಗೌರವಿಸಲಿಲ್ಲ. ಈಗಲೇ ಹೋಗಿ ಹೀಗೆ ಅಂತ ಗೋಪಿಗೆ ಆರ್ಡರ್ ಕೊಡತೇನಿ (ಓಡಿಹೋಗುವನು)

ಸುನಂದ - ಮಾಮಾ ಆದರು ನಿಮ್ಮನ್ನು ಅಪಮಾನಿಸಿದರಲ್ಲ ಮಾಮಾ. ನೀವು ನನಗಾಗಿ ನಿಮ್ಮ ಮಗನನ್ನು ಕ್ಷಮಿಸಿ ಮಾಮಾ

ರಾಮಣ್ಣ - ಕ್ಷಮಿಸುತ್ತೇನಮ್ಮ ಮಗನನ್ನು ಕ್ಷಮಿಸದೆ ಇನ್ನಾರನ್ನು ಕ್ಷಮಿಸಬೇಕು. ಎಷ್ಟಾದರೂ ಅವನು ನನ್ನ ಮಗ. ಅವನೇನು ಆಡುತ್ತಾನಮ್ಮ, ಆ ಅಧಿಕಾರದ ಮದ ಆ ಮಾತು ಆಡಿಸಿತು. ಈ ವರೆಗೂ ಕ್ರೂರತನವನ್ನೇ ಕಂಡರಿಯದ ಭೂಮಿತಾಯಿಯ ಮಡಿಲಲ್ಲಿ ಬೆಳೆದ ನನ್ನ ಮಗನ ಹೃದಯವನ್ನೇ ಇಷ್ಟು ಬಧಿರಗೊಳಿಸಿತು, ಬಲಿಷ್ಠವಾದ ಮನ್ನಣೆಯ ದಾಹ. ಅಂದಬಳಿಕ ಕಲ್ಲಮನದ ಕಟುಕರು. ಎಷ್ಟು ಜನ ಇಂತಹ ಅಧಿಕಾರದಲ್ಲಿದ್ದಾರೋ ಬಲ್ಲವರಾರು ? ಅಂತಹ ಬಂಡರ ಮುಂದೆ ನಿನ್ನ ಗಂಡ ಸತ್ಯ ಹರಿಶ್ಚಂದ್ರ. ಇರಲಿ ನಡೆಯಮ್ಮ. ತಾರಕ್ಕಾ ಅದೇನೋ ಮಾಡಿ ತಂದಿದ್ದಾಳಂತೆ ಮನೆಯುವರೆಲ್ಲರೂ ಹಂಚಿಕೊಂಡು ಉಂಡು ಆನಂದಿಸೋಣ.

ತಾರಕ್ಕ - ಇದೇನಪ್ಪ,ಬಂದ ಕಷ್ಟವನ್ನು ಹಂಚಿಕೊಂಡಂತೆ ತಂದದ್ದನ್ನು ಹಂಚಿ ತಿನ್ನಬೇಕೆ?

ರಾಮಣ್ಣ - ಅಹುದಮ್ಮ ಸವಿಯೂಟ ಕಟ್ಟಿಕೊಂಡು ಬಂದ ನಿನಗೆ ಶೇಖರನೊಬ್ಬನೇ ತಮ್ಮನ್ನಲ್ಲ. ರವಿಯೂ ನಿನ್ನ ತಮ್ಮ. ನೀನು ತಂದ ಅಡುಗೆಯ ಅರ್ಧಭಾಗ ಅವನಿಗೂ ಸಲ್ಲಬೇಕಮ್ಮ

ಸುನಂದ - ಮಾಮಾ ನೀವು ದೇವರು

ತಾರಕ್ಕ - ಅಪ್ಪಾ ನೀನು....

ರಾಮಣ್ಣ - ಹೋಗಲಿ ಬಿಡಮ್ಮ ಈ ಮನೆಯಲ್ಲಿ ಬೇರೆಯವರು ಯಾರಿದ್ದಾರೆ. ಅಕ್ಕತಂಗಿ, ಅಣ್ಣತಮ್ಮ, ತಂದೆ ಮಕ್ಕಳು, ಅಂದಬಳಿಕ ಇದ್ದವರೆಲ್ಲ ಒಂದೇ ಕರುಳಿನ ಬಳ್ಳಿ. ಆದರಿಂದ ಅರಳಿದ ಹೊಸ ಹೂವೇ ಮಗು ಲಕ್ಷ್ಮೀನಾರಾಯಣ. ನೋಡ್ರೆಮ್ಮ ನಾಗಮ್ಮನ ಮನೆಗೆ ಅಡುಗೆಯ ಅರ್ಧಭಾಗ ಕೊಟ್ಟು ಬರಲು

ನಿಮಗೆ ಅಭಿಮಾನ ಅಡ್ಡ ಬರುತ್ತಿದ್ದರೆ ನಾನೇ ಕೊಟ್ಟು ಬರುತ್ತೇನೆ ಕೊಡಿ. (ಎಲ್ಲರೂ ಒಳಗೆ ಹೋದನಂತರ ರಾಮಣ್ಣ ಅಡುಗೆಯೊಂದಿಗೆ ಹೊರಗೆ ಬರುವನು)

ಶೇಖರ - (ಅಡ್ಡ ಬಂದು) ರಾಮಣ್ಣ ಏನೋ ಅದು. ಮುಚ್ಚಿಕೊಂಡದ್ದು ?

ರಾಮಣ್ಣ - ಏನೂ ಇಲ್ಲವಪ್ಪ ಶೇಖರಾ, ಇದು ನಿಮ್ಮಕ್ಕ ತಂದ ಅಡಿಗೆ

ಶೇಖರ - ಅದನ್ನೆಲ್ಲಿಗೆ ಒಯ್ಯುತ್ತಿರುವಿ ?

ರಾಮಣ್ಣ - ನಿನ್ನಣ್ಣನ ಮನೆಗೆ

ಶೇಖರ - ಯಾರ ಅಪ್ಪಣೆಯ ಮೇರೆಗೆ ?

ರಾಮಣ್ಣ - ಇದಕ್ಕೂ ಅಪ್ಪಣೆಬೇಕೇನಪ್ಪ ಮಗೂ ?

ಶೇಖರ - ಹೌದು ! ಸಂಘಕ್ಕೆ ಸಂಘವೇ ನನ್ನ ಅಪ್ಪಣೆಯಂತೆ ನಡೆಯುತ್ತಿರುವಾಗ ಪ್ರೆಸಿಡೆಂಟ್‌ನಾದ ನನ್ನನ್ನು ಕೇಳದೆ ಅದು ಹೇಗೆ ನೀನು ಈ ಕಾಯಕದಲ್ಲಿ ಉದ್ಯುಕ್ತನಾದಿ. ಹಾಕು ಅದನ್ನು ನೆಲಕ್ಕೆ

ರಾಮಣ್ಣ - ನಾನೀಗ ಆ ಮನೆಗೆ ಕೊಡಲೆಂದು ಒಯ್ಯಲಿರುವ ಅನ್ನ ನಿನ್ನದಲ್ಲ. ತಾರಕ್ಕ ತನ್ನ ಮನೆಯಿಂದ ಕಟ್ಟಿತಂದ್ದದು

ಶೇಖರ - ಯಾರೇ ತಂದಿರಲಿ, ನೀನೀಗ ಒಯ್ಯುತ್ತಿರುವದು ಈ ಮನೆಯಿಂದ ಆ ಮನೆಗೆ ತಾನೇ. ನನ್ನನ್ನು ಕೇಳದೇ ಒಯ್ಯುವಷ್ಟು ಸೊಕ್ಕು ಬಂತೇನೋ ?

ಸುನಂದ - ಅವರನ್ನು ತಡೀಲಿಕ್ಕೆ ನೀವು ಯಾರು ?

ಶೇಖರ - ನಾನು ಪ್ರೆಂಸಿಡೆಂಟ್

ಸುನಂದ - ಅದು ಸಂಘದಲ್ಲಿ, ಇದು ಮನೆ. ಪ್ರೆಸಿಡೆಂಟ್‌ರಾದ ಮಾತ್ರಕ್ಕೆ ನೀವೇನು ಪರಮಾತ್ಮನೆಂದು ಭಾವಿಸಿದಿರೇನು ? ಬ್ಯಾಡ್ರಿ ಈ ಸೊಕ್ಕು ಒಂದು ನಿಮಿಷದಲ್ಲಿ ಕಕ್ಕೀರಿ

ಶೇಖರ - ಏನೇ ಯಃಕಶ್ಚಿತ ಹೆಣ್ಣು ಹೆಂಗಸು ನೀನು ನನಗೆ ಎದುರು ವಾದಿಸುವಿಯಾ, ಎಲೆ ನಡೆ ಒಳಗೆ

ತಾರಕ್ಕ - ಬಿಡೋ ಶೇಖರ (ಹೊಡೆದು ತಾರಕ್ಕನೊಂದಿಗೆ ಒಳಗೆ ಹಾಕಿ ಚಿಲಕ ಹಾಕುವನು)

ಶೇಖರ - ಮೊದಲು ಆ ಅನ್ನವನ್ನು ಮಣ್ಣಿನಲ್ಲಿ ಚೆಲ್ಲಿಕೊಡು

ರಾಮಣ್ಣ - ಏನು ಉಣ್ಣುವ ಅನ್ನ ಮಣ್ಣಲ್ಲಿ ಚೆಲ್ಲಿಕೊಡಬೇಕ ? ಶೇಖರ ಈ ಅಧಿಕಾರದ ವ್ಯಾಮೋಹ ನಿನ್ನ ಅಂತರಂಗದ ಕಣ್ಣನ್ನು ಇಷ್ಟು ಬಲವಾಗಿ ಮುಚ್ಚಿತೇ ? ಬೇಡ ಮಗೂ ಅಳಿದುಬಿಡು ಈ ಅಹಂಭಾವನೆಯನ್ನು. ನೋಡಪ್ಪ ಬುದ್ದಿ

ಹೀನನೆನಿಸಿದರೂ ಚಿಂತೆಯಿಲ್ಲ. ಮೊದಲಿನಂತೆ ಭೂಮಿ ತಾಯಿಯ ಮಗನಾಗಿ, ರೈತನಾಗಿ ಬಾಳು. ಆದರೆ ಅಧಿಕಾರಿಯಾದೆನೆಂದು ಈ ರೀತಿ ಹೃದಯಹೀನನಾಗಿ ಮಾತ್ರ ಬಾಳುವದು ಬೇಡ

ಶೇಖರ - ಅದನ್ನೆಲ್ಲ ಕೇಳುವಷ್ಟು ಸಮಯ ನನಗಿಲ್ಲ. ನನ್ನ ಮನೆಯ ಅನ್ನ ಮಣ್ಣು ಗೂಡಿದರೂ ಚಿಂತೆಯಿಲ್ಲ. ಆದರೆ ಅದು ಅಣ್ಣನ ಮನೆ ಸೇರಬಾರದು

ರಾಮಣ್ಣ - ಅದೇನಿದ್ದರೂ ಈ ನನ್ನ ಕೈಯಿಂದ ಮಣ್ಣುಗೂಡಲಾರದು

ಶೇಖರ - ಅಂದರೆ ನಿನ್ನನ್ನು ವಂಚಿಸಿ ನಿನ್ನ ಮೇಲೆ ಕೈಮಾಡಿ ನಿಮ್ಮಿಬ್ಬರಿಗೂ ಮಣ್ಣು ಕೊಟ್ಟವನಿಗೆ ಅನ್ನವಿಟ್ಟು ಕಾಪಾಡುವದೇ ? ಕೊನೆಯದಾಗಿ ಹೇಳುತ್ತೇನೆ. ನನ್ನ ಮಾತು ಮೀರಿ ನಡೆದರೆ ಮತ್ತೆ ನಿನಗಿಲ್ಲಿ ಸ್ಥಾನವಿಲ್ಲ

ರಾಮಣ್ಣ - ದೇವರಿಚ್ಛೆ. (ಒಯ್ಯುವಾಗ ಶೇಖರ ತಾಟು ಕಸಿದುಕೊಂಡು ದಬ್ಬುವನು)

ನಾಗಮ್ಮ - (ಬಂದು) ಮಾ... ಮಾ, ಮಾ... ಮಾ (ಅಪ್ಪುವಳು)

ರಾಮಣ್ಣ - ಮಗೂ ನಾಗಮ್ಮ ನಮ್ಮವ್ವಾ

ನಾಗಮ್ಮ - ಮಾಮಾ ನಮಗಾಗಿ ನೀವು ಹಟಹಿಡಿದು ಈ ಕಷ್ಟಕ್ಕೆ ಒಳಗಾದಿರಿ. ನಿಮ್ಮ ಹೊಟ್ಟೆಯ ಮಕ್ಕಳಿಂದಲೆ ನಿಮಗೆ ಈ ದುರ್ಗತಿಯೇ

ರಾಮಣ್ಣ - ಮಾಡಿದ ಕರ್ಮವನ್ನು ತೋಡಿ ಉಣ್ಣಲೇಬೇಕಲ್ಲ ಮಗು

ನಾಗಮ್ಮ - ಮಾಮಾ ಈ ಎಲ್ಲ ಅನರ್ಥಕ್ಕೂ ನಾನೇ ಕಾರಣ. ಈ ನಿಮ್ಮ ಮನೆ ಸೊಸೆಯಾಗಿ ಬಂದ ನಾನು ಅಣ್ಣತಮ್ಮಂದಿರ ಬಂಧುತ್ವದ ಗೋಡೆಯನ್ನು ಬಿರುಕುಗೊಳಿಸಿ ಮನೆ ಎರಡಾಗಿಸಿದೆ. ನಿಮ್ಮ ಮನೆಗೆ ಸೊಸೆಯಾಗಿ ಬಂದ ನಾನು ಫಲಕೊಡುವ ಸಸಿಯಾಗಲಿಲ್ಲ. ಕೊಲೆಗೈದ ವಿಷವಾದೆ. ಮಾಮಾ ಬನ್ನಿ ಮಾಮಾ ನನ್ನ ಮನೆಗೆ. ನಿಮ್ಮ ಸೇವೆ ಮಾಡಿ ನನ್ನ ಪಾಪ ಕಳೆದುಕೊಳ್ಳುವೆ

ರಾಮಣ್ಣ - ಬೇಡಮ್ಮ ಒಬ್ಬ ಮಗನಿಂದ ಉಂಡ ಅನುಭವವೇ ಸಾಕು. ಬೇರೊಬ್ಬ ಮಗನಿಂದ ಸಹಿಸುವಷ್ಟು ಶಕ್ತಿ ಈ ಮುದಿದೇಹದಲ್ಲಿ ಉಳಿದಿಲ್ಲ. ಅಲ್ಲದೆ ಮಕ್ಕಳ ಅದಿಕಾರಕ್ಕೆ ಒಳಪಟ್ಟ ಈ ಮನೆಯಲ್ಲಿ ನನಗೆ ಸ್ಥಾನವೂ ಇಲ್ಲ. ಮಾನವೂ ಇಲ್ಲ ಈ ಮನೆ ಕಟ್ಟಿದ ಆ ಮಡದಿ ಸಾವಿತ್ರಿ ಎಂದು ಸತ್ತು ಹೋದಳೋ ಅಂದೇ ಬತ್ತಿ ಹೋಯಿತಮ್ಮ ಈ ಮನೆಯ ಪುಣ್ಯಜಲ ಇನ್ನು ಮಲೆ ಒಂದು ಕ್ಷಣ ಕೂಡಾ ನಾನೀ ಮನೆಯಲ್ಲಿರಲಾರ

ನಾಗಮ್ಮ - ಬನ್ನಿ ಮಾಮಾ, ಪಟ ಹಿಡಿಯಬೇಡಿ. ನೀವೀಗ ಮನೆ ಬಿಟ್ಟು ಹೋದರ ನನ್ನಾಣೆ, ನಿಮ್ಮ ಮಕ್ಕಳ ಆಣೆಯಾಗಿದೆ ?

ರಾಮಣ್ಣ - ಬೇಡಮ್ಮ ಒಳಿತನ್ನು ಮಗು ಒಳಿತೆನ್ನು. (ಹೋಗಿ ನಾಗಮ್ಮನ ಮನೆಯ ಕಟ್ಟೆಯ ಮೇಲೆ ಕೂಡ್ರುವನು. ಉಪಚಾರ ನಡಿದಾಗ ರವಿ ಬರುವನು)

ರವಿ - (ನೋಡಿ ಸಿಟ್ಟಿನಿಂದ) ಏನೇ ಇವನೇಕೆ ನಮ್ಮ ಮನೆಯ ಕಟ್ಟೆಯ ಮೇಲೆ ಬಂದು ಕುಳಿತ. ಸಣ್ಣ ಮಗನೇ ತನ್ನ ಬದುಕಿನ ಕಣ್ಣೆಂದು ಬಂದವರ ಮುಂದೆಲ್ಲ ಹೇಳುತ್ತ ಬಂದ ಈ ಭಂಡ. ಈಗ ಇಲ್ಲಿ ಹೇಗೆ ಬಂದು ಕುಳಿತ. ಪಾಲು ವಿಭಾಗದ ಸಮಯದಲ್ಲಿ ಶೇಖರನ ಮೇಲುಗಟ್ಟಿ ಮಾತನಾಡಿದ ನಾಯಿ, ನಾಚಿಕೆ ಬರಲಿಲ್ಲವೇನೋ ನನ್ನ ಮನೆಯ ಕಟ್ಟೆಯ ಮೇಲೆ ಕೂಡ್ರಲಿಕ್ಕೆ. ನಡೆ ಇಲ್ಲಿಂದ (ಹಿಡಿದೆಳೆಯುವನು)

ನಾಗಮ್ಮ - ಸ್ವಾಮಿ ಬೇಡಿ, ಮಾವನವರ ಮೇಲೆ ಕೈಮಾಡಬೇಡಿ ಅವರು ನಿಮ್ಮ ತಂದೆ ಈ ಮನೆಯ ದೇವರು

ರವಿ - ತಂದೆ ಇವನು, ನನ್ನ ತಂದೆಯೇ ಅಲ್ಲ. ಎಂದೋ ಹರಿದು ಹೋಗಿದೆ ತಂದೆ ಮಕ್ಕಳ ಸಂಬಂಧ. ತಂದೆಯಂತೆ ತಂದೆ ! (ಹೊಡೆಯುವನು) (ಬಿಡಿಸಿಕೊಳ್ಳಲು ಬಂದ ನಾಗಮ್ಮಳನ್ನು ಬಡಿಯುತ್ತ.) ನೀನು ಬರುವಿಯಾ ? ನಡೆ ಒಳಗೆ ಹೆಣ್ಣಿನ ಸ್ಥಾನ ಹೊಸ್ತಿಲ ಒಳಗೆ. (ಒಳದಬ್ಬಿ ಕಟ್ಟೆಯ ಮೇಲೆ ಕುಳಿತು ಬೀಡಿ ಹಚ್ಚುವನು)

ರಾಮಣ್ಣ - (ಎದ್ದು ಸಾವಕಾಶವಾಗಿ) ಏನಾಯಿತಿಂದು ನನ್ನ ಬಾಳು. ಮುಪ್ಪಿನಲ್ಲಿ ಮಕ್ಕಳಿಂದ ಒದೆ ತಿಂದು ತಿಪ್ಪೆಯಲ್ಲಿ ಬೀಳುವ ನಾಯಿಗೂ ಕೀಳಾದೆನಲ್ಲ. ಛೇ ಇನ್ನು ಮೇಲೆ ಈ ಮನೆಯ ಸಹವಾಸವೇ ಸಾಕು. ಸಾವಿತ್ರಿ ನೀನಿದ್ದಾಗ ಈ ಮನೆ ಸ್ವರ್ಗವಾಗಿತ್ತು. ನೀನಿಲ್ಲದಾಗ ಇದು ನರಕವಾಯಿತು. ಸಾಗುವೆ ಬಹುದೂರ ಸಾಗಿಹೋಗುವೆ

ಸುನಂದ -

ನಾಗಮ್ಮ - ಮಾಮಾ .... (ಎಂದು ಚೀರುವರು)

ತಾರಕ್ಕ - ಅಪ್ಪಾ .... (ಚೀರುವಳು)

ಶೇಖರ - ತಡೆ ಅಪ್ಪ ಪಾಲು ವಿಭಾಗದ ಸಮಯದಲ್ಲಿ ಇನ್ನೊಂದು ವಸ್ತುವನ್ನು ಹಂಚಿಕೊಳ್ಳಲು ಮರೆತುಬಿಟ್ಟಿದ್ದೆ. ಅದನ್ನಷ್ಟು ನನ್ನ ಪಾಲಿಗೆ ಕೊಡಿಸಿ ಹೋಗು

ರಾಮಣ್ಣ - ಅಪ್ಪ ಗಳಿಸಿದ ಸಂಪತ್ತನ್ನು ಪಡೆಯುವ ಅಧಿಕಾರ ಮಾತ್ರ ಮಕ್ಕಳಿಗೆ. ಆದರೆ ಅವನ ಹೊಟ್ಟೆ ಬಟ್ಟೆಯ ವಿಚಾರ ಅದು ದೇವರಿಗೆ. ಹೋಗಲಿ ಅದೇನಪ್ಪ ನಿನ್ನ ಪಾಲಿಗೆ ಬರಬೇಕಾದ ವಸ್ತು ?

ಶೇಖರ - ಪಾಲು ಮಾಡಿಕೊಳ್ಳುವಾಗ ಅವ್ವನ ಭಾವಚಿತ್ರ ನನ್ನ ಜ್ಞಾಪಕಕ್ಕೆ ಬರಲಿಲ್ಲ. ಅದು ಈ ವರಗೂ ಅಣ್ಣನ ಮನೆಯ ಬಾಗಿಲ ಮೇಲೆ ಇದೆ. ಆದ್ದರಿಂದ ಅದನ್ನು ನನ್ನ ಮನೆಯಲ್ಲಿ ಹಾಕಿಕೊಳ್ಳುತ್ತೇನೆ. ಕೊಡಿಸಿ ಹೋಗು

ರವಿ - ಶೇಖರ ಆ ಚಿತ್ರವನ್ನು ಪಾಲಿಗೆ ಹಾಕಲಿಕ್ಕೆ ಬರುವುದಿಲ್ಲ. ಯಾಕೆಂದರೆ ಅದನ್ನು

ನನ್ನ ಸಂಬಳದ ಹಣದಲ್ಲಿ ಬರೆಯಿಸಿದ್ದೇನೆ

ಶೇಖರ - ಆದರೇನಾಯ್ತು ಕೂಡಿದ್ದಾಗ ತಾನೇ ಬರೆಸಿದ್ದು. ಅಂದಬಳಿಕ ಅವ್ವನ ಫೋಟೋದಲ್ಲಿ ಅರ್ಧಭಾಗ ನನ್ನದೂ ಇದ್ದೇಯಿದೆ. ನೀನು ಕೊಡದಿದ್ರೆ ನಾನೇ ಅರ್ಧ ಹರಿದುಕೊಳ್ಳುತ್ತೇನೆ

ರವಿ - ಶೇಖರ ಫೋಟೋ ಮುಟ್ಟಿದರೆ ನಿನ್ನ ಕೊಂದ ಬಿಡತೇನಿ. ಬೇಕಿದ್ದರೆ ತಂದೆ ಅನ್ನೋ ಈ ಭಂಡನ ಚಿತ್ರ ಬರೆಯಿಸಿ ಹಾಕಿಸಿಕೋ ನಿನ್ನ ಮನೆಯಲ್ಲಿ

ಶೇಖರ - ತಂದೆಗೆ ಭಂಡಾ ಅಂತಾ ಬಯ್ತಿಯೇನೋ ಜಗಭಂಡಾ

ರವಿ - ನನ್ನ ಬಯ್ತಿಯೇನೋ ಹಾಳಾದವನೇ, ನಿನ್ನ ಇತಿಶ್ರೀ ಮಾಡಿಬಿಡತೇನಿ. (ಎಂದು ಕೈಯಲ್ಲಿ ಕೋಲು ಹಿಡಿದು ಹೊಡೆದಾಡುತ್ತ ನಿಲ್ಲುವರು)

ಗೋಪಿ - (ಬಂದು) ಏನೋ ಇದು. ಅವಿವೇಕಿಗಳೇ ಕೈಯಲ್ಲಿ ಕೋಲು ಹಿಡಿದು ಕಾಳಗಕ್ಕೆ ನಿಂತಿದ್ದೀರಲ್ಲ ?

ಶೇಖರ - ನೋಡು ಗೋಪಣ್ಣಾ, ಅವ್ವನ ಫೋಟೋ ಇವನ ಮನೆಯಲ್ಲಿಯೇ ಇರಬೇಕಂತೆ. ಯಾಕೆ ನನ್ನ ಮನೆಯಲ್ಲಿ ಇರಬಾರದೇನು ? ನಾನು ಅವಳಿಗೆ ಮಗ ಅಲ್ಲವೇನು

ಗೋಪಿ - ಅಂದರೆ ತಾಯಿಯ ಭಾವಚಿತ್ರಕ್ಕಾಗಿ ಈ ಕುರುಕ್ಷೇತ್ರ ?

ರಾಮಣ್ಣಾ - ಅಹುದಪ್ಪ ಗೋಪಿ, ಇವರ ದೃಷ್ಟಿಯಲ್ಲಿ ತಮ್ಮ ತಾಯಿಯ ನಿರ್ಜಿವ ಚಿತ್ರಕ್ಕಿದ್ದ ಬೆಲೆ, ತಂದೆಯ ಈ ಸಜೀವ ಗಾತ್ರಕ್ಕಿಲ್ಲ. ಅಂತೇ ಹಂದಿಯಂತೆ ಒದೆತಿಂದು ಈ ಬದಿಗೆ ನಿಂತಿದ್ದೇನ ನೋಡು. (ಒಳಗೆ ಹೆಂಗಸರು ಅಣ್ಣಾ ಗೋಪಿ ಎಂದು ಚೀರುವರು)

ಗೋಪಿ - ಎಲೆ ಇದೇನಿದು ಅನಾಹುತ (ಹೋಗಿ ಬಾಗಿಲ ತೆರೆಯುವನು)

ರಾಮಣ್ಣಾ - ನನ್ನನ್ನು ಬಡಿಯುತ್ತಿದ್ದಾಗ ಬಿಡಿಸಿಕೊಳ್ಳಲು ಬಂದ ತಮ್ಮ ತಮ್ಮ ಹೆಂಡಂದಿರನ್ನು ಒಳಗೆ ದಬ್ಬಿ ಬಾಗಿಲ ಹಾಕಿದ್ದಾರಪ್ಪ. ಏಕೆಂದರೆ ಇವರ ಪುಣ್ಯಕಾರ್ಯ ನಿಂತು ಹೋಗಬಾರದಲ್ಲ

ಗೋಪಿ - ಏನು ನಿಮ್ಮನ್ನು ಬಡಿದರೇ... ಏನ್ರೋ ತಾಯಿಯ ಒಂದು ಭಾವಚಿತ್ರಕ್ಕೆ ಬಡಿದಾಡುವ ನಿಮ್ಮ ಕಣ್ಣಲ್ಲಿ ತಂದೆಯ ಈ ಸಜೀವ ಗಾತ್ರ ಇಷ್ಟು ಕೀಳಾಗಿ ಕಂಡಿತೇ ?

ರಾಮಣ್ಣಾ - ಪ್ರಪಂಚದ ನೇಮವೇ ಹಾಗಿದೆಯಪ್ಪ ಗೋಪಿ. ಸತ್ತ ಬಳಿಕ ಪುತ್ಥಳಿಯ ರೂಪದಲ್ಲಿ ಪ್ರತಿಷ್ಠಾಪಿಸಿ ಮುತ್ತಿನಾರುತಿ ಎತ್ತಿ ಬೆಳಗುವ ಈ ಹಾಳು ಪ್ರಪಂಚ ಬದುಕಿದ್ದಾಗ ಯಾವ ಮಹಾಪುರುಷನನ್ನು ಸನ್ಮಾನಿಸಿತು ; ಹೇಳು ಕ್ಷುಲ್ಲಕತನದಲ್ಲಿ ಬಲ್ಲಿದವರಿಗೆ ಮಾನ ಸಿಗುವದು ಜೀವಂತವಿದ್ದಾಗ.

ಮಹಾಪುರುಷನಿಗೆ ಮಾನ ದೊರೆಯುವದು ಸತ್ತಾಗಪ್ಪಾ ಸತ್ತಾಗ

ಗೋಪಿ - ಎಂತಹ ಅನಾಹುತಕ್ಕೆ ಕೈಯಿಟ್ಟರೋ, ಹಡೆದ ತಂದೆಯ ಮೇಲೆ ಕೈ ಮಾಡಿ ಯಾವ ನರಕಕ್ಕೆ ಹೋಗಬಯಸುವಿರೋ ?

ರವಿ - ಗೋಪಿ ಅದೇನೇ ಇರಲಿ ನೀನು ನನ್ನ ಬಾಲ್ಯ ಸ್ನೇಹಿತ. ಹಿಗಿದ್ದೂ ವಂಚಿಸಬಹುದೇನೋ ?

ಗೋಪಿ - ಏನಂದೆ ? ನಾನು ನಿನ್ನನ್ನು ವಂಚಿಸಿದೆನೇ ಯಾವಾಗ ?

ರವಿ - ಸಂಘದ ಅಧ್ಯಕ್ಷನಾದ ನೀನು ಇದ್ದಕ್ಕಿದ್ದಂತೆ ಅದನ್ನು ಬಿಟ್ಟು ಶೇಖರನಿಗೆ ಕೊಟ್ಟು ಅವನಿಂದ ನನ್ನ ನೌಕರಿ ಕಡಿಮೆ ಮಾಡಿಸಿ, ಮಾನಕ್ಕೆ ಚ್ಯುತಿ ಬರುವಂತೆ

ಗೋಪಿ - ಅಲ್ಲ ಅದು ವಂಚನೆಯಲ್ಲ. ನಿನ್ನನ್ನು ಯಾರೂ ವಂಚಿಸಿಲ್ಲ. ಬದಲಾಗಿ ನೀನೇ ಎಲ್ಲರನ್ನು ವಂಚಿಸಿದಿ

ರವಿ - ಅಂದರೆ ?

ಗೋಪಿ - ಬುದ್ಧಿಯಿಲ್ಲದ ತಮ್ಮನೆದುರು ಕಲಿತವನೆಂಬ ಹೆಮ್ಮೆಯಿಂದ ಎಂದು ನಿನ್ನ ಮನದಲ್ಲಿ ಅಹಂಕಾರಕ್ಕೆಡೆ ಕೊಟ್ಟೆಯೋ ಅಂದೇ ನಿನ್ನಾತ್ಮವನ್ನು ವಂಚಿಸಿದಿ. ಶೇಖರನಿಂದ ಮೂರು ಸಾವಿರವೆಂದು ಹೇಳಿ ಐದು ಸಾವಿರ ಸಾಲ ಪತ್ರಕ್ಕೆ ಸಹಿ ಹಾಕಿಸಿ ಸುಳ್ಳನ್ನೇ ಸತ್ಯವನ್ನಾಗಿ ಮಾಡಿ ಹೇಳಿದೆ, ಮಡದಿಯ ಮಾತಿಗೆ ಮನದಲ್ಲಿ ಎಡೆಕೊಟ್ಟು. ಒಡಹುಟ್ಟಿದವನ ಸರ್ವಸ್ವವನ್ನೇ ಅಪಹರಿಸಲು ಬಯಸಿ ಕರುಳಿಗೆ ಕಿಚ್ಚಿಟ್ಟೆಯಲ್ಲ. ಇದು ಆತ್ಮವಂಚನೆ ಇಷ್ಟೇ ಅಲ್ಲ ಅಕ್ಷಮ್ಯ ಅಪರಾಧ. ತಂದೆಯ ಮೇಲೆ ಕೈ ಮಾಡಿದ ಚಾಂಡಾಲ ನಿನಗೆ ನರಕದಲ್ಲಿ ಕೂಡಾ ಸ್ಥಳವಿಲ್ಲ

ನಾಗಮ್ಮ - ಅಣ್ಣಾ ಇದರಲ್ಲಿ ಅವರ ತಪ್ಪು ಎಳ್ಳಷ್ಟೂ ಇಲ್ಲ. ತಿಳಿಗೊಳದಂತಿದ್ದ ಅವರ ನಿರ್ಮಲ ಮನದಲ್ಲಿ ಸ್ವಾರ್ಥದ ಕಲ್ಲೆರಚಿ ನಾನೇ ಇಷ್ಟೆಲ್ಲ ಅನರ್ಥಕ್ಕೆ ಕಾರಣಳಾದೆ. ತಪ್ಪಿ ನಡೆದೆ. ನನ್ನವರನ್ನು ಹಾಗೆಯೇ ನಡೆಯಹಚ್ಚಿದೆ. ಅಣ್ಣಾ ಆದ ಅನಾಹುತವನ್ನು ಸರಿಪಡಿಸಿ ಮಾವನವರು ನಮ್ಮನ್ನು ಕ್ಷಮಿಸುವಂತೆ ಮಾಡಣ್ಣಾ

ರವಿ - ಅಹುದು ಗೋಪಿ, ನಾನೇ ತಪ್ಪಿತಸ್ಥ, ಅಪರಾಧಿ, ವಂಚಕ, ಕ್ಷಮಿಸು

ಗೋಪಿ - **ಆಗಲಿ ಲೇ ಶೇಖರಾ**

ಶೇಖರ - ಯಾರು ನನ್ನನ್ನು ಹೀಗೆ ಒಂಟಿ ಹೆಸರಿನಲ್ಲಿ ಕರೆಯುವವನು ?

ಗೋಪಿ - ಯಾರು ನಿನಗೆ ಈ ಅಧಿಕಾರ ಕೊಡಿಸಿ ಮೇಲೆ ನಿನಗೆ ಅಹಂಕಾರ ಅಮಲು ನೆತ್ತಿಗೇರುವಂತೆ ಮಾಡಿದರೋ ಅವನೇ ನಾನು. ಶೇಖರ ನಿಷ್ಕಾರಣವಾಗಿ ಸಂಘದ ದಕ್ಷ ಕಾರ್ಯಕರ್ತ ಒಬ್ಬನನ್ನು ನೌಕರಿಯಿಂದ ಕಡಿಮೆ ಮಾಡಿದ ಮಹಾ ಅಪರಾಧಕ್ಕಾಗಿ ನಾನು ನಿನ್ನ ಮೇಲೆ ಅವಿಶ್ವಾಸದ ಗೊತ್ತುವಳಿ ಮಂಡಿಸಿ ಶೀಘ್ರದಲ್ಲಿಯೇ ನಿನ್ನ ಕೈಗೆ ಕಬ್ಬಿಣದ ಕಡಗ ಹಾಕಿಸಿ ಕತ್ತಲ ಮನೆಗೆ ದಬ್ಬಿಸುತ್ತೇನ

ಶೇಖರ - ಕತ್ತಲ ಮನೆಗೆ ದಬ್ಬಿಸುತ್ತಿಯಾ ಅಂದರೇನೋ ?

ಸುನಂದ - ಅಂದರೆ ಪೋಲೀಸರ ವಶಕ್ಕೆ ಒಪ್ಪಿಸಿ ಜೈಲಿಗೆ ಕಳಿಸುತ್ತಾರೆ

ಶೇಖರ - ಆ ಜೈಲಿಗೆ ? ಸುನಂದ ಹೌದೇನೇ ಈಗ ನಾನೇನು ಮಾಡಲಿ ?

ಸುನಂದ - ಇದಕ್ಕೆ ನಾನೇನು ಹೇಳಲಿ. ನಿಮಗೆ ತಿಳಿದಂತೆ ಮಾಡಿ

ಶೇಖರ - ಯಾಕೆ ನಿನ್ನ ಹೇಳಿಕೆಯಂತೆಯೇ ಅಲ್ಲವೇನು ? ನಾನು ಪ್ರೆಸಿಡೆಂಟನಾದದ್ದು

ಸುನಂದ - ಈಗ ಕೇಳುವಂತೆ ನಿಮ್ಮಣ್ಣನವರನ್ನು ನೌಕರಿಯಿಂದ ಕಡಿಮೆ ಮಾಡುವಾಗ ನೀವು ನನ್ನ ಕೇಳಿದರೇನು ? ಹೋಗಲಿ. ಅಧಿಕಾರ ಮದದಿಂದ ಜನ್ಮಕೊಟ್ಟ ತಂದೆಯ ಮೇಲೆ ಕೈಮಾಡಿದರಲ್ಲ, ಆಗ ನನ್ನ ಮಾತು ಕೇಳಿದಿರೇನು? ಅಧಿಕಾರ ಬಂದ ಕ್ಷಣ ಅಹಂಕಾರದಿಂದ ಕಂಡವರ ಮೇಲೆ ಕೈ ಮಾಡಿ ಕಟ್ಟಿಕೊಂಡ ಪಾಪವನ್ನು ಈಗ ಉಂಡು ತೀರಿಸಿರಿ

ಶೇಖರ - ನೀವೆಲ್ಲಾ ಹೀಗೆ ನನ್ನ ನಡುನೀರಿನಲ್ಲಿ ಕೈಬಿಡ್ತೀರಿ ಅಂತಾ ನನಗೆ ಮೊದಲೇ ತಿಳಿದಿದ್ದರೆ ನಾನೀ ಕೆಲಸಕ್ಕೆ ಕೈನೇ ಇಡತಿರಲಿಲ್ಲ. ಅದನ್ನ ಮಾಡ್ತೀನಿ, ಇದನ್ನ ಮಾಡ್ತೀನಿ ಅಂತ ಏನೇನೋ ಹೇಳಿ ಕಡೆಗೆ ಜೈಲಿಗೆ ಹೋಗೋ ಹಾಗೆ ಮಾಡಿಬಿಟ್ಟ. ಸುನಂದ ನಿನ್ನ ನಂಬಿ ನಾಕೆಟ್ಟೆ

ಗೋಪಿ - ಸುನಂದಳನ್ನು ನಂಬಿ ಕೆಟ್ಟಿಲ್ಲ. ಜನರು ಕೊಟ್ಟ ಈ ಅದಿಕಾರ ಶಾಶ್ವತ ಅಂತ ನಂಬಿ ನೀ ಕೆಟ್ಟಿ

ಶೇಖರ - ಹೌದಪ್ಪ ಅಧಿಕಾರ ಬಂತು ಅಂತ ನಾನು ಏನೇನೋ ಮಾಡಿಬಿಟ್ಟೆ. ಹೇಗಾದರೂ ಮಾಡಿ ನನ್ನ ಉಳಿಸಿಬಿಡಪ್ಪ. ಇನ್ನು ಮೇಲೆ ಹೊಲಮನೆ ಕೆಲಸ ಮಾಡಿಕೊಂಡು ಮೊದಲಿನ ಹಾಗೆ ಇದ್ದು ಬಿಡತೇನಿ. ನನ್ನ ತಪ್ಪು ಕ್ಷಮಾ ಮಾಡಿಬಿಡು. ಮೊದಲಿನಂತೆ ಭೂಮಿತಾಯಿಯ ಸೇವೆ ಮಾಡಿಕೊಂಡು ಇದ್ದು ಬಿಡ್ತೇನೆ. ನಿಜವಾಗಿ ಹೇಳಬೇಕೆಂದರೆ ಭೂಮಿತಾಯಿಯ ಸೇವೆ ಮಾಡುವ ರೈತನು ಬಡವನೇ ಇರಲಿ. ಬಲ್ಲಿದವನೇ ಇರಲಿ, ಅವನಿಗಿರುವ ಆನಂದ ಇನ್ನಾರಿಗೂ ಇರುವದಿಲ್ಲ. ಈಗಲೇ ರಾಜೀನಾಮೆ ಗೀಚಿ ಕೊಟ್ಟು ಬಿಡ್ತೀನಿ

ಗೋಪಿ - ನೋಡಮ್ಮ ಸುನಂದ ನಿನ್ನ ಗಂಡನ ಪ್ರೆಸಿಡೆಂಟಕಿ ಇಷ್ಟಕ್ಕೆ ಸಾಕೋ ಅಥವಾ ಇನ್ನಷ್ಟು ಬೇಕೋ ?

ಸುನಂದ - ಅಣ್ಣಾ ನಿನ್ನ ಮಾತು ಇವತ್ತು ಸತ್ಯ ಅಂತ ತಿಳಿಕೊಂಡೆ. ಅವರಿಗೆ ಅಧಿಕಾರ ಬಂದರೆ ಅರ್ದರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡರು ಅನ್ನುವ ಹಾಗೆ ಆಯಿತು ನಮ್ಮವರ ಪಾಡು

ಗೋಪಿ - ಆಗಲಿ ಶೇಖರ, ತಪ್ಪಾಯಿತು ಅಂತ ನಿಮ್ಮಪ್ಪನ ಪಾದಕ್ಕೆ ಬಿದ್ದು ಸಂಘದ ಅಧಿಕಾರಪದಕ್ಕೆ ರಾಜೀನಾಮೆ ಬರೆದು ಈ ಕಾಗದಕ್ಕೆ ಸಹಿ ಹಾಕು

ಶೇಖರ - (ಸಹಿ ಹಾಕಿ) ಅಪ್ಪಾ ನನ್ನದು ತಪ್ಪಾಯಿತಪ್ಪ

ಗೋಪಿ - ರವಿ ನಾಳೆಯಿಂದ ನೀನು ನೌಕರಿಯ ಮೇಲೆ ಹಾಜರಾಗು (ಹೋಗುವನು)

ಸುನಂದ - (ಶೇಖರನಿಗೆ) ಹೂ ಕಳೆಯಿರಿ ಇನ್ನು ಈ ಡ್ರೆಸನ್ನ

ಶೇಖರ - ನೀ ತೊಡಿಸಿದಿ ನೀನೇ ಕಳಚು. (ನಡೆಯಿರಿ ಎಂದು ಒಳಗೆ ಕರೆದುಕೊಂಡು ಹೋಗುವರು. ಶೇಖರ ಮೊದಲಿನ ಉಡುಗೆಯಲ್ಲಿ ಬರುವನು)

ರಾಮಣ್ಣ - ಇರಲಿ ಈಗ ನೀವೆಲ್ಲ ಒಂದಾಗಿ ಇರುವದಾದರೆ, ಅಂದರೆ ಒಡೆದ ಮನೆ ಒಂದಾದರೆ ಮಾತ್ರ ನಾನು ಇಲ್ಲಿ ಇರುತ್ತೇನೆ. ಇಲ್ಲದಿದ್ದರೆ ಮಗಳ ಮನಗೆ ಹೋಗಿ ಬಿಡುತ್ತೇನೆ

ರವಿ - ಅಪ್ಪಾ ನಾವೆಲ್ಲ ಕೂಡಿ ಇರ್ತೇವೆ

ನಾಗು, ಸುನಂದ - ಮಾಮಾ ನಾವು ಒಂದಾಗಿರುತ್ತೇವೆ

ಗೋಪಿ - ನೋಡಿರಮ್ಮ ಗೃಹಿಣಿ ಜೀವನವೆಂದರೆ ಹಸಿದು ಬಂದವರಿಗೆ ಹಣ್ಣು ಕೊಟ್ಟು ಬಿಸಿಲಿನ ಬೇಗೆ ಹಿಂಗಿಸಿ, ನೆರಳು ನೀಡುವ ಮಾವಿನ ಮರವಾಗಬೇಕೇ ವಿನಃ ನೆರಳೆಂದು ಬಂದವರ ಮೈಗೆ ಮುಳ್ಳು ಚುಚ್ಚುವ ಜಾಲಿಯ ಮರವಾಗಬಾರದು. (ಶ್ಯಾಮಣ್ಣ ಬರುವನು) ಓ ಒಳ್ಳೇ ಸಮಯಕ್ಕೆ ಬಂದಿರಿ ಬನ್ನಿ ಶ್ಯಾಮಣ್ಣ, ಒಡೆದ ಮನೆ ಒಂದಾದ ಗಳಿಗೆಯಲ್ಲಿ ಬಂದ ನೀವೇ ಪುಣ್ಯವಂತರು

ಶ್ಯಾಮಣ್ಣ - ಆ ಹೀಗೋ ತುಂಬಾ ಸಂತೋಷ ಒಳ್ಳೇ ಸುದ್ದಿ ಕಿವಿಗೆ ಬಿತ್ತು. ಸುನಂದ ಗರ್ಭಿಣಿಯಂತಾ ಪತ್ರ ಬರೆದಿದ್ದರು ನೋಡಿಕೊಂಡು ಹೋಗೋಣ ಅಂತಾ ಬಂದೆ. ಇಲ್ಲಿಗೆ ಬಂದ ಮೇಲೆ ಎರಡು ಸಂತೋಷ ದೊರೆಯಿತು

ನಾಗಮ್ಮ - ಅಪ್ಪಾ ಆಗ ತಿಳಿಯದೆ ಏನೇನೋ ಅಂದೆ ಕ್ಷಮಿಸು ಅಪ್ಪ

ಸುನಂದ - ನಾನೂ ಅಂದಿದ್ದೆ ನನ್ನನ್ನೂ ಕ್ಷಮಿಸಿಬಿಡಿ

ಶ್ಯಾಮಣ್ಣ - ಇಂದು ನನ್ನ ಮನಕ್ಕೆ ಆನಂದವಾಯಿತಮ್ಮ. ನನ್ನ ಹೊಟ್ಟೆಯಲ್ಲಿ ಹೆಣ್ಣಾಗಿ ಹುಟ್ಟಿದ ನೀವು ಈ ಮನೆಯ ಕಣ್ಣಾಗಿರಿ. ಸಕ್ಕರೆಯ ಹಣ್ಣಾಗಿರಿ. (ಹಾವು ಹರಿದು ಹೋಗುವದು) ಹಾವು ಶೇಖರ ಹಾವು

ಶೇಖರ - ಹೌದು ಹೌದು ಹಾವು

ತಾರಕ್ಕ - ನೋಡ್ತಾಯಿದ್ದೀಯಲ್ಲೋ ಶೇಖರಾ ಹೊಡಿಯೋ ಅದನ್ನ

ಶೇಖರ - ಇನ್ಯಾತಕ್ಕ ಹೊಡಿಲಕ್ಕಾ ಅದನ್ನ. ಬರೋ ಕಾಲಕ್ಕೆ ಬಂದು ಇರೋವಷ್ಟು ದಿನ ಇದ್ದು ಈಗ ಹೋಗೋ ಕಾಲ ಬಂದು ತನ್ನಷ್ಟಕ್ಕೆ ತಾನೇ ಹೋಗ್ತಾಯಿದೆ, ಹೋಯಿತು. (ಒಳಗ ಕೂಸು ಅಳುವದು)

ಸುನಂದ - (ಎತ್ತಿಕೊಂಡು ಬರುತ್ತ) ಲೋ ಕಳ್ಳಾ ನಗತೀಯಾ ?

ಶೇಖರ - ಹೂ ನಗು ನಗು ಮುಂದೆ ಹೆಂಡತಿ ಬಂದ ಬಳಿಕ ಅಳುವದು ಇದ್ದೇಯಿದೆಯಲ್ಲ

ರವಿ - ಹಾಗಂದರೇನೋ ಶೇಖರಾ ?

ಶೇಖರ - ಇಷ್ಟು ಅನುಭವವಾದರೂ ಅರ್ಥವಾಗಲಿಲ್ಲವೇನಣ್ಣಾ. ನೋಡು ಬುದ್ಧಿ ಬರುವ

ಮೊದಲೇ ಅವ್ವ ಅಪ್ಪ ಕೂಡಿ ಹೆಂಡ್ತೀನ ಮಾಡ್ತಾರೆ. ಯಾಕಂತಾ ಕೇಳ್ತೀಯಾ, ಮುಂದೂ ಬುದ್ದಿ ಬರಲಾರದ ಹಾಗೆ ಹೆಂಡತಿಯಾದವಳು ನೋಡಿಕೊಳ್ಳಲಿ ಅಂತಾ. ಇನ್ನು ಮದುವೆಯಾದವಳು ಮೊದಲೇನೋ ಅಳುತ್ತ ಗಂಡನ ಮನೆಗೆ ಬರುತ್ತಾಳೆ. ಬಂದ ಮೇಲೆ ಗಂಡನನ್ನೇ ಅಳಬೇಕು ಅಂತಾಳೆ, ಒಪ್ಪಲಿಲ್ಲ ಅಳಿಸಿ ಕೈಬಿಡತಾಳೆ. ಒಟ್ಟಿಗೆ ಹೆಣ್ಣು ಅನ್ನೂ ಮಾತಿಗೆ ಅರ್ಥಾನೆ ಇಷ್ಟು

ಗೋಪಿ - ಹುಚ್ಚಾ ಅಳಬೇಕು ಅನ್ನೋ ನಿಮ್ಮಂತಹ ಗಂಡಸರು ಹ್ಯಾಗಿದ್ರೊ ಅತ್ತೇ ಅಳ್ತಾರೆ. ಆಳೋ ಗಂಡಸು ಯಾಕೆ ನಿಮ್ಮ ಹಾಗೆ ಅಳತಾನೆ. ಹೆಣ್ಣುಮಕ್ಕಳಿಗಂದರೇನು ಬಂತು. ಲೋ ಎಲ್ಲಾದರೂ ದೀಪಾನೇ ಹಾರಿ ಹುಳದ ಮೇಲೆ ಬಿದ್ದದ್ದು ಕಂಡಿರುವಿಯೇನು ? ಹುಳಾನೇ ಹಾರಿ ಬಂದು ದೀಪದೊಳಗೆ ಬಿದ್ದು ಸುಟ್ಟುಕೊಳ್ಳುತ್ತವೆ

ಶೇಖರ - ಇರಲಿ ಬಿಡಪ, ನಾ ನಿನಗೆ ಹೇಳಲಿಲ್ಲ. ನಮ್ಮಣ್ಣ ನಾವೂ ಮಾತಾಡ್ತೇವೆ.

ಗೋಪಿ - ಮಾತಾಡ್ರೊ ಆಡಿಕೊಳ್ಳಿ, ಇಲ್ಲಾ ಕತೇನಾದ್ರೂ ಬರೆಯಿಸಿ ಆಡಿಕೊಳ್ಳಿ.

ತಾರಕ್ಕ - ನಡೆಯಿರಮ್ಮ ಇವತ್ತು ಅಕ್ಕತಂಗಿ ಕೂಡಿಯೇ ಅಡಿಗೆ ಮಾಡ್ರಿ. ಎಲ್ಲರೂ ಊಟ ಮಾಡ್ತೇವೆ. ಯಾಕೆ ಗೋಪಿ ?

ಗೋಪಿ - ಯಜಮಾನರೇ ನಿಮ್ಮ ಇಬ್ಬರು ಮಕ್ಕಳ ಇಬ್ಬಗೆಯ ಬಾಳು ಮತ್ತೆ ಬೆಸೆದು ಒಡೆದ ಮನೆ ಒಂದಾಯಿತು. ರವಿ ಬುದ್ಧಿವಂತ, ಹೃದಯವಿಲ್ಲ. ಶೇಖರ ಹೃದಯವಂತ, ಬುದ್ಧಿಯಿಲ್ಲ. ಎದೆಯ ಕದವ ತೆರೆದು ಕರುಣೆಯಿಂದ ಪುಟಗೊಂಡು ಪ್ರತಿಯೊಬ್ಬ ವ್ಯಕ್ತಿಯ ಬಾಳು ಜ್ಞಾನದತ್ತ ಹರಿಯುದೆ ಕುಟುಂಬಕ್ಕಾಗಲಿ ನಮ್ಮ ನಾಡಿಗಾಗಲಿ ಇಲ್ಲವೇ ದೇಶಕ್ಕಾಗಲಿ, ಕಲ್ಯಾಣ ... ಕಾರಣ ಪಶ್ಚಾತ್ತಾಪದಿಂದ ಪರಿಶುದ್ಧರಾದ ನೀವಿಬ್ಬರೂ ಕೊರತೆಯಾದ ಭಾಗ್ಯವನ್ನು ತುಂಬಿಕೊಳ್ಳಿ. ರವಿ ವಿದ್ಯಾವಂತನಾದ ನೀನು ಬುದ್ದಿವಂತ ಆದ್ರೆ ಸಾಲದು, ಹೃದಯವಂತನಾಗಿ ಬಾಳು. ಶೇಖರ ಹೃದಯವಂ ನೀನು ವಿದ್ಯೆ ಕಲಿತು ಬುದ್ದಿವಂತನಾಗು. ಕಲಿಯದ ನಿನ್ನ ಕೈಹಿಡಿದ ಮಡದಿಯಿಂದ ಅಭ್ಯಾಸ ಮುಂದುವರಿಸು, ಅಂದರೆ ನಿನ್ನ ಉದ್ದಾರವಾಗುವದು, ಮಂಗಲಮಯಿ ಭಾರತೀಯ ದಯೆಯಿಂದ.

– ಸಮಾಪ್ತಿ –

ವೃತ್ತಿರಂಗಭೂಮಿಯನ್ನು ಆಧುನಿಕ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ಮಾಧ್ಯಮವಾಗಿ ಬೆಳೆಸಿದವರು ಹಲವರು. ಅವರಲ್ಲಿ ಪಿ.ಬಿ. ಧುತ್ತರಗಿಯವರನ್ನು ಪ್ರಮುಖವಾಗಿ ಹೆಸರಿಸಬೇಕು. ನಾಟಕ ರಚನೆಗಳ ಮೂಲಕ ವೃತ್ತಿರಂಗಭೂಮಿಗೆ ಜನಾಕರ್ಷಣೆ ತಂದವರು ಇವರು.

ಈ ಜನಮನ್ನಣೆ ಕಾರಣವಾಗಿಯೇ ಸಿನೆಮಾಕ್ಕೂ ಇವರ ನಾಟಕಗಳು ಬಳಕೆಯಾಗಿವೆ. ಸಂಪತ್ತಿಗೆ ಸವಾಲು ಇದಕ್ಕೆ ಒಂದು ಉತ್ತಮ ಉದಾಹರಣೆ. ಇಂಥಹ ಹಿರಿಯ ಜೀವ ರಂಗಭೂಮಿಗೇ ತನ್ನ ಜೀವಿತಾವಧಿಯನ್ನು ಮೀಸಲಿಟ್ಟಂತೆ ಬಾಳಿದ್ದು ಈಗ ಚರಿತ್ರೆ. ಇವರ ನೆನಪಿನ ಗೌರವದ ಕಾರ್ಯವಾಗಿ ಇವರ ಐದು ನಾಟಕಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಒಂದು ಸಂಪುಟವಾಗಿ ಪ್ರಕಟಿಸುತ್ತಿದೆ.

ಇದರ ಸಂಪಾದನಾ ಕಾರ್ಯವನ್ನು ನಡೆಸಿಕೊಟ್ಟಿರುವವರು ಗೆಳೆಯ ಗುಡಿಹಳ್ಳಿನಾಗರಾಜ ಅವರು. ವೃತ್ತಿರಂಗಭೂಮಿಯ ಬಗೆಗೆ ಅವರ ವಿಸ್ತಾರವಾದ ಹಾಗೂ ಆಳವಾದ ಅಧ್ಯಯನ ಈ ಸಂಪಾದನಾ ಕಾರ್ಯದ ಹಿಂದಿನ ಕ್ರತುಶಕ್ತಿಯಾಗಿದೆ. ಮೌಲಿಕವಾದ ಪೀಠಿಕೆಯೊಂದಿಗೆ ಸಂಪಾದನಾ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ವಿಶೇಷವಾಗಿ ಮೂಲ ರಚನೆಗಳಲ್ಲಿ ಇರುವ ಪ್ರಾದೇಶಿಕ ಭಾಷೆಯ ಸೊಗಡು ಕಳೆದು ಹೋಗದಂತೆ ಎಚ್ಚರವಹಿಸಿದ್ದಾರೆ. ಅವರ ಶ್ರದ್ಧಾಪೂರ್ಣವೂ ಅಭ್ಯಾಸಪೂರ್ಣವೂ ಆದ ಈ ಸಂಪಾದನಾ ಕಾರ್ಯಕ್ಕೆ ಅವರಿಗೆ ಪ್ರಾಧಿಕಾರದ ಕೃತಜ್ಞತೆಗಳು.

ಪ್ರೊ| ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ISBN : 81-7713-258-X

ಬೆಲೆ ರೂ. 150/-

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು